ದಶೋಪನಿಷತ್ತುಗಳ ಸಾರ

ಪ್ರಕಾಶಕರು:
ಆಧ್ಯಾತ್ಮಪ್ರಕಾಶಕಾರ್ಯಾಲಯ
ಶ್ರೀತ್ರಿ
ಹೊಳೆನರಸೀಪುರ-573211
2002

ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು ತಮ್ಮ ಜೀವಿತಕಾಲದಲ್ಲಿ ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳನ್ನೆಲ್ಲ ಕನ್ನಡಕ್ಕೆ ಅನುವಾದಿಸಿ ಆಯಾ ಗ್ರಂಥಗಳ ಆರಂಭದಲ್ಲಿ ವಿಚಾರಪೂರಿತವಾದ **ಪೀಠಿಕೆ**ಗಳನ್ನೂ ಕಡೆಯಲ್ಲಿ **ಗ್ರಂಥದ ಸಾರ**ವನ್ನೂ ಹಿಂಡಿಟ್ಟು ಆಯಾ ಗ್ರಂಥಗಳ ತಿರುಳನ್ನೇ ಜಿಜ್ಞಾಸುಗಳಿಗೆ ಉಣಬಡಿಸಿರುತ್ತಾರೆ. ಶ್ರೀಶ್ರೀಗಳವರ ಗ್ರಂಥಗಳೆಲ್ಲವನ್ನೂ ಓದಿ ಶಂಕರಸಿದ್ಧಾಂತವನ್ನು ಅನುಸಂಧಾನಮಾಡುವ ಕಾರ್ಯವು ಮುಮುಕ್ಷುಗಳಿಗೆ ಕಷ್ಟಸಾಧ್ಯವೆಂತ ಅರಿತು ಪ್ರತಿ ಯೊಂದು ಉಪನಿಷತ್ತಿಗೂ ಶಂಕರ-ಭಾಷ್ಯಾನುಸಾರವಾಗಿ ಶ್ರೀಶ್ರೀಗಳವರು ಬರೆದಿರುವ ವಿಮರ್ಶಾತ್ಮಕ **ಪೀಠಿಕೆ**ಗಳನ್ನೂ-**ಗ್ರಂಥದ ಸಾರ**ವನ್ನೂ ಸಂಗ್ರಹಿಸಿ **ದಶೋಪನಿಷತ್ತುಗಳ ಸಾರ** ಎಂಬ ಈ ಗ್ರಂಥವನ್ನು ಈಗ ಪ್ರಕಟಿಸಲಾಗಿದೆ.

ವೇದಾಂತದ ಕಡೆಗೆ ಒಲವು ಮೂಡಿದ ಜಿಜ್ಞಾಸುಗಳಿಗೆ ಈ ಗ್ರಂಥದ ಅಧ್ಯಯನದಿಂದ ಎರಡು ವಿಶಿಷ್ಟ ಉಪಯೋಗಗಳಿವೆ. ಶಂಕರರ ವಿಚಾರಗಳನ್ನು ಕ್ರೋಢೀಕರಿಸಿ ಸರಳವಾಗಿ ತಿಳಿಸಿರುವ ಶಂಕರಸಿದ್ಧಾಂತದ ತಿರುಳನ್ನು ಸವಿಯುವದು ಒಂದು. ಇದಷ್ಟರಿಂದಲೇ ಅದರ ಅಂತಃಸ್ಸತ್ವವು ತಿಳಿಯುವದಿಲ್ಲ. ಆದರೆ ಸಾರಗ್ರಾಹಿಗಳಿಗೆ ಉತ್ಸಾಹ, ಆಸಕ್ತಿಯನ್ನುಂಟುಮಾಡಿ ಹೆಚ್ಚಿನ ಅಧ್ಯಯನದ ಕಡೆಗೆ ಆಕರ್ಷಿಸುವದು ಮತ್ತೊಂದು. ಹಾಗೆ ಸೆಳೆತ ಬಂದಾಗ, ಮೂಲಭಾಷ್ಯಗಳ ಅಧ್ಯಯನದಿಂದ ಗಾಢವಾಗಿರುವ ಕೆಲವು ವಿಷಯಗಳು ಪ್ರಕಾಶವಾಗುತ್ತವೆ. ಅನಂತರ ಈ ಗ್ರಂಥವನ್ನು ಮತ್ತೊಮ್ಮೆ ಓದಿದರೆ ಶಂಕರಸಿದ್ಧಾಂತದ ನಿಜವಾದ ಮಾಧುರ್ಯವೂ ಪರಿಪೂರ್ಣ ದರ್ಶನವೂ ದೊರಕುತ್ತವೆ ; ಅದರಿಂದ ಮನಸ್ಸಿನಲ್ಲಿ ಚೆನ್ನಾಗಿ ನೆಲೆಯಾಗುವದರಲ್ಲಿ ಸಂಶಯವಿಲ್ಲ.

ಸುಂದರವಾದ ಕೇಶರಾಶಿಗೊಂದು ಸೊಬಗಿನ ವಿನ್ಯಾಸಹೂಡಿ, ಮೇಲೊಂದು ಪರಿಮಳದಿಂದ ನಳನಳಿಸುವ ಹೂಮಾಲೆಯನ್ನು ಮುಡಿಸಿದಾಗ ಹೇಗೆ ಆಕರ್ಷಣೀಯ ಸೊಗಸು ಹೆಚ್ಚಾಗುವದೋ ಹಾಗೆ ಶಂಕರರ ಸೊಬಗಿನ ಸಿದ್ಧಾಂತಕ್ಕೆ ಶ್ರೀಶ್ರೀಗಳವರ ಸರಳ ವಿನ್ಯಾಸದ ಬರಹ, ಅದಕ್ಕೊಂದು ಹಚ್ಚ ಹೊಸ ಹೂಮಾಲೆಯಂತೆ ಮೂಡಿ ಬಂದಿರುವ, ಸಾಹಿತ್ಯ ವಿದ್ಯಾಲಂಕಾರ **ಶ್ರೀ ಎಸ್.ಕೆ. ರಾಮಚಂದ್ರರಾಯರ** ನಿರ್ವ್ಯಾಜ ಪ್ರೇಮಳ ಪ್ರಸ್ತಾವನೆ- ಗ್ರಂಥದ ಸೌಂದರ್ಯವನ್ನು ಹೆಚ್ಚಿಸಿದೆ. ಈ ಸಹೃದಯರ ಉಪಕಾರಕ್ಕೆ ಕಾರ್ಯಾಲಯವು ತನ್ನ ಕೃತಜ್ಞತೆಯನ್ನು ಸಂತೋಷದಿಂದ ಅರ್ಪಿಸುತ್ತದೆ.

ಈ ಗ್ರಂಥದ ಪ್ರಕಟನೆಗೆ ಧನಸಹಾಯಮಾಡಿದ ಉದಾರಾತಿಶಯರ ಹೆಸರುಗಳನ್ನು ಕೊಡಲಾಗಿದೆ. ಈ ಪುಸ್ತಕವನ್ನು ಹೊರತರಲು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಾಯಮಾಡಿದ ಎಲ್ಲಾ ಮಹನೀಯರಿಗೂ ಕಾರ್ಯಾಲಯವು ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ.

ಅಧ್ಯಾತ್ಮಪ್ರಕಾಶಕಾರ್ಯಾಲಯದವರ ಈ ಅಳಿಲುಸೇವೆಯನ್ನು ಜಿಜ್ಞಾಸುಗಳು ಸ್ವೀಕರಿಸಿ ಸದುಪಯೋಗ ಪಡೆದಾಗ, ಶ್ರೀಶ್ರೀಗಳವರ ಆಶೀರ್ವಾದದಿಂದ ಈ ಕಾರ್ಯ ಕ್ಕೊಂದು ಸಾರ್ಥಕತೆ ಬರುತ್ತದೆ.

ಚಿತ್ರಭಾನು ಸಂವತ್ಸರ, ವೈಶಾಖ ಶುದ್ಧಸಪ್ತಮಿ, **ಪ್ರಕಾಶಕರು**

19-5-2002

ಪ್ರಸ್ತಾವನೆ

ಶ್ರೀಮಚ್ಛಂಕರರ ವೇದಾಂತಪ್ರತಿಪಾದನೆಯ ಶುದ್ಧಪ್ರಕ್ರಿಯೆಯನ್ನು ಗುರುತಿಸಿ ಬೆಳಗಿಸಿದವರಲ್ಲಿ ಬ್ರಹ್ಮೀಭೂತರಾದ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಅಗ್ರಗಣ್ಯರು ಈ ಪ್ರಯತ್ನಕ್ಕೆ ಕೈಹಾಕಿದವರಲ್ಲಿ ಅವರೇ ಮೊದಲಿಗರು ಎಂದರೂ ತಡೆದೀತು. ಶ್ರೀಮದಾಚಾರ್ಯರ ವ್ಯಾಖ್ಯಾನಕಾರರಲ್ಲಿ ಹಿನ್ನೆಲೆ, ಒಲುಮೆ, ನಿಷ್ಠೆಗಳು ಬೇರೆಬೇರೆಯಾಗಿದ್ದುದರಿಂದ ಜಿಜ್ಞಾಸುಗಳಿಗೆ **ಶುದ್ಧಶಾಂಕರಪ್ರಕ್ರಿಯೆ** ಏನೆಂಬುದು ಗೊಂದಲಕ್ಕೀಡಾದ ವಿಷಯವಾಗಿದ್ದಿತು. ಶ್ರೀಶ್ರೀಗಳವರು ತಮ್ಮ ಇಡೀ ಜೀವನವನ್ನೇ ಇದಕ್ಕಾಗಿ ಮುಡಿಪಿಟ್ಟು, ನೂರಾರು ಗ್ರಂಥಗಳನ್ನು ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ರಚಿಸಿ ಶುದ್ಧಶಾಂಕರಪ್ರಕ್ರಿಯೆಯ ಪರಿಚಯವನ್ನು ಜಿಜ್ಞಾಸುಜನರಿಗೆ ಮಾಡಿಕೊಟ್ಟರು.

ಅವರ ಕರೆಗಳಲ್ಲಿ ಮುಖ್ಯವಾದುದು - ವ್ಯಾಖ್ಯಾನಕಾರರ ನೆರವನ್ನವಲಂಬಿಸದೆ ನೇರವಾಗಿ ಶಾಂಕರಗ್ರಂಥಗಳಿಗೇ, ಅದರಲ್ಲೂ ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಿಗೇ ಶರಣುಹೋಗಬೇಕೆಂಬುದು. ಈ ಕರೆಗೆ ಪೂರಕವಾಗಿ ಶ್ರೀಶ್ರೀಗಳವರು ಪ್ರಸ್ಥಾನತ್ರಯ ಭಾಷ್ಯಗಳನ್ನು ಕನ್ನಡಭಾಷೆಯಲ್ಲಿ ಹೊರತಂದರು. ಪ್ರಸ್ಥಾನತ್ರಯದಲ್ಲಿ ಪ್ರಧಾನವಾದುದು ಉಪನಿಷತ್ತು. ಅದನ್ನು ಕುರಿತದ್ದೇ ಉಳಿದೆರಡು ಪ್ರಸ್ಥಾನಗಳು - ವೇದಾಂತ ಮಿಮಾಂಸಾಸೂತ್ರ ಮತ್ತು ಭಗವದ್ಗೀತೆ. ಆಚಾರ್ಯರು ದಶೋಪನಿಷತ್ತುಗಳನ್ನು ಪ್ರಧಾನಪ್ರಸ್ಥಾನವೆಂದು ಗ್ರಹಿಸಿ, ಅವಕ್ಕೆ ಸಂಪ್ರದಾಯಕ್ರಮದಲ್ಲಿ ಭಾಷ್ಯಗಳನ್ನು ಸಿದ್ಧಪಡಿಸಿ, ವೇದಾಂತದ ತಾತ್ಪರ್ಯವನ್ನು ಸಮನ್ವಯಮಾಡಿ, ಸ್ಫುಟಗೊಳಿಸಿ, ಸಮ್ಯಗ್ದರ್ಶನವನ್ನು ಅರಿತುಕೊಳ್ಳಲು ನೆರವಾದರು. **ದಶೋಪನಿಷದ-ದರ್ಶನವೇ ಸಮ್ಯಗ್ದರ್ಶನ** ವೆಂಬುದನ್ನು ಎಲ್ಲರಿಗೆ ಮನವರಿಕೆ ಮಾಡಿಕೊಟ್ಟರು.

ಶ್ರೀಮದಾಚಾರ್ಯರು ಹತ್ತು ಉಪನಿಷತ್ತುಗಳಿಗೆ ಮಾಡಿರುವ ಭಾಷ್ಯಗಳನ್ನು ಶ್ರೀಶ್ರೀಗಳವರು ಕನ್ನಡಕ್ಕೆ ಅನುವಾದಮಾಡಿ, ಪ್ರಕಟಗೊಳಿಸಿದರಲ್ಲದೆ ಈ ಉಪನಿಷತ್ತುಗಳನ್ನು ಕುರಿತಂತೆ, ಅವುಗಳ ಭಾಷ್ಯಗಳನ್ನು ಕುರಿತಂತೆ ಅಳವಡಿಸಿ ಮಾಡಿ, ತಮ್ಮ ಸಂಶೋಧನೆಯ ಪರಾಮರ್ಶೆಯ ಫಲಗಳನ್ನು ಬರೆದಿಟ್ಟರು. ಒಂದೊಂದು ಉಪನಿಷದ್ಭಾಷ್ಯವನ್ನು ಅನುವಾದಮಾಡುವಾಗಲೂ, ಪ್ರಾಸಂಗಿಕವಾಗಿ ಪೀಠಿಕೆಗಳನ್ನು ಅಳವಡಿಸಿ, ಪಂಡಿತರನ್ನು ಕಾಡುವ ಪ್ರಮುಖವಾದ ಸಮಸ್ಯೆಗಳನ್ನು ಎತ್ತಿಕೊಂಡು ಸಮಾಧಾನಗಳನ್ನು ಸೂಚಿಸಿದರು. ಶ್ರೀಮದಾಚಾರ್ಯರ ಮೂಲ ಶೈಲಿಯಲ್ಲಿ ಯುಕ್ತಿ, ಅನುಭವಗಳಿಗೆ ಸಮ್ಮತವಾದದ್ದು ಏಂಬುದನ್ನು ಮನಗಾಣಿಸಿದರು.

ಈ ಪೀಠಿಕೆಗಳನ್ನೆಲ್ಲ [illegible]
ರುವವರು ಶ್ರೀಶ್ರೀಗಳವರ [illegible]

ಮೂರ್ತಿಯವರು ; ಶ್ರೀಶ್ರೀಗಳವರ ಶುದ್ಧಶಾಂಕರಪ್ರಕ್ರಿಯಾಪ್ರಕಾಶನದ ಕಾರ್ಯದಲ್ಲಿ ಅವರಿಗೆ ಬಲಗೈಯಂತೆ ನೆರವಾಗಿದ್ದವರು, ಶ್ರೀಶ್ರೀಗಳವರ ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶಕಾರ್ಯಾಲಯವನ್ನು ನೋಡಿಕೊಳ್ಳುತ್ತಿರುವವರು. ಪೀಠಿಕೆಗಳ ಸಂಕಲನದಲ್ಲಿ ವಿಶೇಷವಾದ ಒಂದು ಸ್ವಾರಸ್ಯವಿದೆ. ಮೂಲದ ಕ್ಲೇಶವಿಲ್ಲದೆ ಉಪನಿಷತ್ತುಗಳ ಧೋರಣೆಯನ್ನು ಸಮಗ್ರವಾಗಿ, ಸಂಗ್ರಹವಾಗಿ ಅರಿತುಕೊಳ್ಳಲು, ಉಪನಿಷತ್ ಪ್ರಸ್ಥಾನದ ಸಿಂಹಾವಲೋಕನ ಮಾಡಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಉಪನಿಷತ್ತುಗಳ, ಭಾಷ್ಯಗಳ ಪ್ರಯೋಜನವನ್ನು ಕನ್ನಡದಲ್ಲಿ ಎಂದೆಡೆ ಒದಗಿಸಿಕೊಟ್ಟಿರುವದು ದೊಡ ಉಪಕಾರ.

ಭಾಷ್ಯದ ಕೈದೀವಿಗೆಯಿಲ್ಲದೆ ಉಪನಿಷತ್ತಿನ ರಹಸ್ಯ ಬಯಲಾಗದು. ಉಪನಿಷತ್ತೆಂದರೇ ರಹಸ್ಯೋಪದೇಶವೆಂದರ್ಥವಲ್ಲವೆ ? ಶ್ರೀಶ್ರೀಗಳವರು ಕೈಹಿಡಿದು ನಡೆಸದಿದ್ದರೆ ಭಾಷ್ಯದ ಆಶಯವು ಸ್ಪಷ್ಟವಾಗದು. ಅವರ ಕರಾವಲಂಬನೆಯಲ್ಲಿ ಸಾರ್ಥಕತೆಯೂ ಇದೆ. ಶ್ರೀಶ್ರೀಗಳವರು ಸಂಪ್ರದಾಯನಿಷ್ಠರು ; ಔಪನಿಷದದರ್ಶನವನ್ನು ಯಥಾಪತ್ತಾಗಿ, ಜಿಜ್ಞಾಸುಗಳಿಗೆ ಸಮಾಧಾನತರುವಂತೆ, ಸಾಧಕರಿಗೆ ಊರುಗೋಲಾಗುವಂತೆ ವಿವರಿಸುವಲ್ಲಿ ಶ್ರೀಮದಾಚಾರ್ಯರ ಮಾತುಗಳೇ ಪರಮಪ್ರಮಾಣವೆಂದು ಮನಸಾರೆ, ಹೃದಯಾರೆ ನಂಬಿಕೊಂಡವರು. ಹೀಗೆಂದಮಾತ್ರಕ್ಕೆ ಅವರು ಈಗ ಸಂಪ್ರದಾಯದ ಹೆಸರಿನಲ್ಲಿ ಹರಡಿಕೊಂಡಿರುವ ಪ್ರತೀತಿ, ಐತಿಹ್ಯಗಳನ್ನೆಲ್ಲ, ವಿಚಾರಮಾಡದೆ, ಪರಿಗ್ರಹಮಾಡುವವರು ಎಂದರ್ಥವಲ್ಲ. ಅವರು ವಿಚಾರಶೀಲರೂ ಹೌದು ಅವರದ್ದು ನಿಶ್ಚಿತವಾದ ಅನ್ವೇಷಣೆ. ಕುರುಡು ನಂಬಿಕೆಗಳಿಗೆ ಅವರೆಂದೂ ಮಣಿಯುವವರಲ್ಲ.

ಸಂಪ್ರದಾಯವೆಂದರೆ ಒಂದೆರಡು, ಮೂರುನಾಲ್ಕು ತಲೆಮಾರುಗಳಲ್ಲಿ ಪ್ರಚಲಿತವಾಗಿರುವ ಆಚಾರವಿಚಾರಗಳಲ್ಲ, ಸನಾತನವಾದ ಧರ್ಮಕ್ಕೆ ಸಂಬಂಧಿಸಿದ್ದು ಸಂಪ್ರದಾಯ ಅದು ಎಲ್ಲಕಾಲಕ್ಕೂ ಎಲ್ಲಜನರಿಗೂ ಯುಕ್ತಿಯುಕ್ತವಾಗಿ, ಬುದ್ಧಿಗ್ರಾಹ್ಯವಾಗಿ, ಪುರುಷಾರ್ಥಪ್ರಯೋಜಕವಾಗಿ ಇರುವದು ಅದರ ಸ್ವಾರಸ್ಯ. ಶ್ರುತ್ಯನುಕೂಲವಾದ ವಿಚಾರಕ್ಕೆ ಸಾರ್ವತ್ರಿಕ ಅನುಭವಕ್ಕೆ ವಿರುದ್ಧವಾಗಿದ್ದರೆ ಅದು ಸಂಪ್ರದಾಯವಲ್ಲವೆಂದು ಶ್ರೀಮದಾಚಾರ್ಯರೇ ಹೇಳಿದ್ದಾರೆ. ಬೆಂಕಿ ತಣ್ಣಗಿದೆಯೆಂದು ನೂರು ಶ್ರುತಿಗಳು ಹೇಳಲಿ ; ಒಪ್ಪುವವರು ಯಾರು ? ಧರ್ಮಜಿಜ್ಞಾಸೆಯಲ್ಲಿರುವಂತೆ ಬ್ರಹ್ಮಜಿಜ್ಞಾಸೆಯಲ್ಲಿ ಶ್ರುತಿಯಷ್ಟೇ ಪ್ರಮಾಣವೆಂದಾಗದು; ಯುಕ್ತಿ-ಅನುಭವಗಳೂ ಪ್ರಮಾಣಗಳೇ. ಇದು ಆಚಾರ್ಯರ ನಿಲುವು. ಶ್ರೀಶ್ರೀಗಳವರು ಇದೇ ದಾರಿಯನ್ನು ಹಿಡಿದಿದ್ದಾರೆ.

ಆದರೆ ವಿಚಾರದಿಂದಷ್ಟೇ ಪರಮಾರ್ಥವನ್ನು ನಿಶ್ಚಯಿಸುವದೂ ಆಗದೆಂಬ ಅರಿವು ಅವರಿಗಿದ್ದು, ಆಧುನಿಕವೆಂಬುಂಥ ನಿರಂಕುಶವಿಚಾರಕ್ಕೂ ಅವರು ಜೈ ನೀಡುವದಿಲ್ಲ. ಈಗಿನ ಪಂಡಿತರು ಸಂಪ್ರದಾಯದಿಂದ ಹೊರಗಿದು ಪಾಶ್ಚಾತ್ಯವಿಚಾರ

ಧೋರಣೆಯನ್ನೇ ಹಿಡಿದು ನಮ್ಮ ಶಾಸ್ತ್ರಗ್ರಂಥಗಳ ವಿಮರ್ಶೆಮಾಡುವುದು ಅವರಿಗೆ ಹಿಡಿಸದು. ಮಾಂಡೂಕ್ಯೋಪನಿಷತ್ತಿಗೆ ಅವರು ಬರೆದಿರುವ ಪೀಠಿಕೆಯಲ್ಲಿ ಇದನ್ನು ಗಮನಿಸಬಹುದು. ಗೌಡಪಾದಕಾರಿಕೆಯು ಬೌದ್ಧಪ್ರಕ್ರಿಯೆಗಳನ್ನೊಳಗೊಂಡಿದೆಯೆಂಬ ಆಧುನಿಕವಾದವನ್ನು ಶ್ರೀಶ್ರೀಗಳವರು ಸಾಧಾರವಾಗಿ ನಿರಾಕರಿಸಿದ್ದಾರೆ.

ಹೀಗೆ, ಶ್ರೀಶ್ರೀಗಳವರ ವಿಚಾರಮಾರ್ಗವು ಸಂಪ್ರದಾಯಶರಣರೆಂದು ಭಾವಿಸಿಕೊಂಡ ಗೊಡ್ಡುವೈದಿಕರಿಗೂ ಹಿಡಿಸುವದಿಲ್ಲ ಆಧುನಿಕರೆಂದುಕೊಂಡ ವಿಚಾರಶೀಲರಿಗೂ ಹಿಡಿಸುವದಿಲ್ಲ ! ಅವರ ದೃಷ್ಟಿಯಲ್ಲಿ ಇವರು **ಆಧುನಿಕರು**, ಇವರ ದೃಷ್ಟಿಯಲ್ಲಿ **ವೈದಿಕರು**. ಎರಡೂ ಗುಂಪುಗಳಿಂದ ದೂರವೇ ಆಗಿ ಉಳಿದರಾದ್ದರಿಂದ ಶ್ರೀಶ್ರೀಗಳವರ ಕೊಡುಗೆ ಅದು ಪಡೆಯಬೇಕಾದ ಪ್ರಾಚುರ್ಯವನ್ನು ಪಡೆಯಲಿಲ್ಲ. ಇದರಿಂದ ಅವರೇನು ಕೊರಗಲಿಲ್ಲ. ತಾವು ಕೈಹಿಡಿದ ಕೆಲಸವನ್ನು ಮಾಡಿಯೇ ಮುಗಿಸಿದರು ; ಕೃತಾರ್ಥರಾದರು. ಅವರು ಮುಗಿಸಿದ ಕೆಲಸವನ್ನು ಜನರೆದುರು ಇರಿಸುವ, ಜನರಲ್ಲಿ ಅದು ಹರಡಿಕೊಳ್ಳುವಂತೆ ಮಾಡುವ ಕೆಲಸ ಈಗ ಅವರ ಶಿಷ್ಯರಿಂದ, ಭಕ್ತರಿಂದ, ಅಭಿಮಾನಿಗಳಿಂದ ಆಗಬೇಕಾಗಿದೆ. ಈ ದಿಸೆಯಲ್ಲಿ ಅಧ್ಯಾತ್ಮಪ್ರಕಾಶಕಾರ್ಯಾಲಯದ ಕಾರ್ಯಕರ್ತರು ಕೈಗೊಂಡಿರುವ ಈ ಪ್ರಕಾಶನಕಾರ್ಯ ತುಂಬ ಸೂಕ್ತವಾಗಿದೆ, ಸ್ತುತ್ಯರ್ಹವಾಗಿದೆ. ಅವರಿಗೆ ನಮ್ಮ ಅಭಿನಂದನೆಗಳು ಸಲ್ಲಬೇಕು.

ಇನ್ನೂ ಒಂದು ಮಾತನ್ನು ಈ ಸಂದರ್ಭದಲ್ಲಿ ಆಡಿದರೆ ಅಪ್ರಸ್ತುತವಾಗದು. ಶ್ರೀಶ್ರೀಗಳ ವಿಚಾರಸರಣಿಯೆಷ್ಟು ಪ್ರೌಢವಾದುದೋ ಅವರ ಬರವಣಿಗೆ ಅಷ್ಟೇ ಸರಳವಾಗಿದೆ. ಕ್ಲಿಷ್ಟವಾದ ಚರ್ಚೆಯನ್ನು ಕೂಡ ಹೃದ್ಯವಾಗಿ ಮಾಡುವಂಥ ಬಾಗ್ಧೆ ಅವರದ್ದು. ಮತ್ತೆ, ಯುಕ್ತಿ - ಯುಕ್ತವಾದುದನ್ನು ನಿರ್ಭೀತಿಯಿಂದ ನಿರೂಪಿಸುವಲ್ಲಿ ಅವರ ಧೈರ್ಯ, ಸತ್ಯನಿಷ್ಠೆ, ನಿರೂಪಣೆಯಲ್ಲಿ ಕೌಶಲ- ಇವನ್ನು ಯಾರಾದರೂ ಮೆಚ್ಚದ ತಕ್ಕದ್ದೇ. ನಿದರ್ಶನಕ್ಕೆ ಶ್ರೀಮದಾಚಾರ್ಯರು ವೇದಾಂತಸೂತ್ರಗಳಿಗೆ (ಬಾದರಾಯಣರ ಬ್ರಹ್ಮಸೂತ್ರ)ಕ್ಕೂ ಭಾಷ್ಯ ಬರೆದಿದ್ದಾರೆ ; ಭಗವದ್ಗೀತೆಗೂ ಉಪನಿಷತ್ತಿಗೂ ಭಾಷ್ಯ ಬರೆದಿದ್ದಾರೆ. ಆದರೆ ಈ ಎರಡರಲ್ಲಿ ಕಂಡುಬರುವ ಕೆಲವು ಅಭಿಪ್ರಾಯಗಳು ತೀರ ಬೇರೆಬೇರೆಯಾಗಿವೆ. ಒಬ್ಬರೇ ಆಚಾರ್ಯರು ತಮ್ಮ ಗ್ರಂಥಗಳ ಮೇಲೆ ಭಾಷ್ಯ ಬರೆದಿರುವದರ ಬಗ್ಗೆ ಸಂಶಯವೇಳುವ ಸಂಭವವಿದ್ದರೂ ಇಲ್ಲಿಯವರೆಗೆ ಯಾರೂ ಗಮನಿಸಿಯೇ ಇರಲಿಲ್ಲ. ಶ್ರೀಶ್ರೀಗಳವರು ಈ ಸಂಗತಿಯನ್ನು ಗಮನಕ್ಕೆ ತಂದದ್ದು ಮಾತ್ರವಲ್ಲ, ಹೀಗಿರುವ ಅಭಿಪ್ರಾಯಭೇದಗಳನ್ನು ಸಮನ್ವಯಿಸಿದ್ದಾರೆ (ಪೂರ್ಣಪ್ರಜ್ಞ ೨೫೧-೨೫೨). ಅಷ್ಟು ಮಾತ್ರವಲ್ಲ, ''ಸೂತ್ರಭಾಷ್ಯವು ಶಂಕರಾದಿಗಳಿಗೂ ಸುಪ್ರಸಿದ್ಧವಾಗಿರುವದರಿಂದ ಈ ಎರಡು ಪರಸ್ಪರ ಪಕ್ಷಗಳಿಗೆ ಸಂಬಂಧಿಸಿದ ವಿಮರ್ಶನಪಟುಚಕ್ಷಣರಾದ ವಿದ್ವಾಂಸರು ನಿರ್ಣಯಿಸಿಕೊಳ್ಳಬೇಕಾಗಿದೆ. ಒಂದೊಮ್ಮೆ ವಿರೋಧವೇ ಸಿದ್ಧವಾದರೆ ಬ್ರಹ್ಮಸೂತ್ರಭಾಷ್ಯಕಾರರಾದ ಶಂಕರರು ಬ್ರಹ್ಮಸೂತ್ರಭಾಷ್ಯ

ಕರ್ತೃಗಳಿಗಿಂತ ಭಿನ್ನರೆಂದು ವಾದಿಸುವವರಿಗೆ ಸ್ವಲ್ಪ ಅವಕಾಶವು ಸಿಕ್ಕಂತೆ ಆಗುವದು'' ಎಂದೂ ಸೂಚಿಸಿದ್ದಾರೆ.

ಹೀಗೆ ಶ್ರೀಶ್ರೀಗಳವರ ಬರವಣಿಗೆಯಲ್ಲಿ ವೇದಾಂತಸಂಶೋಧನೆಯಲ್ಲಿ ನಡೆಯಬೇಕಾದ ದಾರಿಯನ್ನೂ ಗುರುತಿಸಿರುವದು ಕಾಣುತ್ತದೆ. ಬರಿಯ ವ್ಯಾಖ್ಯಾನಗಳ ಜಾಡನ್ನೇ ಹಿಡಿದು ಹೊರಟರೆ ಶಂಕರರ ಹೃದಯಾನ್ವೇಷಣೆಯಾಗಲಾರದು. ಪಿಷ್ಟಪೇಷಣ ರೂಪವಾಗಿ ಪ್ರಚಲಿತವಾಗಿರುವ ಕಲ್ಪಗಳನ್ನೇ ಅವಲಂಬಿಸಿದರೂ ಪ್ರಯೋಜನವಿರದು. ಶ್ರೀಮದಾಚಾರ್ಯರ ಮೂಲಭಾಷ್ಯಗ್ರಂಥಗಳನ್ನೇ ಕೂಲಂಕಷವಾಗಿ, ಸೂಕ್ಷ್ಮವಾಗಿ, ಆದರಪೂರ್ವಕವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ. ಶ್ರೀಶ್ರೀಗಳವರು ಬರೆದಿರುವ ಒಂದೊಂದು ಗ್ರಂಥದಲ್ಲೂ ಇದನ್ನು ಎತ್ತಿಹಿಡಿದಿರುವದು ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಅವರ ಬರಹಗಳು ಜಿಜ್ಞಾಸುಗಳಿಗೆ, ಸಂಶೋಧಕರಿಗೆ, ಸಾಧಕರಿಗೆ ದಾರಿದೀಪವಾಗಿ ನಿಲ್ಲಬಲ್ಲವು.

ಅವರ ಇದೊಂದು ಗ್ರಂಥ, **ದಶೋಪನಿಷತ್ತುಗಳ ಸಾರಸಂಗ್ರಹ**, ಉತ್ಸುಕರೆಲ್ಲರ, ಆಸಕ್ತರೆಲ್ಲರ ಆಧ್ಯಾತ್ಮಿಕಸಂಸ್ಕಾರವನ್ನು ಬಲಗೊಳಿಸುವಲ್ಲಿ ಸಮರ್ಥವಾಗುತ್ತದೆ ; ಅದರ ಪ್ರಕಾಶಕರು ನಮ್ಮೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ತಾ॥ ೧.೫.೨೦೦೨ ಸಾ.ಕೃ. ರಾಮಚಂದ್ರರಾವ್

'ದಶೋಪನಿಷತ್ತುಗಳ ಸಾರ'' ಗ್ರಂಥ ಪ್ರಕಟನೆಗೆ ಧನಸಹಾಯಮಾಡಿದ ಉದಾರಾತಿಶಯರುಗಳ ವಿವರ.

ಕ್ರಮ ಸಂಖ್ಯೆ	ಹೆಸರು	ಊರು	ಜಮಾ
1.	ಶ್ರೀಮತಿ ಕೆ.ವಿ. ಲಲಿತಾಂಬ	ಬೆಂಗಳೂರು	25,000 ರೂ.
2.	ಎಸ್. ಶರಣಪ್ಪ ಮತ್ತು ಸಹೋದರರಿಂದ (ತಂದೆ ಸೂರೆ ಥಾಯಪ್ಪ ಮತ್ತು ತಾಯಿ ಸೂರೆ ನರಸಮ್ಮ ಸ್ಮರಣಾರ್ಥ)	ಬಳ್ಳಾರಿ	5,005 ''
3.	ಟಿ.ಆರ್. ಚಂದ್ರಶೇಖರ್	ಬೆಂಗಳೂರು	5,000 ''
4.	ಜಿ. ಮಹೇಶ್ (ತಾತ ರಾಮಚಂದ್ರಶಾಸ್ತ್ರಿಗಳ ಸ್ಮರಣಾರ್ಥ)	ಬೆಂಗಳೂರು	5,000 ''
5.	ಶ್ರೀಮತಿ ಜಿ.ನಾಗಲಕ್ಷ್ಮಿ-ಶ್ರೀನಿವಾಸಮೂರ್ತಿ	ಬೆಂಗಳೂರು	5,000 ''
6.	ಶ್ರೀರಾಮಮಂದಿರ ಅಸೋಸಿಯೇಷನ್ ಮಾಡಲ್ ಹೌಸ್ ಬ್ಲಾಕ್, ಬೆಂಗಳೂರು-4 (ವೇದಾಂತಸಪ್ತಾಹದಲ್ಲಿ ಭಕ್ತಾದಿಗಳಿಂದ ಬಂದ ಕಾಣಿಕೆ)	ಬೆಂಗಳೂರು	3,540 ''
	ಕೆ. ಕೃಷ್ಣಸ್ವಾಮಿ	ಬೆಂಗಳೂರು	3,001
	ಜಿ.ಎನ್. ಶಂಕುಂತಳ ಥಾರಿಟಬಲ್ ಟ್ರಸ್ಟ್ (ಕುಮಾರಿ ಶಕುಂತಳ ಸ್ಮರಣಾರ್ಥ)	ಬೆಂಗಳೂರು	2,500
	ಜಿ. ಆರ್. ಮಹಾಲಿಂಗೇಗೌಡ	ಗಂಗನಘಟ್ಟ	2,000
10.	ಡಾ II ಕೆ.ಎಸ್. ರಾಜಾರಾವ್	ಬೆಂಗಳೂರು	1,001
11.	ಕುಮಾರಿ ಲಕ್ಷ್ಮೀಯಾಜಿ	ಚಿಕ್ಕಮಗಳೂರು	1,001
12.	ಎಮ್.ಆರ್.ಸೇತೂರಾಮ್	ಬೆಂಗಳೂರು	1,000
13.	ಅಂತರಂಗಭಕ್ತರು	ಬೆಂಗಳೂರು	1,000
14.	ಪೆಚ್.ಎನ್. ವಿಶ್ವನಾಥ್	ಬೆಂಗಳೂರು	1,000
15.	ಶ್ರೀಮತಿ ನಾಗಮ್ಮ ಶಂಕರರಾವ್	ಮೈಸೂರು	1,000
16.	ಶ್ರೀಮತಿ ಇಂದಿರಾ ರಾಜ್	ತುಮಕೂರು	1,000
17.	ಡಾII ಕೆ.ಎಲ್. ರಾಮಸ್ವಾಮಿ	ಬೆಂಗಳೂರು	501
18.	ಎಮ್.ವಿ. ರಾಮಸ್ವಾಮಿ	ಬೆಂಗಳೂರು	501
19.	ಕೆ.ಪಿ. ಗೋಪಾಲಕೃಷ್ಣ ಭಟ್ (ಮಾತಾಪಿತೃಗಳಾದ ಕೆ.ಎನ್. ಪುಟ್ಟಣ್ಣಯ್ಯ ಮತ್ತು ವೆಂಕಟಸುಬ್ಬಮ್ಮ ಸ್ಮರಣಾರ್ಥ)	ಬೆಂಗಳೂರು	501
20.	ಎ. ಉಪೇಂದ್ರರಾವ್	ಬೆಂಗಳೂರು	501

ಓಂ ವಿಷ್ಣುಃ ಶಿವ ರೂಪಾಯ ವಿಷ್ಣು ರೂಪಾಯ ಶಂಭವೇ ।
ವಿಷ್ಣೋಶ್ಚ ಹೃದಯಂ ಶಂಭುಃ ಶಂಭೋಶ್ಚ ಹೃದಯಂ ವಿಷ್ಣುಃ ॥

ಭದ್ರಂ ಶುಭಂ ಮಂಗಳಂ

ಮಾತೃಶ್ರೀ ಶ್ರೀಮತಿ ಸೂರೆ ನರಸಮ್ಮ

ಓಂ ಮಾತೃದೇವೋಭವ । ಓಂ ಪಿತೃದೇವೋಭವ ।
ಓಂ ಆಚಾರ್ಯ ದೇವೋಭವ । ಓಂ ಅತಿಥಿ ದೇವೋಭವ ।
ಓಂ ಪ್ರಕೃತಿ ಮಾತಾ ದೇವೋಭವ । ಓಂ ಸರ್ವಂ ದೇವೋಭವ ॥
ಓಂ ಶಾಂತಿಃ ಶಾಂತಿಃ ಶಾಂತಿಃ

ಇತಿ ಅನೇಕಾನೇಕ ಶಿರ ಸಾಷ್ಟಾಂಗ ನಮಸ್ಕಾರಗಳು

ಜೇಷ್ಠ ಪುತ್ರ : ಎಸ್. ಶರಣಪ್ಪ

ಪಂಚಮ ಪುತ್ರ : ಎಸ್. ಚಂದ್ರಮೌಳಿ

21.	ಸೀತಮ್ಮ-ಕೃಷ್ಣಮೂರ್ತಿ ಪಬ್ಲಿಕ್ ಛಾರಿಟಬಲ್ ಟ್ರಸ್ಟ್	ಹೊಳೆನರಸೀಪುರ	500	''
22.	ಜಿ.ಎ.ರಾಮಸ್ವಾಮಿ	ಬೆಂಗಳೂರು	500	'
23.	ಶ್ರೀಮತಿ ಜಯಲಕ್ಷ್ಮಮ್ಮ-ಕೊಂಡ್ಲಿ ನಾರಾಯಣ ಜೋಯಿಸ್	ಅಮ್ಮಸಂದ್ರ	500	'
24.	ಎಲ್.ಟಿ. ಶಾಮಣ್ಣ	ಬೆಂಗಳೂರು	300	'
25.	ಕೆ.ಟಿ. ಅನಂತಸುಬ್ಬರಾವ್	ಬೆಂಗಳೂರು	275	'
26.	ಟಿ.ಎಲ್. ರಾಮಮೂರ್ತಿ	ಬೆಂಗಳೂರು	251	'
27.	ಡಾ॥ ಹೆಚ್.ಎನ್.ರಾಜಾರಾವ್ (ತಂದೆ ಹೆಚ್.ಎನ್.ನಾರಾಯರಾಯರ ಸ್ಮರಣಾರ್ಥ)	ಬೆಂಗಳೂರು	251	'
28.	ಡಿ.ಆರ್. ಆದಿನಾರಾಯಣಶೆಟ್ಟಿ	ಬೆಂಗಳೂರು	251	''
29.	ಎಸ್.ಪಿ.ಸಿ. ಶೇಖರ್	ಬೆಂಗಳೂರು	251	''
30.	ಕಾಂತರಾಜ್ ಬಾಳಪ್ಪ ನಾಯಕ್	ರಾಣಿಬೆನ್ನೂರು	251	''
31.	ಬಿ.ಆರ್. ಸತ್ಯನಾರಾಯಣ (ಗಜಾನನ)	ಬೆಂಗಳೂರು	251	''
32.	ಎಮ್. ರಾಘವೇಂದ್ರ	ಕೊಟ್ಟಲಪಲ್ಲಿ(A.P.)	251	''
33.	ಹೆಚ್.ಪಿ. ಆತ್ಮಾರಾಮಯ್ಯ	ಬೆಂಗಳೂರು	251	''
34.	ಎಸ್.ಮೋಹನರಾಜ್	ಬೆಂಗಳೂರು	251	''
35.	ಡಾ॥ ಎನ್.ಕೆ. ಶ್ರೀನಿವಾಸಮೂರ್ತಿ	ಬೆಂಗಳೂರು	250	''
36.	ಶ್ರೀಮತಿ ಸರೋಜಾ-ಬಿ.ಎನ್.ಕೃಷ್ಣಮೂರ್ತಿ	ಬೆಂಗಳೂರು	250	''
37.	ಶ್ರೀಮತಿ ಎನ್.ಎಸ್. ಲಲಿತ-ಶ್ರೀನಿವಾಸರಾವ್	ಬೆಂಗಳೂರು	250	''
38.	ಶ್ರೀಮತಿ ಬಿ.ಆರ್. ಶ್ರೀಕಂಠಯ್ಯ	ಬೆಂಗಳೂರು	250	''
39.	ನಾಗಪ್ಪ,ಸಾದ್	ಬೆಂಗಳೂರು	250	''
40.	ಲಕ್ಷ್ಮೀನಾರಾಯಣ ಐತಾಳ್ (ತಂದೆ ವೇ॥ ವೆಂಕಟರಮಣ ಐತಾಳ್ ಸ್ಮರಣಾರ್ಥ)	ಮುದ್ದೇನಹಳ್ಳಿ	250	''
		ಒಟ್ಟು	70,890	ರೂ.

(ಮೇಲ್ಕಂಡ ಧನಸಹಾಯ ಮಾಡಿದ ಉದಾರಾತಿಶಯರೆಲ್ಲರಿಗೂ ಕಾರ್ಯಾಲಯದ ವತಿಯಿಂದ ಕೃತಜ್ಞತಾಪೂರ್ವಕವಾದ ವಂದನೆಗಳು)

ವಿಷಯಾನುಕ್ರಮಣಿಕೆ

ವಿಷಯ	ಪುಟ
೧. ಈಶಾವಾಸ್ಯೋಪನಿಷತ್ತು :-	
ಪೀಠಿಕೆ	೧
ಉಪನಿಷತ್ತಿನ ಸಾರ	೨
೨. ಕೇನೋಪನಿಷತ್ತು :-	
ಪೀಠಿಕೆ	೪
ಉಪನಿಷತ್ತಿನ ಸಾರ	೧೦
೩. ಕಾಠಕೋಪನಿಷತ್ತು :-	
ಪೀಠಿಕೆ	೧೪
ಉಪನಿಷತ್ತಿನ ಸಾರ	೨೨
೪. ಮುಂಡಕೋಪನಿಷತ್ತು :-	
ಪೀಠಿಕೆ	೩೧
ಉಪನಿಷತ್ತಿನ ಸಾರ	೪೩
೫. ಪ್ರಶ್ನೋಪನಿಷತ್ತು :-	
ಪೀಠಿಕೆ	೪೯
ಉಪನಿಷತ್ತಿನ ಸಾರ	೬೨
೬. ಮಾಂಡೂಕ್ಯೋಪನಿಷತ್ತು :-	
ಪೀಠಿಕೆ	೭೦
ಪರಿಶಿಷ್ಟ	೯೮
ಕಾರಿಕೆಗೂ ಬೌದ್ಧಗ್ರಂಥಗಳಿಗೂ ಸಮಾನವಾದ ಶಬ್ದಗಳು	೧೦೧
ಶ್ರುತ್ಯುದಾಹರಣ ಸೂಚಿಕೆ	೧೦೬
ಉಪನಿಷತಿನ ಸಾರ	೧೦೮

ವಿಷಯ	ಪುಟ
೭. ಐತರೇಯೋಪನಿಷತ್ತು :-	
ಪೀಠಿಕೆ	೧೨೨
ಉಪನಿಷತ್ತಿನ ಸಾರ	೧೩೨
೮. ತೈತ್ತಿರೀಯೋಪನಿಷತ್ತು :-	
ಪೀಠಿಕೆ	೧೩೬
ಉಪನಿಷತ್ತಿನ ಸಾರ	೧೪೭
೯. ಛಾಂದೋಗ್ಯೋಪನಿಷತ್ತು :-	
ಪೀಠಿಕೆ	೧೫೫
ಪರಿಶಿಷ್ಟ	೧೭೫
ಉಪನಿಷತ್ತಿನ ಸಾರ	೧೮೬
೧೦. ಬೃಹದಾರಣ್ಯಕೋಪನಿಷತ್ತು :-	
(i) ಒಂದನೆಯ ಭಾಗ	
ಪೀಠಿಕೆ	೨೪೬
ಉಪನಿಷತ್ತಿನ ಸಾರ	೨೬೪
(ii) ಎರಡನೆಯ ಭಾಗ	
ಪೀಠಿಕೆ	೨೮೯
ಉಪನಿಷತ್ತಿನ ಸಾರ	೩೨೧

ಈಶಾವಾಸ್ಯೋಪನಿಷತ್ತು

ಪೀಠಿಕೆ

ಶುಕ್ಲಯಜುರ್ವೇದಕ್ಕೆ ಹದಿನೈದು ಶಾಖೆಗಳಿವೆಯೆಂದೂ ಹದಿನೇಳು ಶಾಖೆಗಳಿವೆಯೆಂದೂ ಮತಭೇದವುಂಟು. **ಕಾಣ್ವ, ಮಾಧ್ಯಂದಿನ** - ಎಂಬ ಎರಡು ಶಾಖೆಗಳು ಮಾತ್ರ ಈಗ ಪ್ರಸಿದ್ಧವಾಗಿವೆ. ಕಣ್ವ, ಮಧ್ಯಂದಿನ - ಎಂಬ ಋಷಿಗಳಿಗೆ ಯಾಜ್ಞವಲ್ಕ್ಯರು ಹೇಳಿಕೊಟ್ಟ ಅಧ್ಯಯನಕ್ರಮದಿಂದ ಈ ಶಾಖೆಗಳಾದವಂತೆ. ಭಗವತ್ಪಾದರವರು ಕಾಣ್ವಶಾಖೆಯ ಕ್ರಮವನ್ನು ಅನುಸರಿಸಿ ತಮ್ಮ ಭಾಷ್ಯವನ್ನು ಬರೆದಿರುತ್ತಾರೆ. ಇದೇ ಉಪನಿಷತ್ತಿಗೆ ಮತ್ತೆ ಕೆಲವರು ತಮ್ಮ ತಮ್ಮ ಮತದ ಅನುಸಾರವಾಗಿ ಮಾಧ್ಯಂದಿನಶಾಖೆಯ ಕ್ರಮದಲ್ಲಿ ವ್ಯಾಖ್ಯಾನಮಾಡಿರುತ್ತಾರೆ.

ಈ ಉಪನಿಷತ್ತು ಶುಕ್ಲಯಜುಸ್ಸಂಹಿತೆಯ ನಲವತ್ತನೆಯ ಅಧ್ಯಾಯವಾಗಿರುತ್ತದೆ. ಮಿಕ್ಕ ಉಪನಿಷತ್ತುಗಳು ಬ್ರಾಹ್ಮಣದ ಭಾಗವಾದ ಆರಣ್ಯಕದಲ್ಲಿದ್ದು ಇದುಮಟ್ಟಿಗೆ ಸಂಹಿತೆಗೇ ಸೇರಿರುವದರಿಂದ ಇದನ್ನು **ಸಂಹಿತೋಪನಿಷತ್ತು** ಎಂದು ಕರೆಯುವರು. ಇದರ ಮೊದಲನೆಯ ಮಂತ್ರವು **ಈಶಾವಾಸ್ಯಮ್** ಎಂದು ಮೊದಲಾಗಿರುವದರಿಂದ ಇದಕ್ಕೆ **ಈಶಾವಾಸ್ಯೋಪನಿಷತ್ತು, ಈಶೋಪನಿಷತ್ತು** - ಎಂಬ ಹೆಸರುಗಳೂ ಪ್ರಸಿದ್ಧವಾಗಿವೆ.

ಈ ಉಪನಿಷತ್ತು ಕರ್ಮಕಾಂಡದ ಕೊನೆಯಲ್ಲಿರುವದರಿಂದ ಕರ್ಮಕ್ಕೆ ಸಂಬಂಧಪಟ್ಟಿರುವ ಜ್ಞಾನವನ್ನು ಹೇಳುತ್ತದೆಯೆಂದೂ ಇದರ ೧೧ನೆಯ ಮಂತ್ರದಲ್ಲಿ ಜ್ಞಾನಕರ್ಮಸಮುಚ್ಚಯವನ್ನು ಹೇಳಿದೆಯೆಂದೂ ಹದಿನಾಲ್ಕನೆಯ ಮಂತ್ರದಲ್ಲಿ ಪರಿಣಾಮವಾದವನ್ನು ಹೇಳಿದೆಯೆಂದೂ ದ್ವೈತಾದ್ವೈತ ಮತದವರಾದ **ಭರ್ತೃಪ್ರಪಂಚ, ಭಾಸ್ಕರಾಚಾರ್ಯ** - ಮೊದಲಾದವರು ಅಭಿಪ್ರಾಯಪಡುತ್ತಾರೆ. ಭಗವತ್ಪಾದರವರು ಈ ಉಪನಿಷತ್ತಿನಲ್ಲಿ ಪ್ರವೃತ್ತಿ, ನಿವೃತ್ತಿ - ಎಂದು ಎರಡು ಬಗೆಯಾಗಿರುವ ವೇದೋಕ್ತಧರ್ಮಗಳನ್ನು ಹೇಳಿದೆಯೆಂದು ತಿಳಿಸಿ ವಿಭಾಗಮಾಡಿರುವರು. ಪರಮಾತ್ಮಸ್ವರೂಪವನ್ನು ತಿಳಿಸುವದೇ ಈ ಉಪನಿಷತ್ತಿನ ಮುಖ್ಯೋದ್ದೇಶವೆಂದೂ ಇವರು ನಿರ್ಣಯಮಾಡಿರುತ್ತಾರೆ.

ಹನ್ನೊಂದು, ಹದಿನಾಲ್ಕು - ಈ ಎರಡು ಮಂತ್ರಗಳಿಗೆ ಇಲ್ಲಿ ಬರೆದಿರುವ ಭಾಷ್ಯಕ್ಕೂ ಐತರೇಯ, ತೈತ್ತಿರೀಯ, ಗೌಡಪಾದರ ಕಾರಿಕೆ - ಇವುಗಳಲ್ಲಿರುವ ಭಾಷ್ಯಕ್ಕೂ ವ್ಯತ್ಯಾಸವು ಕಂಡುಬರುತ್ತದೆ. ಇದಲ್ಲದೆ ಮಿಕ್ಕಕಡೆಗಳಲ್ಲಿ ಮಾಧ್ಯಂದಿನ ಕ್ರಮವನ್ನು ಅನುಸರಿಸಿ ಈ ಮಂತ್ರಗಳನ್ನು ವಿವರಿಸಿರುವಂತೆಯೂ ತೋರುತ್ತದೆ. ಈ ಹೆಚ್ಚು ಕಡಿಮೆಗೆ ಕಾರಣವೇನೋ ಗೊತ್ತಿಲ್ಲ. ಈ ವಿಷಯದಲ್ಲಿ ಟೀಕಾಕರ್ತರೂ ಏನೂ ಹೇಳಿಲ್ಲ. ಆದ್ದರಿಂದ ಇದ್ದಂತೆ ಭಾಷ್ಯವನ್ನು ಕನ್ನಡಿಸಿ ಪರಿಶಿಷ್ಟದಲ್ಲಿ ಮಿಕ್ಕ ಕಡೆಗಳಲ್ಲಿರುವ ಈ ಮಂತ್ರಗಳ ಭಾಷ್ಯವನ್ನೂ ಪಾಚಕರ ಸಲುವಾಗಿ ಕೊಟ್ಟಿರುತ್ತದೆ.

೨೭.೬.೧೯೨೫ ಗ್ರಂಥಕರ್ತ.

ಉಪನಿಷತ್ತಿನ ಸಾರ

(ಮಂತ್ರ ೧-೩) ಈ ಜಗತ್ತಿನಲ್ಲಿ ತೋರಿಬರುತ್ತಿರುವ ಚರಾಚರವೆಲ್ಲವೂ ಆತ್ಮನೇ. ಆತ್ಮನ ನಿಜವನ್ನು ತಿಳಿದವನು ಏಷಣಾತ್ರಯವನ್ನು ತೊರೆದು ಆತ್ಮಜ್ಞಾನನಿಷ್ಠೆಯಲ್ಲಿರುವದಕ್ಕೆ ತಕ್ಕವನು. ಆತ್ಮನನ್ನು ಅರಿತುಕೊಳ್ಳುವದಕ್ಕೆ ಅಶಕ್ತನಾದವನಿಗೆ ವಿಧಿನಿಷೇಧರೂಪವಾದ ಕರ್ಮವನ್ನು ಮಾಡಿಕೊಂಡಿರುವ ಕರ್ಮನಿಷ್ಠೆಯಲ್ಲಿಯೇ ಅಧಿಕಾರವು. ಆದರೆ ನಿಜವಾದ ಆತ್ಮತತ್ತ್ವವನ್ನು ತಿಳಿಯದವರು ಅಸುರರಂತಿರುವರು ; ಏಕೆಂದರೆ ಅವರು ಅಜ್ಞಾನದಿಂದ ಆವೃತರಾಗಿ ಆತ್ಮಹತ್ಯಾದೋಷದಿಂದ ಸತತವಾಗಿ ಸಂಸಾರದಲ್ಲಿ ತೊಳಲುತ್ತಿರುವರು.

(೪-೮) ಈ ಆತ್ಮತತ್ತ್ವವು ದೇಹ, ಇಂದ್ರಿಯ, ಮನಸ್ಸು - ಇವುಗಳ ಸಂಬಂಧವಿಲ್ಲದೆ ಶುದ್ಧಸ್ವರೂಪವಾಗಿರುವದಾದರೂ ಮೂಢರಿಗೆ ಇದು ಅನೇಕವಾಗಿರುವಂತೆಯೂ ಉಪಾಧಿಗಳಿಂದ ತೋರುವ ಸಂಸಾರವಿಕಾರಗಳನ್ನು ಅನುಭವಿಸುತ್ತಿರುವಂತೆಯೂ ಕಾಣುತ್ತಿರುವದು. ಆದರೆ ಯಾವ ಜ್ಞಾನಿಯು ಎಲ್ಲಾ ಭೂತಗಳಲ್ಲಿಯೂ ತನ್ನ ಆತ್ಮನೊಬ್ಬನೇ ಇರುವನೆಂದೂ, ಆ ಆತ್ಮನು ಅಶರೀರನೆಂದೂ, ಧರ್ಮಾದಿಗಳನ್ನು ಮೀರಿರುವನೆಂದೂ, ಪರಮಾರ್ಥಸತ್ಯ

ನೆಂದೂ ಅರಿತುಕೊಳ್ಳುವನೋ ಅವನಿಗೆ ಶೋಕ, ಮೋಹ - ಮುಂತಾದ ಅನರ್ಥಗಳುಂಟಾಗುವದಿಲ್ಲ.

(೯-೧೪) ಕರ್ಮ, ಉಪಾಸನೆ - ಇವೆರಡನ್ನೂ ಒಟ್ಟಿಗೆ ಅನುಷ್ಠಾನ ಮಾಡುವದರಿಂದ ಅವನ್ನು ಒಂದೊಂದನ್ನೇ ಮಾಡುವದರಿಂದಾಗುವ ಫಲಕ್ಕಿಂತ ಹೆಚ್ಚಿನ ಫಲವುಂಟಾಗುವದು. ಹೀಗೆ ಸೇರಿಸಿ ಅನುಷ್ಠಾನಮಾಡುವವರು ಕರ್ಮದಿಂದ ಸ್ವಾಭಾವಿಕವಾದ ಜ್ಞಾನಕರ್ಮಗಳೆಂಬ ಮೃತ್ಯುವನ್ನು ದಾಟಿ ಉಪಾಸನೆಯಿಂದ ಉಪಾಸ್ಯದೇವತೆಯ ಸ್ವರೂಪವನ್ನು ಪಡೆಯುವದೆಂಬ ಅಮೃತತ್ವವನ್ನು ಪಡೆದುಕೊಳ್ಳುವರು. ಉಪಾಸ್ಯದೇವತೆಯಾದ ಬ್ರಹ್ಮವು ವ್ಯಾಕೃತವೆಂದೂ ಅವ್ಯಾಕೃತವೆಂದೂ ಎರಡು ಬಗೆಯಾಗಿರುತದೆ. ವ್ಯಾಕೃತಾ-ವ್ಯಾಕೃತೋಪಾಸನೆಗಳೆರಡನ್ನೂ ಸೇರಿಸಿ ಉಪಾಸನೆಮಾಡುವವರು ವ್ಯಾಕೃತೋಪಾಸನೆಯಿಂದ ಅನೈಶ್ವರ್ಯವೇ ಮುಂತಾದ ರೂಪವಾದ ಮೃತ್ಯುವನ್ನು ದಾಟಿ ಅವ್ಯಾಕೃತೋಪಾಸನೆಯಿಂದ ಪ್ರಕೃತಿಲಯವೆಂಬ ಸುಖದುಃಖಿಗಳನ್ನು ಮೀರಿದ ಅಮೃತತ್ವವನ್ನು ಪಡೆದುಕೊಳ್ಳುತ್ತಾರೆ. ಇಲ್ಲಿಯವರೆಗೇ ಸಂಸಾರದ ಗತಿಯಿರುವದು. ಇಲ್ಲಿಂದ ಮುಂದಕ್ಕೆ ಈ ಮೊದಲೇ ಹೇಳಿದ ಜ್ಞಾನವೇ ಆಗಿ ಮುಖ್ಯಮುಕ್ತಿಯಾಗಬೇಕು.

(೧೫-೧೮) ಮೇಲೆ ಹೇಳಿದಂತೆ ಕರ್ಮೋಪಾಸನೆಗಳನ್ನು ಮಾಡುವವರು ಮರಣಕಾಲದಲ್ಲಿ ಆದಿತ್ಯಮಂಡಲದಲ್ಲಿರುವ ಅಪರಬ್ರಹ್ಮದ ಅನುಜ್ಞೆಯಿಂದ ಉತ್ತರಾಯಣಮಾರ್ಗವಾಗಿ ಹೋಗಿ ಅಪೇಕ್ಷಿಕವಾದ ಅಮೃತತ್ವವನ್ನು ಪಡೆದುಕೊಳ್ಳುವರು. ಹೀಗೆ ಶೋಕಮೋಹಾದಿಗಳನ್ನು ಅತ್ಯಂತವಾಗಿ ತೊಲಗಿಸುವ ನಿವೃತ್ತಿಧರ್ಮವೆಂದೂ ಬಹುಕಾಲ ಅನುಭವಿಸುವ ಅಮೃತತ್ವವನ್ನು ಕೊಡುವ ಪ್ರವೃತ್ತಿಧರ್ಮವೆಂದೂ ವೇದೋಕ್ತಧರ್ಮವು ಎರಡು ಬಗೆಯಾಗಿರುವದು.

ಕೇನೋಪನಿಷತ್ತು

ಪೀಠಿಕೆ

ಈ ಉಪನಿಷತ್ತು ಭಾಷ್ಯಕಾರರ ಮತದಂತೆ ತಲವಕಾರಶಾಖೆಯ ಸಾಮವೇದದ ಬ್ರಾಹ್ಮಣದಲ್ಲಿ ಒಂಭತ್ತನೆಯ ಅಧ್ಯಾಯವಾಗಿರುವದರಿಂದ ಇದನ್ನು **''ತಲವಕಾರೋಪನಿಷತ್ತು''** ಎಂದೂ ಕರೆಯುತ್ತಾರೆ. ಕೇನ ಎಂಬ ಮಾತಿನಿಂದ ಪ್ರಾರಂಭವಾಗಿರುವ ಇದನ್ನು ''ಕೇನೋಪನಿಷತ್ತು'' ಎಂದು ಕರೆಯುವ ವೈದಿಕರೂಢಿಯೇ ಬಹು ಕಡೆಗಳಲ್ಲಿರುತ್ತದೆ. **ಡಾಕ್ಟರ್ ಬರ್ನೆಲ್** ಎಂಬ ಪಾಶ್ಚಾತ್ಯಪುರಾತತ್ತ್ವಶೋಧಕರು ಕಂಡುಹಿಡಿದಿರುವ ಒಂದಾನೊಂದು ಕೈಪ್ರತಿಯಲ್ಲಿ ಇದು ಬ್ರಾಹ್ಮಣದ ಒಂಭತ್ತನೆಯ ಅಧ್ಯಾಯವಾಗಿರದೆ ನಾಲ್ಕನೆಯ ಅಧ್ಯಾಯವಾಗಿದೆಯಂತೆ. ಈ ಹೆಚ್ಚು ಕಡಿಮೆಗೆ ಏನು ಕಾರಣವೋ ತಿಳಿಯದು.

ಉಪನಿಷತ್ತಿನ ಭಾಷ್ಯಗಳು

ಈ ಉಪನಿಷತ್ತಿಗೆ ಶ್ರೀ ಶಂಕರಾಚಾರ್ಯಕೃತವೆಂದು ಪ್ರಸಿದ್ಧವಾಗಿರುವ ಎರಡು ಭಾಷ್ಯಗಳಿರುತ್ತವೆ. ಈ ಎರಡು ಭಾಷ್ಯಗಳೂ ಒಬ್ಬರೇ ಆಚಾರ್ಯರು ಬರೆದವುಗಳೆ ? ಒಬ್ಬರೇ ಎರಡು ಭಾಷ್ಯಗಳನ್ನು ಏತಕ್ಕೆ ಬರೆದರು ?- ಎಂಬ ಪ್ರಶ್ನೆಗಳಿಗೆ ಚಿತ್ತಕ್ಕೆ ತೃಪ್ತಿಕರವಾಗಿರುವ ಉತ್ತರವನ್ನು ಕಂಡುಕೊಳ್ಳುವದು ಕಷ್ಟವಾಗಿರುತ್ತದೆ. ಈ ಭಾಷ್ಯಗಳೆರಡಕ್ಕೂ ವ್ಯಾಖ್ಯಾನವನ್ನು ಬರೆದಿರುವವರು ಇವುಗಳಲ್ಲಿ ಒಂದಕ್ಕೆ **ಪದಭಾಷ್ಯ**ವೆಂದೂ ಇನ್ನೊಂದಕ್ಕೆ **ವಾಕ್ಯಭಾಷ್ಯ**ವೆಂದೂ ಹೆಸರಿಟ್ಟಿರುತ್ತಾರೆ. ಅವರು ಎರಡನೆಯ ವ್ಯಾಖ್ಯಾನಾರಂಭದಲ್ಲಿ ಬರೆದಿರುವ ದೇನೆಂದರೆ : ''ಕೇನೇಷಿತಮ್ ಇತ್ಯಾದಿಕಾಂ ಸಾಮವೇದಶಾಖಾಭೇದಬ್ರಾಹ್ಮಣೋಪನಿಷದಂ ಪದಶೋ ವ್ಯಾಖ್ಯಾಯಾಪಿ ನ ತುತೋಷ ಭಗವಾನ್ ಭಾಷ್ಯಕಾರಃ । ಶಾಬರಕೈರ್ನ್ಯಾಯೈರನಿರ್ಣೀತಾರ್ಥತ್ವಾತ್ ಇತಿ ನ್ಯಾಯಪ್ರಧಾನಶುಷ್ಕತರ್ಕಸಜ್ಜಾತಹರ್ಷೈರ್ವಾಕ್ಯೈರ್ವ್ಯಾಚಿಖ್ಯಾಸುಃ.....'' ಈ ವಾಕ್ಯದ ಅಭಿಪ್ರಾಯವಿದು : ''ಕೇನೇಷಿತಮ್ ಮುಂತಾದ ಸಾಮವೇದದ ಒಂದಾನೊಂದು ಶಾಖೆಯ ಬ್ರಾಹ್ಮಣದ ಈ ಉಪನಿಷತ್ತಿಗೆ ಪದಶಃ ವ್ಯಾಖ್ಯಾನಮಾಡಿದಮೇಲೂ ಭಗವಾನ್ ಭಾಷ್ಯಕಾರರು ಸಂತುಷ್ಟರಾಗಲಿಲ ಏಕೆಂದರೆ (ಈ ಉಪನಿಷತ್ತಿಗೆ ಪದಭಾಷ್ಯದಲ್ಲಿ)

ಶಾರೀರಕನ್ಯಾಯಗಳಿಂದ ಅರ್ಥನಿರ್ಣಯವನ್ನು ಮಾಡಿರುವದಿಲ್ಲ. ಆದ್ದರಿಂದ ಈಗ ಶ್ರುತ್ಯರ್ಥವನ್ನು ಸಂಗ್ರಹವಾಗಿ ತಿಳಿಸುವ ನ್ಯಾಯಪ್ರಧಾನವಾದ ವಾಕ್ಯ ಗಳಿಂದ ಉಪನಿಷತ್ತನ್ನು ವ್ಯಾಖ್ಯಾನಮಾಡಬೇಕೆಂಬ ಇಚ್ಛೆಯಿಂದ ಈ ವಾಕ್ಯಭಾಷ್ಯ ವನ್ನು ಪ್ರಾರಂಭಿಸಿರುತ್ತಾರೆ.'' ಈ ಕಾರಣನಿರ್ದೇಶವು ಎಷ್ಟರಮಟ್ಟಿಗೆ ಸರಿ- ಎಂಬುದನ್ನು ನಿರ್ಣಯಿಸುವ ಮುಂಚೆ ಕೆಲವು ವಿಷಯಗಳನ್ನು ನಾವು ಲಕ್ಷ್ಯದಲ್ಲಿಡಬೇಕಾಗುತ್ತದೆ. ಮೊದಲನೆಯದಾಗಿ ಈ ವ್ಯಾಖ್ಯಾನಕಾರರು **ಆನಂದಗಿರಿ**ಗಳೆಂಬ ಹೆಸರಿನಿಂದ ಪ್ರಸಿದ್ಧರಾಗಿರುವವರೇ ಎಂದು ಆನಂದಾಶ್ರಮ ಮುದ್ರಿತಪುಸ್ತಕದಲ್ಲಿದೆ. ಆದರೆ ''ಕೆಲವು ಕೈಪ್ರತಿಗಳಲ್ಲಿ ಈ ವ್ಯಾಖ್ಯಾನಕಾರರ ಹೆಸರನ್ನು ಬೇರೆಯಾಗಿ ತಿಳಿಸಿರುವದರಿಂದ ಇವರು ಮಿಕ್ಕ ಭಾಷ್ಯಗಳಿಗೆ ವ್ಯಾಖ್ಯಾನವನ್ನು ಬರೆದಿರುವ ಆನಂದಗಿರಿಗಳಲ್ಲವೆಂದು ಕಾಣುತ್ತದೆ'' ಎಂತ ರಿ॥ ಪ್ರೊಫೆಸರ್ ಓರಯಣ್ಣನವರು ಅಭಿಪ್ರಾಯಪಟ್ಟಿರುತ್ತಾರೆ. ಒಂದು ವೇಳೆ ಈ ವ್ಯಾಖ್ಯಾನಕಾರರು ಆನಂದಗಿರಿಗಳೇ ಆಗಿದ್ದರೂ ಇವರಿಗೆ ಈ ಕಾರಣನಿರ್ದೇಶವು ಯಾವ ಆಧಾರದಿಂದ ದೊರೆತ ಸಂಪ್ರದಾಯೋಪದೇಶವು ?- ಎಂದು ಕೇಳಬೇಕಾಗುತ್ತದೆ. ಏಕೆಂದರೆ ಆನಂದಗಿರಿಗಳೇನೂ ಶ್ರೀಶಂಕರಾಚಾರ್ಯರ ಕಾಲದವರಲ.

ಈ ಸಂದೇಹವನ್ನು ನಿವಾರಣೆಮಾಡಿಕೊಳ್ಳಬೇಕೆಂಬ ಜಿಜ್ಞಾಸುಗಳ ಕುತೂಹಲನಿವೃತ್ತಿಗಾಗಿ ನಾವು ಪದಭಾಷ್ಯದ ಜೊತೆಗೆ ವಾಕ್ಯಭಾಷ್ಯವನ್ನೂ ಕನ್ನಡಿಸಿ ಜೋಡಿಸಿರುತ್ತೇವೆ. ಇವೆರಡು ಭಾಷ್ಯಾನುವಾದಗಳನ್ನೂ ವಿಮರ್ಶೆಮಾಡಿದರೆ ಕಂಡುಬರುವದೇನೆಂದರೆ : (೧) ಆಚಾರ್ಯರು ತಾವು ಕೇನೋಪನಿಷತ್ತಿಗೆ ಎರಡು ಭಾಷ್ಯಗಳನ್ನು ಮಾಡಿರುವದಾಗಿ ಮತ್ತೆಲ್ಲಿಯೂ ಹೇಳಿಕೊಂಡಿರುವದಿಲ್ಲ ; ವಾಕ್ಯಭಾಷ್ಯಕ್ಕೆ ಅಸಾಧಾರಣವಾಗಿರುವ ವಾದಸರಣಿಯನ್ನು ಅವರು ಮತ್ತೆಲ್ಲಿಯೂ ಅನುಸರಿಸಿರುವಂತೆಯೂ ಕಾಣುವದಿಲ್ಲ. (೨) ಈ ಎರಡು ಭಾಷ್ಯಗಳಲ್ಲಿ ಪದಭಾಷ್ಯವಾದ ಮೇಲೆ ವಾಕ್ಯಭಾಷ್ಯವನ್ನು ಆಚಾರ್ಯರು ಬರೆದರೆಂಬ ಅಭಿಪ್ರಾಯವು ವ್ಯಾಖ್ಯಾನದಲ್ಲಿ ಅಡಕವಾಗಿರುವದಷ್ಟೆ. ಇದಕ್ಕೆ ಪುಷ್ಟಿಕೊಡುವಂತೆ ವಾಕ್ಯಭಾಷ್ಯದಲ್ಲಿ ಪದಭಾಷ್ಯಕ್ಕೆ ಸಂಬಂಧಪಟ್ಟ ಪರಾಮರ್ಶಕವಾಕ್ಯಗಳು ಯಾವವೂ ಕಾಣುವದಿಲ್ಲ ; ತಾವು ಎರಡು ಭಾಷ್ಯಗಳನ್ನು ಬರೆದಿರುವದಾಗಿ ಹೇಳಿಕೊಂಡಿರುವದಂತೂ ಇಲ್ಲವೇ ಇಲ್ಲ. (೩) ಮೊದಲನೆಯ ಭಾಷ್ಯದಲ್ಲಿರುವಂತೆ ಎರಡನೆಯ ಭಾಷ್ಯದಲ್ಲಿಯೂ ಪದಗಳ ಅರ್ಥವು ಕಂಡುಬರುತ್ತದೆ.

ಆದ್ದರಿಂದ 'ವಾಕ್ಯಭಾಷ್ಯ'ವೆಂಬ ಅಸಾಧಾರಣನಾಮವು ಆ ಭಾಷ್ಯಕ್ಕೆ ಬರುವದಕ್ಕೆ ಕಾರಣವು ಕಾಣುವದಿಲ್ಲ. (೪) ಈ ಎರಡು ಭಾಷ್ಯಗಳಲ್ಲಿ ಕೆಲವು ಪಾಠಭೇದ ಗಳೂ ಇರುತ್ತವೆ. ಉದಾಹರಣೆಗೆ ಎರಡನೆಯ ಖಂಡದ ಮೊದಲನೆಯ ಮಂತ್ರದಲ್ಲಿ ''ನಾಹಂ ಮನ್ಯೇ'' ಎಂದು ಒಂದರ ಪಾಠ, ''ನಾಹ ಮನ್ಯೇ'' ಎಂದು ಇನ್ನೊಂದರ ಪಾಠ. (೫) ಇವೆರಡು ಭಾಷ್ಯಗಳಲ್ಲಿ ಕೊಟ್ಟಿರುವ ಕೆಲವು ಪದಗಳ ಅರ್ಥವಿವರವೂ ಬೇರೆಬೇರೆಯಾಗಿರುತ್ತದೆ. ಉದಾಹರಣೆಗೆ ಇಷಿತಮ್, ಪ್ರೇಷಿತಮ್, ವಾಚೋ ಹ ವಾಚಮ್, ಯದಸ್ಯ ದೇವೇಷು, ಪ್ರತಿಬೋಧ ವಿದಿತಮ್, ಇನ್ದ್ರಃ- ಇವುಗಳ ವಿವರವನ್ನು ನೋಡಿರಿ. (೬) ಕೆಲವು ಸಂದರ್ಭ ಗಳಲ್ಲಿ ಈ ಎರಡು ಭಾಷ್ಯಗಳಲ್ಲಿರುವ ವಿವರಣೆಗಳು ಪರಸ್ಪರವಿರುದ್ಧವಾಗಿರುತ್ತ: ಉದಾಹರಣೆಗೆ ''ಪ್ರತಿಬೋಧವಿದಿತಂ ಮತಮ್'' 'ಬ್ರಾಹ್ಮೀಂ ವಾವ ಉಪನಿಷದಮಬ್ರೂಮ'' ಇವುಗಳ ವಿವರವನ್ನು ನೋಡಿರಿ.

'ವಾಕ್ಯಭಾಷ್ಯ''ವೆಂಬ ಹೆಸರು ಹೇಗೆ ಅನ್ವರ್ಥವಾಗಿದೆ ಎಂಬ ವಿಷಯದಲ್ಲಿ ವ್ಯಾಖ್ಯಾನಕಾರರ ಮತವನ್ನು ಆಗಲೆ ಕೊಟ್ಟಿರುತ್ತೇವೆ. ಪ್ರತಿಯೊಂದು ಮಂತ್ರಕ್ಕೂ ಅವತರಣಿಕೆಯಾಗಿ ಕೊಟ್ಟಿರುವ ಕೆಲವು ''ಸಂಗ್ರಾಹಕ'' ವಾಕ್ಯಗಳು ಪ್ರಸ್ಥಾನತ್ರಯಭಾಷ್ಯದಲ್ಲಿ ಬಹಳ ಅಪರೂಪವಾಗಿ ಕಾಣುವ ಅಥವಾ ಅತ್ಯಂತವಾಗಿ ಎಲ್ಲಿಯೂ ಕಾಣದೆಯೇ ಇರುವ ಶೈಲಿಯಲ್ಲಿರುತ್ತದೆ. ಉದಾಹರಣೆಗೆ ''ಶ್ರೋತ್ರಸ್ಯ ಶ್ರೋತ್ರಮಿತ್ಯಾದಿಪ್ರತಿವಚನಂ ನಿರ್ವಿಶೇಷಸ್ಯ ನಿಮಿತ್ತತ್ವಾರ್ಥಮ್,'' ''ಯದಿ ಮನ್ಯಸೇ ಸುವೇದೇತಿ ಶಿಷ್ಯವಿಚಾಲನಾ ಗೃಹೀತಸ್ಥಿರತಾಯೈ'' ಮುಂತಾದ ವಾಕ್ಯಗಳನ್ನು ನೋಡ ಬಹುದು. ಸಂಗ್ರಹವಾಕ್ಯದಲ್ಲಿ ಹೇಳಿರುವದನ್ನು ಮುಂದೆ ವಿವರಿಸುವುದು ಭಾಷ್ಯ ಗಳಲ್ಲೆಲ್ಲ ಕಾಣಬರುವದಾದರೂ ಇಲ್ಲಿರುವ ಕೆಲವು ಸಂಗ್ರಹವಾಕ್ಯಗಳು ಯಾ ಅಭಿಪ್ರಾಯವನ್ನು ತಿಳಿಸುವದಕ್ಕೆ ಬಂದಿವೆ ಎಂಬುದು ವಿವರಣವಾಕ್ಯದ ಸಹಾಯ ವಿಲ್ಲದೆ ಊಹಿಸುವದೂ ಕಷ್ಟವಾಗಿರುವಷ್ಟು ಅತಿಸಂಕ್ಷಿಪ್ತವಾಗಿರುತ್ತವೆ. ''ಕರ್ಮಾನಾರಭ್ಯ ಇತಿ ಚೇತ್ ನ'' (ಭಾ. ಭಾ. ೯೨)* ''ಅಪ,ತಿಷೇಧಾಚ್ಚ'' (೧೪೯) ''ನ ಅನಭ್ಯುಪಗಮಾತ್'' (೧೪೩) - ಮುಂತಾದವುಗಳು ಈ ಗುಂಪಿಗೆ ಸೇರಿದ ವಾಕ್ಯಗಳು.

ಪದಭಾಷ್ಯವನ್ನು ಬರೆದವರೇ ಅದನ್ನು ಬರೆದ ಬಳಿಕ ವಾಕ್ಯಭಾಷ್ಯವನ್ನು ಬರೆದರೆಂಬುದಕ್ಕೆ ಇರುವ ಇನ್ನೊಂದು ಅಡಚಣೆ ಏನೆಂದರೆ ಪದಭಾಷ್ಯದಲ್ಲಿ ಅಸ್ವಾರಸ್ಯವನ್ನು ತೋರಿಸಿರುವ ಪಕ್ಷವನ್ನೇ ವಾಕ್ಯಭಾಷ್ಯದಲ್ಲಿ ಒಪ್ಪಿರುವದು. ಉದಾಹರಣೆಗೆ ''ಪ್ರತಿಬೋಧವಿದಿತಮ್'' ಎಂಬ ಮಾತಿಗೆ ಒಂದೇ ಸಲಕ್ಕೆ ಆಗಿಬಿಡುವ ಅರಿವು ಎಂಬ ವ್ಯಾಖ್ಯಾನವನ್ನು ಕೊಡುವದು ಸರಿಯಲ್ಲವೆಂದು ಪದಭಾಷ್ಯದಲ್ಲಿ (೫೭) ಹೇಳಿದ್ದರೂ ವಾಕ್ಯಭಾಷ್ಯದಲ್ಲಿ (೧೨೯) ಅದೇ ವ್ಯಾಖ್ಯಾನವನ್ನು ಒಪ್ಪಿರುವದನ್ನು ನೋಡಬಹುದು. 'ಅಬ್ರೂಮ'' ಎಂಬುದಕ್ಕೆ ಭೂತಕಾಲದ ಅರ್ಥವನ್ನು ಪದಭಾಷ್ಯದಲ್ಲಿ (೮೧) ಕೊಟ್ಟಿದ್ದರೂ ಆ ಅರ್ಥವು ಹೊಂದುವದಿಲ್ಲವೆಂದು ವಾಕ್ಯಭಾಷ್ಯದಲ್ಲಿ (೧೫೬) ಹೇಳಿರುವದನ್ನೂ ಲಕ್ಷ್ಯಕ್ಕೆ ತಂದುಕೊಳ್ಳಬಹುದಾಗಿದೆ.

ಇದಲ್ಲದೆ ವಾಕ್ಯಭಾಷ್ಯದಲ್ಲಿ ಕಾಣುವ ಪ್ರಯೋಗಗಳು ಕೆಲವು ವ್ಯಾಕರಣ ಬದ್ಧವಾಗಿಲ್ಲದಂತೆ ಕಾಣುತ್ತಿವೆ, ಕೆಲವು ಕಡೆ ವಾಕ್ಯಗಳು ಸರಿಯಾಗಿ ಅನ್ವಯವಾಗುವದಿಲ್ಲ, ಮತ್ತೆ ಕೆಲವು ಕಡೆ ಬರೆದವರ ತಪ್ಪಿನಿಂದ ವಾಕ್ಯಗಳ ಮಾತುಗಳು ಸ್ವಲ್ಪ ತಪ್ಪಾಗಿರುವಂತೆಯೂ ಕಾಣುತ್ತವೆ.

ವಾಕ್ಯಭಾಷ್ಯವು ಪದಭಾಷ್ಯಕಾರರದೇ ಎಂದು ನಂಬುವದಕ್ಕೂ ಅದು ಶ್ರೀಶಂಕರಾಚಾರ್ಯರದೇ ಎಂದು ನಂಬುವದಕ್ಕೂ ಹೀಗೆ ಕೆಲವು ಅಡ್ಡಿಗಳಿರುತ್ತಿದ್ದರೂ ಈ ಎರಡು ಭಾಷ್ಯಗಳನ್ನೂ ಶಂಕರಾಚಾರ್ಯರ ಭಾಷ್ಯಗಳೆಂದೇ ಹಿಂದೆ ಕೆಲವರು ಒಪ್ಪಿದ್ದರೆಂಬುದಕ್ಕೆ ಒಂದು ಪ್ರಬಲವಾದ ಸಾಧನವಿರುತ್ತದೆ. ಆನಂದಾಶ್ರಮದಲ್ಲಿ ಪ್ರಕಟಿತವಾಗಿರುವ **ನಾರಾಯಣವಿರಚಿತಕೇನೋಪನಿಷದ್ದೀಪಿಕಾ** ಎಂಬ ವ್ಯಾಖ್ಯಾನದಲ್ಲಿ ಗ್ರಂಥಕಾರನು ಈ ಉಪಸಂಹಾರಶ್ಲೋಕವನ್ನು ಬರೆದಿರುತ್ತಾನೆ : ನಾರಾಯಣೇನ ರಚಿತಾ ಶಂಕರೋಕ್ತ್ಯುಪಜೀವಿನಾ । ಅಸ್ಪಷ್ಟಪದವಾಕ್ಯಾನಾಂ ಕೇನೇಷಿತಪ್ರದೀಪಿಕಾ (?) ॥ (ಶಂಕರಾಚಾರ್ಯರ ವಚನವನ್ನು ಆಶ್ರಯಿಸಿ ನಾರಾಯಣನು 'ಕೇನೇಷಿತಂ' ಉಪನಿಷತ್ತಿಗೆ ಅಸ್ಪಷ್ಟವಾಗಿರುವ ಪದವಾಕ್ಯಗಳರ್ಥವಾದ ಈ ದೀಪಿಕೆಯನ್ನು ಮಾಡಿರುತ್ತಾನೆ). ಈ ವ್ಯಾಖ್ಯಾನದಲ್ಲಿ ಪದಭಾಷ್ಯದ ವಾಕ್ಯಗಳನ್ನೂ ವಾಕ್ಯಭಾಷ್ಯದ ವಾಕ್ಯಗಳನ್ನೂ ಬಳಸಿರುವದು ಕಂಡುಬರುತ್ತದೆ. ಈ ನಾರಾಯಣನೆಂಬ ಪಂಡಿತನು ಕನಿಷ್ಠಪಕ್ಷಕ್ಕೆ ಶ್ರೀ ಶಂಕರಾನಂದರ ಕಾಲದವನಾಗಿಯಾದರೂ ಇರಬೇಕೆಂದು ತೋರುತ್ತದೆ.

ವಾಕ್ಯಭಾಷ್ಯದ ವಿಷಯದಲ್ಲಿ ನಾವು ಇಲ್ಲಿ ಕೊಟ್ಟಿರುವ ತಿಳಿವಳಿಕೆಯು ಈ ವಿಷಯದಲ್ಲಿ ಹೆಚ್ಚು ಪರಿಶೋಧನೆ ಮಾಡಬೇಕೆನ್ನುವವರಿಗೆ ಸ್ವಲ್ಪಮಟ್ಟಿಗಾದರೂ ಸಹಾಯಕವಾಗಿರುವದೆಂದು ನಂಬುತ್ತೇವೆ. ಈ ಭಾಷ್ಯದಲ್ಲಿ ಸ್ವತಂತ್ರವಾದ ಹಲವು ಪ್ರೌಢವಿಚಾರಗಳು ಕಂಡುಬರುವದರಿಂದ ಇದರ ಅನುವಾದವು ಸಪ್ರಯೋಜನವೆಂದೇ ನಾವು ಎಣಿಸಿರುತ್ತೇವೆ.

ಭಾಷ್ಯದ ವ್ಯಾಖ್ಯಾನ

ಈ ಉಪನಿಷತ್ತಿನ ವ್ಯಾಖ್ಯಾನಕಾರನು ಸುಪ್ರಸಿದ್ಧನಾದ ಆನಂದಗಿರಿಯಾಗಿರಲಾರನೆಂದು ಕೆಲವರ ಅಭಿಪ್ರಾಯವಿರುವದನ್ನು ಆಗಲೆ ತಿಳಿಸಿರುತ್ತೇವೆ. ಈ ವ್ಯಾಖ್ಯಾನದಲ್ಲಿ ಕಂಡುಬರುವ ಕೆಲವು ಅಭಿಪ್ರಾಯಗಳು ಭಾಷ್ಯಸಮ್ಮತವಲ್ಲವೆಂದು ಕಂಡುಬಂದ ಸ್ಥಲಗಳಲ್ಲಿ ಈ ವಿಷಯಕ್ಕೆ ಅಲ್ಲಲ್ಲಿ ಟಿಪ್ಪಣಿಯನ್ನು ಕೊಟ್ಟಿರುತ್ತೇವೆ. ಪದಭಾಷ್ಯದ ವಿಷಯಕ್ಕೆ ಈ ವ್ಯಾಖ್ಯಾನದಲ್ಲಿ ಕೊಟ್ಟಿರುವ ಇಂಥ ಅಭಿಪ್ರಾಯಗಳಲ್ಲಿ ಮುಖ್ಯವಾದವನ್ನು ಇಲ್ಲಿ ವಾಚಕರ ಲಕ್ಷ್ಯಕ್ಕೆ ತರುವದು ಸಪ್ರಯೋಜನವೆಂದು ಭಾವಿಸಿರುತ್ತೇವೆ. (೧) ೧-೨ರಲ್ಲಿ ''ಅತಿಮುಚ್ಯ'' ಎಂಬುದಕ್ಕೆ ಭಾಷ್ಯದಲ್ಲಿ ಎರಡು ಅರ್ಥವನ್ನು ಕೊಟ್ಟಿರುತ್ತದೆ. ಇಲ್ಲಿ ಮೊದಲನೆಯದು ಜೀವನ್ಮುಕ್ತಿಯನ್ನೂ ಎರಡನೆಯದು ವಿದೇಹಮುಕ್ತಿಯನ್ನೂ ಸೂಚಿಸುವದೆಂದು ವ್ಯಾಖ್ಯಾನದಲ್ಲಿದೆ. ಇದೂ ಹೊಂದುತ್ತದೆಯಾದರೂ ಮುಂದೆ (ವಾಕ್ಯಭಾಷ್ಯ) ೨-೪ರಲ್ಲಿ ಆಚಾರ್ಯನಿಗೆ ''ಅವಿದ್ಯಾಲೇಶ'' ವಿರುವದೆಂದು ವ್ಯಾಖ್ಯಾನಕಾರನು ಬರೆದಿರುವದರಿಂದ ಜೀವನ್ಮುಕ್ತಿಯು ಗೌಣ ಮುಕ್ತಿಯೆಂಬ ಇವರ ಅಭಿಪ್ರಾಯವು ಭಾಷ್ಯಕ್ಕೆ ವಿರುದ್ಧವಾಗಿರುತ್ತದೆ. (೨) ''ಪ್ರತಿಬೋಧವೆಂದರೆ ಯಾವ ನಿಮಿತ್ತವೂ ಇಲ್ಲದ ಬೋಧವು, ಗಾಢನಿದ್ರೆಯಲ್ಲಿರುವಾತನಿಗಿರುವಂಥ ಅರಿವು - ಎಂದು ಕೆಲವರು ಕಲ್ಪಿಸುತ್ತಾರೆ ; ಒಂದೇ ಸಲಕ್ಕೆ ಆಗುವ ಅರಿವು ಎಂದು ಕೆಲವರು ಕಲ್ಪಿಸಿರುತ್ತಾರೆ'' ಎಂಬ ಭಾಷ್ಯವಾಕ್ಯವು ಅಸಂಪ್ರಜ್ಞಾತಸಮಾಧಿಯನ್ನು ಸೂಚಿಸುವ ಮತ್ತು ಸದ್ಯೋಮುಕ್ತಿವಾದವನ್ನು ಸೂಚಿಸುವ ಪೂರ್ವಪಕ್ಷವನ್ನು ಖಂಡಿಸಿರುವೆಯೆಂದೂ ಈ ಪೂರ್ವಪಕ್ಷಗಳೆರಡೂ 'ಅಪರಾಯತ್ತಬೋಧೋ ಹಿ ನಿದಿಧ್ಯಾಸನಮುಚ್ಯತೇ'' ''ಸಕೃತ್ಪ್ರವೃತ್ತಾತ್ಪು ಮೃದ್ಭಾತಿ' ಎಂಬ ವಾರ್ತಿಕಗಳಲ್ಲಿರುತ್ತದೆಯೆಂದೂ ಟೀಕೆಯಲ್ಲಿ ಬರೆದಿರುತ್ತದೆ. ಆದರೆ ವಾಕ್ಯಭಾಷ್ಯದಲ್ಲಿ ಈ ಅಭಿಪ್ರಾಯವನ್ನು ವಿವರಿಸುವಾಗ ಈ ವಿಚಾರವನ್ನೇ

ಕೈಬಿಟ್ಟಿರುತ್ತದೆ. ವಾರ್ತಿಕದಲ್ಲಿ ನೋಡಿದರೆ ಅಸಂಪ್ರಜ್ಞಾತಸಮಾಧಿಯ ಅಥವಾ ಸಮ್ಯೋಮುಕ್ತಿವಾದದ ಸುಳಿವೇ ಇರುವದಿಲ್ಲ. ಆದ್ದರಿಂದ ಭಾಷ್ಯವಾಕ್ಯದಲ್ಲಿ ಸೂಚಿಸಿರುವ ಈ ಪೂರ್ವಪಕ್ಷಗಳೆರಡೂ ವಾರ್ತಿಕಕಾರರಿಗೆ ಸಮ್ಮತವೆಂದೂ ಭಾಷ್ಯಕಾರರಿಗೆ ಇವು ಸಮ್ಮತವಲ್ಲವೆಂದೂ ಹೇಳಿರುವದು ಸಮಂಜಸವಾಗಿ ಕಾಣುವದಿಲ್ಲ. (೩) ಮೂರನೆಯ ಖಂಡದ ಸಂಬಂಧವನ್ನು ತಿಳಿಸುವಾಗ ಅಲ್ಲಿರುವ ಯಕ್ಷನ ಕಥೆಯನ್ನು (ಅ) ಈಶ್ವರಾಸ್ತಿತ್ವಸಾಧಕವಾಗಿಯೂ (ಆ) ಬ್ರಹ್ಮವಿದ್ಯೆಯನ್ನು ಹೊಗಳುವ ಅರ್ಥವಾದವಾಗಿಯೂ (ಇ) ಬ್ರಹ್ಮವನ್ನು ತಿಳಿದುಕೊಳ್ಳುವದು ಬಲು ಕಷ್ಟ ಎಂಬುದನ್ನು ತಿಳಿಸುವ ವಾಕ್ಯವಾಗಿಯೂ (ಈ) ನಾಲ್ಕನೆಯ ಖಂಡದಲ್ಲಿ ವಿಧಿಸಿರುವ ಉಪಾಸನೆಯನ್ನು ಹೊಗಳುವ ಅರ್ಥವಾದವಾಗಿಯೂ (ಉ) ಕರ್ತೃತ್ವಭೋಕ್ತೃತ್ವಗಳು ಮಿಥ್ಯಾಭಿಮಾನಕೃತವೆಂದು ತಿಳಿಸುವ ಅರ್ಥವಾದವಾಗಿಯೂ ಭಾಷ್ಯದಲ್ಲಿ ವಿವರಿಸಿರುತ್ತದೆ. ಈ ಐದು ಅರ್ಥಗಳಲ್ಲಿ ನಾಲ್ಕನೆಯ ಅರ್ಥದಲ್ಲಿಯೇ ಭಾಷ್ಯಕ್ಕೆ ತಾತ್ಪರ್ಯವೆಂದೂ ಮಿಕ್ಕ ಸಂಬಂಧಗಳು ಸಂಭಾವನಾಮಾತ್ರ - ಎಂದರೆ ಅವೂ ಹೊಂದುತ್ತವೆ ಎಂದು ತಿಳಿಸುವದಕ್ಕೇ ಹೊರತು ಬೇರೆಯಲ್ಲ - ಎಂದೂ ಟೀಕಾಕಾರನು ಬರೆದಿರುತ್ತಾನೆ. ಆದರೆ ವಾಕ್ಯಭಾಷ್ಯದಲ್ಲಿ ಸಗುಣೋಪಾಸನೆಯ ವಿಚಾರವು ಬಂದಿರುವಾಗ ''ಅಭಿಪ್ರಾಯಾನ್ತರಮ್ ಆಖ್ಯಾಯಿಕಾಯಾಃ ಸಙ್ಗ್ರಹ್ಣಾತಿ'' (ಈ ಕಥೆಗೆ ಮತ್ತೊಂದು ಅಭಿಪ್ರಾಯವನ್ನೂ ಸಂಗ್ರಹವಾಗಿ ಹೇಳುತ್ತಾರೆ) ಎಂದಿಷ್ಟೇ ಬರೆದು ಕೈ ಬಿಟ್ಟಿರುತ್ತಾನೆ. ಆದ್ದರಿಂದ ಮುಖ್ಯವಾಗಿ ಉಪಾಸನೆಯನ್ನೇ ಹೇಳುವದಕ್ಕಾಗಿ ಯಕ್ಷೋಪಾಖ್ಯಾನವು ಬಂದಿರುತ್ತದೆ ಎಂಬುದು ತರ್ಕದ ಹೊಡೆತಕ್ಕೆ ನಿಲ್ಲುವ ಅಭಿಪ್ರಾಯವಲ್ಲವೆಂದು ಆತನೇ ಎಣಿಸಿದನೆಂದು ಹೇಳಬೇಕಾಗಿದೆ. ಇದು ನಿಜವಾದದು. ಏಕೆಂದರೆ ಪದಭಾಷ್ಯದಲ್ಲಿ ಕೊಟ್ಟಿರುವ ನಾಲ್ಕು ಪಕ್ಷಗಳೂ ಸಂದರ್ಭಕ್ಕೆ ಹೊಂದುತ್ತವೆ. ಇದೂ ಅಲದೆ ಉಪನಿಷತ್ತಿಗೆ ಮುಖ್ಯಪ್ರತಿಪಾದ್ಯವಾದ ಬ್ರಹ್ಮಾಭಿನ್ನಪ್ರತ್ಯಗಾತ್ಮಜ್ಞಾನವನ್ನು ಮುಟ್ಟದೆ ಬೇರೊಂದು ವಿಷಯವನ್ನು ತಿಳಿಸುವದಕ್ಕೆ ಉಪನಿಷತ್ತಿನ ಎರಡು ಖಂಡಗಳು ಬಂದಿರುತ್ತವೆ ಎಂಬುದು ಎಂದಿಗೂ ಯುಕ್ತವಾಗಲಾರದು. (೪) ಉಪನಿಷತ್ತಿನ ಮೊದಲನೆಯ ಎರಡು ಖಂಡಗಳಲ್ಲಿ ಉತ್ತಮಾಧಿಕಾರಿಗಳಿಗಾಗಿ ಬ್ರಹ್ಮಜ್ಞಾನವನ್ನು ಹೇಳಿದೆಯೆಂತಲೂ ಮಿಕ್ಕ ಎರಡು ಖಂಡಗಳಲ್ಲಿ ಮಂದಾಧಿಕಾರಿಗಳಿಗಾಗಿ ಸಗುಣಬ್ರಹ್ಮೋಪಾಸನೆಯನ್ನು ತಿಳಿಸಿದೆಯೆಂತಲೂ ಟೀಕಾಕಾರನು ವಿಂಗಡಿಸಿರುವದು ಇದೇ ಕಾರಣದಿಂದ ತತ್ತ್ವಸಮರ್ಪಕವಾಗಿರು

ವದಿಲ್ಲ. ಮುಖ್ಯವಿಷಯವಾದ ಬ್ರಹ್ಮಜ್ಞಾನವನ್ನೇ ಅರ್ಥವಾದದಿಂದ ಪುಷ್ಟಿಗೊಳಿಸಿ ಜ್ಞಾನಕ್ಕೆ ಬೇಕಾಗುವ ಸಾಧನವನ್ನು ತಿಳಿಸುವದಕ್ಕೇ ಮೂರನೆಯ ನಾಲ್ಕನೆಯ ಖಂಡಗಳು ಬಂದಿರುತ್ತವೆ ; ನಿರುಪಾಧಿಕಬ್ರಹ್ಮವನ್ನು ನೇರಾಗಿ ಅರಿತುಕೊಳ್ಳಲು ಅಸಮರ್ಥರಾದವರಿಗೆ ಸೋಪಾಧಿಕವಾದ ಉಪಾಸನೆಯನ್ನು ತಿಳಿಸಿದೆ - ಎಂಬುದೇ ಭಾಷ್ಯಕಾರರಿಗೆ ಒಪ್ಪಾಗಿರುವ ಅಭಿಪ್ರಾಯವೆಂಬುದು ''ಉಕ್ತಾ ತ ಉಪನಿಷತ್'' ಎಂಬ (೪-೭) ವಾಕ್ಯದ ಚರ್ಚೆಯಿಂದ ಸ್ಪಷ್ಟವಾಗುತ್ತದೆ.

ಮೇಲಿನ ಅಭಿಪ್ರಾಯಗಳನ್ನು ಭಾಷ್ಯಕಾರರ ಸಿದ್ಧಾಂತವೇನೆಂಬುದನ್ನು ನಿರ್ಣಯಿಸಬಲ್ಲ ವಿದ್ವಾಂಸರು ಸಮಾಲೋಚನೆಮಾಡಬೇಕೆಂದು ನಾವು ಪ್ರಾರ್ಥಿಸುತ್ತೇವೆ. ''ಆನಂದಗಿರಿ'' ಎಂಬ ಹೆಸರಿನಿಂದ ಅನೇಕ ಟೀಕಾಕಾರರು ಶಾಂಕರಭಾಷ್ಯಗಳಿಗೆ ವ್ಯಾಖ್ಯಾನವನ್ನು ಬರೆದಿರುವಂತೆ ಕಾಣುತ್ತದೆ ; ಅಥವಾ ವ್ಯಾಖ್ಯಾನಕಾರರು ಯಾರೆಂಬುದನ್ನು ವಿಚಾರಮಾಡುವ ಗೋಜಿಗೆ ಹೋಗದೆ ಹಸ್ತಪ್ರತಿಗಳಲ್ಲಿ ಬರೆಯುವವರು ಶ್ರದ್ಧೆಯಿಂದ ಆನಂದಗಿರಿಗಳ ಹೆಸರನ್ನು ಹಾಕಿರಲೂ ಬಹುದಾಗಿದೆ. ಆದ್ದರಿಂದ ಜಿಜ್ಞಾಸುಗಳಾದವರು ಕೇವಲ ವ್ಯಾಖ್ಯಾನ ಶರಣರಾಗಿ ಭಾಷ್ಯಕಾರರ ಮೂಲಾಭಿಪ್ರಾಯವನ್ನು ರೂಪಾಂತರಗೊಳಿಸಿಕೊಂಡು ತಿಳಿದುಕೊಳ್ಳದೆ ಇರಲೆಂಬ ಸದಿಚ್ಛೆಯಿಂದ ಈ ಪೀಠಿಕೆಯಲ್ಲಿ ವ್ಯಾಖ್ಯಾನಕಾರನ ಅಭಿಪ್ರಾಯಗಳನ್ನು ವಿಮರ್ಶೆಮಾಡಿದೆಯೇ ಹೊರತು ಬರಿಯ ಖಂಡನಾಭಿರುಚಿಯಿಂದಲ್ಲವೆಂದು ನಾವು ವಿನ್ನವಿಸಿಕೊಂಡು ಈ ಪೀಠಿಕೆಯನ್ನು ಸಮಾಪ್ತಿಗೊಳಿಸುವೆವು.

ಗ್ರಂಥಕರ್ತ

(೧೯೪೫)

ಉಪನಿಷತ್ತಿನ ಸಾರ

ಒಂದನೆಯ ಖಂಡ

೧-೨. ನಮ್ಮ ಮನಸ್ಸೂ ಇಂದ್ರಿಯಗಳೂ ತಾವುತಾವೇ ತಮ್ಮ ವಿಷಯಗಳನ್ನು ಅರಿಯುವದಿಲ್ಲ, ತಾವುತಾವೇ ತಮ್ಮ ವ್ಯಾಪಾರವನ್ನು ಮಾಡುವದಿಲ್ಲ. ತಮ್ಮ ಜೀವಾಳವಾಗಿರುವ ಆತ್ಮಚೈತನ್ಯದ ಸನ್ನಿಧಿಯ

ಬಲದಿಂದಲೇ ಇವು ಕೆಲಸಮಾಡುತ್ತಿರುತ್ತವೆ. ಇವುಗಳಲ್ಲಿ ನಾನು- ನನ್ನದೆಂಬ ಭಾವನೆಯನ್ನು ತೊರೆದ ಧೀರರು ಅಮೃತರಾಗುತ್ತಾರೆ.

೩-೮. ಆತ್ಮತತ್ತ್ವವನ್ನು ಇಂದ್ರಿಯಗಳಾಗಲಿ ಮನಸ್ಸಾಗಲಿ ವಿಷಯೀಕರಿಸ ಲಾರವು. ಆದ್ದರಿಂದ ಅದನ್ನು ಇಂಥದ್ದೆಂದು ವಿಷಯವಾಗಿಸಿಕೊಂಡು ಅರಿಯುವದಕ್ಕೆ ಆಗುವದಿಲ್ಲ ; ಮತ್ತೊಬ್ಬರಿಗೆ ಇಂಥದ್ದೆಂದು ತಿಳಿಸುವದಕ್ಕೂ ಆಗುವದಿಲ್ಲ. ಅದು ಅರಿಯಲ್ಪಡತಕ್ಕದ್ದು, ಅರಿಯಲ್ಪಡಲಾಗದ್ದು - ಎಂದು ಎರಡು ಬಗೆಯಾಗಿರುವ ವಿಷಯರಾಶಿಗಿಂತಲೂ ಬೇರೆಯಾಗಿಯೇ ಇರುವದು. ಯಾವದನ್ನು ಇಂದ್ರಿಯಮನಆದಿಗಳು ಅರಿಯಲಾರವೋ ಯಾವದು ಅವುಗಳನ್ನೆಲ್ಲ ತನ್ನ ಸ್ವಭಾವವಾದ ಅರಿವಿನಿಂದ ಬೆಳಗುತ್ತಿರುವದೋ ಆ ನಮ್ಮ ಆತ್ಮನೇ ಅದು ಎಂದು ಮಾತ್ರ ಅದನ್ನು ತಿಳಿದುಕೊಳ್ಳಬಹುದು; 'ಇದು' ಎಂದು ವಿಷಯೀಕರಿಸಬಹುದಾದದ್ದು ಯಾವದೂ ಅದಲ್ಲ. ಇಂಥ ಆತ್ಮತತ್ತ್ವವೇ ಬ್ರಹ್ಮವೆಂದು ವೇದಾಂತಿಗಳು ಹೇಳುವರು.

ಎರಡನೆಯ ಖಂಡ

೧-೪. ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲವಾದಕಾರಣ ಯಾರು ಇದನ್ನು ಇಂಥದ್ದೆಂದು ಅರಿತುಕೊಂಡೆವೆಂದು ಭಾವಿಸುವರೋ ಅವರು ಇದರ ಪರಮಾರ್ಥವನ್ನು ಅರಿಯರು. ಅದು ಯಾವದಕ್ಕೂ ವಿಷಯವಲ್ಲವೆಂದು ನಿಶ್ಚಯಿಸಿರುವವರೇ ಇದರ ನಿಜವನ್ನು ಬಲ್ಲರು. ಬ್ರಹ್ಮದ ಸ್ವರೂಪವು ನಮಗೆ ಹೇಗೂ ತಿಳಿಯಬರುವದೇ ಇಲ್ಲವೆಂದೇ ಎಣಿಸಬಾರದು. ಏಕೆಂದರೆ ಮನಸ್ಸಿನಲ್ಲಿ ಯಾವ ಯಾವ ಪ್ರತ್ಯಯವುಂಟಾದರೂ ಅದನ್ನೆಲ್ಲ ಬೆಳಗುತ್ತಿರುವ ಸ್ವಯಂ ಪ್ರಕಾಶವಾದ ಆತ್ಮಚೈತನ್ಯರೂಪಸಾಕ್ಷಿಯಾಗಿ ಅದು ನಮಗೆ ತಿಳಿದುಬರುತ್ತಲೇ ಇರುವದು. ಓಗೆಂದು ಅರಿತವನಿಗೆ ಆತ್ಮನ ಸ್ವಭಾವವಾದ ಬಲವು ದಕ್ಕುವದು, ಈ ತಿಳಿವಳಿಕೆಯಿಂದ ಅಮೃತತ್ವವೂ ದೊರಕುವದು.

೫. ಮೇಲೆ ಹೇಳಿದ ರೀತಿಯಲ್ಲಿ ಬದುಕಿರುವಾಗಲೇ ಅರಿತುಕೊಂಡರೆ ಪರಮಾರ್ಥಸತ್ಯವು ಲಾಭವಾಗಿ ಜನ್ಮವು ಸಾರ್ಥಕವಾಗುವದು. ಇಲ್ಲದಿದ್ದರೆ ಸಂಸಾರದಲ್ಲಿ ತಪ್ಪದೆ ತೊಳಲಬೇಕಾಗುವದರಿಂದ ಜನ್ಮವು ವ್ಯರ್ಥವಾಗಿ ದೊಡ್ಡ ನಷ್ಟವಾದಂತೆ ಆಗುವದು. ಆದ್ದರಿಂದ ಜ್ಞಾನರಾದವರು ಸರ್ವಪ್ರಾಣಿಗಳಿಗೂ

ಆತ್ಮನಾಗಿರುವ ಈ ಬ್ರಹ್ಮವನ್ನು ಕಂಡುಕೊಂಡು ಈ ಅವಿದ್ಯಾಮಯವಾದ ಸಂಸಾರವನ್ನು ದಾಟಿ ಅಮೃತರಾಗುವರು.

ಮೂರನೆಯ ಖಂಡ

೧. ಹಿಂದಕ್ಕೆ ದೇವತೆಗಳಿಗೂ ಅಸುರರಿಗೂ ಸಂಗ್ರಾಮವಾಗಲು ಬ್ರಹ್ಮವು ದೇವತೆಗಳಿಗೆ ಜಯವನ್ನು ತಂದುಕೊಟ್ಟಿತು. ಆದರೆ ದೇವತೆಗಳು ತಾವೇ ತಮ್ಮ ಶಕ್ತಿಯಿಂದಲೇ ಜಯಿಸಿ ತಮ್ಮ ತಮ್ಮ ಮಹಿಮೆಯನ್ನು ಪಡೆದುಕೊಂಡೆವೆಂದು ಭಾವಿಸಿಕೊಂಡರು.

೨. ಇವರ ಮಿಥ್ಯಾಭಿಮಾನವನ್ನರಿತುಕೊಂಡ ಬ್ರಹ್ಮವು ಒಂದು ಅದ್ಭುತವಾದ ಯಕ್ಷರೂಪವನ್ನು ಧರಿಸಿ ಅವರಿಗೆ ಕಾಣಿಸಿಕೊಂಡಿತು. ಅವರಿಗೆ ಯಾರಿಗೂ ಆ ರೂಪದ ನಿಜವು ತಿಳಿಯದೆಹೋಯಿತು.

೩-೬. ಆಗ ದೇವತೆಗಳು ಆದದ್ದೆಲ್ಲವನ್ನೂ ತಿಳಿಯಬಲವನೆಂದು ಪ್ರಸಿದ್ಧನಾದ ಅಗ್ನಿಯನ್ನು 'ಈ ಯಕ್ಷನು ಯಾರೆಂಬುದನ್ನು ತಿಳಿದುಕೊಂಡು ಬಾ'-ಎಂದು ಕಳುಹಿಸಿದರು. ಬ್ರಹ್ಮವು 'ನೀನು ಯಾರು ?' ಎಂದು ಕೇಳಲು 'ಲೋಕದಲ್ಲಿರುವದನ್ನೆಲ್ಲ ಸುಡುವ ಅಗ್ನಿಯು ನಾನು, (ಅದನ್ನೆಲ್ಲ ಅರಿಯುವ) ಜಾತವೇದನು ನಾನು' ಎಂದು ಅಗ್ನಿಯು ಉತ್ತರವನ್ನು ಕೊಟ್ಟನು. 'ಹಾಗಾದರೆ ಇದನ್ನು ಸುಡು' ಎಂದು ಒಂದು ಹುಲ್ಲುಕಡ್ಡಿಯನ್ನು ಬ್ರಹ್ಮವು ಅವನ ಮುಂದಿಡಲು ಅಗ್ನಿಯು ಅದನ್ನು ಸುಡಲಾರದೆ ಹೋದನು ; ಆದ್ದರಿಂದ ಅವನು ನಾಚಿಕೊಂಡು ಯಕ್ಷನ ನಿಜವನ್ನರಿಯಲಾರದೆ ಹಿಂದಿರುಗಿದನು.

೭-೧೦. ಆಮೇಲೆ ದೇವತೆಗಳು ವಾಯುವನ್ನು ಈ ಕೆಲಸಕ್ಕೆ ಕಳುಹಿಸಿದರು. ಅವನಿಗೂ ಬ್ರಹ್ಮಕ್ಕೂ ಮೇಲಿನಂತೆಯೇ ಸಂಭಾಷಣೆಯು ನಡೆಯಿತು. ಪೃಥ್ವಿಯಲ್ಲಿರುವದನ್ನೆಲ್ಲ ಎತ್ತಬಲ್ಲನೆಂದು ಕೊಚ್ಚಿಕೊಂಡ ವಾಯುವಿನಿಂದ ಆ ಹುಲ್ಲುಕಡ್ಡಿಯನ್ನುಕೂಡ ಎತ್ತುವದಾಗಲಿಲ್ಲ. ವಾಯುವೂ ಯಕ್ಷನ ನಿಜವನ್ನರಿಯಲಾರದೆ ಹಿಂದಿರುಗಿದನು.

೧೧-೧೨. ಆಮೇಲೆ ದೇವತೆಗಳು ಯಕ್ಷನು ಯಾರೆಂಬುದನ್ನು ಅರಿತುಕೊಂಡು ಬರುವದಕ್ಕೆ ಇಂದ್ರನನ್ನು ಕಳುಹಿಸಿದರು. ಬ್ರಹ್ಮವು ಅವನಿಗೆ ದರ್ಶನವನ್ನು ಕೂಡ ಕೊಡದೆ ಅಲ್ಲಿಯೇ ಮಾಯವಾಯಿತು. ಆಗ ಇಂದ್ರನು

ಅಲ್ಲಿಯೇ ನಿಂತಿರಲು ಬ್ರಹ್ಮವಿದ್ಯಾದೇವಿಯು ಅವನಿಗೆ ಸುಂದರಿಯಾದ ಉಮಾ - ಎಂಬ ಹೆಸರಿನ ಸ್ತ್ರೀಯ ರೂಪದಿಂದ ದರ್ಶನವನ್ನು ಕೊಟ್ಟಳು. ಆಕೆಯನ್ನು 'ಈ ರೂಪದ ನಿಜವೇನು ?' ಎಂದು ಇಂದ್ರನು ಕೇಳಿದನು.

ನಾಲ್ಕನೆಯ ಖಂಡ

೧. ಆಕೆಯು ''ಇದು ಬ್ರ ಈ ಬ್ರಹ್ಮವು ಜಯವನ್ನು ತಂದುಕೊಟ್ಟದ್ದರಿಂದಲೇ ನೀವು ಮಹಿಮಾವಂತರಾಗಿರುವಿರಿ'' ಎಂದಳು. ಆಗ ಆಕೆಯ ಉಪದೇಶದಿಂದಲೇ ಇಂದ್ರನಿಗೆ ಇದು ಬ್ರಹ್ಮವು ಎಂಬ ಅರಿವಾಯಿತು.

೨-೩. ಹೀಗೆ ಅಗ್ನಿ, ವಾಯು, ಇಂದ್ರ - ಈ ಮೂವರೂ ಬ್ರಹ್ಮವನ್ನು ಕಂಡು ಮಾತನಾಡಿದವರಾದ್ದರಿಂದ ಮಿಕ್ಕ ದೇವತೆಗಳಿಗಿಂತ ಹೆಚ್ಚಿನವರಾದರು. ಅದರಲ್ಲಿಯೂ ಇಂದ್ರನು ಮೊಟ್ಟಮೊದಲು ಇದು ಬ್ರಹ್ಮವು - ಎಂದು ತಿಳಿದುಕೊಂಡವನಾದಕಾರಣ ದೇವತೆಗಳಲ್ಲೆಲ್ಲ ಶ್ರೇಷ್ಠನೆನಿಸಿದನು.

೪-೫. ಆ ಬ್ರಹ್ಮಕ್ಕೆ ಉಪಮಾನವನ್ನು ಕೊಡಬೇಕಾದರೆ 'ಮಿಂಚು ಥಳಾರೆಂದು ಹೊಳೆದು ಮರೆಯಾಗುವಂತೆ', 'ಕಣ್ಣು ತೆರೆದು ತಟ್ಟನೆ ಮುಚ್ಚಿಕೊಳ್ಳುವಂತೆ' ಎಂಬ ಅಧಿದೈವತವಾದ ಹೋಲಿಕೆಗಳನ್ನೂ ಮನಸ್ಸಿನ ಪ್ರತ್ಯಯಗಳು ಹುಟ್ಟಿಹೋಗುವಾಗಲೆಲ್ಲ ಅಭಿವ್ಯಕ್ತವಾಗುವ ರೂಪವೆಂದು ಅಧ್ಯಾತ್ಮವಾದ ಹೋಲಿಕೆಯನೂ ಕೊಟ್ಟು ವರ್ಣಿಸಬಹುದು.

೬. ಅದು ಎಲರಿಗೂ ಆತ್ಮಸ್ವರೂಪವಾಗಿರುವದರಿಂದ ಅದನು ಎಲ್ಲರೂ ಪ್ರೀತಿಯಿಂದ ಭಜಿಸುವರು ; ಆದ್ದರಿಂದ ಅದನ್ನು 'ತದ್ವನಮ್' (ಪ್ರಾಣಿಗಳಿಗೆಲ್ಲ ಪ್ರಿಯವಾಗಿರುವದು) ಎಂಬ ಹೆಸರಿನಿಂದ ಉಪಾಸನೆಮಾಡಬೇಕು.

೭. ಪರಮಾತ್ಮನ ಉಪನಿಷತ್ತು ಇಷ್ಟೇ, ಇದಕ್ಕಿಂತ ಹೆಚ್ಚಿನದೇನೂ ಇರುವದಿಲ್ಲ. ಇದನ್ನು ಪಡೆದುಕೊಳ್ಳುವದಕ್ಕೆ ತಪಸು, ದಮ, ಕರ್ಮ, ವೇದವೇದಾಂಗಗಳ ಜ್ಞಾನ - ಇವೆಲ್ಲವೂ ಬೇಕಾಗುವ ಸಾಧನಗಳು. ವಿಶೇಷವಾಗಿ ಸತ್ಯವೆಂಬ ಸಾಧನವು ಅವಶ್ಯವಾಗಿ ಬೇಕಾಗುವದು.

೮. ಇಲಿ ವರ್ಣಿಸಿರುವ ಪ್ರಕಾರದಿಂದ ಬ್ರಹ್ಮವನ್ನು ಅರಿತು ಕೊಂಡಾತನು ಸಕಲಕಲ್ಮಷಗಳನ್ನೂ ತೊಲಗಿಸಿಕೊಂಡು ಆ ಪರಬ್ರಹ್ಮದಲ್ಲಿಯೇ ನಿಲುಗಡೆಯನ್ನು ಪಡೆಯುವನು.

ಕಾಠಕೋಪನಿಷತ್ತು

ಪೀಠಿಕೆ

ಕಠೋಪನಿಷತ್ತು ಕೃಷ್ಣಯಜುರ್ವೇದಕ್ಕೆ ಸೇರಿದ್ದೆಂದು ಪ್ರಸಿದ್ಧಿ. ಆದರೆ ಉಪನಿಷತ್ತಿಗೂ ಹಿಂದಿನ ಗ್ರಂಥಕ್ಕೂ ಸಂಬಂಧವನ್ನು ಭಾಷ್ಯದಲ್ಲಿ ತಿಳಿಸಿರುವದಿಲ್ಲವಾದ್ದರಿಂದ ಈ ಉಪನಿಷತ್ತನ್ನು ಯಾವ ವೇದದ ಭಾಗವೆಂತ ಶಂಕರಭಗವತ್ಪಾದರವರು ಎಣಿಸಿದ್ದರೆಂಬುದು ಸ್ಪಷ್ಟವಾಗಿ ತಿಳಿಯುವಂತಿಲ್ಲ.

ನಚಿಕೇತನ ಕಥೆ

ಉಪನಿಷತಿನಲ್ಲಿ ನಚಿಕೇತನೆಂಬ ಬ್ರಹ್ಮಚಾರಿಗೆ ಯಮದೇವತೆಯು ತತ್ತ್ವವನ್ನು ಉಪದೇಶಿಸಿದಂತೆ ಕಥೆ ಇದೆಯಷ್ಟೆ. ಈ ಕಥೆಯ ಅಂಶವು **ಮಹಾಭಾರತ**ದಲ್ಲಿಯೂ (ಅನುಶಾಸನ ೧೦೬), **ತೈತ್ತಿರೀಯಬ್ರಾಹ್ಮಣದಲ್ಲಿಯೂ** (೩-೧-೮) ಕಂಡುಬರುತ್ತದೆ. ಮಹಾಭಾರತದ ಕಥೆಗೆ ಈ ಉಪನಿಷತ್ತೇ ಆಧಾರವಾಗಿದ್ದರೂ ಇರಬಹುದು. ಆದರೆ ಅಲ್ಲಿ ಗೋದಾನವನ್ನು ಹೊಗಳುವದಷ್ಟೇ ಉದ್ದೇಶವಾಗಿರುತ್ತದೆ. ಆಜ್ಞೆಯನ್ನು ಉಲ್ಲಂಘಿಸಿದನೆಂಬ ಕಾರಣದಿಂದ ತಂದೆಯು 'ಯಮನನ್ನು ನೋಡು' ಎಂದು ಮಗನನ್ನು ಶಪಿಸಿದಂತೆಯೂ ಯಮನು ನಚಿಕೇತನನ್ನು ಸತ್ಕರಿಸಿ ಅವನಿಗೆ ಪುಣ್ಯವಂತರ ಲೋಕಗಳನ್ನು ತೋರಿಸಿದಂತೆಯೂ ಅಲ್ಲಿ ಕಥೆಯಿದೆ. ಗೋದಾನವನ್ನು ಮಾಡಿದವರಿಗೆ ಆಗುವ ಉತ್ತಮಲೋಕಗಳನ್ನು ತಿಳಿದು ನಚಿಕೇತನು ತಂದೆಗೆ ಆ ಸಮಾಚಾರವನ್ನೆಲ್ಲ ತಿಳಿಸುತ್ತಾನೆ. ತೈತ್ತಿರೀಯಬ್ರಾಹ್ಮಣದಲ್ಲಿ ಉಪನಿಷತ್ತಿನಂತೆಯೇ ಕಥಾಸಂವಿಧಾನವಿದೆ. ಆದರೆ ಅಲ್ಲಿ ನಚಿಕೇತನು ಕೇಳಿಕೊಂಡ ವರಗಳು ಈ ಮೂರು : (೧) ತಾನು ತಂದೆಯ ಬಳಿಗೆ ಜೀವಂತವಾಗಿ ಹಿಂತಿರುಗಬೇಕು ; (೨) ಇಷ್ಟಾಪೂರ್ತಗಳು ಅಕ್ಷಯವಾಗುವ ವಿಧಾನವನ್ನು ತನಗೆ ತಿಳಿಸಬೇಕು ; (೩) ಮೃತ್ಯುವನ್ನು ಜಯಿಸುವ ರೀತಿಯನ್ನು ತಿಳಿಸಬೇಕು. ಕೊನೆಯ ಎರಡು ವರಗಳಿಗೂ ನಾಚಿಕೇತಾಗ್ನಿಯ ಚಯನವನ್ನೇ ಮೃತ್ಯುವು ಉಪದೇಶಿಸಿರುತ್ತಾನೆ. ಆ ಚಯನದಿಂದ ಅನೇಕ ದೃಷ್ಟಫಲಗಳೂ ಸ್ವರ್ಗಲೋಕಪ್ರಾಪ್ತಿಯೂ ಆದಿತ್ಯಸಾಯುಜ್ಯವೂ ಆಗುವದೆಂದು ಆ ಬ್ರಾಹ್ಮಣದಲ್ಲಿಹೇಳಿರುತ್ತದೆ. '**ಯೋಽಗ್ನಿಂ ನಾಚಿಕೇತಂ ಚಿನುತೇ । ಯ**

ಉ ಚೈನಮೇವಂ ವೇದ ಎಂಬ ವಾಕ್ಯವು ಅಲ್ಲಿ ಹಲವು ಬಾರಿ ಬಂದಿರುತ್ತದೆ ಯಾದ್ದರಿಂದ ಉಪಾಸನೆಯಲ್ಲಿ ಅನುವಾದಮಾಡಿಕೊಂಡಿರುವ ಕರ್ಮೋಪಾಸನೆ ಗಳ ಸಮುಚ್ಚಯಾನುಷ್ಠಾನದ ಫಲದ ವಿಷಯವನ್ನು ತಿಳಿಸುವ ಕಥೆಯ ಪೂರ್ವರೂಪವಿದೆಂದು ನಾವು ಇಟ್ಟುಕೊಳ್ಳಬಹುದಾಗಿದೆ. ತೈತ್ತಿರೀಯ ಬ್ರಾಹ್ಮಣದ ಮೂರನೆಯ ಅಷ್ಟಕದ ಪತ್ತನೆಯ ಪ್ರಶ್ನೆಯಿಂದ ಮುಂದಕ್ಕಿರುವ ಭಾಗವನ್ನು **'ಕಾಠಕ'**ವೆಂದೇ ವೈದಿಕರು ಕರೆಯುತ್ತಾರೆ. ಈ ಭಾಗವು ಮೊದಲು ಕಾಠಕಶಾಖೆಯ ಬ್ರಾಹ್ಮಣಕ್ಕೆ ಸೇರಿದ್ದು, ಈಚೆಗೆ ತೈತ್ತಿರೀಯದೊಳಗೆ ಸೇರಿಕೊಂಡಿರಬಹುದೆ ? ಎಂಬುದನ್ನು ಪುರಾತತ್ತ್ವವಿದರು ಶೋಧಿಸಬೇಕಾಗಿದೆ. ಮೊದಲನೆಯ ಎರಡು ಅಷ್ಟಕಗಳಲ್ಲಿ ಎಂಟೆಂಟೇ ಪ್ರಶ್ನೆಗಳಿರುವಲ್ಲಿ ಮೂರನೆಯ ಅಷ್ಟಕದಲ್ಲಿ ಮಾತ್ರ ಹನ್ನೆರಡು ಪ್ರಶ್ನೆಗಳಿರುವದೂ ಅಷ್ಟಕವೆಂಬ ಹೆಸರಿಗೆ ಹೊಂದುಗಡೆಯಾಗುವದಿಲ್ಲ ವೆಂಬುದೂ ಇಲ್ಲಿ ನೆನಪಿಡತಕ್ಕದ್ದಾಗಿದೆ.

ಬ್ರಹ್ಮವಿದ್ಯೆಯ ಸ್ವರೂಪ

ನಚಿಕೇತನು ಕೇಳಿಕೊಂಡ ಮೂರನೆಯ ವರದ ಸ್ವರೂಪವನ್ನು ಭಾಷ್ಯಕಾರರು ಹೇಗೆ ವಿವರಿಸಿರುವರೆಂಬುದನ್ನು ಇಲ್ಲಿ ಒಂದಿಷ್ಟು ವಿಚಾರಿಸುವದು ಒಳ್ಳೆಯದು. ದೇಹವ್ಯತಿರಿಕ್ತನಾದ ಆತ್ಮನೊಬ್ಬನಿರುವನೆ ? ಅವನ ಪರಮಾರ್ಥ ಸ್ವರೂಪವು ಹೇಗಿರುವದು ? (೧-೧-೨೦, ೧-೨-೧೪) ಎಂಬುದು ನಚಿಕೇತನ ಪ್ರಶ್ನೆ. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ- ಇವುಗಳೆಲ್ಲಕ್ಕಿಂತ ಬೇರೆ ಯಾಗಿ ಆತ್ಮನಿರುವನೆಂಬುದಕ್ಕೆ ಪ್ರತ್ಯಕ್ಷವಾಗಲಿ ಅನುಮಾನವಾಗಲಿ, ಸಹಾಯಕ ವಾಗುವದಿಲ್ಲ. ಏಕೆಂದರೆ ಇಂದ್ರಿಯಾದಿಗಳೇ ಅತೀಂದ್ರಿಯವಾಗಿವೆ, ಅವನ್ನು ಮೀರಿರುವ ವಸ್ತುವೊಂದಿದ್ದರೆ ಅದು ಹೇಗೆ ಇಂದ್ರಿಯಗೋಚರವಾದೀತು? ಇಂದ್ರಿಯಕ್ಕೆ ವಿಷಯವೂ ಅಲ್ಲದ, ಇಂದ್ರಿಯಕ್ಕೆ ವಿಷಯವಾದ ಗುರುತಿನ ಸಂಬಂಧವೂ ಇಲ್ಲದ, ವಸ್ತುವನ್ನು ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ತಿಳಿಯುವದಕ್ಕೆ ಹೇಗೆ ಆದೀತು ? ಆದ್ದರಿಂದ ಆತ್ಮವಸ್ತುವನ್ನು ತಿಳಿಯುವದಕ್ಕೆ ಪ್ರತ್ಯಕ್ಷಾದಿಗಳಿಗಿಂತ ಬೇರೆಯಾದ ಪ್ರಮಾಣವಿದ್ದರೆ ಅದನ್ನು ತಿಳಿಸು- ಎಂಬುದು ನಚಿಕೇತನ ಪ್ರಶ್ನೆ.

ಇದಕ್ಕೆ ಯಮನ ಉತ್ತರವೇನೆಂದರೆ : ಆತ್ಮತತ್ತ್ವವನ್ನು ಸಾಮಾನ್ಯಜನರು ವಿಚಾರಮಾಡುವದೇ ಇಲ್ಲ. ಅವರು ವಿಚಾರಮಾಡಿದರೂ ಅದು ಅವರಿಗೆ

ತಿಳಿಯುವದೂ ಇಲ್ಲ (೧-೨-೫,೬,೭). ಅದು ತರ್ಕಕ್ಕೆ ನಿಲುಕುವದಿಲ್ಲ. (೧-೨-೮,೯). ಅದು ನಮ್ಮ ಹೃದಯದಲ್ಲಿಯೇ ಇರುವದರಿಂದ ಅದನ್ನು ಅಧ್ಯಾತ್ಮಯೋಗದಿಂದ ತಿಳಿದುಕೊಂಡು ಶೋಕಾದಿಗಳಿಂದ ಬಿಡುಗಡೆಯನ್ನು ಹೊಂದಬಹುದು (೧-೨-೧೨,೧೩). ಈ ಆತ್ಮನನ್ನು ತಿಳಿದುಕೊಳ್ಳುವದಕ್ಕೆ ಅವಿದ್ಯೆಯೂ ಕಾಮವೂ ಅಡ್ಡಿಯಾಗಿರುವವು (೨-೧-೧,೨). ಇದನ್ನು ತಿಳಿದು ಕೊಳ್ಳುವವನೂ ಹೇಳಿಕೊಡುವವನೂ ಆಶ್ಚರ್ಯಪ್ರಾಯರು (೧-೨-೭). ಇದನ್ನು ತಿಳಿದುಕೊಳ್ಳಬೇಕೆನ್ನುವವನು ದುರಾಚಾರವನ್ನು ಬಿಟ್ಟು ಅಂತಃಕರಣ ಬಹಿಃಕರಣಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರಬೇಕು (೧-೨-೨೪), ಆತ್ಮನನ್ನೇ ಬಯಸುತ್ತಿರಬೇಕು (೧-೨-೨೩). ಉತ್ತಮನಾದ ಆಚಾರ್ಯನನ್ನು ಸೇವಿಸಿ, ತತ್ತ್ವವನ್ನು ಅರಿತುಕೊಳ್ಳಬೇಕು (೧- ೩-೧೪), ಹೇಳಿಕೊಡುವ ಆಚಾರ್ಯನು ಬ್ರಹ್ಮಜ್ಞಾನವನ್ನು ಹೊಂದಿ ಆ ಬ್ರಹ್ಮವೇ ತಾನೆಂಬ ಅರಿವಿನಲ್ಲಿ ನಿಂತವನಾಗಿರಬೇಕು (೧-೨-೮), ಹಾಗಾದರೆ ಮಾತ್ರ ಅದರ ಅರುವಾಗುತ್ತದೆ.

ಅವಿದ್ಯೆಯೆಂದರೇನು ?

ಆತ್ಮನನ್ನು ಅರಿಯುವದಕ್ಕೆ ಅಡ್ಡಿಯಾಗಿರುವ ಅವಿದ್ಯೆಯ ಸ್ವರೂಪದ ಬಗ್ಗೆ ಭಾಷ್ಯಕಾರರ ಅಭಿಪ್ರಾಯವೇನೆಂದರೆ : ಆತ್ಮನಲ್ಲಿ ಅವಿಚಾರಸ್ವಭಾವದಿಂದ ಕ್ರಿಯಾಕಾರಕಫಲಗಳನ್ನು ಆರೋಪಿಸುವದೇ ಅಜ್ಞಾನವು (೧-೧-೨೦). ಈ ಅವಿದ್ಯೆಗೆ **ಮಿಥ್ಯಾಜ್ಞಾನ**ವೆಂದೂ ಹೆಸರು. ಅವಿದ್ಯೆಯಿಂದ ತೋರುವ ಕ್ರಿಯಾಕಾರಕಫಲರೂಪವಾದ ಪ್ರಪಂಚವೇ ನಾಮರೂಪಕರ್ಮಾತ್ಮಕವಾದ ಅನಾತ್ಮವು (೧-೩-೧೪) ; ನಮ್ಮ ಹೊರಗೆ ಅನಾತ್ಮವನ್ನು ಸ್ವಭಾವದಿಂದ ನೋಡುತ್ತಿರುವದೇ ಅವಿದ್ಯೆ (೨-೧-೨) ; ಉಪಾಧಿಯ ಸ್ವಭಾವದಿಂದ ಆಗಿರುವ ಭೇದದರ್ಶನವೇ ಅವಿದ್ಯೆ (೨-೧-೧೦) .

ಅಜ್ಞಾನವು ಅಥವಾ ಅವಿದ್ಯೆಯು ಸಂಸಾರಕ್ಕೆ **ಬೀಜ**ವೆಂದು (೧-೧-೨೦) ಹೇಳಿರುವದಲ್ಲದೆ ಅವ್ಯಕ್ತ (ಅಥವಾ ಅವ್ಯಾಕೃತ)ವೂ ಜಗತ್ತಿಗೆ **ಬೀಜ**ವೆಂದು (೧-೩-೧೧) ಭಾಷ್ಯದಲ್ಲಿ ಬರೆದಿರುವದು ಅಜ್ಞಾನ (ಅಥವಾ ಅವಿದ್ಯೆ) ಮತ್ತು ಅವ್ಯಾಕೃತ (ಅಥವಾ ಮಾಯೆ) - ಇವೆರಡೂ ಒಂದೇ ಪದಾರ್ಥವೆಂದು ಕೆಲವರು ಭ್ರಮಿಸುವದಕ್ಕೆ ಕಾರಣವಾಗಿರುತ್ತದೆ. ಆಚಾರ್ಯರು ಅವಿದ್ಯೆ, ಮಾಯೆ - ಎಂಬ ಶಬ್ದಗಳನ್ನು ಕೆಲವು ಕಡೆಗಳಲ್ಲಿ ಪರ್ಯಾಯವಾಗಿ ಪ್ರಯೋಗಿಸಿರುತ್ತಾರಾದರೂ

ಅವಿದ್ಯೆಯೆಂಬುದು ವಿದ್ಯೆಯಿಂದ ಹೋಗುವ ಮಿಥ್ಯಾಜ್ಞಾನವೆಂದೂ (ಅಧ್ಯಾಸಭಾಷ್ಯ) **ಮಾಯೆಯೆಂಬುದು** ಅವಿದ್ಯಾಕಲ್ಪಿತವಾದ ನಾಮರೂಪಗಳ ಬೀಜರೂಪವೆಂದೂ, (ಸೂ.ಭಾ. ೨-೧-೧೪) ವಿವೇಚನೆಮಾಡಿರುವದಲ್ಲದೆ, 'ಅವ್ಯಕ್ತ 'ವೆಂಬ ಶಬ್ದದ ಅರ್ಥವನ್ನು ವಿವೇಚನೆಮಾಡುವದಕ್ಕಾಗಿ ಹೊರಟಿರುವ ಒಂದು ಸೂತ್ರದ ಭಾಷ್ಯದಲ್ಲಿ ಅವ್ಯಕ್ತವೆಂದರೆ ಮಾಯೆಯೆಂದು ಒಂದು ಪಕ್ಷ, ಅವಿದ್ಯೆಯೆಂದು ಇನ್ನೊಂದು ಪಕ್ಷ - ಹೀಗೆ ಎರಡರ್ಥಗಳ ಎರಡು ಪಕ್ಷಗಳನ್ನು ಬೇರೆಬೇರೆಯಾಗಿ ಬರೆದಿರುವದರಿಂದ (ಸೂ.ಭಾ. ೧-೪-೩) ಶಾಂಕರ ಪ್ರಸ್ಥಾನದಲ್ಲಿ ಅವಿದ್ಯೆಯು ಜ್ಞಾನಕೋಟಿಗೆ ಸೇರಿರುವದೆಂದೂ ಮಾಯೆಯು ಜ್ಞೇಯಕೋಟಿಗೆ ಸೇರಿರಿರುವದೆಂದೂ ಸ್ಪಷ್ಟವಾಗುತ್ತದೆ. ಈ ಕಾರಣದಿಂದ ಅವಿದ್ಯೆಯು ಸಂಸಾರಕ್ಕೆ ಬೀಜವೆಂದರೆ ನಿಮಿತ್ತವು, ಅವ್ಯಕ್ತವು ಜಗತ್ತಿಗೆ ಬೀಜವೆಂದರೆ ಉಪಾದಾನಕಾರಣವು ಎಂದು ಅರ್ಥಮಾಡಿಕೊಳ್ಳಬೇಕಾಗಿದೆ.

ಆತ್ಮಜ್ಞಾನಕ್ಕೆ ಸಹಾಯಕವಾದ ತರ್ಕ

ಆತ್ಮನು ತರ್ಕಕ್ಕೆ ಸಿಕ್ಕುವದಿಲ್ಲ (೧-೨-೮, ೯) ಎಂದು ಹೇಳಿರುವದರಿಂದ ತರ್ಕವು ಯಾವ ಬಗೆಯಿಂದಲೂ ಇಲ್ಲಿ ಉಪಯೋಗಕ್ಕೆ ಬರುವದಿಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇದು ಸರಿಯಲ್ಲ. ಏಕೆಂದರೆ ಈ ಉಪನಿಷತ್ತಿನಲ್ಲಿಯೇ ಆತ್ಮಸ್ವರೂಪವನ್ನು ತಿಳಿಸುವದಕ್ಕೆ ತರ್ಕವನ್ನು ಉಪಯೋಗಿಸಿರುತ್ತದೆ. ಆದ್ದರಿಂದಲೇ 'ಬರಿಯ ತನ್ನ ಬುದ್ಧಿಯಿಂದ ಮಾಡಿದ ಅಭಿಮಾನದ ಊಹೆಗೆ ಆತ್ಮನು ಸಿಕ್ಕುವದಿಲ್ಲ' (೧-೨-೮) ಎಂದು ಆಚಾರ್ಯರು ಶ್ರುತಿಗೆ ಅರ್ಥವನ್ನು ಮಾಡಿರುತ್ತಾರೆ. ಸ್ವತಂತ್ರವಾದ ತರ್ಕವು ಮತ್ತೊಂದು ಪ್ರಬಲತರ್ಕದಿಂದ ಬಾಧಿತವಾಗಬಹುದು ;ಆದರೆ ಶ್ರುತ್ಯುಕ್ತತರ್ಕವು ಅನುಭವಾನುಸಾರಿಯಾಗಿರುವದರಿಂದ ಅದು ಅಬಾಧ್ಯವಾಗಿರುತ್ತದೆ ಎಂಬುದೇ ಇಲ್ಲಿ ತಿಳಿಯಬೇಕಾದದ್ದು. ಆಗಮೋಪಪತ್ತಿಗಳಿಂದ ತಿಳಿದ ಅರ್ಥವು ಅಂಗೈನೆಲ್ಲಿಯಂತೆ ಸಂಪೂರ್ಣವಾಗಿ ಅನುಭವಕ್ಕೆ ಬರುತ್ತವೆ ಎಂದು ಬೃಹದಾರಣ್ಯಕ, ಮಾಂಡೂಕ್ಯ, ಬ್ರಹ್ಮಸೂತ್ರ-ಮುಂತಾದವುಗಳ ಭಾಷ್ಯದಲ್ಲಿ ಬರೆದಿರುವದಕ್ಕೆ ಇದೇ ಅಭಿಪ್ರಾಯವು.

ಆತ್ಮಸ್ವರೂಪವನ್ನು ತಿಳಿಯುವದಕ್ಕೆ ಅನುಕೂಲವೆಂದು ಈ ಉಪನಿಷತ್ತಿನಲಿ ಸೂಚಿಸಿರುವ ತರ್ಕಗಳು ಯಾವವೆಂದರೆ : -

೧) ಇಂದ್ರಿಯ, ಮನಸ್ಸು, ಬುದ್ಧಿ, ಅವ್ಯಕ್ತ - ಇವುಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ಒಳಗಿನ ಆತ್ಮನಾಗಿಯೂ ಇರುವವು ; ಇವುಗಳೆಲ್ಲಕ್ಕಿಂತಲೂ ಸೂಕ್ಷ್ಮನಾಗಿ ವ್ಯಾಪಕನಾಗಿರುವ ಒಳ ತಿರುಳೇ ಆತ್ಮನು . (೧-೩-೧೦,೧೧ ; ೨-೩-೭,೮).

೨) ಯಾವ ಚೈತನ್ಯದಿಂದಲೇ ಹೊರಗಿನ ಶಬ್ದಾದಿಗಳನ್ನೂ ಒಳಗಿನ ದೇಹೇಂದ್ರಿಯಾದಿಗಳನ್ನೂ ಅರಿಯುವರೋ ಆ ಸ್ವರೂಪವೇ ಆತ್ಮ (೨-೧-೩).

೩) ಎಚ್ಚರ ಕನಸುಗಳೆಂಬ ಅವಸ್ಥೆಗಳನ್ನು ಯಾವ ವ್ಯಾಪಕವಾದ ಚೈತನ್ಯದಿಂದ ನಾವು ಅರಿಯುತ್ತಿರುವೆವೋ, ಆ ಸಾಕ್ಷಿಯೇ ಆತ್ಮ (೨-೧-೪).

೪) ಕರ್ಮಫಲವನ್ನನುಭವಿಸುತ್ತಾ ಕಾಲತ್ರಯಕ್ಕೆ ಕಟ್ಟುಬಿದ್ದಿರುವಂತೆ ತೋರುವ ಭೋಕ್ತೃವಿನ ಪರಮಾರ್ಥರೂಪವೇ ಆತ್ಮನು (೨-೧-೫,೧೩).

೫) ಶರೀರೇಂದ್ರಿಯಪ್ರಾಣಗಳು ಒಂದಕ್ಕೊಂದು ಕೂಡಿಕೊಂಡು ಯಾರಿಗಾಗಿ, ಯಾರಿಂದ ಪ್ರೇರಿತವಾದಂತೆ ಕೆಲಸಮಾಡುತ್ತಿರುವವೋ ಅಂಥ ಚೈತನ್ಯವೇ, ಅವುಗಳೊಡನೆ ಸೇರಿಕೊಳ್ಳದೆ ಸ್ವತಂತ್ರನಾಗಿರುವ ಸರ್ವವಿಕ್ರಿಯೆಗಳ ಆಧಾರರೂಪನೇ ಆತ್ಮನು (೨-೨-೧, ೩) .

ಇವು ಆತ್ಮನಿರಬೇಕೆಂದು ಸಾಧಿಸುವ ಬರಿಯ ಅನುಮಾನಗಳಲ್ಲ ; ಏಕೆಂದರೆ ತನ್ನ ಸ್ವರೂಪವನ್ನು ತರ್ಕದಿಂದ ಅಲ್ಲಗಳೆಯುವದು ಯಾರಿಂದಲೂ ಆಗಲಾರದು. (ನ ಹಾತವ್ಯಾ, ೧-೨-೯ ಭಾಷ್ಯ) . ಚೈತನ್ಯಸ್ವರೂಪವು ನಿತ್ಯಸಿದ್ಧವೆಂಬುದನ್ನು ನೆನಪುಕೊಡುವದಕ್ಕೆ ಇವು ಬಲವಾದ ಅನುಕೂಲತರ್ಕಗಳಾಗಿವೆ. ವೈದಿಕಸಂಪ್ರದಾಯಕ್ಕೆ **ಆಗಮ**ವೆಂದು ಹೆಸರು. ಈ ಆಗಮವನ್ನು ಬಿಟ್ಟು ಪ್ರತ್ಯಕ್ಷಾನುಮಾನಗಳಿಂದ ನೋಡಿ ಆತ್ಮನು ಇದ್ದಾನೆ, ಇಲ್ಲ, ಸ್ಥೂಲ, ಅಣು - ಎಂದು ಮುಂತಾಗಿ ವಿಕಲ್ಪಿಸುವ ಚಾರ್ವಾಕರು, ಕ್ಷಣಿಕವಿಜ್ಞಾನಿಗಳು ಮುಂತಾದ (೨-೧-೧೩) ಕುತಾರ್ಕಿಕರ ವಾದಗಳು ಅನುಭವವಿರುದ್ಧವಾಗಿವೆ, ಮತ್ತು ಪರಸರ ವಿರುದ್ಧವಾಗಿವೆ. ಇದನು ತಿಳಿಸುವದೇ ಆತ್ಮನು ತರ್ಕಕೆ ನಿಲುಕುವದಿಲ್ಲವೆಂಬ ವಚನದ ಉದ್ದೇಶವು.

ಯೋಗಕ್ಕೂ ಜ್ಞಾನಕ್ಕೂ ಸಂಬಂಧ

ಅಧ್ಯಾತ್ಮಯೋಗದಿಂದ (೧-೨-೧೨) ಜ್ಞಾನವಾಗುವದೆಂದೂ ನಚಿಕೇತನು ಯೋಗವಿಧಾನವನ್ನು ತಿಳಿದುಕೊಂಡು ಬ್ರಹ್ಮಸ್ವರೂಪವನ್ನು ಹೊಂದಿದನೆಂದೂ (೨-೩-೧೮) ಹೇಳಿರುತ್ತದೆಯಷ್ಟೆ. ಆತ್ಮೈಕ್ಯವನ್ನು ಸುಮ್ಮನೆ ತಿಳಿದುಕೊಂಡರೆ ಸಾಲದೆಂದೂ ಅದನ್ನು ನೇರವಾಗಿ ಕಂಡುಕೊಳ್ಳಬೇಕೆಂದೂ ಈ ವಾಕ್ಯಕ್ಕೆ ಕೆಲವರು ತಾತ್ಪರ್ಯವನ್ನು ಕಲ್ಪಿಸುತ್ತಾರೆ. 'ಸಾಕ್ಷಾದ್ ವಿಜಾನಾತಿ' (೧-೩-೨೦) 'ಅವಗಮ್ಯ ಆತ್ಮಭಾವೇನ ಸಾಕ್ಷಾತ್' (೨-೧-೪), 'ಸಾಕ್ಷಾದನುಭವನ್ತಿ' (೨-೩-೧೨) ಎಂಬ ಭಾಷ್ಯವಚನಗಳು ಈ ಅಭಿಪ್ರಾಯಕ್ಕೆ ಬೆಂಬಲವನ್ನು ಕೊಡುವಂತೆಯೂ ಕಾಣಿಸುತ್ತವೆ. ಆದರೆ ಈ ಸಾಕ್ಷಾತ್ಕಾರದ ಸ್ವರೂಪವೇನು ? ಎಂಬುದನ್ನು ಸ್ವಲ್ಪ ವಿಚಾರಿಸುವದು ಅವಶ್ಯ. ಏಕೆಂದರೆ ಆತ್ಮನನ್ನು ಪ್ರತ್ಯಕ್ಷಾದಿಗಳ ವಿಷಯಗಳಂತೆ ವಿಷಯವಾಗಿ ಅರಿಯುವದಕ್ಕೆ ಆಗಲಾರದೆಂದು ಭಾಷ್ಯಕಾರರೇ ಅಡಿಗಡಿಗೆ ಹೇಳುತಾ ಬಂದಿರುತಾರೆ. 'ವಾಕ್ಯಾರ್ಥವನ್ನು ಅರಿತುಕೊಂಡಮೇಲೆ ಮತೇನೂ ಮಾಡಬೇಕಾದದ್ದು ಇರುವದಿಲ್ಲ' (ಮುಂ. ಭಾ. ೧-೧-೬) ಉತ್ತಮಾಧಿಕಾರಿಗಳಿಗೆ ಒಂದುಸಲ ವೇದಾಂತವಾಕ್ಯವನ್ನು ಶ್ರವಣಮಾಡುವದರಿಂದಲೇ ಜ್ಞಾನವಾಗಿಬಿಡುತ್ತದೆ. (ಸೂ. ಭಾ. ೪-೧-೨) ಎಂದು ಸ್ಪಷ್ಟವಾಗಿ ಹೇಳುವ ಭಾಷ್ಯವನಚನಗಳೂ ಇರುತವೆ ಆದ್ದರಿಂದ ಸಾಕ್ಷಾತ್ತಾಗಿ ತಿಳಿಯುವದು ಎಂದರೆ ತನ್ನ ಸ್ವರೂಪದಲ್ಲಿಯೇ ನೆಲೆನಿಲ್ಲುವದೇ ಹೊರತು ಮತ್ತೆ ಬೇರೆಯ ಅನುಭವವನ್ನು ಪಡೆಯುವದೆಂದೇನೂ ಅಲ್ಲ. ಆದ್ದರಿಂದಲೇ ಯೋಗದ ಅವಸ್ಥೆಯಲ್ಲಿ 'ಅವಿದ್ಯಾಧ್ಯಾರೋಪಣವರ್ಜಿತವಾದ ಸ್ವರೂಪದಲ್ಲಿ ಆತ್ಮನು ನಿಂತಿರುತ್ತಾನೆ' (೨-೩-೧) ಎಂದು ಆಚಾರ್ಯರು ಬರೆದಿರುತ್ತಾರೆ. ಯೋಗವನ್ನು ಹೊಂದಿದಮೇಲೆ ಮತ್ತೇನೂ ಮಾಡಬೇಕಾದದ್ದಿಲ್ಲವಾದ್ದರಿಂದ ಅದನ್ನು ಪಡೆಯುವದಕ್ಕಾಗಿಯೂ ಅದು ಬಂದದ್ದು ಹೋಗದೆ ಇರುವದಕ್ಕಾಗಿಯೂ ಪ್ರಯತ್ನವನ್ನು ಮಾಡಬೇಕೆಂದು ಹೇಳುವ (೨-೩-೧) ಭಾಷ್ಯವಚನವೂ ಇದಕ್ಕೆ ಅನುಕೂಲವಾಗಿರುತ್ತದೆ. 'ಅಧ್ಯಾತ್ಮಯೋಗವೆಂದರೆ ವಿಷಯಗಳಿಂದ ಚಿತ್ತವನ್ನು ಸೆಳೆದು ಆತ್ಮನಲ್ಲಿ ನಿಲ್ಲಿಸಿಕೊಳ್ಳುವದು' (೧-೨-೧೨) ಎಂಬ ಭಾಷ್ಯಕ್ಕೆ ಏಕಾಗ್ರತೆಯಿಂದ ನೋಡಿದರೆ ಆತ್ಮಜ್ಞಾನವಾಗುತ್ತದೆ ಎಂದೇ ತಾತ್ಪರ್ಯ.

ಆದ್ದರಿಂದ ಜ್ಞಾನಕ್ಕಾಗಿ ಯೋಗವೇ ಹೊರತು ಜ್ಞಾನವಾದಮೇಲೆ ಯೋಗದಿಂದ ಸಾಕ್ಷಾತ್ಕಾರವನ್ನು ಹೊಂದಬೇಕೆನ್ನುವವರ ಪಕ್ಷಕ್ಕೆ ಭಾಷ್ಯದಲ್ಲಿ ಎಲ್ಲಿಯೂ ಆಧಾರವು ದೊರಕುವದಿಲ್ಲವೆಂದು ತಿಳಿಯಬೇಕು.

ಜ್ಞಾನದಿಂದಾಗುವ ಮುಕ್ತಿ

ಮುಕ್ತಿಯನ್ನು ಪಡೆಯುವ ಅಧಿಕಾರಿಗಳನ್ನು ಎರಡು ರಾಶಿಗಳಾಗಿ ಉಪನಿಷತ್ತಿನಲ್ಲಿ ವರ್ಗೀಕರಣಮಾಡಿರುತ್ತದೆ. ಸಗುಣಬ್ರಹ್ಮವನ್ನು ಉಪಾಸನೆ ಮಾಡುವವರು ಮರಣಕಾಲದವರೆಗೂ ಉಪಾಸನೆಮಾಡುತ್ತಿದ್ದು ಅದೇ ತಾನೆಂಬ ಗಟ್ಟಿಭಾವನೆಯ ಸಾಕ್ಷಾತ್ಕಾರವನ್ನು ಪಡೆದುಕೊಂಡು (೧-೧-೧೭) ಬದುಕಿರುವಾಗಲೇ ಅಧರ್ಮ, ಅಜ್ಞಾನ - ಮುಂತಾದವುಗಳಿಂದ ಬಿಡುಗಡೆಹೊಂದಿ (೧-೧-೧೮) **ಸುಷುಮ್ನಾ**ನಾಡಿಯ ದ್ವಾರವಾಗಿ ಹೊರಟು ಸೂರ್ಯದ್ವಾರದಿಂದ ಬ್ರಹ್ಮಲೋಕವನ್ನು ಸೇರುವರು. ಇದು ಬಹುಕಾಲ ಇರುವ ಫಲವಾದ್ದರಿಂದ **ಅಪೇಕ್ಷಿಕವಾದ ಅಮೃತ**ವೆನಿಸುವದು. ಅಥವಾ ಬ್ರಹ್ಮಲೋಕದಲ್ಲಿ ಜ್ಞಾನವನ್ನು ಹೊಂದಿ ಕಲ್ಪಾಂತದಲ್ಲಿ ಬ್ರಹ್ಮನೊಡನೆ **ಮುಖ್ಯವಾದ ಅಮೃತತ್ವವನ್ನೇ** ಪಡೆಯುವರು (೨-೩-೧೫). ಹೀಗೆ ಬ್ರಹ್ಮಲೋಕಕ್ಕೆ ಹೋಗಿ ಜ್ಞಾನವನ್ನು ಪಡೆದು ಮುಕ್ತಿಯನ್ನು ಪಡೆಯುವದನ್ನು **ಕ್ರಮಮುಕ್ತಿ** ಎಂದು ಆಚಾರ್ಯರು ಕರೆದಿರುತ್ತಾರೆ. ಇದಕ್ಕೆ ಬದಲು ಬದುಕಿರುವಾಗ ಈ ಲೋಕದಲ್ಲಿಯೇ ಜ್ಞಾನವನ್ನು ಪಡೆದು ಮುಕ್ತಿಯನ್ನು ಹೊಂದಿದರೆ ಅದು **ಸದ್ಯೋಮುಕ್ತಿ** ಎನಿಸುವದು. ಲೋಕಾಂತರದಲ್ಲಿ ಕ್ರಮಮುಕ್ತಿಯನ್ನು ಪಡೆಯುವದು ಕಷ್ಟಸಾಧ್ಯವಾದ್ದರಿಂದ ಇಲ್ಲಿಯೇ ಜ್ಞಾನದಿಂದ ಮುಕ್ತಿಯನ್ನು ಪಡೆದುಕೊಳ್ಳಬೇಕೆಂದು (೨-೩-೪,೫) ಹೇಳಿರುವದಲ್ಲದೆ, ಭಾಷ್ಯಕಾರರು ಈ ಸದ್ಯೋಮುಕ್ತಿಯನ್ನು ಮುಖ್ಯವೆಂದು ಒತ್ತಿ ಹಲವು ಕಡೆಗಳಲ್ಲಿ (೨-೨-೧, ೨-೩-೮, ೨-೩-೧೪, ೨-೩-೧೫) ಹೇಳಿರುತ್ತಾರಲ್ಲದೆ, ಜ್ಞಾನಿಯು ದೇಹವನ್ನು ಬಿಟ್ಟಮೇಲೆ ಮತ್ತೆ ಶರೀರವನ್ನು ಧರಿಸುವದಿಲ್ಲವೆಂಬ ಕಾರಣದಿಂದ **ವಿದೇಹಮುಕ್ತಿ**ಯನ್ನೂ ಗೌಣವಾಗಿ (೨-೨-೧, ೨-೩-೮) ಒಪ್ಪಿರುತ್ತಾರೆ.

ಹೀಗಿದ್ದರೂ ಕೆಲವರು ವೇದಾಂತಿಗಳು **ಜೀವನ್ಮುಕ್ತಿ**ಯಲ್ಲಿ ಒಂದಿಷ್ಟು ಶರೀರ ಉಳಿದುಕೊಂಡಿರುವದರಿಂದ ಅದು ಗೌಣಮುಕ್ತಿಯೆಂದೂ ವಿದೇಹ

ಮುಕ್ತಿಯೇ ಮುಖ್ಯವೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಸದ್ಯೋಮುಕ್ತಿಯೆಂದರೆ ಜ್ಞಾನವುಂಟಾದಕೂಡಲೆ ಶರೀರವು ಬಿದ್ದುಹೋಗುವದು ಎಂದೂ ಕೆಲವರು ಅಭಿಪ್ರಾಯಪಟ್ಟಿರುತ್ತಾರೆ (!). ಈ ಅಭಿಪ್ರಾಯಗಳು ಭಾಷ್ಯವಿರುದ್ಧವಾಗಿರುವ ವಲ್ಲದೆ ಜ್ಞಾನದಿಂದಲೇ ಮೋಕ್ಷವಾಗುವದೆಂಬ ಅದ್ವೈತದ ಮುಖ್ಯ ಸಿದ್ಧಾಂತಕ್ಕೂ ವಿರುದ್ಧವಾಗಿರುವವೆಂಬುದನ್ನು ಹೇಳಬೇಕಾದದ್ದಿಲ್ಲ.

ಈ ಉಪನಿಷತ್ತಿನ ಟೀಕಾಕಾರರು

ಈ ಉಪನಿಷತ್ತಿಗೆ 'ಆನಂದಜ್ಞಾನ' 'ಬಾಲಗೋಪಾಲೇಂದ್ರಯತೀಶ್ವರ' ಎಂಬ ಇಬ್ಬರು ವ್ಯಾಖ್ಯಾನವನ್ನು ಬರೆದಿರುತ್ತಾರೆ. ಆನಂದಜ್ಞಾನರು ಮುಂಡಕೋಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವವರೇ ಎಂದು ತೋರುತ್ತದೆ. ಏಕೆಂದರೆ ಈ ಎರಡು ವ್ಯಾಖ್ಯಾನಗಳಲ್ಲಿಯೂ **'ಪ್ರಕಟಾರ್ಥ'**ವೆಂಬ ವೇದಾಂತ ಗ್ರಂಥವನ್ನು ಪ್ರಮಾಣವಾಗಿ ಬರೆದುಕೊಂಡಿರುತ್ತದೆ ; ಎರಡರಲ್ಲಿಯೂ ಭಾಸ್ಕರಾಚಾರ್ಯರ ಮತವನ್ನು ಖಂಡಿಸಿರುತ್ತದೆ. ಇದು ನಿಜವಾದರೆ ಬೃಹದಾರಣ್ಯಕೋಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವ 'ಆನಂದಗಿರಿ' ಗಳೆಂಬವರು ಇವರಲ್ಲವೆಂದು ಹೇಳಬೇಕಾಗುತ್ತದೆ ಏಕೆಂದರೆ ಬೃಹದಾರಣ್ಯಕ ವ್ಯಾಖ್ಯಾನಕಾರರು ಏಕಜೀವವಾದಿಗಳು ಮುಂಡಕೋಪನಿಷತ್ತಿನ ವ್ಯಾಖ್ಯಾನ ಕಾರರು ನಾನಾಜೀವವಾದಿಗಳು. ಭಾಷ್ಯದಲ್ಲಿ ಈ ವಾದಗಳ ಸುಳಿವೇ ಇಲ್ಲ ; ಇವು ಅವರಿಂದೀಚೆಗೆ ವೇದಾಂತಿಗಳಲ್ಲಿ ಉಂಟಾದ ಚರ್ಚೆಗೆ ಸೇರಿದ ಪ್ರಶ್ನೆಗಳಾಗಿರುತ್ತವೆ. ವ್ಯಾಖ್ಯಾನಕಾರರುಗಳು ಭಾಷ್ಯಕಾರರಿಗಿಂತ ಈಚಿನವರಾದ್ದರಿಂದ ಇವರು ತಮ್ಮ ವ್ಯಾಖ್ಯಾನಗಳಲ್ಲಿ ಹೊಸ ವೇದಾಂತಿಗಳ ವಾದಗಳನ್ನೂ ಬೆರೆಯಿಸಿಕೊಂಡಿರುತ್ತಾರೆ. ಬಾಲಗೋಪಾಲಯತೀಶ್ವರರು ಆನಂದಜ್ಞಾನರ ವ್ಯಾಖ್ಯಾನವನ್ನು ಬಲು ಮಟ್ಟಿಗೆ ಶಬ್ದಶಃ ಉಪಯೋಗಿಸಿಕೊಂಡು ಅದನ್ನು ಇನ್ನಷ್ಟು ವಿಸ್ತರಿಸಿರುತ್ತಾರೆ.

ಕಠೋಪನಿಷತ್ತು ಚಿಕ್ಕದಾದರೂ ಇದರಲ್ಲಿ ಅಮೋಘವಾದ ತತ್ತ್ವಗಳು ಅಡಗಿವೆ ಎಂಬುದನ್ನು ಭಾಷ್ಯಕಾರರು ಹೃದಯಂಗಮವಾದ ರೀತಿಯಿಂದ ತೋರಿಸಿಕೊಟ್ಟಿರುತ್ತಾರೆ. ಈ ಉಪನಿಷತ್ತಿನ ಸಾರವನ್ನು ಕೊನೆಯ ಮಂತ್ರಗಳಲ್ಲಿ ಸಂಗ್ರಹಿಸಿ ಹೇಳಿರುವದೇನೆಂದರೆ ಮನುಷ್ಯನ ಹೃದಯದಲ್ಲಿ ಪರಿಚ್ಛಿನ್ನನಾಗಿ ಸಂಸಾರಿಯಾಗಿರುವಂತೆ ಕಾಣುತ್ತಿರುವ ಜೀವನನ್ನು ಉಪಾಧಿಗಳಿಂದ ವಿಂಗಡಿಸಿ

ಕೊಂಡು ಅವನೇ ನಿತ್ಯಶುದ್ಧವಾದ ಅಮೃತವಾದ ಬ್ರಹ್ಮವೆಂದು ತಿಳಿದುಕೊಳ್ಳ ಬೇಕು. ನಮ್ಮ ಬುದ್ಧಿಗೆ ಗಂಟುಹಾಕಿಕೊಂಡಿರುವಂತೆ ಇರುವ ತಪ್ಪುತಿಳಿವಳಿಕೆ ಗಳನ್ನು ಕಳೆದುಕೊಂಡು ಕಾಮಗಳೆಲ್ಲವನ್ನೂ ಸಮೂಲವಾಗಿ ನಾಶಪಡಿಸಿಕೊಂಡರೆ ಮರ್ತ್ಯರೆನಿಸಿರುವ ನಾವೇ ಅಮೃತರಾಗುವೆವು, ಇಲ್ಲಿಯೇ ಬ್ರಹ್ಮವನ್ನು ಪಡೆದು ಕೊಳ್ಳಬಹುದು. ಇದೇ ಸರ್ವವೇದಾಂತದ ಸಾರವು ಎಂಬುದು ಉಪನಿಷತ್ತಿನ ಕೊನೆಯ ಮಾತು.

೨೬.೭.೧೯೪೫ ಗ್ರಂಥಕರ್ತ.

ಉಪನಿಷತ್ತಿನ ಸಾರ

ಒಂದನೆಯ ಅಧ್ಯಾಯ - ಒಂದನೆಯ ವಲ್ಲಿ

೧-೯. ವಾಜಶ್ರವಸನೆಂಬಾತನು ಸರ್ವಸ್ವವನ್ನೂ ದಕ್ಷಿಣೆಯಾಗಿ ಕೊಡಬೇಕಾದ ವಿಶ್ವಜಿತ್ತು ಎಂಬ ಯಾಗವನ್ನು ಮಾಡಿ ಯೋಗ್ಯವಲ್ಲದ ಬರಡು ಹಸುಗಳನ್ನು ದಕ್ಷಿಣೆಗೆಂದು ಒಯ್ಯುತ್ತಿರಲು ಅವನ ಮಗನಾದ ನಚಿಕೇತನೆಂಬ ಹುಡುಗನು 'ಅಯ್ಯೋ ! ಇಂಥ ದಾನವನ್ನು ಕೊಟ್ಟರೆ ನಮ್ಮ ತಂದೆಗೆ ದುರ್ಗತಿಯುಂಟಾಗುವದಲ್ಲ !' ಎಂದು ಯೋಚಿಸಿ 'ಅಪ್ಪ, ನನ್ನನ್ನು ಯಾರಿಗೆ ದಕ್ಷಿಣೆಯಾಗಿ ಕೊಡುತ್ತೀಯೆ ?' ಎಂದು ತಂದೆಯನ್ನು ಕೇಳಿದನು. ನನ್ನನ್ನು ಯಾರಿಗೆ ಕೊಡುತ್ತೀಯೆ ?' ಎಂದು ಮತ್ತೆ ಮತ್ತೆ ಮಗನು ತನ್ನನ್ನು ನಿರ್ಬಂಧಿಸುವದನ್ನು ಕಂಡು ಸಿಟ್ಟುಗೊಂಡ ತಂದೆಯು 'ನಿನ್ನನ್ನು ಯಮನಿಗೆ ಕೊಟ್ಟಿದ್ದೇನೆ' ಎಂದನು. ತಂದೆಯು ಯಜ್ಞಭೂಮಿಯಲ್ಲಿ ಆಡಿದ ಮಾತು ಸುಳ್ಳಾಗಬಾರದೆಂದು ತಿಳಿದ ನಚಿಕೇತನು 'ಅಯ್ಯೋ ! ಏನೋ ಹೇಳಿಬಿಟ್ಟೆನಲ್ಲ !' ಎಂದು ಪೇಚಾಡುತ್ತಿದ್ದ ಅವನನ್ನು ಕುರಿತು 'ನಿನ್ನ ವಚನದಂತೆ ನಡೆದುಕೊ ; ಇದರಿಂದ ನಿನಗೆ ಒಳ್ಳೆಯದಾಗಬಹುದು. ಮಗನ ಮೋಹದಿಂದ ಆಡಿದ ಮಾತನ್ನು ಸುಳ್ಳುಮಾಡದಿರು' ಎಂದು ಒಪ್ಪಿಸಿ ತಂದೆಯ ಅನುಜ್ಞೆಯನ್ನು ಹೊಂದಿ ಯಮಲೋಕಕ್ಕೆ ಹೋದನು. ಯಮನು ಆ ವೇಳೆಗೆ ಮನೆಯಲ್ಲಿಲದೆ ಬೇರೆ ಎಲ್ಲಿಗೋ ಹೋಗಿದ್ದನು ; ನಚಿಕೇತನು ಬಂದು ಮೂರು ದಿನಗಳಾ

ತಿರುಗಿಬಂದನು. ತನ್ನ ಮನೆಯ ಮುಂದೆ ಮೂರುದಿನಗಳಿಂದಲೂ ಉಪವಾಸ ವಿದ್ದ ವಟುವಿಗೆ ಅತಿಥಿಸತ್ಕಾರವಿಲ್ಲದೆ ತಾನು ಅನಾದರಮಾಡಿದ ದೋಷದ ಪರಿಹಾರಕ್ಕೆಂದು ಯಮನು 'ಮೂರು ವರಗಳನ್ನು ಬೇಡಿಕೊ, ಕೊಡುತ್ತೇನೆ' ಎಂದು ಹೇಳಿದನು.

೧೦-೧೯. ಆಗ ನಚಿಕೇತನು 'ನಾನು ಹಿಂತಿರುಗಿ ಹೋದರೆ ನನ್ನ ತಂದೆಯು ನನ್ನ ವಿಷಯದಲ್ಲಿ ಪ್ರಸನ್ನನಾಗಿರಬೇಕು. ಇದು ಮೊದಲನೆಯ ವರವು. ವಿರಾಟ್ಪುರುಷನನ್ನು ಪಡೆಯುವದಕ್ಕೆ ಸಾಧನವಾದ ಅಗ್ನಿವಿದ್ಯೆಯನ್ನು ನನಗೆ ತಿಳಿಸು. ಇದು ಎರಡನೆಯ ವರವು' ಎಂದು ಕೇಳಿಕೊಂಡನು. ಯಮನು ಈ ಎರಡು ವರಗಳನ್ನೂ ಕೊಟ್ಟು 'ಕರ್ಮೋಪಾಸನೆಗಳ ಫಲವಾದ ವಿರಾಟ್ಪ್ರಾಪ್ತಿಯನ್ನು ಕೊಡುವ ಈ ಅಗ್ನಿವಿದ್ಯೆಯಲ್ಲಿ ಉಪಯೋಗಿಸುವ ಅಗ್ನಿಗೆ ನಚಿಕೇತನೆಂಬ ನಿನ್ನ ಹೆಸರೇ ಬರಲಿ !' ಎಂದು ಹೆಚ್ಚಿಗೆಯ ವರವನ್ನು ತಾನಾಗಿಯೇ ಕೊಟ್ಟನು. ಯಾವನು ಈ ನಾಚಿಕೇತಾಗ್ನಿಯನ್ನು ಉಪಾಸನೆಮಾಡುವನೋ ಅವನು ಬದುಕಿರುವಾಗಲೇ ಅಧರ್ಮ, ಅಜ್ಞಾನ- ಮುಂತಾದವುಗಳಿಂದ ಬಿಡುಗಡೆಯನ್ನು ಹೊಂದಿ ಸತಮೇಲೆ ವಿರಾಡಾತ್ಮನಾಗಿ ದುಃಖವರ್ಜಿತನಾಗುವನು. ಈ ಉಪಾಸನಾಕ್ರಮವನ್ನು ಹೇಳಿಕೊಟ್ಟದ್ದೇ ಯಮನು ಕೊಟ್ಟ ಎರಡನೆಯ ವರವು.

೨೦-೨೯. ಆಮೇಲೆ 'ದೇಹಾಂತರವನ್ನು ಹೊಂದುವ, ಶರೀರೇಂದ್ರಿಯಾದಿಗಳಿಗಿಂತ ತೀರ ಬೇರೆಯಾಗಿರುವ ಆತ್ಮನೊಬ್ಬನು ಇದಾನೆಂದು ಕೆಲವರೂ ಇಲ್ಲವೆಂದು ಕೆಲವರೂ ಹೇಳುತಿರುವರು. ಪ್ರತ್ಯಕ್ಷಾನುಮಾನಗಳಿಗೆ ನಿಲುಕದ ಈ ಆತ್ಮತತ್ತ್ವವನ್ನು ನನಗೆ ಹೇಳಿಕೊಡು' ಎಂದು ನಚಿಕೇತನು ಮೂರನೆಯ ವರವನ್ನು ಬೇಡಿಕೊಂಡನು. ನಚಿಕೇತನು ಜ್ಞಾನಕ್ಕೆ ತಕ್ಕವನೊ, ಅಲ್ಲವೊ- ಎಂದು ಪರೀಕ್ಷಿಸುವದಕ್ಕಾಗಿ ಯಮನು 'ನಚಿಕೇತನೆ, ಇದನ್ನು ತಿಳಿಯುವದು ದೇವತೆಗಳಿಗೂ ಕಷ್ಟವಾಗಿರುವದು. ಇದಲ್ಲದೆ ಈ ಜ್ಞಾನದಿಂದ ನಿನಗೇನಾಗಬೇಕು ? ಆಯುಸ್ಸು, ಪ್ರಜಾಸಂತತಿ, ಪಶುವಿತ್ತಕ್ಷೇತ್ರಾದಿಗಳು - ಸಾಮ್ರಾಜ್ಯ - ಇಂಥ ವರಗಳನ್ನು ಬೇಡಿಕೊ. ನಿನಗೆ ಬೇಕಾದ ಅನುಕೂಲ್ಯಗಳನ್ನೆಲ್ಲ ಕಲ್ಪಿಸಿಕೊಡುತ್ತೇನೆ' ಎಂದನು. ಆದರೆ ನಚಿಕೇತನು ಇಂದ್ರಿಯಗಳನ್ನು ಸವೆಯಿಸುವ ಆ ಭೋಗಗಳು ಯಾವವನ್ನೂ ಒಪ್ಪದೆ ತನಗೆ ಆತ್ಮತತ್ತ್ವವನ್ನೇ ತಿಳಿಸಿಕೊಡಬೇಕೆಂದು ಪಟ್ಟುಹಿಡಿದು ಕೇಳಿಕೊಂಡನು.

ಒಂದನೆಯ ಅಧ್ಯಾಯ - ಎರಡನೆಯ ವಲ್ಲಿ

೧-೬. ನಚಿಕೇತನ ಉತ್ತಮವಾದ ಯೋಗ್ಯತೆಯನ್ನು ಕಂಡ ಯಮನು ಇವನಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದನು. ಅವನು ಮೊದಲು ನಚಿಕೇತನ ವೈರಾಗ್ಯವನ್ನು ಮೆಚ್ಚಿ ಹೊಗಳಿದ್ದು ಹೇಗೆಂದರೆ - 'ನಚಿಕೇತನೆ, ಪ್ರಿಯವಾದದ್ದು, ಹಿತವಾದದ್ದು - ಎಂದು ಎರಡು ಬಗೆಯ ಸಾಧನಗಳು ಮನುಷ್ಯನಿಗೆ ದೊರೆಯಬಹುದಾಗಿವೆ. ಅವುಗಳಲ್ಲಿ ಹಿತವನ್ನು ಆರಿಸಿಕೊಂಡರೆ ಉತ್ತಮಫಲವಾಗುವದು; ಪ್ರಿಯವಾದದ್ದನ್ನು ಆರಿಸಿಕೊಂಡವರಿಗೆ ಪರಮಪುರುಷಾರ್ಥವು ದೂರವಾಗುತ್ತದೆ. ಆದ್ದರಿಂದ ವಿವೇಕಿಯಾದವನು ಹಿತವನ್ನೇ ಆರಿಸಿಕೊಳ್ಳಬೇಕು. ನೀನು ಮಿಕ್ಕ ಯಾವ ಭೋಗಗಳನ್ನೂ ಒಲ್ಲದೆ ಆತ್ಮತತ್ತ್ವವನ್ನೇ ಕೇಳಿಕೊಂಡದ್ದು ನೀನು ವಿವೇಕಿಯೆಂಬುದನ್ನು ತೋರಿಸುತ್ತದೆ.'

೭-೧೩. 'ಈ ಆತ್ಮತತ್ತ್ವವು ಎಷ್ಟೋ ಜನರಿಗೆ ಕಿವಿಗೇ ಬೀಳುವದಿಲ್ಲ; ಕೆಲವರಿಗೆ ಕಿವಿಗೆ ಬಿದ್ದರೂ ಅದು ತಿಳಿಯುವದೇ ಇಲ್ಲ. ಇದನ್ನು ತಿಳಿಸಿಕೊಡುವ ಗುರುವೂ ತಿಳಿಯುವ ಶಿಷ್ಯನೂ ಅದ್ಭುತಪ್ರಜ್ಞರಾಗಿರಬೇಕು. ಸಂಪ್ರದಾಯವನ್ನು ಬಲ್ಲ ಆಚಾರ್ಯನು ಹೇಳಿದ ಮಾತಿನಿಂದ ಆತ್ಮತತ್ತ್ವವು ತಿಳಿದೀತೇ ಹೊರತು ಬರಿಯ ತರ್ಕಕ್ಕೆ ಎಂದಿಗೂ ಗೋಚರವಾಗದು. ಈ ಸೂಕ್ಷ್ಮತತ್ತ್ವವನ್ನು ತಿಳಿಯುವದಕ್ಕೆಂದು ನೀನು ಬ್ರಹ್ಮಪದವಿಯನ್ನು ಕೂಡ ಕಡೆಗಣಿಸಿದೆಯಲ್ಲ ! ಇದು ನಿನ್ನ ಉತ್ತಮಯೋಗ್ಯತೆಯನ್ನು ತೋರಿಸುತ್ತದೆ. ಪ್ರಾಣಿಗಳ ಹೃದಯದಲ್ಲಿಯೇ ಇದ್ದರೂ ಈ ತತ್ತ್ವವು ಅಧ್ಯಾತ್ಮಯೋಗವನ್ನು ಬಲ್ಲವರಿಗೆ ಮಾತ್ರ ಗೊತ್ತಾಗುವದು. ಶ್ರವಣಮನನಗಳಿಂದ ಇದನ್ನು ವಿವೇಚನೆಮಾಡಿ ತಿಳಿದುಕೊಂಡವರಿಗೆ ಪರಮಾನಂದವೇ ಪ್ರಾಪ್ತಿಯಾಗುತ್ತ ಇದನ್ನು ನೀನು ಬಯಸಿದ್ದು ನಿನಗೆ ಬ್ರಹ್ಮಪ್ರಾಪ್ತಿಯಾಗುವದೆಂಬುದಕ್ಕೆ ಸೂಚನೆಯಾಗಿದೆ.'

೧೪-೧೭. ಹೀಗೆಂದು ತನ್ನಲ್ಲಿ ಪ್ರಸನ್ನನಾಗಿ ನುಡಿದ ಯಮನನ್ನು ನಚಿಕೇತನು 'ಹಾಗಾದರೆ ನಾನು ಕೇಳಿರುವಂತೆ ಧರ್ಮಾಧರ್ಮಗಳನ್ನೂ ಕ್ರಿಯಾಕಾರಕಫಲಗಳನ್ನೂ ಕಾಲತ್ರಯವನ್ನೂ ಮೀರಿರುವ ಈ ಆತ್ಮತತ್ತ್ವವನ್ನು ಹೇಳು' ಎಂದು ಮತ್ತೆ ಬೇಡಿಕೊಂಡನು. ಆಗ ಯಮನು ಹೇಳುತ್ತಾನೆ. 'ನಚಿಕೇತನೆ, ವೇದಪ್ರತಿಪಾದ್ಯವಾಗಿ ಬ್ರಹ್ಮಚರ್ಯಾದಿಸಾಧನಗಳಿಂದ ಪಡೆಯ

ಬೇಕಾಗಿರುವ ಈ ಆತ್ಮನಿಗೆ ಓಂಕಾರವು ವಾಚಕವೂ ಪ್ರತೀಕವೂ ಆಗಿರುವದು. ಓಂಕಾರವು ಪರಾಪರಬ್ರಹ್ಮಗಳೆರಡಕ್ಕೂ ಪ್ರತೀಕವಾಗಿರುವದರಿಂದ ಇದನ್ನು ಬ್ರಹ್ಮವೆಂದು ಉಪಾಸನೆಮಾಡಿದರೆ ಆ ಎರಡನ್ನೂ ಪಡೆಯಬಹುದು.

೧೮-೨೨. 'ಈ ಓಂಕಾರದ ಮೂಲಕವಾಗಿ ತಿಳಿಯುವ ಬ್ರಹ್ಮದ ಸಾಕ್ಷಾತ್ಸ್ವರೂಪನನ್ನು ಹೇಳುವೆನು ಕೇಳು. ಇದಕ್ಕೆ ಹುಟ್ಟುವದು, ಬೆಳೆಯುವದು-ಮುಂತಾದ ವಿಕಾರಗಳಿಲ್ಲ. ಶರೀರದಲ್ಲಿಯೇ ಇರುತ್ತಿದ್ದರೂ ಶರೀರದ ವಿಕಾರಗಳು ಯಾವವೂ ಇದಕ್ಕಿಲ್ಲವಾಗಿ ಇದು ಧರ್ಮಾಧರ್ಮಾದಿಗಳನ್ನು ಮೀರಿರುವದು. ಎಲ್ಲಾ ನಾಮರೂಪಗಳೂ ಇದಕ್ಕೆ ಉಪಾಧಿಯಾಗಿರುತ್ತವೆ ಇದು ಅಣುವಿಗಿಂತ ಅಣು, ಮಹತ್ತಿಗಿಂತ ಮಹತ್ತು. ವಿಜ್ಞಾನಸ್ವರೂಪದಲ್ಲಿರುವ ಇದಕ್ಕೆ ಯಾವ ವಿಕಾರವೂ ನಿಜವಾಗಿರುವದಿಲ್ಲ. ವಿಶೇಷಜ್ಞಾನದ ಅಂತಃಕರಣದಲ್ಲಿದ್ದುಕೊಂಡು ನಾನಾಚಲನೆಗಳನ್ನು ಪಡೆಯುವಂತೆ ತೋರಿಕೊಳ್ಳುತ್ತಿರುವದು. ನಿಶ್ಚಯವಾಗಿ ಇದಕ್ಕೆ ಶರೀರವೇ ಇಲ್ಲದ್ದರಿಂದ ಸರ್ವವ್ಯಾಪಿಯೂ ಕೂಟಸ್ಥ ಜ್ಞಾನರೂಪವೂ ಆಗಿರುತ್ತದೆ. ಇದೇ ನಾನೆಂದು ಅರಿತುಕೊಂಡವನಿಗೆ ಶೋಕವು ಇಲ್ಲವಾಗುತ್ತದೆ.

೨೩-೨೫. 'ನಿಷ್ಕಾಮನಾಗಿ ಆತ್ಮನನ್ನೇ ಬಯಸುವದೇ ಆತ್ಮಜ್ಞಾನಕ್ಕೆ ಮುಖ್ಯ ಸಾಧನವು. ಕೆಟ್ಟ ನಡತೆಯನ್ನು ಬಿಟ್ಟು ಮನಸ್ಸಮಾಧಾನವನ್ನು ಹೊಂದಿ ಗುರುವಿನ ಮೂಲಕ ತಿಳಿದುಕೊಳ್ಳುವವನಿಗೆ ಬ್ರಹ್ಮದ ಯಾಥಾತ್ಮ್ಯವು ತಿಳಿಯುವದು. ಯಾವ ಧರ್ಮಕ್ಕೂ ನಿಲುಕದೆ ನಿತ್ಯವಾಗಿರುವ ಈ ಬ್ರಹ್ಮತತ್ತ್ವವು ಇಂಥ ಅಧಿಕಾರಿಗೊಬ್ಬನಿಗೇ ತಿಳಿಯುವದು.

ಒಂದನೆಯ ಅಧ್ಯಾಯ - ಮೂರನೆಯ ವಲ್ಲಿ

೧-೨. 'ಈ ಶರೀರದಲಿ ಇಬ್ಬರು ಆತ್ಮರಿರುವರು. ಇವರಲ್ಲಿ ಒಬ್ಬನು ನಾವುಗಳು ಕಲ್ಪಿಸಿಕೊಂಡಿರುವ ಸಂಸಾರಿಯು ; ಇನ್ನೊಬ್ಬನು ಪರಮಾರ್ಥವಾಗಿರುವ ಅಸಂಸಾರಿಯು. ಜ್ಞಾನಿಗಳೂ ಪಂಚಾಗ್ನಿವಿದ್ಯೆ, ನಾಚಿಕೇತಾಗ್ನಿವಿದ್ಯೆ-ಇವುಗಳನ್ನು ಬಲ್ಲವರೂ ಅಸಂಸಾರಿಯಾದ ಬ್ರಹ್ಮವನ್ನು ಹೊಂದುವರು.

೩-೯. 'ಶರೀರವೆಂಬುದೊಂದು ರಥವು. ಆತ್ಮನೇ ರಥಿ, ಬುದ್ಧಿಯು ಸಾರಥಿ ; ಮನಸ್ಸು ಕಡಿವಾಣವು, ಇಂದ್ರಿಯಗಳು ಕುದುರೆಗಳು, ಶಬ್ದಾದಿ

ವಿಷಯಗಳು ಆ ಕುದುರೆಗಳು ನಡೆಯುವ ರಸ್ತೆಗಳು. ಶರೀರೇಂದ್ರಿಯಮನಸ್ಸು ಗಳಿಂದೊಡಗೂಡಿರುವ ಜೀವನು ಈ ರಥದಲ್ಲಿ ಪ್ರಯಾಣಮಾಡುತ್ತಾ ಸಂಸಾರವನ್ನೂ ಮೋಕ್ಷವನ್ನೂ ಪಡೆಯುತ್ತಿರುವನು. ಬುದ್ಧಿಯೆಂಬ ಸಾರಥಿಯು ಅವಿವೇಕಿಯಾಗಿದ್ದರೆ ಕುದುರೆಗಳನ್ನು ಮನಬಂದ ದಾರಿಯಲ್ಲಿ ಕೈಬಿಡುತ್ತಾನೆ ; ರಥಿಕನಾದ ಜೀವನು ಆಗ ಸಂಸಾರದಲ್ಲಿ ತೊಳಲಬೇಕಾಗುವದು. ಆದರೆ ಆ ಸಾರಥಿಯು ವಿವೇಕಿಯಾಗಿದ್ದರೆ ಕುದುರೆಗಳನ್ನು ಹತೋಟಿಯಲ್ಲಿಟ್ಟುಕೊಂಡು ಮತ್ತೆ ಸಂಸಾರಕ್ಕೆ ಹಿಂತಿರುಗುವ ಸಂಭವವಿಲ್ಲದ ವಿಷ್ಣುಪದವಿಯನ್ನೇ ಮುಟ್ಟಿಸುತ್ತಾನೆ.'

೧೦-೧೧. 'ಈ ಪರಮಾತ್ಮಸ್ಥಾನವನ್ನು ವಿವೇಕದಿಂದ ಸೇರುವ ಬಗೆ ಹೇಗೆಂದರೆ ಇಂದ್ರಿಯ, ವಿಷಯ, ಮನಸ್ಸು, ಬುದ್ಧಿ, ಮಹತ್ತು, ಅವ್ಯಾಕೃತ- ಇವು ಒಂದಕ್ಕಿಂತ ಒಂದು ಸೂಕ್ಷ್ಮವಾಗಿರುವವು. ಇವುಗಳೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿ ರುವದರಿಂದ ಇವೆಲ್ಲವನ್ನೂ ತುಂಬಿಕೊಂಡಿರುವ ಆತ್ಮನೇ ಕೊನೆಯ ತತ್ತ್ವವು. ಈ ಆತ್ಮತತ್ತ್ವವನ್ನು ಮೇಲೆ ಹೇಳಿದಂತೆ ಸ್ಥೂಲಸೂಕ್ಷ್ಮತಾರತಮ್ಯದಿಂದ ಅರಿತು ಕೊಂಡರೆ ಇನ್ನೇನೂ ಅರಿಯಬೇಕಾದದ್ದಿರುವದಿಲ್ಲವಾದ ಕಾರಣ ಅದೇ ಕೊನೆಯ ಗತಿಯಾಗಿರುತ್ತದೆ.'

೧೨-೧೫. 'ಈ ಆತ್ಮನು ಎಲ್ಲರಲ್ಲಿಯೂ ಇರುತ್ತಿದ್ದರೂ ಸ್ಥೂಲಬುದ್ಧಿಗಳಿಗೆ ಗೊತ್ತಾಗುವದಿಲ್ಲ. ಸೂಕ್ಷ್ಮವಾಗಿ ನೋಡುವವರಿಗೆ ಮಾತ್ರ ಕಾಣುತ್ತಾನೆ. ಇಂದ್ರಿಯಗಳನ್ನು ಮನಸ್ಸಿನಲ್ಲಿ ಲಯಗೊಳಿಸಿ, ಆ ಮನಸ್ಸನ್ನು ಬುದ್ಧಿಯಲ್ಲಿ ಲಯಿಸಿಕೊಂಡು, ಆ ಬುದ್ಧಿಯನ್ನು ಹಿರಣ್ಯಗರ್ಭನ ಬುದ್ಧಿಯಲ್ಲಿಟ್ಟು ಅತ್ಯಂತವಾಗಿ ನಿರ್ಮಲಗೊಳಿಸಿಕೊಂಡು ಕೊನೆಗೆ ಬುದ್ಧಿಯಲ್ಲಿ ಆಗುವ ಎಲ್ಲಾ ಅರಿವುಗಳಿಗೂ ಸಾಕ್ಷಿಯಾದ ಕೂಟಸ್ಥನಾದ ಆತ್ಮನಲ್ಲಿ ಆ ಬುದ್ಧಿಯನ್ನೂ ಲಯಮಾಡಿಕೊಳ್ಳಬೇಕು. ಇದನ್ನು ಅರಿಯುವ ದಾರಿಯು ಕ್ಷೌರಕತ್ತಿಯ ಅಲುಗಿನಮೇಲೆ ನಡೆಯುವಷ್ಟು ಎಚ್ಚರಿಕೆಯಿಂದ ಹೋಗತಕ್ಕದ್ದಾದ್ದರಿಂದ ವಿವೇಕದಿಂದಲೂ ಸದ್ಗುರುವಿನ ಉಪದೇಶದಿಂದಲೂ ಇದನ್ನು ಅರಿತುಕೊಳ್ಳ ಬೇಕು. ಈ ಆತ್ಮನು ಬಲುಸೂಕ್ಷ್ಮವಾಗಿರುವನು ; ಈ ಆತ್ಮತತ್ತ್ವಕ್ಕೆ ಶಬ್ದವಿಲ್ಲ, ಸ್ಪರ್ಶವಿಲ್ಲ, ರೂಪವಿಲ್ಲ, ರಸವಿಲ್ಲ, ಗಂಧವಿಲ್ಲ, ಆದಿಯಿಲ್ಲ, ಅಂತ್ಯವಿಲ್ಲ ; ಇದು ಎಲ್ಲಕ್ಕೂ ವ್ಯಾಪಕವಾಗಿ ಅಲುಗಾಡದೆ, ಸವೆಯದೆ, ಒಂದೇ ರೂಪದಲ್ಲಿರುವದು.'

೧೬-೧೭. ನಚಿಕೇತನಿಗೆ ಯಮನು ಹೇಳಿರುವ ಈ ಉಪಾಖ್ಯಾನವನ್ನು ಯೋಗ್ಯರಿಂದ ಕೇಳಿ ಯೋಗ್ಯರಿಗೆ ಉಪದೇಶಮಾಡಿದವನಿಗೆ ಉತ್ತಮಗತಿಯಾಗುತ್ತದೆ. ಬ್ರಹ್ಮಸಭೆಯಲ್ಲಾಗಲಿ, ಶ್ರಾದ್ಧಕಾಲದಲ್ಲಿ ಭೋಜನಮಾಡುತ್ತಿರುವ ಬ್ರಾಹ್ಮಣರೆದುರಿಗೇ ಆಗಲಿ ಇದನ್ನು ಶ್ರವಣಮಾಡಿಸಿದರೆ ಅನಂತಫಲವುಂಟು.

ಎರಡನೆಯ ಅಧ್ಯಾಯ - ಒಂದನೆಯ ವಲ್ಲಿ

೧-೨. 'ಇಂದ್ರಿಯಗಳಿಗೆ, ಸ್ವಭಾವದಿಂದ ಹೊರನೋಟವೇ ಇರುತ್ತದೆ. ಆದ್ದರಿಂದ ಇಂದ್ರಿಯಗಳಿಗೆ ವಶನಾದವನು ವಿಷಯಗಳನ್ನು ಕಂಡಾನೇ ಹೊರತು ಒಳಗಿನ ಆತ್ಮನನ್ನು ನೋಡಲಾರನು. ಇಂದ್ರಿಯಗಳಿಂದಾಗುವ ವಿಷಯಸುಖವು 'ಅನಿತ್ಯವೆಂಬುದನ್ನು ತಿಳಿದುಕೊಂಡವನು ಆ ಇಂದ್ರಿಯಗಳನ್ನು ಬಿಗಿಹಿಡಿದು ಒಳಗಿನ ಆತ್ಮನನ್ನೇ ನೋಡುವನು.'

೩-೧೦. 'ಇಂದ್ರಿಯಗಳಿಂದ ವಿಷಯಗಳನ್ನು ತಿಳಿಯುವಾಗ ನಮಗೆ ಉಂಟಾಗುವಂತೆ ತೋರುವ ಅರಿವೇ ನಮ್ಮ ಆತ್ಮನು. ಕರ್ಮಫಲವನ್ನು ಅನುಭವಿಸುವಂತಿರುವ ನಮ್ಮ ಆತ್ಮನೂ ಕರ್ಮೋಪಾಸನೆಗಳಿಗೆ ಗುರಿಯಾಗಿರುವ ಸಮಸ್ತಜಗತ್ತಿನ ಸೃಷ್ಟಿಕರ್ತನಾದ ಈಶ್ವರನೂ ಬೇರೆಯಲ್ಲ. ಯಾವ ಸಂಸಾರವೂ ಇಲ್ಲದ ಒಬ್ಬ ಆತ್ಮನೇ ಈ ಎರಡು ಬಗೆಯಲ್ಲಿಯೂ ತೋರಿಕೊಳ್ಳುತ್ತಿರುವನು.'

೧೧-೧೫. 'ನಮ್ಮ ಆತ್ಮನು ಹೃದಯವೇ ಮುಂತಾದ ಅಳತೆಗೆ ಕಟ್ಟುಬಿದ್ದಿರುವಂತೆ ಅವಿದ್ಯೆಯ ದೃಷ್ಟಿಯಿಂದ ಕಾಣುತ್ತಿದ್ದರೂ ಸರಿಯಾಗಿ ನೋಡಿದರೆ ಇವನೇ ಅನಂತವಾದ ಬ್ರಹ್ಮವಾಗಿರುವನು. ಇವನಲ್ಲಿ ಭೇದವನ್ನು ಕಂಡಾತನಿಗೆ ಸಂಸಾರವೂ ಅಭೇದವನ್ನು ಕಂಡಾತನಿಗೆ ಬ್ರಹ್ಮಸಾಯುಜ್ಯವೂ ದೊರೆಯುವವು.'

ಎರಡನೆಯ ಅಧ್ಯಾಯ - ಎರಡನೆಯ ವಲ್ಲಿ

೧-೨. 'ಈ ನಮ್ಮ ಶರೀರದಲ್ಲಿರುವ ಆತ್ಮನೇ ಬ್ರಹ್ಮವಾದ್ದರಿಂದ ಇವನ ಸ್ವರೂಪವನ್ನು ಅರಿತರೆ ಸಂಸಾರದ ಕಟ್ಟು ಕಳಚಿಕೊಳ್ಳುವದು. ಮುಂದಕ್ಕೆಂದಿಗೂ ಸಂಸಾರದಲ್ಲಿ ಕಾಲಿಡದೆ ಇರುವನು. ಎಲ್ಲಾ ಶರೀರಗಳಲ್ಲಿ ಈ ಒಬ್ಬ ಆತ್ಮನೇ ಇರುವನೆಂದು ತಿಳಿಯಬೇಕು.'

೩-೭. 'ಇಂದ್ರಿಯಗಳ ಕಾರ್ಯವೂ ಪ್ರಾಣವೃತ್ತಿಗಳೂ ಈ ಆತ್ಮನಿಗಾಗಿಯೇ ನಡೆಯುತ್ತಿರುವವು. ಈ ಆತ್ಮನೇ ಕಾರ್ಯಕರಣಗಳಿಗೆಲ್ಲ ಬಲವನ್ನು ಕೊಟ್ಟಿರುವವನು ; ಇವನಿಂದಲೇ ಪ್ರೇರಿತವಾಗಿ ಅವು ಒಂದರೊಡನೊಂದು ಸೇರಿಕೊಂಡು ಕೆಲಸಮಾಡುತ್ತಿರುವವು. ಹೀಗೆ ನಾನಾವಿಧದಿಂದ ಸಿದ್ಧವಾಗಿರುವ ಆತ್ಮನನ್ನು ಬ್ರಹ್ಮವೆಂದು ಅರಿಯಬೇಕು ; ಇಲ್ಲದಿದ್ದರೆ ಸ್ಥಾವರಜಂಗಮ ರೂಪವಾದ ನಾನಾಶರೀರಗಳನ್ನು ಪಡೆಯುತ್ತಿರುವದೇ ಗತಿಯಾಗುವದು.

೮-೧೦. 'ಇಂದ್ರಿಯಾದಿಗಳು ತಮ್ಮ ಕೆಲಸವನ್ನು ಮಾಡದೆ ಇರುವ ಕನಸಿನಲ್ಲಿಯೂ ಈ ಆತ್ಮನು ಬೇರೆ ಬೇರೆ ವಸ್ತುಗಳನ್ನು ಬೇಕಾದಂತೆ ನಿರ್ಮಿಸಿಕೊಂಡು ಇರುವನು. ಇವನೇ ಬ್ರಹ್ಮವು. ಸಮಸ್ತಲೋಕಗಳೂ ಇವನನ್ನೇ ಆಶ್ರಯಿಸಿಕೊಂಡಿರುವವು ; ಇವನನ್ನು ಮೀರಿ ಯಾವದೂ ಇರಲಾರದು. ಬೆಂಕಿಯು ತಾನು ಸುಡುವ ಕಟ್ಟಿಗೆಯೇ ಮುಂತಾದವುಗಳನ್ನು ಹೊಕ್ಕು ಆಯಾ ಆಕಾರಗಳನ್ನು ಹೊಂದುವಂತೆಯೂ, ವಾಯುವು ಕೊಳಲು ಮುಂತಾದವುಗಳನ್ನು ಹೊಕ್ಕು ಬೇರೆಬೇರೆ ಸ್ವಭಾವವನ್ನು ಹೊಂದುವಂತೆಯೂ ಕಂಡರೂ ಅವೆರಡೂ ತಮ್ಮತಮ್ಮ ರೂಪದಿಂದ ಶುದ್ಧವಾಗಿ ಬೇರೆ ಇದ್ದುಕೊಂಡೇ ಇರುವಂತೆ ಆತ್ಮನು ಎಲ್ಲಾ ಶರೀರಗಳಲ್ಲಿಯೂ ಬೇರೆಬೇರೆಯಾಗಿ ಭೋಕ್ತೃವಾಗಿ ಕಾಣುತ್ತಿದ್ದರೂ ನಿಜವಾಗಿ ತಾನು ಆ ಶರೀರಗಳಿಗಿಂತ ಬೇರೆಯಾಗಿಯೇ ತನ್ನ ಶುದ್ಧವಾದ ರೂಪದಲ್ಲಿ ಇರುತ್ತಿರುವನು. ಸೂರ್ಯನು ಎಲ್ಲಾ ಪದಾರ್ಥಗಳನ್ನೂ ಬೆಳಗುತ್ತಿದ್ದರೂ ಆಯಾ ವಸ್ತುಗಳನ್ನು ನೋಡಿದ ಪುಣ್ಯಾಪುಣ್ಯಗಳಿಗೆ ಹೊರಚ್ಚಾಗಿರುವಂತೆಯೇ ಈ ಆತ್ಮನು ಎಲ್ಲರ ಅಂತರಾತ್ಮನಾಗಿರುತ್ತಿದ್ದರೂ ಅವಿದ್ಯೆಯಿಂದ ಜೀವರು ಕಲ್ಪಿಸಿಕೊಳ್ಳುತ್ತಿರುವ ಸಂಸಾರದೋಷಗಳಿಗೆ ಹೊರಚ್ಚಾಗಿಯೇ ಇರುವನು'.

೧೨-೧೩. 'ಹೀಗೆ ಎಲ್ಲಾ ಶರೀರಗಳಲ್ಲಿಯೂ ಒಬ್ಬನೇ ಆತ್ಮನು ಕಾರ್ಯಕರಣಸಂಘಾತಗಳಿಗೆಲ್ಲ ಚೇತನನಾಗಿ ಅವುಗಳನ್ನು ಆಯಾ ಕರ್ಮಗಳಲ್ಲಿ ಪ್ರೇರಿಸುತ್ತಾ ಫಲದಾತೃವಾಗಿರುತ್ತಿದ್ದರೂ ತಾನು ಯಾವ ವಿಕಾರವೂ ಇಲ್ಲದೆ ತನ್ನ ನಿತ್ಯಶುದ್ಧಸ್ವರೂಪದಲ್ಲಿಯೇ ಇರುವನೆಂದು ಯಾರು ಗುರುವಿನ ಉಪದೇಶವನ್ನು ಹೊಂದಿ ಅರಿತುಕೊಳ್ಳುವರೋ ಅವರಿಗೆ ಮಾತ್ರ ಶಾಶ್ವತಸುಖವಿದಾದ ಮೋಕ್ಷವು ದಕ್ಕುವದು.'

೧೪-೧೫. 'ಈ ಆತ್ಮವಸ್ತುವು ನಮ್ಮಂಥ ಅಜ್ಞರಿಗೂ ತೋರೀತೆ ?' ಎಂದು ಸಂದೇಹಪಡಲು ಕಾರಣವಿಲ್ಲ ; ಏಕೆಂದರೆ ಅದು ಸ್ವಪ್ರಕಾಶವಾದ ನಮ್ಮ ಸ್ವರೂಪವೇ ಆಗಿರುತ್ತದೆ.

ಎರಡನೆಯ ಅಧ್ಯಾಯ - ಮೂರನೆಯ ವಲ್ಲಿ

೧-೩. 'ಅನಾದಿಯಾಗಿ ಅನಂತವಾಗಿರುವಂತೆ ತೋರುತ್ತಿರುವ ಈ ಸಂಸಾರವೆಂಬ ವೃಕ್ಷಕ್ಕೆ ಬೇರಿನಂತೆ ಆಧಾರವಾಗಿರುವದೇ ಬ್ರಹ್ಮವು. ಅದರ ಕಟ್ಟಳೆಯಿಂದಲೋ ಎಂಬಂತೆ ಸೂರ್ಯ, ಚಂದ್ರ, ಅಗ್ನಿ, ವಾಯು- ಮೊದಲಾದವರು ವ್ಯವಸೆಯಿಂದ ಕೆಲಸಮಾಡುತಿರುವರು.'

೪-೫. 'ಸರಿಯಾಗಿ ವಿಚಾರಮಾಡಿದರೆ ಈ ಲೋಕದಲಿಯೇ ನಮ್ಮ ಅಂತಃಕರಣದಲಿಯೇ ಆತ್ಮನ ನಿಜವು ಸ್ಫುಟವಾಗಿ ತೋರುವದು ; ಲೋಕಾಂತರದಲ್ಲಿ ಇಷ್ಟು ಸ್ಪಷ್ಟವಾಗಿ ತೋರಲಾರದು. ಬ್ರಹ್ಮಲೋಕದಲ್ಲಿ ಚೆನ್ನಾಗಿ ವಿಂಗಡವಾಗಿ ತಿಳಿಯಬರುವದೆಂದು ಶಾಸ್ತ್ರದಲ್ಲಿ ಹೇಳಿದೆ, ನಿಜ ; ಆದರೆ ಆ ಲೋಕವನು ಪಡೆಯುವದಕೆ ಉತ್ಕೃಷ್ಟವಾದ ಕರ್ಮೋಪಾಸನೆಗಳು ಬೇಕಾಗುವದರಿಂದ ಅದು ಸಿಕ್ಕುವದು ಬಲುಕಷ್ಟ. ಆದ್ದರಿಂದಲೇ ಈ ಲೋಕದಲ್ಲಿಯೇ ಆತ್ಮತತ್ತ್ವವನ್ನು ತಿಳಿದುಕೊಳ್ಳಬೇಕು.'

೬-೧೧. 'ಇಂದ್ರಿಯಾದಿಗಳಲ್ಲಿ ಜ್ಞಾನವು ಉಂಟಾಗಲಿ ಹೋಗಲಿ, ಆತ್ಮನು ತನ್ನ ಸ್ವರೂಪದಿಂದಲೇ ಇರುವನೆಂತಲೂ ಇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರ ಮುಂತಾದವುಗಳನ್ನೆಲ್ಲ ಮೀರಿ ಯಾವ ಸಂಸಾರಧರ್ಮವೂ ಇಲ್ಲದವನಾಗಿರುವನೆಂತಲೂ ಅರಿತುಕೊಂಡಾತನು ಮೋಕ್ಷವನ್ನು ಹೊಂದುವನು. ಈ ಆತ್ಮನನ್ನು ಇಂದ್ರಿಯಗಳಿಂದ ನೋಡುವದಕ್ಕೆ ಆಗುವದಿಲ್ಲ. ಮನಸ್ಸಿನಲ್ಲಿಯೇ ವಿಚಾರಮಾಡಿ ಅರಿತುಕೊಳ್ಳಬೇಕು. ಇಂದ್ರಿಯಾದಿಗಳ ವ್ಯಾಪಾರವಿಲ್ಲದಂತೆ ಅವುಗಳನ್ನು ನಿಲ್ಲಿಸಿಕೊಳ್ಳುವ ಅವಸ್ಥೆಗೆ ಯೋಗವೆಂದು ಹೆಸರು ; ಆ ಅವಸ್ಥೆಯಲ್ಲಿ ಆತ್ಮನು ತನ್ನ ಸ್ವರೂಪದಲ್ಲಿಯೇ ಇರುವನು. ಆದ್ದರಿಂದ ಅಂಥ ಯೋಗವನ್ನು ಅಭ್ಯಾಸಮಾಡುವದು ಆತ್ಮ ಜ್ಞಾನಕ್ಕೆ ಸಾಧಕವಾಗಿರುವದು.'

೧೨-೧೬. 'ಆತ್ಮನು ಇಂದ್ರಿಯಗಳಿಗಾಗಲಿ ಮನಸ್ಸಿಗಾಗಲಿ ಗೋಚರವಾಗುವವನಲವಾದರೂ ಸಮಸ್ತ ಜಗತಿಗೂ ಆಧಾರವಾಗಿರುವದರಿಂದ

ಅವನು ಇದಾನೆಂಬುದೇ ಸರಿಯಾದ ತಿಳಿವಳಿಕೆ. ಅವನು ಇರುವದರಿಂದಲೇ ಈ ಜಗತ್ತೆಲ್ಲ 'ಇದೆ' ಎಂಬ ಅರಿವಿಗೆ ಗೋಚರವಾಗುತ್ತದೆ. ಆದರೆ 'ಇದೆ' ಎಂಬುದೂ ಒಂದು ಉಪಾಧಿಯಿಂದ ತಿಳಿದ ಸ್ವರೂಪವು ; ಆದ್ದರಿಂದ ಯಾವ ಉಪಾಧಿಯೂ ಇಲ್ಲದಿರುವ ಆತ್ಮನನ್ನು ಇರುವನೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕಿಲ್ಲ. ಇರುವಿಕೆಯೇ ಮುಂತಾದ ಯಾವ ವಿಶೇಷವೂ ಆತ್ಮನಲ್ಲಿಲ್ಲ ವೆಂಬುದೇ ಸರಿಯಾದ ತಿಳಿವು. ನಮ್ಮ ಬುದ್ಧಿಯಲ್ಲಿ ಗಂಟುಹಾಕಿಕೊಂಡಿರುವ ತಪ್ಪುತಿಳಿವುಗಳೆಲ್ಲ ಹೋದರೆ ಆ ತಪ್ಪುತಿಳಿವಿನಿಂದ ಆಗಿರುವ ಕಾಮುಗಳೆಲ್ಲ ತೊಲಗುವವು ; ಕಾಮಗಳೆಲ್ಲ ಹೋದರೆ ಕಾಮದಿಂದಾಗಿರುವ ಜನನಮರಣ ಸಂಸಾರವೂ ಹೋಗಿ ನಾಶವಿಲ್ಲದ ಬ್ರಹ್ಮಸ್ವರೂಪವೇ ಪ್ರಾಪ್ತವಾಗುವದು. ಈ ಸ್ವರೂಪವನ್ನು ಇಲ್ಲಿಯೇ ಕಂಡುಕೊಳ್ಳಬಹುದು ; ಆದರೆ ಬ್ರಹ್ಮೋಪಾಸನೆಯನ್ನು ಮಾಡುವವರು ಉಪಾಸನೆಯ ಬಲದಿಂದ ಸುಷುಮ್ನಾನಾಡಿಯ ಮಾರ್ಗವಾಗಿ ಬ್ರಹ್ಮಲೋಕಕ್ಕೆ ಹೋಗಿ ಬಹುಕಾಲವಿರುವ ಅಪೇಕ್ಷಿಕವಾದ ಅಮೃತತ್ವವನ್ನು ಪಡೆಯುವರು ಅಲ್ಲಿಯೂ ಜ್ಞಾನವುಂಟಾದರೆ ಮಾತ್ರ ಮುಖ್ಯವಾದ ಅಮೃತತ್ವವೂ ದೊರಕುತ್ತದೆ. ಆದ್ದರಿಂದ ಇಲ್ಲಿಯೇ ಜ್ಞಾನದಿಂದ ಮುಕ್ತರಾಗಲು ಯತ್ನಿಸಬೇಕು.'

೧೭-೧೮. ಒಟ್ಟು ಸಾರಾಂಶವೇನೆಂದರೆ, ಜನರ ಹೃದಯದಲ್ಲಿರುವ ಆತ್ಮನ ಸ್ವರೂಪವು ಈಗ ಸಂಸಾರಿಯಾದ ಸಣ್ಣ ಆತ್ಮನೆಂದು ತೋರುತ್ತಿದ್ದರೂ ಚೆನ್ನಾಗಿ ಅನಾತ್ಮಗಳಿಂದ ಬಿಡಿಸಿ ತಿಳಿದುಕೊಂಡರೆ ಅದೇ ಆತ್ಮನೇ ನಿಜವಾಗಿ ನಿತ್ಯಶುದ್ಧವಾಗಿ ಯಾವ ಸಂಸಾರಧರ್ಮವೂ ಇಲ್ಲದಿರುವ ಬ್ರಹ್ಮವೆಂದು ಗೊತ್ತಾಗುತ್ತದೆ. ಮೃತ್ಯುವು ಉಪದೇಶಿಸಿದ ಈ ಬ್ರಹ್ಮವಿದ್ಯೆಯನ್ನೂ ಯೋಗಮಾರ್ಗವನ್ನೂ ಅರಿತುಕೊಂಡು ನಚಿಕೇತನು ಬ್ರಹ್ಮವನ್ನು ಪಡೆದ ಪರಿಶುದ್ಧವಾದ ಸಂಸಾರವರ್ಜಿತವಾದ ಬ್ರಹ್ಮವಾದನು. ಇದರಂತೆ ಯಾರುಯಾರು ಈ ವಿದ್ಯೆಯನ್ನು ತಿಳಿದುಕೊಳ್ಳುವರೋ ಅವರೆಲ್ಲ ಅಂಥ ಬ್ರಹ್ಮಸ್ವರೂಪವನ್ನೇ ಪಡೆದುಕೊಂಡು ಮುಕ್ತರಾಗುವರು.

ಮುಂಡಕೋಪನಿಷತ್ತು

ಪೀಠಿಕೆ

ಉಪನಿಷತ್ತಿನ ಸ್ಥಾನ

ಮುಂಡಕೋಪನಿಷತ್ತು ಅಥರ್ವವೇದಕ್ಕೆ ಸೇರಿದ್ದು. ಆಧುನಿಕ ಸಂಶೋಧಕರು ಈ ವೇದವು ಪ್ರಾಚೀನವಲ್ಲವೆಂಗೂ ಅಥರ್ವವೇದದ ಹೆಸರಿನಲ್ಲಿ ಎಷ್ಟೋ ಉಪನಿಷತ್ತುಗಳು ಈಚೆಗೆ ಹುಟ್ಟಿಕೊಂಡಿರುತ್ತವೆಯೆಂದೂ ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ ಇಷ್ಟು ಮಾತ್ರದಿಂದ ಆಸಕ್ತರಾದ ನಮ್ಮ ದೇಶದ ವಾಚಕರಿಗೆ ಈ ಉಪನಿಷತ್ತಿನಲ್ಲಿ ಎಂದಿಗೂ ಶ್ರದ್ಧೆಯು ಕಡಿಮೆಯಾಗುವಂತಿಲ್ಲ. ನಮ್ಮ ದೇಶದಲ್ಲಿ ವೇದವು ಕಾಲವನ್ನು ಮೀರಿದ್ದೆಂಬ ಉದಾತ್ತಭಾವನೆಯಿರುವದರಿಂದ ಇದು ಯಾವಾಗ ರಚಿತವಾಯಿತು ? ಎಂಬ ಪ್ರಶ್ನೆಯೇ ಇಲ್ಲಿ ಎದ್ದುಕೊಳ್ಳುವಂತಿಲ್ಲ. ಇದೂ ಅಲ್ಲದೆ ಪ್ರಾಮಾಣ್ಯಕ್ಕೆ ಪ್ರಾಚೀನತೆಯೇನೂ ಕಾರಣವಲ್ಲವಾದ್ದರಿಂದ ಉಪನಿಷತ್ತಿನ ಯೋಗ್ಯತೆಯನ್ನು ನಿರ್ಣಯಿಸುವದಕ್ಕೆ ಕಾಲನಿರ್ಣಯವು ಉಪಯೋಗಕ್ಕೂ ಬರುವಹಾಗಿಲ್ಲ. ಪ್ರತಿಯೊಬ್ಬ ದ್ವಿಜನೂ ತನ್ನ ತನ್ನ ಶಾಖೆಯ ವೇದವನ್ನು ಅಧ್ಯಯನಮಾಡಿದ ಮೇಲೆ ಮಿಕ್ಕ ಶಾಖೆಗಳನ್ನೂ ಅಧ್ಯಯನಮಾಡಬಹುದು ; ಅವಕಾಶವು ದೊರೆತರೆ ಮಾಡಲೂಬೇಕು - ಎಂದು ಧರ್ಮಶಾಸ್ತ್ರಗಳಲ್ಲಿ ಹೇಳಿರುತ್ತದೆ. ಇಂಥ ಸಂದರ್ಭಗಳಲ್ಲಿ ಅಥರ್ವವೇದವನ್ನು ಬೇರೆಯ ಶಾಖೆಯವರು ಅಧ್ಯಯನಮಾಡಬೇಕಾದರೆ ಮತ್ತೊಂದು ಸಲ ಉಪನಯನವಾಗಬೇಕು ಎಂಬ ನಂಬಿಕೆಯಿದೆ. ಇದರಿಂದ ಅಥರ್ವವೇದದ ವಿಷಯದಲ್ಲಿ ನಮ್ಮವರಿಗೆ ಎಂಥ ಹೆಚ್ಚಿನ ಪೂಜ್ಯಬುದ್ಧಿ ಇರುವದೆಂಬುದು ವ್ಯಕ್ತವಾಗುತ್ತದೆ.

ಈ ವೇದದ ಹೆಸರಿನಲ್ಲಿ ಅನೇಕ ಹೊಸ ಉಪನಿಷತ್ತುಗಳು ತಲೆದೋರಿರುವವೆಂಬ ವಾದವೇನೋ ಸಾಧಾರವಾಗಿಯೇ ಇದೆ. ಆದರೆ ಇದು ಮಿಕ್ಕ ವೇದಗಳಿಗೂ ಅನ್ವಯಿಸುತ್ತದೆ. ವೇದಾಂತವಿಚಾರವು ಕಡಿಮೆಯಾಗಿ, ಗ್ರಂಥಗಳ ಸ್ವರೂಪನಿರ್ಣಯವನ್ನು ಮಾಡುವದು ಕಷ್ಟವಾದ ಕಾಲದಲ್ಲಿ ತಮ್ಮ ತಮ್ಮ ಮತವು ಉಪನಿಷತ್ಪ್ರತಿಪಾದ್ಯವೆಂದು ತೋರಿಸುವದಕ್ಕಾಗಿ ಆಯಾ ಮತದವರು ತಮತಮಗೆ ಬೇಕಾದಂತೆ ಕೆಲವು ಉಪನಿಷತ್ತುಗಳನ್ನು ಕಲ್ಪಿಸಿಕೊಂಡಿದ್ದರೆ, ಅದು ಸ್ವಾಭಾವಿಕವಾಗಿಯೇ ಇದೆ. ಇದು ಹೇಗಾದರೂ

ಇರಲಿ. ಪೂಜ್ಯಪಾದರಾದ ಶ್ರೀಶಂಕರಾಚಾರ್ಯರವರು ತಮ್ಮ ಭಾಷ್ಯಕ್ಕೆಂದು ಆರಿಸಿಕೊಂಡಿರುವ ಮುಂಡಕ, ಪ್ರಶ್ನ, ಮಾಂಡೂಕ್ಯಗಳ ಪ್ರಾಮಾಣ್ಯವನ್ನು ಮಿಕ್ಕ ಭಾಷ್ಯಕಾರರುಗಳೆಲ್ಲ ಒಪ್ಪಿರುವದರಿಂದ ಈ ಉಪನಿಷತ್ತುಗಳ ಹೆಚ್ಚುಗಾರಿಕೆಯ ಬಗ್ಗೆ ಯಾವ ಸಂಶಯವೂ ಉಂಟಾಗುವದಕ್ಕೆ ಕಾರಣವಿರುವದಿಲ್ಲ.

ಉಪನಿಷತ್ತಿನ ಪ್ರತಿಪಾದ್ಯವಿಷಯ

ಅಥರ್ವವೇದಕ್ಕೆ ಬ್ರಹ್ಮೋಪನಿಷತ್ತು, ಗರ್ಭೋಪನಿಷತ್ತು - ಮುಂತಾದ ಹಲವು ಉಪನಿಷತ್ತುಗಳಿದ್ದರೂ ಅವು ಬ್ರಹ್ಮಸೂತ್ರದಲ್ಲಿ ವಿಚಾರಕ್ಕೆ ಬಂದಿಲ್ಲವಾದ್ದರಿಂದ ಶ್ರೀ ಶಂಕರಭಗವತ್ಪಾದರವರು ಆ ಉಪನಿಷತ್ತುಗಳನ್ನು ಬಿಟ್ಟು ಸೂತ್ರದಲ್ಲಿ ಉಪಯುಕ್ತವಾಗಿರುವ ಈ ಉಪನಿಷತ್ತಿಗೇ ಭಾಷ್ಯವನ್ನು ಬರೆದಿರುವರೆಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಇದು ನಿಜವಾಗಿದ್ದರೆ ಸೂತ್ರದಲ್ಲಿ ವಿನಿಯುಕ್ತವಾಗದೆ ಇರುವ ಮಾಂಡೂಕ್ಯಕ್ಕೂ ಆಚಾರ್ಯರು ಭಾಷ್ಯವನ್ನು ಬರೆಯಬಾರದಾಗಿತ್ತೆಂದಾಗುತ್ತದೆ. ಆದ್ದರಿಂದ ಉಪನಿಷತ್ತಿನಲ್ಲಿ ಪ್ರತಿಪಾದ್ಯವಾಗಿರುವ ವಿಷಯಮಹತ್ತ್ವವನ್ನು ಕಂಡೇ ಆಚಾರ್ಯರು ಇದಕ್ಕೆ ಭಾಷ್ಯವನ್ನು ಬರೆದಿರುತ್ತಾರೆಂದು ನಮಗೆ ತೋರುತ್ತದೆ. ಈ ಉಪನಿಷತ್ತು ಆಕಾರದಲ್ಲಿ ಸಣ್ಣದಾದರೂ ಇದರಲ್ಲಿ ವೇದಾಂತಕ್ಕೆ ಬಹುಮುಖ್ಯವಾಗಿರುವ ಬ್ರಹ್ಮವಿದ್ಯೆಯನ್ನು ಸಾಧನಫಲಗಳ ಸಮೇತವಾಗಿ ಸುಸ್ಪಷ್ಟವಾದ ನುಡಿಗಳಿಂದ ಸಂಗ್ರಹಿಸಿರುತ್ತದೆ.

ಉಪನಿಷತ್ತೆಂಬ ಮಾತಿಗೆ ಬ್ರಹ್ಮವಿದ್ಯೆಯೆಂಬುದೇ ಮುಖ್ಯವಾದ ಅರ್ಥ. "ಯಾವದೊಂದನ್ನು ಅರಿತರೆ ಇದೆಲ್ಲವನ್ನೂ ಅರಿತಂತೆ ಆಗುವದು ?" ಎಂಬ ಶೌನಕನ ಪ್ರಶ್ನೆಗೆ ಉತ್ತರವಾಗಿ ಅಂಗಿರಸ್ಸು ಹೇಳಿರುವ ಉತ್ತರವನ್ನು ಈ ಗ್ರಂಥದಲ್ಲಿ ವಿಸ್ತರಿಸಿರುವದರಿಂದ ಇದಕ್ಕೂ "ಉಪನಿಷತ್ತು" - ಉಪನಿಷತ್ತೆಂಬ ಹೆಸರಿನ ಬ್ರಹ್ಮವಿದ್ಯೆಯನ್ನು ತಿಳಿಸುವ ಗ್ರಂಥ -ಎಂಬ ಹೆಸರು ನ್ಯಾಯವಾಗಿ ಸಲ್ಲುತ್ತದೆ. ಬ್ರಹ್ಮವಿದ್ಯೆಗೆ ಉಪಕಾರಕವಾಗಿಯೇ ಎಲ್ಲಾ ವಿದ್ಯೆಗಳೂ ಹೊರಟಿರುವವು ; ಎಲ್ಲಾ ವಿದ್ಯೆಗಳೂ ಹೇಳುವ ಆಯಾ ವಿಶೇಷವಿಷಯದ ನಿಜವೇ ಬ್ರಹ್ಮವಾಗಿರುವದರಿಂದ ಬ್ರಹ್ಮವಿದ್ಯೆಯು ಎಲ್ಲಾ ವಿಷಯಗಳನ್ನೂ ತಿಳಿಸುತ್ತದೆ. ಆದ್ದರಿಂದ ಈ ವಿದ್ಯೆಯು ಬ್ರಹ್ಮನಿಂದ ಮೊದಲು ಉಪದಿಷ್ಟವಾದ ವಿದ್ಯೆ - ಎಂಬ

ಅರ್ಥದಲ್ಲಿ ಮಾತ್ರವೇ ಅಲ್ಲ, ಎಲ್ಲಕ್ಕೂ ಹೆಚ್ಚಿನದಾದ ಪರಬ್ರಹ್ಮವನ್ನು ತಿಳಿಸಿಕೊಡುವದರಿಂದಲೂ ''ಬ್ರಹ್ಮವಿದ್ಯೆ'' ಎನಿಸಿರುತ್ತದೆ (೮) ಎಂದು ಆಚಾರ್ಯರು ಬರೆದಿರುತ್ತಾರೆ. ಅಂಗಿರಸ್ಸು ವಿದ್ಯೆಗಳನ್ನು ಪರವಿದ್ಯೆ, ಅಪರವಿದ್ಯೆ - ಎಂದು ಎರಡು ಭಾಗಗಳಾಗಿ ವಿಂಗಡಿಸಿರುತ್ತಾನೆ. ವೇದೋಕ್ತವಾದ ಕರ್ಮ, ಅದರ ಫಲವಾದ ಸ್ವರ್ಗ ; ಉಪಾಸನೆ, ಕರ್ಮೋಪಾಸನೆಗಳಿಂದ ಪಡೆಯಬಹುದಾದ ದೇವಲೋಕ-ಇವೆರಡೂ ಅಪರವಿದ್ಯೆ. ಯಾವದರಿಂದ ಬ್ರಹ್ಮವನ್ನು ಇದ್ದಂತೆಯೇ ಅರಿತುಕೊಳ್ಳಬಹುದೋ ಅದೇ ಪರವಿದ್ಯೆ, ಗುರುವಿನ ಉಪದೇಶದಿಂದ ಈ ಪರವಿದ್ಯೆಯನ್ನು ಸಂಪಾದಿಸಿಕೊಂಡವನು ಪರಬ್ರಹ್ಮವೇ ಆಗಿಬಿಡುತ್ತಾನೆ. ಅಪರವಿದ್ಯೆಯಲ್ಲಿ ವಿರಕ್ತನಾಗಿ (೪೬) ಸತ್ಯಾದಿಸಾಧನಗಳನ್ನೂ (೯೯) ಯೋಗಮಾರ್ಗ (೧೧೮)ವನ್ನೂ ಅನುಸರಿಸುವವನಿಗೆ ಮಾತ್ರ ಈ ವಿದ್ಯೆಯಲ್ಲಿ ಅಧಿಕಾರವಿರುತ್ತದೆ ಎಂದು ಈ ಉಪನಿಷತ್ತಿನಲ್ಲಿ ಹೇಳಿರುತ್ತದೆ.

ಭಾಷ್ಯದ ಮುಖ್ಯಾಂಶಗಳು

ಭಾಷ್ಯದಲ್ಲಿ ಆಚಾರ್ಯರ ಸಿದ್ಧಾಂತಕ್ಕೆ ಅಸಾಧಾರಣವಾಗಿರುವ ಹಲವು ವಿಷಯಗಳನ್ನು ಪ್ರತಿಪಾದಿಸಿರುತ್ತದೆ. ಉಪನಿಷತ್ತಿನಿಂದ ಅಧ್ವೈತಪ್ರಕ್ರಿಯೆಯನ್ನು ಸಿದ್ಧಗೊಳಿಸಿರುವ ಬಗೆ, ಜ್ಞಾನಕರ್ಮಗಳ ಸ್ವಭಾವತಾರತಮ್ಯವನ್ನು ವಿಶದಪಡಿಸಿರುವದು, ಮುಕ್ತಿಯ ಸ್ವರೂಪವನ್ನು ಸ್ಪಷ್ಟಗೊಳಿಸಿರುವ ಪ್ರಕಾರ, ಸಾಧನಗಳ ಸ್ಥಾನವನ್ನು ನಿರ್ಧರಿಸಿರುವ ಕ್ರಮ- ಈ ನಾಲ್ಕೂ ಮುಖ್ಯವಾಗಿ ಲಕ್ಷ್ಯದಲ್ಲಿಡತಕ್ಕವುಗಳಾಗಿವೆ. ಜಿಜ್ಞಾಸುಗಳ ಉಪಯೋಗಕ್ಕಾಗಿ ಇಲ್ಲಿ ಒಂದೊಂದರ ವಿಷಯಕ್ಕೂ ಎರಡು ಮಾತುಗಳನ್ನು ಬರೆದಿಹುದೆವು.

(೧) ಉಪನಿಷತ್ತಿನ ಬಲದಿಂದ ಅದ್ವೈತಸಿದ್ಧಿ

ಪರವಿದ್ಯೆಗೆ ವಿಷಯವಾದ ಪರಮಾರ್ಥವನ್ನು ಉಪನಿಷತ್ತಿನಲ್ಲಿ ''ಅಕ್ಷರ'' (೧-೧-೬), ಬ್ರಹ್ಮ (೧-೧-೮), ಸತ್ಯ (೨-೧-೧), ಪುರುಷ (೨-೧-೨) ಆತ್ಮಾ (೨-೨-೭) - ಎಂಬ ಹೆಸರುಗಳಿಂದ ಕರೆದಿರುತ್ತದೆ. ಈ ಹೆಸರುಗಳಲ್ಲಿ ಒಂದೊಂದರಲ್ಲಿಯೂ ಒಂದೊಂದು ವಿಶೇಷವಾದ ಅಭಿಪ್ರಾಯವು ಅಡಗಿರು

( ) ಕಂಸದಲ್ಲಿ ಹಾಕಿರುವ ಸಂಖ್ಯೆಗಳು ಭಾಷ್ಯ ಭಾಗಗಳನ್ನು ಸೂಚಿಸುತ್ತವೆ.

ತ್ತದೆ. ಅಕ್ಷರವೆಂದರೆ (೪೮) ನಾಶವಾಗುವದಲ್ಲ (ಅಕ್ಷರಣಾತ್), ಮತ್ತೊಂದರಿಂದ ಗಾಸಿಯಾಗುವದಲ್ಲ (ಅಕ್ಷತತ್ವಾತ್), ಎಂದಿಗೂ ಸವೆಯುವದಲ್ಲ (ಅಕ್ಷಯತ್ವಾತ್), ಬ್ರಹ್ಮವೆಂದರೆ (೧೦೩), ಎಲ್ಲಕ್ಕೂ ದೊಡ್ಡದು, ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ದೇಶಕಾಲಾದಿಗಳ ಕಟ್ಟು ಇಲ್ಲದ್ದು. ಪುರುಷನೆಂದರೆ (೫೩, ೮೦) ಎಲ್ಲೆಲ್ಲಿಯೂ ತುಂಬಿಕೊಂಡು ಹೃದಯವೆಂಬ ಪುರದಲ್ಲಿ ಸಾಕ್ಷಿಯಾಗಿ ಕಾಣಿಸಿಕೊಳ್ಳುತ್ತಿರುವದು. ಆತ್ಮನೆಂದರೆ (೮೦) ನಮ್ಮ ಒಳಗಿನ ಸ್ವರೂಪ ಇಂಥ ನಿರ್ವಿಶೇಷವಾದ (೧೯) ಪರಮಾರ್ಥದಿಂದ ವಿಶೇಷರೂಪವಾದ ಜಗತ್ತು ಉಂಟಾಯಿತು, ನಿರ್ವಿಕಾರವಾದ ಅಕ್ಷರದಿಂದ ಪ್ರಾಣ (ಹಿರಣ್ಯಗರ್ಭನೇ) ಮುಂತಾದ ಜಗತ್ತು ಉಂಟಾಯಿತು, ಪೂರ್ಣನಾದ ಪುರುಷನಿಂದ ಅಪೂರ್ಣವಾದ ಪರಿಚ್ಛಿನ್ನವಾದ ಜಗತ್ತು ಉಂಟಾಯಿತು, ಎಲ್ಲಕ್ಕೂ ಮಿಗಿಲಾಗಿರುವ ಬ್ರಹ್ಮದಿಂದ ಅಬ್ರಹ್ಮವಾದ ಜಗತ್ತು ಉಂಟಾಯಿತು, ನಮ್ಮಗಳ ಒಳಸ್ವರೂಪವಾದ ಆತ್ಮನಿಂದ ಅನಾತ್ಮರೂಪವಾದ ಜಗತ್ತು ಉಂಟಾಯಿತು - ಎಂದು ಶ್ರುತಿ ಹೇಳುತ್ತಿದೆ. ಇದು ಹೇಗೆ ಸಾಧ್ಯ ? ಎಂದರೆ ಇದಕ್ಕೆ 'ಸತ್ಯ' ಎಂಬ ವಿಶೇಷಣದಲ್ಲಿ ಉತ್ತರವಿದೆ. ಬ್ರಹ್ಮವೊಂದು ಸತ್ಯವು, ಪರಮಾರ್ಥವಾಗಿ ಇರತಕ್ಕದ್ದು ; ಮಿಕ್ಕದ್ದೆಲ್ಲವೂ ಅನೃತವು, ಹುಸಿತೋರಿಕೆ (೫೦). ಹಗ್ಗದಲ್ಲಿ ತೋರುವ ಹಾವಿನಂತೆ ಪರಮಾರ್ಥಸತ್ಯವಾದ ಬ್ರಹ್ಮದಲ್ಲಿ ತೋರುವ ತಪ್ಪುತಿಳಿವಳಿಕೆ ಮಾತ್ರವೇ ಈ ಜಗತ್ತನ್ನು ತೋರಿಸುತ್ತಿರುವದು (೮೯). ಆದ್ದರಿಂದಲೇ ಶ್ರುತಿಯು ಪುರುಷನು, ಪ್ರಾಣನು, ಅಮನಸ್ಕನು (೫೪), ಅಜನು (೫೩) -ಎಂದು ಹೇಳಿರುವದಲ್ಲದೆ ಇದೆಲ್ಲವೂ ಪುರುಷನೇ (೬೯), ''ಇದೆಲ್ಲವೂ ಬ್ರಹ್ಮವೇ'' (೮೯) - ಎಂದು ಸಾರುತ್ತಿದೆ. ಆದ್ದರಿಂದ ಪ್ರಾಣಾದಿ ಜಗತ್ತು ತಾನು ಹುಟ್ಟುವದಕ್ಕಿಂತ ಮೊದಲೂ, ನಾಶವಾದಮೇಲೂ ಇರುವದಿಲ್ಲವಾದ್ದರಿಂದ ಮಧ್ಯದಲ್ಲಿ ತೋರುತ್ತಿದ್ದರೂ ಕನಸಿನ ದೃಶ್ಯದಂತೆ ಅನೃತವೇ (೫೭) ಎಂದು ತೋರಿಸುವದಕ್ಕೆ ಶ್ರುತಿಯು ಈ ಅಕ್ಷರ, ಪುರುಷ ಅಥವಾ ಬ್ರಹ್ಮ - ಎಂಬ ಸತ್ಯದಿಂದ ಅನೃತವಾದ ಜಗತ್ತಿನ ಸೃಷ್ಟಿಯನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ಬ್ರಹ್ಮವು ಅದ್ವಿತೀಯವೆಂದು ತಿಳಿಸುವದರಲ್ಲಿಯೇ ಶ್ರುತಿಗೆ ತಾತ್ಪರ್ಯವಿರುತ್ತದೆ. ಜೀವರುಗಳಾಗಿ ಕಾಣುವ ನಾವೆಲ್ಲರೂ ಉಪಾಧಿವಶದಿಂದ ಹುಟ್ಟುಹೊಂದುಗಳುಳ್ಳವರೆಂದು ತೋರುತ್ತಿದ್ದರೂ ಪರಮಾರ್ಥವಾಗಿ ಬೆಂಕಿಯಿಂದ ಸಿಡಿದುಬಂದ ಕಿಡಿಗಳು ಬೆಂಕಿಯೇ ಆಗಿರುವಂತೆ ನಿಜವಾಗಿ ಅಕ್ಷರವಾದ ಈ ಪುರುಷನ ಚೈತನ್ಯರೂಪರೇ

ಆಗಿರುವೆವು (೫೧). ಈ ಅಕ್ಷರವೆಂಬುದು ಯಾವ ಉಪಾಧಿಗಳ ಹಂಗೂ ಇಲ್ಲದೆ ವ್ಯಾಕೃತಾವ್ಯಾಕೃತರೂಪಗಳೆರಡಕ್ಕಿಂತಲೂ ವಿಲಕ್ಷಣವಾದ, ಇಂಥದ್ದೆಂದು ಹೇಳುವದಕ್ಕೆ ಬಾರದ, ಸ್ವರೂಪವುಳ್ಳದ್ದಾಗಿರುತ್ತದೆ (೫೨) - ಎಂದು ಆಚಾರ್ಯರು ಶ್ರುತ್ಯರ್ಥವನ್ನು ನಿರ್ಣಯಿಸಿರುತ್ತಾರೆ.

(೨) ಕರ್ಮಜ್ಞಾನಗಳ ಸ್ವಭಾವತಾರತಮ್ಯ

ಕರ್ಮವೆಂಬ ಮಾತಿಗೆ ಹೀಗೆ ಮಾಡಬೇಕೆಂದು ವಿಧಿಸುವದಕ್ಕೆ ಬರುವ ಅಪರವಿದ್ಯಾವಿಷಯವಾದ ಕ್ರಿಯೆ ಎಂಬ ಅರ್ಥವನ್ನಿಟ್ಟುಕೊಂಡರೆ, ಕರ್ಮ, ಉಪಾಸನೆ - ಈ ಎರಡೂ ಕರ್ಮವೇ ಆಗುವವು. ಕರ್ಮಕ್ಕೆ ವಿಧಿಯ ಜ್ಞಾನ, ಕಾರಕಗಳ ಉಪಯೋಗ - ಇವೆರಡೂ ಬೇಕು (೧೮). ತಾವು ಕರ್ತೃರೂಪರೆಂದು ಭಾವಿಸಿಕೊಂಡು ತಮಗಿಂತ ಹೊರಗಿರುವ ಫಲವನ್ನು ಬಯಸುವವರಿಗೇ ಕರ್ಮವನ್ನು ವಿಧಿಸಿರುತ್ತದೆ (೪೫). ಆದ್ದರಿಂದ ಕರ್ಮವನ್ನು ಮಾಡುವವರು ಆಯಾ ಫಲವನ್ನು ಅನುಭವಿಸುವದಕ್ಕೆ ತಕ್ಕ ಶರೀರಗಳನ್ನು ಧರಿಸಬೇಕಾಗುವದು (೧೧೨). ಇದಿಷ್ಟೂ ಕರ್ಮದ ಸ್ವಭಾವವು.

ಪರವಿದ್ಯೆ ಎಂದು ಕರೆಯಿಸಿಕೊಳ್ಳುವ ಆತ್ಮಜ್ಞಾನವು ಇದಕ್ಕಿಂತ ತೀರ ವಿಲಕ್ಷಣವಾಗಿರುತ್ತದೆ. ಆ ಜ್ಞಾನವು ವಸ್ತುವಿಗೆ ಅಧೀನವಾಗಿ ಉಂಟಾಗುವ ದಾದ್ದರಿಂದ ಕರ್ತ್ರಾದಿಕಾರಕಗಳಿಗೆ ವಶವಾಗಿ ಉಂಟಾಗತಕ್ಕದ್ದಲ್ಲ. ಪರಮಾರ್ಥವು ಅದ್ವಿತೀಯವಾಗಿರುವದರಿಂದ ಅದನ್ನರಿತವನಿಗೆ ಕಾಮ, ಕಾಮಿ, ಕಾಮಯಿತವ್ಯ - ಎಂಬ ಭೇದವೇ ಇರುವದಿಲ್ಲ. ಅದೆಲ್ಲವೂ ಆತ್ಮನಲ್ಲಿಯೇ ಅಡಗಿಹೋಗಿರುವದು (೧೧೨). ಈ ಜ್ಞಾನದ ಫಲವು ಜ್ಞಾನದ ಸಮಕಾಲದಲ್ಲಿಯೇ ಆಗುತ್ತದೆ ; ಕರ್ಮಿಗಳಂತೆ ಜ್ಞಾನಿಗಳು ಫಲಪ್ರಾಪ್ತಿಗಾಗಿ ಎಲ್ಲಿಗೂ ಹೋಗಬೇಕಾದಬ್ಬರುವದಿಲ್ಲ, ಯಾವ ಶರೀರವನ್ನೂ ಧರಿಸಬೇಕಾದದ್ದಿರುವದಿಲ್ಲ (೧೧೯).

ಜ್ಞಾನದ ಫಲವಾದ ಮುಕ್ತಿಯು ದೇಶಕಾಲಪರಿಚ್ಛೇದವಿಲ್ಲದ್ದಾಗಿರುವದರಿಂದ ಅದು ನಿತ್ಯವೂ ಆಗಿರುತ್ತದೆ, ಕರ್ಮಫಲದಂತೆ ಸಾಧನವು ಸವೆದಬಳಿಕ ನಾಶವಾಗತಕ್ಕದ್ದಲ್ಲ (೧೧೯). ಬ್ರಹ್ಮವನ್ನು ಅರಿತವನು ವಿದ್ಯಾಮಾತ್ರದಿಂದ ಕೂಡಲೆ ಬ್ರಹ್ಮವಾಗಿಬಿಡುತ್ತಾನಾದ್ದರಿಂದ ಬ್ರಹ್ಮವಿದ್ಯೆಯ ಫಲವು ನಿಶ್ಚಿತವಾಗಿ ಆಗುವದೊ,

ಇಲ್ಲವೊ ? - ಎಂದು ಶಂಕಿಸುವದಕ್ಕೆ ಬರುವದಿಲ್ಲ. ಜ್ಞಾನಿಗೆ ಇನ್ನು ಮುಂದೆ ಶೋಕಮೋಹಾದಿಗಳು ಎಂದಿಗೂ ಆಗುವದಿಲ್ಲ (೧೨೩).

ಹೀಗೆ ವೇದಾಂತವಾಕ್ಯದ ಅರ್ಥವನ್ನು ಅರಿತುಕೊಂಡ ಬಳಿಕ ಬ್ರಹ್ಮಜ್ಞಾನಿಯು ಮಾಡತಕ್ಕದ್ದೆಂಬುದು ಏನೂ ಉಳಿಯುವದೇ ಇಲ್ಲ (೧೮, ೯೫)ವಾದ್ದರಿಂದ ಇದಕ್ಕಿಂತ ತೀರವಿರುದ್ಧವಾದ ಸ್ವಭಾವದ ಕರ್ಮವನ್ನು ಇದರೊಡನೆ ಸೇರಿಸಿಕೊಂಡು ಮುಮುಕ್ಷುಗಳು ಅನುಷ್ಠಾನಮಾಡಬೇಕೆನ್ನುವ ವಾದಿಗಳು ಜ್ಞಾನದ ಸ್ವಭಾವವನ್ನಾಗಲಿ ಕರ್ಮದ ಸ್ವಭಾವವನ್ನಾಗಲಿ ಅರಿಯರೆನ್ನ ಬೇಕಾಗುತ್ತದೆ. ಕರ್ಮಕ್ಕೆ ಬಾಹ್ಯದೃಷ್ಟಿ ಬೇಕು, ಜ್ಞಾನಕ್ಕೆ ಪ್ರತ್ಯಗ್ದೃಷ್ಟಿ ಬೇಕು ; ಕರ್ಮವು ದ್ವೈತವಿಷಯ, ಜ್ಞಾನವು ಅದ್ವೈತವಿಷಯವಾದದ್ದು. ಆದ್ದರಿಂದಲೇ ಜ್ಞಾನಿಗಳು ಸರ್ವಕರ್ಮಸಂನ್ಯಾಸವನ್ನು ಮಾಡಿರುವರೆಂದು ಈ ಉಪನಿಷತ್ತಿನಲ್ಲಿದೆ (೪). ಗೃಹಸ್ಥರೂ ಜ್ಞಾನೋಪದೇಶವನ್ನು ಮಾಡಿದರೆಂದು ಹೇಳುವ ವಚನಗಳನ್ನು ನ್ಯಾಯೋಪೇತವಾದ ಈ ಶ್ರುತಿಗೆ ಅನುಗುಣವಾಗಿಯೇ ಅರ್ಥವನ್ನು ಮಾಡಬೇಕು (೫). ಆದ್ದರಿಂದ ಉಪಾಸನಾರೂಪವಾದ ಜ್ಞಾನದೊಡನೆ ಕರ್ಮವನ್ನು ಅನುಷ್ಠಾನಮಾಡುವವರು ಉತ್ತರಾಯಣಮಾರ್ಗದಿಂದ ಹೋಗಿ ಪಡೆಯುವ ಬ್ರಹ್ಮಲೋಕಪ್ರಾಪ್ತಿಯನ್ನೇ ಸಮುಚ್ಚಯವಾದಿಗಳು ಪರಮಾರ್ಥ ಮುಕ್ತಿಯೆಂದು ಭ್ರಮಿಸಿರುತ್ತಾರೆಂದು ನಿಶ್ಚಯಿಸಬೇಕು (೪೨, ೪೩).

(೩) ಮುಕ್ತಿಯ ಸ್ವರೂಪ

ತಾನು ಬ್ರಹ್ಮವೇ ಆಗಿರುವೆನೆಂಬ ತಿಳಿವಳಿಕೆಯಲ್ಲದೆ ಅದಕ್ಕಿಂತ ಬೇರೆಯಾಗಿ ಬ್ರಹ್ಮದ ಪ್ರಾಪ್ತಿಯೆಂಬುದು ಇರುವದಿಲ್ಲವಾದ್ದರಿಂದ ಅವಿದ್ಯೆಯ ನಿವೃತ್ತಿಯೇ ಮುಕ್ತಿ (೧೬, ೧೧೯) ಎಂದು ನಿರ್ಣಯಿಸುತ್ತದೆ. ಅವಿದ್ಯಾಕಾಮ ಕರ್ಮಗಳು, ಜ್ಞಾನವು ತಲೆದೋರಿದ ಕೂಡಲೆ ಹೋಗಿಬಿಡುವವೆಂದೂ (೭೦, ೮೩, ೧೧೨), ಅವಿದ್ಯೆಯು ಹೋದಬಳಿಕ ಬ್ರಹ್ಮಸ್ವರೂಪವನ್ನು ಪಡೆಯುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲವೆಂದೂ ಬ್ರಹ್ಮವನ್ನರಿತವನು ಬ್ರಹ್ಮವೇ ಆಗುತ್ತಾನೆಂದೂ (೧೨೨) ಶ್ರುತಿಯಲ್ಲಿ ಹೇಳಿದೆ. ಇದೇ **ಭಾಷ್ಯಕಾರರಿಗೆ ಸಮ್ಮತವಾದ ಸದ್ಯೋಮುಕ್ತಿಯು.** ಜ್ಞಾನವುಂಟಾದರೆ ಶರೀರವು ಬಿದ್ದು ಹೋಗುವದೆಂಬ ಮಂಡನಾದಿಗಳ ಮತವಾಗಲಿ, ಜೀವನ್ಮುಕ್ತನಿಗೂ ಒಂದಿಷ್ಟು ಅವಿದ್ಯೆಯಿರುವದೆಂಬ ಈಚಿನ ವೇದಾಂತಿಗಳ ಮತವಾಗಲಿ. ಆಚಾರ್ಯರಿಗೆ

ಒಪ್ಪಿಲ್ಲ. ಶ್ರುತಿಯಲ್ಲಿ ಬ್ರಹ್ಮಜ್ಞಾನಿಗಳು ದೇಹವನ್ನು ಬಿಡುವ ಕಾಲವನ್ನು 'ಪರಾಸ್ತ ಕಾಲ' (ತೀರ ಕೊನೆಯಕಾಲ) ವೆಂದು ಕರೆದಿರುವದು (೩-೨-೬), ಮುಕ್ತರ ಪ್ರಾಣಾದಿಕಲೆಗಳು ತಮ್ಮ ತಮ್ಮ ಕಾರಣದಲ್ಲಿ ಲಯವಾಗುವವೆಂದು ಹೇಳಿರುವದು (೩-೨-೭), ಜ್ಞಾನಿಗಳು ಶರೀರಪಾತಕಾಲದಲ್ಲಿ ಸರ್ವಾತ್ಮವಾದ ಬ್ರಹ್ಮವನ್ನೇ ಸೇರಿಕೊಳ್ಳುವರೆಂದಿರುವದು (೩-೨-೫) - ನದಿಗಳು ತಮ್ಮ ನಾಮರೂಪಗಳನ್ನು ಕಳಚಿಕೊಂಡು ಕಡಲಿನಲ್ಲಿ ಒಂದಾಗುವಂತೆ ಮುಕ್ತಜೀವರು ಬ್ರಹ್ಮದಲ್ಲಿ ಒಂದಾಗುವರೆಂದು ಹೇಳಿರುವದು (೩-೨-೮) - ಇವುಗಳಿಂದ **ವಿದೇಹಮುಕ್ತಿ**ಯನ್ನು ಮುಖ್ಯವೆಂದು ಯಾರಾದರೂ ಎಣಿಸಿಕೊಂಡಾರೆಂದು ಆಚಾರ್ಯರು ಮುಕ್ತಿಯ ವರ್ಣನೆಯಲ್ಲಿ ದೀಪವು ಆರಿಹೋಗುವ ದೃಷ್ಟಾಂತ (೧೧೮)ವೇ ಅಲ್ಲದೆ, ಘಟಾಕಾಶವು ಮಹಾಕಾಶದಲ್ಲಿ ಬೆರೆತುಕೊಳ್ಳುವದು (೧೧೭), ಸೂರ್ಯಪ್ರತಿಬಿಂಬವು ಬಿಂಬದಲ್ಲಿ ಒಂದಾಗುವದು (೧೨೦) - ಎಂಬ ದೃಷ್ಟಾಂತಗಳನ್ನೂ ಕೊಟ್ಟಿರುತ್ತಾರೆ. ಘಟಾಕಾಶವು ಯಾವಾಗಲೂ ಆಕಾಶವೇ ಆಗಿರುವಂತೆಯೂ, ಪ್ರತಿಬಿಂಬವು ಬಿಂಬಕ್ಕಿಂತ ಯಾವಾಗಲೂ ಬೇರೆಯಿಲ್ಲದಿರುವಂತೆಯೂ, ಜೀವರು ಯಾವಾಗಲೂ ಬ್ರಹ್ಮವೇ ಆಗಿರುವರೆಂಬುದನ್ನು ತಿಳಿಸುವ ಉದ್ದೇಶದಿಂದ ಈ ದೃಷ್ಟಾಂತಗಳನ್ನು ಆಚಾರ್ಯರು ಉದಾಹರಿಸಿರುವರೆಂಬ ರಹಸ್ಯವನ್ನು ಓಡಿಯಲಾರದೆ ಈಚಿನ ವೇದಾಂತಿಗಳು ಕೆಲವರು ಅವಚ್ಛಿನ್ನವಾದ, ಪ್ರತಿಬಿಂಬವಾದ - ಎಂಬ ಎರಡು ವಾದಗಳನ್ನೇ ಕಲ್ಪಿಸಿಕೊಂಡು ಜೀವನ ಸ್ವರೂಪದ ವಿಷಯಕ್ಕೆ ವಾಕ್ಕಲಹವನ್ನು ಎಬ್ಬಿಸಿರುತ್ತಾರೆ.

(೪) ಆತ್ಮಜ್ಞಾನಕ್ಕೆ ಸಾಧನಗಳು

ವಾಕ್ಯಾರ್ಥಜ್ಞಾನದಿಂದಲೇ ಮುಕ್ತಿಯಾಗುವದೆಂಬ ಭಾಷ್ಯಕಾರರ ಪ್ರಕ್ರಿಯೆಯಲ್ಲಿ ಸಾಧನಗಳ ಅವಶ್ಯಕತೆಯೇನೆಂದು ಕೆಲವರಿಗೆ ಶಂಕೆಯುಂಟಾಗಬಹುದು. ಆದರೆ ಬ್ರಹ್ಮವಿದ್ಯೆ ಎಂಬುದು ಒಂದು ಲೌಕಿಕವಿಜ್ಞಾನವಲ್ಲ. ಇಂದ್ರಿಯಗಳ ತಿಳಿವಳಿಕೆಯಾಗಲಿ, ಆ ತಿಳಿವಳಿಕೆಯನ್ನು ಆಧಾರವಾಗಿಟ್ಟುಕೊಂಡಿರುವ ಮನಸ್ಸಿನ ತಿಳಿವಳಿಕೆಯಾಗಲಿ, ಆತ್ಮನನ್ನು ಅರಿತುಕೊಳ್ಳುವದಕ್ಕೆ ಸ್ವಲ್ಪವೂ ಉಪಯೋಗವಾಗುವದಿಲ್ಲ (೭೩, ೮೫, ೧೦೫). ಆತ್ಮದರ್ಶನಕ್ಕೆ ಶಾಸ್ತ್ರೋಪದೇಶ, ಆಚಾರ್ಯೋಪದೇಶ, ಶಮ, ದಮ, ಧ್ಯಾನ, ಸರ್ವತ್ಯಾಗ, ವೈರಾಗ್ಯ - ಎಂಬ ಸಾಧನಗಳಿಂದ ಒಂದಾನೊಂದು ವಿಶೇಷರೂಪವಾದ

ಸಾಕ್ಷಾದನುಭವರೂಪವಾದ ಜ್ಞಾನವನ್ನುಂಟುಮಾಡಿಕೊಳ್ಳಬೇಕಾಗುತ್ತದೆ. ಇದನ್ನೇ ವೇದಾಂತದಲ್ಲಿ ವಿಜ್ಞಾನವೆಂದು ಕರೆದಿರುವದು (೮೧, ೮೩, ೯೫, ೧೧೨, ೧೧೮). ಆತ್ಮಜ್ಞಾನವನ್ನು ತಾನೇ ಶಾಸ್ತ್ರವಿಚಾರದಿಂದ ಸಂಪಾದಿಸಿಕೊಳ್ಳುವದಕ್ಕೆ ಆಗುವದಿಲ್ಲ ; ಅದಕ್ಕೆ ಸರಿಯಾದ ಶಿಷ್ಯಗುಣವನ್ನು ಸಂಪಾದಿಸಿಕೊಂಡು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿರುವ ಸದ್ಗುರುವಿನ ಉಪದೇಶದಿಂದಲೇ ಅರಿಯಬೇಕು (೮, ೧೦, ೪೬, ೪೭, ೧೨೬). ವ್ಯಾಕೃತಾವ್ಯಾಕೃತರೂಪವಾದ ದ್ದನ್ನು ತಿಳಿಯುವದರಿಂದ ಏನೂ ತಿಳಿವಳಿಕೆಯುಂಟಾಗಲಾರದು (೧೪) ; ಅದೆಲ್ಲವೂ ದುಃಖರೂಪವಾದದ್ದು (೨೭, ೩೭), ಹುರುಳಿಲ್ಲದ್ದು (೪೫) ಎಂಬ **ವೈರಾಗ್ಯವು** ಅವಶ್ಯವಾಗಿರಬೇಕು. ವೇದಾಧ್ಯಯನ, ಗ್ರಂಥಧಾರಣ, ಅರ್ಥವಿಚಾರ – ಇವುಗಳೂ ಬೇಕು ; ಆದರೆ ಇವುಗಳಿಗಿಂತಲೂ ಮುಖ್ಯವಾಗಿ ಆತ್ಮಪ್ರಾಪ್ತಿಯಲ್ಲಿ ಅತ್ಯುತ್ಕಟವಾದ ಹಂಬಲಿಕೆಯಿರಬೇಕು (೭೭, ೧೧೪).

ಸತ್ಯವಚನ, ಬ್ರಹ್ಮಚರ್ಯ, ಎಚ್ಚರತಪ್ಪದ ಆತ್ಮಚಿಂತನೆ – ಇವುಗಳನ್ನು ಎಡೆಬಿಡದೆ ಹಿಂಬಾಲಿಸುತ್ತಾ (೯೯) ದೇಹಾತ್ಮಭಾವವನ್ನು ಬಿಟ್ಟು ತನ್ನ ಸ್ವರೂಪವನ್ನು ಬ್ರಹ್ಮರೂಪದಿಂದ ಕಾಣುವವರೆಗೂ ಆತ್ಮಚಿಂತನೆಯಲ್ಲಿ ತೊಡಗಿರ ಬೇಕು (೭೬, ೯೧, ೯೨). ಆತ್ಮನು ನಮ್ಮ ಹೃದಯದಲ್ಲಿ ಅಂತಃಕರಣವೃತ್ತಿಗಳಿ ಗೆಲ್ಲ ಸಾಕ್ಷಿಯಾಗಿಯೇ ಕಂಡುಬರಬೇಕಾಗಿರುವದರಿಂದ, ಹೊರಮುಖವಾಗಿರುವ ಬುದ್ಧಿಯನ್ನು ಒಳಕ್ಕೆ ತಿರುಗಿಸಿಕೊಂಡು **ಆತ್ಮಪ್ರತ್ಯಯವನ್ನೇ ಹಿಂಬಾಲಿಸುವದು** ಅತ್ಯಂತ ಅವಶ್ಯವಾಗಿರುತ್ತದೆ (೭೦, ೭೧, ೭೮, ೮೧, ೮೫) ಎಂಬುದು ಆಚಾರ್ಯರ ಉಪದೇಶವು.

ಭಾಷ್ಯದ ವ್ಯಾಖ್ಯಾನಕಾರರು

ಮುಂಡಕೋಪನಿಷತ್ತಿನ ವ್ಯಾಖ್ಯಾನಕಾರರನ್ನು **ಆನಂದಗಿರಿಗಳು** ಎಂದು ಆನಂದಾಶ್ರಮದಲ್ಲಿ ಮುದ್ರಿತವಾಗಿರುವ ಗ್ರಂಥದ ಪ್ರಕಾಶಕರು ಕರೆದಿರುತ್ತಾರೆ ; ಅವರ ಹೆಸರು **"ಶ್ರೀಮದಾನಂದಜ್ಞಾನರು"** ಎಂದು ಟೀಕಾಪರಿಸಮಾಪ್ತಿಯ ವಾಕ್ಯದಲ್ಲಿ ಕಂಡುಬರುತ್ತದೆ. ಈ ವ್ಯಾಖ್ಯಾನದಲ್ಲಿ **ಪ್ರಕಟಾರ್ಥ**ವೆಂಬ ಗ್ರಂಥವನ್ನು ಪರಾಮರ್ಶಿಸಿರುತ್ತದೆ (ಪು. ೩೨)[1] ; **ಭಾಸ್ಕರರ** ಸಮುಚ್ಚಯವಾದವನ್ನು

1. ಇಲ್ಲಿರುವ ಪುಟಸಂಖ್ಯೆಗಳು ಆನಂದಾಶ್ರಮಮುದ್ರಿತವಾದ ಮುಂಡಕೋಪನಿಷತ್ತಿಗೆ ಸಂಬಂಧಪಟ್ಟವುಗಳಾಗಿವೆ.

ಖಂಡಿಸಿರುತ್ತದೆ (ಪು. ೩೮) ; **ಏಕಜೀವವಾದ**ವನ್ನು ತಿರಸ್ಕರಿಸಿರುತ್ತದೆ (ಪು. ೧೧); ಅವ್ಯಾಕೃತವೆಂದರೆ ಕರ್ಮಾಪೂರ್ವಸಮವಾಯಿಯಾದ ಭೂತಸೂಕ್ಷ್ಮವು ಎಂಬ **ಕೆಲವರು ಅದ್ವೈತಿಗಳವಾದ**ವನ್ನು ದೂಷಿಸಿರುತ್ತದೆ (ಪು. ೯). ಇದೆಲ್ಲವನ್ನೂ ನೋಡಿದರೆ ಈ ವ್ಯಾಖ್ಯಾನಕಾರರು ಶಂಕರಾಚಾರ್ಯರಿಗಿಂತ ಬಹು ಈಚಿನವರೆಂದು ಸ್ಪಷ್ಟವಾಗುತ್ತದೆ. ಈ ವ್ಯಾಖ್ಯಾನಕಾರರು ''ಜ್ಞಾತ್ವೋಽರ್ಥ ಸ್ತಜ್ಞಪ್ತಿರ್ಜ್ಞಾತವಿದ್ಯಾನಿವೃತ್ತಿಃ' ಎಂಬುದರ ವ್ಯಾಖ್ಯಾನವನ್ನು ಮಾಡುವಾಗ ಅವಿದ್ಯೆಯು ತೊಲಗುವದೆಂದರೆ ಬ್ರಹ್ಮದ ಅವಗತಿಯೇ ಎಂದು ನಾವು ವಿವರಿಸಿರುತ್ತೇವೆ - ಎಂದು ಹೇಳಿಕೊಂಡಿರುತ್ತಾರೆ (ಪು. ೭). ''ಜ್ಞಾತ್ವೋಽರ್ಥ ಸ್ತಜ್ಞಪ್ತಿರ್ಜ್ಞಾ ತದಜ್ಞಾನಯಾನಿಃ'' ಎಂಬ ವಾಕ್ಯವು **ಇಷ್ಟಸಿದ್ಧಿಯಲ್ಲಿ** (೮-೨, ಪು. ೩೬೯ರಲ್ಲಿ) ಕಂಡುಬರುತ್ತದೆ.[1] ಆದ್ದರಿಂದ ಈ ವ್ಯಾಖ್ಯಾನಕಾರರು ಇಷ್ಟಸಿದ್ಧಿಗೂ ವ್ಯಾಖ್ಯಾನವನ್ನು ಬರೆದಿದ್ದಾರೆಯೆ ?- ಎಂಬುದು ವಿಚಾರಣೀಯವಾಗಿರುತದೆ. ಇದು ಹೇಗಾದರೂ ಇರಲಿ, **ವ್ಯಾಖ್ಯಾನಕಾರರು ಆಚಾರ್ಯರಿಗಿಂತ ಬಹಳ ಈಚಿನವರೆಂಬುದು ನಿರ್ವಿವಾದವಾಗಿರುತ್ತದೆ.** ಆದ್ದರಿಂದ ನಾವು ಭಾಷ್ಯಕ್ಕೆ ಅನುವಾದವನ್ನು ಬರೆಯುವಾಗ ಪೂರ್ವಾಪರಸಂದರ್ಭಕ್ಕೂ ಆಚಾರ್ಯರ ಭಾಷ್ಯಾಂತರಗಳಿಗೂ ಹೊಂದುವ ಅರ್ಥವನ್ನೇ ಒಪ್ಪಿ, ಭಾಷ್ಯಕ್ಕೆ ಅನನುಗುಣವೆಂದು ತೋರಿದ ಕಡೆಗಳಲ್ಲಿ ವ್ಯಾಖ್ಯಾನವನ್ನು ಕೈಬಿಟ್ಟಿರುತ್ತೇವೆ. ಉಪನಿಷತ್ತಿನಲ್ಲಿ ಜ್ಞಾನಪ್ರಕರಣದಲ್ಲಿ ಹೇಳಿರುವ ''ಪ್ರಣವಚಿಂತನೆ'' (೨-೨-೪)ಯನ್ನೂ ''ಮನೋಮಯಃ ಪ್ರಾಣಶರೀರನೇತಾ'' (೨-೨-೭) ಎಂಬ ವಾಕ್ಯವನ್ನೂ ಉಪಾಸನಾವಿಧಿಪ್ರಧಾನವಾಗಿ ಮಾಡಿ ಇವು ಕ್ರಮಮುಕ್ತಿಯ ವಿಷಯವೆಂದು ವ್ಯಾಖ್ಯಾನಕಾರರು ಹೇಳಿರುವದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳದೆ ಇರುವದಕ್ಕೆ ಇದೇ ಕಾರಣವು.

ಈ ವ್ಯಾಖ್ಯಾನಕಾರರು ಆಚಾರ್ಯರಿಂದ ಈಚೆಗೆ ಪ್ರಚಾರಕ್ಕೆ ಬಂದಿರುವ **ಅನಿರ್ವಚನೀಯಾವಿದ್ಯಾವಾದವನ್ನು** ಅಲ್ಲಲ್ಲಿ ಪರಾಮರ್ಶಿಸಿರುತ್ತಾರೆ. ಮುಖ್ಯವಾಗಿ ''ಭಿದ್ಯತೇ ಹೃದಯಗ್ರನ್ಥಿಃ'' ಎಂಬ (೨-೨-೮) ಮಂತ್ರಕ್ಕೆ ಹೃದಯಗ್ರಂಥಿ ಎಂದರೆ ಅವಿದ್ಯೆಯ ವಾಸನೆಗಳ ಹಿಂಡಾದ ಕಾಮವು ಎಂದು ಬರೆದಿರುವ ಭಾಷ್ಯಕ್ಕೆ

1. ''ವೇದಾಂತವಿಚಾರದ ಇತಿಹಾಸ''ದ ಹೆಗಡೆಯವರ ಕಾರ್ಯಾಲಯದಿಂದ ಪ್ರಕಟವಾಗಿರುವ (ಎರಡನೆಯ ಮುದ್ರಣ)ದ ನಿಳಿನೆಯ ಪುಟವನ್ನು ನೋಡಿ.

ಇವರು ಬರೆದಿರುವ ಆಕ್ಷೇಪಸಮಾಧಾನಗಳನ್ನು ವಾಚಕರು ಲಕ್ಷ್ಯದಲ್ಲಿಡುವದು ಒಳ್ಳೆಯದು. ಅವರು ಹೇಳಿರುವದೇನೆಂದರೆ :

''ಅವಿದ್ಯೆಯ ವಾಸನೆಗಳ ಹಿಂಡು ನಾಶವಾಗುತ್ತದೆ, ಎಂಬುದರ ಅರ್ಥವೇನು ? ಬುದ್ಧಿಯು ಇದ್ದುಕೊಂಡಿರುವಾಗಲೇ ಅವಿದ್ಯಾದಿಗಳು ನಾಶವಾಗುವದು ಜ್ಞಾನದ ಫಲವೆ, ಅಥವಾ ಅದು ಹೋದ ಬಳಿಕ ಅವು ನಾಶವಾಗುವದೆ ? ಮೊದಲನೆಯದೆಂದು ಹೇಳುವದು ಸರಿಯಲ್ಲ ; ಏಕೆಂದರೆ ಉಪಾದಾನಕಾರಣವಾದ ಬುದ್ಧಿಯು ಇರುವಾಗ ಕಾರ್ಯವಾದ ಅವಿದ್ಯಾದಿಗಳು ಅತ್ಯಂತವಾಗಿ ನಾಶವಾಗಲಾರವು. ಎರಡನೆಯ ಕಲ್ಪವೂ ಸರಿಯಲ್ಲ ; ಏಕೆಂದರೆ ಜ್ಞಾನಕ್ಕೆ ಅಜ್ಞಾನದೊಂದಿಗೇ ನೇರಾಗಿ ವಿರೋಧವಿದೆಯೇ ಹೊರತು (ಬುದ್ಧ್ಯಾದಿಗಳಿಗೂ ಅದಕ್ಕೂ ವಿರೋಧವಿಲ್ಲ). ಇದಲ್ಲದೆ ಬುದ್ಧಿಯಾದರೂ ಅನಾದಿಯೊ, ಸಾದಿಯೊ ? ಮೊದಲನೆಯ ಪಕ್ಷವು ಸರಿಯಲ್ಲ ; ಏಕೆಂದರೆ ''ಈ ಆತ್ಮನಿಂದ ಪ್ರಾಣವೂ ಮನಸ್ಸೂ ಸರ್ವೇಂದ್ರಿಯಗಳೂ ಹುಟ್ಟುತ್ತವೆ'' ಎಂಬ ಶ್ರುತಿಗೆ ಇದು ವಿರೋಧವಾಗುತ್ತದೆ. ಎರಡನೆಯ ಪಕ್ಷವೂ ಸರಿಯಲ್ಲ ; ಏಕೆಂದರೆ ಪ್ರಲಯದಲ್ಲಿ ಬ್ರಹ್ಮಜ್ಞಾನವಿಲ್ಲದೆಯೇ ಬುದ್ಧಿಯು ನಾಶವಾಗಬಹುದಾದ್ದರಿಂದ ಜ್ಞಾನವೇ ಅನರ್ಥಕವೆಂದಾಗುತ್ತದೆ. ಇದೂ ಅಲ್ಲದೆ ಬುದ್ಧಿಯು ಸಾದಿ ಎನ್ನುವಾಗ ಬುದ್ಧಿಗೆ ಉಪಾದಾನವು ನೇರಾಗಿ ಬ್ರಹ್ಮವೇ ಆದರೆ ಬ್ರಹ್ಮವು ನಾಶವಾಗದೆ ಅದು ಅತ್ಯಂತವಾಗಿ ನಾಶವಾಗದು. ಮಾಯೆಯೇ ಕಾರಣವಾದರೆ ದ್ರಷ್ಟೃವಿನ ಜ್ಞಾನದಿಂದ ಆ ಮಾಯೆಯು ನಾಶವಾಗಲಾರದು ಏಕೆಂದರೆ ಲೋಕದಲ್ಲಿ ಮಾಯಾವಿಯ ಮಾಯೆಯು ನೋಟಕರ ಜ್ಞಾನದಿಂದ ಅಳಿದದ್ದು ಎಲ್ಲಿಯೂ ಕಂಡುಬಂದಿರುವದಿಲ್ಲ. ಇನ್ನೊಂದು ಮಾತು : ಬುದ್ಧಿಯು ನಾಶವಾಗುವದೆಂಬುದು ಆ ಬುದ್ಧಿಗೆ ಬೇಕಾದ ಫಲವಲ್ಲ ; ಏಕೆಂದರೆ ತನ್ನ ನಾಶವು ತನಗೇ ಫಲವಾಗಲಾರದು. ಅದು ಆತ್ಮನಿಗೂ ಫಲವಾಗಲಾರದು ; ಏಕೆಂದರೆ ಆತ್ಮನಿಗೆ ಬುದ್ಧಿಯ ಸಂಬಂಧವಿರುವದಿಲ್ಲ. ಎಲ್ಲಕ್ಕೂ ಮೇಲಾಗಿ ಆತ್ಮನು ಅವಿದ್ಯಾದಿಗಳಿಗೆ ಆಶ್ರಯನಲ್ಲವೆಂದು ಹೇಳಿರುವದು ಶ್ರುತಿವಿರುದ್ಧವಾಗಿರುತ್ತದೆ. ಏಕೆಂದರೆ ''ಅವಿದ್ಯೆಯ ನಡುವೆ ಇರುವವರಾಗಿ'' (ಮುಂ. ೧-೨-೮) ಎಂದು ಶ್ರುತಿಯ (ಉಪಕ್ರಮ)ದಲ್ಲಿದೆ. ಉಪಸಂಹಾರದಲ್ಲಿಯೂ ''ಅಸ್ವಾತಂತ್ರ್ಯದಿಂದ ಮೋಹಗೊಂಡು ಶೋಕಿಸುತ್ತಿರುವನು''(ಮುಂ.೩-೧-೨) ಎಂದಿದೆ. ಬುದ್ಧಿಯಲ್ಲಿರುವ ಅವಿದ್ಯೆಯನ್ನೇ ಆತ್ಮನಲ್ಲಿ ಅಧ್ಯಾಸಮಾಡಿದೆ

ಎನ್ನುವದಾದರೆ 'ಅಧ್ಯಾಸಮಾಡಿದೆ' ಎಂಬ ಮಾತಿಗೇನರ್ಥ ? ಆತ್ಮನ ಮೇಲೆ ಹಾಕಿರುತ್ತದೆ ಎಂದರ್ಥವೊ, ಭ್ರಾಂತಿಯಿಂದ ತೋರುತ್ತದೆಯೆಂದೊ ? ಮೇಲೆ ಹಾಕಿರುತ್ತದೆ ಎಂಬರ್ಥವು ಸರಿಯಲ್ಲ ; ಏಕೆಂದರೆ ಒಂದರ ಧರ್ಮವನ್ನು ಮತ್ತೊಂದರ ಮೇಲೆ ಹಾಕುವದು ಆಗುವದಿಲ್ಲ. ಭ್ರಾಂತಿಯಿಂದ ತೋರುತ್ತದೆ ಎಂದರೆ ಯಾರಿಗೆ ತೋರುತ್ತದೆ ? ಆತ್ಮನಿಗಲ್ಲ ; ಏಕೆಂದರೆ ಅವನಿಗೆ ಅವಿದ್ಯೆಯಿಲ್ಲವೆಂದು ಹೇಳಿರುತ್ತೀರಿ. ಬುದ್ಧಿಗೂ ತೋರುವ ಹಾಗಿಲ್ಲ ; ಏಕೆಂದರೆ ಬುದ್ಧಿಗೆ ಆತ್ಮನು ವಿಷಯನಲ್ಲವಾದ್ದರಿಂದ ಆತ್ಮನಲ್ಲಿರುವ ಅವಿದ್ಯೆಯನ್ನು ಅದು ಕಾಣಲಾರದು. ಆ ಭ್ರಾಂತಿಯೆಂಬುದು ತನಗೆ ಆಶ್ರಯವಾಗಿರುವಾತನ ತತ್ತ್ವಾನುಭವದಿಂದಲೇ ಹೋಗುವದೆಂದು ಪ್ರಸಿದ್ಧವಾಗಿರುವದರಿಂದ, ಈ ಪಕ್ಷದಲ್ಲಿ ಬುದ್ಧಿಯೇ ಅನುಭವಕ್ಕೆ ಆಶ್ರಯವೆಂದು ಹೇಳಬೇಕಾಗುವದು. ಆದ್ದರಿಂದ ಈ ಭಾಷ್ಯಕ್ಕೆ ಸರಿಯಾದ ಅರ್ಥವೇ ಕಾಣುವದಿಲ್ಲವಲ್ಲ!

''ಮೇಲಿನ ಆಕ್ಷೇಪಕ್ಕೆ ಉತ್ತರವನ್ನು ಹೇಳುತ್ತೇವೆ : ಚೈತನ್ಯಕ್ಕೆ ಅಧೀನವಾಗಿ ಅನಾದಿಯಾದ ಅನಿರ್ವಾಚ್ಯವಾಗಿರುವ ಅವಿದ್ಯೆಯು ಚೈತನ್ಯವನ್ನು ಪರಿಚ್ಛೇದಗೊಳಿಸಿ ತನ್ನಿಂದ ಪರಿಚ್ಛಿನ್ನವಾಗಿರುವ ಚೈತನ್ಯವ ಬುದ್ಧಿಯೇ ಮುಂತಾದವುಗಳ ರೂಪವಾಗಿ ವಿವರ್ತವಾಗುತ್ತದೆ. ಅದಕ್ಕೆ ಬ್ರಹ್ಮಾತ್ಮಸಾಕ್ಷಾತ್ಕಾರದಿಂದ ನಿವೃತ್ತಿಯಾಗುವದೆಂದು ನಾವು ಅಂಗೀಕರಿಸಿರುತ್ತೇವೆ. ಆದ್ದರಿಂದ ಅದು ನಿವೃತ್ತಿಯಾದಾಗ ಅದರಿಂದುಂಟಾಗಿದ್ದ ಹೃದಯಗ್ರಂಥಿಯೂ ನಾಶವಾಗುವದೆಂದು ಶ್ರುತಿಯಲ್ಲಿ ಹೇಳಿರುತ್ತದೆ.

''ಭಾಷ್ಯಕಾರರು 'ಅವಿದ್ಯೆಯು ಬುದ್ಧಿಯನ್ನಾಶ್ರಯಿಸಿರುತ್ತದೆ' ಎಂದು ಹೇಳಿರುವದು ಅವಿದ್ಯೆಯೇ ಮುಂತಾದದ್ದು ಅಹಂಕಾರಕ್ಕೆ ವಿಶೇಷಣವಾಗಿ ವ್ಯವಹಾರದಲ್ಲಿ ತೋರುತ್ತದೆ ಎಂಬ ಅಭಿಪ್ರಾಯದಿಂದ ; ಅದು ಆತ್ಮನನ್ನು ಆಶ್ರಯಿಸಿಲ್ಲವೆಂದು ಹೇಳಿರುವದು ಆತ್ಮನು ನಿರ್ವಿಕಾರನೆಂಬ ಅಭಿಪ್ರಾಯದಿಂದ. ಜೀವನ್ಮುಕ್ತನಲ್ಲಿ ಜ್ಞಾನಬಾಧಿತವಾದ ಅವಿದ್ಯೆಯೂ ಅನುವೃತ್ತವಾಗಿ ತೋರಿಕೊಂಡಿರುತ್ತದೆ ಎಂಬುದನ್ನು ಪ್ರಕಟಾರ್ಥವೆಂಬ ಗ್ರಂಥದಲ್ಲಿ ತೋರಿಸಿ ಕೊಟ್ಟಿರುತ್ತೇವೆ ; ಆದ್ದರಿಂದ ಜೀವನ್ಮುಕ್ತಿಯೂ ಉಂಟೆಂಬ ವಾದವು ವಿರುದ್ಧವಲ್ಲ.''

ಮೇಲೆ ಕೊಟ್ಟಿರುವ ವ್ಯಾಖ್ಯಾನವು ಭಾಷ್ಯಕಾರರ ಪ್ರಕ್ರಿಯೆಗೆ ಅಡಿಗಲ್ಲಾಗಿರುವ ಅಧ್ಯಾಸವಾದವು ಪೂರ್ವಪಕ್ಷದ ಹೊಡೆತಕ್ಕೆ ನಿಲ್ಲಲಾರದೆಂ

ಅಭಿಪ್ರಾಯವನ್ನೊಳಗೊಂಡಿದೆ. ಅಧ್ಯಾಸಕ್ಕೂ ಅಂತಃಕರಣಕ್ಕೂ ಉಪಾದಾನವಾದ ಅನಿರ್ವಾಚ್ಯಾವಿದ್ಯೆಯೊಂದು ಆತ್ಮನನ್ನು ಆಶ್ರಯಿಸಿದೆ ಎಂಬ ವಾದವು ಪ್ರಸ್ಥಾನತ್ರಯಭಾಷ್ಯದಲ್ಲೆಲ್ಲ ಹಗಲು ಬತ್ತಿಯನ್ನು ಹಚ್ಚಿಕೊಂಡು ಹುಡುಕಿದರೂ ಕಾಣಬರದೆ ಇರುವ - ನವೀನಪ್ರಕ್ರಿಯೆಯನ್ನು ಮುಂದಕ್ಕೊಡ್ಡಿರುತ್ತದೆ. ಜೀವನ್ಮುಕ್ತಿಯನ್ನು ಉಳಿಸುವದಕ್ಕಾಗಿ ಆತ್ಮನನ್ನು ಆಶ್ರಯಿಸಿ ಆತ್ಮನನ್ನೇ ವಿಷಯಗೊಳಿಸಿಕೊಂಡಿರುವ ಅವಿದ್ಯೆಯ ಲೇಶವು ಜ್ಞಾನಿಗಳಲ್ಲಿಯೂ ಇದೆ - ಎಂದು ಭಾಷ್ಯವಿರುದ್ಧ ಮತ್ತು ಯುಕ್ತಿವಿರುದ್ಧವಾದ ಅಭಿಪ್ರಾಯವನ್ನೇ ಭಾಷ್ಯಕಾರರ ಅಭಿಪ್ರಾಯವೆಂದು ಸಾರಿರುತ್ತದೆ. ಈ ಹೊಸ ಪ್ರಕ್ರಿಯೆಯು ಇಷ್ಟಸಿದ್ಧಿಯೇ ಮುಂತಾದ ಗ್ರಂಥಗಳಲ್ಲಿ ವಿಸ್ತಾರವಾಗಿ ಕಂಡುಬರುತ್ತಿದ್ದರೂ ಇದರ ಸೆಲೆಯೇ ಭಾಷ್ಯದಲ್ಲಿ ಕಂಡುಬರುವದಿಲ್ಲವೆಂದು ನಾವು ''ಶಂಕರಹೃದಯ''ವೆಂಬ ಸಂಸ್ಕೃತಗ್ರಂಥದಲ್ಲಿಯೂ ''ಶಂಕರಸಿದ್ಧಾಂತ''ವೆಂಬ ಕನ್ನಡಗ್ರಂಥದಲ್ಲಿಯೂ ವಿಶದಪಡಿಸಿರುತ್ತೇವೆ. ಪ್ರಸ್ಥಾನತ್ರಯಭಾಷ್ಯಗಳನ್ನು ಮನಮುಟ್ಟಿ ನೋಡುವವರಿಗೆ ಈ ವಿಷಯದಲ್ಲಿ ಯಾವ ಸಂಶಯವೂ ಉಳಿಯಲಾರದೆಂದು ನಾವು ನೆರೆನಂಬಿರುತ್ತೇವೆ. ಈ ವಾದಗ್ರಸ್ತವಿಚಾರವು ಹೇಗಾದರೂ ಇರಲಿ. ಇತ್ತೀಚೆಗೆ ವೇದಾಂತಿಗಳಲ್ಲಿ ಹುಟ್ಟಿಕೊಂಡಿರುವ ಹೊಸ ಪ್ರಕ್ರಿಯೆಗಳನ್ನವಲಂಬಿಸಿರುವ ವ್ಯಾಖ್ಯಾನಗಳ ಬಲದಿಂದಲೇ ಭಾಷ್ಯಾರ್ಥವನ್ನು ನಿರ್ಣಯಿಸುವದಕ್ಕೆ ಹೋಗುವದು ಸರಿಯಲ್ಲವೆಂದು ವಾಚಕರಿಗೆ ಈ ಪೀಠಿಕೆಯಿಂದ ಮನದಟ್ಟಾಗುವದೆಂಬ ನಂಬಿಕೆಯಿಂದ ಇಷ್ಟು ಬರೆಯಬೇಕಾಯಿತಲ್ಲದೆ ವ್ಯಾಖ್ಯಾನಗಳಿಂದ ಯಾ ಪ್ರಯೋಜನವೂ ಇಲ್ಲವೆಂಬುದು ನಮ್ಮ ಅಭಿಪ್ರಾಯವಲ್ಲವೆಂಬುದನ್ನು ವಾಚಕರು ಮರೆಯದಿರಬೇಕು.[1]

ಉಪಸಂಹಾರ

ಮುಂಡಕೋಪನಿಷತ್ತಿನ ನಿಜವಾದ ಆಶಯವನ್ನು ಗೊತ್ತುಪಡಿಸುವದಕ್ಕೆ ಈಗಿನ ಅನುವಾದವೂ ಈ ಪೀಠಿಕೆಯೂ ಎಷ್ಟರಮಟ್ಟಿಗೆ ಉಪಯುಕ್ತವಾಗಿರುವವೆಂಬುದನ್ನು ನಿರ್ಧರಿಸುವ ಕಾರ್ಯವನ್ನು ಓದುಗರಿಗೆ ಬಿಟ್ಟು ಈ ನಮ್ಮ

1. ಈಚೆಗೆ ಕಾರ್ಯಾಲಯದಿಂದ ಪ್ರಕಾಶಿತವಾಗಿರುವ 'ವೇದಾಂತಪ್ರಕಿಯಾ ಪ್ರತ್ಯಭಿಜ್ಞಾ' ಎಂಬ ಸಂಸ್ಕೃತಗ್ರಂಥವನ್ನೂ ಅದರ ಇಂಗ್ಲಿಷು ಪೀಠಿಕೆಯನ್ನೂ ನೋಡಿದರೆ ಇದು ಇನ್ನಷ್ಟು ಸ್ಫುಟವಾಗುವದು.

ಅಲ್ಪಸೇವೆಯನ್ನು ಸ್ವೀಕರಿಸಿ ಅನುಗ್ರಹಿಸಿರುವ ಭಗವತ್ಪಾದರ ಸ್ಮರಣೆಯನ್ನು ಮಾಡಿ ಪೀಠಿಕೆಯನ್ನು ಇಲ್ಲಿಗೆ ನಿಲ್ಲಿಸುವೆವು.

ವ್ಯಯ ಸಂ ll, ಜ್ಯೇಷ್ಠ ಶುದ್ಧ, ಪ್ರತಿಪತ್ತು ಗ್ರಂಥಕರ್ತ

(೧೯೪೯)

ಉಪನಿಷತಿನ ಸಾರ

ಒಂದನೆಯ ಮುಂಡಕ - ಒಂದನೆಯ ಖಂಡ

೧-೨. ಬ್ರಹ್ಮವಿದ್ಯೆಯ ಸಂಪ್ರದಾಯಕರ್ತರಲ್ಲಿ ಮೊದಲನೆಯವನು ದೇವತೆಗಳಲ್ಲೆಲ್ಲ ಹಿರಿಯವನಾದ ಹಿರಣ್ಯಗರ್ಭನು. ಆ ಹಿರಣ್ಯಗರ್ಭಬ್ರಹ್ಮನಿಂದ ಅಥರ್ವನು, ಅಥರ್ವನಿಂದ ಅಂಗಿರನು, ಅದನಿಂದ ಭಾರದ್ವಾಜಸತ್ಯವಹನು, ಅವನಿಂದ ಅಂಗಿರಸ್ಸು. ಹೀಗೆ ವಿದ್ಯೆಯು ಗುರುಶಿಷ್ಯಪರಂಪರೆಯಿಂದ ಒಬ್ಬರಿಂದೊಬ್ಬರಿಗೆ ಬಂದಿತು.

೩. ಶೌನಕನೆಂಬ ಮಹಾಗೃಹಸ್ಥನೊಬ್ಬನು ಈ ಅಂಗಿರಸ್ಸಿನ ಬಳಿಗೆ ಶಿಷ್ಯನಾಗಿ ಬಂದು "ಪೂಜ್ಯನೆ, ಯಾವದೊಂದನ್ನು ತಿಳಿದರೆ ಇದೆಲ್ಲವನ್ನೂ ತಿಳಿದಂತೆ ಆಗುವದು?" ಎಂದು ಕೇಳಿದನು.

೪-೯. ಆಗ ಅಂಗಿರಸ್ಸು ಹೇಳಿದ್ದು ಏನೆಂದರೆ : ಋಗ್ವೇದವೇ ಮುಂತಾದ ಶಬ್ದರಾಶಿಯನ್ನು ಅಧ್ಯಯನಮಾಡಿ ಕರ್ಮೋಪಾಸನೆಗಳನ್ನು ಮಾಡುವ ತಿಳಿವಳಿಕೆಯು ಅಪರವಿದ್ಯೆ, ಕಡಿಮೆಯ ವಿದ್ಯೆಯು. ಆದರೆ ನಾಶವಿಲ್ಲದ ಬ್ರಹ್ಮವನ್ನು ತಿಳಿಯುವ ವಿದ್ಯೆಯು ಪರವಿದ್ಯೆ, ಹೆಚ್ಚಿನ ವಿದ್ಯೆ. ಬ್ರಹ್ಮವು ಅಕ್ಷರವು, ನಾಶವಿಲ್ಲದ್ದು, ಸರ್ವವ್ಯಾಪಿ, ಸೂಕ್ಷ್ಮವಾದದ್ದು, ಎಂದಿಗೂ ಸವೆಯುವದಲ್ಲ. ಅದು ಸಮಸ್ತಭೂತಗಳಿಗೂ ಕಾರಣವಾದ ಸರ್ವಜ್ಞಸ್ವರೂಪವು. ಜೇಡರಹುಳು ದಾರವನ್ನು ತಾನೇ ಮಾಡಿಕೊಂಡು ತನ್ನಲ್ಲಿಯೇ ಒಳಕೊಳ್ಳುವಂತೆಯೂ, ಭೂಮಿಯು ಸ್ಥಾವರಗಳಿಗೆ ಜನ್ಮಸ್ಥಾನವಾಗಿರುವಂತೆಯೂ ಮನುಷ್ಯನ ಶರೀರವು ವಿಲಕ್ಷಣವಾದ ಕೂದಲು ಮುಂತಾದವುಗಳಿಗೆ ಕಾರಣವಾಗಿರುವಂತೆಯೂ ವಿಚಿತ್ರರೂಪದಿಂದಿರುವ ಪ್ರಪಂಚಕ್ಕೆ ಈ ಬ್ರಹ್ಮವು ಕಾರಣವಾಗಿರು

ವದು. ಅವ್ಯಾಕೃತವು ಹೊರಹೊಮ್ಮುವದಕ್ಕೂ ಪ್ರಾಣ, ಮನಸ್ಸು, ಕರ್ಮ, ಲೋಕ- ಇವುಗಳೆಲ್ಲಕ್ಕೂ ಬ್ರಹ್ಮವೇ ಕಾರಣವು. ಇದನ್ನು ತಿಳಿದುಕೊಂಡರೆ ಎಲವನ್ನೂ ಅರಿತಂತೆ ಆಗುವದು.

ಒಂದನೆಯ ಮುಂಡಕ - ಎರಡನೆಯ ಖಂಡ

೧-೧೦. ಅಪರವಿದ್ಯೆಗೆ ಸಂಸಾರವೇ ಗತಿ. ಕರ್ಮವು ಅವಶ್ಯವಾಗಿ ತನ್ನ ಫಲವನ್ನು ಕೊಡುತ್ತದೆಯಾದರೂ ಅದನ್ನು ವಿಧಿವತ್ತಾಗಿ ಮಾಡುವದು ಬಲುಕಷ್ಟ. ನಿತ್ಯವೂ ಕಾಲಕ್ಕೆ ಸರಿಯಾಗಿ ಶಾಸ್ತ್ರದಲ್ಲಿ ಹೇಳಿರುವಂತೆ ಅಗ್ನಿ ಹೋತ್ರಾದಿಕರ್ಮಗಳನ್ನು ಮಾಡಿದರೆ ಸ್ವರ್ಗವನ್ನು ಪಡೆಯಬಹುದು. ಆದರೆ ಇದೇ ಕೊನೆಯ ಶ್ರೇಯಸ್ಸೆಂದು ನಂಬುವವರು ಮೂಢರು ; ಅವರು ತಮಗೆ ತತ್ತ್ವವು ತಿಳಿಯದೆ ಇದ್ದರೂ ತಾವೇ ತಿಳಿದವರೆಂದುಕೊಂಡು ಇದಕ್ಕಿಂತ ಹೆಚ್ಚಿನ ಶ್ರೇಯಸ್ಸಿಲ್ಲ ಎಂದು ಇತರರಿಗೂ ಬೋಧಿಸುತ್ತಾ ಕುರುಡರಿಗೆ ದಾರಿಯನ್ನು ತೋರಿಸುವದಕ್ಕೆ ಹೊರಟಿರುವ ಕುರುಡರಂತೆ ಉಪಹಾಸ್ಯರಾಗಿರುತ್ತಾರೆ. ಏಕೆಂದರೆ ಅವರು ಮಾಡಿದ ಕರ್ಮವು ಸರಿಯಾಗಿ ಮಾಡದೆ ಇರುವಾಗ ಫಲವನ್ನೇ ಕೊಡುವದಿಲ್ಲ ; ಸರಿಯಾಗಿ ಮಾಡಿದರೆ ಸ್ವರ್ಗದಲ್ಲಿ ಪುಣ್ಯಫಲವನ್ನು ಅನುಭವಿಸಿದ ಬಳಿಕ ಈ ಮನುಷ್ಯಜನ್ಮವನ್ನೋ ಅಥವಾ ಇದಕ್ಕಿಂತ ಕೀಳಾದ ಮೃಗಜಂತುಗಳೇ ಮುಂತಾದವುಗಳ ಜನ್ಮವನ್ನೋ ಉಳಿದಿರುವ ಕರ್ಮಕ್ಕೆ ತಕ್ಕಂತೆ ಪಡೆಯಬೇಕಾಗುತ್ತದೆ.

೧೧. ಕೆಲವರು ವಾನಪ್ರಸ್ಥಾಶ್ರಮವನ್ನೂ ಸಂನ್ಯಾಸಾಶ್ರಮವನ್ನೂ ಹೊಂದಿ ತಮ್ಮ ಆಶ್ರಮದ ಕರ್ಮಗಳನ್ನೂ ಹಿರಣ್ಯಗರ್ಭನೇ ಮುಂತಾದ ವಿಷಯದ ಉಪಾಸನೆಯನ್ನೂ ಮಾಡುವರು. ಇವರಿಗೆ ಕೇವಲ ಕರ್ಮಿಗಳಿಗಿಂತ ಹೆಚ್ಚಿನ ಫಲವು ಸಿಕ್ಕುವದು ನಿಜ. ಹಿರಣ್ಯಗರ್ಭನ ಉಪಾಸನೆಯಿಂದ ಸಿಕ್ಕುವ ಬ್ರಹ್ಮಲೋಕವು ಬಹುಕಾಲದವರೆಗೂ ಇರುವದೂ ನಿಜ. ಆದರೆ ಇದೆಲ್ಲವೂ ಸಂಸಾರಗತಿಯಲ್ಲಿಯೇ ಸೇರಿರುತ್ತದೆ.

೧೨-೧೩. ಯಾವನು ಈ ಕರ್ಮೋಪಾಸನೆಗಳಿಂದ ಸಿಕ್ಕುವ ಲೋಕಗಳು ಯಾವವೂ ನಿತ್ಯವಲ್ಲವೆಂಬುದನ್ನು ಮನಗಂಡು ವಿರಕ್ತನಾಗಿರುವನೋ ಅವನು ನಿತ್ಯವಾದ ಮೋಕ್ಷದ ವಿಚಾರಕ್ಕಾಗಿ ಶ್ರೋತ್ರಿಯನೂ

ಬ್ರಹ್ಮನಿಷ್ಠನೂ ಆಗಿರುವ ಗುರುವನ್ನೇ ಶಿಷ್ಯನಾಗಿ ಬಳಿಸಾರುವನು. ಆ ಗುರುವು ಯೋಗ್ಯನಾದ ಈ ಶಿಷ್ಯನಿಗೆ ಮೇಲೆ ಹೇಳಿದ ಅಕ್ಷರವೆಂಬ ಪರಮಾರ್ಥಸತ್ಯವನ್ನು ಸರಿಯಾಗಿ ತಿಳಿಸುವ **ಬ್ರಹ್ಮವಿದ್ಯೆ** ಎಂಬ ಪರವಿದ್ಯೆಯನ್ನು ಉಪದೇಶಿಸುವನು.

ಎರಡನೆಯ ಮುಂಡಕ - ಒಂದನೆಯ ಖಂಡ

೧-೭. ಪರವಿದ್ಯೆಯ ವಿಷಯವಾದ ಅಕ್ಷರವೆಂಬುದು ಪರಮಾರ್ಥವಾಗಿ ಸತ್ಯವಾಗಿರುತ್ತದೆ. ಚೇತನರೂಪರಾದ ಎಲ್ಲಾ ಜೀವರೂ ಬೆಂಕಿಯಿಂದ ಹೊರಡುವ ಕಿಡಿಗಳಂತೆ ಇದರಿಂದಲೇ ಬಂದಿರುವರು. ಎಲ್ಲ ಪ್ರಪಂಚವೂ ಇದರಿಂದಲೇ ಬಂದಿರುವದು. ನಿರಾಕಾರವಾಗಿ, ಒಳಗು ಹೊರಗುಗಳಿಲ್ಲದೆ, ಜನ್ಮಾದಿಗಳಿಲ್ಲದೆ, ಪ್ರಾಣ, ಮನಸ್ಸು - ಮುಂತಾದದ್ದು ಯಾವದೂ ತನ್ನಲ್ಲಿಲ್ಲದ ಸ್ವಭಾವವುಳ್ಳದ್ದು ಈ ಅಕ್ಷರಬ್ರಹ್ಮವು. ಆದರೂ ಈ ಬ್ರಹ್ಮದಿಂದಲೇ ಪ್ರಾಣಾದಿಗಳೆಲ್ಲವೂ ಆಗುತ್ತಿರುವವು. ಆದ್ದರಿಂದ ಅವುಗಳು ಅನೃತ, ಅಕ್ಷರವೊಂದೇ ಸತ್ಯವು.

೪-೯. ಹಿರಣ್ಯಗರ್ಭನೂ ಅತನಿಂದ ಹುಟ್ಟುವಂತೆ ತೋರುವ ವಿರಾಟ್‌ಪುರುಷನೂ ಈ ಅಕ್ಷರದಿಂದಲೇ ಬಂದಿರುತ್ತಾರೆ. ದ್ಯುಲೋಕ, ಪರ್ಜನ್ಯ, ಸಸ್ಯಗಳು, ಪುರುಷ, ಸ್ತ್ರೀ ಎಂಬ ಪಂಚಾಗ್ನಿಕ್ರಮದಿಂದ ಹುಟ್ಟುವ ಶರೀರಗಳು, ಅವರು ಪಠಿಸುವ ವೇದಗಳು, ಅವರು ಮಾಡುವ ಕರ್ಮಗಳು, ಕರ್ಮಕ್ಕೆ ಸಾಧನವಾಗಿರುವ ಧ್ಯಾನಾದಿಗಳು, ತಪಸ್ಸು, ಅಧ್ಯಾತ್ಮಸಾಮಗ್ರಿಗಳಾದ ಇಂದ್ರಿಯಾದಿಗಳು - ಎಲ್ಲವೂ ಅಕ್ಷರದಿಂದಲೇ ಆಗಿರುವವು. ಸಮುದ್ರಗಳು, ಪರ್ವತಗಳು, ನದಿಗಳು, ಮರಗಿಡಗಳು - ಮುಂತಾದವೆಲ್ಲವೂ ಈ ಅಕ್ಷರದಿಂದಲೇ ಆಗಿರುವವು.

೧೦. ಕರ್ಮ, ಉಪಾಸನೆ, ಇವುಗಳ ಫಲ - ಇಷ್ಟೇ ಈ ಪ್ರಪಂಚವೆಂಬುದು. ಇದೆಲ್ಲವೂ ಈ ಅಕ್ಷರವೆಂಬ ಪುರುಷನಿಂದಲೇ ಉಂಟಾಗುತ್ತದೆ. ಪುರುಷನಿಗಿಂತ ಬೇರೆಯಾಗಿ ಯಾವದೊಂದೂ ಇರುವದಿಲ್ಲ. ಯಾವನು ಈ ಪುರುಷನೆಂಬ ತತ್ತ್ವವು ತನ್ನ ಹೃದಯದಲ್ಲಿಯೇ ಇರುವದೆಂದು ಅರಿತುಕೊಳ್ಳುವನೋ ಅವನು ಅವಿದ್ಯೆಯ ಗಂಟನ್ನು ಬಿಚ್ಚಿಕೊಳ್ಳುವನು. ಆದ್ದರಿಂದ ಈ ಪುರುಷನನ್ನು ತಿಳಿದುಕೊಂಡರೇ ಎಲ್ಲವನ್ನೂ ಅರಿತುಕೊಂಡಂತೆ ಆಗುತ್ತದೆ.

ಎರಡನೆಯ ಮುಂಡಕ - ಎರಡನೆಯ ಖಂಡ

೧-೭. ಹೃದಯದಲ್ಲಿರುವ ಈ ಅಕ್ಷರದಲ್ಲಿ ಎಲ್ಲವೂ ಸೇರಿಕೊಂಡಿರುವದರಿಂದ ಇದಕ್ಕೆ ''ಗುಹಾಚರ'' ಎಂಬ ಹೆಸರು ಬಂದಿರುತ್ತದೆ. ಇದು ಸಾಮಾನ್ಯರ ಅರಿವಿಗೆ ಗೋಚರವಾಗುವದಿಲ್ಲ. ಇದು ಅತ್ಯಂತಸೂಕ್ಷ್ಮವಾಗಿರುತ್ತದೆ ; ಇದನ್ನು ಎಲ್ಲಾ ಲೋಕಗಳೂ ಲೋಕವಾಸಿಗಳೂ ಅವಲಂಬಿಸಿಕೊಂಡಿರುವರು. ಉಪನಿಷತ್ತಿನಲ್ಲಿ ಹೇಳಿರುವ ಓಂಕಾರವನ್ನು ಬಿಲ್ಲುಮಾಡಿಕೊಂಡು, ತಾನೇ ಬಾಣವಾಗಿ, ಬ್ರಹ್ಮವೇ ಲಕ್ಷ್ಯವು ಎಂದು ಭಾವಿಸಿ ಹೊರಗಿನ ವಿಷಯಗಳನ್ನೆಲ್ಲ ಮರೆತು ಏಕಾಗ್ರತೆಯಿಂದ ಚಿಂತಿಸುತ್ತಾ ಬಾಣವು ತನ್ನ ಗುರಿಯನ್ನು ಮುಟ್ಟುವಂತೆ ಬ್ರಹ್ಮವನ್ನು ಹೋಗಿ ಸೇರಬೇಕು. ನಮ್ಮ ಶರೀರದಲ್ಲಿಯೇ ಇರುವ ಹೃದಯದಲ್ಲಿರುವ ಈ ಅಕ್ಷರಪುರುಷನನ್ನು ಜಾಣರಾದವರು ಶಾಸ್ತ್ರಾಚಾರ್ಯರ ಉಪದೇಶದಿಂದ ಲಕ್ಷ್ಯವಿಟ್ಟು ನೋಡಿ ಅರಿತುಕೊಳ್ಳುವರು.

೮-೧೦. ಎಲ್ಲಕ್ಕೂ ಹೆಚ್ಚಿನ ಈ ಬ್ರಹ್ಮವನ್ನು ಹೀಗೆ ಕಂಡುಕೊಂಡರೆ ಹೃದಯದ ಗಂಟು ಬಿಚ್ಚಿಕೊಳ್ಳುತ್ತದೆ, ಸಕಲಸಂಶಯಗಳೂ ಕತ್ತರಿಸಿಹೋಗುತ್ತವೆ, ಕರ್ಮಗಳೆಲ್ಲವೂ ಸವೆಯುತ್ತವೆ. ಬೆಳಕುಗಳಿಗೆಲ್ಲ ಬೆಳಕಾಗಿರುವ ಈ ಬ್ರಹ್ಮವನ್ನು ''ಆತ್ಮಪ್ರತ್ಯಯ''ವನ್ನು (ನಾನು ಎಂಬ ಅರಿವನ್ನು) ಕುರಿತು ವಿಮರ್ಶಿಸುತ್ತಾ ಅರಿತುಕೊಳ್ಳಬೇಕು. ಸೂರ್ಯನೇ ಮುಂತಾದ ಎಂಥ ಜ್ಯೋತಿಯಾದರೂ ಈ ಬ್ರಹ್ಮಚೈತನ್ಯದ ಬೆಳಕಿಲ್ಲದೆ ಬೆಳಗಲಾರದು. ಇನ್ನು ಅದರಿಂದ ಇದನ್ನು ಅರಿಯುವದೆಲ್ಲಿ ಬಂತು ?

೧೧. ಹೀಗೆ ವಿಮರ್ಶಿಸಿ ನೋಡಿದರೆ ಈ ಅಕ್ಷರ, ಸತ್ಯ, ಪುರುಷ - ಎಂಬ ಹೆಸರಿನ ಬ್ರಹ್ಮವೇ ಮುಂದೆಯೂ ಹಿಂದೆಯೂ ಎಡಕ್ಕೂ ಬಲಕ್ಕೂ ಮೇಲಕ್ಕೂ ಕೆಳಕ್ಕೂ ಕಾಣುತ್ತಿರುವದು. ಇದೆಲ್ಲವೂ ಬ್ರಹ್ಮವೇ, ಬ್ರಹ್ಮವನ್ನು ಬಿಟ್ಟು ಯಾವದೊಂದೂ ಇರುವದೇ ಇಲ್ಲ.

ಮೂರನೆಯ ಮುಂಡಕ - ಒಂದನೆಯ ಖಂಡ

೧-೪. ಜೀವ, ಈಶ್ವರ - ಇಬ್ಬರೂ ಒಂದೇ ಮರವನ್ನಾಶ್ರಯಿಸಿರುವ ಎರಡು ಹಕ್ಕಿಗಳಂತೆ ಇರುವರು. ಜೀವನಲ್ಲಿ ಕರ್ಮವೂ ಫಲವೂ ಕಾಣುತ್ತಿರುವವು; ಈಶ್ವರನಲ್ಲಿ ಸಾಕ್ಷಿತ್ವವೊಂದೇ ಇರುವದು. ಆ ಈಶ್ವರಸ್ವರೂಪವೇ

ತನ್ನದೆಂದು ಯಾವಾಗ ಅರಿತುಕೊಳ್ಳುವನೋ ಆಗ ಆ ಪರಮಾರ್ಥವಾದ ತನ್ನ ಬ್ರಹ್ಮಾತ್ಮಸ್ವರೂಪದ ಜ್ಞಾನದಿಂದ ಪುಣ್ಯಪಾಪಗಳಿಗೆ ದೂರನಾಗುವನು. ಆಗ ಇವನು ತನಗಿಂತ ಎರಡನೆಯ ವಸ್ತುವನ್ನೇ ಕಾಣುವದಿಲ್ಲ. ಆತ್ಮರತಿಯಾಗಿ, ಆತ್ಮಕ್ರೀಡನಾಗಿ ಕೃತಕೃತ್ಯನಾಗಿದ್ದುಕೊಂಡಿರುವನು.

೫-೯. ಈ ಜ್ಞಾನಕ್ಕೆ ಸತ್ಯವೇ ಮುಂತಾದವು ಸಹಕಾರಿಗಳು. ಸತ್ಯ, ಇಂದ್ರಿಯಗಳನ್ನೂ ಮನಸ್ಸನ್ನೂ ಏಕಾಗ್ರಗೊಳಿಸುವದೆಂಬ ತಪಸ್ಸು, ಬ್ರಹ್ಮ ಚರ್ಯ- ಇವುಗಳಿಂದ ಚಿತ್ತಶುದ್ಧಿಯಾದರೆ ಆತ್ಮಜ್ಞಾನವಾಗುವದು. ಸ್ವಯಂ ಪ್ರಕಾಶವಾದ ಈ ಬ್ರಹ್ಮವು ದೊಡ್ಡದಕ್ಕಿಂತಲೂ ದೊಡ್ಡದಾಗಿ ಸೂಕ್ಷ್ಮವಾದ ದ್ದೆಲ್ಲಕ್ಕಿಂತಲೂ ಸೂಕ್ಷ್ಮವಾಗಿರುತ್ತದೆ ; ಅಜ್ಞಾನಿಗಳಿಗೆ ಬಲುದೂರವಾಗಿ, ಜ್ಞಾನಿಗಳಿಗೆ ಅವರ ಆತ್ಮನೇ ಆಗಿ ತೀರ ಹತ್ತಿರವಿರುತ್ತದೆ. ಇದನ್ನು ಇಂದ್ರಿಯಗಳಿಂದ ಕಾಣಲಾಗುವದಿಲ್ಲ, ವೈದಿಕಕರ್ಮಕ್ಕೆ ಸಿಕ್ಕುವದೂ ಇದಲ್ಲ. ಸಂಪೂರ್ಣವಾದ ಸತ್ಯಾದಿಗಳಿಂದ ಯಾರು ಚಿತ್ತಶುದ್ಧಿಯನ್ನು ಹೊಂದಿ ತಮ್ಮ ಅಂತಃಕರಣದಲ್ಲಿಯೇ ಮುಡುಕುವರೋ ಅವರಿಗೆ ಗೋಚರವಾಗುತ್ತದೆ. ಅಂತಃಕರಣವನ್ನೆಲ್ಲ ತನ್ನ ಚೈತನ್ಯದಿಂದ ವ್ಯಾಪಿಸಿಕೊಂಡಿರುವ ಈ ತತ್ತ್ವವನ್ನು ಅಂಥವರು ಮಾತ್ರ ಬಿಡಿಸಿ ತಿಳಿದುಕೊಳ್ಳುತ್ತಾರೆ.

೧೦. ಈ ಆತ್ಮನನ್ನು ಅರಿತುಕೊಂಡವನು ಸತ್ಯಕಾಮನೂ ಸತ್ಯ ಸಂಕಲ್ಪನೂ ಆಗಿರುತ್ತಾನೆ. ಆದ್ದರಿಂದ ಕಾಮಿಗಳಾದ ಭಕ್ತರು ಅವನನ್ನು ಪೂಜಿಸಿದರೆ ಅವರ ಇಷ್ಟಾರ್ಥಗಳು ನೆರವೇರುವವು.

ಮೂರನೆಯ ಮುಂಡಕ - ಎರಡನೆಯ ಖಂಡ

೧-೨. ಆದರೆ ಯಾರು ನಿಷ್ಕಾಮಬುದ್ಧಿಯಿಂದ ಇವನನ್ನು ಸೇವಿಸುವರೋ ಅವರು ಸಂಸಾರದಿಂದಲೇ ಬಿಡುಗಡೆಯನ್ನು ಹೊಂದುವರು, ಮುಮುಕ್ಷುವಿಗೆ ಕಾಮತ್ಯಾಗವೆಂಬುದು ಮುಖ್ಯವಾದ ಸಾಧನವು. ಏಕೆಂದರೆ ಕಾಮದಿಂದಲೇ ಜೀವರಿಗೆ ಜನ್ಮಾಂತರಗಳಾಗುತ್ತಿರುವವು.

೩-೪. ಎಲ್ಲಾ ಸಾಧನಗಳಿಗಿಂತಲೂ **ಮುಮುಕ್ಷುತ್ವ** ಎಂಬುದು ಪ್ರಧಾನವಾದದ್ದು. ವೇದವನ್ನು ಓದುವದು, ಮತ್ತೊಬ್ಬರಿಗೆ ಹೇಳುವದು, ನೆನಪಿಡುವದು, ಬಹುವಾಗಿ ಶ್ರವಣ ಮಾಡುವದು - ಇವೆಲ್ಲ ಅಷ್ಟು ಮುಖ್ಯವಲ್ಲ.

ಪರಮಾತ್ಮಸ್ವರೂಪವೇ ತನಗೆ ಬೇಕೆಂಬ ಹಂಬಲ ಇರಬೇಕು. ಈ ಹಂಬಲಿಗೆ ಆತ್ಮನಿಷ್ಠೆಯ ಬಲ, ವಿಷಯಾಸಕ್ತಿ ಇಲ್ಲದಿರುವದು, ಶಾಸ್ತ್ರಜ್ಞಾನ, ಅಭಿಮಾನತ್ಯಾಗ - ಇವುಗಳೂ ಸಹಾಯವಾಗುತ್ತವೆ.

೫-೬. ಈ ಬ್ರಹ್ಮವನ್ನು ಪಡೆದವರು ಜ್ಞಾನವೊಂದರಲ್ಲೇ ಸಂತೃಪ್ತರಾಗಿರುವರು, ವಿರಕ್ತರಾಗಿರುವರು, ಪರಮಶಾಂತರಾಗಿರುವರು. ಅವರು ಬದುಕಿರುವಾಗಲೇ ಸರ್ವಗತವಾದ ಬ್ರಹ್ಮವಾಗಿದ್ದುಕೊಂಡು ಸತ್ತಮೇಲೂ ಬ್ರಹ್ಮದಲ್ಲಿಯೇ ಐಕ್ಯವಾಗಿಬಿಡುವರು. ವೇದಾಂತಜ್ಞಾನಕ್ಕೆ ವಿಷಯವಾದ ಬ್ರಹ್ಮಸ್ವರೂಪದ ವಿಷಯಕ್ಕೆ **ನಿಶ್ಚಿತವಾದ ಜ್ಞಾನ, ಸಂನ್ಯಾಸಪೂರ್ವಕವಾಗಿ ಆತ್ಮನಿಷ್ಠೆ**ಯಲ್ಲಿರುವದು-ಇವೆರಡೇ ಇವರಿಗೆ ಬ್ರಹ್ಮಪ್ರಾಪ್ತಿಗೆ ಕಾರಣವಾಗಿರುತ್ತವೆ.

೭-೯. ಮುಕ್ತರ ಶರೀರದ ಬೇರೆಬೇರೆಯ ಭಾಗಗಳು ತಮ್ಮ ತಮ್ಮ ಕಾರಣಗಳಲ್ಲಿ ಸೇರಿಕೊಳ್ಳುವವು. ಕರ್ಮವೂ ಆತ್ಮವೂ ಬ್ರಹ್ಮದಲ್ಲಿ ಒಂದಾಗಿ ಬಿಡುವವು. ಇನ್ನು ಮುಂದೆ ಅವರಿಗೆ ಯಾವ ನಾಮವಾಗಲಿ ರೂಪವಾಗಲಿ ಇರುವದಿಲ್ಲ ; ನದಿಗಳು ಸಮುದ್ರದಲ್ಲಿ ಸೇರಿದ ಮೇಲೆ ಇಂಥ ನದಿ ಎಂಬ ನಾಮರೂಪಗಳು ಇಲ್ಲದೆ, ಎಲ್ಲವೂ ಸಮುದ್ರವೇ ಆಗಿಬಿಡುವಂತೆ ಎಲ್ಲರೂ ಬ್ರಹ್ಮರೇ ಆಗಿಬಿಡುವರು. ಹೆಚ್ಚೇನು ? ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗಿಬಿಡುವನು. ಅವನಿಗೆ ಶೋಕವಿಲ್ಲ, ಧರ್ಮಾಧರ್ಮಗಳಿಲ್ಲ, ಅಜ್ಞಾನವಿಲ್ಲ, ಸಂಸಾರವಿಲ್ಲ, ಅವನ ಕುಲದಲ್ಲಿ ಹುಟ್ಟುವವರೆಲ್ಲ ಬ್ರಹ್ಮಜ್ಞಾನಿಗಳೇ.

೧೦-೧೧. ಈ ಬ್ರಹ್ಮವಿದ್ಯೆಯನ್ನು ಕರ್ಮ, ಉಪಾಸನೆ ಇವುಗಳಿಂದ ಸಂಸ್ಕಾರವನ್ನು ಹೊಂದಿ ಬ್ರಹ್ಮಜ್ಞಾನಕ್ಕೆ ಹಾತುವರಿಯುತ್ತಿರುವ ಶ್ರದ್ಧಾವಂತರಿಗೆ ಮಾತ್ರ ಉಪದೇಶಮಾಡಬೇಕು. ಈ ಮುಂಡಕೋಪನಿಷತ್ತನ್ನು ಅಥರ್ವವೇದದ ಅಧ್ಯಯನಕ್ಕೆ ಹೇಳಿರುವ ಶಿರೋವ್ರತವನ್ನು ಆಚರಿಸುವವರ ಮಾತ್ರ ಅಧ್ಯಯನಮಾಡಬೇಕು.

ಪ್ರಶ್ನೋಪನಿಷತ್ತು

ಪೀಠಿಕೆ

ಮುಂಡಕಪ್ರಶ್ನಗಳ ಸಂಬಂಧ

ಅಥರ್ವವೇದದ ವಿಷಯವಾಗಿ ಮುಂಡಕೋಪನಿಷತ್ತಿನ ಪೀಠಿಕೆಯಲ್ಲಿ ಬರೆದಿರುವದನ್ನು ಓದುಗರು ಇಲ್ಲಿಯೂ ಮನದಂದುಕೊಳ್ಳಬೇಕು. ಮುಂಡಕದಂತೆ ಪ್ರಶ್ನವೂ ಆ ವೇದಕ್ಕೆ ಸೇರಿದ ಉಪನಿಷತ್ತೆಂದು ಆಚಾರ್ಯರು ಅಭಿಪ್ರಾಯಪಟ್ಟಿರುವರಲ್ಲದೆ, ಮುಂಡಕವು ಮಂತ್ರವೆಂದೂ ಪ್ರಶ್ನವು ಬ್ರಾಹ್ಮಣವೆಂದೂ ಅವರು ಬರೆದಿರುತ್ತಾರೆ (ಭಾ. ಭಾ. ೧). ಅಥರ್ವವೇದದ ಅಧ್ಯಯನವು ನಮ್ಮ ದೇಶದಲ್ಲಿ ಕಂಡುಬರುತ್ತಿಲ್ಲವಾದ್ದರಿಂದಲೂ ಈ ವೇದದ ಬ್ರಾಹ್ಮಣವೂ ಪೂರ್ತಿಯಾಗಿ ದೊರೆಯುತ್ತಿಲ್ಲವಾದ್ದರಿಂದಲೂ ಈ ಎರಡು ಉಪನಿಷತ್ತುಗಳೂ ಈ ವೇದದ ಮಂತ್ರಬ್ರಾಹ್ಮಣಗಳ ಯಾವ ಭಾಗದಲ್ಲಿರುವವೋ ತಿಳಿಯದಾಗಿದೆ. ಇದು ಹೇಗಾದರೂ ಇರಲಿ. ಮುಂಡಕದಲ್ಲಿ ವಿವರಿಸಿರುವ ಪರಾಪರವಿದ್ಯೆಯನ್ನು ಅದೇ ಕ್ರಮದಲ್ಲಿ ಇಲ್ಲಿ ವಿಸ್ತರಿಸಿರುವದರಿಂದ ಈ ಉಪನಿಷತ್ತಿಗೆ ಇದು ಬ್ರಾಹ್ಮಣಸ್ಥಾನದಲ್ಲಿರುವದೆಂಬುದು ನಿರ್ವಿವಾದವಾಗಿದೆ.

ಈ ಎರಡು ಉಪನಿಷತ್ತುಗಳಲ್ಲಿಯೂ ಮೊದಲು ಕರ್ಮೋಪಾಸನೆಗಳ ಫಲವನ್ನು ಹೇಳಿರುತ್ತದೆ. ಕರ್ಮಕ್ಕೆ ಅನಿತ್ಯವಾದ ಸ್ವರ್ಗವು ಫಲ ; ಆ ಫಲವು ಮುಗಿದ ಬಳಿಕ ಅವನು ಕರ್ಮಶೇಷಕ್ಕೆ ತಕ್ಕಂತೆ ಜನ್ಮವಾಗುವದು. (ಮುಂ.೧-೨-೧ ರಿಂದ ೧೦ ; ಪ್ರ. ೧-೯, ೧-೧೪), ಕರ್ಮವನ್ನೂ ಉಪಾಸನೆಯನ್ನೂ ಸೇರಿಸಿಕೊಂಡು ಮಾಡಿದರೆ ಮತ್ತೆ ಹಿಂದಿರುಗದ ಬ್ರಹ್ಮಲೋಕವೂ ಕ್ರಮಮುಕ್ತಿಯೂ ಫಲ (ಮುಂ.೧-೨-೧೧ ; ಪ್ರ. ೧-೧೬). ಹೀಗೆ ಕರ್ಮವನ್ನೂ ಕರ್ಮೋಪಾಸನೆಗಳನ್ನೂ ಹೇಳಿದ ಬಳಿಕ ಈ ಎರಡು ಉಪನಿಷತ್ತುಗಳಲ್ಲಿಯೂ ಕೇವಲ ಜ್ಞಾನವನ್ನು ಹೇಳಿರುತ್ತದೆ. ಕರ್ಮಜ್ಞಾನಗಳ ಸ್ವಭಾವತಾರತಮ್ಯವನ್ನು ನೋಡಿದರೆ ಕರ್ಮವನ್ನೂ ಜ್ಞಾನವನ್ನೂ ಸೇರಿಸಿಕೊಂಡರೆ ಮುಕ್ತಿ ಎಂಬ **ಸಮುಚ್ಚಯವಾದಿಗಳ ಮತವು ಯುಕ್ತಿವಿರುದ್ಧವಾಗುವದೆಂದು** ಆಚಾರ್ಯರು ತೋರಿಸಿಕೊಟ್ಟಿರುತ್ತಾರೆಂಬುದನ್ನು ಮುಂಡಕದ ಪೀಠಿಕೆಯಲ್ಲಿ ನಾವು ಆಗಲೆ

ತಿಳಿಸಿರುತ್ತೇವೆ. ಈ ಎರಡು ಉಪನಿಷತ್ತುಗಳಲ್ಲಿಯೂ ಜ್ಞಾನದಿಂದಾಗುವ ಫಲವು ಕೂಡಲೆ ಆಗಿಬಿಡುವದೆಂದು ಹೇಳಿರುತ್ತದೆ. ಆತ್ಮಜ್ಞಾನವಾದ ಕೂಡಲೆ ಸಂಸಾರ ಬಂಧದಿಂದ ಬಿಡುಗಡೆಯಾಗುವದೆಂದು ಈ ಉಪನಿಷತ್ತುಗಳಲ್ಲಿ ಸದ್ಯೋಮುಕ್ತಿಯನ್ನೇ ಪ್ರತಿಪಾದಿಸಿರುತ್ತದೆ (ಮುಂ. ೩-೨-೨, ೩-೨-೬, ೭, ೮ ; ಪ್ರ. ೪-೧೧, ೬-೫). ಈ ಮುಕ್ತಿಯ ಸ್ವರೂಪವನ್ನೂ ಜೀವನ್ಮುಕ್ತನಿಗೆ ಅವಿದ್ಯಾಲೇಶವು ಇರುವದೆಂಬ ಅರ್ವಾಚೀನವೇದಾಂತಿಗಳ ಮತದ ಅಸಾರತೆಯನ್ನೂ ಭಾಷ್ಯಾನುಸಾರವಾಗಿ ನಾವು ಮುಂಡಕದ ಪೀಠಿಕೆಯಲ್ಲಿ ಆಗಲೆ ತೋರಿಸಿಕೊಟ್ಟಿರುತ್ತೇವಾದ್ದರಿಂದ ಇಲ್ಲಿ ಆ ವಿಷಯಕ್ಕೂ ಹೇಳತಕ್ಕದ್ದು ಏನೂ ಉಳಿದಿರುವದಿಲ್ಲ.

ಪ್ರಶ್ನೋಪನಿಷತ್ತಿನ ವಿಷಯಗಳ ವಿಂಗಡ

ಪರವಿದ್ಯೆಗೆ ವಿಷಯವಾಗಿರುವ **ಅಕ್ಷರ**ವೆಂಬ ಪರಬ್ರಹ್ಮವೇ ನಮಗೆಲ್ಲರ ಆತ್ಮನು. ಆ ಅಕ್ಷರದಿಂದಲೇ ಜಗತ್ತು ಹುಟ್ಟಿ, ಅದರಲ್ಲಿಯೇ ಇದ್ದು, ಅದರಲ್ಲಿಯೇ ಲಯವಾಗುವಂತ ಅವಿದ್ಯೆಯಿಂದ ತೋರುತ್ತಿರುವದು ; ಇದನ್ನು ಸರಿಯಾಗಿ ಅರಿತುಕೊಂಡರೆ ನಮ್ಮಗಳ ಆತ್ಮನು ಅದ್ವಿತೀಯನೂ ನಿತ್ಯಶುದ್ಧಮುಕ್ತಸ್ವಭಾವನೂ ಆಗಿರುವನೆಂದು ನಿಶ್ಚಯವಾಗುತ್ತದೆ. ಇಂಥ ಅಕ್ಷರವನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತೆ ಎಂಬುದು ಈ ಎರಡು ಉಪನಿಷತ್ತುಗಳಿಗೂ ಸಮಾನವಾದ ವಿಷಯವಾಗಿರುತ್ತದೆ. ಇದನ್ನು ಪ್ರಶ್ನೋಪನಿಷತ್ತಿನಲ್ಲಿ ತಿಳಿಸಿಕೊಟ್ಟಿರುವ ಕ್ರಮವು ಯಾವದೆಂದರೆ : ಸ್ಥೂಲಪ್ರಪಂಚ, ಸೂಕ್ಷ್ಮಪ್ರಪಂಚ - ಇವುಗಳೊಡನೆ ಆತ್ಮನನ್ನು ಬೆರೆಯಿಸಿ ತಿಳಿದುಕೊಳ್ಳುವಾಗ ಸ್ಥೂಲೋಪಾಧಿಯಿಂದ ಆತ್ಮನು **ಪ್ರಜಾಪತಿ** ಎನಿಸಿಕೊಳ್ಳುತ್ತಾನೆ : ಸೂಕ್ಷ್ಮೋಪಾಧಿಯಿಂದ **ಪ್ರಾಣ** ಎನಿಸಿಕೊಳ್ಳುತ್ತಾನೆ. ವಿಚಾರಮಾಡಿದರೆ ಸ್ಥೂಲವು ಭೋಗ್ಯವಾಗಿಯೂ ಸೂಕ್ಷ್ಮವು ಭೋಕ್ತೃವಾಗಿಯೂ ಇರುತ್ತದೆ, ಆದರೆ ಸ್ಥೂಲವು ಸೂಕ್ಷ್ಮದ ಅಧೀನವಾಗಿರುತ್ತದೆ. ಆದರೆ ಈ ಸೂಕ್ಷ್ಮವೂ ಆತ್ಮನ ಅಧೀನವಾಗಿರುತ್ತದೆ. ಇದಿಷ್ಟೂ ಮೊದಲನೆಯ ಮೂರು ಪ್ರಶ್ನೆಗಳ ಸಾರ. ನಾಲ್ಕನೆಯ ಪ್ರಶ್ನೆಯಲ್ಲಿ ಅವಸ್ಥಾತ್ರಯವಿಚಾರದಿಂದ ಈ ಅರ್ಥವನ್ನು ಮನಗಾಣಿಸಿಕೊಟ್ಟಿರುತ್ತದೆ. ಐದನೆಯ ಪ್ರಶ್ನೆಯಲ್ಲಿ ಓಂಕಾರಧ್ಯಾನದಿಂದ ಈ ಅರ್ಥವನ್ನು ಉಪಾಸಕನು ಕ್ರಮಕ್ರಮವಾಗಿ ಮನಗಾಣುವ ಬಗೆಯನ್ನು ಹೇಳಿಕೊಟ್ಟಿರುತ್ತದೆ ; ಆರನೆಯ ಪ್ರಶ್ನೆಯಲ್ಲಿ ಸಗುಣೋತ್ಪತ್ತಿಸ್ಥಿತಿಲಯವೆಂಬುದು

ಅವಿದ್ಯಾನಿಮಿತ್ತವಾಗಿರುವದರಿಂದ ನಿಜವಾಗಿ ಆತ್ಮನು ನಿತ್ಯಶುದ್ಧನೂ ಅದ್ವಿತೀಯನೂ ಆಗಿರುತ್ತಾನೆಂಬುದನ್ನು ಸ್ಪಷ್ಟಗೊಳಿಸಿರುತ್ತದೆ.

ಪ್ರಶ್ನಭಾಷ್ಯದ ವಿಶೇಷಗಳು

ಮುಂಡಕಪ್ರಶ್ನಗಳ ಸಂಬಂಧವನ್ನು ವಿಶದೀಕರಿಸಿ ಅಕ್ಷರಾಖ್ಯಪರಮಾತ್ಮನ ಜ್ಞಾನದಿಂದ ಸದ್ಯೋಮುಕ್ತಿಯನ್ನೂ ಉಪಾಸನೆಯಿಂದ ಕ್ರಮಮುಕ್ತಿಯನ್ನೂ ನಿರೂಪಣಮಾಡುವ ಪ್ರಸಂಗದಿಂದ ಈ ಉಪನಿಷತ್ತಿನ ಭಾಷ್ಯದಲ್ಲಿ ಆಚಾರ್ಯರವರು ಅವಸ್ಥಾತ್ರಯವಿಚಾರ, ಜ್ಞಾನಸ್ವರೂಪವಿಚಾರ, ಕರ್ತೃತ್ವಭೋಕ್ತೃತ್ವ ವಿಚಾರ - ಎಂಬ ಮೂರು ವಿಚಾರಗಳನ್ನು ಮಾಡಿರುತ್ತಾರೆ. ವೇದಾಂತದ ಅಸಾಧಾರಣಪ್ರಕ್ರಿಯೆಯನ್ನು ಭಾಷ್ಯಕಾರರು ಈ ವಿಚಾರಗಳಲ್ಲಿ ಹೇಗೆ ಸ್ಫುಟಗೊಳಿಸಿರುವರೆಂಬುದನ್ನು ತಿಳಿಯಲಿಚ್ಛಿಸುವವರ ಉಪಯೋಗಕ್ಕಾಗಿ ಈ ಮೂರು ವಿಚಾರಗಳ ಸಾರಸಂಗ್ರಹವಾಗಿ ಇಲ್ಲಿ ಕೆಲವು ವಾಕ್ಯಗಳನ್ನು ಬರೆದಿಡುವೆವು. ಆಚಾರ್ಯರಿಗೆ ಸಮ್ಮತವಾಗಿರುವ ಅದ್ವೈತಸಿದ್ಧಾಂತವು ಸಾರ್ವತ್ರಿಕಾನುಭವವನ್ನೂ ತದನುಸಾರಯಾದ ಯುಕ್ತಿಯನ್ನೂ ಆಧಾರವಾಗಿಟ್ಟುಕೊಂಡೇ ಏರ್ಪಟ್ಟಿರುವದೆಂಬುದು ಓದುಗರಿಗೆ ಇದರಿಂದ ಮನವರಿಕೆಯಾಗುವದೆಂದು ನಮ್ಮ ನಂಬಿಕೆ.

ಅವಸ್ಥಾತ್ರಯವಿಚಾರ

ಅವಸ್ಥಾತ್ರಯವೆಂಬುದು ಎಲ್ಲಾ ಜೀವರುಗೂ ಸಮಾನವಾಗಿರುತ್ತದೆ (೫೯)ಯಾದರೂ ಇದನ್ನು ಅನುಭವಿಸುವ ಆತ್ಮನ ಸ್ವರೂಪವನ್ನು ಕುರಿತು ಉಪಾಸನೆಮಾಡುವವರಿಗೂ ವಿಚಾರಮಾಡುವವರಿಗೂ ಅನಿತರಸಾಧಾರಣವಾದ ಮೋಕ್ಷಫಲವುಂಟು (೬೬, ೮೬) - ಎಂಬುದೊಂದು ವಿಶೇಷೋಪದೇಶವು ಈ ಭಾಷ್ಯದಲ್ಲಿರುತ್ತದೆ. ವಿಚ್ಛರದಲ್ಲಿರುವ ಜೀವರುಗಳ ಸ್ಥೂಲಶರೀರವು ಪ್ರಜಾಪತಿ ಎಂಬ ವಿರಾಟ್‌ಪುರುಷನ ಅಂಶವೆಂದು ಉಪನಿಷತ್ತಿನ ಒಂದನೆಯ ಪ್ರಶ್ನೆಯಲ್ಲಿಯೂ ಕರಣಸಮೂಹವು ಪ್ರಾಣನೆಂಬ ಹಿರಣ್ಯಗರ್ಭನ ಅಂಶವೆಂದು ಎರಡನೆಯ ಪ್ರಶ್ನೆಯಲ್ಲಿಯೂ ಈ ಪ್ರಾಣನು ಆತ್ಮನಿಂದಲೇ ಹುಟ್ಟಿ (೭೯) ಹೊರಗಿನ ಆದಿತ್ಯಾದಿಗಳ ರೂಪದಿಂದಲೂ (೪೫) ಒಳಗೆ ಪ್ರಾಣಾದಿವೃತ್ತಿಗಳ

( ) ಕಂಸದಲ್ಲಿ ಸೂಚಿಸಿರುವ ಸಂಖ್ಯೆಗಳು ಭಾ. ಭಾ.ಗಳನ್ನು ಸೂಚಿಸುತ್ತವೆ.

ರೂಪದಿಂದಲೂ (೪೨ ರಿಂದ ೫೦) ಇದ್ದುಕೊಂಡು ಆತ್ಮನಿಗೆ ಉಪಾಧಿಯಾಗಿರುವನೆಂದು ಮೂರನೆಯ ಪ್ರಶ್ನೆಯಲ್ಲಿಯೂ ಸಿದ್ಧವಾಗಿರುತ್ತದೆ. ಇದನ್ನು ನೆನಪಿಟ್ಟರೆ ಎಚ್ಚರವೆಂಬ ಅವಸ್ಥೆಯಲ್ಲಿ ಇಡಿಯ ಪ್ರಪಂಚವೇ ಆತ್ಮನಿಗೆ ಉಪಾಧಿಯಾಗಿರುವದೆಂದೂ, ಆದ್ದರಿಂದ ಅವಸ್ಥಾತ್ರಯವಿಚಾರವೆಂದರೆ ಅದ್ವಿತೀಯಾತ್ಮನ ವಿಚಾರವೇ ಎಂದೂ ಏರ್ಪಡುತ್ತದೆ. ಈ ಅಭಿಪ್ರಾಯವನ್ನು ಮಾಂಡೂಕ್ಯಭಾಷ್ಯದಲ್ಲಿ ಆಚಾರ್ಯರು ಕಂಠೋಕ್ತವಾಗಿ ಹೇಳಿರುತ್ತಾರೆ ಈ ಉಪನಿಷತ್ತಿನ ಭಾಷ್ಯದಲ್ಲಿಯೂ ಸಂಗ್ರಹವಾಗಿ ಸೂಚಿಸಿರುತ್ತಾರೆ (೫೧, ೭೮). ಈ ಅಭಿಪ್ರಾಯವನ್ನು ಲಕ್ಷ್ಯವಿಟ್ಟು ನಾವು ಸ್ವಪ್ನವನ್ನು ನಿರೂಪಣೆಮಾಡಿದರೆ ಕನಸಿನಲ್ಲಿ ಆತ್ಮನು ಸ್ವಯಂಜ್ಯೋತಿಯಾಗಿರುವನೆಂದೂ ಸುಷುಪ್ತಿಯಲ್ಲಿ ಸರ್ವವೂ ಅಕ್ಷರಸ್ವರೂಪನಾದ ಆತ್ಮನಲ್ಲಿಯೇ ಲಯವಾಗುವದೆಂದೂ ಭಾಷ್ಯಕಾರರು ಪ್ರತಿಪಾದಿಸಿರುವದರ ಪ್ರಯೋಜನವು ಎದ್ದುಕಾಣುತ್ತದೆ. ಮೊದಲನೆಯದಾಗಿ ಜೀವನಿಗೆ ಸ್ವತಃ ಅವಸ್ಥೆಗಳ ಅನುಭವವೆಂಬುದು ಇಲ್ಲವೇಇಲ್ಲವೆಂದೂ ಉಪಾಧಿ ನಿಮಿತ್ತವಾಗಿಯೇ ಅವನಿಗೆ ಜಾಗ್ರತ್ಸ್ವಪ್ನಗಳು ಉಂಟಾಗುತ್ತಿರುವದೆಂದೂ (೬೨) ಆಚಾರ್ಯರು ಹೇಳಿರುವದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಸ್ಥೂಲೋಪಾಧಿಯಿಂದ ಎಚ್ಚರವೆಂಬ ಅವಸ್ಥೆಯೂ ಸೂಕ್ಷ್ಮೋಪಾಧಿಯಿಂದ ಕನಸೆಂಬ ಅವಸ್ಥೆಯೂ ಜೀವನಿಗೆ ಆಗುತ್ತಿರುವದರಿಂದ ಜೀವನು ಸ್ವತಃ ಅವಸ್ಥಾರಹಿತವಾದ ಅಕ್ಷರವೇ ಆಗಿರುತ್ತಾನೆಂದು ಇದರಿಂದಲೇ ನಿರ್ಣಯಿಸಬಹುದಾಗಿರುತ್ತದೆ. ಕನಸಿನಲ್ಲಿ ವಾಸನಾರೂಪವಾದ ಉಪಾಧಿಯೇ ಸರ್ವಕರಣವಿಷಯಗಳೂ ಆಗಿರುವದರಿಂದ ಅದನ್ನು ಬೆಳಗುತ್ತಿರುವ ಆತ್ಮಚೈತನ್ಯವು **ಸ್ವಯಂಜ್ಯೋತಿಯು**, ಮತ್ತೊಂದರ ನೆರವನ್ನು ಕೋರದೆ ವಾಸನೆಗಳನ್ನು ಬೆಳಗುತ್ತಿರುವದು ಎಂತಲೂ ನಿದ್ರೆಯಲ್ಲಿ ಯಾವ ಉಪಾಧಿಗಳ ಸಂಬಂಧವೂ ಇಲ್ಲದಿರುವದರಿಂದ ಅಲ್ಲಿಯೂ ಸ್ವಯಂ ಜ್ಯೋತಿಯೆಂತಲೂ ಭಾಷ್ಯಕಾರರು ಹೇಳಿರುತ್ತಾರೆ (೬೪ ರಿಂದ ೬೭).

ಎರಡನೆಯದಾಗಿ ಆತ್ಮನು **ಸ್ವಯಂಜ್ಯೋತಿ ಎಂದು ಮುಂತಾಗಿ ವ್ಯವಹರಿಸುವದೂ ಅವಿದ್ಯಕ** (೬೩)ವೆಂದೂ ಆಚಾರ್ಯರು ಹೇಳಿರುವದನ್ನು ನಾವು ಮನಸ್ಸಿಗೆ ಹತ್ತಿಸಿಕೊಳ್ಳಬೇಕು. ಕನಸಿನಲ್ಲಿ ವಾಸನೆಗಳನ್ನು ಕಾಣುವದೆಂಬುದೂ ಅವಿದ್ಯೆಯಿಂದ, ತನ್ನಿನಿದ್ರೆಯಲ್ಲಿ ಆ ಉಪಾಧಿಗಳ ಸಂಬಂಧವಿಲ್ಲವೆಂಬುದೂ ಅವಿದ್ಯೆಯಿಂದ (೬೬). ನಿಜವಾಗಿ ನೋಡಿದರೆ ಸುಷುಪ್ತಿಯಲ್ಲಿ ಅವಿದ್ಯಾಕೃತವಾದ ಪೃಥಿವ್ಯಾದಿಭೂತಗಳೂ ಅವುಗಳ ಕಾರಣವಾದ ತನ್ಮಾತ್ರೆಗಳೂ

ಭೌತಿಕವಾದ ಸರ್ವಕರಣಗಳೂ ಸಂಪೂರ್ಣವಾಗಿ ಇಲ್ಲವಾಗುವದರಿಂದ ಆತ್ಮಸ್ವರೂಪವು ಅದ್ವಿತೀಯವಾದ ತನ್ನ ಸ್ವಭಾವದಿಂದಲೇ ಇರುತ್ತಿರುವದು (೬೯ ೭೦, ೭೧). ಆ ಅವಸ್ಥೆಯಲ್ಲಿ ಈಗ ತೋರುತ್ತಿರುವ ಸೋಪಾಧಿಕವಾದ ಜೀವ ರೂಪವೂ ಶುದ್ಧವಾದ ಅಕ್ಷರವೆಂಬ ಪರಮಾತ್ಮರೂಪದಲ್ಲಿಯೇ ಒಂದಾಗಿರುತ್ತದೆ (೭೩). ಯಾವ ಸ್ವರೂಪದಲ್ಲಿ ಹೀಗೆ ಎಲ್ಲವೂ ಒಂದಾಗಿರುವದೋ ಆ ಅಕ್ಷರವೆಂಬ ಪರಮಾತ್ಮಸ್ವರೂಪವನ್ನು ಆತನು ಸರ್ವವೂ ಸರ್ವಜ್ಞನೂ ಆಗಿರುತ್ತಾನೆ (೪-೧೦, ೧೧) ಎಂಬರ್ಥವನ್ನು ತಿಳಿಸುವ ಮಂತ್ರಗಳು ಅವಸ್ಥಾತ್ರಯವಿಚಾರದಿಂದಾಗುವ **ಸದ್ಯೋಮುಕ್ತಿಯನ್ನು** ತಿಳಿಸುತ್ತವೆ ಎಂದು (೭೬, ೭೭) ಆಚಾರ್ಯರವರು ತಿಳಿಸಿಕೊಟ್ಟಿರುತ್ತಾರೆ.

ಅವಸ್ಥಾತ್ರಯದಲ್ಲಿರುವ ಆತ್ಮಸ್ವರೂಪವನ್ನು ಹೀಗೆ ನೇರಾಗಿ ವಿಚಾರದಿಂದ ಅರಿತು ತನ್ನಿಷ್ಠೆಯನ್ನು ಹೊಂದಲಾರದೆ ಇರುವವರು **ಓಂಕಾರದಮೂಲಕವಾಗಿ** ಉಪಾಸನೆಮಾಡಿ ಕಾಲಾಂತರದಲ್ಲಾದರೂ ಜ್ಞಾನವನ್ನು ಹೊಂದಿ **ಕ್ರಮಮುಕ್ತಿಯನ್ನು** ಪಡೆಯಬಹುದು ಎಂಬ ಅಭಿಪ್ರಾಯವನ್ನು ಐದನೆಯ ಪ್ರಶ್ನೆಯಲ್ಲಿ ಭಾಷ್ಯಕಾರರು ತೋರಿಸಿಕೊಟ್ಟಿರುತ್ತಾರೆ. ಪರವಿದ್ಯೆಯಿಂದ ಮುಕ್ತಿಯನ್ನು ಪಡೆಯಬಹುದೆಂದು ತಿಳಿಸುವದಕ್ಕಾಗಿಯೇ ಹೊರಟಿರುವ ಸಂದರ್ಭದಲ್ಲಿ ಈ ಕ್ರಮಮುಕ್ತಿಯನ್ನು ಹೇಳಿರುವದು ಯಾವಾಗ ಮುಕ್ತಿಯಾದರೂ ಅಕ್ಷರಾಖ್ಯಪುರುಷನ ಸ್ವರೂಪದ ಜ್ಞಾನದಿಂದಲೇ ಆಗಬೇಕಾಗಿರುವದೆಂದು ತಿಳಿಸುವದಕ್ಕೆಂದು ನಿಶ್ಚಯಿಸಬೇಕು. ಓಂಕಾರವನ್ನು ಕೇ ಉಪಾಸನೆಗೇ ಅಲ್ಲದೆ ಜ್ಞಾನಕ್ಕೆ ಸಾಧನವಾಗಿ ಮಾಡಿಕೊಂಡಿರುವದು ಮುಂಡಕಭಾಷ್ಯ (೨-೨-೪), ಮಾಂಡೂಕ್ಯಭಾಷ್ಯ (೭) - ಇವುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇದರಂತೆ **ಪ್ರಾಣವಿಚಾರಣಪ್ರಕರಣದಲ್ಲಿ** ಪ್ರಾಣಗಳನ್ನು ಅಗ್ನಿಗಳೆಂದು ಉಪಾಸನೆ ಮಾಡುವವನನ್ನು ಉದಾನವಾಯುವು ಪ್ರತಿದಿನವೂ ಸುಷುಪ್ತಿಯಲ್ಲಿ ಅಗ್ನಿಹೋತ್ರಸ್ವರ್ಗಸ್ಥಾನೀಯ ಪ್ರಾಣಗಳನ್ನು ಸೇರುತಿರುವದೆಂದು ಹೇಳಿರುವದು ಸುಷುಪ್ತಿಯಲ್ಲಿ ಅಕ್ಷರಬ್ರಹ್ಮವೊಂದೇ ಇರುವದೆಂಬ ತತ್ತ್ವವನ್ನು ಅವಲಂಬಿಸಿಯೇ ಮಾಡಿರುವ ಉಪಾಸಕನ ಸ್ತುತಿಯೆಂದು ತಿಳಿಯಬೇಕು. ಏಕೆಂದರೆ ಸುಷುಪ್ತಿಯೆಂಬುದು ಕಾರ್ಯಕರಣವ್ಯವಹಾರವಿಲ್ಲದ ಅವಸ್ಥೆಯೆಂದು ತಿಳಿಸುವದೇ ಈ ಮಹಾಪ್ರಕರಣದ ಉದ್ದೇಶವಾಗಿರುತ್ತದೆ (೫೮, ೬೯).

ಜ್ಞಾನಸ್ವರೂಪವಿಚಾರ

ಅಕ್ಷರನೆಂಬ ಪರಮಾತ್ಮನಿಂದಲೇ ಪ್ರಾಣಾದಿಕಲೆಗಳು ಹುಟ್ಟಿ, ಅವನಲ್ಲಿಯೇ ತೋರಿಕೊಳ್ಳುತ್ತಿದ್ದು, ಅವನಲ್ಲಿಯೇ ಅಡಗುತ್ತಿರುವದರಿಂದ ಆ ಆತ್ಮನು ಅದ್ವಿತೀಯನು ಎಂದು ತಿಳಿಸುವದಕ್ಕೋಸ್ಕರ ಹದಿನಾರು ಕಲೆಗಳೂ ಅಕ್ಷರನೆಂಬ ಪುರುಷನಿಂದ ಹುಟ್ಟುತ್ತವೆ ಎಂದು ಆರನೆಯ ಪ್ರಶ್ನೆಯಲ್ಲಿ (೬-೨) ಹೇಳಿರುತ್ತದೆ. ಭಾಷ್ಯಕಾರರು ಶ್ರುತಿಯಲ್ಲಿ ಹೇಳಿರುವ ಈ ವಿಷಯವನ್ನು ಅನುಭವಾರೂಢವಾಗಿ ಮಾಡಿಕೊಳ್ಳುವದಕ್ಕಾಗಿ ಚಾರ್ವಾಕರು, ವೈಶೇಷಿಕರು, ವಿಜ್ಞಾನವಾದಿಗಳೂ ಶೂನ್ಯವಾದಿಗಳೂ ಆದ ಬೌದ್ಧರು - ಎಂಬ ಮತಾಂತರದವರ ಪ್ರಕ್ರಿಯೆಗಿಂತ ಅತ್ಯಂತವಿಲಕ್ಷಣವಾಗಿರುವ **ಅದ್ವಿತೀಯಕೂಟಸ್ಥ ಚೈತನ್ಯವಾದ**ವೆಂಬ ತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿರುತ್ತಾರೆ. ಈ ಸಂದರ್ಭದಲ್ಲಿ ಮಾಡಿರುವ ಚರ್ಚೆಯನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲಿಸುವಂತೆ ಇಲ್ಲಿ ಸಂಗ್ರಹಿಸಿಕೊಡುವೆವು.

(ಅ) ಜ್ಞಾನವು (ಅರಿವು) ಎಂಬುದು ಭೂತಧರ್ಮಗಳೆಂದು ಲೋಕಾಯತಿಕರಾದ **ಚಾರ್ವಾಕರ** ಮತ. ಚೈತನ್ಯವು ವಿಷಯಿಯಾಗಿರುವದರಿಂದ ತನಗೆ ವಿಷಯವಾಗಿರುವ ಭೂತಗಳಿಗೆ ಅದು ಧರ್ಮ ಆಗಲಾರದೆಂಬುದು ಸ್ಪಷ್ಟವಾಗಿರುವದರಿಂದ ಆಚಾರ್ಯರು ಆ ಮತವನ್ನು ಖಂಡಿಸುವದಕ್ಕೆ ಹೋಗಿಲ.

(ಆ) ಜ್ಞಾನವು ಆತ್ಮನ ಧರ್ಮವಾಗಿ ಹುಟ್ಟಿಸಾಯುತ್ತಿರುವದು, ಆತ್ಮನು ಚೈತನ್ಯಸ್ವರೂಪನಲ್ಲ - ಎಂಬ **ವೈಶೇಷಿಕಾದಿ**ಗಳಿಗೆ ಜ್ಞೇಯವಿಲ್ಲದಮಾತ್ರದಿಂದ ಜ್ಞಾನವು ಇಲ್ಲವೆಂದು ಹೇಳುವ ಬೌದ್ಧಸಿದ್ಧಾಂತವೂ ಬಂದೊದಗುತ್ತದೆ (೯೨). ಆದ್ದರಿಂದ ಒಂದೇ ರೂಪವಾಗಿರುವ ಆತ್ಮಸ್ವರೂಪಚೈತನ್ಯವನ್ನು ಅವರೂ ಒಪ್ಪಬೇಕು ಎಂದು ಭಾಷ್ಯಕಾರರು ಹೇಳಿರುತ್ತಾರೆ.

(ಇ) ಜ್ಞಾನವು ಜ್ಞೇಯವಿಲ್ಲದೆ ಇರಲಾರದು ; ಜ್ಞಾನವು ಕ್ಷಣಿಕವಾಗಿರುತ್ತದೆ - ಎಂಬ **ವಿಜ್ಞಾನವಾದಿಗಳ ಮತದ ಖಂಡನೆಯ** ಸಾರವೇನೆಂದರೆ :

ಜ್ಞಾನದ ಅಭಾವವನ್ನು ಕಲ್ಪಿಸುವದಕ್ಕೂ ಜ್ಞಾನವು ಬೇಕೇ ಬೇಕಾಗುತ್ತದೆ ; ಏಕೆಂದರೆ ಜ್ಞಾನದಂತೆ ಜ್ಞಾನಾಭಾವವೂ ಜ್ಞೇಯವೇ ಆಗಿರುತ್ತದೆ (೯೨).

ಜ್ಞಾನವು ಜ್ಞೇಯವಿರುವವರೆಗೆ ಇದ್ದೇ ಇರಬೇಕೆಂದು ಈ ವಾದಿಗಳು ಹೇಳುತ್ತಿರುವದರಿಂದ ಜ್ಞಾನವು ನಿತ್ಯವೆಂದೇ ಅವರು ಒಪ್ಪಬೇಕಾಗುತ್ತದೆ. ಜ್ಞೇಯವು ಜ್ಞಾನವಿಲ್ಲದೆಯೂ ಇರಬಹುದೆಂದು ಅವರು ಹೇಳುವದಾದರೆ ಜ್ಞೇಯವಿಲ್ಲದಿದ್ದರೆ ಜ್ಞಾನವಿರಬಾರದು ಎಂಬ ಅವರ ವಾದಕ್ಕೆ ಆಧಾರವೇ ಇಲ್ಲದೆ ಹೋಗುತ್ತದೆ. ಜ್ಞಾನವು ತನ್ನನ್ನು ತಾನೇ ಅರಿಯುತ್ತದೆ ಎಂಬುದು ಈ ವಾದಿಗಳ ಅಂಗೀಕಾರವಾಗಿರುವದರಿಂದ ಜ್ಞಾನಜ್ಞೇಯಸ್ವಭಾವಗಳಲ್ಲಿ ಯಾವ ಹೆಚ್ಚುಕಡಿಮೆಯನ್ನೂ ಇವರು ತೋರಿಸುವದಕ್ಕೆ ಬರುವದಿಲ್ಲ : ಆದ್ದರಿಂದ ಜ್ಞೇಯವು ಜ್ಞಾನಕ್ಕಿಂತ ಬೇರೆಯಾಗಿರಬಹುದಾದರೂ ಜ್ಞಾನವು ಮಾತ್ರ ಜ್ಞೇಯವನ್ನು ಬಿಟ್ಟಿರಲಾರದು - ಎಂದು ಕಲ್ಪಿಸುವದಕ್ಕೆ ಆಗುವದಿಲ್ಲ (೯೩). ಸುಷುಪ್ತಿಯಲ್ಲಿ ಹೊರಗಿನ ಜ್ಞೇಯಗಳನ್ನು ಒಪ್ಪದಿದ್ದರೂ ತನ್ನನ್ನು ತಾನು ಅರಿಯುವ ಜ್ಞಾನವು ಅಲ್ಲಿದೆ ಎಂದು ಅವರು ಒಪ್ಪುತ್ತಿರುವದರಿಂದ ಹೊರಗಿನ ಜ್ಞೇಯಗಳ ಅಭಾವಕ್ಕಿಂತ ಆ ಜ್ಞಾನವು ಬೇರೆಯೆಂದೂ ಆ ಜ್ಞಾನವೇ ಅಭಾವ ರೂಪವಾದ ಜ್ಞೇಯವನ್ನೂ ಅರಿಯುವದೆಂದೂ ಅವಶ್ಯವಾಗಿ ಒಪ್ಪಬೇಕಾಯಿತು (೯೪). ಇದೂ ಅಲ್ಲದೆ ಜ್ಞಾನವು ತನ್ನನ್ನು ತಾನು ಅರಿಯುವದೆಂದರೂ ಹೀಗೆ ತನ್ನನ್ನು ತಾನು ಅರಿಯುವದೆಂಬುದನ್ನು ಅರಿಯುವದಕ್ಕೆ ಮತ್ತೊಂದು ಜ್ಞಾನ, ಅದನ್ನು ಅರಿಯುವದಕ್ಕೆ ಇನ್ನೊಂದು ಜ್ಞಾನ - ಹೀಗೆ ಅನವಸ್ಥಾದೋಷವು ಗಂಟು ಬೀಳುತ್ತದೆ. ಜ್ಞಾನವು ತನ್ನನ್ನು ತಾನು ಅರಿತುಕೊಂಡರೂ ತಾನು ಹಾಗೆ ಅರಿಯುವನೆಂಬುದನ್ನು ಅರಿತುಕೊಳ್ಳಲಾರದೆ ಇರುವದರಿಂದ ಅಸರ್ವಜ್ಞವೆಂದೂ ಆಗುತ್ತದೆ.

ಆದರೆ **ಕೂಟಸ್ಥಚೈತನ್ಯವಾದಿಗಳ ಮತ**ದಲ್ಲಿ ಈ ಯಾವ ದೋಷವೂ ಬರುವಂತಿಲ್ಲ. ಈ ಸಿದ್ಧಾಂತದಲ್ಲಿ ಚೈತನ್ಯವು ಜ್ಞೇಯವಲ್ಲ, ಪರಿಪೂರ್ಣ ಜ್ಞಾನವೇ ; ಆದ್ದರಿಂದ ಅದನ್ನು ಅರಿಯುವದಕ್ಕೆ ತಾನಾಗಲಿ ಮತ್ತೊಂದು ಜ್ಞಾನವಾಗಲಿ ಬೇಕಿಲ್ಲವಾದ್ದರಿಂದ ಜ್ಞಾನವು ಸರ್ವಜ್ಞವಲ್ಲವೆಂಬ ದೋಷವಾಗಲಿ ಅನವಸ್ಥಾ ದೋಷವಾಗಲಿ ಬರುವದಿಲ್ಲ (೯೫). ಈ ಚೈತನ್ಯಕ್ಕೆ ಹುಟ್ಟಿಲ್ಲ, ಸಾವಿಲ್ಲ ; ಜ್ಞೇಯವಾದ ಕಲೆಗಳಿಗೆ ಹುಟ್ಟುಸಾವುಗಳುಂಟೆಂಬುದನ್ನು ಈ ಚೈತನ್ಯವೇ ಅರಿಯುತ್ತಿರುವದು. ಯಾವ ಜ್ಞೇಯವಸ್ತುವಾದರೂ ಜ್ಞಾತವಾಗಿಯೇ ಇರಬೇಕಾದ್ದರಿಂದ ಜ್ಞಾನವನ್ನು ಬಿಟ್ಟು ಜ್ಞೇಯವು ಇರಲಾರದು (೯೧), ಜ್ಞಾನವು ಜ್ಞೇಯವಿಲ್ಲದಿದ್ದರೆ ಮತ್ತೊಂದು ಜ್ಞೇಯವನ್ನು ಬೆಳಗುತ್ತಿರುವಲ್ಲಿಯವರೆಗೂ

(೯೧) ಯಾವ ಜ್ಞೇಯವೂ ಇಲ್ಲದ ಸುಷುಪ್ತಿಯಲ್ಲಿಯೂ ಅದು ಇರುತ್ತಿರುವದರಿಂದಲೂ (೯೨) ಅದು ಇದ್ದಂತೆಯೇ ಇರುವದೆಂದೂ ನಾಮರೂಪಾದ್ಯುಪಾಧಿಗಳಿಂದ ಅದ್ವಿತೀಯಚೈತನ್ಯವೇ ನಾನಾವಿಧವಾಗಿ ತೋರುತ್ತಿರುವದೆಂದೂ (೯೫) ಸಿದ್ಧವಾಗುತ್ತದೆ - ಎಂದು ಭಾಷ್ಯಕಾರರು ತಮ್ಮ ಸಿದ್ಧಾಂತದ ಹೆಚ್ಚುಗಾರಿಕೆಯನ್ನು ತಿಳಿಸಿಕೊಟ್ಟಿರುತ್ತಾರೆ.

ಕರ್ತೃತ್ವಭೋಕ್ತೃತ್ವವಿಚಾರ

ಅಕ್ಷರನೆಂಬ ಹೆಸರಿನ ಪರಮಾತ್ಮನಿಂದಲೇ ಪ್ರಾಣಾದಿಕಲೆಗಳು ಅವಿದ್ಯಾನಿಮಿತ್ತವಾಗಿ ಹುಟ್ಟಿ, ಅವನಲ್ಲಿಯೇ ಇದ್ದು, ಕೊನೆಗೆ ಅವನಲ್ಲಿಯೇ ಲಯವಾಗುತ್ತವೆ. ಕಲೆಗಳು ಹೀಗೆ ಅವಿದ್ಯಾಕೃತವಾಗಿ ಹುಟ್ಟುತ್ತಿರುವದರಿಂದ ವಿದ್ಯೆಯಿಂದ ಅವುಗಳು ಇಲ್ಲವೆಂದು ಮನಗಂಡು ಮೃತ್ಯುರೂಪವಾದ ಸಂಸಾರದಿಂದ ಬಿಡುಗಡೆಯನ್ನು ಹೊಂದಬಹುದು (೧೧೫) ಎಂಬುದು **ಉಪನಿಷತ್ತಿನ ಸಿದ್ಧಾಂತವು.** ಆದ್ದರಿಂದಲೇ ಈ ಉಪನಿಷತ್ತಿನ ಕೊನೆಯಲ್ಲಿ 'ಅವಿದ್ಯಾಸಾಗರದಿಂದ ಕಡೆಹಾಯಿಸಿರುವ ನೀನೇ ನಮಗೆ ತಂದೆ'' (೬-೮) ಎಂದು ಶಿಷ್ಯರು ಗುರುವಿಗೆ ತಮ್ಮ ಕೃತಜ್ಞತೆಯನ್ನು ತೋರಿಸಿರುತ್ತಾರೆ.

ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರವು ಅವಿದ್ಯಾಕೃತವಾದ ಉಪಾಧಿಗಳಿಂದ ಆಗಿರುತ್ತದೆ ಎಂಬ ಈ ಸಿದ್ಧಾಂತಕ್ಕೆ ಅದು ಪರಮಾರ್ಥವಾಗಿಯೇ ಇದೆ ಎಂಬ ವಾದಗಳು ವಿರುದ್ಧವಾಗಿವೆ. ಈಶ್ವರನ ಸಂಕಲ್ಪದಿಂದ ಪರಮಾಣುಗಳು ಒಂದರೊಡನೊಂದು ಬೆರೆತು ಸತ್ಯವಾದ ಪ್ರಪಂಚವು ಸೃಷ್ಟಿಯಾಗುತ್ತದೆ. ಜೀವರು ಕರ್ತೃಭೋಕ್ತೃಸ್ವರೂಪರೇ ಆಗಿರುತ್ತಾರೆ. ಅವರಿಗೆ ದೇಹಾದಿಗಳಿಗಿಂತ ವ್ಯತಿರಿಕ್ತವಾಗಿರುವ ತಮ್ಮ ಸ್ವರೂಪದ ವಿಷಯದಲ್ಲಿರುವ ತಪ್ಪುತಿಳಿವಳಿಕೆಯಿಂದ ಸತ್ಯವಾದ ಬಂಧವುಂಟಾಗಿರುತ್ತದೆ ಎಂಬುದು **ವೈಶೇಷಿಕರ ಪ್ರಕ್ರಿಯೆ.** ತ್ರಿಗುಣಾತ್ಮಕಪ್ರಧಾನವೆಂಬ ಪ್ರಕೃತಿಯು ಮಹತ್ತು, ಅಹಂಕಾರ - ಮುಂತಾದ ರೂಪದ ಜಗತ್ತಾಗಿ ಸತ್ಯವಾಗಿಯೇ ಪರಿಣಮಿಸಿರುತ್ತದೆ. ಅಸಂಗರಾದ ಪುರುಷರಿಗೆ ತಮ್ಮ ಸ್ವರೂಪವನ್ನೂ ಪ್ರಕೃತಿಯ ಪರಿಣಾಮಗಳಾದ ಅಂತಃಕರಣಾದಿಗಳನ್ನೂ ಬಿಡಿಸಿಕೊಂಡು ಅರಿಯದೆ ಇರುವ ಅವಿವೇಕದಿಂದ ಪರಮಾರ್ಥವಾಗಿಯೇ ಭೋಕ್ತೃತ್ವವೆಂಬ ಬಂಧವಾಗಿದೆ ಎಂಬುದು **ಸಾಂಖ್ಯರ ಪ್ರಕ್ರಿಯೆ.** ಈ ಎರಡು ಪ್ರಕ್ರಿಯೆಗಳೂ ಅತ್ಯಂತಭಿನ್ನವಾಗಿಯೂ ಪರಸ್ಪರವಿರುದ್ಧವಾಗಿಯೂ ಇದ್ದರೂ

ಅನಾತ್ಮಪ್ರಪಂಚವೆಲ್ಲವೂ ಅವಿದ್ಯಕವೆಂಬ ಸಿದ್ಧಾಂತಕ್ಕೆ ಎರಡೂ ಪ್ರತಿಪಕ್ಷಗಳೇ ಆಗಿರುತ್ತವೆ. ಸಾಂಖ್ಯರ ಸಿದ್ಧಾಂತವೂ ದ್ವೈತವೇ ಆದರೂ ಆತ್ಮನು ಕೂಟಸ್ಥನೆಂದೂ ಅಸಂಗನೆಂದೂ ಹೇಳುವ ಅದ್ವೈತಕ್ಕೆ ಹತ್ತಿರವಾಗಿರುವದರಿಂದಲೂ ಸಾಂಖ್ಯಮತದಲ್ಲಿ ಯಾವ ಭಾಗವು ತಮಗೆ ಅಸಮ್ಮತವೆಂಬುದನ್ನು ತಿಳಿಸುವದಕ್ಕೇ ಆಚಾರ್ಯರು ಹೆಚ್ಚಾಗಿ ಪ್ರಯತ್ನಿಸಿರುತ್ತಾರೆ.

''ಆತ್ಮನು ಕರ್ತೃವಲ್ಲ, ಪ್ರಧಾನವೇ ಸಂಸಾರಮೋಕ್ಷಗಳಿಗೆ ಕರ್ತೃ ; ಆದರೆ ಆತ್ಮನು ನಿಜವಾಗಿಯೂ ಸಂಸಾರಮೋಕ್ಷಗಳನ್ನು ಅನುಭವಿಸುವ ಭೋಕ್ತೃವಾಗಿರುತ್ತಾನೆ'' ಎಂಬ ಸಾಂಖ್ಯರ ವಾದವನ್ನೇ ಮುಖ್ಯವಾಗಿ ಇಲ್ಲಿ ಖಂಡಿಸಿರುತ್ತದೆ - (೧೦೧). ಸಾಂಖ್ಯನ ಪ್ರಕ್ರಿಯೆ ಏನೆಂದರೆ : ಪ್ರಧಾನವು ಜಡವಾದ್ದರಿಂದ ಮಹತ್ತು, ಅಹಂಕಾರ - ಮುಂತಾದ ತತ್ತ್ವಾಂತರಗಳಾಗಿ ಪರಿಣಮಿಸಬಹುದು. ಅದು ಸಾಪಯವದವಾಗಿರುವದರಿಂದ ಬೇರೆಬೇರೆಯ ರೂಪಗಳನ್ನು ಪಡೆಯುವ ಅಶುದ್ಧವಸ್ತುವಾಗಿರುತ್ತದೆ. ಆತ್ಮನೇ ಸೃಷ್ಟಿಕರ್ತನಾಗಿ ಜಗದ್ರೂಪದಿಂದ ಪರಿಣಮಿಸುವನೆಂದರೆ ಅವನು ಜಡಸ್ವರೂಪನೂ ಸಾಪಯವನೂ ಅನಿತ್ಯನೂ ಅಶುದ್ಧರೂಪನೂ ಆಗಬೇಕಾಗುವದು (೧೦೩). ಆದರೆ ಆತ್ಮನು ಭೋಕ್ತೃಸ್ವರೂಪನಾಗುವಾಗಲೂ ಪರಿಣಮಿಸುವದಿಲ್ಲವಾದ್ದರಿಂದ ಅಷ್ಟುಮಾತ್ರದಿಂದ ಅವನಲ್ಲಿ ಯಾವ ದೋಷವೂ ಉಂಟಾಗುವಂತಿಲ್ಲ (೧೦೩, ೧೦೫). ಆದ್ದರಿಂದ ತರ್ಕಶುದ್ಧವಾಗಿರುವ ಸಾಂಖ್ಯಸಿದ್ಧಾಂತಕ್ಕನುಗುಣವಾಗಿ ಸೃಷ್ಟಿವಾಕ್ಯಗಳಿಗೆ ಅರ್ಥವನ್ನು ಮಾಡಬೇಕು. ಅರಸನಿಗೆ ಬೇಕಾದ ಕಾರ್ಯವನ್ನು ಮಾಡಿಕೊಡುವ ಅಧಿಕಾರಿಯನ್ನೂ ''ಅರಸ''ನೆಂದು ಉಪಚಾರಕ್ಕೆ ಕರೆಯುವಂತೆ ಪುರುಷನಿಗೆ ಭೋಗಮೋಕ್ಷಗಳನ್ನುಂಟುಮಾಡುವದಕ್ಕಾಗಿ ಮಹದಾದಿರೂಪದಿಂದ ಪರಿಣಮಿಸುವ ಪ್ರಧಾನರೂಪವನ್ನೂ **ಚೇತನ**ವೆಂದು ಉಪಚಾರಕ್ಕಾಗಿ ಭಾವಿಸಿ ಶ್ರುತಿಯಲ್ಲಿ ಆಲೋಚನಾಪೂರ್ವಕವಾದ ಸೃಷ್ಟಿಯನ್ನು ಹೇಳಿದೆ ಎಂದು ಕಲ್ಪಿಸುವದು ಯುಕ್ತ. ಹಾಗಿಲ್ಲದಿದ್ದರೆ ಆತ್ಮನು ತಾನೇ ತನಗೆ ಬಂಧವನ್ನು ಸೃಷ್ಟಿಸಿಕೊಂಡನೆಂಬ ಅನಿಷ್ಟವೂ ಬಂದೊದಗುತ್ತದೆ.

ಕರ್ತೃತ್ವಭೋಕ್ತೃತ್ವಗಳೆರಡೂ ಅವಿದ್ಯಕವೆಂಬ ವೇದಾಂತಿಯ ಅಭಿಮತವೇನೆಂದರೆ : ಕರ್ತೃತ್ವಭೋಕ್ತೃತ್ವಗಳೆರಡೂ ವಿಕಾರಗಳೇ ಆಗಿರುವಲ್ಲಿ ಕರ್ತೃತ್ವವು ಅವಿದ್ಯಕವೆಂದು ಒಪ್ಪಿಕೊಂಡು ಭೋಕ್ತೃತ್ವವು ಮಾತ್ರ ಪಾರಮಾರ್ಥಿಕವೆಂದು

ಹೇಳುವದಕ್ಕೆ ಯಾವ ಕಾರಣವೂ ಇರುವದಿಲ್ಲ (೧೦೪). ''ಭೋಕ್ತೃತ್ವವು ಬಂದಾಗಲೂ, ಪುರುಷನು, ದಾಸಿವಾಳದ ಹೂವಿನಿಂದ ಕೆಂಪಿನ ಸಂಪರ್ಕವನ್ನು ಪಡೆಯುವ ಸ್ಫಟಿಕದಂತೆ ತನ್ನ ಸ್ವರೂಪದಿಂದಲೇ ಇರುತ್ತಾನಾದ್ದರಿಂದ ಚಿನ್ಮಾತ್ರತ್ವವೇ ಅವನ ತತ್ತ್ವವೆಂದಾಗುತ್ತದೆ ; ಆದ್ದರಿಂದ ಭೋಕ್ತೃತ್ವವು ಪರಮಾರ್ಥವಾಗಿಯೇ ಆಗುವದೆಂದರೂ ದೋಷಪುಂಟಾಗುವದಿಲ್ಲ'' ಎಂಬ ಸಾಂಖ್ಯನ ಮತವು ಯುಕ್ತವಲ್ಲ. ಏಕೆಂದರೆ ಪ್ರಧಾನವು ಮಹದಾದಿಗಳಾಗಿ ಮಾರ್ಪಟ್ಟು ಮತ್ತೆ ಪ್ರಧಾನವೇ ಆಗುವಂತೆಯೇ ಪುರುಷನು ಭೋಗಕಾಲಕ್ಕೆ ಭೋಕ್ತವಾಗಿ ಮಾರ್ಪಟ್ಟು ಬಳಿಕ ಚಿನ್ಮಾತ್ರವೇ ಆಗುತ್ತಾನೆಂದು ಅವನು ಒಪ್ಪಿರುವದರಿಂದ ಈ ಎರಡು ವಿಕಾರಗಳಲ್ಲಿ ಯಾವ ಹೆಚ್ಚುಕಡಿಮೆಯನ್ನೂ ತರ್ಕದಿಂದ ಸಿದ್ಧಪಡಿಸುವದಕ್ಕೆ ಆಗುವಹಾಗಿಲ್ಲ (೧೦೫). ಪುರುಷನು ಭೋಗಕಾಲದಲ್ಲಿಯೂ ಚಿನ್ಮಾತ್ರನೇ ಎಂದರಂತೂ ಪುರುಷನ ಭೋಕ್ತೃತ್ವವೂ ಕರ್ತೃತ್ವದಂತೆ ಅವಿದ್ಯಕವೇ ಆಗಿಬಿಡುತ್ತದೆ (೧೦೬). ಅಥವಾ ಅದು ಪರಮಾರ್ಥವೇ ಎನ್ನುವದಾದರೆ ಪ್ರಧಾನಕ್ಕೂ ಪರಮಾರ್ಥವಾದ ಭೋಕ್ತೃತ್ವವನ್ನೇ ಒಪ್ಪಬೇಕಾಗುತ್ತದೆ (೧೦೬). ಭೋಗಕ್ಕೆ ಪ್ರಧಾನಪುರುಷರಿಬ್ಬರೂ ಬೇಕಾಗಿರುವದರಿಂದ ಇಬ್ಬರೂ ಭೋಕ್ತೃಗಳೆಂದು ಒಪ್ಪಿದರೆ ಪುರುಷನಿಗೆ ಪ್ರಧಾನವು ಭೋಗವನ್ನೂ ಮೋಕ್ಷವನ್ನೂ ಉಂಟುಮಾಡಿಕೊಡುತ್ತದೆ-ಎಂದು ಪುರುಷನಿಗೆ ಮುಖ್ಯತ್ವವನ್ನೂ ಪ್ರಧಾನಕ್ಕೆ ಅವನ ಅಧೀನತ್ವವನ್ನೂ ಹೇಳುವದು ತಪ್ಪಾಗುವದು (೧೦೭). ಆದ್ದರಿಂದ ಕರ್ತೃತ್ವಭೋಕ್ತೃತ್ವಗಳೆರಡೂ ಪುರುಷನಿಗೇ ಅವಿದ್ಯೆಯಿಂದ ಕಲ್ಪಿತವಾಗಿರುವವೆಂದು ಸಾಂಖ್ಯರೂ ಒಪ್ಪಬೇಕು (೧೦೮). ಇದರ ಜೊತೆಗೆ ಪ್ರಧಾನವೆಂಬುದು ಪುರುಷನಿಗಿಂತ ನಿಜವಾಗಿಯೇ ಇರುವ ವಸ್ತು ಎಂಬ ಹಟವನ್ನು ತೊರೆದು ಆತ್ಮೈಕತ್ವವನ್ನೇ ಒಪ್ಪಬೇಕು. ಹಾಗಿಲ್ಲದಿದ್ದರೆ ಆತ್ಮನಿಗಿಂತ ಬೇರೆಯಾಗಿರುವ ಪರಮಾಣುಗಳೇ ಮುಂತಾದವನ್ನು ತಿರಸ್ಕರಿಸುವ ದಕ್ಕೆ ಯಾವ ಸಾಧಕಯುಕ್ತಿಯೂ ಇಲ್ಲದೆ ಶ್ರುತಿವಿರೋಧದ ಜೊತೆಗೆ ಯುಕ್ತಿವಿರೋಧವೂ ಗಂಟುಬೀಳುತ್ತದೆ (೧೦೪). ಆದ್ದರಿಂದ ಒಬ್ಬನೇ ಆಗಿರುವ ಆತ್ಮನಲ್ಲಿ ಅವಿದ್ಯೆಯಿಂದ ಸವಿಶೇಷತ್ವವು ಕಲ್ಪಿತವಾಗಿರುವದೆಂದೂ (೧೦೩) ಅದನ್ನು ಅಲ್ಲಗಳೆಯುವದಕ್ಕಾಗಿಯೇ ಶಾಸ್ತ್ರವು ಹೊರಟಿದೆಯೆಂದೂ (೧೦೬) ವಿರ್ಪಡುತ್ತದೆ. ಈ ರೀತಿಯಲ್ಲಿ ನೋಡಿದರೆ ಅವಿದ್ಯಾಕಲ್ಪಿತವಾದ ನಾಮರೂಪ ಕರ್ಮಗಳೆಂಬ ಉಪಾಧಿಯಿಂದ ಆಗಿರುವ ಅನೇಕಶಕ್ತಿಗಳೂ ಸಾಧನಗಳೂ

ಪರಮಾತ್ಮನಿಗೆ ಇರುವದರಿಂದ ಅವನೇ ಸೃಷ್ಟಿಕರ್ತನೆಂಬ ವೇದಾಂತಸಿದ್ಧಾಂತವೇ ನಿರ್ದುಷ್ಟವಾಗಿರುತ್ತದೆ (೧೦೯).

ಭಾಷ್ಯದ ವ್ಯಾಖ್ಯಾನಕಾರರು

ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವವರು 'ಶ್ರೀಮದಾನಂದಜ್ಞಾನ' ರೆಂದು ಆನಂದಾಶ್ರಮಮುದ್ರಣಾಲಯದಲ್ಲಿ ಪ್ರಕಟವಾಗಿರುವ ಪುಸ್ತಕದಲ್ಲಿ ಅಚ್ಚಾಗಿದೆಯಾದರೂ ಅದೇ ಪುಸ್ತಕದ ಕೊನೆಯಲ್ಲಿ (ಪು.೭೬[1]) ''ಶ್ರೀಮತ್ಕೈವಲ್ಯೇನ್ದ್ರಶಿಷ್ಯಜ್ಞಾನೇನ್ದ್ರಗುರುಚರಣಸೇವಿನಾರಾಯಣೇನ್ದ್ರ ಸರಸ್ವತೀವಿರಚಿತಂ ಪ್ರಶ್ನೋಪನಿಷದ್ಭಾಷ್ಯವಿವರಣಂ ಸಮಾಪ್ತಮ್'' ಎಂಬ ವಾಕ್ಯವು ಐದು ಹಸ್ತಪ್ರತಿಗಳಲ್ಲಿರುವದಾಗಿ ಒಂದು ಟಿಪ್ಪಣಿಯನ್ನೂ ಕೊಟ್ಟಿರುತ್ತದೆ. ಆದ್ದರಿಂದ ವ್ಯಾಖ್ಯಾನಕಾರರು **'ನಾರಾಯಣೇಂದ್ರಸರಸ್ವತಿ''** ಗಳೆಂಬುದೆಂದೂ ಕೆಲವರ ಮತವಿತ್ತೆಂದು ತಿಳಿಯಬೇಕಾಗಿದೆ. ಈ ವ್ಯಾಖ್ಯಾನದಲ್ಲಿ ವಾಚಸ್ಪತಿಮಿಶ್ರರ ಸೂತ್ರಭಾಷ್ಯವ್ಯಾಖ್ಯಾನವಾದ ಭಾಮತಿಯನ್ನೂ (ಪುಟ ೪೯) **ಶಂಕರಾನಂದ**ರವರ ಉಪನಿಷದ್ವ್ಯಾಖ್ಯಾನವನ್ನೂ (ಪು. ೪೯-೫೦) ಪರಾಮರ್ಶಿಸಿರುವದರಿಂದ ಈ ನಾರಾಯಣೇಂದ್ರಸರಸ್ವತಿಗಳು ಆಚಾರ್ಯರುಗಿಂತ ಬಹಳ ಈಚಿನವರೆಂದು ತಾನೇ ಸ್ಪಷ್ಟವಾಗಿರುತ್ತದೆ. ಆದ್ದರಿಂದ ಈ ವ್ಯಾಖ್ಯಾನದಲ್ಲಿ ಸುಷುಪ್ತಿಯಲ್ಲಿ ''ಆನಂದಮಯಕೋಶವೆಂಬ ಹೆಸರಿನ ಅಜ್ಞಾನವಿರುವದೆಂದೂ'' (ಪು. ೩೨, ೪೨), ಓಂಕಾರೋಪಾಸನಾಪ್ರಕರಣದಲ್ಲಿ 'ಏಕಮಾತ್ರಾ ವಿಶಿಷ್ಟೋಂಕಾರಾಭಿಧ್ಯಾನ'ವೆಂಬ ಭಾಷ್ಯಕ್ಕೆ ''ಏಕಮಾತ್ರಾತ್ಮಕವಾದ ಓಂಕಾರವು, ಎಂದರೆ ಅಕಾರವು'' ಎಂದೂ (ಪು. ೪೯) ಬರೆದಿರುವ ಭಾಷ್ಯವಿರುದ್ಧಾಭಿಪ್ರಾಯವನ್ನು ನಾವು ಕೈಬಿಟ್ಟಿರುತ್ತೇವೆ.

ಮುಂಡಕಭಾಷ್ಯವ್ಯಾಖ್ಯಾನದಲ್ಲಿಯೂ ಪ್ರಶ್ನಭಾಷ್ಯವ್ಯಾಖ್ಯಾನದಲ್ಲಿಯೂ ಕಾಣಬರುವ ಸೃಷ್ಟಿವಿಚಾರದ ಅಭಿಪ್ರಾಯವನ್ನು ಪ್ರಸಂಗವಶದಿಂದ ಇಲ್ಲಿ ವಿಮರ್ಶಿಸುವದು ಯುಕ್ತವೆಂದು ನಮಗೆ ತೋರುತ್ತದೆ. **ಮುಂಡಕಭಾಷ್ಯ**ದಲ್ಲಿ ಅಕ್ಷರವೆಂಬ ಹೆಸರಿನ ಪರಮಪುರುಷನಿಂದ ಪಂಚಭೂತೋತ್ಪತ್ತಿಯನ್ನು ವಿವರಿಸುವಾಗ ''ಶಬ್ದ, ಸ್ಪರ್ಶ, ರೂಪ, ರಸ, ಗಂಧ - ಎಂಬ ಮುಂದುಮುಂದಿನ

1. ಇಲ್ಲಿ ತೋರಿಸಿರುವ ಪುಟಸಂಖ್ಯೆಗಳು ಆನಂದಾಶ್ರಮದಲ್ಲಿ ಅಚ್ಚಾಗಿರುವ ಆನಂದಗಿರಿಕೃತ ವ್ಯಾಖ್ಯಾನಸಮೇತವಾದ ಶಾಂಕರಭಾಷ್ಯದವುಗಳಾಗಿವೆ.

ಗುಣಗಳು ಆಯಾ ಭೂತಗಳಲ್ಲಿ ಹಿಂದಿನ ಭೂತಗಳ ಗುಣಗಳೊಡನೆ ಕೂಡಿ ಇರುವವೆಂದು'' ಭಾಷ್ಯಕಾರರು (ಮುಂ.೨-೧-೩, ಭಾ. ಭಾ. ೫೮) ಬರೆದಿರುತ್ತಾರೆ. ಆಗ ವ್ಯಾಖ್ಯಾನಕಾರರು ''ಮೊದಲು ಸೂಕ್ಷ್ಮಭೂತಗಳು ಉಂಟಾಗಿ ಪಂಚೀಕರಣದಿಂದ ಸ್ಥೂಲಭೂತಗಳಾದ ಬಳಿಕ ಒಂದೊಂದು ಭೂತದಲ್ಲಿಯೂ ಐದೈದು ಗುಣಗಳು ಏರ್ಪಡುವವೆಂದು ಛಾಂದೋಗ್ಯಾದಿಗಳಲ್ಲಿ ಹೇಳಿರುವಲ್ಲಿ ಈ ಭಾಷ್ಯದಲ್ಲಿ ಮಾತ್ರ ಮೊದಲಿನ ಸೃಷ್ಟಿಯಲ್ಲಿಯೇ ಆಕಾಶಕ್ಕೆ ಒಂದು ಗುಣ, ವಾಯುವಿಗೆ ಎರಡು ಗುಣ, ತೇಜಸ್ಸಿಗೆ ಮೂರು ಗುಣ - ಎಂದು ಮುಂತಾಗಿ ಹೇಳಿರುವದು ಪಂಚೀಕರಣಪ್ರಕ್ರಿಯೆಗೆ ವಿರುದ್ಧವಾಗಿದೆಯಾದರೂ ಭೂತಸೃಷ್ಟಿಯಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲವೆಂಬುದನ್ನು ತಿಳಿಸುವದಕ್ಕೆಂದು ಇಲ್ಲಿ ಬೇರೊಂದು ಪ್ರಕ್ರಿಯೆಯನ್ನು ಹೇಳಿರುವದರಿಂದ ದೋಷವಿಲ್ಲ (ಮುಂ. ವ್ಯಾ. ಪು. ೨೨) ಎಂದು ಭಾಷ್ಯವಾಕ್ಯಗಳಿಗೆ ಅವಿರೋಧವನ್ನು ಕಲ್ಪಿಸಿರುತ್ತಾರೆ. **ಪ್ರಶ್ನ ಭಾಷ್ಯ**ದಲ್ಲಿ (ಭಾ. ಭಾ. ೧೧೨) ''ಹಿರಣ್ಯಗರ್ಭನೆಂಬ ಪ್ರಾಣನಿಂದ ಶ್ರದ್ಧೆಯನ್ನೂ ಆಮೇಲೆ ಕರ್ಮಫಲವನ್ನು ಅನುಭವಿಸುವದಕ್ಕೂ), ಸಾಧಿಸುವದಕೂ ಆಶ್ರಯವಾಗಿರುವ ಕಾರಣರೂಪವಾದ ಮಹಾಭೂತಗಳನೂ ಪರಮಾತ್ಮನು ಸೃಷ್ಟಿಸಿದನು. ಪಂಚಭೂತಗಳಲ್ಲಿ ಉತ್ತರೋತ್ತರವಾಗಿ ಒಂದೊಂದು ಗುಣವು ಹೆಚ್ಚುತ್ತಾ ಹೋಗಿರುತ್ತದೆ. ಇವುಗಳಿಂದಲೇ ಕರ್ಮೇಂದ್ರಿಯಗಳೂ ಬುದ್ಧೀಂದ್ರಿಯಗಳೂ ಮನಸ್ಸೂ ಆಗಿರುತ್ತದೆ''- ಎಂದು ಬರೆದಿರುತ್ತದೆ. ಇಲ್ಲಿ ವ್ಯಾಖ್ಯಾನಕಾರರು (ಪ್ರ.ವ್ಯಾ.ಪು. ೭೧, ೭೯) ''ಇಲ್ಲಿ ಹಿರಣ್ಯಗರ್ಭಸೃಷ್ಟಿ ಎಂದರೆ ಹಿರಣ್ಯಗರ್ಭನಿಗೆ ಉಪಾಧಿಯಾದ ಸಮಷ್ಟಿಪ್ರಾಣವು. ಸೂಕ್ಷ್ಮಭೂತಗಳಾದ ಮೇಲೆ ಪ್ರಾಣವನ್ನೂ ಆ ಬಳಿಕ ಪಂಚೀಕೃತವಾದ ಭೂತಗಳನ್ನೂ ಸೃಷ್ಟಿ ಮಾಡಿದನು- ಎಂದು ಭಾಷ್ಯಕ್ಕೆ ಅರ್ಥವನ್ನು ಕಲ್ಪಿಸಬೇಕು. ಹಾಗಿಲ್ಲದಿದ್ದರೆ ಭೂತಗಳ ಕಾರ್ಯವಾದ ಪ್ರಾಣವು ಭೂತಗಳಿಗಿಂತ ಮೊದಲೇ ಸೃಷ್ಟವಾಯಿತೆಂದು ಭಾಷ್ಯಕಾರರು ವಿರುದ್ಧೋಕ್ತಿಯನ್ನು ಆಡಿದವರಾಗುವರು. ಹಾಗಾದರೆ ಸ್ಥೂಲಭೂತಗಳಾದ ಮೇಲೆ ಇಂದ್ರಿಯ ಮನಸ್ಸುಗಳ ಸೃಷ್ಟಿಯನ್ನು ಹೇಳಿದಂತಾಗಿ ವಿರುದ್ಧವಚನವಾಗುವದಿಲ್ಲವೆ ? ಎಂದರೆ ಪಂಚಭೂತಗಳಿಂದಾಗುವ ಶರೀರವನ್ನು ಆಶ್ರಯಿಸಿಕೊಂಡೇ ಇಂದ್ರಿಯಮನಸ್ಸುಗಳು ಕೆಲಸಮಾಡಬೇಕಾಗಿರುವದರಿಂದ ಹೀಗೆ ಕ್ರಮವನ್ನು ಹೇಳಿದೆ ಎಂದು ತಿಳಿಯಬೇಕು'' ಎಂಬರ್ಥದ ವಾಕ್ಯಗಳನ್ನು ಬರೆದಿರುತ್ತಾರೆ.

ಈ ಎರಡು ವ್ಯಾಖ್ಯಾನಗಳೂ ಒಂದಕ್ಕೊಂದು ವಿರುದ್ಧಾಗಿರುವವೆಂಬುದನ್ನು ವಾಚಕರು ಮೊದಲು ಮನದಂದುಕೊಳ್ಳಬೇಕು. ಮುಂಡಕವ್ಯಾಖ್ಯಾನದಲ್ಲಿ ಭಾಷ್ಯವು ಪಂಚೀಕರಣಪ್ರಕ್ರಿಯೆಗೆ ವಿರುದ್ಧವಾಗಿದೆ ಎಂದು ಕಂತೋಕ್ಷವಾಗಿ ತೀಳಿರುತದೆ ಪ್ರಶ್ನವ್ಯಾಖ್ಯಾನದಲ್ಲಿ ಪಂಚೀಕರಣಕ್ಕೆ ಅನುಗುಣವಾಗಿಯೇ ಭಾಷ್ಯಕ್ಕೆ ಅರ್ಥವನ್ನು ಮಾಡಿರುತ್ತದೆ ! ಉಪನಿಷತ್ತಿನ ಶಾಂಕರಭಾಷ್ಯವನ್ನು ಗ್ರಂಥಾಂತರದ ಶಾಂಕರಭಾಷ್ಯಕ್ಕೆ ಹೋಲಿಸಿ ಏಕವ್ಯಾಕತೆಯನ್ನು ಕಲ್ಪಿಸುವ ಪ್ರಯತ್ನವು ಈ ಎರಡು ವ್ಯಾಖ್ಯಾನಗಳಲ್ಲಿಯೂ ಕಂಡುಬರುವದಿಲ್ಲ.

ಸೃಷ್ಟಿಯನ್ನು ಪ್ರತಿಪಾದಿಸಿರುವದರಲ್ಲಿ ಶ್ರುತಿಗೆ ಪರಮತಾತ್ಪರ್ಯವಿಲ್ಲವೆಂದು ಭಾಷ್ಯಕಾರರೂ ಬರೆದಿರುತ್ತಾರಾದರೂ ಆಕಾಶಾದಿಸೃಷ್ಟಿವಚನಗಳೂ ಪರಸ್ಪರವಿರುದ್ಧವಲ್ಲವೆಂದು ಬಾದರಾಯಣರು ತೋರಿಸಿಕೊಟ್ಟಿರುತ್ತಾರೆಂದೂ (ಸೂ. ಭಾ. ೧-೪-೧೪) ಶ್ರುತಿಗಳು ಪರಸ್ಪರವಿರುದ್ಧವಾಗಿರುವದರಿಂದ ಅವೈದಿಕರ ಪಕ್ಷಗಳಂತೆ ವೇದಾಂತಿಗಳ ಪಕ್ಷವೂ ಅಪ್ರಮಾಣವೆಂಬ ಶಂಕೆಯನ್ನು ಪರಿಹರಿಸುವದಕ್ಕಾಗಿ (ಸೂ. ಭಾ. ೨-೩-೧) ಅವರು ಸೃಷ್ಟಿಕ್ರಮವನ್ನು ಅಂಗೀಕರಿಸುತ್ತಾರೆಂದೂ ಸೂತ್ರಭಾಷ್ಯದಲ್ಲಿ ಅವರು ವಿವರಿಸಿರುತ್ತಾರಾದ್ದರಿಂದಲೂ ಭಾಷ್ಯಗತ ಸೃಷ್ಟಿವಾಕ್ಯಗಳನ್ನೂ ಸಮರಸವಾಗಿ ಮಾಡಿಕೊಳ್ಳುವದು ಅವಶ್ಯವಾಗಿರುತ್ತದೆ.

ಈ ದೃಷ್ಟಿಯಿಂದ ನೋಡುವಾಗ ತೋರುವದೇನೆಂದರೆ, ಮುಂಡಕ ಭಾಷ್ಯದಲ್ಲಿ (೧-೧-೮ ಭಾ. ಭಾ. ೨೨) ಜಗತ್ಸೃಷ್ಟಿಯ ಕ್ರಮವನ್ನು ಹೇಳುವದಕ್ಕೇ ಶ್ರುತಿಯು ಬಂದಿರುವದೆಂಬ ಸ್ಪಷ್ಟೋಕ್ತಿಯಿದೆ. ಅಲ್ಲಿ ಅವ್ಯಾಕೃತದಿಂದ ಪ್ರಾಣ ಅಥವಾ ಹಿರಣ್ಯಗರ್ಭ, ಹಿರಣ್ಯಗರ್ಭನಿಂದ ಮನಸ್ಸು, ಮನಸ್ಸಿನಿಂದ ಆಕಾಶಾದಿಭೂತಪಂಚಕ, ಆ ಬಳಿಕ ಅಂಡಕ್ರಮದಿಂದ ಭೂರಾದಿಲೋಕಗಳು- ಹೀಗೆ ಒಂದರಿಂದ ಒಂದು ಆದವು ಎಂದು ಹೇಳಿರುತ್ತದೆ. ಇದರಂತೆಯೇ ಪ್ರಶ್ನ ಭಾಷ್ಯದಲ್ಲಿಯೂ (ಪ್ರ.೬-೩, ಭಾ. ಭಾ. ೯೯) ಪ್ರಾಣಾದಿಕಲೆಗಳ ಸೃಷ್ಟಿಕ್ರಮವನ್ನು ಶ್ರುತಿಯಲ್ಲಿ ಹೇಳಿದೆಯೆಂದೇ ಬರೆದಿರುತ್ತದೆ. ಅಲ್ಲಿ ಹಿರಣ್ಯಗರ್ಭ, ಶ್ರದ್ಧೆ, ಪಂಚಭೂತಗಳು, ಇಂದ್ರಿಯಗಳು, ಮನಸ್ಸು - ಹೀಗೆ ಸೃಷ್ಟಿಯಾಯಿತೆಂದು ವರ್ಣಿಸಿರುತ್ತದೆ. ಇವೆರಡು ಶ್ರುತಿಗಳಿಗೂ ಏಕವಾಕ್ಯತೆಯಾಗುವದು ಕಷ್ಟ ; ಏಕೆಂದರೆ ಮುಂಡಕದಲ್ಲಿ ಮನಸ್ಸಿನಿಂದ ಭೂತಪಂಚಕವಾಯಿತೆಂದಿದೆ, ಪ್ರಶ್ನದಲ್ಲಿ ಭೂತಗಳಿಂದ ಇಂದ್ರಿಯವೂ ಮನಸ್ಸೂ ಆಯಿತೆಂದಿದೆ. ಈ ವಿರೋಧಕ್ಕೆ ನಮಗೆ ತೋರುವ ಪರಿಹಾರವೇನೆಂದರೆ, ಮುಂಡಕದಲ್ಲಿ ಹೇಳಿರುವ ಮನಸ್ಸು

ಸಮಷ್ಟ್ಯುಪಾಧಿಯು ; ಇದನ್ನು ಶ್ರದ್ಧೆಯೆಂಬ ಮಾತಿನಿಂದಲೇ ಉಪಲಕ್ಷಣವಾಗಿ ಪ್ರಶ್ನದಲ್ಲಿ ಹೇಳಿರುತ್ತದೆ. ಪ್ರಶ್ನದಲ್ಲಿ ಹೇಳಿರುವ ಮನಸ್ಸೂ ಇಂದ್ರಿಯಗಳೂ ಭೂತಗಳಿಂದ ಉಂಟಾಗುವ ವ್ಯಷ್ಟಿಗಳು. ಹೀಗೆ ಅರ್ಥವನ್ನು ಮಾಡಿದರೆ ಸೂತ್ರಭಾಷ್ಯದಲ್ಲಿ ಹೇಳಿರುವ (ಸೂ. ಭಾ. ೨-೩-೧೫) ಭೌತಿಕಕರಣಗಳು, ಅಭೌತಿಕಕರಣಗಳು - ಎಂಬ ವಿಕಲ್ಪಕ್ಕೂ ಬೃಹದಾರಣ್ಯಕಭಾಷ್ಯದಲ್ಲಿ (೧-೨-೧, ೨೨) ಹೇಳಿರುವ ಮನಸ್ಸು ಮತ್ತು ಭೂತಸೃಷ್ಟಿ, ಅಂಡೋತ್ಪತ್ತಿ - ಈ ಕ್ರಮಕ್ಕೂ ಹೊಂದುಗಡೆಯಾಗುವದೆಂದು ಹೇಳಬಹುದು. ಮುಂಡಕ (೨-೧-೩), ಪ್ರಶ್ನ (೬-೪), ತೈತ್ತಿರೀಯ (೨-೧) - ಈ ಭಾಷ್ಯಗಳಲ್ಲಿಯೂ ಆಕಾಶಾದಿಯಾಗಿ ಭೂತಗಳಲ್ಲಿ ಒಂದೊಂದು ಗುಣವು ಹೆಚ್ಚುತ್ತಾ ಹೋಗಿ ಪೃಥ್ವಿಯಲ್ಲಿ ಐದು ಗುಣಗಳಿರುವವೆಂದು ಹೇಳಿರುವದು ಸೂಕ್ಷ್ಮಭೂತಗಳ ವಿಷಯವೇ ಎಂದೂ ಅವುಗಳಿಂದ ಪಂಚೀಕೃತವಾದ ಭೂತಗಳುಂಟಾಗುವಾಗ ಒಂದೊಂದು ಸ್ಥೂಲಭೂತದಲ್ಲಿಯೂ ಐದು ಗುಣಗಳೂ ಇರುವವೆಂದೂ ಕಲ್ಪಿಸಿದರೆ ಛಾಂದೋಗ್ಯದಲ್ಲಿ ಭಾಷ್ಯಕಾರರು (೬-೩-೩, ೪) ಹೇಳಿರುವ ಪಂಚೀಕರಣಕ್ಕೂ ವಿರೋಧವಾಗುವದಿಲ್ಲವೆಂದು ತೋರುತ್ತದೆ. ಇಲ್ಲಿ ನಾವು ಕಲ್ಪಿಸಿರುವ ವಿಕವಾಕ್ಯತಾಪ್ರಕ್ರಿಯೆಯಲ್ಲಿರುವ ಗುಣದೋಷಗಳನ್ನು ನಿರ್ಣಯಿಸುವ ಭಾರದವನ್ನು ತತ್ತ್ವವಿಮರ್ಶಕರಾದ ವಿದ್ವಾಂಸರಿಗೆ ಬಿಟ್ಟುಬಿಟ್ಟು ಈ ಪೀಠಿಕೆಯನ್ನು ಇಲ್ಲಿಗೆ ಮುಗಿಸುತ್ತೇವೆ.

ವ್ಯಯ ಸಂ॥ ಆಷಾಢ ಶುದ್ಧ ಹುಣ್ಣಿಮೆ — ಗ್ರಂಥಕರ್ತ

(೧೯೪೬)

ಉಪನಿಷತ್ತಿನ ಸಾರ

ಒಂದನೆಯ ಪ್ರಶ್ನೆ

೧-೨. ಸುಕೇಶಭಾರದ್ವಾಜನೇ ಮುಂತಾಗಿ ಆರು ಜನರು ಪೂಜ್ಯನಾದ ಪಿಪ್ಪಲಾದನ ಬಳಿಗೆ ಬಂದು ಒಂದು ವರ್ಷದವರೆಗೆ ಬ್ರಹ್ಮಚರ್ಯವನ್ನು ಮಾಡಿದಬಳಿಕ ಆತನನ್ನು ಕೇಳಿದ ಪ್ರಶ್ನೆಗಳಿಗೆ ಪಿಪ್ಪಲಾದನು ಕೊಟ್ಟ ಉತ್ತರಗಳು ಈ ಉಪನಿಷತ್ತಿನಲ್ಲಿರುತ್ತವೆ.

೩. **ಕಬಂಧಿಕಾತ್ಯಾಯನನ ಪ್ರಶ್ನೆ :** ಪೂಜ್ಯರೆ, ಈ ಪ್ರಜೆಗಳು ಹೇಗೆ ಹುಟ್ಟುತ್ತಾರೆ ?

೪. **ಪಿಪ್ಪಲಾದನ ಉತ್ತರ :** ಪೂರ್ವಕಲ್ಪದಲ್ಲಿ ಎಲ್ಲರಿಗಿಂತಲೂ ಉತ್ಕೃಷ್ಟಸಾಧನವನ್ನು ಮಾಡಿದವನು ಅದರ ಫಲವಾಗಿ ಈ ಕಲ್ಪಕ್ಕೆ ಪ್ರಜಾಪತಿಯಾಗುತ್ತಾನೆ. ಅವನು ಎಲ್ಲವನ್ನೂ ಸೃಷ್ಟಿಸುತ್ತಾನೆ. ಅವನು ರಯಿ, ಪ್ರಾಣ - ಎಂಬ ಎರಡು ರೂಪಗಳನ್ನು ತಳೆದು ಕ್ರಮಕ್ರಮವಾಗಿ ಎಲ್ಲವೂ ಆಗುತ್ತಾನೆ.

೫-೮. ಹೇಗೆಂದರೆ ಮೊದಲು ಆದಿತ್ಯನೆಂಬ ಪ್ರಾಣನೂ ಚಂದ್ರನೆಂಬ ರಯಿಯೂ ಆಗುತ್ತಾನೆ. ಆದಿತ್ಯನು ಸರ್ವರ ಪ್ರಾಣವನ್ನೂ ಕೊಟ್ಟು ಮತ್ತೆ ತನ್ನಲ್ಲಿಯೇ ಉಪಸಂಹಾರ ಮಾಡಿಕೊಳ್ಳುತ್ತಿರುತ್ತಾನೆ. ಆದ್ದರಿಂದ ಸರ್ವಪ್ರಾಣಿಗಳಿಗೂ ಪ್ರಾಣರೂಪದಿಂದ ಕಾರಣನಾಗಿರುವವನು ಆದಿತ್ಯರೂಪನಾದ ಪ್ರಜಾಪತಿ.

೯-೧೧. ಆದಿತ್ಯಚಂದ್ರರೂಪರಾಗಿರುವ ಪ್ರಾಣರಯಿಗಳಿಂದ ಸಂವತ್ಸರವಾಗುತ್ತದೆ. ಆದ್ದರಿಂದ ಸಂವತ್ಸರವೂ ಪ್ರಜಾಪತಿಯೇ ; ಸಂವತ್ಸರದ ಒಂದು ಭಾಗವಾದ ಉತ್ತರಾಯಣವು ಪ್ರಾಣ, ದಕ್ಷಿಣಾಯನವು ಚಂದ್ರ. ಉತ್ತರಾಯಣದ ಮಾರ್ಗದಿಂದ ಹೋಗುವ ಸಾಧಕರು ಪುನರಾವೃತ್ತಿಯಿಲ್ಲದ ಗತಿಯನ್ನು ಪಡೆಯುವರ ದಕ್ಷಿಣಾಯನದಿಂದ ಹೋಗುವವರು ಸಂಸಾರಕ್ಕೆ ಮತ್ತೆ ಹಿಂತಿರುಗುವರು. ಋತುಮಾಸಗಳೆಂಬ ಅವಯವಗಳಿಂದ ಕೂಡಿದ ಸಂವತ್ಸರರೂಪಿಯಾದ ಪ್ರಜಾಪತಿಯಲ್ಲಿ ಇಡಿಯ ಜಗತ್ತೇ ಸೇರಿಕೊಡಿರುವದು.

೧೨-೧೩. ಸಂವತ್ಸರದ ಅವಯವಗಳಾದ ಮಾಸವೂ ದಿವಸವೂ ಒಂದೊಂದೂ ಪ್ರಜಾಪತಿಯೆಂದೇ ಭಾವಿಸಬೇಕು. ಉದಾಹರಣೆಗೆ ಮಾಸರೂಪಿಯಾದ ಪ್ರಜಾಪತಿಗೆ ಶುಕ್ಲಪಕ್ಷವೇ ಪ್ರಾಣ, ಕೃಷ್ಣಪಕ್ಷವೇ ರಯಿ. ಇದರಂತೆ ದಿವಸರೂಪಿಯಾದ ಪ್ರಜಾಪತಿಗೆ ಹಗಲೇ ಪ್ರಾಣ, ರಾತ್ರಿಯೇ ರಯಿ. ಪ್ರಾಣರೂಪವಾದ ಶುಕ್ಲಪಕ್ಷದಲ್ಲಿ ಯಾಗಮಾಡುವವರಿಗೆ ಉತ್ತಮಗತಿ ಪ್ರಾಣೋಪಾಸಕರಿಗೆ ಎರಡೂ ಶುಕ್ಲಪಕ್ಷವೇ ಆಗಿರುತ್ತವೆ, ಆದ್ದರಿಂದ ಅವರಿಗೆ ಶುಭಫಲವೇ ಆಗುತದೆ. ಇದರಂತೆ ಪ್ರಾಣರೂಪವಾದ ಹಗಲಿನಲ್ಲಿ ಸ್ತ್ರೀಸಂಯೋಗವನ್ನು ಮಾಡದೆ ರಾತ್ರಿಯಲ್ಲಿ ಮಾತ್ರವೇ ಋತುಕಾಲದಲಿ

ಭಾರ್ಯಾಗಮನವನ್ನು ಮಾಡುವವರಿಗೆ ಬ್ರಹ್ಮಚರ್ಯದ ಫಲವೇ ದೊರೆಯುತ್ತದೆ.

೧೪. ಪ್ರಜಾಪತಿಯು ದಿವಸರೂಪಿಯಾಗಿ ಆಮೇಲೆ ಬತ್ತವೇ ಮುಂತಾದ ಧಾನ್ಯಗಳ ರೂಪವನ್ನು ತೆಗೆದುಕೊಳ್ಳುತ್ತಾನೆ. ಅನ್ನವನ್ನು ತಿಂದ ಜನರಲ್ಲಿ ರಕ್ತವೂ ರೇತಸ್ಸೂ ಆಗಿ ಅದರಿಂದ ಪ್ರಜೆಗಳು ಹುಟ್ಟುತ್ತವೆ.

೧೫-೧೬. ಕರ್ಮವನ್ನು ನಿಯಮದಿಂದ ಮಾಡಿದ ಗೃಹಸ್ಥರು ಚಂದ್ರಲೋಕವನ್ನು ಪಡೆಯುತ್ತಾರೆ. ಕರ್ಮವನ್ನೂ ಉಪಾಸನೆಯನ್ನೂ ಚಿತ್ತಶುದ್ಧಿಯಿಂದ ಮಾಡಿದ ಮಿಕ್ಕ ಆಶ್ರಮಿಗಳು ಸೂರ್ಯದ್ವಾರದಿಂದ ಬ್ರಹ್ಮಲೋಕವನ್ನು ಪಡೆಯುತ್ತಾರೆ. ಬ್ರಹ್ಮಲೋಕದಿಂದ ಮತ್ತೆ ಒಂತಿರುಗುವ ದಿಲ್ಲ. ಆದರೆ ಚಂದ್ರಲೋಕಕ್ಕೆ ಹೋದ ಕರ್ಮಿಗಳು ಕರ್ಮದ ಫಲವು ಸವೆಯಲು ಸಂಸಾರಕ್ಕೆ ಮರಳಿಬರುತ್ತಾರೆ. ಅವರೇ ಮೇಲೆ ಹೇಳಿದ ರೀತಿಯಿಂದ ಅನ್ನ, ರಕ್ತ, ರೇತಸ್ಸು - ಇವುಗಳ ಮೂಲಕವಾಗಿ ಬೇರೆಬೇರೆಯ ಪ್ರಜೆಗಳಾಗಿ ಹುಟ್ಟುತ್ತಾರೆ. ಆದ್ದರಿಂದ ಕರ್ಮಕ್ಕನುಗುಣವಾಗಿ ಪ್ರಜೆಗಳು ಹುಟ್ಟುತ್ತಿವೆ, ಅವು ನಿಜವಾಗಿ ಪ್ರಜಾಪತಿಯಿಂದಲೇ ಬಂದಿರುತ್ತವೆ.

ಎರಡನೆಯ ಪ್ರಶ್ನೆ

೧. ಭಾರ್ಗವವೈದರ್ಭಿಯ ಪ್ರಶ್ನೆ : ಈ ಶರೀರವನ್ನು ಧರಿಸುವದಕ್ಕೆ ಯಾವ ಯಾವದು ಬೇಕಾಗಿರುತ್ತದೆ ? ಇದರಲ್ಲಿ ಯಾವವು ತಮ್ಮ ಹೆಚ್ಚಿಗೆಯನ್ನು ತೋರ್ಪಡಿಸಿಕೊಳ್ಳುತ್ತಿರುವವು ? ಇವುಗಳಲ್ಲೆಲ್ಲ ಶ್ರೇಷ್ಠವಾದದ್ದು ಯಾವದು ?

೨-೪. ಪಿಪ್ಪಲಾದನ ಉತ್ತರ : ಆಕಾಶವೇ ಮುಂತಾದ ಐದು ಭೂತಗಳು ಶರೀರದ ರೂಪವನ್ನು ತಳೆದಿರುತ್ತವೆ. ಪಂಚಬುದ್ಧೀಂದ್ರಿಯಗಳೂ ಪಂಚ ಕರ್ಮೇಂದ್ರಿಯಗಳೂ ಇದರಲ್ಲಿ ತಮ್ಮ ವ್ಯಾಪಾರವನ್ನು ಮಾಡುತ್ತಿರುವವು. ಒಂದಾನೊಂದು ಕಾಲದಲ್ಲಿ ಇವು ತಾವು ಒಬ್ಬೊಬ್ಬರೇ ಈ ದೇಹವನ್ನು ತಡೆದಿಟ್ಟುಕೊಂಡಿರುವೆವೆಂದು ಹೆಮ್ಮೆಪಡುವದಕ್ಕೆ ಮೊದಲುಮಾಡಿದವು. ಆದರೆ ಮುಖ್ಯಪ್ರಾಣನು ''ಎಲಾ, ಭ್ರಾಂತರಾಗದಿರಿ, ನಾನೇ ಪ್ರಾಣಾಪಾನಾದಿ ವೃತ್ತಿಭೇದಗಳಿಂದ ಶರೀರದಲ್ಲಿರುವ ವ್ಯಾಪಾರವನ್ನೆಲ್ಲ ನಡೆಯಿಸುತ್ತಿರುವೆನು'' ಎಂದು ಅವಕ್ಕೆ ತಿಳಿಯಹೇಳಿದನು. ಆದರೆ ಕರಣಗಳಿಗೆ ಈ ವಿಷಯದಲ್ಲಿ

ನಂಬಿಕೆಯಾಗದೆ ಹೋಯಿತು. ಆದ್ದರಿಂದ ಪ್ರಾಣನು ಸ್ವಲ್ಪ ಮುನಿಸಿನಿಂದ ಶರೀರವನ್ನು ಬಿಟ್ಟು ಮೇಲಕ್ಕೇಳುವವನಂತೆ ಮಾಡಿದನು. ಕೂಡಲೆ, ಜೇನುಗಳರಸನು ಎದ್ದ ಕ್ಷಣದಲ್ಲಿ ಮಿಕ್ಕ ನೊಣಗಳು ತಾವೂ ಏಳುವಂತೆ, ಪ್ರಾಣನ ಹಿಂಗಡೆಯಲ್ಲಿಯೇ ಮಿಕ್ಕ ಪ್ರಾಣಗಳಾದ ಕರಣಗಳೂ ಏಳಬೇಕಾಗಿ ಬಂದಿತು. ಆಗ ಅವು ಪ್ರಾಣನ ಪೆಚ್ಚುಗಾರಿಕೆಯನ್ನು ಮನಗಂಡು ಹೀಗೆಂದು ಅವನನ್ನು ಹೊಗಳಿದವು.

೫-೧೩. ಈ ಪ್ರಾಣನೇ ಅಗ್ನಿ, ಸೂರ್ಯ, ಪರ್ಜನ್ಯ, ವಾಯು, ಭೂಮಿ, ಚಂದ್ರ - ಮುಂತಾದ ದೇವತೆಯು. ಮೂರ್ತಾಮೂರ್ತಸ್ವರೂಪವಾಗಿರುವ ದೆಲ್ಲವೂ ಈತನೇ. ಈತನೇ ದೇವತೆಗಳ ಅಮೃತವು. ವೇದಗಳೂ ಬ್ರಹ್ಮಕ್ಷತ್ರ ಬಲವೂ ಇವನವೇ. ಸಂತಾನಬೀಜವೂ ತಂದೆತಾಯಿಗಳೂ ಮಕ್ಕಳೂ ಈತನೇ. ಈತನೇ ಚಕ್ಷುರಾದಿಪ್ರಾಣಗಳ ರೂಪದಲ್ಲಿ ನಿಂತಿರುವವನು : ಆ ಚಕ್ಷುರಾದಿಗಳು ತಮ್ಮ ತಮ್ಮ ವಿಷಯವನ್ನು ಈತನಿಗೇ ಕಾಣಿಕೆಯಾಗಿ ಒಪ್ಪಿಸುತ್ತಿರುವವು. ದೇವತೆಗಳಿಗೂ ಪಿತೃಗಳಿಗೂ ಹವ್ಯಕವ್ಯಗಳನ್ನು ಮುಟ್ಟಿಸುವವನು ಈತನೇ. ಅಧ್ಯಾತ್ಮದಲ್ಲಿ ಸಮಸ್ತಶರೀರವ್ಯಾಪಾರವನ್ನೂ ನಡೆಯಿಸುತಾ ಅಂಗಗಳಿಗೆಲ ಸಾರವನಿಸಿಕೊಂಡಿರುವವನು ಈತನೇ . ಪರ್ಜನ್ಯನಾಗಿ ಮಳೆಯನ್ನು ಸುರಿಸಿ ತನ್ನ ಸ್ವರೂಪರಾದ ಪ್ರಜೆಗಳಿಗೆಲ್ಲ ಆನಂದವನ್ನುಂಟುಮಾಡುವವನೂ ಈತನೇ. ''ಪ್ರಾಣನೆ, ನೀನು ಸ್ವಭಾವಶುದ್ಧನು, ಅಥರ್ವಣರಿಗೆ ಪೂಜ್ಯನಾಗಿರುವ ವಿಕರ್ಷಿ ಯೆಂಬ ಅಗ್ನಿಯು ನೀನೇ. ಚಕ್ಷುರಾದಿಗಳಾದ ನಾವು ಹೋಮದ್ರವ್ಯವನ್ನು ನಿನಗೆ ಕೊಡುವವರು, ನೀನೇ ಜಗತ್ತಿಗೆಲ್ಲ ಒಡೆಯನು, ನೀನೇ ನಮಗೆ ತಂದೆ, ಎಲ್ಲಕ್ಕೂ ತಂದೆ. ನಮ್ಮಗಳಲ್ಲಿಯೂ ಮನಸ್ಸಿನಲ್ಲಿಯೂ ಇರುವ ನಿನ್ನಿಂದಲೇ ನಾವು ಮಂಗಳ ಸ್ವರೂಪರಾಗಿ ಕಾಣಿಸಿಕೊಳ್ಳುತ್ತಿರುವೆವು ಆದ್ದರಿಂದ ನಮ್ಮನ್ನು ಬಿಟ್ಟುಹೋಗಿ ನಮ್ಮನ್ನು ಅಮಂಗಲರೂಪರನ್ನಾಗಿ ಮಾಡದಿರು. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಇರುವ ಭೋಗವೆಲ್ಲ ಭೋಕ್ತನಾದ ನಿನ್ನ ವಶದಲ್ಲಿರು ವದು. ಆದಕಾರಣ ಪ್ರಾಣನೆ, ಮಕ್ಕಳನ್ನು ತಾಯಿ ಕಾಪಾಡುವಂತೆ ನೀನೂ ನಮ್ಮನ್ನು ಕಾಪಾಡಬೇಕು. ಜನರಿಗೆ ಬ್ರಾಹ್ಮಣಸಂಪತ್ತೂ ಕ್ಷತ್ರಿಯಸಂಪತ್ತೂ ನಿನ್ನಿಂದಲೇ ದೊರಕಬೇಕಾಗಿರುವದು ; ನೀನಿದ್ದರೆ ಮಾತ್ರವೇ ದೊರಕಬಹುದಾಗಿ ರುವ ಸಂಪತ್ತನ್ನೂ ಪ್ರಜ್ಞೆಯನ್ನೂ ನಮಗೆ ಅನುಗ್ರಹಿಸು''.

ಹೀಗೆ ಕಾರ್ಯಕರಣರೂಪವಾಗಿರುವ ಆಕಾಶಾದಿಗಳು, ವಾಕ್ಚಕ್ಷುರಾದಿಗಳು, ಮನಸ್ಸು - ಇವೆಲ್ಲದರೊಳಗೂ ಇದ್ದುಕೊಂಡಿರುವ ಪ್ರಾಣನೇ ಎಲ್ಲಕ್ಕೂ ಹೆಚ್ಚಿನವನು. ಇವನೇ ಭೋಕ್ತೃವಾದ ಸರ್ವಾತ್ಮನಾದ ಪ್ರಜಾಪತಿಯು.

ಮೂರನೆಯ ಪ್ರಶ್ನೆ

೧. **ಕೌಸಲ್ಯ ಆಶ್ವಲಾಯನನ ಪ್ರಶ್ನೆ :** ಪ್ರಾಣನು ಏತರಿಂದ ಹುಟ್ಟುತ್ತಾನೆ ? ಶರೀರದಲ್ಲಿ ಹೇಗೆ ಪ್ರವೇಶಿಸುತ್ತಾನೆ ? ಇಲ್ಲಿ ಹೇಗೆ ಬೇರೆಬೇರೆಯಾಗಿ ವಿಂಗಡಿಸಿಕೊಂಡಿರುವನು ? ಇವನು ಉತ್ಕ್ರಮಣನಾಗುವದು ಹೇಗೆ ? ಇವನು ಹೊರಗೂ ಒಳಗೂ ಎಲ್ಲವನ್ನೂ ಧರಿಸಿರುವದು ಹೇಗೆ ?

೨-೩. **ಪಿಪ್ಪಲಾದನ ಉತ್ತರ :** ಮನುಷ್ಯನಿಂದ ನೆರಳು ಹುಟ್ಟುವಂತೆ ಆತ್ಮನಿಂದಲೇ ಪ್ರಾಣನು ಉತ್ಪತ್ತಿಯಾಗುತ್ತಾನೆ. ಇವನು ಕರ್ಮವಾಸನೆಯ ದೆಸೆಯಿಂದ ಈ ಶರೀರಕ್ಕೆ ಬರುತ್ತಾನೆ.

೪-೭. ಇವನು ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ - ಎಂದು ಐದು ಬಗೆಯಾಗಿ ಹಂಚಿಕೊಂಡು ಶರೀರದಲ್ಲಿ ಕೆಲಸಮಾಡುತ್ತಿರುತ್ತಾನೆ. ಇಂದ್ರಿಯಗಳನ್ನೂ ತನ್ನ ವೃತ್ತಿಗಳನ್ನೂ ಇಂಥಿಂಥ ಕೆಲಸಮಾಡಬೇಕೆಂದು ಕಟ್ಟು ಮಾಡಿ ನಿಲ್ಲಿಸುತ್ತಾನೆ. ಕೆಳಭಾಗದಲ್ಲಿ ಅಪಾನ, ಮೇಲೆ ಪ್ರಾಣ, ನಡುವೆ ಸಮಾನ, ಹೃದಯದಿಂದ ದೇಹದ ಎಲ್ಲಾ ಕಡೆಗೂ ಹಬ್ಬಿಕೊಂಡಿರುವ ನಾಡಿಗಳಲ್ಲಿ ವ್ಯಾನ, ಈ ನಾಡಿಗಳಲ್ಲಿ ಮೇಲಕ್ಕೆ ಹೋಗಿರುವ ಸುಷುಮ್ನೆಯಲ್ಲಿ ಉದಾನ - ಹೀಗೆ ಹಂಚಿಕೊಂಡಿರುತ್ತಾನೆ.

೮-೯. ಪ್ರಾಣನು ಹೊರಗೆ ಆದಿತ್ಯಾದಿರೂಪದಿಂದ ಇದ್ದುಕೊಂಡು ಒಳಗಿರುವ ಚಕ್ಷುರಾದಿಗಳನ್ನು ಅನುಗ್ರಹಿಸುತ್ತಾನೆ. ಆದಿತ್ಯಪ್ರಾಣನು ಶರೀರದಲ್ಲಿರುವ ಪ್ರಾಣವೃತ್ತಿಗೂ ಭೂಪ್ರಾಣನು ಅಪಾನವೃತ್ತಿಗೂ ಆಂತರಿಕ್ಷಪ್ರಾಣನು ಸಮಾನಕ್ಕೂ ವಾಯುಪ್ರಾಣನು ವ್ಯಾನಕ್ಕೂ ತೇಜಃಪ್ರಾಣನು ಉದಾನಕ್ಕೂ ಅನುಗ್ರಾಹಕರಾಗಿರುತ್ತಾರೆ. ಹೀಗೆ ಪ್ರಾಣನು ಆದಿತ್ಯಾದಿರೂಪದಿಂದಲೂ ಚಕ್ಷುರಾದಿರೂಪದಿಂದಲೂ ಒಳಗೂ ಹೊರಗೂ ವ್ಯಾಪಿಸಿಕೊಡಿರುತ್ತಾನೆ.

೧೦. ಉದಾನವೃತ್ತಿರೂಪದಿಂದ ಈ ಪ್ರಾಣನು ಮನುಷ್ಯನನ್ನು

ಇಂದ್ರಿಯಗಳೊಡನೆ ಪುಣ್ಯಲೋಕಕ್ಕೂ ಪಾಪಲೋಕಕ್ಕೂ, ಅವನವನ ಭಾವನೆಯಂತೆ ಕರೆದೊಯ್ಯುತ್ತಾನೆ.

೧೧-೧೨. ಹೀಗೆ ಪ್ರಾಣನ ಉತ್ಪತ್ತಿ, ಶರೀರಕ್ಕೆ ಬರುವಿಕೆ, ಬೇರೆಬೇರೆಯ ಸ್ಥಾನಗಳಲ್ಲಿ ಇರುವಿಕೆ, ಹೊರ ಒಳಗಿನ ವ್ಯಾಪ್ತಿ - ಇವುಗಳನ್ನು ತಿಳಿದು ಉಪಾಸನೆಮಾಡಿದವನಿಗೆ ಈ ಲೋಕದಲ್ಲಿ ಪ್ರಜಾಸಂತತಿಯೂ ಪರಲೋಕದಲ್ಲಿ ಪ್ರಾಣಾತ್ಮಸಾಯುಜ್ಯವೂ ಆಗುವವು.

ನಾಲ್ಕನೆಯ ಪ್ರಶ್ನೆ

೧. **ಸೌರ್ಯಾಯಣಿ ಗಾರ್ಗ್ಯನ ಪ್ರಶ್ನೆ :** ಶರೀರದಲ್ಲಿ ನಿದ್ರೆ ಮಾಡುವ ಭಾಗಗಳು ಯಾವವು ? ಎಚ್ಚತ್ತಿರುವವು ಯಾವವು ? ಕನಸುಗಳನ್ನು ನೋಡುತ್ತಿರುವವರು ಯಾರು ? ಗಾಢನಿದ್ರೆಯಲ್ಲಿ ಆಗುವ ಸುಖವು ಯಾರದು ? ಆಗ ಮಿಕ್ಕದ್ದೆಲ್ಲವೂ ಏತರಲ್ಲಿ ಸೇರಿಕೊಳ್ಳುವದು ?

೨-೪. ಪಿಪ್ಪಲಾದನ ಉತ್ತರ : ಶ್ರೋತ್ರವೇ ಮುಂತಾದ ಕರಣಗಳು ತಮ್ಮ ವ್ಯಾಪಾರವನ್ನು ಬಿಟ್ಟು ಮನಸ್ಸಿನಲ್ಲಿ ಲಯವಾಗುತ್ತವೆ ; ಆಗ ಮನುಷ್ಯನು ನಿದ್ರಿಸುತ್ತಾನೆ ಎನ್ನುತ್ತಾರೆ. ಪ್ರಾಣಗಳು ಎಚ್ಚರವಾಗಿರುತ್ತವೆ. ಈ ಪ್ರಾಣಗಳಲ್ಲಿ ಉದಾನವೆಂಬುದು ಮನುಷ್ಯನಿಗೆ ಸುಷುಪ್ತಿಯಲ್ಲಿ ಪ್ರತಿದಿನವೂ ಬ್ರಹ್ಮಪ್ರಾಪ್ತಿಯಾಗುವಂತೆ ಮಾಡುತ್ತದೆ.

೫-೯. ಮನಸ್ಸು ಕನಸಿನಲ್ಲಿ ವಿಷಯವಿಷಯಿಭಾವವನ್ನು ತಳೆಯುತ್ತಿರುವದು. ಆಗ ಮನುಷ್ಯನು ಜಾಗ್ರತ್ತಿನ ವಾಸನೆಯಿಂದ ಎಲ್ಲವನ್ನೂ ಕಾಣುತ್ತಿರುವನು. ಯಾವಾಗ ಈ ಮನಸ್ಸು ಪಿತ್ತವೆಂಬ ತೇಜಸ್ಸಿನಿಂದ ವ್ಯಾಪ್ತವಾಗಿ ಸುಮ್ಮನಾಗುವದೋ ಆಗ ಮನಸ್ಸಿನ ವೃತ್ತಿಗಳೂ ಕರಣಗಳೂ ಹೃದಯದಲ್ಲಿ ಲಯವಾಗುತ್ತವೆ. ಆಗ ಆತ್ಮರೂಪದ ಸಾಮಾನ್ಯವಾದ ಸುಖವೂ ಸಾಮಾನ್ಯವಾದ ಅರಿವೂ ಇರುತ್ತವೆ ; ಪೃಥ್ವ್ಯಾದಿಸೂಕ್ಷ್ಮಭೂತಗಳು, ಸ್ಥೂಲಭೂತಗಳು, ಚಕ್ಷುರಾದಿಕರಣಗಳು, ರೂಪಾದಿವಿಷಯಗಳು, ಅಗ್ನ್ಯಾದಿದೇವತೆಗಳು, ಮನಆದಿ ಅಂತಃಕರಣ, ಪ್ರಾಣಕಾರ್ಯ - ಇವೆಲ್ಲವೂ ಪರಮಾತ್ಮಸ್ವರೂಪದಲ್ಲಿಯೇ ಸೇರಿಹೋಗಿರುತ್ತವೆ. ಉಪಾಧಿಗಳಿಂದಾಗಿದ್ದ ಕರ್ತೃಭೋಕ್ತೃಸ್ವರೂಪನಾದ ಪರಮಾತ್ಮನಲ್ಲಿ ಬೆರೆತುಕೊಂಡಿರುತ್ತಾನೆ.

೧೦-೧೧. ಯಾವ ವಿಶೇಷಣವೂ ಇಲ್ಲದ ಅಕ್ಷರವೆಂಬ ಪರಮಾತ್ಮನ ಈ ಸ್ವರೂಪವನ್ನೂ ಇದರಲ್ಲಿ ಕಾರ್ಯಕರಣಗಳಿಂದೊಡಗೂಡಿದ ವಿಜ್ಞಾನಾತ್ಮನು ಐಕ್ಯವಾಗುವನೆಂಬುದನ್ನೂ ಅರಿತುಕೊಂಡವನಿಗೆ ಅಕ್ಷರಪ್ರಾಪ್ತಿಯೂ ಸರ್ವಾತ್ಮತ್ವವೂ ದೊರಕುವವು.

ಐದನೆಯ ಪ್ರಶ್ನೆ

೧. **ಶೈಬ್ಯಸತ್ಯಕಾಮನ ಪ್ರಶ್ನೆ :** ಸಾಯುವವರೆಗೂ ತತ್ಪರನಾಗಿ ಓಂಕಾರವನ್ನು ಉಪಾಸನೆಮಾಡುವವನಿಗೆ ಯಾವ ಲೋಕವು ದೊರಕುತ್ತದೆ ?

೨. **ಪಿಪ್ಪಲಾದನ ಉತ್ತರ :** ಓಂಕಾರವು ಪರಬ್ರಹ್ಮಕ್ಕೂ ಅಪರ ಬ್ರಹ್ಮಕ್ಕೂ ಪ್ರತೀಕವಾಗಿರುತ್ತದೆ. ಆದ್ದರಿಂದ ಸಾಧಕನು ಇದನ್ನು ಯಾವ ದೃಷ್ಟಿಯಿಂದ ಉಪಾಸನೆಮಾಡುತ್ತಾನೋ ಆ ಬ್ರಹ್ಮವನ್ನು ಪಡೆಯುತ್ತಾನೆ.

೩-೫. ಹೇಗೆಂದರೆ ಯಾವನು ಓಂಕಾರದ ಒಂದು ಮಾತ್ರೆಯ ಸ್ವರೂಪನ್ನರಿತು ಓಂಕಾರವನ್ನುಪಾಸನೆಮಾಡಿದರೆ, ಎಂದರೆ ಅಕಾರವೊಂದರ ಅರ್ಥವನ್ನು ತಿಳಿದುಕೊಂಡು ಉಪಾಸನೆಮಾಡಿದರೆ, ಮನುಷ್ಯಲೋಕದಲ್ಲಿ ಬ್ರಾಹ್ಮಣಶ್ರೇಷ್ಠನಾಗಿ ಹುಟ್ಟಿ ಬ್ರಹ್ಮಚರ್ಯ, ತಪಸ್ಸು, ಶ್ರದ್ಧೆ - ಇವುಗಳಿಂದೊಡಗೂಡಿ ಪ್ರಖ್ಯಾತನಾಗುತ್ತಾನೆ. ಹೀಗೆಯೇ ಎರಡು ಮಾತ್ರೆಗಳ ಜ್ಞಾನದಿಂದೊಡಗೂಡಿ ಓಂಕಾರವನ್ನು ಉಪಾಸನೆಮಾಡಿದರೆ ಸೋಮಲೋಕವನ್ನು ಪಡೆಯುತ್ತಾನೆ. ಆದರೆ ಮೂರುಮಾತ್ರೆಗಳ ಜ್ಞಾನದಿಂದ ಕೂಡಿದ ಓಂಕಾರೋಪಾಸನೆಯಿಂದ ಬ್ರಹ್ಮಲೋಕವನ್ನೇ ಪಡೆಯುತ್ತಾನೆ ; ಅಲ್ಲಿಂದ ಮುಂದಕ್ಕೆ ಜ್ಞಾನವನ್ನು ಹೊಂದಿ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾನೆ.

೬-೭. ಹೀಗೆ ಓಂಕಾರವನ್ನು ಅದರ ಪೂರ್ಣಸ್ವರೂಪವನ್ನರಿಯದೆ ಉಪಾಸನೆ ಮಾಡಿದ್ದರಿಂದ ಅಪರಬ್ರಹ್ಮವನ್ನೂ ಅದರ ಮೂರು ಮಾತ್ರೆಗಳ ಸ್ವರೂಪದ ವಿವೇಚನೆಯನ್ನೂ ಮಾಡಿ ಹೊಂದಿಸಿಕೊಂಡು ಉಪಾಸನೆಮಾಡಿದ್ದರಿಂದ ಮೊದಲು ಅಪರಬ್ರಹ್ಮವನ್ನೂ ಕ್ರಮಕ್ರಮವಾಗಿ ಶಾಂತಶಿವಾದ್ವೈತ ಸ್ವರೂಪವಾದ ಪರಬ್ರಹ್ಮವನ್ನೂ ಪಡೆಯುತ್ತಾನೆ.

ಆರನೆಯ ಪ್ರಶ್ನೆ

೧. **ಸುಕೇಶಭಾರದ್ವಾಜನ ಪ್ರಶ್ನೆ :** ಹದಿನಾರು ಕಲೆಗಳಿಂದ ಕೂಡಿದ ಪುರುಷನನ್ನು ಎಲ್ಲಿ ಅರಿತುಕೊಳ್ಳಬೇಕು ?

೨. **ಪಿಪ್ಪಲಾದನ ಉತ್ತರ :** ಈ ಕಲೆಗಳಿಗೆ ಆಧಾರನಾಗಿರುವ ಪುರುಷನು ನಮ್ಮ ಶರೀರದಲ್ಲಿ ಹೃದಯದಲ್ಲಿಯೇ ಇರುತ್ತಾನೆ.

೩. ಪ್ರಾಣದ ಉತ್ಕ್ರಾಂತಿಯಿಂದ ಆತ್ಮನಿಗೆ ಉತ್ಕ್ರಾಂತಿಯೆಂದೂ ಪ್ರಾಣವಿದ್ದರೆ ಆತ್ಮನು ಶರೀರವಲ್ಲಿರುವನೆಂದೂ ವ್ಯವಹಾರ.

೪-೬. ಆದರೆ ಪ್ರಾಣಾದಿಕಲೆಗಳು ಅವಿದ್ಯೆಯ ದೃಷ್ಟಿಯಲ್ಲಿ ಆತ್ಮನಿಂದಲೇ ಹುಟ್ಟಿ ಆತ್ಮನಲ್ಲಿಯೇ ತೋರುತ್ತಿದ್ದು, ನದಿಗಳು ಸಮುದ್ರದಲ್ಲಿ ಸೇರಿಕೊಳ್ಳುವಂತೆ ಕೊನೆಗೆ ಆತ್ಮನಲ್ಲಿಯೇ ಸೇರಿಕೊಳ್ಳುತ್ತವೆ, ನಿಜವಾಗಿ ನೋಡಿದರೆ ನದಿಗಳೆಲ್ಲವೂ ನೀರಿನ ರೂಪದಿಂದ ಯಾವಾಗಲೂ ಸಮುದ್ರವೇ ಆಗಿರುವಂತೆ ಕಲೆಗಳೆಲ್ಲವೂ ಪುರುಷನೇ ಆಗಿರುತ್ತವೆ. ಪ್ರಾಣ, ಶ್ರದ್ಧೆ, ಆಕಾಶ, ವಾಯು, ತೇಜಸ್ಸು, ಅಪ್ಪು, ಪೃಥ್ವಿ, ಇಂದ್ರಿಯಗಳು, ಮನಸ್ಸು, ಅನ್ನ, ವೀರ್ಯ, ತಪಸ್ಸು, ವೇದಗಳು, ಕರ್ಮ, ಲೋಕಗಳು, ಹೆಸರುಗಳು - ಈ ಹದಿನಾರು ಕಲೆಗಳೂ ಪುರುಷನಿಂದಲೇ ಸೃಷ್ಟವಾಗಿ, ಪುರುಷನಿಗಿಂತ ಬೇರೆಯಾಗಿರದೆ, ಪುರುಷನಲ್ಲಿಯೇ ಅಡಗುತ್ತಿರುವ ದರಿಂದ ಎಲ್ಲವೂ ಪುರುಷನೇ ಎಂದು ಯಾವನು ವಿದ್ಯೆಯಿಂದ ತಿಳಿದುಕೊಳ್ಳುವನೋ ಅವನು ನಿಷ್ಕಲನೂ ಅಮೃತನೂ ಆಗಿರುವ ಪುರುಷನೇ ಆಗುವನು.

೭-೮. **ಕಥೆಯ ಉಪಸಂಹಾರ :** ಪಿಪ್ಪಲಾದನು ಶಿಷ್ಯರಿಗೆ ಹೀಗೆಂದು ಉಪದೇಶಮಾಡಿದ ಬಳಿಕ ''ಇಷ್ಟೇ ತಿಳಿದುಕೊಳ್ಳಬೇಕಾದ ಪರಬ್ರಹ್ಮವೆಂಬುದು ; ಇದಕ್ಕಿಂತ ಹೆಚ್ಚಿನದೇನೂ ಇಲ್ಲ'' ಎಂದು ನುಡಿದನು. ಅವರು ''ನೀನು ನಮ್ಮ ತಂದೆಗಿಂತಲೂ ಪೂಜ್ಯನು, ಏಕೆಂದರೆ ತತ್ತ್ವಬೋಧೆಯಿಂದ ನಮ್ಮನ್ನು ಅವಿದ್ಯೆಯೆಂಬ ಹೆಗ್ಗಡಲಿನ ಆಚೆಯ ದಡವನ್ನು ಸೇರಿಸಿರುವೆ'' ಎಂದು ನಮಸ್ಕಾರಾದಿಗಳಿಂದ ಆತನನ್ನು ಪೂಜಿಸಿದರು. ಆದ್ದರಿಂದ ಈ ಪರಬ್ರಹ್ಮವಿದ್ಯೆಯನ್ನು ಉಪದೇಶಮಾಡುವ ಸಂಪ್ರದಾಯವನ್ನು ನಡೆಯಿಸಿಕೊಂಡು ಬಂದಿರುವ ಪರಮಋಷಿಗಳಿಗೆ ಮುಮುಕ್ಷುವಾದವನು ಆದರದಿಂದ ನಿತ್ಯವೂ ನಮಸ್ಕಾರಮಾಡಬೇಕು.

ಮಾಂಡೂಕ್ಯೋಪನಿಷತ್ತು

ಪೀಠಿಕೆ

ಅಥರ್ವವೇದಕ್ಕೆ ಸೇರಿದ ಉಪನಿಷತ್ತುಗಳಲ್ಲಿ ಮುಂಡಕ, ಪ್ರಶ್ನ, ಮಾಂಡೂಕ್ಯ - ಈ ಮೂರಕ್ಕೆ ಮಾತ್ರ ಶ್ರೀಶಂಕರಾಚಾರ್ಯರವರು ಭಾಷ್ಯವನ್ನು ಬರೆದಿರುತ್ತಾರೆ. ಆ ಮೂರರಲ್ಲಿ - ಅಷ್ಟೇ ಅಲ್ಲ, ಆಚಾರ್ಯರು ಭಾಷ್ಯವನ್ನು ಬರೆಯುವದಕ್ಕೆ ಆರಿಸಿಕೊಂಡಿರುವ ಉಪನಿಷತ್ತುಗಳಲ್ಲೆಲ್ಲ - ಮಾಂಡೂಕ್ಯವು ತೀರ ಚಿಕ್ಕದಾಗಿರುತ್ತದೆ. ಆದರೂ ಇದು **ಸರ್ವವೇದಾಂತಾರ್ಥಸಾರಸಂಗ್ರಹ**ವಾಗಿರುವದೆಂದು ಆಚಾರ್ಯರೇ ವರ್ಣಿಸಿರುತ್ತಾರೆ. ಶ್ರೀಗೌಡಪಾದಾಚಾರ್ಯರವರ ಕಾರಿಕಾರೂಪವಾದ ವಿವರಣೆಯೂ ಇದಕ್ಕೆ ಇರುವದರಿಂದ ವೇದಾಂತದ ಇತಿಹಾಸದ ದೃಷ್ಟಿಯಿಂದ ಈ ಉಪನಿಷತ್ತಿಗೆ ಒಂದು ವಿಶೇಷಮಹತ್ವವು ಇರುತ್ತದೆ. ಈ ಉಪನಿಷತ್ತು ಅಥರ್ವವೇದದ ಯಾವ ಭಾಗದಲ್ಲಿದೆ ಎಂಬುದನ್ನು ನಿರ್ಧರಿಸುವದಕ್ಕೆ ನಮಗೆ ಯಾವ ಆಧಾರವೂ ದೊರೆತಿಲ್ಲ. ಆಚಾರ್ಯರು ಆ ವಿಷಯಕ್ಕೆ ತಮ್ಮ ಭಾಷ್ಯದಲ್ಲಿ ಏನನ್ನೂ ಹೇಳಿರುವದೂ ಇಲ್ಲ. ಅವಸ್ಥಾತ್ರಯ ನಿರೂಪಣೆಯ ಮೂಲಕ ಪರಮಾರ್ಥವನ್ನು ನಿರ್ಧರಿಸಿ ತಿಳಿಸುವ ಪ್ರಕ್ರಿಯೆಯೊಂದೇ ಈ ಉಪನಿಷತ್ತಿನಲ್ಲಿ ಕಂಡುಬಂದಿರುವದರಿಂದ ಇದು ಆ ವೇದದ ಆರಣ್ಯಕದಲ್ಲಿರಬೇಕೆಂದು ಊಹಿಸುವದಕ್ಕೆ ಅವಕಾಶವಿದೆ.

ಮಾಂಡೂಕ್ಯಕಾರಿಕೆಗಳ ಗ್ರಂಥಕರ್ತರ ಬಗ್ಗೆ ವಿಕಲ್ಪಗಳು

ಶ್ರೀಶಂಕರಾಚಾರ್ಯರು ಉಪನಿಷತ್ತಿಗೂ ಭಾಷ್ಯವನ್ನು ಬರೆದು ಕಾರಿಕೆಗಳಿಗೂ ವಿವರಣವನ್ನು ಬರೆದಿರುತ್ತಾರಾದರೂ ತಾವು ಉಪನಿಷತ್ತಿಗೆ ಸ್ವಪ್ರಧಾನವಾಗಿ ಭಾಷ್ಯವನ್ನು ಬರೆದಿದೇವೆಂದು ಹೇಳಿಕೊಂಡಿಲ್ಲ. ಉಪನಿಷತ್ತನ್ನು ವಿವರಿಸುವ ಕಾರಿಕೆಗಳಿಗೇ ಅವರು ಪ್ರಾಧಾನ್ಯವನ್ನು ಕೊಟ್ಟಿರುತ್ತಾರೆ. ಕಾರಿಕೆಗಳು ಪ್ರಕೃತದಲ್ಲಿ ಆಗಮ, ವೈತಥ್ಯ, ಅದ್ವೈತ, ಅಲಾತಶಾಂತಿ - ಎಂಬ ನಾಲ್ಕು ಪ್ರಕರಣಗಳಾಗಿ ವಿಂಗಡಿಸಿಕೊಂಡಿರುತ್ತವೆ. ಒಂದು ಪ್ರಕರಣಕ್ಕಿಂತಲೂ ಮುಂದಿನ ಇನ್ನೊಂದು ಪ್ರಕರಣದಲ್ಲಿ ಹೆಚ್ಚು ಹೆಚ್ಚು ಕಾರಿಕೆ(ಶ್ಲೋಕ)ಗಳಿರುತ್ತವೆ. ಇವುಗಳಲ್ಲಿ

ಮೊದಲನೆಯದಾದ ಆಗಮಪ್ರಕರಣವು ಈಗ್ಗೆ ಉಪನಿಷತ್ತಿನ ನಡುನಡುವೆ ಭಾಗಭಾಗವಾಗಿ ಹೆಣೆದುಕೊಂಡಿರುವ ಇಪ್ಪತ್ತೊಂಬತ್ತು ಕಾರಿಕಗಳ ಗುಂಪಾಗಿರುತ್ತದೆ. ಮಿಕ್ಕ ಮೂರು ಪ್ರಕರಣಗಳೂ ಸ್ವತಂತ್ರವಾಗಿರುತ್ತವೆ. ತೀರ ದೊಡ್ಡದಾಗಿರುವ, ನೂರು ಕಾರಿಕೆಗಳ, ಅಲಾತಶಾಂತಿಪ್ರಕರಣವು ಗ್ರಂಥದ ಕೊನೆಯಲ್ಲಿದ್ದು ಅದರ ಆದಿಯಲ್ಲಿಯೂ ಅಂತ್ಯದಲ್ಲಿಯೂ ಮಂಗಲಶ್ಲೋಕಗಳಿವೆ. ಹೀಗಿರುವದರಿಂದ ಉಪನಿಷತ್ತಿನ ವಿಷಯದಲ್ಲಿಯೂ, ಪ್ರಕರಣಗಳ ವಿಷಯದಲ್ಲಿಯೂ ಗ್ರಂಥಕರ್ತೃವಿಚಾರದಲ್ಲಿ ಬಗೆಬಗೆಯ ಅಭಿಪ್ರಾಯಗಳು ವಿದ್ವಾಂಸರುಗಳಲ್ಲಿ ಅಂಕುರಿಸಿರುತವೆ.

ಮೊದಲನೆಯದಾಗಿ ಈ ನಾಲ್ಕೂ ಶ್ರೀ ಶಂಕರಾಚಾರ್ಯರ ಪರಮಗುರುಗಳಾದ ಗೌಡಪಾದರು ಬರೆದ ಪ್ರಕರಣಗಳು ಎಂದು ಅನೇಕ ಅದ್ವೈತಿಗಳ ಮತವಿದೆ. ಎರಡನೆಯದಾಗಿ ಆಗಮಪ್ರಕರಣವೆಂಬುದು ಪೌರುಷೇಯವೇ ಅಲ್ಲವೆಂದೂ ಬ್ರಹ್ಮದೃಷ್ಟವಾದ ಮಂತ್ರಗಳನ್ನು ತಿಳಿವಳಿಕೆಯ ದಾರ್ಢ್ಯಾರ್ಥವಾಗಿ ಉಪನಿಷತ್ತಿನಲ್ಲಿ ಉದಾಹರಿಸಿದೆಯೆಂದೂ ಮಾಂಡೂಕ್ಯೋಪನಿಷತ್ತು ಮತ್ತು ಕಾರಿಕೆ - ಎರಡೂ ಶ್ರುತಿಯೇ ಎಂದೂ ಮಧ್ವಾಚಾರ್ಯರು ಅಂಗೀಕರಿಸಿರುತ್ತಾರೆ. ಈ ನಾಲ್ಕು ಪ್ರಕರಣಗಳೂ ಮಾಂಡೂಕ್ಯವೂ ಸೇರಿದ ಒಟ್ಟೇ ಗೌಡಪಾದರ ಕೃತಿ - ಎಂದು ಡಾಯನ್ ಎಂಬ ಜರ್ಮನ್ ವಿದ್ವಾಂಸನ ಮತವಿದೆ. ಗೌಡಪಾದರ ಪ್ರಕರಣಗಳಲ್ಲಿ, ಅದರಲ್ಲಿಯೂ ನಾಲ್ಕನೆಯ ಪ್ರಕರಣದಲ್ಲಿ, ಬೌದ್ಧರ ಗ್ರಂಥದಲ್ಲಿ ಕಾಣಬರುವ ಅನೇಕ ಪ್ರಕ್ರಿಯೆಗಳು ಕಾಣಬರುತವೆ ಗೌಡಪಾದರು ಅಶ್ವಘೋಷ, ನಾಗಾರ್ಜುನ, ಅಸಂಗ, ವಸುಬಂಧು - ಮುಂತಾದ ಪ್ರಸಿದ್ಧ ಬೌದ್ಧಾಚಾರ್ಯರುಗಳ ತರುವಾಯ ಬಂದವರಾದ್ದರಿಂದ ಅವರೂ ಪ್ರಾಯಶಃ ಒಬ್ಬ ಬೌದ್ಧರೆಂದೋ ಬುದ್ಧನ ಉಪದೇಶದಲ್ಲಿ ಗೌರವವುಳ್ಳ ಆಚಾರ್ಯರೆಂದೋ ಕಲ್ಪಿಸಬೇಕಾಗಿದೆ - ಎಂದು ಪ್ರೊಫೆಸರ್ ಸುರೇಂದ್ರನಾಥ ದಾಸಗುಪ್ತ (Prof. S.N. Dasagupta. M.A., Ph.D) ಮುಂತಾದ ಆಧುನಿಕ ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಈ ನಾಲ್ಕು ವಿಪ್ರತಿಪನ್ನಮತಗಳಲ್ಲಿ ಕೊನೆಯ ಮೂರೂ ಕಲ್ಪನಾಮಾತ್ರವೆಂದು ನಮಗೆ ತೋರುತ್ತದೆ. ಈ ಅಭಿಪ್ರಾಯವನ್ನು ಸ್ಪಷ್ಟಪಡಿಸುವದಕ್ಕಾಗಿ ಈಗ ಒಂದೊಂದನ್ನೂ ಸ್ವಲ್ಪ ಸಮಾಲೋಚನೆಮಾಡುವೆವು.

ಆಗಮಪ್ರಕರಣವು ಶ್ರುತಿಯೆಂಬುದು ಸರಿಯಲ್ಲ

ಆಗಮಪ್ರಕರಣದ ಕಾರಿಕೆಗಳೂ ಉಪನಿಷತ್ತಿನ ಭಾಗವೆಂಬುದಕ್ಕೆ **ಮಧ್ವಾಚಾರ್ಯರು** ಕೊಟ್ಟಿರುವ ಪ್ರಮಾಣವೇನು ? - ಎಂಬುದನ್ನು ಮೊದಲು ಸಮಾಲೋಚನೆಮಾಡೋಣ. ಆ ಆಚಾರ್ಯರು ಉದಾಹರಿಸಿರುವ ಆಧಾರವು **ಬೃಹತರ್ಕ**ವೆಂಬ ಗ್ರಂಥವೊಂದು, ಗರುಡಪುರಾಣವೊಂದು. ಬೃಹತರ್ಕವೆಂಬ ಗ್ರಂಥವು ಈಗ ಸಿಕ್ಕುವದಿಲ್ಲ ; ಆ ಗ್ರಂಥವನ್ನು ಮತ್ತೆ ಯಾವ ಆಚಾರ್ಯರೂ ಹೆಸರಿಸಿಯೂ ಇಲ್ಲ. ಪುರಾಣಗಳಲ್ಲಿ ಆಗಿಂದಾಗ್ಗೆ ಎಷ್ಟು ಹೊಸ ಶ್ಲೋಕಗಳಾದರೂ ಸೇರುವ ಸಂಭವವಿರುವದರಿಂದ ಗರುಡಪುರಾಣವನ್ನು ಪ್ರಕೃತ ವಿಷಯಕ್ಕೆ ಪ್ರಮಾಣವಾಗಿ ಹಿಡಿಯುವ ಮುಂಚೆ ನಾವು ಮತ್ತೆ ಯಾರಾದರೂ ಈ ಕಾರಿಕೆಗಳನ್ನು ಉಪನಿಷತ್ತುಗಳೆಂದು ಎಣಿಸಿದಾರೆಯೆ ? - ಎಂಬುದನ್ನು ವಿಚಾರಿಸಬೇಕಾಗಿದೆ. ಆದರೆ ಮಧ್ವಾಚಾರ್ಯರಿಗಿಂತ ಹಿಂದೆ ಯಾರೊಬ್ಬರೂ ಹಾಗೆಂದು ಎಣಿಸಿದ್ದಕ್ಕೆ ಆಧಾರವಿರುವದಿಲ್ಲ. **ಶಂಕರಾಚಾರ್ಯರು** ತಾವು **ನಾಲ್ಕು ಪ್ರಕರಣಗಳಿಗೆ** ವ್ಯಾಖ್ಯಾನವನ್ನು ಬರೆಯುವೆವೆಂದು (೧, ೩) ಕಂಠೋಕ್ತವಾಗಿ ಹೇಳಿರುತ್ತಾರೆ ; ಅವರ ಶಿಷ್ಯರಾದ **ಸುರೇಶ್ವರರು** ಆಗಮಪ್ರಕರಣದಿಂದ **ಎರಡು ಕಾರಿಕೆ**ಗಳನ್ನು ಗೌಡಪಾದರು ಬರೆದವು - ಎಂದು ತಮ್ಮ **ನೈಷ್ಕರ್ಮ್ಯಸಿದ್ಧಿ** ಎಂಬ ವೇದಾಂತಪ್ರಕರಣದಲ್ಲಿ ಉದಾಹರಿಸಿರುತ್ತಾರೆ. ಮಧ್ವಾಚಾರ್ಯರಿಗಿಂತ ಈಚಿನ ಕೆಲವರು ಅದ್ವೈತವೇದಾಂತಿಗಳು ಕೂಡ ಆಗಮಪ್ರಕರಣವನ್ನು ಶ್ರುತಿಯೆಂದು ಕರೆದಿರುವದುಂಟು ; ಆದರೆ ಅವರು ಆ ತಮ್ಮ ಅಭಿಪ್ರಾಯಕ್ಕೆ ಯಾವ ಆಧಾರವನ್ನೂ ಕೊಟ್ಟಿರುವದಿಲ್ಲ. ಈ ವಿಷಯದಲ್ಲಿ **ರಾಮಾನುಜಾಚಾರ್ಯರ** ಅಭಿಪ್ರಾಯವೇನೋ ತಿಳಿಯುವಂತಿಲ್ಲ ; ಅವರ ಅನುಯಾಯಿಗಳಾದ **ಕೂರನಾರಾಯಣರು** ಮಧ್ವಾಚಾರ್ಯರನ್ನೇ ಅನುಸರಿಸಿರುತ್ತಾರೆ. ಹೀಗಿರಿಂದ ಆಗಮಪ್ರಕರಣವು ಉಪನಿಷತ್ತೆಂಬುದಕ್ಕೆ ನಮಗೆ ನಂಬತಕ್ಕ ಪ್ರಮಾಣವೇನೂ ಈವರೆಗೆ ದೊರೆತಿಲ್ಲವೆಂದು ಹೇಳಬೇಕಾಗಿದೆ.

ಮಾಂಡೂಕ್ಯೋಪನಿಷತ್ತು ಗೌಡಪಾದರ ಕೃತಿ ಎಂಬ ವಾದದಲ್ಲಿ ಹುರುಳಿಲ

ಎರಡನೆಯದಾಗಿ ಮಾಂಡೂಕ್ಯೋಪನಿಷತ್ತನ್ನು ಶಂಕರಾಚಾರ್ಯರು ಉಪನಿಷತ್ತೆಂದು ಭಾವಿಸಿದ್ದರೆಂಬುದಕ್ಕೆ ಪ್ರಮಾಣವಿಲ್ಲವೆಂದೂ ಗೌಡಪಾ[illegible] ಆ

ಗ್ರಂಥಭಾಗವನ್ನು ಬರೆದಿರಬಹುದೆಂದೂ **ಡಾಯ್ಸನ್** ಎಂಬ ಪಾಶ್ಚಾತ್ಯ ವಿದ್ವಾಂಸನು ಊಹಿಸಿರುತ್ತಾನೆ. **ವೇದಾಂತಾರ್ಥಸಾರಸಙ್ಗ್ರಹಭೂತಮಿದಂ ಪ್ರಕರಣಚತುಷ್ಟಯಮ್ ಓಮಿತ್ಯೇತದಕ್ಷರಮ್ ಇತಿ ಆರಭ್ಯತೇ** (೧)ಎಂಬ ಭಾಷ್ಯವಾಕ್ಯದಲ್ಲಿ ಮಾಂಡೂಕ್ಯವೂ ಪ್ರಕರಣಚತುಷ್ಟಯದಲ್ಲಿ ಸೇರಿದೆಯೆಂಬ ಸೂಚನೆ ಇದೆ ; ಆಚಾರ್ಯರು ಮಾಂಡೂಕ್ಯವನ್ನು ಶ್ರುತಿಯೆಂದು ಎಲ್ಲಿಯೂ ಉದಾಹರಿಸಿಲ್ಲ - ಎಂಬ ಎರಡು ಯುಕ್ತಿಗಳೇ ಆತನ ಊಹೆಗೆ ಊರುಗೋಲು. ಆದರೆ ಮಾಂಡೂಕ್ಯವನ್ನು ಗೌಡಪಾದಕೃತಿಯೆಂದು ಆಚಾರ್ಯರು ಮತ್ತೆಲ್ಲಿಯೂ ಉದಾಹರಿಸಿರುವದು ಕಂಡುಬರುವದಿಲ್ಲ. ಡಾಯ್ಸನ್ನನು ತೋರಿಸಿರುವ ವಾಕ್ಯದಲ್ಲಿ ''ಓಮಿತ್ಯೇತದಕ್ಷರಮ್ ಎಂಬ (ಉಪನಿಷತ್ತು) ಆದಿಯಾಗಿರುವ ಪ್ರಕರಣಚತುಷ್ಟಯವು'' ಎಂದೂ ಅರ್ಥವನ್ನು ಮಾಡುವದಕ್ಕೆ ಬರುತ್ತದೆ. ಆಗಮಪ್ರಕರಣದ ಒಂದು ಕಾರಿಕೆ (೧-೧-೬)ಯನ್ನೂ ಅದ್ವೈತಪ್ರಕರಣದ ಒಂದು ಕಾರಿಕೆ (೩-೧೫)ಯನ್ನೂ **ಸಂಪ್ರದಾಯವಿದರ ವಚನವೆಂದು** (ಸೂ. ಭಾ. ೧-೪-೧೪, ೨-೧-೯) ಆಚಾರ್ಯರು ಉದಾಹರಿಸಿರುತ್ತಾರೆ. ''ಅತ್ರೈತೇ ಶ್ಲೋಕಾ ಭವನ್ತಿ'' ಎಂದು ಉದಾಹರಿಸಿರುವ ಶ್ಲೋಕಗಳಂತೆ ಉಪನಿಷತ್ತನ್ನೂ ಗೌಡಪಾದರೇ ಬರೆದಿದ್ದರೆ ವ್ಯಾಖ್ಯೇಯಗದ್ಯಭಾಗವು ಸಂಕ್ಷಿಪ್ತವಾಗಿಯೂ, ವ್ಯಾಖ್ಯಾನರೂಪವಾಗಿರುವ ಪದ್ಯಭಾಗವು ವಿಸ್ತಾರವಾಗಿಯೂ ಇರುವದಕ್ಕೆ ಕಾರಣವೇನೆಂಬುದು ಗೊತ್ತಾಗುವಂತಿಲ್ಲ ; ಗದ್ಯಭಾಗವನ್ನು ವಿಸ್ತರಿಸಿ ಅಲ್ಲಿ ಹೇಳಿದ್ದನ್ನೇ ಪದ್ಯದಲ್ಲಿ ಸಂಗ್ರಹಿಸುವ ಪದ್ಧತಿಯು ಸಂಸ್ಕೃತಗ್ರಂಥಕರ್ತೃಗಳಲ್ಲಿರುವಂತೆ ಅದಕ್ಕೆ ವಿಪರೀತವಾದ ಪದ್ಧತಿಯು ಕಂಡುಬರುವದಿಲ್ಲ.[1] ಇದೆಲ್ಲದರ ಜೊತೆಗೆ ಶಂಕರಾಚಾರ್ಯರ ಸಾಕ್ಷಾಚ್ಛಿಷ್ಯರಾದ ಸುರೇಶ್ವರರು ಮಾಂಡೂಕ್ಯವನ್ನು ಶ್ರುತಿ ಎಂದು ಕಂಠೋಕ್ತವಾಗಿ ಕರೆದಿರುವದು **ಬೃಹದಾರಣ್ಯಕವಾರ್ತಿಕ** (ಬೃ.ವಾ. ೩-೮-೨೬)ದಲ್ಲಿ ಕಂಡುಬರುತ್ತದೆ. ಹೀಗಿರುವದರಿಂದ ಮಾಂಡೂಕ್ಯವು ಶ್ರುತಿ ಎಂದೂ ಆಗಮಾದಿಪ್ರಕರಣಚತುಷ್ಟಯವೂ ಒಬ್ಬ ಗ್ರಂಥಕರ್ತನ ಕೃತಿಯೆಂದೂ ಭಾವಿಸುವದಕ್ಕೆ ಯಾವ ಆಡ್ಡಿಯೂ ಕಾಣುವದಿಲ್ಲ.

1. ಗದ್ಯವೂ ಆಗಮಪ್ರಕರಣವೂ ಉಪನಿಷತ್ತೇ ಎಂಬುದರೂ ಇಲ್ಲಿ ಉದಾಹರಿಸಿರುವ ಶ್ಲೋಕಗಳು ಏತಕ್ಕೆ ಇಷ್ಟು ವಿವರವಾಗಿವೆ ಎಂಬುದಕ್ಕೆ ಕಾರಣವನ್ನು ಕೊಡುವದಕ್ಕೆ ಆಗುವಂತಿಲ್ಲ. ಏಕೆಂದರೆ ಉಪನಿಷತ್ತುಗಳ ಪದ್ಧತಿಯು ಇದಕ್ಕೆ ವಿಪರೀತವಾಗಿರುತ್ತದೆ.

ಗೌಡಪಾದರು ಬೌದ್ಧರೆಂಬ ವಾದದ ಜೊಳ್ಳುತನ

ಮಾಂಡೂಕ್ಯೋಪನಿಷದ್ಭಾಷ್ಯಕ್ಕೂ ಕಾರಿಕೆಯ ವ್ಯಾಖ್ಯಾನಕ್ಕೂ ಟೀಕೆಯನ್ನು ಬರೆದಿರುವ **ಆನಂದಗಿರಿ** ಎಂಬಾತನು ತಾನು ಗೌಡಪಾದೀಯಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವದಾಗಿ (ಪು.೧) ಹೇಳಿಕೊಂಡಿರುತ್ತಾನೆ. ಮಾಂಡೂಕ್ಯವು ಶ್ರುತಿಯೆಂದೂ (ಪು. ೪, ೮), ಪ್ರಕರಣಚತುಷ್ಟಯವು ನಾರಾಯಣಪ್ರಸಾದದಿಂದ ಗೌಡಪಾದಾಚಾರ್ಯರು ಸಂಪಾದಿಸಿದ ವಿದ್ಯೆಯ ಫಲವೆಂದೂ (ಪು. ೨. ೧೫೭)[1] ಹೇಳಿರುತ್ತಾನೆ. ಈ ಸಾಂಪ್ರದಾಯಿಕಕಥೆಯು ಆನಂದಗಿರಿಗಿಂತ ಪೂರ್ವದಲ್ಲಿಯೇ ಇದ್ದಿರಬೇಕೆಂಬುದು ಸ್ಪಷ್ಟವಾಗಿರುತ್ತದೆ. ಹೀಗಿದ್ದರೂ **ವ್ಯಾಲೆಸನ್** (Wallesen) ಎಂಬಾತನು ಅಲಾತಶಾಂತಿಪ್ರಕರಣದಲ್ಲಿ **ಭಾವವಿವೇಕ**ನೆಂಬ ಬೌದ್ಧನು ಬರೆದ ತರ್ಕಜ್ವಾಲಾ ಎಂಬ ಗ್ರಂಥದಲ್ಲಿ ಕಾಣುವ ಶ್ಲೋಕಗಳ ಛಾಯೆಯುಳ್ಳ ಹಲವು ಶ್ಲೋಕಗಳಿರುವದರಿಂದ ಗೌಡಪಾದನೆಂಬ ಹೆಸರಿನ ಒಬ್ಬ ಗ್ರಂಥಕರ್ತನಿದ್ದನೆಂಬುದೇ ಸಂಶಯಗ್ರಸ್ತವೆಂದು ಅಭಿಪ್ರಾಯಪಟ್ಟಿರುತ್ತಾನೆ. ಪ್ರೊಫೆಸರ್ ದಾಸಗುಪ್ತರವರು ಗೌಡಪಾದರಿಗೆ ಬೌದ್ಧರ ಪ್ರಕ್ರಿಯೆಯಲ್ಲಿ ಸಹಾನುಭೂತಿ ಇತ್ತೆಂದು ಅಭಿಪ್ರಾಯಪಟ್ಟಿರುವದನ್ನು ಆಗಲೇ ತಿಳಿಸಿರುತ್ತೇವೆ. ಸುರೇಶ್ವರರೇ ಮುಂತಾದವರು ಕಾರಿಕೆಗಳು ಗೌಡಪಾದರ ಕೃತಿಯೇ ಎಂದು ಸ್ಪಷ್ಟವಾಗಿ ಹೇಳಿರುವದನ್ನು ಕಡೆಗಣಿಸುವದಕ್ಕೆ ಈ ಆಧುನಿಕವಿದ್ವಾಂಸರಿಗೆ ಯಾವ ಆಧಾರವಿದೆಯೋ ನಮಗೆ ತಿಳಿಯದು. ಶಂಕರಾಚಾರ್ಯರು ತಮ್ಮ ಭಾಷ್ಯದ ಕೊನೆಯಲ್ಲಿ ತಮ್ಮ ಪರಮಗುರು'ಗಳನ್ನು ಸ್ಮರಿಸಿರುವದನ್ನು ನಾವು ಅಲಕ್ಷಿಸುವಂತಿಲ್ಲ. ಕಾರಿಕಾಕಾರರಿಗೆ ಗೌಡಪಾದರೆಂಬ ಹೆಸರಿತ್ತೋ ಇಲ್ಲವೋ ಎಂಬ ಸಂಶಯವುಂಟಾದರೂ ಆಗಬಹ ಏಕೆಂದರೆ ಅವರು ಗೌಡದೇಶದವರೆಂಬ ಕಾರಣದಿಂದಲೂ ಗೌಡಪಾದರೆಂಬ ಹೆಸರು ಪ್ರಸಿದ್ಧವಾಗಿರುವದಕ್ಕೆ ಸಾಕು. ಆದರೆ ಕಾರಿಕಾಕಾರರ ಮತಕ್ಕೂ ಬೌದ್ಧರ ಸಿದ್ಧಾಂತಕ್ಕೂ ಇರುವ ತಾರತಮ್ಯವು ಮಾತ್ರ ಅಸಡ್ಡೆಮಾಡುವಷ್ಟು ಅಸ್ಪುಟವಾಗಿಲ್ಲ. ಅಲಾತಶಾಂತಿಪ್ರಕರಣದಲ್ಲಿ ಗೌಡಪಾದರವರು ಸೌದರ ಯುಕ್ತಿಗಳನ್ನೇ ಬಹಳವಾಗಿ ಉಪಯೋಗಿಸಿಕೊಂಡು ಮಿಕ್ಕವರ ಮತಗಳನ್ನು ಖಂಡಿಸಿರುವದರಿಂದಲೂ ಬೌದ್ಧಗ್ರಂಥಗಳಲ್ಲಿ ಹಲವು ಪಾರಿಭಾಷಿಕ

[1] ಇಲ್ಲಿ ತೋರಿಸಿ ಪುಟಸಂಖ್ಯೆಗಳು ಪೂನಾದಲ್ಲಿ ಆನಂದಾಶ್ರಮ ಮುದ್ರಣಾಲಯದಲ್ಲಿ ಅಚ್ಚಾಗಿರುವ ಮಾಂಡೂಕ್ಯಭಾಷ್ಯಪುಸ್ತಕದವುಗಳು.

ಶಬ್ದಗಳನ್ನು ಉಪಯೋಗಿಸಿರುವದರಿಂದಲೂ ನಮ್ಮ ದೇಶದಲ್ಲಿಯೂ ಕೆಲವರು ಅವಿವೇಕಿಗಳು ಕಾರಿಕಾಕಾರರನ್ನು **ಪ್ರಚ್ಛನ್ನಬೌದ್ಧರು** ಎಂದು ಕರೆದಿರುತ್ತಾರೆ. ಆದ್ದರಿಂದ ಮಾಂಡೂಕ್ಯಕಾರಿಕೆಯ ಪ್ರಕ್ರಿಯೆಯಲ್ಲಿ ಬೌದ್ಧಮತದ ಸಾಂಕರ್ಯವಿದೆ ಎಂಬ ಶಂಕೆಯನ್ನು ತೊಲಗಿಸಿ ತತ್ತ್ವಜಿಜ್ಞಾಸುಗಳಿಗೆ ವೇದಾಂತದ ಅಸಾಧಾರಣಪ್ರಕ್ರಿಯೆಯನ್ನು ಮನಗಾಣಿಸುವದಕ್ಕಾಗಿ ಇಲ್ಲಿ ಇಡಿಯ ಗ್ರಂಥದ ವಿಷಯವನ್ನು ವಿಭಾಗಮಾಡಿ ಸಂಗ್ರಹವಾಗಿ ತಿಳಿಸುವೆವು.

ಆಗಮಪ್ರಕರಣ

ಮಾಂಡೂಕ್ಯೋಪನಿಷತ್ತನ್ನು ವಿವರಿಸುವದಕ್ಕಾಗಿ ಸಾಂಪ್ರದಾಯಿಕಕ್ರಮವನ್ನನುಸರಿಸಿರುವದರಿಂದ ಈ ಪ್ರಕರಣಕ್ಕೆ ಈ ಹೆಸರು ಬಂದಿರುತ್ತದೆ. ಈ ಪ್ರಕರಣದಲ್ಲಿ ಅವಸ್ಥಾತ್ರಯದ ನಿರೂಪಣೆಯಿದೆ. ಎಚ್ಚರದ ಆತ್ಮನು **ವಿಶ್ವನು,** ಎಂದರೆ ಇಡಿಯ ಸ್ಥೂಲಪ್ರಪಂಚವನ್ನೇ ಉಪಾಧಿಯಾಗುಳ್ಳ ಆತ್ಮನು ; ಕನಸಿನ ಆತ್ಮನು **ತೈಜಸನು** ಅಥವಾ **ಹಿರಣ್ಯಗರ್ಭನು,** ಇಡಿಯ ಸೂಕ್ಷ್ಮಪ್ರಪಂಚವನ್ನೇ ಉಪಾಧಿಯಾಗುಳ್ಳವನು ; ತನಿನಿದ್ರೆಯ ಆತ್ಮನು **ಪ್ರಾಜ್ಞನು** ಅಥವಾ **ಅವ್ಯಾಕೃತನು,** ಜಗತ್ತಿಗೆಲ್ಲ ಕಾರಣನಾಗಿರುವಾತನು. ಹೀಗೆ ಒಬ್ಬ ಆತ್ಮನೇ ಮೂರು ಬಗೆಯಾಗಿ ತೋರುತ್ತಾನೆ (೧-೧). ಈ ಅವಸ್ಥೆಗಳಲ್ಲಿ ಒಂದೊಂದರಲ್ಲಿಯೂ ಜ್ಞೇಯರಾಶಿಯೆಲ್ಲ ಅಡಗಿರುವದರಿಂದ ಈ ವಿಶ್ವಾದಿಗಳು ಆತ್ಮನ ಒಂದೊಂದು ಪಾದವೆನಿಸಿರುವರು. ಆದರೆ ಆತ್ಮನ ಪರಮಾರ್ಥರೂಪವು ಈ ಮೂರಕ್ಕಿಂತಲೂ ಅತ್ಯಂತವಿಲಕ್ಷಣವಾಗಿರುತ್ತದೆ (೧-೧೦ ರಿಂದ ೧-೧೫). ಈ ಮೂರೂ ಆತ್ಮನಲ್ಲಿ ಅನಾದಿಮಾಯೆಯಿಂದ ತೋರುತ್ತಿರುವ ಅಸತ್ಯವಾದ ರೂಪಗಳು ; ಅವು ನಿಜವಾಗಿರುವದಿಲ್ಲ (೧-೧೬). ಈ ಆತ್ಮತತ್ತ್ವವು ವಾಚ್ಯ ವಾಚಕಭಾವರಹಿತವಾಗಿರುವದರಿಂದ ಇದನ್ನು ಓಂಕಾರವೆಂದೂ ಆತ್ಮನೆಂದೂ ಕರೆಯುವರು. ಈ ಓಂಕಾರವು ಅಥವಾ ಆತ್ಮನು ಪ್ರಪಂಚೋಪಶಮನಾದ ಶಿವನೇ (೧-೨೪ ರಿಂದ ೨೯) ಎಂಬುದು ಆಗಮಪ್ರಕರಣದ ಸಾರವು. ಇಲ್ಲಿರುವ ಅವಸ್ಥಾತ್ರಯಪ್ರಕ್ರಿಯೆಯನ್ನೇ ಅಲಾತಶಾಂತಿಪ್ರಕರಣದಲ್ಲಿ (೪-೪೭ ರಿಂದ ೯೦) ಉಪಸಂಹಾರಮಾಡಿರುವದರಿಂದ ಈ ಎರಡು ಪ್ರಕರಣಗಳಿಗೂ ಪ್ರತಿಪಾದ್ಯ ವಿಷಯವು ಒಂದೇ ಎಂದು ಸಿದ್ಧವಾಗುತ್ತದೆ. **ಅವಸ್ಥಾತ್ರಯಗಳ ಮೂಲಕ ಆತ್ಮವಾದವನ್ನು ಸ್ಥಾಪಿಸುವ ಈ ಪ್ರಕ್ರಿಯೆಯು ಬೌದ್ಧರಿಗೆ ಸ್ವಲ್ಪವೂ ಒಪ್ಪಿಲ್ಲ.**

ವೈತಥ್ಯಪ್ರಕರಣ

ಎಚ್ಚರಕನಸುಗಳೆಂಬ ಅವಸ್ಥೆಗಳೆರಡೂ ಎಲ್ಲಾ ಬಗೆಯಿಂದಲೂ ಸಮಾನವಾಗಿರುವದೆಂದು ಸಾಧಿಸಿದ ಬಳಿಕ (೨-೧ ರಿಂದ ೧೦) ಆತ್ಮನಲ್ಲಿಯೇ ದ್ವೈತವೆಲ್ಲವೂ ಕಲ್ಪಿತವಾಗಿರುವದೆಂದು (೨-೧೧ ರಿಂದ ೩೮) ತೋರಿಸಿ ಕೊಟ್ಟಿರುತ್ತದೆ. **ಆತ್ಮನು ಪ್ರಪಂಚಾಧ್ಯಾಸಕ್ಕೆ ಅಧಿಷ್ಠಾನವೆಂಬ ಈ ವಾದವೂ ಬೌದ್ಧರ ನೈರಾತ್ಮ್ಯವಾದಕ್ಕೆ ವಿರುದ್ಧವಾಗಿರುತ್ತದೆ.**

ಅದ್ವೈತಪ್ರಕರಣ

ಈ ಪ್ರಕರಣದಲ್ಲಿ ಬ್ರಹ್ಮವು ಚೇತನಾಚೇತನರೂಪವಾಗಿ ಜನಿಸಿರುವದೆಂದೂ ಜೀವರು ಉಪಾಸನೆಯಿಂದ ಬ್ರಹ್ಮಸ್ವರೂಪವನ್ನು ಪಡೆಯುವರೆಂದೂ ವಾದಿಸುತ್ತಿದ್ದವರ ಜಾತಬ್ರಹ್ಮವಾದವನ್ನು ಖಂಡಿಸಿ ಶ್ರುತಿಯಲ್ಲಿ ಹೇಳಿರುವ ಸೃಷ್ಟಿಯು ಜೀವಪರಮಾತ್ಮರ ಐಕ್ಯವನ್ನು ತಿಳಿಸುವದಕ್ಕೆ ಉಪಾಯಮಾತ್ರವು ಎಂದು ಸಾಧಿಸಿರುತ್ತದೆ (೩-೧೦ ರಿಂದ ೨೭). ಬ್ರಹ್ಮವು ಮಾಯೆಯಿಂದ ಜಗದ್ರೂಪವಾಗಿ ಹುಟ್ಟಬಹುದು ಆದರೆ ಅಸತ್ತು ನಿಜವಾಗಿಯಾಗಲಿ ಮಾಯೆಯಿಂದಲಾಗಲಿ ಹುಟ್ಟಲೇ ಆರದು ಎಂದು ಸತ್ಕಾರ್ಯರೂಪವಾದ ಸ್ವಮತವನ್ನು ಸ್ಪಷ್ಟಪಡಿಸಿದೆ (೩-೨೭, ೨೮). ಆತ್ಮನೇ ಸತ್ಯನೆಂಬುದನ್ನು ಅರಿತರೆ ಮನಸ್ಸು ಅಮನಸ್ಸಾಗುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ (೩-೨೯ ರಿಂದ ೩೯). ಮನೋನಿಗ್ರಹದಿಂದಲೂ ಈ ತತ್ತ್ವವನ್ನು ಮಧ್ಯಮಾಧಿಕಾರಿಗಳು ಕಂಡುಕೊಳ್ಳಬಹುದೆಂದು ಉಪದೇಶಿಸಿದೆ (೩-೪೦ ರಿಂದ ೪೬). **ಹೀಗೆ ಶ್ರುತ್ಯರ್ಥವನ್ನು ವಿಚಾರಮಾಡಿ ಯುಕ್ತಿಯಿಂದ ಅದ್ವೈತವನ್ನು ಸ್ಥಾಪಿಸುವ, ಮತ್ತು ಅಸತ್ಕಾರ್ಯವಾದವನ್ನು ಸ್ಪಷ್ಟೋಕ್ತಿಯಿಂದ ತಿರಸ್ಕರಿಸಿ ಸದ್ವಿವರ್ತವಾದವನ್ನು ಅಂಗೀಕರಿಸುವ, ಈ ಪ್ರಕರಣವು ಯಾವ ಬೌದ್ಧನಿಗೂ ಒಪ್ಪಾಗಲಾರದು.**

ಅಲಾಂತಶಾಂತಿಪ್ರಕರಣ

ಈ ಪ್ರಕರಣದಲ್ಲಿ ಜ್ಞಾತೃಜ್ಞೇಯಜ್ಞಾನಗಳ ಅಭೇದವನ್ನು ಉಪಕ್ರಮದಲ್ಲಿಯೂ, ಉಪಸಂಹಾರದಲ್ಲಿಯೂ (೪-೧, ೪-೯೯) ಮಂಗಳರೂಪವಾಗಿ ಹೇಳಿರುತ್ತದೆ. ದ್ವೈತಿಗಳು ಒಬ್ಬರಿಗೊಬ್ಬರು ವಿರುದ್ಧವಾಗಿ ವಾದಿಸುತ್ತಿರುವದ

ರಿಂದಲೂ ಅವರಲ್ಲಿ ಯಾರೊಬ್ಬರ ಯುಕ್ತಿಯನ್ನೂ ಪ್ರತಿಪಕ್ಷದವರು ಒಪ್ಪುವ ಹಾಗಿರುವದಿಲ್ಲವಾದ್ದರಿಂದಲೂ ದ್ವೈತದರ್ಶನಗಳು ಮಿಥ್ಯೆ. ಪರಮಾರ್ಥವನ್ನು ಹೇಳುವ ಅದ್ವೈತದರ್ಶನವು ಯಾವದಕ್ಕೂ ವಿರುದ್ಧವಲ್ಲ (೩-೧೭, ೧೮) ಎಂದು ಅದ್ವೈತಪ್ರಕರಣದಲ್ಲಿ ಸೂತ್ರರೂಪವಾಗಿ ಹೇಳಿರುವದನ್ನು ಇಲ್ಲಿ ವಿಸ್ತಾರವಾಗಿ ವರ್ಣಿಸಿ ಅಜಾತಿವಾದವನ್ನು ಸ್ಥಾಪಿಸಿರುತ್ತದೆ (೪-೨ ರಿಂದ ೨೩). ಹೊರಗಿನ ವಿಷಯವು ಸತ್ಯವೆಂದು ಒಪ್ಪುವ ವೈಭಾಷಿಕಸೌತ್ರಾಂತಿಕರ ಮತವನ್ನು ಒಳಗಿನ ವಿಜ್ಞಾನವನ್ನು ಮಾತ್ರ ಒಪ್ಪುವ ವಿಜ್ಞಾನವಾದಿಗಳ ದೃಷ್ಟಿಯಿಂದ ಖಂಡಿಸಿ (೪-೨೪ ರಿಂದ ೨೭) ಅದೇ ಯುಕ್ತಿಯಿಂದ ವಿಜ್ಞಾನವಾದವನ್ನೂ ಖಂಡಿಸಿ (೪-೨೮) ಅಜಾತಿವಾದವನ್ನು ವಿಸ್ತಾರವಾಗಿ ಪ್ರತಿಪಾದಿಸಿರುತ್ತದೆ. (೪-೨೯ ರಿಂದ ಮುಂದಕ್ಕೆ) **ಅವಿದ್ಯಾದಿಗಳು ಒಂದರಿಂದ ಒಂದು ಹುಟ್ಟುವವೆಂಬ ಬೌದ್ಧರ ಪ್ರತೀತ್ಯಸಮುತ್ಪಾದಕ್ಕೂ ಅದ್ವಿತೀಯಾತ್ಮನಿಗೆ ಹುಟ್ಟಿಂಬುದೇ ಪರಮಾರ್ಥವಾಗಿಲ್ಲ ಎಂಬ ಅಜಾತಿವಾದಕ್ಕೂ ಯಾವ ಸಂಬಂಧವನ್ನೂ ಹೇಳುವದಕ್ಕೆ ಯಾರಿಂದಲೂ** ಆಗಲಾರದು.

ಮಾಂಡೂಕ್ಯಕಾರಿಕೆಗೂ ಬೌದ್ಧಗ್ರಂಥಗಳಿಗೂ ಪ್ರಕ್ರಿಯಾಸಾಮ್ಯವನ್ನು ಕಂಡಿರುಃ ಈಗಿನ ವಿಮರ್ಶಕರು ಕಾರಿಕೆಗೆ ಶಂಕರಾಚಾರ್ಯರು ಬರೆದಿರುವ ವ್ಯಾಖ್ಯಾನವನ್ನು ಲೆಕ್ಕಕ್ಕೆ ತೆಗೆದುಕೊಂಡಿರುವದಿಲ್ಲ. ಭಾಷ್ಯಕಾರರು ತಿಳಿದೋ ತಿಳಿಯದೆಯೋ ಕಾರಿಕೆಗೆ ಬೇರೊಂದು ತೆರನಾದ ಅರ್ಥವನ್ನೇಕೆ ಮಾಡಿರ ಬಾರದು ? - ಎಂದು ಯುಕ್ತಿಪ್ರಧಾನರಾದವರು ಶಂಕಿಸಬಹುದಷ್ಟೆ. ಅಂಥವರ ಶಂಕೆಯನ್ನು ತೊಲಗಿಸುವದಕ್ಕಾಗಿ ನಾವು ಭಾಷ್ಯವನ್ನು ಬಿಟ್ಟು ಬರಿಯ ಗೌಡಪಾದ ಕಾರಿಕೆಯ ವಿಮರ್ಶೆಯಿಂದಲೇ ಕಾರಿಕೆಗೂ ಬೌದ್ಧರ ಗ್ರಂಥಗಳಲ್ಲಿರುವ ಪ್ರಕ್ರಿಯೆಗೂ ಯಾವ ಸಂಬಂಧವೂ ಇಲ್ಲವೆಂದು ಮೇಲೆ ತೋರಿಸಿಕೊಟ್ಟಿರುತ್ತೇವೆ. ಭಾಷ್ಯಕಾರರ ಅಭಿಪ್ರಾಯವನ್ನು ಮನದಂದರಂತೂ ಕಾರಿಕೆಯು ವೇದಾಂತಪ್ರಸ್ಥಾನತ್ರಯದ ಪ್ರಕ್ರಿಯೆಯನ್ನೇ ಯುಕ್ತಿಯಿಂದಲೂ ಸಾಧಿಸಿರುತ್ತದೆ- ಎಂಬುದು ಸುಸ್ಪಷ್ಟವಾಗಿರುತ್ತದೆ. ಮಾಂಡೂಕ್ಯಕಾರಿಕೆಗಳಿಗೂ ಬೌದ್ಧಗ್ರಂಥಗಳಿಗೂ ಕೆಲಕೆಲವು ಕಡೆಗಳಲ್ಲಿ ಶಬ್ದಸಾಮ್ಯವು ಕಂಡುಬರುವದು ನಿಜ ; ಆದರೆ ಆ ಶಬ್ದಗಳಿಗೆ ಅರ್ಥಸಾಮ್ಯವಿರುವದಿಲ್ಲ. ಬಾದರಾಯಣಸೂತ್ರದಲ್ಲಿ 'ಪ್ರಧಾನ', 'ಪ್ರತ್ಯಕ್ಷ', 'ಅನುಮಾನ' - ಮುಂತಾದ ದರ್ಶನಾಂತರದ ಪಾರಿಭಾಷಿಕ ಶಬ್ದಗಳನ್ನು ವೇದಾಂತಕ್ಕೆ ಒಪ್ಪಾದ ರೀತಿಯಿಂದ ಪ್ರಯೋಗಿಸಿರುವಂತೆ

ಗೌಡಪಾದರೂ ಬೌದ್ಧರ ಶಬ್ದಗಳನ್ನು ವೇದಾಂತಕ್ಕೆ ಅನುಗುಣವಾದ ಬೇರೆಯ ಅರ್ಥದಲ್ಲಿಯೇ ಉಪಯೋಗಿಸಿರುತ್ತಾರೆ. ಕುತೂಹಲಿಗಳಾದ ವಾಚಕರ ಸಲುವಾಗಿ ಇಂಥ ಶಬ್ದಗಳನ್ನೂ ವಾಕ್ಯಗಳನ್ನೂ ಪರಿಶಿಷ್ಟದಲ್ಲಿ (ಕೊನೆಯಲ್ಲಿ) ಕೊಟ್ಟು ಈ ಅರ್ಥಭೇದವನ್ನು ತೋರಿಸಿರುತ್ತೇವೆ. ಈ ಪ್ರಕರಣದಲ್ಲಿ ಬೌದ್ಧರ ಯುಕ್ತಿಗಳಿಂದ ಮಿಕ್ಕ ವಾದಿಗಳ ಮತವನ್ನು ಖಂಡಿಸಿ ಬೌದ್ಧರನ್ನೂ ಆ ಯುಕ್ತಿಗೇ ಸಿಕ್ಕಿಸಿಕೊಂಡು ಖಂಡಿಸಿರುವದರಿಂದ ಈ ಸಂದರ್ಭದಲ್ಲಿ ಬೌದ್ಧರ ಯುಕ್ತಿಗಳೂ ಕೆಲವು ಕಾಣಬರುವದು ಸೋಜಿಗವಲ್ಲ. ಅಶ್ವಘೋಷ, ನಾಗಾರ್ಜುನ - ಮುಂತಾದ ಬೌದ್ಧರು ಗೌಡಪಾದರಿಗಿಂತ ಹಿಂದಿನವರೋ ಈಚಿನವರೋ ಎಂಬ ವಾದಗ್ರಸ್ತವಿಷಯವನ್ನು ನಾವು ಇಲ್ಲಿ ಚರ್ಚಿಸಬೇಕಾದದ್ದಿಲ್ಲ. ಗೌಡಪಾದರೇ ಆ ಬೌದ್ಧರಿಗಿಂತ ಈಚಿನರೆಂದು ಹೇಳುವವರೂ ಮೇಲೆ ಹೇಳಿದ ಅಭಿಪ್ರಾಯಕ್ಕೆ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ಏಕೆಂದರೆ ಪ್ರತಿಪಕ್ಷವನ್ನು ಖಂಡಿಸುವಾಗ ಅವರವರ ಪರಿಭಾಷೆಗಳನ್ನೂ ಯುಕ್ತಿಗಳನ್ನೂ ಬಳಸಿದ ಮಾತ್ರದಿಂದಲೇ ಆ ಪ್ರತಿಪಕ್ಷವನ್ನು ಒಪ್ಪಿದ ಹಾಗಾಗುವದೆಂದು ಯಾರೂ ಹೇಳುವದಕ್ಕೆ ಬರುವದಿಲ್ಲ.

ಅಲಾತಶಾಂತಿಪ್ರಕರಣವು ಒಂದು ಸ್ವತಂತ್ರಗ್ರಂಥವೆ ?

ಈ ಪ್ರಕರಣದಲ್ಲಿ ಮೊದಲಲ್ಲಿಯೂ ಕೊನೆಯಲ್ಲಿಯೂ ಮಂಗಲಶ್ಲೋಕಗಳಿರುವದು, ಬೌದ್ಧರ ವಚನಗಳನ್ನೂ ಯುಕ್ತಿಗಳನ್ನೂ ಹೇರಳವಾಗಿ ಉಪಯೋಗಿಸಿರುವದು - ಇಷ್ಟುಮಾತ್ರದಿಂದ ಇದು ಹಿಂದಿನ ಮೂರು ಪ್ರಕರಣಗಳಿಗೆ ಸಂಬಂಧವಿಲ್ಲದ ಒಂದು ಬೇರೆಯ ಗ್ರಂಥವೆಂದು ಕೆಲವರು ಊಹಿಸಿದ್ದಾರೆ. ಈ ವಾದದ ಪೊಳ್ಳುತನವೂ ಮೇಲೆ ಹೇಳಿರುವ ಯುಕ್ತಿಗಳಿಂದಲೇ ಸ್ಪಷ್ಟವಾಗುತ್ತದೆ. ಶಂಕರಾಚಾರ್ಯರವರು ಈ ಪ್ರಕರಣವನ್ನು 'ಶಾಸ್ತ್ರ'ವೆಂದು ಕರೆದಿರುತ್ತಾರೆ (೪-೧, ೪-೧೦೦). ಆದರೆ ಅಷ್ಟುಮಾತ್ರದಿಂದ ಇದು ಬೇರೊಂದು ಗ್ರಂಥವೆಂದು ಹೇಳಲಾಗುವದಿಲ್ಲ ; ಹಾಗೆ ಹೇಳಿದರೆ ನಾಲ್ಕುಪ್ರಕರಣಗಳಿಗೂ ಭಾಷ್ಯವನ್ನು ಬರೆಯುವದಾಗಿ ಅವರೇ ಪ್ರಾರಂಭದಲ್ಲಿ ಮಾಡಿರುವ ಪ್ರತಿಜ್ಞೆಗೆ ವಿರುದ್ಧವಾಗುತ್ತದೆ. ಆದ್ದರಿಂದ ಗೀತೆಯ ಹದಿನೈದನೆಯ ಅಧ್ಯಾಯವನ್ನು ಗೀತಾಶಾಸ್ತ್ರದ ಸಾರವೆಂಬರ್ಥದಲ್ಲಿ 'ಶಾಸ್ತ್ರ'ವೆಂದು (ಗೀ. ೧೫-೨೦) ಕರೆದಿರುವಂತೆಯೇ ಇಲ್ಲಿಯೂ ಮಾಂಡೂಕ್ಯೋಪನಿಷದ್ರೂಪವಾದ ಶಾಸ್ತ್ರದ ಸಾರವನ್ನು ತಿಳಿಸುವ ಈ ಪ್ರಕರಣವನ್ನು ಭಾಷ್ಯಕಾರರು 'ಶಾಸ್ತ್ರ'ವೆಂದು ಕರೆದಿದ್ದಾರೆ - ಎಂದು

ಭಾವಿಸಬೇಕಾಗಿದೆ. ಮಿಕ್ಕ ಮೂರು ಪ್ರಕರಣಗಳಲ್ಲಿರುವ ಅರ್ಥವನ್ನೇ ಈ ಪ್ರಕರಣದಲ್ಲಿ ಉಪಸಂಹಾರಮಾಡಿರುತ್ತದೆ ಎಂಬುದನ್ನು ನಾವು ಆಗಲೇ ತಿಳಿಸಿಕೊಟ್ಟಿರುವದರಿಂದ ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸುವೆವು.

ಬೌದ್ಧದರ್ಶನಕ್ಕೂ ಉಪನಿಷತ್ತೇ ಮೂಲವು

ಚೆನ್ನಾಗಿ ನೋಡಿದರೆ ಬೌದ್ಧಮತವು ಯುಕ್ತಿಯ ಬಲದಿಂದ ಪ್ರಸಾರವಾಗುವದಕ್ಕೂ ಉಪನಿಷತ್ತೇ ಪರಂಪರೆಯಿಂದ ಕಾರಣವಾಯಿತೆಂದು ಹೇಳಬೇಕಾಗುತ್ತದೆ. ಏಕೆಂದರೆ ಬೌದ್ಧರಲ್ಲಿ ಮೊದಮೊದಲು ಯುಕ್ತಿಪ್ರಧಾನವಾದ ಗ್ರಂಥಗಳು ಇರಲೇ ಇಲ್ಲ; 'ದ್ವಾದಶನಿದಾನ ಅಥವಾ ಭವಚಕ್ರ', 'ಶೀಲ', 'ಸಮಾಧಿ', 'ಪ್ರಜ್ಞಾ' - ಇವುಗಳನ್ನೇ ಅವರು ಮುಖ್ಯವಾಗಿ ಉಪದೇಶಿಸುತ್ತಿದ್ದರು. ಆತ್ಮನಿಲ್ಲವೆಂಬ ವಾದವೇ ಅವರ ಅಸಾಧಾರಣಮತ. ಆದರೂ ಕ್ರಿ. ಶ. ೧ನೆಯ ಶತಮಾನದಿಂದೀಚೆಗೆ ಪ್ರಪಂಚನಿರಾಕರಣಯುಕ್ತಿಯು ಅವರಲ್ಲಿ ಬಲವಾಯಿತು. ಇದಕ್ಕೆ ಕಾರಣವೇನೆಂದರೆ **ಅಶ್ವಘೋಷ**ನೆಂಬ ಬ್ರಾಹ್ಮಣನು ವಾದದಲ್ಲಿ ಜಿತನಾಗಿ ಬೌದ್ಧಮತಕ್ಕೆ ಸೇರಿದ ಬಳಿಕ ಅವನು **'ತಥಾತಾ'** ಎಂಬ ಹೊಸಸಿದ್ಧಾಂತವೊಂದನ್ನು ತೆಗೆದನು. ನಮ್ಮಲ್ಲಿ ಸಂಸಾರ್ಯಂಶವೊಂದು, 'ಭೂತತಥಾತಾ' (ಇದ್ದದ್ದು ಇದ್ದಂತೆಯೇ ಇರುವದು) ಎಂಬ ಅಂಶವೊಂದು - ಹೀಗೆ ಎರಡು ಅಂಶಗಳಿರುವವೆಂದೂ ಸಂಸಾರವು ಅಸತ್ಯವೆಂದೂ 'ತಥಾತಾ' ಎಂಬುದು ಸತ್ಯವೆಂದಾಗಲಿ ಅಸತ್ಯವೆಂದಾಗಲಿ ಹೇಳುವದಕ್ಕೆ ಬಾರದ ಸ್ವರೂಪವುಳ್ಳದ್ದೆಂದೂ ಅವನು ವಾದಿಸಿದನು. ಉಪನಿಷತ್ತಿನ ಕೂಟಸ್ಥನಿರ್ವಿಶೇಷಾತ್ಮವಾದಕ್ಕೆ ಇದು ಎಷ್ಟು ಹತ್ತಿರವಿರುವದೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಅಶ್ವಘೋಷನ ಅನಂತರ ಅವನ ವಾದವು ಬಲಪಡಲಿಲ್ಲ. **'ಲಂಕಾವತಾರ'**ವೇ ಮುಂತಾದ ಗ್ರಂಥಗಳಲ್ಲಿ **ತಥಾಗತಗರ್ಭನ್** ಎಂಬ ನಾಮಾಂತರದಿಂದ ಇದೇ ಅಭಿಪ್ರಾಯವನ್ನು ತಿಳಿಸಿದೆಯಾದರೂ ಆತ್ಮನುಂಟೆಂದು ನಂಬುವ ಅಜ್ಞರಿಗಾಗಿ ಈ ವಾದವನ್ನು ಮೊದಲನೆಯ ಭೂಮಿಕೆಯಾಗಿ ಉಪದೇಶಿಸಿದೆಯೆಂದೂ ಇದು ಪರಮಾರ್ಥವಲ್ಲವೆಂದೂ ಅಲ್ಲಿ ಸ್ಪಷ್ಟವಾಗಿ ಹೇಳಿಬಿಟ್ಟಿದೆ. ಇದು ಹಾಗಿರಲಿ. ಅಶ್ವಘೋಷನ ಅನಂತರ ಬಂದ ವಾದಿಗಳೆಲ್ಲರೂ ಪ್ರಪಂಚನಿರಾಕರಣವಾದವನ್ನು ಬೆಳೆಯಿಸುತ್ತಾ ಹೋದರು. ನಾಗಾರ್ಜುನ, ಚಂದ್ರಕೀರ್ತಿ ಮೊದಲಾದವರು ಹೊಸಯುಕ್ತಿಗಳನ್ನು ಜೋಡಿಸಿ ಈ ವಾದಕ್ಕೆ ಬಲವನ್ನು ಕೊಟ್ಟರು. ಅಂತೂ ಉಪನಿಷತ್ತಿನಲ್ಲಿದ್ದ

ಬ್ರಹ್ಮಸತ್ಯತ್ವವಾದ, ಜಗನ್ಮಿಥ್ಯಾತ್ವವಾದ - ಎಂಬ ಎರಡು ವಾದಗಳಲ್ಲಿ ಎರಡನೆಯದು ಬೌದ್ಧರ ಮೂಲಕವಾಗಿ ಪಕ್ವವಾಯಿತು. ಅವರು ಉಪನಿಷತ್ ಪ್ರಮಾಣವನ್ನು ಇಟ್ಟುಕೊಳ್ಳಲಿಲ್ಲವಾದ್ದರಿಂದ ಬ್ರಹ್ಮಸತ್ಯತ್ವವನ್ನು ಪ್ರತಿಪಾದಿಸುವ ಪ್ರಧಾನವಾದಕ್ಕೆ ಅವರಲ್ಲಿ ಇಂಬು ದೊರೆಯದೆ ಹೋಯಿತು.

ಬೌದ್ಧರು ಪ್ರಪಂಚನಿರಾಕರಣವಾದದಲ್ಲಿ ನಿಪುಣರು. ಜಗತ್ತು ಸತ್ಯವೆಂದು ನಮ್ಮ ಅನುಭವದಲ್ಲಿರುವಾಗ ಅದನ್ನು ಇಲ್ಲವೆನ್ನಬಹುದೆ ? - ಎಂಬ ಶಂಕೆಗೆ ಜಡರು ಅನುಭವದಲ್ಲಿದೆ ಎನ್ನುವ ಜಗತ್ತಿನ ವಿಷಯಕ್ಕೆ ಬಗೆಬಗೆಯ ವಿಕಲ್ಪಗಳನ್ನು ಹಾಕಿ ಯಾವದೊಂದು ವಿಕಲ್ಪವೂ ತರ್ಕದ ಹೊಡೆತಕ್ಕೆ ನಿಲ್ಲುವಂತಿಲ್ಲವೆಂದು ತೋರಿಸಿಕೊಡುವದೇ ಬೌದ್ಧರ ಮುಖ್ಯಯುಕ್ತಿ. ಈ ಯುಕ್ತಿಯನ್ನೇ ಶ್ರೀಗೌಡಪಾದಾಚಾರ್ಯರು ಅಲಾತಶಾಂತಿಪ್ರಕರಣದಲ್ಲಿ ಉಪಯೋಗಿಸಿಕೊಂಡು ಅದರಿಂದಲೇ ಬೌದ್ಧರ ಪ್ರಕ್ರಿಯೆಯನ್ನೂ ನಿರಾಕರಣ ಮಾಡಿ ದ್ವೈತವಾದವನ್ನೆಲ್ಲ ಖಂಡಿಸಿ ವೈದಿಕತರ್ಕದ ಮಹತ್ವವನ್ನು ತೋರಿಸಿ ಕೊಟ್ಟಿರುತ್ತಾರೆ. ಈ ಗುಟ್ಟನ್ನರಿಯದ ವಿಮರ್ಶಕಮನ್ಯರು ಗೌಡಪಾದರ ವೇದಾಂತದಲ್ಲಿ ಬೌದ್ಧಮತದ ಸಾಂಕರ್ಯವಿದೆ ಎಂದು ಭ್ರಮಿಸಿರುತ್ತಾರೆ.

ಕಾರಿಕೆಯ ಮೇಲಿನ ಶಾಂಕರಭಾಷ್ಯ

ಗೌಡಪಾದರ ಕಾರಿಕೆಯು ಬಹು ಪ್ರಾಚೀನವಾಗಿರುವದರಿಂದ ಇದರ ಒಂದು ಭಾಗವನ್ನು ಉಪನಿಷತ್ತೆಂದೂ ಇನ್ನೊಂದು ಭಾಗವನ್ನು ಬೌದ್ಧರ ಪ್ರಕರಣವೆಂದೂ ಭ್ರಮಿಸುವಂತಾಗಿದೆ ಎಂದು ಆಗಲೆ ತಿಳಿಸಿದ್ದಾಗಿದೆಯಷ್ಟೆ. ಈ ಪ್ರಕರಣಚತುಷ್ಟಯಕ್ಕೆ ಶಂಕರಾಚಾರ್ಯರ ಭಾಷ್ಯವು ಇಲ್ಲದಿದ್ದರೆ ವೇದಾಂತಿಗಳೂ ಇದರ ನಿಜವನ್ನು ತಿಳಿಯುವದು ಕಷ್ಟವಾಗುತ್ತಿತ್ತೆಂಬುದು ನಿಶ್ಚಯ. ಏಕೆಂದರೆ ಶಂಕರರಿಗಿಂತ ಕೆಲವರು ಒಂದಿನವರು ಪಸ್ತುತಂತ್ರವಾದ ಜ್ಞಾನವನ್ನೇ ಪ್ರಧಾನವಾಗಿ ಪ್ರತಿಪಾದಿಸುವ ಈ ಗ್ರಂಥಕ್ಕೂ ಉಪಾಸನಾಪರವಾಗಿ ವ್ಯಾಖ್ಯಾನ ಮಾಡುತ್ತಿದ್ದರೆಂಬುದಕ್ಕೆ ನಮಗೆ **ಬೃಹದಾರಣ್ಯಕಭಾಷ್ಯವಾರ್ತಿಕ**ದಲ್ಲಿ ಆಧಾರವು ಸಿಕ್ಕುತ್ತದೆ. ಆ ವಾರ್ತಿಕದಲ್ಲಿ ವೈತಥ್ಯಪ್ರಕರಣದ ೩೮ನೆಯ ಶ್ಲೋಕವನ್ನೂ, ಅದ್ವೈತಪ್ರಕರಣದ ೪೬ನೆಯ ಶ್ಲೋಕವನ್ನೂ, ಜ್ಞಾನಾಭ್ಯಾಸಪರವಾಗಿ ಭಾವಿಸಿ ಉದಾಹರಿಸುತ್ತಿದ್ದವರ ಮತವನ್ನು (ಬೃ. ವಾ. ೪-೪-೮೮೭, ೮೮೮) ಖಂಡಿಸಿರುತ್ತದೆ. ಕಾರಿಕೆಯಲ್ಲಿನ ವೇದಾಂತಸಿದ್ಧಾಂತದ ವಿಷಯಕ್ಕೆ ಈಗಲೂ

ಅದ್ವೈತಿಗಳಲ್ಲಿಯೇ ಹಲವು ವಿಚಿತ್ರವಾದ ಮತಭೇದಗಳು ಕಂಡುಬರುತ್ತವೆ. ಈ ಕಾರಣದಿಂದ ಕಾರಿಕಾಭಾಷ್ಯದಲ್ಲಿರುವ ಕೆಲವು ಮುಖ್ಯವಿಚಾರಗಳನ್ನು ಇಲ್ಲಿ ವಾಚಕರ ಲಕ್ಷ್ಯಕ್ಕೆ ತರುವದು ಅವಶ್ಯವೆಂದು ನಮಗೆ ತೋರಿರುತದೆ. ಕಾರಿಕೆಯಲ್ಲಿ ಅಡಗಿರುವ ಸಿದ್ಧಾಂತದ ತತ್ತ್ವವನ್ನು ಅರಿತುಕೊಳ್ಳಬೇಕೆಂಬ ಜಿಜ್ಞಾಸುಗಳಿಗೆ ಇದರಿಂದ ಪ್ರಯೋಜನವಾಗುವದೆಂದು ನಮ್ಮ ನಂಬಿಕೆ.

ಅದ್ವೈತವು ಶಾಸ್ತ್ರಸಿದ್ಧವೊ, ತರ್ಕಸಿದ್ಧವೊ ?

ಇಡಿಯ ಗತ್ತಿನ ತಿರುಳನ್ನು ವೇದಾಂತದಲ್ಲಿ ಬ್ರಹ್ಮವೆಂದು ಕರೆದಿರುತ್ತದೆ. ಬ್ರಹ್ಮವು ನಮ್ಮೆಲ್ಲರಿಗೂ ಆತ್ಮನಾಗಿರುತ್ತದೆ, ಅದು ಅದ್ವಿತೀಯವಾಗಿ ನಿರ್ವಿಶೇಷವಾಗಿರುತ್ತದೆ - ಎಂಬುದು ವೇದಾಂತಸಿದ್ಧಾಂತವು. ಈ ಸಿದ್ಧಾಂತವು ಉಪನಿಷತ್ತುಗಳಿಂದಲೇ ತಿಳಿಯಬರುವದೆಂದೂ ಪ್ರತ್ಯಕ್ಷದಿಂದಲಾಗಲಿ ಅನುಮಾನದಿಂದಲಾಗಲಿ ಅದನ್ನು ತಿಳಿಯುವದಕ್ಕೆ ಆಗುವದಿಲವೆಂದೂ ವೇದಾಂತಿಗಳು ಹೇಳುತ್ತಾರೆ. ಬ್ರಹ್ಮವು ಉಪನಿಷದ್ರೂಪವಾದ ಶಾಸ್ತ್ರವೊಂದರಿಂದಲೇ ತಿಳಿಯಬರತಕ್ಕದ್ದೆಂದು ತಿಳಿಸುವದಕ್ಕೆ 'ಔಪನಿಷದ' ಎಂಬ ವಿಶೇಷಣವನ್ನು ಶ್ರುತಿಯಲ್ಲಿ ಉಪಯೋಗಿಸಿರುತ್ತದೆ 'ಶಾಸ್ತ್ರಯೋನಿ' ಎಂಬ ವಿಶೇಷಣವನ್ನು ಬ್ರಹ್ಮಸೂತ್ರದಲ್ಲಿ ಉಪಯೋಗಿಸಿರುತ್ತದೆ. ಇದೆಲ್ಲವೂ ತರ್ಕಪ್ರಧಾನರಾದ ಈಗಿನವರಿಗೆ ವಿರುದ್ಧವಾಗಿ ತೋರುತ್ತದೆ. ವೇದವನ್ನು ನಂಬುವವರಿಗೆ ಬ್ರಹ್ಮವು ಶಾಸ್ತ್ರೈಕವೇದ್ಯವಾಗಿರಬಹುದು ; ಆದರೆ ವೇದಪ್ರಾಮಾಣ್ಯದಲ್ಲಿ ಶ್ರದ್ಧೆಯಿಲ್ಲದ ಬೌದ್ಧರೇ ಮುಂತಾದವರು ಹಾಗೆಂದು ಒಪ್ಪಿಯಾರೆ ? ಇಲ್ಲ. ಈ ಕಾರಣದಿಂದ ಗೌಡಪಾದರು ವೇದಪ್ರಾಮಾಣ್ಯವನ್ನು ಹಿಡಿದು ಆಗಮಪ್ರಕರಣದಲಿ ಪರಮಾರ್ಥವನ್ನು ತಿಳಿಸಿಕೊಟ್ಟು ಅದನ್ನು ನಂಬದವರಿಗಾಗಿ ಮಿಕ್ಕ ಮೂರು ಪ್ರಕರಣಗಳಲ್ಲಿ ಕೇವಲ ಯುಕ್ತಿಯಿಂದಲೇ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿರುತ್ತಾರೆ, ಶಂಕರಾಚಾರ್ಯರೂ ಹಾಗೆಂದೇ ರೆದಿರುತ್ತಾರೆ - ಎಂಬುದು ಈ ತರ್ಕಪ್ರಿಯರ ಮತವು.

ಶಾಂಕರಭಾಷ್ಯವನ್ನು ಸರಿಯಾಗಿ ಪರಿಶೀಲಿಸದೆ ಇರುವದರಿಂದಲೂ ಪ್ರಮಾಣತರ್ಕಗಳ ಸ್ವಭಾವತಾರತಮ್ಯವನ್ನು ಅರಿತುಕೊಳ್ಳದೆ ಇರುವದರಿಂದಲೂ ಈ ವಿಚಿತ್ರಾಭಿಪ್ರಾಯವು ಹೊರಬಿದ್ದಿರುತ್ತದೆ ಎಂದು ನಮಗೆ ತೋರುತ್ತದೆ. ಏಕೆಂದರೆ ಶ್ರುತಿಯುಕ್ತಿಗಳೆರಡರಿಂದಲೂ ತಾವು ಅದ್ವೈತವನ್ನು ಸ್ಥಾಪಿಸಿರುವದಾಗಿ

ಶಂಕರಾಚಾರ್ಯರು ಬಾಯಿಬಿಟ್ಟು ಹೇಳಿರುವ ವಚನಗಳು ಕಾರಿಕಾಭಾಷ್ಯದಲ್ಲಿ ನಾಲ್ಕು ಪ್ರಕರಣಗಳಲ್ಲಿಯೂ ಸಿಕ್ಕುತ್ತವೆ. ಹೇಗೆಂದರೆ :

(೧) ಪ್ರಥಮಂ ಪ್ರಕರಣಮ್ ಆಗಮಪ್ರಧಾನಮ್ । (ಭಾ. ಭಾ.೩)

(೨) ಆಗಮಮಾತ್ರಂ ತತ್ । ತತ್ರ ಉಪಪತ್ತ್ಯಾಪಿ ದ್ವೈತಸ್ಯ ವೈತಥ್ಯಂ ಶಕ್ಯತೇ ಅವಧಾರಯಿತುಮ್ ಇತಿ ದ್ವಿತೀಯಂ ಪ್ರಕರಣಮ್ ಆರಭ್ಯತೇ ।
(ಭಾ. ಭಾ.೭೫)

(೩) ಅದ್ವೈತಂ ಕಿಮಾಗಮಮಾತ್ರೇಣ ಪ್ರತಿಪತ್ತವ್ಯಮ್, ಆಹೋಸ್ವಿತ್ ತರ್ಕೇಣಾಪಿ ಇತಿ ? ಅತ ಆಹ - ಶಕ್ಯತೇ ತರ್ಕೇಣಾಪಿ ಜ್ಞಾತುಮ್ । ತತ್ ಕಥಮ್ ಇತಿ ಅದ್ವೈತಪ್ರಕರಣಮ್ ಆರಭ್ಯತೇ । (ಭಾ. ಭಾ.೧೨೭)

(೪) ಶಾಸ್ತ್ರೋಪಪತ್ತಿಭ್ಯಾಮ್ ಅವಧಾರಿತತ್ವಾತ್ ಅದ್ವಯಾತ್ಮದರ್ಶನಂ ಸಮ್ಯಗ್ದರ್ಶನಮ್ । ತದ್ಬಾಹ್ಯತ್ವಾತ್ ಮಿಥ್ಯಾದರ್ಶನಮ್ ಅನ್ಯತ್
(ಭಾ. ಭಾ.೧೬೦)

(೫) ಓಙ್ಕಾರನಿರ್ಣಯದ್ವಾರೇಣ ಆಗಮತಃ ಪ್ರತಿಜ್ಞಾತಸ್ಯ ಅದ್ವೈತಸ್ಯ ಬಾಹ್ಯವಿಷಯಭೇದವೈತಥ್ಯಾಚ್ಚ ಸಿದ್ಧಸ್ಯ, ಪುನಃ ಅದ್ವೈತೇ ಶಾಸ್ತ್ರಯುಕ್ತಿಭ್ಯಾಂ ಸಾಕ್ಷಾತ್ ನಿರ್ಧಾರಿತಸ್ಯ ''ಏತತ್ತದುತ್ತಮಂ ಸತ್ಯಮ್'' (೩-೪೮) ಇತಿ ಉಪಸಂಹಾರಃ ಕೃತಃ ಅನ್ತೇ । ತಸ್ಯೈತಸ್ಯ ಆಗಮಾರ್ಥಸ್ಯ ಅದ್ವೈತದರ್ಶನಸ್ಯ ಪ್ರತಿಪಕ್ಷಭೂತಾಃ ದ್ವೈತಿನಃ ವೈನಾಶಿಕಾಶ್ಚ ।..... (ಭಾ. ಭಾ.೨೧೨)

ಇಲ್ಲಿ ಐದನೆಯ ವಾಕ್ಯದಲ್ಲಿ ಅದ್ವೈತದರ್ಶನವು 'ಆಗಮಾರ್ಥ'ವೆಂದೇ ಉಪಸಂಹಾರಮಾಡಿರುವದನ್ನು ನಾವು ಲಕ್ಷ್ಯದಲಿಡಬೇಕು ಏಕೆಂದರೆ ಅದ್ವೈತವನ್ನು ಯುಕ್ತಿಯಿಂದಲೂ ಸಾಧಿಸಿದ್ದರೂ ಅದಕ್ಕೆ ಮುಖ್ಯವಾಗಿ ಆಗಮವೇ ಪ್ರಮಾಣವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆಗಮಪ್ರಕರಣದಲ್ಲಿ ಮಾತ್ರವಲ್ಲದೆ ಮಿಕ್ಕ ಮೂರು ಪ್ರಕರಣಗಳಲ್ಲಿಯೂ (೨-೩೧, ೩-೧೧, ೩-೧೨, ೪-೯೦) ಉಪನಿಷತ್ತುಗಳನ್ನು ಉದಾಹರಿಸಿರುತ್ತದೆ. ತರ್ಕಪ್ರಧಾನವಾಗಿರುವ ಆ ಪ್ರಕರಣಗಳಲ್ಲಿ ಯುಕ್ತಿಗೆ ಹೆಚ್ಚಿನ ಸ್ಥಾನವಿರುವದೆಂಬುದು ನ್ಯಾಯವಾಗಿರುತ್ತದೆ.

ಶಾಸ್ತ್ರಪ್ರಮಾಣವನ್ನು ಹಿಡಿದು ವಾದಿಸಿದರೆ ಮಿಕ್ಕವಾದಿಗಳಿಗೆ ಸಿದ್ಧಾಂತವು ಒಪ್ಪಾಗುವದು ಹೇಗೆ ? - ಎಂದು ಆಕ್ಷೇಪಿಸಬಾರದು. ಏಕೆಂದರೆ

ಶ್ರುತಿವಾಕ್ಯವನ್ನು ಪ್ರಮಾಣವೆಂದು ನಂಬುವ ಪ್ರಸಂಗವೇನೂ ಇಲ್ಲಿಲ್ಲ. ಕರ್ಮ ಕಾಂಡದಲ್ಲಿ ಈ ಪ್ರಸಕ್ತಿಯು ಬರುತ್ತದೆಯಾದರೂ ಜ್ಞಾನಕಾಂಡದ ವಸ್ತುಬೋಧಕ ವಾಕ್ಯಗಳು ವಸ್ತ್ವನುಸಾರಿಯಾದ ಜ್ಞಾನವನ್ನೇ ಉಂಟುಮಾಡುವದರಿಂದ ಅದನ್ನು ಯಾರೂ ಅಲ್ಲಗಳೆಯುವಹಾಗಿಲ್ಲ. ಹಾಗಿದ್ದರೆ ತರ್ಕವೇತಕ್ಕೆ ? - ಎಂದು ಕೇಳ ಬಹುದು. ಪ್ರಮಾಣದಿಂದುಂಟಾಗುವ ಅನುಭವವನ್ನು ತರ್ಕದಿಂದ ಶೋಧನೆ ಮಾಡಿಯೇ ಒಪ್ಪಬೇಕೆಂಬುದು ನೈಯಾಯಿಕರ ತತ್ತ್ವವು. ಆದ್ದರಿಂದ ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿದುಬರುವದನ್ನು ತರ್ಕದಿಂದ ಪರೀಕ್ಷಿಸಿದ ಬಳಿಕವೇ ಒಪ್ಪುವಂತೆ ಆಗಮಪ್ರಮಾಣದಿಂದ ತಿಳಿದುಬಂದದ್ದನ್ನೂ ತರ್ಕದಿಂದ ಶೋಧನೆಮಾಡಿ ನಿರ್ಧರಿಸಬೇಕಾದದ್ದು ಯುಕ್ತವಾಗಿದೆ. ಶಾಸ್ತ್ರವು ಬೋಧಕವು, ತರ್ಕವು ಶೋಧಕವು. ಆದ್ದರಿಂದಲೇ ಆಚಾರ್ಯರು ಆಗಮೋಪಪತ್ತಿಗಳಿಂದ ಸಿದ್ಧವಾಗು ವದೇ ಕೊನೆಗೂ ನಿಲ್ಲುವ ಪರಮಾರ್ಥವೆಂದು ತಮ್ಮ ಮಿಕ್ಕ ಭಾಷ್ಯಗಳಲ್ಲಿಯೂ ಬರೆದಿರುತ್ತಾರೆ.

ಶಾಸ್ತ್ರವು ಪರಮಾರ್ಥವನ್ನು ತಿಳಿಸುವ ಬಗೆ

ಶಾಸ್ತ್ರವು ಆತ್ಮರೂಪವಾಗಿರುವ ಬ್ರಹ್ಮವನ್ನು ಹೇಗೆ ತಿಳಿಸುತ್ತದೆ ?- ಎಂಬ ಪ್ರಶ್ನೆಗೆ ಆಚಾರ್ಯರು ಕೊಟ್ಟಿರುವ ಉತ್ತರವು ವಿಮರ್ಶನೀಯವಾಗಿರುತ್ತದೆ. ಬ್ರಹ್ಮದಲ್ಲಿ ಯಾವ ಶಬ್ದಪ್ರವೃತ್ತಿನಿಮಿತ್ತವೂ ಇಲ್ಲವಾದ್ದರಿಂದ ಅದನ್ನು ಯಾವ ಶಬ್ದದಿಂದಲೂ ತಿಳಿಸುವದಕ್ಕೆ ಆಗುವದಿಲ್ಲ (ಭಾ. ಭಾ. ೩೫). ಆದ್ದರಿಂದ ಅದರಲ್ಲಿ ತಪ್ಪುತಿಳಿವಳಿಕೆಯಿಂದ ಕಾಣಬರುವ ಯಾವ ವಿಶೇಷವೂ ಇಲ್ಲವೆಂದು ಹೇಳುವ ಮೂಲಕವೇ ಶಾಸ್ತ್ರವು ಅದನ್ನು ತಿಳಿಸಿಕೊಡುತ್ತದೆ (ಭಾ. ಭಾ. ೩೪, ೧೧೫). ಆತ್ಮನಲ್ಲಿ ಅವಸ್ಥಾತ್ರಯನಿಮಿತ್ತದಿಂದ ಅಂತಃಪ್ರಜ್ಞತ್ವವೇ ಮುಂತಾದ ಧರ್ಮಗಳು ಕಲ್ಪಿತವಾಗಿರುವವು. ಈ ಅಧ್ಯಾರೋಪವನ್ನು ಅಲ್ಲಗಳೆಯುವದ ರಿಂದಲೇ ಆತ್ಮಸ್ವರೂಪವನ್ನು ತಿಳಿಸಿಕೊಡಬೇಕಾಗಿದೆ ; ಹೀಗೆ ಅಲ್ಲಗಳೆಯುವದು ಆತ್ಮನು ಅವಸ್ಥಾತೀತನೆಂದು ತಿಳಿಸುವದಕ್ಕೇ ಹೊರತು ಅವನು ತುರೀಯವೆಂಬ ಬೇರೊಂದು ಅವಸ್ಥೆಯುಳ್ಳವನೆಂದು ತಿಳಿಸುವದಕ್ಕಲ್ಲ (ಭಾ. ಭಾ. ೩೮). ಅದ್ವೈತವು ಜಿಜ್ಞಾಸುವಿನ ಆತ್ಮನೇ ಆಗಿ ಅಧ್ಯಸ್ತವಾದ ದ್ವೈತವಿಕಲ್ಪಗಳಿಗೆಲ್ಲ ಭ್ರಾಂತಿಯ ಹಾವಿಗೆ ಹಗ್ಗದಂತೆ ಆಸ್ಪದವಾಗಿರುವದರಿಂದಲೂ ಅಧ್ಯಾರೋಪಿತ ವಾದದ್ದನ್ನು ಅಲಗಳೆಯುವದರಿಂದಲೇ ಅದ್ವೈತಜ್ಞಾನವು ಅವಶ್ಯವಾಗಿ

ಉಂಟಾಗುತ್ತದೆ ; ಆತ್ಮಸ್ವರೂಪವು ಆರೋಪಿತವಾಗಿರುವ ವಿಕಲ್ಪಗಳಲ್ಲೆಲ್ಲ ಅನುಗತವಾಗಿರುವದರಿಂದ ಆತ್ಮಸ್ವರೂಪದ ಪ್ರತ್ಯಯವನ್ನು ಹೊಸದಾಗಿ ಉಂಟು ಮಾಡಬೇಕಾದದ್ದೇನೂ ಇರುವದಿಲ್ಲ (ಭಾ. ಭಾ. ೧೧೫). ಆತ್ಮನಲ್ಲಿ ಇಂಥ ದ್ದೊಂದು ಧರ್ಮವಿಲ್ಲ ಎಂದು ತಿಳಿಸಿದರೆ ಅದಕ್ಕೆ ವಿರುದ್ಧವಾದ ಧರ್ಮವೊಂದು ಇದೆ ಎಂಬ ಅಭಿಪ್ರಾಯವೇನೂ ಶಾಸ್ತ್ರಕ್ಕೆ ಇರುವದಿಲ್ಲ ; ಏಕೆಂದರೆ ಆತ್ಮನಲ್ಲಿ ಯಾವ ಧರ್ಮವೂ ನಿತ್ಯವಾಗಿರುವದು ಕಂಡುಬರುವದಿಲ್ಲ (ಭಾ. ಭಾ. ೧೧೫).

ಆದ್ದರಿಂದ ಶಾಸ್ತ್ರಕ್ಕೆ ಆತ್ಮವಿಷಯದ ಅಜ್ಞಾನವನ್ನು ಕಳೆಯುವದೊಂದೇ ಕೆಲಸವು. **ಯಾವ ಪ್ರಮಾಣವೇ ಆಗಲಿ, ಪ್ರಮೇಯದ ಅಜ್ಞಾನವನ್ನು ಕಳೆಯುವದೊಂದೇ ಕೆಲಸವನ್ನು ಮಾಡೀತೇ ಹೊರತು ಇದರ ಜೊತೆಗೆ ಪ್ರಮೇಯವನ್ನು ವಿಷಯೀಕರಿಸಿ ಬೆಳಗುವದೆಂಬ ಮತ್ತೊಂದು ವ್ಯಾಪಾರವೂ ಅದಕ್ಕೆ ಇರುವದೆಂದು ತಿಳಿಯುವದು ತಪ್ಪು ; ವಿಷಯದ ತಿಳಿವಳಿಕೆಯು ಅಜ್ಞಾನನಾಶದಿಂದ ತಾನೇ ಆಗುತ್ತದೆಯಾದ್ದರಿಂದ ಅದು ಪ್ರಮಾಣಫಲವಲ್ಲ. ಆದ್ದರಿಂದ ಪರಮಾರ್ಥತತ್ತ್ವದ ಜ್ಞಾನವು ಆತ್ಮನಲ್ಲಿ ಆರೋಪಿತವಾಗಿರುವ ಅನರ್ಥಪ್ರಪಂಚದ ನಿವೃತ್ತಿಮಾತ್ರದಿಂದಲೇ ಆಗಿಬಿಡುತ್ತದೆ ; ಅದಕ್ಕಾಗಿ ಮತ್ತೆ ಸಾಕ್ಷಾತ್ಕಾರವೆಂಬ ಪ್ರಮಾಣಾಂತರವಾಗಲಿ ಪ್ರಸಂಖ್ಯಾನವೇ ಮುಂತಾದ ಸಾಧನಾಂತರವಾಗಲಿ ಬೇಕಿರುವದಿಲ್ಲ** (ಭಾ. ಭಾ. ೩೯).

ಶಾಸ್ತ್ರಜ್ಞಾನದಿಂದ ತೊಲಗುವ ಅಜ್ಞಾನ

ಅಜ್ಞಾನವು ತತ್ತ್ವವನ್ನು ತಿಳಿಯದ್ದೆಂಬ ನಿದ್ರೆ, ತಪ್ಪಾಗಿ ತಿಳಿದುಕೊಳ್ಳುವ ದೆಂಬ ಕನಸು - ಎಂದು ಎರಡು ಬಗೆಯಾಗಿರುತ್ತದೆ (೧-೧೫). ಅಗ್ರಹಣವು ಎಂದರೆ ತಿಳಿಯದೆ ಇರುವದು, ಅನ್ಯಥಾಗ್ರಹಣಕ್ಕೆ (ತಪ್ಪಾಗಿ ತಿಳಿಯುವದಕ್ಕೆ) ಕಾರಣವಾಗಿರುತ್ತದೆ (೧-೧೫). ಸುಷುಪ್ತಿಯಲ್ಲಿ ಕಾರಣವು ಮಾತ್ರ ಇರುತ್ತದೆ, ಎಚ್ಚರಕನಸುಗಳಲ್ಲಿ ಕಾರ್ಯಕಾರಣಗಳೆರಡೂ ಇರುತ್ತವೆ ; ಆದರೆ ಅವಸ್ಥಾರಹಿತ ನಾದ ತುರೀಯನಲ್ಲಿ, ಎಂದರೆ ಶುದ್ಧಾತ್ಮನಲ್ಲಿ ಇವೆರಡೂ ಇರುವದಿಲ್ಲ (೧-೧೧, ೧೪). ಈ ಎರಡೂ ಆತ್ಮನಲ್ಲಿವೆ ಎಂಬುದು ವಿಪರ್ಯಾಸವು, ಭ್ರಾಂತಿಯು (೧-೧೫) - ಎಂದು ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಸ್ಪಷ್ಟವಾಗಿ ಬರೆದಿರುತ್ತದೆ. ಆದರೂ ಇಷ್ಟು ನಿಃಸಂದಿಗ್ಧವಾಗಿರುವ ಉಕ್ತಿಗೆ ವಿರುದ್ಧವಾಗಿ

ಈಚಿನ ವ್ಯಾಖ್ಯಾನಕಾರರು ಕಾರಣಾಜ್ಞಾನವೆಂದರೆ **ಮೂಲಾವಿದ್ಯೆ** ಎಂಬ ಒಂದಾನೊಂದು ಆವರಣವಿಶೇಷವೆಂದು ಕಲ್ಪಿಸಿರುತ್ತಾರೆ. ಅಗ್ರಹಣವೆಂದರೆ ತತ್ತ್ವವನ್ನು ಅರಿಯದಿರುವದು, ಅದು ಜಾಗ್ರತ್ಸ್ವಪ್ನಗಳ ವಿಶೇಷಜ್ಞಾನಕ್ಕೆ ಕಾರಣವಾಗಿರುವದರಿಂದ ಸುಷುಪ್ತಿಯಲ್ಲಿ ಕಾರಣಾವಿದ್ಯೆ ಎನಿಸಿಕೊಳ್ಳುವದು. ತುರೀಯನೆಂಬ ಶುದ್ಧಾತ್ಮನಲ್ಲಿಯೂ ಈ ಅಗ್ರಹಣವುಂಟು ; ಆದರೆ ಅದರಿಂದ ಅನ್ಯಥಾಜ್ಞಾನವೇನೂ ಆಗುವಂತಿಲ್ಲವಾದ್ದರಿಂದ ಅದು ಕಾರಣಾವಿದ್ಯೆಯಲ್ಲ (೧-೧೩) ಎಂದು ಹೇಳಿರುವದರಿಂದ ಈ ಮೂಲಾವಿದ್ಯಾವಾದಕ್ಕೆ ಕಾರಿಕೆಯಲ್ಲಿ ಎಳ್ಳಷ್ಟೂ ಎಡೆಯಿಲ್ಲವೆಂದು ಹೇಳಬೇಕಾಗಿದೆ.

ಇನ್ನು ಜಗತ್ತಿನ ನಾಮರೂಪಗಳ ತೋರಿಕೆಗೆ ಕಾರಣವೆಂದು ಕಲ್ಪಿಸಬೇಕಾಗುವ ಅವ್ಯಾಕೃತನಾಮರೂಪಬೀಜವನ್ನೇ ಮಾಯೆಯೆಂದೂ ಮೂಲಾವಿದ್ಯೆಯೆಂದೂ ಕರೆದಿರುವದು ಕೆಲವು ವ್ಯಾಖ್ಯಾನಗಳಲ್ಲಿ ಕಂಡುಬರುತ್ತದೆ. ಆದರೆ ಭಾಷ್ಯದಲ್ಲಿ ಕಂಡುಬರುವ ''ಅವಿದ್ಯಾಕೃತನಾಮರೂಪಮಾಯಾಸ್ವರೂಪೇಣ'', ''ಅವಿದ್ಯಾಕೃತಮಾಯಾಬೀಜೋತ್ಥನ್ನಾನಾಮ್'' ಎಂಬ ವಾಕ್ಯಗಳಲ್ಲಿ (ಭಾ.ಭಾ. ೨೯) ನಾಮರೂಪಗಳ ಬೀಜವಾದ ಮಾಯೆಯು ಅವಿದ್ಯಾಕೃತವಾಗಿರುವದೆಂದು ಹೇಳಿರುವದರಿಂದ ಮಾಯೆಯೇ ಅಧ್ಯಸ್ತವೆಂದೂ, ಆದ್ದರಿಂದ ಅದು ಅಧ್ಯಾಸಕ್ಕೆ ಕಾರಣವಾಗಿರುವ ಮೂಲಾವಿದ್ಯೆ ಎಂಬುದು ಭಾಷ್ಯಾನುಸಾರಿಯಲ್ಲವೆಂದೂ, ಏರ್ಪಡುತ್ತದೆ. ಆದ್ದರಿಂದ ಓಗೂ ಕಾರಿಕಾಭಾಷ್ಯದಲ್ಲಿ ಮೂಲಾವಿದ್ಯಾವಾದಕ್ಕೆ ಅವಕಾಶವಿಲ್ಲವೆಂದು ನಿಶ್ಚಯವಾಗುತ್ತದೆ.

ಅಜಾತಿವಾದ

ಆತ್ಮನು ಪರಮಾರ್ಥವಾಗಿಯೇ ಜನ್ಮಾದಿವಿಕಾರರಹಿತನಾಗಿರುತ್ತಾನೆ, ಪ್ರಪಂಚೋಪಶಮನಾಗಿರುತ್ತಾನೆ - ಎಂಬ ವಾದಕ್ಕೆ **ಅಜಾತಿವಾದ**ವೆಂದು ಹೆಸರು. ಮಾಂಡೂಕ್ಯದಲ್ಲಿ ಈ ವಾದವನ್ನೇ ತಾತ್ಪರ್ಯದಿಂದ ಹೇಳಿರುತ್ತದೆ. ಚೇತನಾಚೇತನರೂಪವಾದ ಪ್ರಪಂಚವು ಆತ್ಮನಲ್ಲಿ ನಮಗೆಲ್ಲರಿಗೂ ಕಾಣುತ್ತಿರುವದಲ್ಲ, ಇದಕ್ಕೇನು ಗತಿ ? - ಎಂಬ ಆಕ್ಷೇಪಕ್ಕೆ ನಮಗೆ ಕಾಣಿಸುತ್ತಿರುವ ಪ್ರಪಂಚವೆಲ್ಲವೂ ಕನಸಿನಂತೆ ಮಿಥ್ಯೆಯಾಗಿರುತ್ತದೆ (ಭಾ. ಭಾ. ೯೦, ೯೧) ; ಪರಮಾರ್ಥವಾಗಿ ಇದೆಲ್ಲವೂ ಆತ್ಮನೇ ಆಗಿರುತ್ತದೆ (ಭಾ. ಭಾ. ೧೨೬) - ಎಂಬ ಪರಿಹಾರವನ್ನು

ವೈತಥ್ಯಪ್ರಕರಣದಲ್ಲಿ ಹೇಳಿರುತ್ತದೆ. ಉಪನಿಷತ್ತಿನಲ್ಲಿ ತೈಜಸನಿಗೂ ವೈಶ್ವಾನರ ನಂತೆಯೇ ಸಪ್ತಾಂಗಗಳೂ ಏಕೋನವಿಂಶತಿಮುಖಿಗಳೂ ಇರುವವೆಂದು ಹೇಳಿರುವದನ್ನೇ ಈ ಪ್ರಕರಣದಲ್ಲಿ ವಿಸ್ತರಿಸಿ ಹೇಳಿರುತ್ತದೆ ಎಂದು ಭಾವಿಸಬಹುದು.

ಬ್ರಹ್ಮದಿಂದ ಜೀವರು ಉತ್ಪನ್ನರಾಗಿರುವರೆಂದೂ ಉಪಾಸನೆಯಿಂದ ಅವರು ಬ್ರಹ್ಮಸಾಯುಜ್ಯವನ್ನು ಪಡೆಯುವರೆಂದೂ ಬೇರೆಯ ಶ್ರುತಿಗಳಲ್ಲಿ ಹೇಳಿರುತ್ತದೆಯಲ್ಲ !- ಎಂಬ ಶಂಕೆಗೆ ಸಮಾಧಾನವನ್ನು **ಅದ್ವೈತಪ್ರಕರಣ**ದಲ್ಲಿ ಹೇಳಿರುತ್ತದೆ. ಆಕಾಶವು ಗಡಿಗೆಯೇ ಮುಂತಾದ ಉಪಾಧಿಗಳಿಂದ ಹುಟ್ಟುವ ಹಾಗೆ ತೋರುವಂತೆಯೇ, ಜೀವರೂ ಶರೀರಾದಿರೂಪದಾದ ಉಪಾಧಿಗಳ ವಶದಿಂದ ಹುಟ್ಟುವಹಾಗೆ ತೋರುತ್ತಾರೆ. ನಿಜವಾಗಿ ಆಕಾಶವೇ ಗಡಿಗೆ ಮುಂತಾದವುಗಳ ತಿರುಳೂ ಆಗಿರುವಂತೆ ಉಪಾಧಿಗಳೂ ಆತ್ಮನೇ (ಭಾ. ಭಾ. ೧೩೨) ಆಗಿರುತ್ತಾನೆ. ಶರೀರಾದಿಗಳು ತಮ್ಮ ರೂಪದಿಂದ ಕನಸಿನ ಶರೀರಗಳಂತೆ ಮಿಥ್ಯೆಯೇ (ಭಾ. ಭಾ. ೧೪೭) ಆಗಿರುವದರಿಂದ ಆತ್ಮನು ಅದ್ವಿತೀಯನು, ಅಜನು, ನಿಷ್ಪ್ರಪಂಚನು ಎಂಬುದಕ್ಕೆ ಯಾವ ಅಡ್ಡಿಯೂ ಇಲ್ಲ. ಶ್ರುತಿಗಳಲ್ಲಿ ಹೇಳಿರುವ ಸೃಷ್ಟಿಯು ಈ ಮಾಯಿಕಸೃಷ್ಟಿಯೇ. ಶ್ರುತಿಗೆ ಸೃಷ್ಟಿಯಲ್ಲಿ ಪರಮ ತಾತ್ಪರ್ಯವಿಲ್ಲ ; ಅದು ಆತ್ಮನ ಏಕತ್ವವನ್ನು ತಿಳಿದುಕೊಳ್ಳುವದಕ್ಕೆ ಉಪಾಯವೇ ಹೊರತು ದ್ವೈತವು ಸತ್ಯವೆನ್ನುದಕ್ಕಲ್ಲ (ಭಾ. ಭಾ. ೧೫೩, ೧೫೫, ೧೫೬). ಆದ್ದರಿಂದಲೇ ಶ್ರುತಿಯಲ್ಲಿ ಆತ್ಮೈಕತ್ವವನ್ನು ಹೊಗಳಿರುವದು, ನಾನಾತ್ವವನ್ನು ನಿಂದಿಸಿರುವದು, ಅಲ್ಲಗಳೆದಿರುವದು (ಭಾ. ಭಾ. ೧೫೧, ೧೭೨, ೧೭೩). ಶ್ರುತಿಯಲ್ಲಿ ಉಪಾಸನೆಯನ್ನೂ ಅದರಿಂದಾಗುವ ಬ್ರಹ್ಮಸಾಯುಜ್ಯವನ್ನೂ ಉಪದೇಶಿಸಿರುವದು ಪರಮಾರ್ಥವನ್ನು ಅರಿಯದ ಅವಿದ್ಯಾದೃಷ್ಟಿಯ ಅಧಿಕಾರಿಗಳಿಗಾಗಿ (ಭಾ. ಭಾ. ೧೫೯) ; ಆದ್ದರಿಂದ ಶ್ರುತಿಯು ತಾತ್ಪರ್ಯದಿಂದ ಹೇಳುವ ಅಜಾತಿವಾದಕ್ಕೆ ಯಾವ ಬಾಧಕವೂ ಇಲ್ಲ.

ಸಾಂಖ್ಯರು, ಕಾಣಾದರು, ಜೈನರು, ಬೌದ್ಧರು - ಮುಂತಾದ ವಾದಿಗಳು ಯುಕ್ತಿಯಿಂದ ಪರಮಾರ್ಥವನ್ನು ನಿರೂಪಣಮಾಡಿರುತ್ತಾರಲ್ಲ ! ಆತ್ಮನು ಅಜನೆಂದೂ ನಿಷ್ಪ್ರಪಂಚನೆಂದೂ ಹೇಳುವ ವೈದಿಕವಾದವು ಅವರ ದರ್ಶನಗಳಿಗೆ ವಿರುದ್ಧವಾಗುವದಿಲ್ಲವೆ ? - ಎಂದು ಒಂದು ಆಕ್ಷೇಪವು ಎದ್ದುಕೊಳ್ಳಬಹುದು. ಮಿಕ್ಕ ವಾದಿಗಳು ಕಾರ್ಯಕಾರಣವಾದವನ್ನು ಒಪ್ಪುತ್ತಾರೆಂಬುದು ನಿಜ. ಆದರೆ

ಅವರು ''ಕಾರ್ಯವು ಕಾರಣದಿಂದ ಹೇಗೆ ಹುಟ್ಟುತ್ತದೆ ? ಕಾರ್ಯಕಾರಣಗಳ ಸ್ವರೂಪವೇನು ?'' - ಎಂಬ ಬಗ್ಗೆ ಒಂದೇ ಮತದವರಾಗಿಲ್ಲ, ಒಬ್ಬರಿಗೊಬ್ಬರು ವಿರುದ್ಧವಾಗಿರುತ್ತಾರೆ. ಅವರು ಒಬ್ಬರ ಮತದಲ್ಲಿ ಒಬ್ಬರು ಹೇಳುತ್ತಿರುವ ದೋಷವು ಅಪರಿಹರಣೀಯವಾಗಿದೆ ; ಇದರಿಂದಲೇ ಅಜಾತಿವಾದವು ಸರಿ ಎಂದು ಏರ್ಪಡುತ್ತದೆ. ಆದರೆ ದ್ವೈತವೆಲ್ಲವೂ ಮಾಯಿಕವಾಗಿ ಹುಟ್ಟುತ್ತದೆಯೇ ಹೊರತು ಹುಟ್ಟೆಂಬುದು ಪರಮಾರ್ಥವಲ್ಲ ಎಂಬ ಅದ್ವೈತದರ್ಶನಕ್ಕೆ ಯಾವ ದ್ವೈತವೂ ವಿರುದ್ಧವಾಗುವಂತಿಲ್ಲ - ಎಂಬ ಪರಿಹಾರವನ್ನು ಅದ್ವೈತಪ್ರಕರಣದಲ್ಲಿ ಸಂಗ್ರಹವಾಗಿಯೂ (ಭಾ. ಭಾ. ೧೬೧, ೧೬೩), **ಅಲಾತಶಾಂತಿಪ್ರಕರಣ**ದಲ್ಲಿ ವಿಸ್ತಾರವಾಗಿಯೂ (ಭಾ. ಭಾ. ೨೧೬, ೨೨೧.....) ತೋರಿಸಿರುತ್ತದೆ. ಈ ಕಾರಣಗಳಿಂದ ಅಜಾತಿವಾದವು ನಿರ್ದುಷ್ಟವಾದ ಸಿದ್ಧಾಂತವೆಂದು ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಸಿದ್ಧಾಂತಮಾಡಿರುತ್ತದೆ.

ಪ್ರಾತಿಭಾಸಿಕವಸ್ತುಗಳ ತತ್ತ್ವ

ಅಜಾತಿವಾದದಲ್ಲಿ ಜೀವರೂ ಜಡವಸ್ತುಗಳೂ ಹುಟ್ಟಿಯೇ ಇಲ್ಲವೆಂಬುದು ಪರಮಾರ್ಥ, ಅವು ಹುಟ್ಟಿರುವವೆಂಬುದು ಮಾಯಿಕ - ಎಂದು ಕಾರಿಕೆಯಲ್ಲಿಯೂ, ಭಾಷ್ಯದಲ್ಲಿಯೂ (೧-೧೬, ೧೭ ; ೨-೨, ೩-೧೯, ೨೪, ೨೭) ಹೇಳಿರುತ್ತಾರಷ್ಟೆ. ಈ ವಾದವನ್ನು ಸ್ಪಷ್ಟಗೊಳಿಸುವದಕ್ಕಾಗಿ ರಜ್ಜುಸರ್ಪವೇ ಮುಂತಾದ ದೃಷ್ಟಾಂತಗಳನ್ನು ಅವರು ಕೊಟ್ಟಿರುತ್ತಾರೆ. ಇಲ್ಲಿ ಮಾಯೆ ಎಂದರೆ ಮೂಲಾವಿದ್ಯೆ ಎಂಬ ಅರ್ಥವನ್ನು ಮಾಡುವ ವ್ಯಾಖ್ಯಾನಪ್ರಸ್ಥಾನವನ್ನು ಆಗಲೇ ತಿಳಿಸಿದ್ದಾಗಿದೆ. ಆ ಪ್ರಸ್ಥಾನವನ್ನು ಅವಲಂಬಿಸಿರುವವರು ಲೋಕಸಿದ್ಧವಾಗಿರುವ ಈ ದೃಷ್ಟಾಂತಗಳನ್ನೂ ಅನಿರ್ವಚನೀಯಪದಾರ್ಥೋತ್ಪತ್ತಿಯೆಂಬ ಹೊಸ ವಾದಕ್ಕೆ ಉಪಯೋಗಿಸಿಕೊಂಡು ವಾದಗ್ರಸ್ತವಾಗಿ ಮಾಡಿಬಿಟ್ಟಿರುತ್ತಾರೆ. ಅವರು ಹೇಳುವದೇನೆಂದರೆ : ''ಹಗ್ಗದ ಹಾವು ಮುಂತಾದ ಪ್ರಾತಿಭಾಸಿಕವಸ್ತುಗಳು **ತೂಲಾವಿದ್ಯೆ** ಅಥವಾ **ಪಲ್ಲವಾವಿದ್ಯೆ** ಎಂದು ಕರೆಯಲ್ಪಡುವ ಅವಿದ್ಯೆಯ ಪರಿಣಾಮವಾಗಿವೆ. ಈ ದೃಷ್ಟಾಂತದಿಂದಲೇ ಪ್ರಪಂಚವು ಮಾಯಿಕವಾಗಿದೆ, ಎಂದರೆ ಮೂಲಾವಿದ್ಯಾಪರಿಣಾಮವಾಗಿದೆ ಎಂಬುದು ಸಿದ್ಧವಾಗುತ್ತದೆ.''

ಈ ಮತಕ್ಕೆ ಕಾರಿಕೆಯಲ್ಲಾಗಲಿ ಭಾಷ್ಯದಲ್ಲಾಗಲಿ ಎಳ್ಳಷ್ಟೂ ಬೆಂಬಲವಿರುವದಿಲ್ಲ. ಇದು ಅಜಾತಿವಾದಕ್ಕೆ ವಿರುದ್ಧವೂ ಆಗಿರುತ್ತದೆ. ಕಾರಿಕೆಯಲ್ಲಿ ''ಹಗ್ಗವನ್ನು ಹಗ್ಗವೆಂದು ತಿಳಿಯದ್ದರಿಂದ ಅದು ಹಾವೆಂದೂ ನೀರಿನ ಕೋಡಿ ಮುಂತಾದದ್ದೆಂದೂ ಜನರು ವಿಕಲ್ಪಿಸುವಂತೆ ಆತ್ಮನೂ ಬಗೆಬಗೆಯಾಗಿ ವಿಕಲ್ಪಿತನಾಗಿರುತ್ತಾನೆ. ಇದು ಹಗ್ಗವೇ ಎಂದು ನಿಶ್ಚಯಿಸಿದಾಗ ಅದೊಂದೇ ಇರುವಂತೆ ನಿಶ್ಚಯದೃಷ್ಟಿಯಿಂದ ಆತ್ಮನೊಬ್ಬನೇ ಇರುತ್ತಾನೆ'' (೨-೧೭, ೧೮) ಎಂದು ಬರೆದಿದೆ. ಭಾಷ್ಯದಲ್ಲಿ ''ಹಗ್ಗದಲ್ಲಿ ಭ್ರಾಂತಿಬುದ್ಧಿಯಿಂದ ಕಲ್ಪಿತವಾದ ಹಾವು ನಿಜವಾಗಿ ಇದ್ದುಕೊಂಡಿದ್ದು ವಿವೇಕದಿಂದ ಹೋಗುವದಿಲ್ಲ'' (ಭಾ. ಭಾ. , ''ಮನಸ್ಸಿನ ವಿಕಲ್ಪನೆಯಾಗಿರುವ ಹಗ್ಗದ ಹಾವು ಮುಂತಾದದ್ದು ಹಗ್ಗದಲ್ಲಿ ಅಡಗುವದೂ ಇಲ್ಲ, ಹುಟ್ಟುವದೂ ಇಲ್ಲ''(ಭಾ. ಭಾ. ೧೨೩), ''ಅದೇ ಆಕಾಶದಿಂದ ಗಡಿಗೆಯೇ ಮುಂತಾದ ಗುಂಪುಗಳು ಹೇಗೆ ಹುಟ್ಟುವವೋ ಹಾಗೆ ಆಕಾಶದಂತಿರುವ ಪರಮಾತ್ಮನಿಂದ ಪೃಥ್ವಿಯೇ ಮುಂತಾದ ಭೂತಗಳ ಗುಂಪುಗಳೂ (ನಮ್ಮ) ಒಳಗಿನ ಕಾರ್ಯಕರಣರೂಪವಾದ (ಗುಂಪುಗಳೂ) ಹಗ್ಗದ ಹಾವಿನಂತೆ ವಿಕಲ್ಪಿತವಾಗಿ ಹುಟ್ಟುವವು'' (ಭಾ. ಭಾ. ೧೩೨) ಎಂಬ ವಾಕ್ಯಗಳಿವೆ. ಈ ವಾಕ್ಯಗಳನ್ನು ನೋಡಿದರೆ ಕಾರಿಕಾಕಾರರ ಅಥವಾ ಭಾಷ್ಯಕಾರರ ಮನದಲ್ಲಿ ಪ್ರಾತಿಭಾಸಿಕದ ಉತ್ಪತ್ತಿಯ ಕಲ್ಪನೆಯು ಒಂದಿಷ್ಟೂ ಇರಲಿಲ್ಲವೆಂದು ಖಂಡಿತವಾಗಿ ಹೇಳಬಹುದಾಗುತ್ತದೆ. ಹಗ್ಗದ ಹಾವೇ ಮುಂತಾದವುಗಳು ಹಗ್ಗವೇ ಮುಂತಾದವುಗಳಲ್ಲಿ ಕಲ್ಪನೆಯ ಕಾಲಕ್ಕೆ ತೋರಿದರೂ ಅಲ್ಲಿ ನಿಜವಾಗಿ ಹುಟ್ಟಿರುವದಿಲ್ಲ ; ಇದರಂತೆ ಆತ್ಮನಿಂದ ಜಗತ್ತು ಹುಟ್ಟಿರುವದೆಂದು ಹೇಳಿದರೂ ಅದು ಹಗ್ಗದ ಹಾವಿನಂತೆ ತೋರಿಕೆ ಎಂಬುದೇ ಶ್ರುತಿಯ ಅಭಿಪ್ರಾಯ. (೨-೩೧, ಭಾ. ಭಾ.೧೧೦ ; ೪-೪೨, ಭಾ. ಭಾ. ೨೮೭ ; ೪-೪೯, ಭಾ. ಭಾ. ೨೯೭). ಆತ್ಮನು ಅಜನು ಎಂದು ಹೇಳುವದಾದರೂ ಪರಮಾರ್ಥದೃಷ್ಟಿಯಿಂದಲ್ಲ ; ಏಕೆಂದರೆ ಜನ್ಮವುಳ್ಳ ಪದಾರ್ಥಗಳಿವೆ ಎಂಬ ಅವಿದ್ಯಾದೃಷ್ಟಿಯನ್ನು ಇಟ್ಟುಕೊಂಡೇ ವೇದಾಂತಿಗಳು ಆತ್ಮನು ಅಜನು, ಮಿಕ್ಕ ಪದಾರ್ಥಗಳಂತೆ ಜನ್ಮವುಳ್ಳವನಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಪರಮಾರ್ಥದೃಷ್ಟಿಯಲ್ಲಿ ಆತ್ಮನು ಅಜನೂ ಅಲ್ಲ, ಅವನು ಯಾವದೊಂದು ಧರ್ಮವೂ ಇಲ್ಲದ ನಿರ್ವಿಶೇಷಚಿನ್ಮಾತ್ರ ನಾಗಿರುತ್ತಾನೆ (೪-೭೪, ಭಾ. ಭಾ. ೩೨೫) - ಎಂಬುದೇ ಕಾರಿಕೆಯಲ್ಲಿಯೂ, ಭಾಷ್ಯದಲ್ಲಿಯೂ ಸಾರಿರುವ ಅಜಾತಿವಾದದ ಸಂಗ್ರಹವು.

ಮಾಯಾವಾದದ ಮೇಲಿನ ಆಕ್ಷೇಪ

ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಪ್ರಪಂಚವು ವಿತಥ, ಮಿಥ್ಯಾ, ಮಾಯಿಕ - ಎಂದು ಹೇಳಿರುವದು ದ್ವೈತಸತ್ಯತ್ವಬುದ್ಧಿಯಲ್ಲಿ ಮುಳುಗಿರುವವರಿಗೆ ನಂಬುವದಕ್ಕೆ ಕಷ್ಟವಾಗಿರುತ್ತದೆ. ಎಲ್ಲವೂ ಮಿಥ್ಯೆ ಎಂದಾದರೆ ಮಿಥ್ಯೆಯೆಂಬುದೂ ಮಿಥ್ಯೆಯಾಗಿ ಎಲ್ಲವೂ ಸತ್ಯವೇ ಎಂದಾಗುವದಿಲ್ಲವೆ ? - ಎಂಬ ತರ್ಕವನ್ನು ಇಂಥ ದ್ವೈತಿಗಳು ಒಡ್ಡುತ್ತಲೇ ಬಂದಿರುತ್ತಾರೆ ; ಎಲ್ಲವೂ ಮಿಥ್ಯೆಯೆಂದೊಪ್ಪಿದರೆ ತಾವು ಹೇಳುವ ದೋಷವೂ ಮಿಥ್ಯೆಯೆಂಬುದು ಅವರಿಗೆ ಏಕೆ ಹೊಳೆಯುವದಿಲ್ಲವೋ ದೇವರೇ ಬಲ್ಲನು. 'ಎಲ್ಲವೂ ಮಿಥ್ಯೆ, ಮಿಥ್ಯೆ ಎಂಬುದೂ ಮಿಥ್ಯೆ' ಎಂಬಿವು ಪರಸ್ಪರವಿರುದ್ಧವಾದ ವಿಕಲ್ಪಗಳಲ್ಲ ಎಂಬುದೂ ಅವರಿಗೆ ಅದೇಕೋ ಮನವರಿಕೆಯಾಗದೆ ಇರುತ್ತದೆ.

ಮಾಯಾವಾದದ ಮೇಲೆ ದ್ವೈತಿಗಳು ಹಾಕಿರುವ ಮತ್ತೊಂದು ಆಕ್ಷೇಪವುಂಟು. ಅದನ್ನು ಇತ್ತೀಚೆಗೆ **ಸರ್ ರಾಧಾಕೃಷ್ಣನ್**ರವರು ಪುಷ್ಟಿಗೊಳಿಸಿ ಹೀಗೆಂದಿರುತ್ತಾರೆ 'ಎಲ್ಲವೂ ಮಿಥ್ಯೆ ಎಂಬ ಅಭಿಪ್ರಾಯವು ಗೌಡಪಾದರ ಗ್ರಂಥದಲ್ಲೆಲ್ಲ ಹಾಸುಹೊಕ್ಕಾಗಿರುತ್ತದೆ. ಆದರೆ ಮಿಥ್ಯೆಯಾದ ಜೀವನು ಮಿಥ್ಯೆಯಾದ ಪ್ರಪಂಚದಲ್ಲಿರುವ ಮಿಥ್ಯಾಬಂಧವನ್ನು ತಪ್ಪಿಸಿಕೊಂಡು ಮಿಥ್ಯಾ ರೂಪವಾದ ಪರಮಪುರುಷಾರ್ಥವನ್ನು ಪಡೆದುಕೊಳ್ಳುವದಕ್ಕಾಗಿ ಸಾಧನಮಾಡುತ್ತಿರುವನೆಂದು ಹೇಳುವ ಶಾಸ್ತ್ರವು ತಾನೂ ಮಿಥ್ಯೆಯಾಗಿರಬಹುದು - ಎಂದು ಖಂಡನಾವ್ಯಸನಿಯೊಬ್ಬನು ಹೇಳಬಹುದು'. ಈ ಖಂಡನೆಯು ಹೊಸದೇನೂ ಅಲ್ಲ. ಇದಕ್ಕೆ 'ಶಾಸ್ತ್ರಶಿಷ್ಯರೇ ಮುಂತಾದ ವಿಕಲ್ಪವು ಉಪದೇಶಕ್ಕಾಗಿ ಕಲ್ಪಿತವಾಗಿದೆಯೇ ಹೊರತು ಪರಮಾರ್ಥವಲ್ಲ' ಎಂದು ಗೌಡಪಾದರೂ ಭಾಷ್ಯಕಾರರೂ (ಕಾ. ೧-೧೮, ಭಾ. ಭಾ. ೫೭) ಉತ್ತರವನ್ನು ಹೇಳಿಯೂ ಇರುತ್ತಾರೆ.

ಆದರೆ ರಾಧಾಕೃಷ್ಣನ್‌ರವರು ಈ ಉತ್ತರವನ್ನು ಲೆಕ್ಕಿಸದೆ ತಮ್ಮದೇ ಆಗಿರುವ ಒಂದು ಸಿದ್ಧಾಂತವನ್ನು ಮುಂಡಿಸಿ ಕಾರಿಕಾಭಾಷ್ಯಗಳ ಸಿದ್ಧಾಂತವನ್ನೇ ತಲೆಕೆಳಗುಮಾಡುವ ಮತ್ತೊಂದು ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ : 'ನಿರ್ವಿಕಾರವಾದ ಪರಮಾರ್ಥವು ತನ್ನ ಸ್ವಭಾವವನ್ನು ಮಾರ್ಪಡಿಸದೆ ಜಗದ್ರೂಪವಾಗಿ ತೋರಿಕೊಳ್ಳುವದು ಹೇಗೆಂಬುದು ಒಂದು ಅಭೇದ್ಯರಹಸ್ಯವು ಎಂದು ಹೇಳುವ ವಾದಕ್ಕೂ ಇಡಿಯ ಪ್ರಪಂಚವೆಂಬುದು ಒಂದು ಮೃಗಮರೀಚಿಕೆ

ಎಂದು ಅಲ್ಲಗಳೆಯುವ ವಾದಕ್ಕೂ ಬಹಳ ತಾರತಮ್ಯವಿದೆ'. ಪರಮಾರ್ಥವು ಜಗದ್ರೂಪವಾಗಿ ತೋರಿಕೊಳ್ಳುವದು ಹೇಗೆಂಬುದು ಅಭೇದ್ಯರಹಸ್ಯವು ಎಂದು ಹೇಳುವ ಹೇಡಿತನದ ವಾಕ್ಯವು ತತ್ತ್ವಶಾಸ್ತ್ರಕ್ಕೆ ಒಪ್ಪಾಗುವದೆಂದು ಕಾರಿಕಾಕಾರರಾಗಲಿ ಭಾಷ್ಯಕಾರರಾಗಲಿ ನಂಬಿರುವದಿಲ್ಲ ; ಇಂಥ ಅಶಕ್ತಿಸೂಚಕವಾದ ಅಭಿಪ್ರಾಯವು ಪರಮಪುರುಷಾರ್ಥವನ್ನು ಬಯಸುವವರಿಗೆ ಯಾವ ಉಪಯೋಗಕ್ಕೂ ಬರುವದಿಲ್ಲವೆಂಬುದು ಸ್ಪಷ್ಟವಾಗಿದೆ. ಜಾಗ್ರತ್ಪ್ರಪಂಚವು ಎಚ್ಚರದಲ್ಲಿ ಮಾತ್ರ ಇರುವದೇ ಹೊರತು ಕನಸಿನಲ್ಲಾಗಲಿ, ತನಿನಿದ್ರೆಯಲ್ಲಾಗಲಿ ಇರುವದಿಲ್ಲ ಎಂಬುದು ಎಲ್ಲರ ಅನುಭವದಲ್ಲಿದೆ ; ಆತ್ಮನು ಮೂರು ಅವಸ್ಥೆಗಳಲ್ಲಿಯೂ ಮುಕ್ಕಾಗದೆ ತಾನಿದ್ದಂತೆಯೇ ಇರುತ್ತಾನೆಂಬುದೂ ಅನುಭವಗಮ್ಯವಾಗಿದೆ. ಈ ಎರಡನ್ನು ಬಿಟ್ಟರೆ ಮತ್ತೊಂದು ಪದಾರ್ಥವೇ ಇಲ್ಲದ್ದರಿಂದ ಜಗತ್ತು ಮಿಥ್ಯೆ, ಆತ್ಮನಲ್ಲಿ ಕಾಣುವ ಹುಸಿತೋರಿಕೆ ; ಪೂರ್ಣದೃಷ್ಟಿಯಿಲ್ಲದವರು ಆತ್ಮನನ್ನೇ ಜಗತ್ತೆಂದು ವ್ಯವಹರಿಸುತ್ತಿದಾರೆಯೇ ಹೊರತು ಆತ್ಮನೇನೂ ಜಗದ್ರೂಪವಾಗಿ ಮಾರ್ಪಟ್ಟಿಲ್ಲ ಎಂಬ ಅನುಭವಾನುಸಾರಿಯಾದ ಸಿದ್ಧಾಂತವು ಏರ್ಪಡುತ್ತದೆ. ಈ ಉತ್ತಮವಾದ ಶ್ರೌತತರ್ಕವನ್ನು ಅರಗಿಸಿಕೊಳ್ಳಲಾರದವರು ಇದೊಂದು ಅಭೇದ್ಯರಹಸ್ಯ ಎಂದರೆ ವೇದಾಂತಿಗಳು ಈ ವಿಚಾರಶೂನ್ಯತೆಗೆ ಮರುಕವನ್ನು ತೋರಿಸಬಹುದೇ ಹೊರತು ಮತ್ತೇನು ಮಾಡಲಾಪರು ?

ಮಾಯಾವಾದವನ್ನು ಅನುಸರಿಸಿದರೆ ವ್ಯವಹಾರದಲ್ಲಿ ಒದಗುವ ವಿರೋಧಾಭಾಸವೊಂದನ್ನು ಶ್ರೀರಾಧಾಕೃಷ್ಣನ್‌ರವರು ಹೀಗೆ ಪ್ರಕಟಿಸಿರುತ್ತಾರೆ : 'ಜೀವನವೆಂಬ ಸ್ಪರ್ಧೆಯ ಆಟವನ್ನು ಆಡುವವರು ಈ ಆಟವೆಂಬುದು ಬರಿಯ ತೋರಿಕೆಯೆಂದೂ ಇಲ್ಲಿ ಸಿಕ್ಕುವ ಬಹುಮಾನಗಳು ಬರಿಯ ಸೊನ್ನೆಗಳೆಂದೂ ನಂಬಿ ಆಡುವದು ಎಂದಿಗೂ ಸಾಧ್ಯವಿಲ್ಲ', 'ಯಾವ ಪದಾರ್ಥಗಳೂ ನಿಜವಾಗಿಲ್ಲ, ಯಾವ ಪದಾರ್ಥಕ್ಕೂ ಯಾವ ಬೆಲೆಯೂ ಇಲ್ಲ ಎಂದು ನಿತ್ಯವೂ ನುಡಿಯುತ್ತಲೇ ಅದೇ ಪದಾರ್ಥಗಳನ್ನಿಟ್ಟುಕೊಂಡು ವ್ಯವಹರಿಸುತ್ತಿರಬೇಕಾಗುವದೆಂಬುದು ಈ ವಾದದಲ್ಲಿರುವ ಪರಮದೋಷವು'. ಜಗತ್ತೆಲ್ಲವೂ ಸ್ಪರ್ಧೆಯೆಂಬುದೂ ಇಲ್ಲಿ ಬಹುಮಾನಗಳನ್ನು ಪಡೆಯುವದಕ್ಕಾಗಿ ನಾವು ಈ ಸ್ಪರ್ಧೆಯ ಆಟದಲ್ಲಿ ನಿರತರಾಗಿರುವೆವೆಂಬುದೂ ಪೈಪೋಟಿಯ ವ್ಯಾಪಾರವನ್ನು ಮುಂದು ಮಾಡಿಕೊಂಡು ಹೊರಟಿರುವ ಅರ್ಥಶಾಸ್ತ್ರಪ್ರಧಾನವಾದ ಪಾಶ್ಚಾತ್ಯನಾಗರಿಕತೆಗೆ

ಒಪ್ಪುವ ಮಾತಾದೀತೇ ಹೊರತು ಧರ್ಮಶಾಸ್ತ್ರಪ್ರಧಾನವಾದ ನಮ್ಮ ದೇಶದ ಸಂಸ್ಕೃತಿಗೆ ಎಂದಿಗೂ ಅನುಗುಣವೆನಿಸಲಾರದು. ವೇದೋಕ್ತವಾದ ಕಾಮ್ಯಕರ್ಮಗಳು ಸ್ವರ್ಗಾದಿಫಲವನ್ನು ಕೊಡುವವಾದರೂ ಅವು ಕೂಡ 'ಅವರ ಕರ್ಮಗಳು' (ಕೀಳು ಕರ್ಮಗಳು) ಎಂದು ಜರೆದು ಪರಮಪುರುಷಾರ್ಥವನ್ನು ಬಯಸುವ ವಿವೇಕಿಗಳಿಗಾಗಿ ಸಂಗವಿಲ್ಲದೆ ಫಲಾಸಕ್ತಿಯಿಲ್ಲದೆ ಮಾಡುವ ಕರ್ಮಯೋಗವನ್ನು ಉಪದೇಶಿಸಿರುವ ಭಗವದ್ಗೀತೆಯನ್ನು ಸ್ಮರಿಸಿಕೊಂಡರೆ ಸಾಕು, ಪ್ರಪಂಚದ ಆಟದಲ್ಲಿ ಸಿಕ್ಕುವ ಬಹುಮಾನಗಳ ಆಸೆ ಎಂಬ ಪಿಶಾಚಿಯು ದಿಕ್ಕುಗೆಟ್ಟು ಓಡುವದು. ಆಸೆಯಿರುವವರು ಬಹುಮಾನಗಳಿಗಾಗಿ ಕೆಲಸಮಾಡುವರೆಂಬುದು ಸ್ವಾಭಾವಿಕವೇ ಆಗಿದೆ ; ಆದರೆ ಅವರನ್ನೇ ಬೆನ್ನು ಚಪ್ಪರಿಸಿ 'ಭಲೆ !' ಎನ್ನುವದು ಒಂದು ತತ್ತ್ವಶಾಸ್ತ್ರವೆನಿಸಲಾರದು. ಇನ್ನು ಪ್ರಪಂಚವು ಮಿಥ್ಯೆ ಎಂದರೆ ''ಯಾವ ಪದಾರ್ಥಗಳೂ ನಿಜವಾಗಿಲ್ಲ ಯಾವ ಪದಾರ್ಥಕ್ಕೂ ಯಾವ ಬೆಲೆಯೂ ಇಲ್ಲ''- ಎಂಬರ್ಥವೆಂದು ಕಲ್ಪಿಸುವದು ಈ ವಾದಕ್ಕೆ ತೀರ ಅನ್ಯಾಯಮಾಡಿದಂತೆ. ಏಕೆಂದರೆ ಪದಾರ್ಥಗಳು ಮಿಥ್ಯೆ ಎಂದರೆ ಅವಕ್ಕೆ ಯಾವ ಬೆಲೆಯೂ ಇಲ್ಲವೆಂದು ಅಭಿಪ್ರಾಯವಲ್ಲ, ಅವೆಲ್ಲವೂ ನಿಜವಾಗಿ ಬ್ರಹ್ಮವೇ ಎಂದರ್ಥ. ನಾವು ಕಲ್ಪಿಸಿರುವ ತೋರಿಕೆಯ ಬೆಲೆಗಳು ಆ ಪರಮಾರ್ಥವಾದ ಬೆಲೆಗೆ ಹೋಲಿಸಿದರೆ ಸೊನ್ನೆಗಳೇ ಆಗಿರುವವು. ಎಲ್ಲವೂ ಬ್ರಹ್ಮವೇ ಎಂಬ ಅರಿವುಳ್ಳವರು ಯಾವ ವ್ಯವಹಾರವನ್ನು ಮಾಡುವದೂ ಅಸಾಧ್ಯವೆನ್ನುವವರು ಬರಿಯ ಗೌಡಪಾದರ ಸಿದ್ಧಾಂತವನ್ನಲ್ಲ, ಗೀತಾಚಾರ್ಯನಾದ ಶ್ರೀ ಭಗವಂತನ ಸಿದ್ಧಾಂತವನ್ನೇ ಖಂಡಿಸುವದಕ್ಕೆ ಹೊರಟಿರುತ್ತಾರೆನ್ನಬೇಕಾಗುತ್ತದೆ. ಭಗವದ್ಗೀತೆಯಲ್ಲಿರುವ ''ಬ್ರಹ್ಮಾರ್ಪಣಂ ಬ್ರಹ್ಮ ಹವಿಃ''(ಗೀ. ೪-೨೪) ಎಂಬ ಶ್ಲೋಕವನ್ನೂ ಅದರ ಮೇಲೆ ಶಂಕರಾಚಾರ್ಯರು ಬರೆದಿರುವ ಭಾಷ್ಯವನ್ನೂ ಮನಮುಟ್ಟಿ ಓದಿದವರಿಗೆ ಇಲ್ಲಿ ನಾವು ಹೇಳಿರುವವರ ನಿಜವು ಮನದಟ್ಟಾಗುವದು. ''ಜ್ಞಾನಿಗಳು ಎಲ್ಲಾ ಕರ್ಮಗಳನ್ನೂ ಮಾಡುತ್ತಿದ್ದರೂ ನಿಜವಾಗಿ ಯಾವ ಕರ್ಮವನ್ನೂ ಮಾಡುವದಿಲ್ಲ'' ಎಂಬ ಗೀತೋಪದೇಶವನ್ನು ಮನದಂದದವರಿಗೆ ಜ್ಞಾನಿಗಳು ಮಾಡುವ ವ್ಯವಹಾರದಿಂದ ಪ್ರಕೃತವಾದಕ್ಕೆ ಪರಮದೋಷವೊಂದು ಗಂಟುಬೀಳುವದೆಂಬ ತಪ್ಪುತಿಳಿವಳಿಕೆಯೂ ಹಾರಿಹೋಗುವದು.

ಸರ್ ರಾಧಾಕೃಷ್ಣನ್‌ರವರು ಈ ವಾದದ ವಿಷಯಕ್ಕೆ ಹೇಳಿರುವ ಮತ್ತೊಂದು ವಾಕ್ಯವನ್ನು[1] ವಿಮರ್ಶಿಸಿ ಈ ವಿಷಯವನ್ನು ಉಪಸಂಹಾರ ಮಾಡುವೆವು "ಪ್ರಪಂಚವೆಂಬುದು ಅಭೇದ್ಯರಹಸ್ಯವೂ ಅನಿರ್ವಚನೀಯವೂ ಆಗಿರಬಹುದು. ಆದರೆ ಇದರಿಂದ ಈ ಪ್ರಪಂಚವನ್ನೂ ತನ್ನೊಳಗೆ ಅಡಕಮಾಡಿ ಕೊಂಡಿರುವ, ಇದನ್ನೂ ಮೀರಿರುವ ಮತ್ತೊಂದು ತತ್ತ್ವವು ಇರಬೇಕೆಂದು ನಿಶ್ಚಯವಾದೀತೇ ಹೊರತು ಜಗತ್ತೆಲ್ಲವೂ ಸ್ವಪ್ನಮಾತ್ರವೆಂದು ಎಂದಿಗೂ ಏರ್ಪಡುವದಿಲ್ಲ." ಪ್ರಪಂಚವು ಅಭೇದ್ಯರಹಸ್ಯವೆಂಬ ಮಾತಿನ ಜೊಳ್ಳುತನವನ್ನು ನಾವು ಆಗಲೇ ತೋರಿಸಿಕೊಟ್ಟಿರುತ್ತೇವೆ. ಜಗತ್ತು ಸ್ವಪ್ನಮಾತ್ರವೆಂಬುದನ್ನು ಅದು ಅಭೇದ್ಯರಹಸ್ಯವೆಂಬ ಹೇತುವಿನಿಂದ ಗೌಡಪಾದರಾಗಲಿ ಶಂಕರಾಚಾರ್ಯರಾಗಲಿ ತರ್ಕಿಸಿರುವದಿಲ್ಲ. ಸ್ವಪ್ನಕ್ಕೂ ಎಚ್ಚರಕ್ಕೂ ಯಾವ ವಿಧದಿಂದಲೂ ಯಾವ ತಾರತಮ್ಯವೂ ಇರುವದಿಲ್ಲವೆಂಬುದನ್ನು ಅವರು ಸರ್ವಾನುಭವಸಮ್ಮತವಾದ ಯುಕ್ತಿಯಿಂದ ವೈತಥ್ಯಪ್ರಕರಣದಲ್ಲಿ ಸಾಧಿಸಿರುತ್ತಾರೆ. ಗೌಡಪಾದರ ಮತದಲ್ಲಿ ದೋಷವನ್ನು ತೋರಿಸುವವರು ಅವರ ಯುಕ್ತಿಗಳಲ್ಲಿ ದೋಷಗಳನ್ನು ತೋರಿಸಬೇಕು ; ಸ್ವಪ್ನಕ್ಕಿಂತ ಜಾಗ್ರತ್ತಿನಲ್ಲಿ ಯಾವ ವಿಶೇಷವಿದೆ ಎಂಬುದನ್ನಾದರೂ ತೋರಿಸಬೇಕು. ಆ ಕೆಲಸವನ್ನು ಮಾಡದೆ ಆ ಮತವು ಒಪ್ಪತಕ್ಕದ್ದಲ್ಲ ಎಂದರೆ ಬರಿಯ ಉಕ್ತಿಮಾತ್ರವಾದೀತೇ ಹೊರತು ಸಿದ್ಧಾಂತದ ದೂಷಣೆಯಾಗಲಾರದು.

ಸ್ವಪ್ನವಿಷಯಕ್ಕೆ ಗೌಡಪಾದರಿಗೂ ಭಾಷ್ಯಕಾರರಿಗೂ ವಿಮತಿಯಿಲ್ಲ

ಶ್ರೀ ಶಂಕರಾಚಾರ್ಯರವರು ಎಚ್ಚರಕ್ಕೂ ಕನಸಿಗೂ ವೈಧರ್ಮ್ಯವುಂಟೆಂದು ಬ್ರಹ್ಮಸೂತ್ರಭಾಷ್ಯ (೨-೨-೧೯)ದಲ್ಲಿ ಹೇಳಿರುವದರ ಬಲದಿಂದ ಅವರಿಗೂ ಗೌಡಪಾದರಿಗೂ ಅಭಿಪ್ರಾಯಭೇದವಿರುವದೆಂದು ಸರ್ ರಾಧಾಕೃಷ್ಣನ್ ಮುಂತಾದವರು ಕಲ್ಪಿಸಿರುತ್ತಾರೆ. **ಶ್ರೀ ಕೋಕಿಲೇಶ್ವರಶಾಸ್ತ್ರಿಗಳು** ವೈತಥ್ಯಪ್ರಕರಣದ ಭಾಷ್ಯವಾಕ್ಯಗಳನ್ನು ಕೂಡ ತಿರುಚಿ ಅರ್ಥಮಾಡುವದರ ಮೂಲಕ ಶಂಕರಾಚಾರ್ಯರಿಗೆ ಜಾಗ್ರತ್ಸ್ವಪ್ನಭೇದವೇ ಸಮ್ಮತವೆಂದು ತೋರಿಸುವ ಸಾಹಸಕ್ಕೆ ಕೈಹಾಕಿರುತ್ತಾರೆ.

---

1. ಇಲ್ಲಿ ಕೊಟ್ಟಿರುವ ಶ್ರೀ ಎಸ್. ರಾಧಾಕೃಷ್ಣನ್‌ರವರ ಉಕ್ತಿಗಳು ಅವರ 'Indian Philosophy' ಎಂಬ ಗ್ರಂಥದಿಂದ ತೆಗೆದುಕೊಂಡವುಗಳು.

ಆದರೆ ನಿಷ್ಪಕ್ಷಪಾತದೃಷ್ಟಿಯಿಂದ ನೋಡಿದರೆ ಈ ವಿಷಯದಲ್ಲಿ ಆ ಇಬ್ಬರು ಆಚಾರ್ಯರಿಗೂ ಯಾವ ಅಭಿಪ್ರಾಯತಾರತಮ್ಯವನ್ನೂ ತೋರಿಸಿಕೊಡುವದಕ್ಕೆ ಆಗುವದಿಲ್ಲ. ಶಂಕರಾಚಾರ್ಯರು ವೈತಥ್ಯಪ್ರಕರಣಭಾಷ್ಯದಲ್ಲಿ, ಅಥವಾ ಮತ್ತೆ ಯಾವ ಕಡೆಯಲ್ಲಾದರೂ, ಗೌಡಪಾದರ ಅಭಿಪ್ರಾಯವು ತಮಗೆ ಸಮ್ಮತವಿಲ್ಲವೆಂದು ಹೇಳಿರುವದಿಲ್ಲ. ಸೂತ್ರಭಾಷ್ಯದಲ್ಲಿ ಗೌಡಪಾದರನ್ನು ''ವೇದಾಂತಾರ್ಥಸಂಪ್ರದಾಯವನ್ನು ಬಲ್ಲ ಆಚಾರ್ಯರು'' (ಸೂ. ಭಾ. ೧-೪-೧೪, ೨-೧-೯) ಎಂದು ಗೌರವದಿಂದ ಕರೆದಿರುತ್ತಾರೆ. ಆದ್ದರಿಂದ ಸೂತ್ರಭಾಷ್ಯದಲ್ಲಿ ಕನಸಿಗೂ ಎಚ್ಚರಕ್ಕೂ ತಾರತಮ್ಯವಿರುವದೆಂದು ಹೇಳಿರುವದು ವ್ಯವಹಾರದೃಷ್ಟಿಯಿಂದಲೇ ಎಂದು ಹೇಳಬೇಕಾಗಿರುತ್ತದೆ. ''ಅತೋ ವೈಶೇಷಿಕ ಮಿದಂ ಸನ್ಧ್ಯಸ್ಯ ಮಾಯಾಮಾತ್ರತ್ವಮ್ ಉದಿತಮ್'' (ಸೂ. ಭಾ. ೩-೨-೪) ಎಂಬ ಭಾಷ್ಯದಲ್ಲಿ ಎಚ್ಚರವೂ ಕನಸಿನಂತೆ ಮಾಯಿಕವೇ ಆಗಿರುವದೆಂದು ಅವರೇ ಹೇಳಿರುವದು ಇದಕ್ಕೆ ಅನುಗುಣವಾಗಿಯೇ ಇರುತ್ತದೆ.

ಅದ್ವೈತಪ್ರಕರಣದಲ್ಲಿ ಹೇಳಿರುವ ಮನೋನಿಗ್ರಹ

ಈ ವಿಷಯದಲ್ಲಿ ಈಗಿನ ವೇದಾಂತಿಗಳಲ್ಲಿ ಬೇರೆಬೇರೆಯ ಅಭಿಪ್ರಾಯಗಳು ಉಂಟಾಗಿರುತ್ತವೆ. ಆದ್ದರಿಂದ ಕಾರಿಕಾಕಾರರೂ ಭಾಷ್ಯಕಾರರೂ ಈ ಬಗ್ಗೆ ಏನು ಹೇಳಿರುವರೆಂಬುದನ್ನು ಸ್ವಲ್ಪ ವಿಮರ್ಶಿಸುವದು ಅವಶ್ಯವಾಗಿದೆ.

(೧) ''ಆತ್ಮಸತ್ಯಾನುಬೋಧದಿಂದ ಯಾವಾಗ ಸಂಕಲ್ಪಿಸುವದಿಲ್ಲವೋ ಆಗ ಮನಸ್ಸು ಅಮನಸ್ಕತೆಯನ್ನು ಹೊಂದುವದು'' (ಕಾ. ೩-೨೩).

(೨) ''ನಿಗ್ರಹವಾದ ನಿರ್ವಿಕಲ್ಪವಾದ ಮನಸ್ಸಿನ ಪ್ರಚಾರವನ್ನು ಅರಿತುಕೊಳ್ಳಬೇಕು. ಸುಷುಪ್ತಿಯಲ್ಲಿರುವ ಮನಸ್ಸಿನ ಪ್ರಚಾರವು ಬೇರೆಯಾಗಿರುವದು ; ಏಕೆಂದರೆ ಅಲ್ಲಿ ಮನಸ್ಸು ಲಯವಾಗುತ್ತದೆ, ನಿಗ್ರಹವಾದಾಗ ಲಯವಾಗುವದಿಲ್ಲ'' (ಕಾ. ೩-೩೪, ೩೫).

ಮೇಲಿನ ಕಾರಿಕೆಗಳಲ್ಲಿ ಮನಸ್ಸನ್ನು ನಿಗ್ರಹಮಾಡಿದರೆ ಆಗುವ ಸಮಾಧಿಯನ್ನು ಪರಾಮರ್ಶಿಸಿದೆಯೆಂದೂ ಸುಷುಪ್ತಿಯಲ್ಲಿರುವ ಮೂಲಾವಿದ್ಯೆಯು ಸಮಾಧಿಯಲ್ಲಿರುವದಿಲ್ಲ ಎಂಬುದು ಕಾರಿಕೆಗಳ ಒಟ್ಟರ್ಥವೆಂದೂ ಕೆಲವರು ಭಾವಿಸಿರುತ್ತಾರೆ. ಮೂಲಾವಿದ್ಯಾವಾದವು ಕಾರಿಕೆಗೂ ಭಾಷ್ಯಕ್ಕೂ ಅಪರಿಚಿತ

ವಾದದ್ದು ಎಂದು ನಾವು ಆಗಲೇ ತೋರಿಸಿಕೊಟ್ಟಿರುತ್ತೇವೆ. ಸುಷುಪ್ತಿಯಲ್ಲಿಯೂ ಸಮಾಧಿಯಲ್ಲಿರುವಂತೆ ಅದ್ವೈತಾತ್ಮಸ್ವರೂಪವೊಂದೇ ಇರುವದೆಂದು ಕಾರಿಕೆಯ ಭಾಷ್ಯದಲ್ಲಿಯೂ (ಭಾ. ಭಾ. ೧೨೩, ೧೬೩, ೧೮೪, ೨೬೧), ಗೀತಾಭಾಷ್ಯ (ಭಾ. ಭಾ. ೬೦೧), ಸೂತ್ರಭಾಷ್ಯ (೨-೧-೯, ೩-೨-೭)- ಇವುಗಳಲ್ಲಿಯೂ ಕಂಠೋಕ್ತವಾಗಿ ಹೇಳಿರುತ್ತದೆ. ಇದೂ ಅಲ್ಲದೆ ಇದು ಜ್ಞಾನದ ಪ್ರಕರಣವಾದ್ದರಿಂದ **ವಿವೇಕದಿಂದ ಆತ್ಮಸತ್ಯವನ್ನರಿತುಕೊಂಡು ಚಿತ್ತನಿರೋಧವನ್ನು ಮಾಡಿಕೊಳ್ಳುವದನ್ನೇ ಇಲ್ಲಿ ನಿಗ್ರಹವೆಂಬ ಹೆಸರಿನಿಂದ ಕರೆದಿದೆ** ಎಂದು ತಿಳಿಯಬೇಕಾಗಿದೆ. ಆದ್ದರಿಂದ ಸುಷುಪ್ತಿಯಿಂದ ಎಚ್ಚತ್ತಬಳಿಕ ದ್ವೈತವು ಎಂದಿನಂತೆ ಸತ್ಯವಾಗಿ ತೋರುವಹಾಗೆ ದ್ವೈತವು ಜ್ಞಾನದಿಂದ ಬಾಧಿತವಾದ ಬಳಿಕ ಎಂದಿಗೂ ಸತ್ಯವಾಗಿ ತೋರಲಾರದು - ಎಂಬುದೇ ಇಲ್ಲಿ ಹೇಳಿರುವ ತಾರತಮ್ಯವು. ಆಗಮಪ್ರಕರಣದಲ್ಲಿ ಪ್ರಾಜ್ಞ - ತುರೀಯರಿಗೆ ಹೇಳಿರುವ ತಾರತಮ್ಯವನ್ನೇ ಇಲ್ಲಿ ಪ್ರಕಾರಾಂತರದಿಂದ ತಿಳಿಸಿದೆ ಎಂದು ತಿಳಿಯಬೇಕು.

ಇನ್ನು ಇದೇ ಪ್ರಕರಣದ ನಲವತ್ತನೆಯ ಕಾರಿಕೆಯಲ್ಲಿರುವ ವಿಷಯವನ್ನು ಪರಿಶೀಲಿಸೋಣ.

(೩) "ಎಲ್ಲಾ ಯೋಗಿಗಳಿಗೂ ಅಭಯವೂ ದುಃಖಿಕ್ಷಯವೂ ಜ್ಞಾನವೂ ಅಕ್ಷಯವಾದ ಶಾಂತಿಯೂ ಮನಸ್ಸಿನ ನಿಗ್ರಹಕ್ಕೆ ಅಧೀನವಾಗಿರುತ್ತದೆ". (೩-೪೦)

ಇಲ್ಲಿ ಹೇಳಿರುವ ಮನೋನಿಗ್ರಹದ ಸ್ವರೂಪವೇನು ?- ಎಂಬುದು ವಿಚಾರಣೀಯವಾಗಿರುತ್ತದೆ. ಏಕೆಂದರೆ ಈ ನಿಗ್ರಹವನ್ನು ವಿವರಿಸುವಾಗ "ಲಯ, ವಿಕ್ಷೇಪ, ಕಷಾಯ, ಸುಖಾಸ್ವಾದ- ಎಂಬ ನಾಲ್ಕು ಎಡರುಗಳನ್ನು ದಾಟಿದರೆ ಮನಸ್ಸು ಬ್ರಹ್ಮವಾಗುತ್ತದೆ" ಎಂಬ ಅಭಿಪ್ರಾಯವು (ಕಾ. ೩-೪೨ ರಿಂದ ೪೬)ರಲ್ಲಿ ಕಂಡುಬರುತ್ತದೆ. ಇಲ್ಲಿ ನಿರ್ವಿಕಲ್ಪಸಮಾಧಿಯನ್ನು ಹೇಳಿದೆಯೆಂದೂ ಆ ಸಮಾಧಿಯನ್ನು ಅನುಭವಿಸಿ ಎಚ್ಚತ್ತವನಿಗೆ ಪ್ರಾರಬ್ಧಕರ್ಮವು ಸವೆಯುವವರೆಗೂ **ಅಜ್ಞಾನದ ಲೇಶ ಅಥವಾ ಸಂಸ್ಕಾರ** ಎಂಬ ಕಲಂಕವು ಇದ್ದುಕೊಂಡಿರುವದೆಂದೂ ಶರೀರವು ಬಿದ್ದಬಳಿಕ ಪ್ರಾಣವು ಬ್ರಹ್ಮದಲ್ಲಿ ಲಯವಾಗಲು **ವಿದೇಹಕೈವಲ್ಯ**ವೆಂಬ ಮುಖ್ಯಮುಕ್ತಿಯುಂಟಾಗುವದೆಂದೂ ಕೆಲವರು ವರ್ಣಿಸುತ್ತಾರೆ.

ಆದರೆ ಈ ವಾದಕ್ಕೆ ಕಾರಿಕೆಯಲ್ಲಾಗಲಿ ಕಾರಿಕಾಭಾಷ್ಯದಲ್ಲಾಗಲಿ ಪ್ರಸ್ಥಾನತ್ರಯದ ಮಿಕ್ಕ ಭಾಷ್ಯಗಳಲ್ಲಿಯೇ ಆಗಲಿ ಯಾವ ಆಧಾರವೂ ಇರುವ ದಿಲ್ಲ. ಜ್ಞಾನಯೋಗಕ್ಕೆ ಅಂತರಂಗಸಾಧನವಾಗಿ ಗೀತೆಯ ಆರನೆಯ ಅಧ್ಯಾಯ ದಲ್ಲಿ ಹೇಳಿರುವಂತೆಯೇ ಇಲ್ಲಿಯೂ **ಧ್ಯಾನಯೋಗ**ವನ್ನೇ ಮನೋನಿಗ್ರಹವೆಂಬ ಹೆಸರಿನಿಂದ ಉಪದೇಶಿಸಿರುತ್ತದೆ ಎಂದು ಭಾವಿಸಿದರೆ ಈ ಎರಡುಕಡೆಗಳಲ್ಲಿರುವ ಆಚಾರ್ಯರ ಅಭಿಪ್ರಾಯಕ್ಕೂ ಏಕವಾಕ್ಯತೆಯುಂಟಾಗುತ್ತದೆ. ಮಧ್ಯಮಾಧಿಕಾರಿ ಗಳಿಗೆ ಉಪದೇಶಿಸಿರುವ ಈ ಮನೋನಿಗ್ರಹವು ಪುರುಷತಂತ್ರವಾದ **ಉಪಾಸನೆ ಯಲ್ಲ** ; ಸೂಕ್ಷ್ಮದೃಷ್ಟಿಯಿಂದ ಪರೀಕ್ಷಿಸಿ ರತ್ನದ ತತ್ತ್ವವನ್ನು ನಿಶ್ಚಯಿಸುವಂತೆ ಮನಸ್ಸನ್ನು ವಿಷಯಚಿಂತೆಯಿಂದ ಚದರಿಸದೆ, ಆತ್ಮಚಿಂತೆಯಿಂದ ಬೇಸತ್ತು ಲಯವಾಗಗೊಳಿಸದೆ, ಈ ಪರಿಲೀಲನೆಯ ಆನಂದದಿಂದಲೇ ತೃಪ್ತನೂ ಆಗದೆ, ಏಕಾಗ್ರತೆಯಿಂದ ಆತ್ಮಸ್ವರೂಪವನ್ನು ಚಿಂತಿಸುವದೇ ಮನೋನಿಗ್ರಹವೆಂಬ ಮಾತಿನಿಂದ ಇಲ್ಲಿ ಹೇಳಿರುವ ಸಾಧನವು. ಇದನ್ನು **ನಿದಿಧ್ಯಾಸನ**ವೆಂದೂ ಕರೆಯುತ್ತಾರೆ. ಅದ್ವೈತಪ್ರಕರಣವೇ ಉಪಾಸನಾನಿಂದೆಯಿಂದ ಪ್ರಾರಂಭವಾಗಿ ರುವದರಿಂದಲೂ ಇಲ್ಲಿ ಉಪದೇಶಿಸಿರುವದು ಉಪಾಸನೆಗಿಂತ ಬೇರೆಯಾದ ನಿದಿಧ್ಯಾಸನವೆಂದು ಸಿದ್ಧವಾಗುತ್ತದೆ. ಈ ನಿದಿಧ್ಯಾಸನವನ್ನು ಉಪಾಸನೆಯೆಂದು ಕರೆಯುವದರಲ್ಲೇನೂ ದೋಷವಿಲ್ಲ ; ಏಕೆಂದರೆ ಜ್ಞಾನವನ್ನು ಕೂಡ ಉಪಾಸನೆ ಎಂಬ ಹೆಸರಿನಿಂದಲೂ ಕರೆದಿರುವದು ಶ್ರುತಿಸ್ಮೃತಿಗಳಲ್ಲಿ ಕಂಡುಬರುತ್ತದೆ. ಆದರೆ ಲೋಕಾಂತರದಲ್ಲಿ ಬ್ರಹ್ಮಸಾಯುಜ್ಯವನ್ನು ಪಡೆಯುವದಕ್ಕೆ ಸಾಧನವಾಗಿರುವ ಉಪಾಸನೆಗೂ ಇಲ್ಲಿಯೇ ಆತ್ಮಸತ್ಯಾನುಬೋಧಕ್ಕೆ ಕಾರಣವಾಗಿರುವದೆಂದು ಹೇಳಿರುವ ಈ ಉಪಾಸನೆಗೂ ಇರುವ ತಾರತಮ್ಯವನ್ನು ಮಾತ್ರ ಕಡೆಗಣಿಸ ಬಾರದು. ಆದ್ದರಿಂದಲೇ ಭಾಷ್ಯಕಾರರು ಅದ್ವೈತಪ್ರಕರಣದ ಅರ್ಥವನ್ನು ಉಪಸಂಹಾರಮಾಡುವ ಸಂದರ್ಭದಲ್ಲಿ ಹೀಗೆಂದು ಬರೆದಿರುತ್ತಾರೆ :

'ಈ ಮನೋನಿಗ್ರಹಾದಿಗಳೂ ಮೃಲ್ಲೋಹಾದಿಗಳಂತೆ ಎಂದು ಹೇಳಿದ ಸೃಷ್ಟಿಯೂ ಉಪಾಸನೆಯೂ ಪರಮಾರ್ಥವನ್ನು ತಿಳಿಯುವದಕ್ಕೆ ಉಪಾಯವೆಂದು ಹೇಳಿದೆಯೇ ಹೊರತು ಪರಮಾರ್ಥಸತ್ಯವೆಂದು ಹೇಳಿಲ್ಲ' (ಭಾ. ಭಾ. ೨೧೦).

ಕಾರಿಕೆಯಲ್ಲಿಯೂ ಭಾಷ್ಯದಲ್ಲಿಯೂ ಕಾಣಬರುವ ದ್ವೈತಖಂಡನೆ

ಗೌಡಪಾದರೂ ಆಚಾರ್ಯರೂ ಇಲ್ಲಿ ವೈಶೇಷಿಕರು, ಸಾಂಖ್ಯರು, ಬೌದ್ಧರು, ಜೈನರು, ಮೀಮಾಂಸಕರು - ಮುಂತಾದವರ ಮತಗಳನ್ನು ಅಲ್ಲಲ್ಲಿ ಖಂಡಿಸಿರುತ್ತಾರೆ. ಈ ಖಂಡನೆಯ ಪ್ರಯೋಜನವೇನೆಂಬುದನ್ನು ವಿಚಾರ ಪೂರ್ವಕವಾಗಿ ಗೊತ್ತುಪಡಿಸಬೇಕಾಗಿದೆ. ಏಕೆಂದರೆ ಶೂನ್ಯವಾದಿಗಳೂ ಸಾಂಖ್ಯ ವೈಶೇಷಿಕಾದಿಗಳೂ ತಮ್ಮ ತಮ್ಮ ಮತವೊಂದೇ ಸರಿ ಎಂದು ತೋರಿಸುವದಕ್ಕಾಗಿ ಪರಮತವನ್ನು ಖಂಡಿಸಲೇಬೇಕಾಗಿರುವಂತೆ ಅದ್ವೈತಿಗಳಿಗೆ ಈ ಖಂಡನೆಯ ಅವಶ್ಯಕತೆಯಿರುವದಿಲ್ಲ. ದ್ವೈತಿಗಳಿಗೆ ದ್ವೈತವು ಪರಮಾರ್ಥಸತ್ಯವಾದ್ದರಿಂದ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದಮೇಲೂ ಅವರಿಗೆ ಪರಮತವು ದುಷ್ಟವೆಂದು ತೋರಿಸಬೇಕಾದದ್ದು ಉಳಿದುಕೊಂಡಿರುತ್ತದೆ. ಆದರೆ ಅದ್ವೈತಿಗಳ ದೃಷ್ಟಿಯಿಂದ ದ್ವೈತವೆಲ್ಲವೂ ಮಾಯಾಕಲಿತವಾಗಿರುವದರಿಂದ ಆ ಕಲ್ಪಿತದ್ವೈತದಿಂದ ಅದ್ವೈತಕ್ಕೆ ಯಾವ ಹಾನಿಯೂ ಇಲ್ಲ (೩-೧೭. ೧೮) ; ಆದ್ದರಿಂದ ಅದ್ವೈತವನ್ನು ಸ್ಥಾಪಿಸುವದರಿಂದಲೇ ದ್ವೈತವನ್ನು ಖಂಡಿಸಿದಂತೆ ಆಗಿಬಿಡುತ್ತದೆ. ಹೀಗಿದ್ದರೂ ದ್ವೈತವನ್ನು ಬೇರೆಯಾಗಿ ಖಂಡಿಸಿರುವದೇಕೆಂದರೆ : ದ್ವೈತಸಿದ್ಧಾಂತಗಳು ಪರಸ್ಪರ ವಿರುದ್ಧವಾಗಿರುವದರಿಂದ ದ್ವೈತಬುದ್ಧಿಯು ರಾಗದ್ವೇಷಾದಿಗಳಿಗೆ ಕಾರಣವಾಗಿರುವದೆಂದೂ (೩-೧೭, ಭಾ. ಭಾ. ೧೬೧) ಅದ್ವೈತವು ಸರ್ವಕಲ್ಪನೆಗಳಿಗೂ ಆಧಾರವಾಗಿರುವದರಿಂದ ಯಾವಾಗಲೂ ಏಕಸ್ವರೂಪವಾಗಿರುವದೆಂದೂ (೨-೩೩, ಭಾ. ಭಾ. ೧೧೭) ಮುಮುಕ್ಷುಗಳಿಗೆ ತಿಳಿಸಿಕೊಡುವದಕ್ಕೆ; ದ್ವೈತಿಗಳು ವೇದವಿರುದ್ಧವಾದ ಕುದೃಷ್ಟಿಯನ್ನವಲಂಬಿಸಿರುವದರಿಂದ ಅವರ ದರ್ಶನಗಳು ಸರಿಯಾದ ವಿಚಾರಕ್ರಮದಿಂದ ಪರೀಕ್ಷಿಸಿದರೆ ಅಯುಕ್ತವೆಂದೇ ಸ್ಪಷ್ಟವಾಗುವದೆಂದು ತಿಳಿಸುವದಕ್ಕೆ (೩-೧೩, ಭಾ. ಭಾ. ೧೫೧). ಈ ಅಭಿಪ್ರಾಯವನ್ನು ಭಾಷ್ಯಕಾರರು ಈ ಕೆಳಗೆ ಉದಾಹರಿಸುವಂಥ ವಾಕ್ಯಗಳಲ್ಲಿ ಮತ್ತೆ ಮತ್ತೆ ಸೂಚಿಸಿರುತ್ತಾರೆ :-

'ವಿಗತದೋಷೈರೇವ ಪಣ್ಡಿತೈರ್ವೇದಾನ್ತಾರ್ಥತತ್ಪರೈಃ ಸಂನ್ಯಾಸಿಭಿಃ ಅಯಮಾತ್ಮಾ ದ್ರಷ್ಟುಂ ಶಕ್ಯಃ, ನಾನ್ಯೈಃ ರಾಗಾದಿಕಲುಷಿತಚೇತೋಭಿಃ ಸ್ವಪಕ್ಷಪಾತಿದರ್ಶನೈಃ ತಾರ್ಕಿಕಾದಿಭಿಃ ಇತ್ಯಭಿಪ್ರಾಯಃ' (೨-೩೫, ಭಾ. ಭಾ. ೧೨೧). 'ಯಾವ ದೋಷಗಳೂ ಇಲ್ಲದ, ವೇದಾಂತಾರ್ಥದಲ್ಲಿಯೇ ತತ್ಪರರಾಗಿ

ರುವ ಸಂನ್ಯಾಸಿಗಳಿಗೇ ಈ ಆತ್ಮನನ್ನು ಕಾಣುವದು ಶಕ್ಯವೇ ಹೊರತು ರಾಗವೇ ಮುಂತಾದ (ದೋಷಗಳಿಂದ) ಚಿತ್ತವು ಕದಡಿರುವ, ತಮಗೆ ಬೇಕಾಗಿರುವ ದರ್ಶನಗಳನ್ನೇ (ಇಟ್ಟುಕೊಂಡಿರುವ), ತಾರ್ಕಿಕರೇ ಮುಂತಾದವರಿಗೆ ಆಗಲಾರದು - ಎಂದು ಅಭಿಪ್ರಾಯ'.

ಶಾಸ್ತ್ರೋಕ್ತವಾದ ಉಪಾಸನೆಗಳನ್ನು ನಿಂದಿಸಿರುವದು ಅಜಾತಿವಾದದ ಹೆಚ್ಚುಗಾರಿಕೆಯನ್ನು ತಿಳಿಸುವದಕ್ಕೇ ಹೊರತು ಆ ಸಾಧನಗಳು ಸರ್ವಥಾ ಉಪಯೋಗವಿಲ್ಲವೆಂಬ ಭಾವದಿಂದಲ್ಲ. ಆದ್ದರಿಂದಲೇ ಮಂದಮಧ್ಯಮಾಧಿಕಾರಿಗಳಿಗೆ ಕರ್ಮವನ್ನೂ ಉಪಾಸನೆಯನ್ನೂ ಶ್ರುತಿಯು ಕನಿಕರದಿಂದ ವಿಧಿಸಿದೆ (೩-೧೬) ಎಂದೂ, ಸ್ಥೂಲಬುದ್ಧಿಗಳಾದ ಶ್ರೋತ್ರಿಯರಿಗೆ ಕರ್ಮಾದಿಸಾಧನಗಳಿಗೆ ಅನುಕೂಲವಾಗಿರಲೆಂದು ಸೃಷ್ಟಿಯನ್ನು ಒಪ್ಪಿದೆ ಎಂದೂ (೪-೪೨) ಕಾರಿಕಾಕಾರರೂ ಭಾಷ್ಯಕಾರರೂ ಹೇಳಿರುತ್ತಾರೆ. ಈ ರೀತಿಯಲ್ಲಿ ನೋಡಿದರೆ ದ್ವೈತವು ವ್ಯಾವಹಾರಿಕಸತ್ಯ, ಅದ್ವೈತವು ಪರಮಾರ್ಥಸತ್ಯ - ಎಂಬುದೇ ಕಾರಿಕಾಕಾರರ ಮತ್ತು ಭಾಷ್ಯಕಾರರ ಸಿದ್ಧಾಂತವಾಗಿರುತ್ತದೆ.

ಈ ಪೀಠಿಕೆಯು ಈಗಾಗಲೇ ಬಲುದೊಡ್ಡದಾಗಿರುತ್ತದೆ. **"ಗೌಡಪಾದ ಹೃದಯ"** ಎಂಬ ಒಂದು ದೊಡ್ಡ ಪ್ರಬಂಧದಲ್ಲಿ ಗೌಡಪಾದಕಾರಿಕೆಯ ಗಡುಚಾದ ವಿಷಯಗಳನ್ನೆಲ್ಲ ಚರ್ಚಿಸಿ ವಿಸ್ತಾರವಾಗಿ ಲಲಿತವಾದ ಶೈಲಿಯಿಂದ ಬರೆದು ಕಾರ್ಯಾಲಯದ ಮೂಲಕ ಈಚೆಗೆ ಪ್ರಕಾಶಗೊಳಿಸಿರುತ್ತೇವೆ. ವಾಚಕರು ಆ ಗ್ರಂಥವನ್ನು ಕೊಂಡು ಇದರ ಜೊತೆಗೇ ಅಧ್ಯಯನಮಾಡಿದಲ್ಲಿ ಇಲ್ಲಿರುವ ವಿಷಯಗಳು ಚೆನ್ನಾಗಿ ಕರಗತವಾಗುವವು. ಈ ಪೀಠಿಕೆಯಲ್ಲಿಯೂ ಪ್ರಸ್ತಾಪಿಸಿರುವ ಪ್ರಧಾನವಿಷಯಗಳಿಂದಲೂ ವಾಚಕರು ಸಾಕಷ್ಟು ತಿಳಿವಳಿಕೆಯನ್ನು ಹೊಂದಬಹುದಾಗಿದೆ. ಈ ಸಂಸ್ಕರಣವನ್ನು ಮೊದಲಿಗಿಂತ ಅನೇಕ ಪ್ರಕಾರಗಳಿಂದ ತೃಪ್ತಿಕರವಾದ ರೂಪದಲ್ಲಿ ಪ್ರಕಾಶಗೊಳಿಸುವದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವ ಪರಮೇಶ್ವರನನ್ನು ಭಕ್ತಿಯಿಂದ ನಮಸ್ಕರಿಸಿ ಈ ಪೀಠಿಕೆಯನ್ನು ಇಲ್ಲಿಗೆ ಮುಗಿಸುವೆವು.

ಸರ್ವಜಿತು ಸಂ ॥, ಮಾಘ ಬಹುಳ ಪಞ್ಚಮಿ — -ಗ್ರಂಥಕರ್ತ

(೧೯೪೭)

ಪರಿಶಿಷ್ಟ

೧. ಬೌದ್ಧ ಪ್ರಕ್ರಿಯಾಸಾಮ್ಯವಿಚಾರ

ಮಾಂಡೂಕ್ಯಕಾರಿಕೆಯಲ್ಲಿ ಬರುವ ಕೆಲವು ವಾಕ್ಯಭಾಗಗಳೂ ಶಬ್ದಗಳೂ ಬೌದ್ಧಗ್ರಂಥಗಳಲ್ಲಿಯೂ ಕಂಡುಬರುತ್ತವೆಯಾದರೂ ಇವೆರಡಕ್ಕೂ ಅರ್ಥ ಸಾಮ್ಯವಿಲ್ಲ ಎಂಬುದನ್ನು ಪೀಠಿಕೆಯಲ್ಲಿ ಸ್ಪಷ್ಟಪಡಿಸಿರುತ್ತದೆ. ಇಂಥ ವಾಕ್ಯಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ; ಶಬ್ದಗಳನ್ನು ಮುಂದಿನ ಪರಿಶಿಷ್ಟದಲ್ಲಿ ಕೊಟ್ಟಿದೆ.

೧. **ಅನಿರೋಧಮನುತ್ಪಾದಮನುಚ್ಛೇದಮಶಾಶ್ವತಮ್ ।**
ಅನೇಕಾರ್ಥಮನಾನಾರ್ಥಮನಾಗಮಮನಿರ್ಗಮಮ್ ॥

ಯಃ ಪ್ರತೀತ್ಯಸಮುತ್ಪಾದಂ ಪ್ರಪಞ್ಚೋಪಶಮಂ ಶಿವಮ್
ದೇಶಯಾಮಾಸ ಸಂಬುದ್ಧಸ್ತಂ ವನ್ದೇ ವದತಾಂ ವರಮ್ ॥

-ಮಾಧ್ಯಮಿಕವೃತ್ತಿ, ನಾಗಾರ್ಜುನಕಾರಿಕೆ.

ಪೂರ್ವೋಪಲಮ್ಭೋಪಶಮಃ ಪ್ರಪಞ್ಚೋಪಶಮಃ ಶಿವಃ ।
ನ ಕ್ವಚಿತ್ ಕಸ್ಯಚಿತ್ ಕೈಶ್ಚಿತ್ ಧರ್ಮೋ ಬುದ್ಧೇನ ದೇಶಿತಃ ॥

-ನಿರ್ವಾಣಪರೀಕ್ಷಾ.

ಇಲ್ಲಿ ಕಾರಿಕೆಯ ಬೇರೆಬೇರೆಯ ಕಡೆಗಳಲ್ಲಿರುವ ಶಬ್ದಗಳ ಸಾಮ್ಯವು ಕಾಣುವದು. ಆದರೆ ಅಲ್ಲಿರುವ **ತುರ್ಯಾತ್ಮನ ಮಾತು ಇಲ್ಲಿಲ್ಲ; ಇಲ್ಲಿರುವದು ಪ್ರತೀತ್ಯಸಮುತ್ಪಾದದ ವಿಚಾರ.** ಅವಿದ್ಯಾ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನಾ, ತೃಷ್ಣಾ, ಉಪಾದಾನ, ಭವ, ಜಾತಿ, ಜರಾಮರಣ - ಇವು ಒಂದರಿಂದ ಒಂದು ಉಂಟಾಗುವದೇ ಪ್ರತೀತ್ಯ ಸಮುತ್ಪಾದವು. 'ಪ್ರಪಂಚೋಪಶಮ' ಎಂಬ ಮಾತು ಬೌದ್ಧರ ನಿರ್ವಾಣವನ್ನು ತಿಳಿಸುತ್ತದೆ; ನಿರ್ವಿಶೇಷನಾದ ಆತ್ಮನನ್ನು ಹೇಳುವದಿಲ್ಲ

೨. **ಕಲ್ಪನಾಮಾತ್ರಮಿತ್ಯಸ್ಮಾತ್ ಸರ್ವಧರ್ಮಾಃ ಪ್ರಕಾಶಿತಾಃ ।**
ಕಲ್ಪನಾಪ್ಯಸತೀ ಪ್ರೋಕ್ತಾ ಯಯಾ ಶೂನ್ಯಂ ವಿಕಲ್ಪ್ಯತೇ ॥

-ನಾಗಾರ್ಜುನ ಅವತ್ಸ್ವರ.

ಕಲ್ಪನೆಯೂ ಸತ್ಯವಲ್ಲವೆಂಬ ವಿಷಯವು ಗೌಡಪಾದಕಾರಿಕೆಯಲ್ಲಿಯೂ (೧-೧೮)ಇದೆ. ಆದರೆ ಶೂನ್ಯವನ್ನೇ ಬಗೆಬಗೆಯಾಗಿ ವಿಕಲ್ಪಿಸುತ್ತಾರೆಂಬುದು

ಕಾರಿಕೆಗೆ ಸಮ್ಮತವಲ್ಲ. ಆತ್ಮನಲ್ಲಿಯೇ ಎಲ್ಲವೂ ಕಲ್ಪಿತವಾಗಿದೆ ಎಂಬುದೇ ವೇದಾಂತಸಿದ್ಧಾಂತವೆಂದು (೨-೧೨)ರಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ.

೩. ಯಥಾ ಮಾಯಾ ಯಥಾ ಸ್ವಪ್ನೋ ಗನ್ಧರ್ವನಗರಂ ಯಥಾ ।
ತಥೋತ್ಪಾದಸ್ತಥಾ ಸ್ಥಾನಂ ತಥಾ ಭಙ್ಗ ಉದಾಹೃತಃ ॥

-ಮಾಧ್ಯಮಿಕ ಸೂತ್ರ.

ಇಲ್ಲಿ ಕಾಣುವ ನಿರಾಸ್ಪದಕಲ್ಪನೆಯು ಬೌದ್ಧರದು ; ಕಾರಿಕೆಯಲ್ಲಿ (೨-೩೧) ಮೊದಲು ಹೇಳಿದ ಆತ್ಮಾಧಿಷ್ಠಾನವಾದವನ್ನೇ 'ವೇದಾನ್ತೇಷು' ಎಂಬ ಮಾತಿನಿಂದ ಸೂಚಿಸಿರುತ್ತದೆ.

೪. ಉತ್ಪಾದೇ ಚ ನಿರೋಧೇ ಚ ತಥಾತಾಯಾಂ ಗಭೀರತಾ ।
ಜ್ಞೇಯಜ್ಞಾನೇ ಚ ಚರ್ಯಾಯಾಮದ್ವಯೋಪಾಯಕೌಶಲೇ ।
ಸ್ವಪ್ನೋಪಮತ್ವಾದ್ಧರ್ಮಾಣಾಂ ಭವಶಾನ್ತ್ಯೋರಕಲ್ಪನಾ ॥

-ಅಭಿಸಮಯಾಲಂಕಾರಿಕಾ, ಮೈತ್ರೇಯಕೃತ.

' ನ ನಿರೋಧೋ ನ ಚೋತ್ಪತ್ತಿಃ ' (೨-೩೨) ಎಂಬ ಕಾರಿಕೆಯಲ್ಲಿಯೂ ಇದೇ ಅರ್ಥವಿದ್ದರೂ ಮುಂದಿನ ಕಾರಿಕೆಯಲ್ಲಿ ಅಧಿಷ್ಠಾನರೂಪವಾದ ಪರಮಾರ್ಥತತ್ತ್ವವೊಂದಿದೆಯೆಂದು ಹೇಳಿರುತ್ತದೆ.

೫. ನ ಸಂಭವತಿ ಭಾವಸ್ಯ ಯುಕ್ತಃ ಪ್ರತ್ಯಯಹೇತುಭಿಃ ।
ಸ್ವಭಾವಃ ಕೃತಕೋ ನಾಮ ಭವಿಷ್ಯತಿ ಪುನಃ ಕಥಮ್ ॥

-ಮಾಧ್ಯಮಿಕ ಸೂತ್ರ .

'ಸ್ವಭಾವೇನಾಮೃತೋ ಯಸ್ಯ' (೩-೨೨, ೪-೮) ಎಂಬ ಕಾರಿಕೆಯಲ್ಲಿಯೂ ಸ್ವಭಾವವು ಬದಲಾಯಿಸಲಾರದು ಎಂದು ಹೇಳಿದೆ ; ಆದರೆ ಮಾಧ್ಯಮಿಕಸೂತ್ರದಲ್ಲಿ ಪ್ರತ್ಯಯಹೇತುಗಳಿಂದ ಆಗುವ ಪ್ರತೀತ್ಯಸಮುತ್ಪಾದವನ್ನು - ಎಂದರೆ ಅವಿದ್ಯೆಯಿಂದಾಗುವ ಪ್ರಪಂಚದುಃಖ, ಮಹಾಭೂತಗಳಿಂದಾಗುವ ಶರೀರಸೃಷ್ಟಿ ಎಂಬವುಗಳ ವಿಚಾರಗಳನ್ನು ಕುರಿತು - ಹೇಳಿರುತ್ತದೆ. ಕಾರಿಕೆಯಲ್ಲಿ ಅಜಾತಬ್ರಹ್ಮವಾದವು ಪ್ರಕೃತವಾಗಿರುವದರಿಂದ ಆತ್ಮನು ದ್ವೈತರೂಪದಲ್ಲಿ ಮಾಯೆಯಿಂದ ತೋರುವನೆಂಬ ಶ್ರುತಿಯನ್ನು ಮುಂದೆ (೩-೨ರಲ್ಲಿ) ಉದಾಹರಿಸಿರುತ್ತದೆ.

೬. **ಆಕಾಶಂ ಶತಶೃಙ್ಗಂ ಚ ವನ್ಧ್ಯಾಯಾಃ ಪುತ್ರ ಏವ ಚ ।**
ಅಸನ್ತಶ್ಚಾಭಿವ್ಯಜ್ಯನ್ತೇ ತಥಾ ಭಾವೇನ ಕಲ್ಪನಾ ॥

-ನಾಗಾರ್ಜುನಕಾರಿಕಾ.

ಈ ಕಾರಿಕೆಯಲ್ಲಿ ಅಸತ್ತಿಗೆ ತೋರಿಕೆಯುಂಟೆಂಬುದಕ್ಕೆ ಆಕಾಶಾದಿಗಳನ್ನು ದೃಷ್ಟಾಂತವಾಗಿ ಕೊಟ್ಟಿರುತ್ತದೆ. ಸತ್ತಾಗಿರುವದಕ್ಕೆ ಮಾಯೆಯಿಂದ ಜನ್ಮವುಂಟು, ಅಸತ್ತಿಗೆ ಮಾಯೆಯಿಂದಲೂ ಜನ್ಮವಿಲ್ಲ ಎಂದು (೩-೩೭, ೨೮) ಗೌಡ ಪಾದಕಾರಿಕೆಯಲ್ಲಿ ಹೇಳಿರುವದು ಇದಕ್ಕೆ ಅತ್ಯಂತವಿರುದ್ಧವಾಗಿರುತ್ತದೆ.

೭. **ಏತತ್ತು ಪರಮಂ ಸತ್ಯಂ ಯತ್ರ ಲೋಕೋ ನ ಗಾಹತೇ ॥**

-ಭವಸಂಕ್ರಾಂತಿಸೂತ್ರ.

(ಶ್ರೀಯುತ ಅಯ್ಯಾಶಾಸ್ತ್ರಿಗಳು ಟಿಬೆಟಿ ಭಾಷೆಯಿಂದ ಸಂಸ್ಕೃತಕ್ಕೆ ಪುನಃ ಪರಿವರ್ತನೆ ಮಾಡಿದ್ದು)

ಇಲ್ಲಿ ಗೌಡಪಾದಕಾರಿಕೆಯ (೩-೪೮, ೪-೭೧, ೪-೮೫) ಕೆಲವು ಶಬ್ದ ಗಳು ಕಂಡುಬರುತ್ತವೆ ; ಆದರೆ ಅಲ್ಲಿರುವ ಅಜಾತಬ್ರಹ್ಮವಾದದ ಸುಳಿವೂ ಇಲ್ಲ.

೮. **ಭಾವಾನ್ನ ಜಾಯತೇಽಭಾವೋ ನಾಭಾವಾದಪಿ ಜಾಯತೇ ।**
ಭಾವ ಉತ್ಪದ್ಯತೇ ನಿತ್ಯಂ ಭಾವೋ ಭ್ರಾನ್ತಿಃ ಖಪುಷ್ಪವತ್ ॥

-ಭವಸಂಕ್ರಾಂತಿಪರಿಕಥಾ.(ಅಯ್ಯಾಶಾಸ್ತ್ರಿಗಳ ಪುನಃಪರಿವರ್ತನೆ).

ಇಲ್ಲಿ 'ನಾಸ್ತ್ಯಸದ್ಧೇತುಕಮಸತ್' (೪-೪೦) ಎಂಬ ಗೌಡಪಾದಕಾರಿ ಕೆಯ ಛಾಯೆ ಇದೆ. ಆದರೆ ಅಲ್ಲಿರುವ ಅಜಾಪಲವಿಜ್ಞಾನದ (೪-೪೫) ಸುದ್ಧಿಯು ಈ ಗ್ರಂಥದಲ್ಲಿಲ್ಲ. ಇಲ್ಲಿರುವದು ಆಕಾಶಪುಷ್ಪದೃಷ್ಟಾಂತದ ಶೂನ್ಯವಾದ.

೯. **"ಅನ್ಯೋನ್ಯ ಲಕ್ಷಣಹೇತುಕೇ"**

-ಲಂಕಾವತಾರಸೂತ್ರ.

ಇದು 'ಉಭೇ ಹ್ಯನ್ಯೋನ್ಯದೃಶ್ಯೇ ತೇ' ಎಂಬ (೪-೬೭) ಗೌಡಪಾದಕಾರಿಕೆ ಯನ್ನು ನೆನೆಪಿಗೆ ತರುವಂತಿದೆ. ಆದರೆ ಅದರ ಹಿಂದಿನ ಕಾರಿಕೆಗಳಲ್ಲಿರುವ ಸಾಕ್ಷಿಚೈತನ್ಯವಾದವು ಲಂಕಾವತಾರಸೂತ್ರದಲ್ಲಿರುವದಿಲ್ಲ ; ಆದಕ್ಕೆ ಬದಲು "ಆತ್ಮತತ್ತ್ವವನ್ನು ಮೂಢಜನರಿಗಾಗಿ ಒಪ್ಪಿಕೊಂಡು ಬುದ್ಧರು ಉಪದೇಶ ಮಾಡುತ್ತಾರೆ" ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತದೆ.

೧೦. ಅಸ್ತೀತಿ ಶಾಶ್ವತಗ್ರಾಹೋ ನಾಸ್ತೀತ್ಯುಚ್ಛೇದದರ್ಶನಮ್ ।
ತಸ್ಮಾದಸ್ತೀತಿ ನಾಸ್ತೀತಿ ನಾಶ್ರಯೇತ ವಿಚಕ್ಷಣಃ ॥

ಅಸ್ತೀತಿ ನಾಸ್ತೀತಿ ಉಭೇಽಪಿ ಅನ್ತಾಃ
ಶುದ್ಧೀತ್ಯಶುದ್ಧೀತಿ ಇಮೇಽಪಿ ಅನ್ತಾಃ ।
ತಸ್ಮಾದುಭೇ ಅನ್ತ ಏವರ್ಜಯಿತ್ವಾ
ಮಧ್ಯೇಽಪಿ ಸ್ಥಾನಂ ನ ಕರೋತಿ ಪಣ್ಡಿತಃ ॥

-ಮಾಧ್ಯಮಿಕ ವೃತ್ತಿ.

ಇಲ್ಲಿ ೪-೫೭, ೪-೮೩ - ಈ ಗೌಡಪಾದಕಾರಿಕೆಗಳ ಶಬ್ದಪ್ರಯೋಗ ಗಳಿವೆ. ಆದರೆ ಎಲ್ಲಾ ವಿಕಲ್ಪಗಳನ್ನೂ ಬಿಡಬೇಕೆಂಬುದು ಇಲ್ಲಿಯ ಉಪದೇಶ ; ವಿಕಲ್ಪಗಳಿಗೆ ಆಧಾರವಾದ ಕೂಟಸ್ಥನಿತ್ಯಬ್ರಹ್ಮದಲ್ಲಿ ನಿಲ್ಲಬೇಕೆಂಬುದೇ ಗೌಡಪಾದರ ಉಪದೇಶ.

೨. ಕಾರಿಕೆಗೂ ಬೌದ್ಧಗ್ರಂಥಗಳಿಗೂ ಸಮಾನವಾದ ಶಬ್ದಗಳು

ಈ ಶಬ್ದಗಳು ಯಾವ ಕಾರಿಕೆಯಲ್ಲಿ ಬಂದಿವೆಯೆಂಬುದನ್ನು ತಿಳಿಸುವದಕ್ಕೆ ಮುಖ್ಯವಾಗಿ ಅಲಾತಶಾಂತಿಪ್ರಕರಣದ ಸಂಖ್ಯೆಯನ್ನು ಕೊಟ್ಟಿರುತ್ತದೆ. ಬೌದ್ಧರ ಗ್ರಂಥಗಳ ಹೆಸರನ್ನು ಬರೆದಿಲ್ಲ ; ಅವರು ಶಬ್ದವನ್ನು ಯಾವ ಅರ್ಥದಲ್ಲಿ ಉಪಯೋಗಿಸುತ್ತಾರೆಂಬುದಿಷ್ಟನ್ನೇ ತಿಳಿಸಿರುತ್ತದೆ.

ಅಗ್ರ್ಯಯಾಣ (೪-೯೦)-

ಮೊದಲು, ಸಾಧಕನ ಸ್ಥಿತಿ, ಏಹಾಯಾಃ ಎಂಬರ್ಥದಲ್ಲಿ ಬೌದ್ಧರಲ್ಲಿ ಪ್ರಯೋಗ.

ಅಜಾತಿ (೪-೪೩)-

ಹುಟ್ಟದೆ ಇರುವ ಬ್ರಹ್ಮ. ಹುಟ್ಟದೆ ಇರುವದು ಎಂಬರ್ಥದಲ್ಲಿ ಅದ್ವೈತಿಗಳೂ (೪-೨೯) ಬೌದ್ಧರೂ ಪ್ರಯೋಗಿಸುವರು ; ಆದರೆ ಬ್ರಹ್ಮ, ಹುಟ್ಟದ ವಸ್ತು ಎಂಬರ್ಥದಲ್ಲಿ ಬೌದ್ಧರಲ್ಲಿ ಪ್ರಯೋಗವಿಲ್ಲ.

ಅದ್ವಯ (೪-೪೫),
ಅದ್ವೈತ (೩-೧೮)-

ತನಗೆರಡನೆಯದಿಲ್ಲದ ಆತ್ಮ. ದ್ವೈತರಹಿತವಾದ ಶೂನ್ಯ ಎಂಬರ್ಥದಲ್ಲಿ ಮಾತ್ರ ಬೌದ್ಧರಲ್ಲಿ ಬಳಕೆ.

ಅನಾನಾತ್ವ (೪-೧೦೦)-

ನಾನಾತ್ವವಿಲ್ಲದ ಅದ್ವಿತೀಯ ಆತ್ಮ. ಬೌದ್ಧರಲ್ಲಿ ನಾನಾರ್ಥವೆಂಬ ಮಾತನ್ನು ವಿಶೇಷಗಳನ್ನು ಮಾತ್ರ ನೋಡುವದು ಎಂಬರ್ಥದಲ್ಲಿ ಉಪಯೋಗಿಸುತ್ತಾರೆ. ಸಾಮಾನ್ಯವನ್ನು ಮಾತ್ರ

ನೋಡುವ ಅರಿವು **ಸಮತೆ** ಅಥವಾ **ಸಾಮ್ಯ** ಎನಿಸುವದು. ಸಮತೆಯ ದೃಷ್ಟಿಯಿಂದ ನೋಡಿದರೆ ಎಲ್ಲವೂ ಬ್ರಹ್ಮವೆಂಬ ಅರಿವಾಗುವದು ; ನಾನಾರ್ಥದೃಷ್ಟಿಯಿಂದ ನಾನಾ ದೇವತೆಗಳ ಅರಿವಾಗುವದು. ಆದ್ದರಿಂದ ಪರಮಾರ್ಥವನ್ನು ತಿಳಿಯಬೇಕಾದರೆ ಈ ಎರಡು ದೃಷ್ಟಿಗಳನ್ನೂ ಉಪಯೋಗಿಸಬೇಕು ಎಂದು ಕೆಲವು **ಮಹಾಯಾನಿಕರ** ಅಭಿಪ್ರಾಯ.

ಅನಿಮಿತ್ತ (೪-೭೭)-

ಧರ್ಮಾಧರ್ಮಗಳೆಂಬ ಜನ್ಮಕಾರಣ ಎಲ್ಲದಿರುವದು. ಬೌದ್ಧರಲ್ಲಿ **ಅನಿಮಿತ್ತ** ವೆಂಬುದು ಪದಾರ್ಥಗಳು ನಿತ್ಯವೆಂಬ ಭ್ರಾಂತಿಯನ್ನು ಕಳೆಯುವ ಒಂದು ಬಗೆಯ ಧ್ಯಾನವು.

ಅಭೂತಾಭಿನಿವೇಶ (೪-೭೫)-

ಆತ್ಮನೊಬ್ಬನೇ ಇದ್ದರೂ ಇಲ್ಲದಿರುವ ಅನಾತ್ಮವೂ ಉಂಟೆಂಬ ಮಿಥ್ಯಾಭಿಮಾನ. ವಸ್ತುತಃ ಯಾವದೂ ಇಲ್ಲದಿದ್ದರೂ ವಾಸನೆಯಿಂದ ಅದನ್ನು ಇದೆ ಎಂದು ತಿಳಿಯುವದು - ಎಂಬ ಅರ್ಥದಲ್ಲಿ ಬೌದ್ಧರ ಪ್ರಯೋಗ.

ಅಭಿನಿಷ್ಪತ್ತಿ (೪-೭೪)-

ಸಿದ್ಧಿ. ಬೌದ್ಧರಲ್ಲಿ ಅಬಾಧಿತವಾದ ಕಟ್ಟಕಡೆಯ ಜ್ಞಾನ ಎಂಬ ಅರ್ಥದಲ್ಲಿ ಉಪಯೋಗವಾಗುವ 'ಪರಿನಿಷ್ಪನ್ನ' ಎಂಬ ಶಬ್ದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ.

ಅಲಾತ (೪-೪೭)-

ಕೊಳ್ಳಿ. ವಸ್ತುಗಳು ತೋರಿದರೂ ನಿಜವಾಗಿರುವದಿಲ್ಲವೆಂಬುದನ್ನು ತಿಳಿಸುವದಕ್ಕೆ ತಿರುಗಿಸುವ ಕೊಳ್ಳಿಯ ದೃಷ್ಟಾಂತವನ್ನು ಬೌದ್ಧರೂ ವೇದಾಂತಿಗಳೂ ಕೊಡುತ್ತಾರಾದರೂ ತೋರಿಕೆಗಳೆಲ್ಲ ವಿಜ್ಞಾನರೂಪವಾದ ಆತ್ಮನಲ್ಲಿ ಕಲ್ಪಿತವಾಗಿರುವವೆಂದು ತಿಳಿಸುವದು ವೇದಾಂತದಲ್ಲಿ ವಿಶೇಷ.

ಅಸ್ಪರ್ಶಯೋಗ (೪-೨)-

ಏತರ ಸಂಬಂಧವೂ ಇಲ್ಲದ ಆತ್ಮನನ್ನು ತಿಳಿಸುವ ಅದ್ವೈತದರ್ಶನ. ಯಾವ ಅನುಭವವೂ ಇಲ್ಲದ ನಿರ್ವಾಣ ಎಂಬರ್ಥದಲ್ಲಿ ಬೌದ್ಧರ ಬಳಕೆ.

ಅಸತ್ (೪-೩೯)-

ನಿಜವಾಗಿಲ್ಲದೆ ಇದ್ದರೂ ತೋರುವ ವಸ್ತು. ಎಚ್ಚರಕನಸುಗಳಲ್ಲಿರುವ ತೋರಿಕೆಗಳು ನಿಜವಾಗಿರುವದಿಲ್ಲವಾದ್ದರಿಂದ ಅಸತ್ತಾಗಿರುವವೆಂಬುದು ಬೌದ್ಧರಿಗೂ ವೇದಾಂತಿಗಳಿಗೂ ಸಮಾನ. ಅವು ಸದ್ರೂಪವಾದ ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೆಂಬುದು ವೇದಾಂತಿಗಳ ವಿಶೇಷೋಪದೇಶ.

ಅಸ್ತಿವಸ್ತುತ್ವವಾದ (೪-೪೨)-

ದೈ್ವತವಸ್ತುವಿದೆ ಎನ್ನುವವನು. ವಿಜ್ಞಾನಕ್ಕಿಂತ ಹೊರಗೆ ವಸ್ತುವಿದೆ ಎನ್ನುವ **ಸರ್ವಾಸ್ತಿತ್ವವಾದಿ** ಎಂಬರ್ಥದಲ್ಲಿ ಬೌದ್ಧರಲ್ಲಿ ಬಳಕೆ.

ಆಕಾಶ (೪-೧)-

ಸರ್ವಗತ, ಸೂಕ್ಷ್ಮ, ನಿತ್ಯ - ಎಂಬುದನ್ನು ತಿಳಿಸುವದಕ್ಕೆ ಕೊಡುವ ದೃಷ್ಟಾಂತ. ಇಲ್ಲದ್ದು ಎಂಬುದನ್ನು ತಿಳಿಸುವದಕ್ಕೆ **ಮಾಧ್ಯಮಿಕರು** ಉಪಯೋಗಿಸಿರುತ್ತಾರೆ.

ಆದಿಬುದ್ಧ (೪-೯೨)-

ಮೊದಲಿನಿಂದಲೂ ಜ್ಞಾನಸ್ವರೂಪವೇ ಆಗಿರುವ. ಬೌದ್ಧರು 'ಬೇರೆಬೇರೆ ಯುಗಗಳಲ್ಲಿ ಅವತರಿಸಿರುವ ಬುದ್ಧರುಗೆಲ್ಲ ಮೂಲಸ್ವರೂಪನಾದ' ಎಂಬರ್ಥದಲ್ಲಿ ಉಪಯೋಗಿಸುತ್ತಾರೆ.

ಆದಿಶಾನ್ತ (೪-೯೩)-

ಯಾವಾಗಲೂ ಶಾಂತಿಯುಳ್ಳ, ಎಲ್ಲವೂ ನಾಶವಾಗುವ ನಿರ್ವಾಣ ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುವರು.

ಉಚ್ಛೇದ (೪-೫೭)-

ನಾಶ. ಪರಮಾರ್ಥವಾಗಿ ಎಲ್ಲವೂ ಜನ್ಮ ರಹಿತವಾದ ಆತ್ಮನೇ ಆಗಿರುವದರಿಂದ ಉಚ್ಛೇದವೆಂಬುದೇ ಇಲ್ಲ - ಎಂದು ಕಾರಿಕೆಯಲ್ಲಿ ಹೇಳಿದೆ. ಇರತಕ್ಕ ಆತ್ಮನು ಮರಣವಾದ ಮೇಲೆ ನಾಶವಾಗಿ ಬಿಡುತ್ತಾನೆ - ಎಂಬ ತಪ್ಪುತಿಳಿವಳಿಕೆಯನ್ನು ಬೌದ್ಧರು **ಉಚ್ಛೇದ**ವೆಂಬ ಹೆಸರಿನಿಂದ ಕರೆಯುತ್ತಾರೆ.

ಉಪಲಮ್ಭ (೪-೯೦)-

ಬರಿಯ ತೋರಿಕೆ. ಅವಿದ್ಯಾಕಲ್ಪನೆ. ಸಾಧಕನು ಮೊದಲು ಅಂಗೀಕರಿಸಬೇಕಾದ ಹೇಯ, ಉಪ್ಯ, ಪಾಕ್ಯ - ಇವು ಮೂರೂ ಅವಿದ್ಯಕವೆಂದೂ ವಿಜ್ಞೇಯವಾದ ಬ್ರಹ್ಮವೊಂದೇ ಸತ್ಯವೆಂದೂ ವೇದಾಂತಿಗಳು ಹೇಳುವರು. ಎಲ್ಲವೂ ಅವಿದ್ಯಕವೇ ಎಂದು ಬೌದ್ಧರು.

ಕಲ್ಪಿತ (೪-೭೪)-

ಕಲ್ಪಿತವಾದ ವ್ಯವಹಾರ. ಹಗ್ಗದಲ್ಲಿ ಹಾವು ಕಲ್ಪಿತವೆಂದು ವೇದಾಂತಿಗಳಂತೆ ಬೌದ್ಧರೂ ಹೇಳುತ್ತಾರೆ ; ಆದ್ದರಿಂದ ಅವರು ಹಗ್ಗದ ಹಾವಿನ ಅರಿವನ್ನು **ಪರಿಕಲ್ಪಿತ** ಎಂದು ಕರೆಯುತ್ತಾರೆ ಎಲ್ಲವೂ ಕಲ್ಪಿತವೇ, ವಿಜ್ಞಾನವೊಂದೇ ಪರಮಾರ್ಥವು - ಎಂಬುದು **ವಿಜ್ಞಾನವಾದಿಗಳಾ ಬೌದ್ಧರ ಮತವು.** ಆತ್ಮನಲ್ಲಿಯೇ ಎಲ್ಲವು ಕಲ್ಪಿತವು. ಆತ್ಮನಲ್ಲಿ ತೋರುವ ಧರ್ಮಗಳು ಕಲ್ಪಿತವೇ - ಎಂಬುದು ವೇದಾಂತಿಗಳ ಮತ.

ಕೋಟಿ (೪-೮೪)-

ಇದೆ, ಇಲ್ಲ, ಇದ್ದೂ ಇಲ್ಲ, ಇಲ್ಲವೇ ಇಲ್ಲ- ಎಂಬ ನಾಲ್ಕು ವಾದಗಳು. ಆತ್ಮನ ವಿಷಯದಲ್ಲಿರುವ ಈ ವಾದಗಳು ಆತ್ಮನಿಗೆ ಆವರಣಗಳು ಎಂದರೆ ಆತ್ಮನ ಪರಮಾರ್ಥ ಸ್ವರೂಪವನ್ನು ತಿಳಿಯುವದಕ್ಕೆ ಅಡ್ಡಿಗಳು ಎಂದು ವೇದಾಂತಿಗಳೆನ್ನುವರು. ಶೂನ್ಯವೇ ಪರಮಾರ್ಥವು, ಅದು ಈ ನಾಲ್ಕು ಕೋಟಿಗಳಲ್ಲೊಂದಕ್ಕೂ ವಿಷಯವಲ್ಲವೆಂದು ಬೌದ್ಧರ ಮತ.

ಗನ್ಧರ್ವನಗರ (೩-೩೧)-

ಆಕಾಶದಲ್ಲಿ ತೋರಿ ಹಾರುವ ದೃಶ್ಯ. ಈ ದೃಷ್ಟಾಂತವನ್ನು ದೃಶ್ಯವೆಲ್ಲವೂ ಆತ್ಮನಲ್ಲಿ ಕಲ್ಪಿತವೆಂದು ತಿಳಿಸುವದಕ್ಕೆ ವೇದಾಂತಿಗಳು ಉಪಯೋಗಿಸುವರು ; ದೃಶ್ಯವೆಲ್ಲವೂ ಅಸಾರವೆಂದು ತಿಳಿಸುವದಕ್ಕೆ ಬೌದ್ಧರು ಉಪಯೋಗಿಸುವರು.

ಗಮ್ಭೀರ (೪-೧೦೦)-

ಆಳವಾದ, ಪ್ರವೇಶಿಸುವದಕ್ಕಾಗದ. ಪರಮಾರ್ಥವು ಸಾಮಾನ್ಯರಿಗೆ ತಿಳಿಯುವದಲ್ಲ ಎಂಬುದನ್ನು ತಿಳಿಸುವದಕ್ಕೆ ವೇದಾಂತಿಗಳಲ್ಲಿ ಬಳಕೆ. ಪ್ರತೀತ್ಯಸಮುತ್ಪಾದವು ಸಾಮಾನ್ಯರಿಗೆ ತಿಳಿಯುವದಲ್ಲ ಎಂಬುದನ್ನು ತಿಳಿಸುವದಕ್ಕೆ ಬೌದ್ಧರಲ್ಲಿ ಬಳಕೆ.

ಚಿತ್ತ (೪-೭೨)-

ಚಿತ್ತ, ಆತ್ಮ. ಅಂತಃಕರಣಕ್ಕಿಂತ ಬೇರೆಯಾದ ಆತ್ಮನೆಂಬರ್ಥದಲ್ಲಿಯೂ ಗೌಡಪಾದ ಕಾರಿಕೆಯಲ್ಲಿ ಪ್ರಯುಕ್ತವಾಗಿದೆ ; ಬೌದ್ಧರಲ್ಲಿ ಈ ಅರ್ಥದಲ್ಲಿ ಪ್ರಯೋಗವಿಲ್ಲ.

ತಾಯಿನ್ (೪-೯೯)-

ವ್ಯಾಪಕವಾದ ಜ್ಞಾನವುಳ್ಳ ಆತ್ಮಜ್ಞಾನಿ.

ಬೌದ್ಧಮತದ ತತ್ತ್ವವನ್ನು ಮನಗಂಡ ಜ್ಞಾನಿ, ಬುದ್ಧನು - ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುತ್ತಾರೆ.

ದುರ್ದರ್ಶ (೪-೧೦೦)-

ತಿಳಿದುಕೊಳ್ಳುವದಕ್ಕೆ ಕಷ್ಟವಾದ. ಈ ವಿಶೇಷಣವನ್ನು ವೇದಾಂತಿಗಳು ಆತ್ಮವಸ್ತುವಿಗೂ, ಬೌದ್ಧರು ಪ್ರತೀತ್ಯಸಮುತ್ಪಾದಕ್ಕೂ ಉಪಯೋಗಿಸಿರುತ್ತಾರೆ.

ದೇಶಿತ (೪-೨)-

ಅದ್ವೈತದರ್ಶನದ ಉಪದೇಶ. ಬುದ್ಧನ ಉಪದೇಶವನ್ನು 'ದೇಶನಾ' ಎಂಬ ಹೆಸರಿನಿಂದ ಬೌದ್ಧರು ಕರೆದಿರುತ್ತಾರೆ.

ದ್ವಯ (೪-೪, ೭೫)-

ದ್ವೈತ, ದ್ವೈತಿ ಎಂಬರ್ಥದಲ್ಲಿ ವೇದಾಂತಿಗಳೂ ಬೌದ್ಧರೂ ಈ ಮಾತನ್ನು ಉಪಯೋಗಿಸುವರು. ದ್ವೈತವು ಶೂನ್ಯವಾದಿಗಳ ಮತದಲ್ಲಿ ನಿಸ್ಸಾರ, ವಿಜ್ಞಾನವಾದಿಗಳ ಮತದಲ್ಲಿ ವಿಜ್ಞಾನ ಮಾತ್ರ, ವೈಭಾಷಿಕಸೌತ್ರಾಂತಿಕರಲ್ಲಿ ಕ್ಷಣಿಕ. ಆತ್ಮನೇ ಅವಿದ್ಯೆಯಿಂದ ದ್ವೈತವಾಗಿ ತೋರುವನೆಂದು ವೇದಾಂತಿಗಳ ಮತ.

ದ್ವಿಪದಾಂ ವರ (೪-೧)-

ಪುರುಷೋತ್ತಮ. ಈ ಮಾತನ್ನೂ 'ವದತಾಂ ವರ' ಎಂಬ ಮಾತನ್ನೂ ಬೌದ್ಧರು ಬುದ್ಧನಿಗೆ ವಿಶೇಷಣವಾಗಿ ಉಪಯೋಗಿಸಿರುತ್ತಾರೆ. ಗೌಡಪಾದಕಾರಿಕೆಯಲ್ಲಿ ಅದ್ವೈತಶಾಸ್ತ್ರಕ್ಕೆ ಮೂಲಗುರುವಾದ ನಾರಾಯಣನಿಗೆ ವಿಶೇಷಣವಾಗಿ ಉಪಯೋಗಿಸಿರುತ್ತದೆ.

ಧರ್ಮ (೩-೧-, ೪-೧, ೪-೧೦, ೪-೩೩)-

ಆತ್ಮ, ವಸ್ತು, ದ್ರವ್ಯ, ಗುಣ, ಕಾರಣ, ಇರವಿಲ್ಲದ್ದು, ನಿರಾತ್ಮಕ - ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುತ್ತಾರೆ.

ಧಾತು (೪-೮೧)-

ಆತ್ಮತತ್ತ್ವ. 'ಧರ್ಮಧಾತು' ಎಂಬ ಮಾತನ್ನು ಬೌದ್ಧರು ಮನಸ್ಸಿನ ವಿಷಯ ಎಂಬ ಅರ್ಥದಲ್ಲಿ ಉಪಯೋಗಿಸುವರು.

ನಿರ್ವಾಣ (೩-೪೭)-

ಆನಂದ, ಆತ್ಮನೊಬ್ಬನೇ ಉಳಿದುಕೊಳ್ಳುವ ಕೈವಲ್ಯ. ದುಃಖವೂ ದ್ವೈತವೂ ಹೋಗಿರುವ ಸ್ಥಿತಿ ಎಂಬರ್ಥದಲ್ಲಿ ಬೌದ್ಧರು ಉಪಯೋಗಿಸುತ್ತಾರೆ.

ಪರತಂತ್ರ (೪-೭೪)-

ಅದ್ವೈತಿಗಳಾದವರ ಶಾಸ್ತ್ರ ವಿಜ್ಞಾನಕ್ಕೆ ಅಧೀನವಾಗಿರುವ ಬಾಹ್ಯವಸ್ತುಜ್ಞಾನ- ಎಂಬ ಅರ್ಥದಲ್ಲಿ ಬೌದ್ಧರು ಬಳಸುತ್ತಾರೆ. ರಜ್ಜು ಸರ್ಪ ಜ್ಞಾನದಲ್ಲಿ ಸರ್ಪಜ್ಞಾನವು **'ಪರಿಕಲ್ಪಿತ'**, ರಜ್ಜುಜ್ಞಾನವು **'ಪರತಂತ್ರ'** - ಎಂದು ಅವರ ವಾದ. ವಿಜ್ಞಾನವು ಪರಮಾರ್ಥವಾದ್ದರಿಂದ ಅದರ ಜ್ಞಾನವು **'ಪರಿನಿಷ್ಪನ್ನ'** ಎಂದು ಅವರು ಹೇಳುವರು.

ಬುದ್ಧ (೪-೪೨)-

ಜ್ಞಾನಿ, ಗೌತಮಬುದ್ಧ, ಅದ್ವೈತಾತ್ಮನನ್ನು ಬಲ್ಲವನು ಎಂಬರ್ಥದಲ್ಲಿಯೇ ಗೌಡಪಾದಕಾರಿಕೆಯಲ್ಲಿ ಈ ಶಬ್ದವನ್ನು ಹೆಚ್ಚಾಗಿ ಉಪಯೋಗಿಸಿದೆ.

ಮಾಯಾ (೩-೨೮)-

ಹುಸಿಯಾದ ತೋರಿಕೆ, ತಪ್ಪುತಿಳಿವಳಿಕೆ. ನಿಸ್ಸಾರವಾದ ತೋರಿಕೆ ಎಂಬರ್ಥದಲ್ಲಿಯೇ ಬೌದ್ಧರಲ್ಲಿ ಇದು ಬಳಕೆಯಲ್ಲಿದೆ ; ಮಾಯಾ ಕಲ್ಪಿತವಸ್ತುವಿಗೂ ಆತ್ಮನು ಆಧಾರನಾಗಿ

ರುತ್ತಾನೆಂದು ವೇದಾಂತಿಗಳ ಅಭಿಪ್ರಾಯ

ಲೌಕಿಕ (೪-೮೭)-

ಲೋಕದ ವ್ಯವಹಾರಕ್ಕೆ ಆಸ್ಪದವಾಗಿರುವ ಜಾಗ್ರದವಸ್ಥೆ. ಸಾಮಾನ್ಯಜನರ ಅಭಿಪ್ರಾಯವನ್ನು ಬೌದ್ಧರು **'ಲೋಕ್ಯ'** ಎಂದು ಕರೆಯುತ್ತಾರೆ.

ಲೋಕೋತ್ತರ (೪-೮೮)-

ವ್ಯವಹಾರದ ದೃಶ್ಯವೇ ಇಲ್ಲದ ಸುಷುಪ್ತಿ. ಬೌದ್ಧದರ್ಶನಗಳನ್ನು ಬಲ್ಲ ಜ್ಞಾನಿಗಳ ಅಭಿಪ್ರಾಯ ಎಂಬರ್ಥದಲ್ಲಿ 'ಲೋಕೋತ್ತರ' ಎಂಬ ಶಬ್ದವನ್ನು ಬೌದ್ಧರು ಉಪಯೋಗಿಸುತ್ತಾರೆ. ಅಷ್ಟಾಂಗ ಮಾರ್ಗದಲ್ಲಿರುವ ಸಮ್ಯಗ್ದೃಷ್ಟಿ ಮುಂತಾದವುಗಳನ್ನೆಲ್ಲ ಲೋಕ್ಯ ಸಮ್ಯಗ್ದೃಷ್ಟಿ, ಲೋಕೋತ್ತರಸಮ್ಯಗ್ದೃಷ್ಟಿ - ಹೀಗೆ ಎರಡೆರಡು ಬಗೆಯಾಗಿ ವಿಂಗಡಿಸುವುದುಂಟು.

ಶಾಶ್ವತ (೪-೫೭)-

ನಿತ್ಯವಾದದ್ದು. ಆತ್ಮನು ನಾಶವಾಗುವದಿಲ್ಲವೆಂಬ ವಾದ ಎಂಬರ್ಥದಲ್ಲಿ ಬೌದ್ಧರಲ್ಲಿ ಬಳಕೆ.

ಸಂಬುದ್ಧ (೪-೧)-

ತಿಳಿದವನು. ಗೌತಮಬುದ್ಧನಿಗೆ ಸಮ್ಯಕ್ಸಂಬುದ್ಧನೆಂಬ ವಿಶೇಷಣವು ಬೌದ್ಧರಲ್ಲಿ ಬಳಕೆಯಲ್ಲಿದೆ.

ಸಂವೃತಿ (೪-೫೭)-

ಅವಿದ್ಯಾವ್ಯವಹಾರ. ಆರ್ಯಸತ್ಯ ಚತುಷ್ಟಯವನ್ನು ತಿಳಿಯದಿರುವ ಅವಿದ್ಯೆ ಎಂಬ ಅರ್ಥದಲ್ಲಿ ಬೌದ್ಧರಲ್ಲಿ ಬಳಕೆ. ಆತ್ಮನನ್ನು ತಿಳಿಯದೆ ಇರುವ ಅವಿದ್ಯೆ ಎಂಬರ್ಥದಲ್ಲಿ ಗೌಡಪಾದಕಾರಿಕೆಯಲ್ಲಿ ಇದನ್ನು ಉಪಯೋಗಿಸಿದೆ.

ಸಾಮ್ಯ (೪-೮೦)-

ಒಂದೇ ಸಮನಾಗಿರುವ ಕೂಟಸ್ಥಾತ್ಮ ತತ್ತ್ವ. ಈ ಶಬ್ದವನ್ನು ನಾನಾರ್ಥ ಎಂಬುದಕ್ಕೆ ವಿರುದ್ಧವಾದ ಅರ್ಥದಲ್ಲಿ ಬೌದ್ಧರು ಉಪಯೋಗಿಸಿದ್ದಾರೆ. ಈ ಪರಿಶಿಷ್ಟದಲ್ಲಿರುವ 'ಅನಾನಾತ್ವ' ಎಂಬ ಮಾತನ್ನು ನೋಡಿ.

ವಿಜ್ಞಾನ (೪-೪೮)-

ಜ್ಞಾನಸ್ವರೂಪನಾದ ಆತ್ಮ. ಮನಸ್ಸಿನ ಅರಿವು ಎಂಬರ್ಥದಲ್ಲಿ ಕಾರಿಕೆಯಲ್ಲಿಯೂ ಬೌದ್ಧರಲ್ಲಿಯೂ ಈ ಶಬ್ದವು ಪ್ರಯುಕ್ತವಾಗಿದೆ. ಆತ್ಮ ಎಂಬರ್ಥವು ಕಾರಿಕೆಯಲ್ಲಿ ಮಾತ್ರ ಇದೆ.

ವೈಶಾರದ್ಯ (೪-೯೪)-

ಶುದ್ಧಿ. ಬುದ್ಧನಲ್ಲಿದ್ದ ನಿರತಿಶಯಗುಣಗಳು ಎಂಬರ್ಥದಲ್ಲಿ ಬೌದ್ಧರು ಪ್ರಯೋಗಿಸಿರುತಾರೆ.

೩. ಶ್ರುತ್ಯುದಾಹರಣಸೂಚಿಕೆ

ಈ ಸೂಚಿಕೆಯಲ್ಲಿ ಮೊದಲು ಕೊಟ್ಟಿರುವದು ಕಾರಿಕೆಯ ಸಂಖ್ಯೆ. ಕಾರಿಕಾಕಾರರು ಯಾವ ಶ್ರುತಿಯನ್ನು ಇಲ್ಲಿ ಸೂಚಿಸಿರುತ್ತಾರೆ ಅಥವಾ ಉದಾಹರಿಸಿರುತ್ತಾರೆ - ಎಂಬುದನ್ನು ತಿಳಿಯುವದರಿಂದ ಅವರು ಬೌದ್ಧಪಕ್ಷದವರೆಂಬ ಮಾತು ನಿರಾಧಾರವಾದದ್ದೆಂದು ಸ್ಪಷ್ಟವಾಗುತ್ತದೆ. ಅವರು ಉಪಯೋಗಿಸಿರುವ ಯುಕ್ತಿಗಳಿಗೂ ಶ್ರುತಿಯ ಆಧಾರವಿದೆ ಎಂಬುದೂ ವ್ಯಕ್ತವಾಗುತ್ತದೆ.

೧-೬. ''ಸರ್ವಾಣಿ ಹ ವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶನ್ತಿ ಪ್ರಾಣಮಭ್ಯುಜ್ಜಿಹತೇ ।'' (ಛಾಂ. ೧-೧೧-೫).

೧-೨೬. ''ಏತದ್ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಙ್ಕಾರಃ ।'' (ಪ್ರಶ್ನ. ೫-೨).

೧-೨೮. 'ಅನ್ತರಾತ್ಮಾ ಸದಾ ಜನಾನಾಂ ಹೃದಯೇ ಸಂನಿವಿಷ್ಟಃ ।'' (ಕಠ. ೨-೩-೦೭).

೨-೩. 'ನ ತತ್ರ ರಥಾ ನ ರಥಯೋಗಾ ನ ಪನ್ಥಾನೋ ಭವನ್ತ್ಯಥ ರಥಾನ್ ರಥಯೋಗಾನ್ ಪಥಃ ಸೃಜತೇ ।'' (ಬೃ. ೪-೩-೦೦).

೩-೧. ''ಯೋ ವಾ ಏತದಕ್ಷರಂ ಗಾರ್ಗ್ಯವಿದಿತ್ವಾಸ್ಮಾಲ್ಲೋಕಾತ್ ಪ್ರೈತಿ ಸ ಕೃಪಣಃ ।'' (ಬೃ. ೩-೮-೧೦).

೩-೧೧. ''ಸ ಯ ಏವಂವಿತ್ । ಅಸ್ಮಾಲ್ಲೋಕಾತ್ ಪ್ರೇತ್ಯ । ಏತಮನ್ನಮಯಮಾತ್ಮಾನಮುಪಸಂಕ್ರಾಮತಿ । ಏತಂ ಪ್ರಾಣಮಯಮಾತ್ಮಾನಮುಪಸಂಕ್ರಾಮತಿ । ಏತಂ ಮನೋಮಯಮಾತ್ಮಾನಮುಪಸಂಕ್ರಾಮತಿ । ಏತಂ ವಿಜ್ಞಾನಮಯಮಾತ್ಮಾನಮುಪಸಂಕ್ರಾಮತಿ । ಏತಮಾನನ್ದಮಯಮಾತ್ಮಾನಮುಪಸಂಕ್ರಾಮತಿ ॥'' (ತೈ. ೨-೮).

೩-೧೩. ''ಯಶ್ಚಾಯಮಸ್ಯಾಂ ಪೃಥಿವ್ಯಾಂ ತೇಜೋಮಯೋಽಮೃತಮಯಃ ಪುರುಷೋ ಯಶ್ಚಾಯಮಧ್ಯಾತ್ಮಗ್ಂ ಶಾರೀರಸ್ತೇಜೋಽಮೃತಮಯಃ ಪುರುಷೋಽಯಮೇವ ಸ ಯೋಽಯಮಾತ್ಮೇದಮಮೃತಮಿದಂ ಬ್ರಹ್ಮೇದಗ್ಂ ಸರ್ವಮ್ ॥

(ಬೃ. ೨-೫-೧ ರಿಂದ ೧೪ನೆಯ ಮಂತ್ರದವರೆಗೆ).

೩-೧೫. ''ಯಥಾ ಸೋಮ್ಯೈಕೇನ ಮೃತ್ಪಿಣ್ಡೇನ ಸರ್ವಂ ಮೃಣ್ಮಯಂ ವಿಜ್ಞಾತಗ್ಂ ಸ್ಯಾದ್ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ ।'' (ಛಾಂ. ೬-೧-೪).

೩-೧೫. ''ಯಥಾ ಕ್ಷುದ್ರಾ ವಿಸ್ಫುಲಿಙ್ಗಾ ವ್ಯುಚ್ಚರನ್ತ್ಯೇವಮೇವಾಸ್ಮಾದಾತ್ಮನಃ ಸರ್ವೇ ಪ್ರಾಣಾಃ ಸರ್ವೇ ಲೋಕಾಃ ಸರ್ವೇ ದೇವಾಃ ಸರ್ವಾಣಿ ಭೂತಾನಿ ವ್ಯುಚ್ಚರನ್ತಿ ।'' (ಬೃ.೨-೧-೨೦).

೩-೨೪. ''ನೇಹ ನಾನಾಸ್ತಿ ಕಿಞ್ಚನ ।'' (ಬೃ.೪-೪-೧೯).

''ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ ।''

(ಬೃ.೩-೫-೧೯).

''ಅಜಾಯಮಾನೋ ಬಹುಧಾ ವಿಜಾಯತೇ ।'' (ಪುರುಷಸೂಕ್ತ)

೩-೨೫. ''ಅನ್ಧಂ ತಮಃ ಪ್ರವಿಶನ್ತಿ ಯೇ ಸಂಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ಸಮ್ಭೂತ್ಯಾಗ್ಂ ರತಾಃ ॥'' (ಈ. ಮಾ. ೯)

೩-೨೬. ''ಸ ಏಷ ನೇತಿ ನೇತ್ಯಾತ್ಮಾ ।''

(ಬೃ.೩-೯-೨೬, ೪-೨-೪, ೪-೪-೫, ೪-೫-೧೫).

೪-೮೪. ''ಏಷ ನಿತ್ಯೋ ಮಹಿಮಾ ಬ್ರಾಹ್ಮಣಸ್ಯ ।'' (ಬೃ.೪-೪-೨೩).

೪-೮೬. ''ತಸ್ಮಾದೇವಂವಿಚ್ಛಾನ್ತೋ ದಾನ್ತ ಉಪರತಸ್ತಿತಿಕ್ಷುಃ ।''

(ಬೃ.೪-೪-೨೩).

ಉಪನಿಷತ್ತಿನ ಸಾರ

ಆಗಮಪ್ರಕರಣ

ಕಾ. ೧-೫. ಎಚ್ಚರದವಸ್ಥೆಯಲ್ಲಿರುವ ಹೊರಅರಿವಿನ ಆತ್ಮನಿಗೆ **ವಿಶ್ವ**ನೆಂದು ಹೆಸರು ; ಕನಸಿನಲ್ಲಿ ಒಳಅರಿವಿನ ಆತ್ಮನಿಗೆ **ತೈಜಸ**ನೆಂದು ಹೆಸರು; ತನಿನಿದ್ರೆಯಲ್ಲಿ ಬರಿಯ ಅರಿವಿನ ಗಟ್ಟಿಯಾಗಿರುವ ಆತ್ಮನಿಗೆ **ಪ್ರಾಜ್ಞ**ನೆಂದು ಹೆಸರು. ಒಬ್ಬ ಆತ್ಮನೇ ಹೀಗೆ ಅವಸ್ಥೆಗಳ ಉಪಾಧಿಯಿಂದ ಮೂರು ಬಗೆಯಾಗಿ ತೋರುತ್ತಿರುವನು. ಇಂದ್ರಿಯಗಳ ಮೂಲಕ ಅರಿಯುವ ವಿಶ್ವನು, ಮನಸ್ಸಿನ ಮೂಲಕ ನೆನಪಿಗೆ ತಂದುಕೊಳ್ಳುವ **ತೈಜಸನು**, ಈ ಎರಡು ಬಗೆಯ ಅನುಭವವೂ ಇಲ್ಲದ ಪ್ರಾಜ್ಞನು- ಎಂದು ಮೂರು ಬಗೆಯಲ್ಲಿಯೂ ಆತ್ಮನು ಎಚ್ಚರದಲ್ಲಿಯೇ ತೋರಿಬರುತ್ತಿರುವನು. ಸ್ಥೂಲವಾದ ವಿಷಯಗಳ ಭೋಗವು ವಿಶ್ವನಿಗೆ, ಸೂಕ್ಷ್ಮವಾದ ವಿಷಯಗಳ ಭೋಗವು ತೈಜಸನಿಗೆ, ವಿಷಯಭೋಗದ ಆಯಾಸವಿಲ್ಲದ ಆನಂದಭೋಗವು ಪ್ರಾಜ್ಞನಿಗೆ - ಹೀಗೆ ಭೋಗಗಳ ಉಪಾಧಿಯಿಂದಲೂ ಆತ್ಮನು ಒಬ್ಬನೇ ಮೂರು ವಿಧವಾಗಿ ತೋರುತ್ತಿರುವನು.

೬-೯. ಸುಷುಪ್ತಿಯ ಆತ್ಮನಾದ ಪ್ರಾಜ್ಞನೇ ಜಗತ್ಸೃಷ್ಟ್ಯಾದಿಯಾದ ಪ್ರಾಣನು. ಆ ಪ್ರಾಣನಿಂದಲೇ ಚೇತನಾಚೇತನಾತ್ಮಕವಾದ ಜಗತ್ತೆಲ್ಲವೂ ಹುಟ್ಟುವದು. ಪ್ರಾಣನು ಜಗದ್ರೂಪವಾಗುವ ಸೃಷ್ಟಿಯನ್ನು ವಾದಿಗಳು ಬಗೆಬಗೆಯಾಗಿ ವಿಕಲ್ಪಿಸಿರುತ್ತಾರೆ ; ಆದರೆ ಅವಿದ್ಯೆಯೆಂಬ ಸ್ವಭಾವವೊಂದಲ್ಲದೆ ಈ ಸೃಷ್ಟಿಗೆ ಬೇರೆ ಯಾವದೂ ಕಾರಣವಿರುವದಿಲ.

೧೦-೧೫. ನಿಜವಾಗಿ ನೋಡಿದರೆ ಆತ್ಮನಲ್ಲಿ ವಿಶ್ವ, ತೈಜಸ, ಪ್ರಾಜ್ಞ- ಎಂಬ ಮೂರು ರೂಪಗಳೂ ಇರುವದಿಲ್ಲ. ಅವನು ಈ ಮೂರು ರೂಪಕ್ಕಿಂತಲೂ ಬೇರೆಯವನಾದ **ತುರೀಯನು,** ನಾಲ್ಕನೆಯವನು, ಅದ್ವಿತೀಯನು. ಪ್ರಾಜ್ಞ ರೂಪದಲ್ಲಿ ಏನನ್ನೂ ಅರಿಯದ್ದೆಂಬ ಕಾರಣಾಜ್ಞಾನವಿರುತ್ತದೆ ; ವಿಶ್ವತೈಜಸರಲ್ಲಿ ಈ ಕಾರಣವೂ ಇದರಿಂದಾಗುವ ತಪ್ಪುತಿಳಿವೆಂಬ ಕಾರ್ಯಾಜ್ಞಾನವೂ ಇರುತ್ತವೆ. ಕಾರಣಾಜ್ಞಾನರೂಪವಾದ ನಿದ್ರೆಯಾಗಲಿ ಕಾರ್ಯಾಜ್ಞಾನರೂಪವಾದ ಕನಸಾಗಲಿ ಇಲ್ಲದೆ ತನ್ನ ಚೈತನ್ಯಸ್ವರೂಪವಾದ ಎಚ್ಚರಿನಲ್ಲಿಯೇ ಇರುವವನು

ತುರೀಯನು, ಅಜ್ಞಾನವೂ ಅನ್ಯಥಾಜ್ಞಾನವೂ ಆತ್ಮನಿಗೆ ಇಲ್ಲವೆಂದು ಯಾವನು ಅರಿತುಕೊಳ್ಳುವನೋ ಅವನೇ ನಿಜವಾಗಿ ಆತ್ಮಸ್ವರೂಪವನ್ನು ಅರಿತುಕೊಂಡವನು.

೧೬-೧೮. ಜೀವನಿಗೆ ಅನಾದಿಮಾಯೆಯಿಂದ ಈ ಅಜ್ಞಾನ, ಅನ್ಯಥಾಜ್ಞಾನಗಳೆಂಬ ಕನಸು ಆಗಿರುತ್ತದೆಯೇ ಹೊರತು ಅವನಲ್ಲಿ ಇದು ಪರಮಾರ್ಥವಾಗಿ ಇರುವಬಿಲ್ಲ. ಈ ಕನಸಿನಿಂದ ಎಚ್ಚತ್ತಕೂಡಲೆ ಆತ್ಮತತ್ತ್ವವು ಹುಟ್ಟಿಲ್ಲದ್ದು, ಯಾವ ನಿದ್ರೆಯಾಗಲಿ ಕನಸಾಗಲಿ ಇಲ್ಲದ್ದು, ತನಗೆರಡನೆಯ ದಿಲ್ಲದ್ದು - ಎಂಬ ಅರಿವು ಆಗುವದು. ಈಗ ಅವಸ್ಥೆಗಳು, ವಿಶ್ವ ತೈಜಸಾದಿರೂಪ ಗಳು-ಎಂಬ ಪ್ರಪಂಚವಿದೆಯೆಂದೂ ಜ್ಞಾನದಿಂದ ಅದು ಹೋಗುವದೆಂದೂ ಅಭಿ ಪ್ರಾಯವಲ್ಲ ; ಅದು ಪರಮಾರ್ಥವಾಗಿಲ್ಲವೇ ಇಲ್ಲ, ಆತ್ಮನು ಯಾವಾಗಲೂ ನಿಜವಾಗಿ ಅದ್ವೈತನೇ ಆಗಿರುತ್ತಾನೆ - ಎಂದು ಅರಿತುಕೊಳ್ಳುವದೇ ಅದ್ವೈತ ಪ್ರಾಪ್ತಿಯು. ಈ ಜ್ಞಾನವನ್ನು ತಿಳಿಸುವ ಗುರು, ಅದನ್ನು ಅರಿಯುವ ಶಿಷ್ಯ- ಎಂಬ ಭೇದವೂ ಪರಮಾರ್ಥವಲ್ಲ. ಅವಿದ್ಯಕವಾದ ಈ ಭೇದವು ಪರಮಾರ್ಥವಾಗಿ ರುವಂತೆ ಜ್ಞಾನವಾಗುವವರೆಗೆ ತೋರುತ್ತಿರುತ್ತದೆ. ಜ್ಞಾನವುಂಟಾದ ಬಳಿಕ ಈ ಭೇದವೂ ಮಾಯಾಮಾತ್ರವೇ ಎಂಬ ಅರಿವು ಉಂಟಾಗಿಬಿಡುತ್ತದೆ.

೧೯-೨೩. ಆತ್ಮನಲ್ಲಿ ವಾಚ್ಯವಾಚಕರೂಪವಾದ ಭೇದವೂ ಇರುವದಿಲ್ಲ. ವಾಚ್ಯದೃಷ್ಟಿಯಿಂದ ಆತ್ಮನು ಬ್ರಹ್ಮವು ; ವಾಚಕದೃಷ್ಟಿಯಿಂದ ನೋಡಿದರೆ ಆತ್ಮನು ಓಂಕಾರವು, ವಾಚ್ಯವಾಚಕವಿಭಾಗರಹಿತನಾದ ತುರೀಯಾತ್ಮ ನನ್ನು ಓಂಕಾರವೆಂದಾಗಲಿ ಬ್ರಹ್ಮವೆಂದಾಗಲಿ ಕರೆಯುವದಕ್ಕಿಲ್ಲ. ಬ್ರಹ್ಮರೂಪ ವಾದ ಆತ್ಮನಲ್ಲಿ ವಿಶ್ವ, ತೈಜಸ, ಪ್ರಾಜ್ಞ - ಎಂಬ ಪಾದಗಳು ಕಲ್ಪಿತವಾಗಿರುವಂತೆ ಓಂಕಾರರೂಪನಾದ ಆತ್ಮನಲ್ಲಿ ಅಕಾರ, ಉಕಾರ, ಮಕಾರ - ಎಂಬ ಪಾದವಾಚಕಗಳಾದ ಮಾತ್ರೆಗಳು ಕಲ್ಪಿತವಾಗಿರುವವು. ಕಲ್ಪಿತಪಾದಗಳಿಗಿಂತ ವಿಲಕ್ಷಣನಾದ ತುರೀಯಾತ್ಮನೇ ಕಲ್ಪಿತಮಾತ್ರೆಗಳಿಗಿಂತ ವಿಲಕ್ಷಣವಾದ ಓಂಕಾರವು. ತುರೀಯತತ್ತ್ವವು ಪಾದವೂ ಅಲ್ಲ, ಮಾತ್ರೆಯೂ ಅಲ್ಲ.

೨೪-೨೯. ಇಂಥ ವಾಚ್ಯವಾಚಕಭಾವವಿಲಕ್ಷಣವಾದ ಓಂಕಾರವೇ ಪ್ರಣವವು, ಇದನ್ನು ಪಾದಗಳು, ಮಾತ್ರೆಗಳು - ಎಂಬ ಕಲ್ಪಿತೋಪಾಯಗಳಿಂದ ತಿಳಿದುಕೊಂಡು ಅದರಲ್ಲಿಯೇ ಚಿತ್ತವನ್ನು ಇಟ್ಟುಕೊಂಡವರಿಗೆ ಅಂಜಿಕೆಯಿಲ್ಲ. ಪರಬ್ರಹ್ಮವೆಂದೂ ಅಪರಬ್ರಹ್ಮವೆಂದೂ ಶ್ರುತಿ ಹೇಳುವದು ಈ ಪ್ರಣವವನ್ನೇ.

ಇದು ಆದಿಮಧ್ಯಾಂತರಹಿತವಾದದ್ದು, ಎಲ್ಲಕ್ಕೂ ಆದಿಮಧ್ಯಾಂತವು ಇದೇ. ಇದೇ ಜೀವರ ಹೃದಯದಲ್ಲಿರುವ ಈಶ್ವರನೆಂಬುದು. ಈ ಅಮಾತ್ರವಾದ ಅಪರಿಚ್ಛಿನ್ನವಾದ ಪ್ರಪಂಚೋಪಶಮವಾದ ಓಂಕಾರವನ್ನು ಯಾವನು ಅರಿತಿರುವನೋ ಅವನೇ ಮುನಿಯು.

ವೈತಥ್ಯಪ್ರಕರಣ

೧-೩. ಕನಸಿನಲ್ಲಿ ಒಳಗೆ ಕಾಣುವ, ಹೊರಗೆ ಕಾಣುವ, ಭಾವಗಳೆಲ್ಲವೂ ಮಿಥ್ಯೆಯಾಗಿರುವವು. ಏಕೆಂದರೆ ಅವು ಸಂಕುಚಿತವಾದ ದೇಹದೊಳಗಡೆಯಲ್ಲಿ ತೋರುತ್ತಿರುವವು ; ಅಲ್ಲಿ ನೋಡುವ ದೂರಪ್ರದೇಶಗಳಿಗೆ ಹೋಗುವಷ್ಟು ಕಾಲವು ಅಲ್ಲಿರುವದಿಲ್ಲ, ಎಚ್ಚತ್ತವನು ಅಲ್ಲಿರುವದೂ ಇಲ್ಲ. ಶ್ರುತಿಯಲ್ಲಿಯೂ ಈ ಅನುಭವಸಿದ್ಧವಾದ ವಿಷಯವನ್ನು ಅನುವಾದಮಾಡಿಕೊಂಡು ಕನಸಿನಲ್ಲಿ ಆತ್ಮನೊಬ್ಬನೇ ಸ್ವಯಂಜ್ಯೋತಿಯಾಗಿರುವನೆಂದು ಹೇಳಿರುತ್ತದೆ.

೪-೧೦. ಹೀಗೆಯೇ ಎಚ್ಚರದಲ್ಲಿ ತೋರುವ ಭಾವಗಳೂ ಮಿಥ್ಯೆಯೆಂದು ಹೇಳಬೇಕು ; ಏಕೆಂದರೆ ಎಚ್ಚರವೂ ಕನಸಿನಂತೆಯೇ ಇದೆ ; ಅದರಲ್ಲಿಯೂ ಭಾವಗಳು ಗ್ರಾಹ್ಯಗ್ರಾಹಕರೂಪವಾಗಿರುತ್ತವೆ. ಎಚ್ಚರಕ್ಕೆ ಮೊದಲೂ ಎಚ್ಚರವು ಮುಗಿದಮೇಲೂ ಇಲ್ಲದಿರುವ ಈ ದೃಶ್ಯಗಳು ಎಚ್ಚರದಕಾಲದಲ್ಲಿಯೂ ಇಲ್ಲವೆಂಬುದೇ ಯುಕ್ತ. ಎಚ್ಚರದಲ್ಲಿರುವ ವಸ್ತುಗಳಿಗೆ ಪ್ರಯೋಜನವುಂಟೆಂಬುದು ಕನಸಿನ ವಸ್ತುಗಳಂತೆಯೇ ; ಏಕೆಂದರೆ ಈ ಸಪ್ರಯೋಜನತ್ವವು ಅಯಾ ಅವಸ್ಥೆಯಲ್ಲಿ ಮಾತ್ರ ಇದ್ದು ಮತ್ತೊಂದು ಅವಸ್ಥೆಯಲ್ಲಿ ಇಲ್ಲವಾಗುತ್ತದೆ. ಕನಸಿನಲ್ಲಿ ಕೆಲವು ಹೊಸ ದೃಶ್ಯಗಳೂ ಕಾಣಿಸುತ್ತವೆ ಎಂಬುದು ನಿಜ ; ಆದರೆ ಅವೂ ಸ್ಥಾನಿಧರ್ಮಗಳೇ, ಆ ಅವಸ್ಥೆಯಲ್ಲಿರುವವನಿಗೆ ಮಾತ್ರ ಕಾಣತಕ್ಕವೇ ಹೊರತು ಸ್ವತಃಸಿದ್ಧವಾಗಿರುವ ಸತ್ಯವಸ್ತುಗಳಲ್ಲ. ಮನಸ್ಸಿನಲ್ಲಿ ಮಾತ್ರ ಕಲ್ಪಿಸಿಕೊಂಡದ್ದು ಅಸತ್ತಾಗಿಯೂ ಹೊರಗೆ ಕಂಡದ್ದು ಸತ್ತಾಗಿಯೂ ತೋರುವದೆಂಬುದು ಎರಡು ಅವಸ್ಥೆಗಳಿಗೂ ಸಮಾನವಾಗಿರುತ್ತದೆ. ಆದ್ದರಿಂದ ಕನಸಿನ ತೋರಿಕೆಗಳಂತೆ ಎಚ್ಚರದ ತೋರಿಕೆಗಳೂ ಹುಸಿಯೇ ಎನ್ನುವದಕ್ಕೆ ಯಾವ ಅಡ್ಡಿಯೂ ಇಲ್ಲ.

೧೧-೧೫. ಈ ಎರಡು ಅವಸ್ಥೆಗಳಲ್ಲಿಯೂ ಆತ್ಮನೊಬ್ಬನೇ ಪರಮಾರ್ಥವಾಗಿರುವನು. ಅವುಗಳನ್ನು ಅದ್ವಿತೀಯನಾದ ಅವನೊಬ್ಬನೇ ತನ್ನಲ್ಲಿ

ಕಲ್ಪಿಸಿಕೊಂಡು ಕಾಣುತ್ತಿರುವನು - ಎಂಬುದು ಉಪನಿಷತ್ಸಿದ್ಧಾಂತವು. ತನ್ನೊಳಗೆ ಕೆಲವು ಭಾವಗಳನ್ನೂ ಹೊರಗೆ ಮತ್ತೆ ಕೆಲವು ಭಾವಗಳನ್ನೂ ವಿಲಕ್ಷಣ ಪ್ರಕಾರದಿಂದ ಕಲ್ಪಿಸಿರುವದೂ ಈ ಎರಡವಸ್ಥೆಗಳಿಗೆ ಸಮಾನವಾಗಿರುತ್ತದೆ. ಒಳಗಿರುವ ಭಾವಗಳು ಆಯಾ ಪ್ರತ್ಯಯವಿರುವವರೆಗೆ ಇರುವಂತೆಯೂ, ಹೊರಗಿನ ಭಾವಗಳು ಸ್ಥಿರವಾಗಿ ಅನ್ಯೋನ್ಯಪರಿಚ್ಛೇದ್ಯಗಳಾಗಿರುವಂತೆಯೂ ಕಾಣಿಸುವದರಲ್ಲಾಗಲಿ, ಒಳಗಿನ ಭಾವಗಳು ಅವ್ಯಕ್ತವಾಗಿಯೂ ಹೊರಗಿನವು ಸ್ಫುಟವಾಗಿಯೂ ತೋರುವದರಲ್ಲಾಗಲಿ ಈ ಎರಡು ಅವಸ್ಥೆಗಳ ದೃಶ್ಯಗಳಿಗೆ ಯಾವ ತಾರತಮ್ಯವೂ ಕಾಣಿಸುವದಿಲ್ಲ.

೧೬. ಈ ಕಲ್ಪನೆಗೆ ''ನಾನು ಜೀವನು, ಕರ್ತೃಭೋಕ್ತೃಸ್ವರೂಪನು'' ಎಂದು ಕಲ್ಪಿಸಿರುವದೇ ಮೂಲವು. ಹಿಂದಿನ ಅನುಭವಕ್ಕೆ ತಕ್ಕಂತೆ ಈಗಿನ ಸ್ಮೃತಿಯೂ ಮತ್ತೆ ಅನುಭವಸ್ಮೃತಿಗಳೂ ಸಂತತವಾಗಿ ಈ ಕಲ್ಪನೆಯಿಂದಲೇ ಆಗಿರುವವು.

೧೭-೧೮. ಕತ್ತಲೆಯಲ್ಲಿ ಇದು ಹಗ್ಗವೆಂದು ಗೊತ್ತುಮಾಡಿಕೊಳ್ಳದೆ ಇರುವಾಗ ಅದು ಹಾವು, ನೀರಿನ ಕೋಡಿ - ಮುಂತಾದ ರೂಪಗಳಿಂದ ತೋರುವಂತೆ ಅಜ್ಞಾತನಾದ ಆತ್ಮನಲ್ಲಿಯೂ ಅನೇಕ ಭಾವಗಳು ಕಲ್ಪಿತವಾಗಿರುತ್ತವೆ. ಇದು ಹಗ್ಗವೇ ಎಂದು ನಿಶ್ಚಯವಾಗಲು ಎಲ್ಲಾ ವಿಕಲ್ಪಗಳೂ ತೊಲಗುವಂತೆಯೂ ಹಗ್ಗವೊಂದೇ ಉಳಿಯುವಂತೆಯೂ ಆತ್ಮನನ್ನು ಅರಿತುಕೊಂಡಾಗ ಎಲ್ಲ ವಿಕಲ್ಪಗಳೂ ತೊಲಗಿ ಆತ್ಮನೊಬ್ಬನೇ ಪರಮಾರ್ಥವಾಗಿ ಉಳಿದುಕೊಳ್ಳುವನು.

೧೯. ಈ ಆತ್ಮನಲ್ಲಿ ಪ್ರಾಣನೇ ಮುಂತಾದ ಅನಂತಭಾವಗಳು ಕಲ್ಪಿತವಾಗಿರುವವು. ಮಾಯೆಯಿಂದ ಕಲ್ಪಿತವಾದ ವಸ್ತುಗಳು ನೋಟಕರನ್ನು ಮರುಳುಗೊಳಿಸುವಂತೆ ಈ ಆತ್ಮಮಾಯೆಯು ಆತ್ಮನನ್ನೇ ಮರುಳುಗೊಳಿಸಿದಂತೆ ಆಗಿರುತ್ತದೆ.

೨೦-೩೦. ಪ್ರಾಣನೆಂಬ ಕಾರಣಾತ್ಮನಾದ ಪ್ರಾಜ್ಞನು, ಮತ್ತು ಅವನ ಕಾರ್ಯಗಳಾದ ಭೂತಗಳು, ಗುಣಗಳು, ತತ್ತ್ವಗಳು, ಪಾದಗಳು, ವಿಷಯಗಳು, ಲೋಕಗಳು, ದೇವತೆಗಳು - ಮುಂತಾಗಿ ಈ ಕಲ್ಪಿತಭೇದಗಳು ಲೆಕ್ಕವಿಲ್ಲದಷ್ಟಿರುತ್ತವೆ. ಅವೆಲ್ಲವೂ ಈ ಆತ್ಮನಲ್ಲಿಯೇ ಕಲ್ಪಿತವಾಗಿರುತ್ತವೆ. ಆಯಾ ಕಲ್ಪನೆಯೇ ಪರಮಾರ್ಥವೆಂದು ಆಯಾ ವಾದಿಗಳು ಪಟ್ಟುಹಿಡಿದಿರುವರು ; ಆಯಾ

ಸಿದ್ಧಾಂತದ ಆಚಾರ್ಯರ ಹೇಳಿಕೆಯನ್ನು ಅವರ ಅನುಯಾಯಿಗಳು ನಂಬಿರುವದರಿಂದ ತತ್ತ್ವವನ್ನು ಸರಿಯಾಗಿ ತಿಳಿಯುವುದಕ್ಕೆ ಅಡ್ಡಿಯಾಗಿರುತ್ತದೆ. ಆತ್ಮನು ಈ ಯಾವ ಕಲ್ಪನೆಯೂ ಇಲ್ಲದವನೆಂದೂ ಅವನಲ್ಲಿ ಇವೆಲ್ಲ ತಪ್ಪು ತಿಳಿವಳಿಕೆಯಿಂದ ಕಲ್ಪಿತವಾಗಿರುವವೆಂದೂ ಯಾವನು ಅರಿತಿರುವನೋ ಅವನೇ ವೇದವಾಕ್ಯಗಳಿಗೆ ಯಾವ ಶಂಕೆಯೂ ಇಲ್ಲದೆ ಸರಿಯಾದ ತಾತ್ಪರ್ಯವನ್ನು ಗೊತ್ತುಪಡಿಸಬಲ್ಲನು.

೩೧-೩೨. ಈ ಇಡಿಯ ಜಗತ್ತು ಕನಸಿನಂತೆ, ಮಾಯೆಯಂತೆ, ಗಂಧರ್ವನಗರದಂತೆ - ಎಂದು ಉಪನಿಷತ್ತುಗಳಲ್ಲಿ ಹೇಳಿದೆ ಎಂಬುದನ್ನು ಪಂಡಿತರೇ ಬಲ್ಲರು. ಸೃಷ್ಟಿಯಿಲ್ಲ, ಪ್ರಲಯವಿಲ್ಲ, ಬ್ರಹ್ಮನಿಲ್ಲ, ಸಾಧಕನಿಲ್ಲ, ಮುಮುಕ್ಷುವಿಲ್ಲ, ಮುಕ್ತನಿಲ್ಲ - ಎಂಬಿದೇ ಪರಮಾರ್ಥವು.

೩೩-೩೫. ಈ ಆತ್ಮನು ತಾನು ಇದ್ದಂತೆಯೇ ಇರುತ್ತಿರುವನಾದರೂ ಅತ್ಯಂತವಾಗಿ ಇಲ್ಲದಿರುವ ಈ ಭಾವಗಳ ರೂಪದಿಂದಲೂ ಅದ್ವಯನೆಂಬ ತನ್ನ ರೂಪದಿಂದಲೂ ಕಲ್ಪಿತನಾಗಿರುವನು. ಭಾವಗಳಿಗೂ ಅದ್ವಯರೂಪವೇ ಆಧಾರವಾಗಿರುವದರಿಂದ ಅದ್ವಯಭಾವವೇ ಮಂಗಳಕರವಾದದ್ದು. ರಾಗಾದಿದೋಷಗಳಿಲ್ಲದ ವೇದಪಾರಗರಾದ ಮುನಿಗಳೇ ಈ ಪ್ರಪಂಚೋಪಶಮನಾದ ಅದ್ವಯಾತ್ಮನನ್ನು ಬಲ್ಲರು.

೩೬-೩೮. ಹೀಗೆಂದು ತಿಳಿದ ವಿವೇಕಿಯು ಅದ್ವೈತದಲ್ಲಿಯೇ ಚಿತ್ತವನ್ನಿಡಬೇಕು. ಅದನ್ನರಿತುಕೊಂಡು ಏನೂ ಅರಿಯದವನಂತೆ ವ್ಯವಹಾರವನ್ನು ಮಾಡಿಕೊಂಡಿರಬೇಕು. ಸ್ತುತಿನಮಸ್ಕಾರಗಳಾಗಲಿ ಮತ್ತೆ ಯಾವ ಕರ್ಮಗಳಾಗಲಿ ಇಲ್ಲದ ಪರಮಹಂಸಪಾರಿವ್ರಾಜ್ಯವನ್ನು ಹೊಂದಿ ಅನಿಕೇತನಾಗಿ ಯದೃಚ್ಛಾಲಾಭಸಂತುಷ್ಟನಾಗಿ ಎಲ್ಲೆಲ್ಲಿಯೂ ಅದ್ವೈತಾತ್ಮತತ್ತ್ವವೊಂದನ್ನೇ ಕಾಣುತ್ತಾ ಆ ತತ್ತ್ವವನ್ನು ಬಿಟ್ಟು ಒಂದಿಷ್ಟೂ ಕದಲದೆ ಇರಬೇಕು.

ಅದ್ವೈತಪ್ರಕರಣ

೧-೨. ಉಪಾಸನೆಯೇ ಪರಮಪುರುಷಾರ್ಥಕ್ಕೆ ಮುಖ್ಯಸಾಧನವೆಂದು ಯಾವನು ನಂಬಿರುವನೋ ಅವನು ''ಸೃಷ್ಟಿಗೆ ಪೂರ್ವದಲ್ಲಿ ಅಜಾತಬ್ರಹ್ಮ ವಿದ್ದಿತು, ಈಗ ನಾನು ಅದರಿಂದ ಹುಟ್ಟಿರುವೆನು, ಮುಂದೆ ಉಪಾಸನೆಯಿಂದ ಅದರ ಸಾಯುಜ್ಯವನ್ನು ಪಡೆಯುವೆನು'' - ಎಂದು ಜಾತಬ್ರಹ್ಮದಲ್ಲಿ ನಿಂತಿರುವದ

ರಿಂದ ಕೃಪಣನು ಎಂದು ಬ್ರಹ್ಮಜ್ಞಾನಿಗಳು ಹೇಳುವರು. ಆದ್ದರಿಂದ ಅಜಾತವಾದ ಸಮವಾಗಿರುವ ತತ್ತ್ವವನ್ನು ತಿಳಿಸುವೆನು.

೩-೧೦. ಆಕಾಶವು ಘಟಾಕಾಶಾದಿಗಳ ರೂಪದಿಂದಲೂ ಘಟಾದಿಗಳ ರೂಪದಿಂದಲೂ ಹುಟ್ಟುವಂತೆ ಹೇಗೆ ತೋರುವದೋ ಹಾಗೆ ಆತ್ಮನು ಜೀವರುಗಳ ರೂಪದಿಂದಲೂ ಕಾರ್ಯಕರಣಸಂಘಾತಗಳ ರೂಪದಿಂದಲೂ ಹುಟ್ಟಿರುವ ಹಾಗೆ ತೋರುತ್ತಿರುವನು. ಘಟವೇ ಮುಂತಾದವುಗಳು ನಷ್ಟವಾದರೆ ಘಟಾಕಾಶಾದಿಗಳು ಆಕಾಶದಲ್ಲಿ ಸೇರಿಹೋಗುವಂತೆ ಜೀವರುಗಳೂ ಆತ್ಮನಲ್ಲಿ ಲಯವಾಗುವರು. ಒಂದು ಘಟಾಕಾಶದಲ್ಲಿರುವಂತೆ ತೋರುವ ದೋಷವು ಹೇಗೆ ಮಿಕ್ಕ ಘಟಾಕಾಶಗಳಿಗೆ ಅಂಟದೆ ಇರುವದೋ ಹಾಗೆಯೇ ಒಬ್ಬ ಜೀವನಿಗೆ ಆಗುವ ಸುಖಾದಿಗಳು ಮಿಕ್ಕವರಿಗೆ ಅಂಟದೆ ಇರುವವು. ಘಟಾಕಾಶವೇ ಮುಂತಾದವುಗಳ ನಾಮ, ರೂಪ, ಕರ್ಮ - ಇವುಗಳು ಬೇರೆಬೇರೆಯಾಗಿರುತ್ತಿದ್ದರೂ ಆಕಾಶದಲ್ಲಿ ಹೇಗೆ ಯಾವ ಭೇದವೂ ಇರುವದಿಲ್ಲವೋ ಹಾಗೆಯೇ ಜೀವರುಗಳ ವಿಷಯಕ್ಕೂ ತಿಳಿಯಬೇಕು. ಆತ್ಮನಲ್ಲಿ ಯಾವ ಭೇದವೂ ಪರಮಾರ್ಥವಾಗಿರುವದೇ ಇಲ್ಲ. ಸರಿಯಾಗಿ ನೋಡಿದರೆ ಘಟಾಕಾಶವು ಆಕಾಶದ ಕಾರ್ಯವೂ ಅಲ್ಲ, ಅಂಶವೂ ಅಲ್ಲ ; ಇದರಂತೆ ಜೀವನು ಆತ್ಮನ ಕಾರ್ಯವೂ ಅಲ್ಲ, ಅಂಶವೂ ಅಲ್ಲ ; ಆಕಾಶಕ್ಕೆ ನಿಜವಾಗಿ ಧೂಳು, ಹೊಗೆ - ಮುಂತಾದವು ಎಂದಿಗೂ ಮಸುಕನ್ನು ಉಂಟುಮಾಡಿರುವದಿಲ್ಲ. ಇದರಂತೆ ಆತ್ಮನಿಗೂ ಸುಖದುಃಖಾದಿಗಳು ಮಸಕನ್ನುಂಟುಮಾಡಿರುವದಿಲ್ಲ. ಹುಟ್ಟುವದು, ಸಾಯುವದು, ಹೋಗುವದು, ಬರುವದು, ಬೇರೆಬೇರೆಯ ಶರೀರಗಳಲ್ಲಿರುವದು - ಇವೆಲ್ಲವೂ ಆಕಾಶದಲ್ಲಿ ತೋರುವ ಮಿಥ್ಯಾಧರ್ಮಗಳಂತೆ ಹುಸಿತೋರಿಕೆಗಳೇ ಆಗಿರುತ್ತವೆ. ಘಟಾಕಾಶಾದಿಗಳ ಉಪಾಧಿಯಾಗಿರುವ ಘಟಾದಿಗಳಂತೆ ಇರುವ ಜೀವರ ಉಪಾಧಿಗಳಾದ ದೇಹಾದಿಗಳು ಕೂಡ ನಿಜವಾಗಿ ಹುಟ್ಟುವದಿಲ್ಲ ; ಅವುಗಳಲ್ಲಿ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ. ಏಕೆಂದರೆ ಅವು ಕನಸಿನ, ಮಾಯೆಯ, ದೇಹಗಳಂತೆ ಹುಸಿತೋರಿಕೆಗಳೇ ಆಗಿರುವವು. ಆದ್ದರಿಂದ ಉಪಾಧಿಯಿಂದ ಜೀವರುಗಳಲ್ಲಿ ತಾರತಮ್ಯವಿರುವದೆಂಬುದೂ ಉತ್ಪತ್ತ್ಯಾದಿಧರ್ಮಗಳಿರುವವೆಂಬುದೂ ಭ್ರಾಂತಿಯೇ.

೧೧-೧೬. ಈ ಅರ್ಥವು ವೇದಾಂತಪ್ರಮಾಣದಿಂದ ಸಿದ್ಧವಾಗಿರುತ್ತದೆ, ಹೇಗೆಂದರೆ **ತೈತ್ತಿರೀಯ**ದಲ್ಲಿ ಅನ್ನರಸಮಯವೇ ಮುಂತಾದ ಪಂಚಕೋಶ

ಗಳನ್ನು ಹೇಳಿ, ಕೊನೆಯಲ್ಲಿ ಪ್ರತಿಪಾದಿಸಿರುವ ಅವುಗಳ ಜೀವನಾದ ಪರಮಾತ್ಮನನ್ನೇ ನಾವು ಇಲ್ಲಿ ಆಕಾಶದೃಷ್ಟಾಂತದಿಂದ ತಿಳಿಸಿರುವೆವು. **ಬೃಹದಾರಣ್ಯಕೋಪನಿಷತ್ತಿನ ಮಧುಬ್ರಾಹ್ಮಣ**ದಲ್ಲಿ ಅಧಿದೈವವಾಗಿಯೂ ಅಧಿಭೂತವಾಗಿಯೂ ಇರುವ ಆತ್ಮನು ಒಬ್ಬನೇ ಎಂದು ಪೃಥಿವಿ, ಶರೀರ - ಮುಂತಾದ ಎರಡೆರಡನ್ನು ತೆಗೆದುಕೊಂಡು ಹೇಳಿರುತ್ತದೆಯಷ್ಟೆ ; ಆ ಆತ್ಮನನ್ನೇ ನಾವು ಆಕಾಶದೃಷ್ಟಾಂತದಿಂದ ತಿಳಿಸಿರುತ್ತೇವೆ. ಅದ್ವೈತವು ಶ್ರುತ್ಯರ್ಥವೆನ್ನುವದಕ್ಕೆ ಒಂದು ಗಮಕವೇನೆಂದರೆ ಜೀವಾತ್ಮರು ಒಂದೇ ಎಂಬುದನ್ನು ಅಲ್ಲಿ ಹೊಗಳಿದೆ, ನಾನಾತ್ವವನ್ನು ನಿಂದಿಸಿರುತ್ತದೆ. ಜೀವಾತ್ಮರುಗಳು ಬೇರೆಬೇರೆ ಎಂದು ಕರ್ಮಕಾಂಡದಲ್ಲಿ ಹೇಳಿರುವದು ಗೌಣವು ; ಏಕೆಂದರೆ ಮುಖ್ಯವೃತ್ತಿಯಿಂದ ಐಕ್ಯವನ್ನು ಮುಂದೆ ಹೇಳಿರುತ್ತದೆ. ಮಣ್ಣು, ಕಬ್ಬಿಣ, ಕಿಡಿಗಳು - ಮುಂತಾದ ದೃಷ್ಟಾಂತಗಳಿಂದ ಶ್ರುತಿಯಲ್ಲಿ ಸೃಷ್ಟಿಯನ್ನು ಹೇಳಿರುವದು ಐಕ್ಯವನ್ನು ತಿಳಿಯಪಡಿಸುವದಕ್ಕೆ ಉಪಾಯವೇ ಹೊರತು ನಿಜವಾಗಿ ದ್ವೈತವಿದೆ ಎಂದು ತಿಳಿಸುವದಕ್ಕಲ್ಲ. ಶ್ರುತಿಗಳಲ್ಲಿ ಕರ್ಮವನ್ನೂ ಉಪಾಸನೆಯನ್ನೂ ಹೇಳಿರುವದು ಮಂದಮಧ್ಯಮಾಧಿಕಾರಿಗಳು ಕ್ರಮಕ್ರಮವಾಗಿ ಈ ಐಕ್ಯದೃಷ್ಟಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಉಪಾಯವಾಗಿದೆಯೇ ಹೊರತು ದ್ವೈತವೇ ಪರಮಾರ್ಥವೆಂದು ತಿಳಿಸುವದಕ್ಕಲ್ಲ.

೧೭-೨೨. ದ್ವೈತಿಗಳು ತಮ್ಮತಮ್ಮ ಸಿದ್ಧಾಂತಗಳನ್ನು ಪರಮಾರ್ಥವೆಂದು ತೋರಿಸಿಕೊಡುವದಕ್ಕಾಗಿ ಒಬ್ಬರಿಗೊಬ್ಬರು ವಿರುದ್ಧವಾಗಿ ವಾದಿಸುತ್ತಿರುವರು. ಆದರೆ ಅದ್ವೈತವು ಅದಕ್ಕೆ ವಿರುದ್ಧವಲ್ಲ. ಏಕೆಂದರೆ ದ್ವೈತವು ಅಪರಮಾರ್ಥವಾಗಿರುತ್ತದೆ, ಅದ್ವೈತವು ಅದರ ಪರಮಾರ್ಥಸ್ವರೂಪವಾಗಿರುತ್ತದೆ. ಭ್ರಾಂತಿದೃಷ್ಟಿಯ ದ್ವೈತಕ್ಕೆ ಪರಮಾರ್ಥದೃಷ್ಟಿಯ ಅದ್ವೈತವು ವಿರುದ್ಧವಾಗಿರಲಾರದು. ದ್ವೈತವು ಭ್ರಾಂತಿದೃಷ್ಟವೇ, ಮಾಯಿಕವೇ ; ಹಾಗಿಲ್ಲದೆ ಅದು ಸತ್ಯವೇ ಆಗಿದ್ದರೆ ಅಮೃತಸ್ವಭಾವವಾಗಿರುವ ಪರಮಾರ್ಥವು ಮರ್ತ್ಯವಾಯಿತೆಂದು ವ್ಯಾಹತವಾಗಿ ಹೇಳಿದಂತಾಗುವದು. ಕೆಲವರು ವೇದಾಂತಿಗಳು ಅಜವಾಗಿರುವ ತತ್ತ್ವವೇ ದ್ವೈತವಾಗಿ ಹುಟ್ಟಿರುವದೆನ್ನುವರು ; ಆದರೆ ಅಮೃತವು ಮರ್ತ್ಯವಾಗುವದು ಹೇಗೆ ? ಮರ್ತ್ಯವಾದದ್ದು ಮತ್ತೆ ಅಮೃತವಾಗುವದು ಹೇಗೆ ? ಸ್ವಭಾವವು ಬೇರೆಯಾದೀತೆ ? ಹಾಗೆ ಅಮೃತವು ಮರ್ತ್ಯವಾಗುವದೆಂದರೆ ಅಮೃತವೆಂಬುದು ಕೃತಕವಾಗುವದು, ಸ್ವಾಭಾವಿಕವಾಗಲಾರದು.

೨೩-೨೬. ಸೃಷ್ಟಿಶ್ರುತಿಯು ಮಾಯಿಕಸೃಷ್ಟಿಯನ್ನಾದರೂ ಪರಮಾರ್ಥ ಸೃಷ್ಟಿಯನ್ನಾದರೂ ಹೇಳಬಹುದು. ಆದರೆ ಮಾಯಿಕಸೃಷ್ಟಿಯೇ ಯುಕ್ತಿಯುಕ್ತ ವಾಗುತ್ತದೆ. ನೇಹ ನಾನಾಸ್ತಿ ಕಿಞ್ಚನ'', ''ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ'', 'ಅಜಾಯಮಾನೋ ಬಹುಧಾ ವಿಜಾಯತೇ'' - ಮುಂತಾದ ಶ್ರುತಿಗಳು ಮಾಯಿಕಸೃಷ್ಟಿಯನ್ನೇ ಹೇಳುತ್ತವೆ - ಎಂಬುದು ಸ್ಪಷ್ಟವು. 'ಸಂಭೂತಿ ಯನ್ನು ಉಪಾಸನೆಮಾಡುವವರು ಅಂಧಂತಮಸ್ಸನ್ನು ಹೊಂದುವರು' ಎಂದು ಅವಿದ್ಯಕಸೃಷ್ಟಿಯನ್ನು ಉಪಾಸನೆಮಾಡುವವರಿಗೆ ಕೆಟ್ಟ ಫಲವಾಗುವದೆಂದು ಶ್ರುತಿಯಲ್ಲಿ ನಿಂದಿಸಿದೆ 'ಈತನನ್ನು ಹುಟ್ಟಿಸುವವರು ಯಾರು ? ಎಂದು ಜ್ಞಾನದಿಂದ ಅರಿತ ಆತ್ಮನನ್ನು ಹುಟ್ಟಿಸುವದಕ್ಕೆ ಕಾರಣವಿಲ್ಲವೆಂದೂ ಶ್ರುತಿಯಲ್ಲಿ ಹೇಳಿರುತ್ತದೆ. ಆದ್ದರಿಂದಲೂ ಸೃಷ್ಟಿಯು ಪರಮಾರ್ಥವೆಂಬುದಕ್ಕೆ ಶ್ರುತ್ಯಾಧಾರ ವಿಲ್ಲ. 'ಸ ಏಷ ನೇತಿ ನೇತಿ' ಎಂಬ ಶ್ರುತಿಯು ಹಿಂದೆ ಹೇಳಿದ ಉಪಾಯವು ಯಾವದೂ ಪರಮಾರ್ಥವಾಗಿಲ್ಲವೆಂದು ತಿಳಿಸುವದಕ್ಕಾಗಿ ಹಿಂದೆ ಹೇಳಿದ ವಿವರವೆಲ್ಲವನ್ನೂ ಅಲ್ಲಗಳೆಯುತ್ತದೆ. ಆದ್ದರಿಂದ ಶ್ರುತಿಯು ಅಜಾತಬ್ರಹ್ಮವನ್ನೇ ತಿಳಿಸುತ್ತದೆ - ಎಂದು ಸಿದ್ಧವಾಗುತ್ತದೆ.

೨೭-೩೧. ಇರುವದರಿಂದ ಹುಟ್ಟುವದೆಂಬುದು, ಅಥವಾ ಇರುವದು ಹುಟ್ಟುವದೆಂಬುದು ಮಾಯೆಯಿಂದ ಎಂದರೆ ಹೊಂದುತ್ತದೆ. ಏಕೆಂದರೆ ನಿಜವಾಗಿ ಹುಟ್ಟುತ್ತದೆ ಎನ್ನುವವರ ಪಕ್ಷದಲ್ಲಿ ಮೊದಲು ಹುಟ್ಟಿದ್ದೇ ಹುಟ್ಟಿತು ಎಂದಂತೆ ಆಗುತದೆ ಎಂದರೆ ಕಾರಣವು ಹುಟ್ಟಿರುತ್ತದೆ, ಕಾರ್ಯವೂ ಹುಟ್ಟುತ್ತದೆ ಎಂದಾಗಿ ಅನವಸ್ಥೆಯಾಗುವದು. ಅಸತ್ತಾದದ್ದು ಹುಟ್ಟುತ್ತದೆ ಎಂಬುದು ಹೇಗೂ ಹೊಂದುವದೇ ಇಲ್ಲ ; ಏಕೆಂದರೆ ಬಂಜೆಯ ಮಗನು ನಿಜವಾಗಿಯೂ ಹುಟ್ಟುವದಿಲ್ಲ, ಮಾಯೆಯಿಂದಲೂ ಹುಟ್ಟುವದಿಲ್ಲ. ಆದ್ದರಿಂದ ಅಸತ್ತು ಜಗತ್ತಾಗಿ ಹುಟ್ಟಿದೆ ಎಂಬ ವಾದವು ಎಂದಿಗೂ ಸರಿಯಲ್ಲ. ಕನಸಿನಲ್ಲಿ ಮನಸ್ಸು ಮಾಯೆಯಿಂದ ದ್ವೈತರೂಪವಾಗಿ ತೋರುವಂತೆ ಎಚ್ಚರದಲ್ಲಿಯೂ ತೋರುತ್ತದೆ ಎಂಬುದೇ ಯುಕ್ತ. ಎರಡವಸ್ಥೆಗಳಲ್ಲಿಯೂ ಮನಸ್ಸು ಅದ್ವಿತೀ ಯಾತ್ಮನಾಗಿಯೇ ಇರುತ್ತದೆ. ದ್ವೈತವೆಲ್ಲವೂ ಮನಸ್ಸಿನ ಕಲ್ಪನೆಯೇ ಎನ್ನಬೇಕು ; ಏಕೆಂದರೆ ಮನಸ್ಸು ಅಮನಸ್ಕಾದರೆ ದ್ವೈತವು ಕಾಣಿಸುವದೇ ಇಲ್ಲ.

೩೨-೩೯. ಆತ್ಮನೊಬ್ಬನೇ ಸತ್ಯವೆಂಬುದನ್ನು ಶಾಸ್ತ್ರಾಚಾರ್ಯರ ಉಪದೇಶವನ್ನು ಅನುಸರಿಸಿ ಅರಿತುಕೊಂಡರೆ ಅದು ತನಗೆ ವಿಷಯವಿಲ್ಲದೆ

ಮನಸ್ಸು ಅಮನಸ್ಕಾಗುವದು. ಆಗ ಅದು ಅಜವೂ ಅದ್ವಯವೂ ಆಗಿರುತ್ತದೆ. ಹೀಗೆ ಆತ್ಮಸತ್ಯಾನುಬೋಧದಿಂದ ಹಿಡಿತಕ್ಕೆ ಬಂದ ಮನಸ್ಸಿನ ವ್ಯಾಪಾರಕ್ಕೂ ಸುಷುಪ್ತಿಯಲ್ಲಿ ಲಯವಾಗಿರುವ ಮನಸ್ಸಿನ ವ್ಯಾಪಾರಕ್ಕೂ ತಾರತಮ್ಯವುಂಟು. ಏಕೆಂದರೆ ಜ್ಞಾನದಿಂದ ನಿರುದ್ಧವಾದ ಮನಸ್ಸು ನಿರ್ಭಯವಾದ ಬ್ರಹ್ಮವೇ ಆಗಿರುತ್ತದೆ. ಅದು ಅಜವೂ ಅನಿದ್ರವೂ ಅಸ್ವಪ್ನವೂ ಅನಾಮರೂಪವೂ ಆಗಿರುವ ಸ್ವಯಂಜ್ಯೋತಿಯಾದ ಚೈತನ್ಯವಾಗಿರುತ್ತದೆ. ಆ ಜ್ಞಾನವು ಬಂದ ಬಳಿಕ ಮಾಡಬೇಕಾದದ್ದು ಏನೊಂದೂ ಉಳಿದಿರುವದಿಲ್ಲ. ಆ ಚೈತನ್ಯವು ವಾಕ್ಕಿಗೂ ಮನಸ್ಸಿಗೂ ಮೀರಿದ ನಿತ್ಯಪ್ರಕಾಶವಾಗಿರುತ್ತದೆ, ಹಾನೋಪಾದಾನರಹಿತವಾಗಿರುತ್ತದೆ. ಆದ್ದರಿಂದ ಈ ಜ್ಞಾನಕ್ಕೆ **ಅಸ್ಪರ್ಶಯೋಗ** ಎಂದು ಹೆಸರು. ಆತ್ಮಸತ್ಯಾನುಬೋಧವಿಲ್ಲದ ದ್ವೈತಯೋಗಿಗಳು ಈ ಅಭಯರೂಪವಾದ ಯೋಗವನ್ನೇ ಭಯಕಾರಣವೆಂದು ಅಂಜುತ್ತಿರುವರು.

೪೦-೪೭. ಆತ್ಮನಿಗಿಂತ ಬೇರೆಯಾಗಿ ಮನಸ್ಸೂ ಒಂದಿದೆಯೆಂದು ತಿಳಿಯುವ ಸಾಧಕರಿಗೆ ಅಭಯವೂ ದುಃಖಿಕ್ಷಯವೂ ಆತ್ಮಜ್ಞಾನವೂ ಮುಕ್ತಿಯೂ ಮನೋನಿಗ್ರಹದಿಂದಲೇ ಆಗಬೇಕು. ಅವರು ಬೇಸರವಿಲ್ಲದೆ ಮನಸ್ಸನ್ನು ಗಟ್ಟಿಮಾಡಿಕೊಂಡು ಹೊರಗೆ ವಿಷಯಭೋಗಕ್ಕಾಗಲಿ, ಒಳಗೆ ನಿದ್ರೆಗಾಗಲಿ ಎಡೆಗೊಡದಂತೆ ವೈರಾಗ್ಯವನ್ನೂ ವಿವೇಕವನ್ನೂ ಅಳವಡಿಸಿಕೊಂಡು, ಮನಸ್ಸನ್ನು ವಾಸನಾಯುಕ್ತವಾಗಿ ನಿಲ್ಲದಂತೆ ಆತ್ಮಾಕಾರವಾಗಿ ಮಾಡಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಆತ್ಮನ ಕಡೆಗೆ ಮನಸ್ಸು ತಿರುಗಿದಮಾತ್ರದಿಂದ ಉಂಟಾಗುವ ಸುಖದಲ್ಲಿಯೂ ಆಸಕ್ತರಾಗದೆ ಮನಸ್ಸು ಆತ್ಮಾಕಾರವಾಗಿಯೇ ನಿಲ್ಲುವಂತೆ ಮಾಡಿಕೊಳ್ಳಬೇಕು. ಹೀಗಾದರೆ ಮನಸ್ಸು ಬ್ರಹ್ಮವಾಗಿ ನಿಲ್ಲುವದು. ಇದರಿಂದ ಜ್ಞಾನವೂ ದುಃಖನಾಶವೂ ಶಾಂತಿಯೂ ಉಂಟಾಗುತ್ತವೆ. ಹೀಗೆ ಮಧ್ಯಮಾಧಿಕಾರಿಗಳು ಅರಿಯುವ ವಸ್ತುವೂ ಪರಮಾರ್ಥವಾಗಿ ಜ್ಞಾನವಿಭಾಗಶೂನ್ಯವಾದ ಜನ್ಮರಹಿತವಾದ ಬ್ರಹ್ಮವೇ.

೪೮. ಇದುವರೆಗೆ ಹೇಳಿದ ಮನೋನಿಗ್ರಹವೇ ಮುಂತಾದ ಉಪಾಯವು ಯಾವದೂ ಪರಮಾರ್ಥವಲ್ಲ. ಪರಮಾರ್ಥವು ಯಾವದೆಂದರೆ ಯಾವ ಜೀವನೂ ಹುಟ್ಟುವದಿಲ್ಲ, ಅವನು ಹುಟ್ಟುವದಕ್ಕೆ ಕಾರಣವೂ ಇಲ್ಲ. ಯಾವದೊಂದೂ ಹುಟ್ಟುವದಿಲ್ಲ. ಎಲ್ಲವೂ ಅಜವೂ ಅದ್ವಿತೀಯವೂ ಆದ ಬ್ರಹ್ಮವೇ - ಎಂಬುದೇ ಉತ್ತಮಸತ್ಯವು.

ಅಲಾತಶಾಂತಿಪ್ರಕರಣ

೧-೨. ಜ್ಞಾನ, ಜ್ಞೇಯ, ಜ್ಞಾತೃ- ಇವೆಲ್ಲವೂ ಆಕಾಶದಂತೆ ನಿತ್ಯವಾದ ಸರ್ವಗತವಾದ ಅಸಂಗವಾದ ಒಂದೇ ತತ್ತ್ವದಲ್ಲಿ ಕಲ್ಪಿತವಾಗಿರುವ ತೋರಿಕೆಗಳು. ಅದ್ವೈತದರ್ಶನವು ಇಂಥ ಬ್ರಹ್ಮತತ್ತ್ವವನ್ನು ತಿಳಿಸುವದರಿಂದ **ಅಸ್ಪರ್ಶಯೋಗ**ವೆಂದು ಪ್ರಸಿದ್ಧವಾಗಿರುತ್ತದೆ. ಅದರಲ್ಲಿ ಯಾವ ವಿವಾದವಾಗಲಿ ವಿರೋಧವಾಗಲಿ ಇರುವದಿಲ್ಲ ; ಅದು ಎಲ್ಲಾ ಪ್ರಾಣಿಗಳಿಗೂ ಸುಖಕರವಾದದ್ದು, ಹಿತವಾದದ್ದು.

೩-೧೦. 'ಇಲ್ಲದ ವಸ್ತು ಹುಟ್ಟಲಾರದು', 'ಇರುವದು ಹುಟ್ಟುವದು ಹೇಗೆ ?' ಎಂದು ದ್ವೈತವಾದಿಗಳು ಒಬ್ಬರೊಡನೊಬ್ಬರು ವಿವಾದಮಾಡುತ್ತಾರೆ. ಇದರಿಂದ ಹುಟ್ಟೆಂಬುದೇ ಇಲ್ಲವೆಂದು ಸ್ಪಷ್ಟವಾಗುತ್ತದೆ. ಸ್ವಭಾವದಿಂದ ಅಜವಾದ ಅಮೃತವಾದ ಧರ್ಮವು ಹುಟ್ಟಿ ಮರ್ತ್ಯವಾಗಲಾರದು. ಆತ್ಮರುಗಳಿಗೆ ಮುಪ್ಪು ಸಾವುಗಳಿಲ್ಲವೆಂಬುದೇ ಸಿದ್ಧಾಂತವು ; ಆದರೂ ಜನರು ತಮಗೆ ಮುಪ್ಪುಸಾವು ಗಳುಂಟೆಂದು ನಂಬಿ ಅದೇ ಭಾವನೆಯಿಂದ ಅನರ್ಥವನ್ನು ಹೊಂದುತ್ತಾರೆ.

೧೧-೧೩. ಹುಟ್ಟುವದು ನಿಜವೆಂದು ನಂಬಿರುವವರಲಿ ಕೆಲವರು **ಸತ್ಕಾರ್ಯವಾದಿಗಳು,** ಮತ್ತೆ ಕೆಲವರು **ಅಸತ್ಕಾರ್ಯವಾದಿಗಳು.** ಇವರಿಬ್ಬರೂ ಒಬ್ಬರ ಮತದಲ್ಲೊಬ್ಬರು ದೋಷವನ್ನು ತೋರಿಸುತ್ತಿರುವರು ; ಆದ್ದರಿಂದ ಇಬ್ಬರ ಮತದಲ್ಲಿಯೂ ದೋಷವಿದೆಯೆಂದೇ ಸ್ಪಷ್ಟವಾಗುತ್ತದೆ. ಆತ್ಮರು ಹುಟ್ಟುವದಕ್ಕೆ ಧರ್ಮಾಧರ್ಮಗಳು ಕಾರಣ, ಅವುಗಳಿಂದ ಶರೀರವೆಂಬ ಕಾರ್ಯವಾಗುತ್ತದೆ- ಎಂದು ಕರ್ಮವಾದಿಗಳು ಹೇಳುತ್ತಾರೆ ; ಆದರೆ ಧರ್ಮಾಧರ್ಮಗಳನ್ನು ಮಾಡುವದಕ್ಕೆ ಮೊದಲೇ ಶರೀರವಿರಬೇಕಾಗುತ್ತದೆ. ಆದ್ದರಿಂದ ಈ ವಾದಿಗಳ ಮತದಲ್ಲಿ ಧರ್ಮಾಧರ್ಮಗಳೆಂಬ ಹೇತು, ಶರೀರವೆಂಬ ಫಲ - ಈ ಎರಡಕ್ಕೂ ಅನ್ಯೋನ್ಯಾಶ್ರಯವಿದೆ - ಎಂಬ ದೋಷವುಂಟಾಗುತ್ತದೆ. ಹೇತುಫಲಗಳ ಸಂಬಂಧವನ್ನು ಬಿಡಿಸಿ ಹೇಳುವದಕ್ಕೆ ಬರುವಹಾಗೆಯೇ ಇಲ್ಲ. ಇವುಗಳಲ್ಲಿ ಯಾವದು ಮೊದಲು ಇರುತ್ತದೆಯೆಂದೂ ನಿರ್ಧರಿಸುವದಕ್ಕಾಗುವದಿಲ್ಲ, ಇವು ಅನಾದಿಯೆಂದೂ ಸಿದ್ಧವಾಗುವದಿಲ್ಲ. ಆದ್ದರಿಂದ ಹುಟ್ಟುವದೆಂಬುದೇ ಸುಳ್ಳು - ಎಂದು ಸ್ಪಷ್ಟವಾಗುತ್ತದೆ.

೨೪-೨೯. ಘಟಜ್ಞಾನ, ಪಟಜ್ಞಾನ - ಎಂದು ಜ್ಞಾನದಲ್ಲಿ ಭೇದ ಗಳಿರುವದರಿಂದಲೂ ಬೇರೆಬೇರೆಯ ವಿಷಯಗಳಿಂದ ಬೇರೆಬೇರೆಯಾಗಿ ಸುಖ ದುಃಖಾದಿಗಳು ಉಂಟಾಗುತ್ತಿರುವದರಿಂದಲೂ ಈ ವೈಚಿತ್ರ್ಯಕ್ಕೆ ಕಾರಣವಾಗಿ ಜ್ಞೇಯವಸ್ತುಗಳು ಹುಟ್ಟಿರಬೇಕು - ಎಂದು ಕೆಲವರು ಹೇಳುತ್ತಾರೆ. ವಿಜ್ಞಾನವಾದಿಗಳಾದ ಬೌದ್ಧರು ಇವರ ಮತವನ್ನು ಖಂಡಿಸಿ ''ವಿಷಯಗಳು ಕಾರ್ಯವಾದರೆ ತಮ್ಮ ಕಾರಣವನ್ನು ಬಿಟ್ಟು ಬೇರೆಯಾಗಿ ಇರಲೇ ಆರವು ; ವಿಷಯಗಳೂ ಅವುಗಳಿಂದಾಗುವ ಸುಖದುಃಖಾದಿಗಳೂ ನಿಜವಾಗಿರುವದಾದರೆ ಸುಷುಪ್ತಿ ಸಮಾಧ್ಯಾದಿಗಳಲ್ಲಿ ಅವು ತೋರುವದಿಲ್ಲವೇಕೆ ? ಈ ಕಾರಣದಿಂದ ಹೊರಗೆ ವಿಷಯವು ಇರುವದೆಂಬುದು ಸುಳ್ಳು. ಚಿತ್ತವೊಂದೇ ನಿಜವು, ಅದೇ ಬಗೆಬಗೆಯ ವಿಷಯಗಳ ಆಕಾರದಿಂದ ತೋರುತ್ತಿರುವದು '' ಎಂದು ವಾದಿಸುತ್ತಾರೆ. ಆದರೆ ಬೌದ್ಧರು ಹೇಳುವ ಯುಕ್ತಿಯಿಂದಲೇ ಚಿತ್ತವೂ ಇಲ್ಲವೆಂದು ಸಿದ್ಧವಾಗುತ್ತದೆ. ಇಲ್ಲದ ಗಡಿಗೆಯು ಗಡಿಗೆಯಂತೆ ತೋರಬಹುದಾದರೆ ಇಲ್ಲದ ಚಿತ್ತವು ಚಿತ್ತದಂತೆ ತೋರುವದೆಂದು ಏಕೆ ಹೇಳಬಾರದು ? ಆದ್ದರಿಂದ ಚಿತ್ತದ ವಿಷಯಗಳೂ ಹುಟ್ಟುವದಿಲ್ಲ, ಚಿತ್ತವೂ ಹುಟ್ಟುವದಿಲ್ಲ ; ಎಂದೆಂದಿಗೂ ಹುಟ್ಟದೆ ಕೂಟಸ್ಥವಾಗಿರುವ ಬ್ರಹ್ಮವೊಂದೇ ತತ್ತ್ವವು - ಎಂದು ಸಿದ್ಧವಾಯಿತು.

೩೦-೪೧. ಹುಟ್ಟುವದು ಪರಮಾರ್ಥವೆನ್ನುವವರ ಮತದಲ್ಲಿ ಸಂಸಾರವು ಅನಾದಿ, ಸಾಂತ - ಎಂದಾಗುವದು ; ಮೋಕ್ಷವು ಸಾದಿ, ನಿತ್ಯ - ಎಂದಾಗುವದು. ಇದು ಯುಕ್ತಿವಿರುದ್ಧ. ಆದ್ದರಿಂದ ಸಂಸಾರವು ಮೊದಲೂ ಇಲ್ಲ, ಕೊನೆಯಲ್ಲಿಯೂ ಇಲ್ಲ ; ನಡುವೆ ಇರುವಂತೆ ತೋರಿದರೂ ನಿಜವಾಗಿ ಇಲ್ಲ - ಎಂಬುದು ಸರಿಯಾದದ್ದು. ಕನಸಿನಲ್ಲಿ ಹೇಗೆ ನಿಜವಾಗಿಲ್ಲದ ಶರೀರಾದಿಗಳು ತೋರುವವೋ ಹಾಗೆಯೇ ಎಚ್ಚರದಲ್ಲಿಯೂ ನಿಜವಾಗಿಲ್ಲದ ಶರೀರಾದಿಗಳೇ ತೋರುತ್ತಿರುವವೆಂದು ಕಲ್ಪಿಸುವದು ಯುಕ್ತವಾಗಿರುತ್ತದೆ. ಎಚ್ಚರವು ಕನಸಿನಂತೆ ಕಾರ್ಯವೆಂದು ಹೇಳುವವರು ಕನಸಿನಂತೆ ಎಚ್ಚರವೂ ಕನಸಿನಿಂದೆದ್ದವನೊಬ್ಬನಿಗೇ ಎಂದು ಒಪ್ಪಬೇಕಾಗುತ್ತದೆ. ಆದರೆ ಸರಿಯಾಗಿ ನೋಡಿದರೆ ಎಚ್ಚರಕನಸುಗಳಿಗೆ ಕಾರ್ಯಕಾರಣಭಾವವಿದೆಯೆಂಬುದೂ ಹೊಂದುವದಿಲ್ಲ. ಏಕೆಂದರೆ ಅಸತ್ತಿನಿಂದ ಅಸತ್ತು ಹುಟ್ಟಲಾರದು, ಅಸತ್ತಿನಿಂದ ಸತ್ತು ಹುಟ್ಟಲಾರದು, ಸತ್ತಿನಿಂದ ಸತ್ತು ಹುಟ್ಟಲಾರದು, ಸತ್ತಿನಿಂದ ಅಸತ್ತೂ ಹುಟ್ಟಲಾರದು.

ಹೀಗೆ ಯಾವ ಬಗೆಯಿಂದ ನೋಡಿದರೂ ಹುಟ್ಟುವದೆಂಬುದೇ ಯುಕಿ ವಿರುದ್ಧವಾಗಿರುವದರಿಂದ ಎಚ್ಚರಕನಸುಗಳಿಗೆ ಕಾರ್ಯಕಾರಣಭಾವವಿಲ್ಲ ಆಯಾ ಪದಾರ್ಥಗಳನ್ನು ಅಲ್ಲಲ್ಲಿಯೇ ಜನರು ಕಲ್ಪಿಸಿಕೊಳ್ಳುತ್ತಾರೆಂಬುದೇ ಸರಿಯಾದದ್ದು.

೪೨-೪೬. ಬ್ರಹ್ಮದಿಂದ ಪ್ರಪಂಚವು ಹುಟ್ಟುತ್ತದೆ ಎಂದು ಬ್ರಹ್ಮವಾದಿಗಳೂ ಹೇಳುವದುಂಟು. ಹೊರಗೆ ವಸ್ತುಗಳು ಕಾಣುವದರಿಂದಲೂ ಅವುಗಳನ್ನು ನಾವು ವ್ಯವಹಾರದಲ್ಲಿ ಬಳಸುವದರಿಂದಲೂ ಅವು ನಿಜವಾಗಿಯೂ ಇರುವವೆಂದು ನಂಬಿರುವ ಜನರಿಗೆ ಮೊದಲನೆಯ ಮೆಟ್ಟಿಲಾಗಿ ಬ್ರಹ್ಮದಿಂದ ಜಗತ್ತು ಹುಟ್ಟಿರುವದೆಂದು ಅದ್ವೈತಿಗಳು ಉಪದೇಶಿಸುವರೇ ಹೊರತು ನಿಜವಾಗಿಯೂ ಹುಟ್ಟುವಿಕೆಯುಂಟೆಂಬ ಅಭಿಪ್ರಾಯದಿಂದಲ್ಲ- ತತ್ತ್ವವು ಹುಟ್ಟುವಂತೆಯೂ ಚಲಿಸುವಂತೆಯೂ ಸಗುಣವಾಗಿರುವಂತೆಯೂ ತೋರುವದು ನಿಜ ; ಆದರೆ ಪರಮಾರ್ಥವಾಗಿ ತಾನು ಇದ್ದಂತೆಯೇ ಇರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಚಿತ್ತವೂ ಹುಟ್ಟಿರುವದಿಲ್ಲ, ಚಿತ್ತಕ್ಕೆ ತೋರುತ್ತಿರುವ ವಿಷಯಗಳೂ ಹುಟ್ಟಿರುವದಿಲ್ಲ ; ಆತ್ಮರೂ ಹುಟ್ಟಿರುವದಿಲ್ಲ. ಹೀಗೆಂಬುದೇ ಸರಿಯೆಂದು ತಿಳಿದವರು ಅವಿದ್ಯೆಯ ಅಂಧಂತಮಸ್ಸಿಗೆ ಬೀಳದೆ ಇರುವರು.

೪೭-೫೪. ವೇಗವಾಗಿ ತಿರುಗಿಸುವ ಕೊಳ್ಳಿಯಲ್ಲಿ ಅನೇಕ ಆಕಾರಗಳು ತೋರುವವಷ್ಟೆ, ಅವು ಎಲ್ಲಿಂದ ಬರುತ್ತವೆ ? ಕೊಳ್ಳಿಯನ್ನು ತಿರುಗಿಸುವದನ್ನು ನಿಲ್ಲಿಸಿದಾಗ ಅವು ಎಲ್ಲಿಗೆ ಹೋಗುತ್ತವೆ ? ಈ ಪ್ರಶ್ನೆಗೆ ತಿಳಿದವರು ಕೊಡಬಹುದಾದ ಉತ್ತರವಿಷ್ಟೆ ಅವು ಕೊಳ್ಳಿಗಿಂತ ಬೇರೆಯಾಗಿ ಇಲ್ಲವೇ ಇಲ್ಲ, ಅವು ಕೊಳ್ಳಿಯಿಂದಾಗಲಿ ಮತ್ತೆಲ್ಲಿಂದಾಗಲಿ ಬಂದಿರುವದಿಲ್ಲ. ಕೊಳ್ಳಿಯು ತಿರುಗುವದು ನಿಂತಾಗ ಕೊಳ್ಳಿಯೊಳಕ್ಕಾಗಲಿ ಮತ್ತೆಲ್ಲಿಗಾದರೂ ಆಗಲಿ- ಹೋಗುವದೂ ಇಲ್ಲ. ಇದರಂತೆಯೇ ಜ್ಞಾನಸ್ವರೂಪನಾದ ಆತ್ಮನಲ್ಲಿ ಅಜ್ಞಾನದಿಂದ ತೋರುವ ಆಕಾರಗಳು ಎಲ್ಲಿಂದಲೂ ಬರುವದಿಲ್ಲ, ಅಜ್ಞಾನವು ನಾಶವಾದರೆ ಅವು ಎಲ್ಲಿಗೂ ಹೋಗುವದೂ ಇಲ್ಲ. ಆತ್ಮನಿಗಿಂತ ಬೇರೆಯಾಗಿ ಅವು ಇರುವದೇ ಇಲ್ಲ. ಕಾರ್ಯಕಾರಣಗಳೆಂಬವು ದ್ರವ್ಯಗಳಾಗಿರಬೇಕು, ಅಥವಾ ದ್ರವ್ಯಕ್ಕೆ ಸಂಬಂಧಪಟ್ಟ ಬೇರೆಯ ಪದಾರ್ಥಗಳಾಗಿರಬೇಕು - ಎಂಬುದು ಕಾರ್ಯಕಾರಣವಾದಿಗಳ ನಂಬಿಕೆ ; ಆದರೆ ಆತ್ಮನು ದ್ರವ್ಯವಲ್ಲ, ಆತ್ಮನಿಗಿಂತ ವ್ಯತಿರಿಕ್ತವಾಗಿ ಯಾವ

ದೊಂದೂ ಇರುವದೇ ಇಲ್ಲ. ಹೀಗಿರುವಲ್ಲಿ ಕಾರ್ಯಕಾರಣವನ್ನು ಒಪ್ಪುವದು ಹೇಗೆ ಸರಿಯಾದೀತು ? ಆದ್ದರಿಂದ ಆತ್ಮರುಗಳಾಗಲಿ ಚಿತ್ತವಾಗಲಿ ಹುಟ್ಟುವದಿಲ್ಲ ವೆಂಬುದೇ ಪರಮಾರ್ಥವು.

೫೫-೭೪. ಹೇತುಫಲವೆಂಬ ಸಂಸಾರವು ನಿಜವಾಗಿ ಇಲ್ಲವೇ ಇಲ್ಲ; ಅದು ಇದೆ ಎಂಬ ಅಭಿಮಾನವೇ ಸಂಸಾರವು. ಅಜ್ಞಾನದೃಷ್ಟಿಯಿಂದ ಎಲ್ಲವೂ ಹುಟ್ಟುತ್ತದೆ, ಜ್ಞಾನದೃಷ್ಟಿಯಿಂದ ಯಾವದೂ ಹುಟ್ಟುವದಿಲ್ಲ. ಆತ್ಮರು ಹುಟ್ಟು ವಂತೆಯೂ ಸಾಯುವಂತೆಯೂ ತೋರುವದು ಕನಸು, ಮಾಯೆ, ಯೋಗಿಯ ನಿರ್ಮಾಣ - ಇವುಗಳಲ್ಲಿ ತೋರುವ ಜೀವರುಗಳ ಹುಟ್ಟುಸಾವುಗಳಂತೆ ಬರಿಯ ತೋರಿಕೆಯಾಗಿರುತ್ತದೆ. ಆತ್ಮರು ನಿತ್ಯರೊ, ಅನಿತ್ಯರೊ ? -ಎಂಬುದೂ ಪರಮಾರ್ಥಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ ; ಯಾವದೊಂದೂ ಹುಟ್ಟುವದಿಲ್ಲ ವೆಂಬುದೇ ಪರಮಾರ್ಥವು. ಚಿತ್ತವೂ ಚಿತ್ತದಿಂದ ಕಲ್ಪಿತವಾದದ್ದೆಲ್ಲವೂ - ಶಾಸ್ತ್ರ ಶಿಷ್ಯ, ಗುರು ಎಂಬ ಭೇದವು ಕೂಡ - ಪರಮಾರ್ಥವಾಗಿರುವದೇ ಇಲ್ಲ. ಆತ್ಮನು ಹುಟ್ಟುವವನಲ್ಲ ಎಂಬುದೂ ಪರಮಾರ್ಥವಲ್ಲ. ಅವನು ಹುಟ್ಟುತ್ತಾನೆಂದು ಹೇಳುವವರ ಕಲ್ಪನೆಯನ್ನು ಅಲ್ಲಗಳೆಯುವದಕ್ಕಾಗಿ ಆತ್ಮನು ಅಜನು ಎಂದು ಹೇಳುತ್ತೇವೆಯೇ ಹೊರತು ಮತ್ತೇನೂ ಇಲ್ಲ.

೭೫-೮೧. ದ್ವೈತವು ನಿಜವಾಗಿಲ್ಲದಿದ್ದರೂ ಅದು ಇದೆಯೆಂಬ ಅಭಿಮಾನದಿಂದಲೇ ಅದು ಇರುವಂತೆ ತೋರುತ್ತಿರುವದು. ಏಕೆಂದರೆ ಆಗ ಧರ್ಮಾಧರ್ಮಗಳೆಂಬ ನಿಮಿತ್ತವಿಲ್ಲದಿರುವದರಿಂದ ಹುಟ್ಟುವದೆಂಬ ಸಂಸಾರವೂ ಇರುವದಿಲ್ಲ. ಪರಮಾರ್ಥವಾಗಿ ದ್ವೈತವಿಲ್ಲವೇ ಇಲ್ಲ ಎಂಬುದನ್ನು ತಿಳಿದು ಕೊಂಡು ನಿಶ್ಚಲವಾಗಿರುವದು ಕೂಟಸ್ಥವಾದ ಬ್ರಹ್ಮವನ್ನು ಬಲ್ಲ ಜ್ಞಾನಿಗಳಿಗೆ ಮಾತ್ರ ಸಾಧ್ಯವಾಗುತ್ತದೆ.

೮೨-೮೬. ಆತ್ಮನ ನಿಜವಾದ ಸ್ವರೂಪವನ್ನು ತಿಳಿದುಕೊಳ್ಳುವದು ಕಷ್ಟ; ಅದನ್ನು ತಪ್ಪಾಗಿ ತಿಳಿದುಕೊಳ್ಳುವದು ಸುಲಭ. ಆತ್ಮನು ''ಇದಾನೆ'', ''ಇಲ್ಲ'' ''ಇದ್ದೂ ಇದಾನೆ, ಇಲ್ಲವೂ ಇಲ್ಲ'', ''ಇಲ್ಲವೇ ಇಲ್ಲ'' - ಎಂಬ ಬೇರೆಬೇರೆಯ ನಾಲ್ಕು ಬಗೆಯನ್ನು ವಾದಿಗಳು ಆತ್ಮನಲ್ಲಿ ಅವಿವೇಕದಿಂದ ಕಲ್ಪಿಸಿರುತ್ತಾರೆ. ಈ ತಪ್ಪುಕಲ್ಪನೆಗಳನ್ನು ಮೀರಿರುವ ಪರಮಾರ್ಥವನ್ನು ಬಲ್ಲವನೇ ಸರ್ವಜ್ಞನು, ಬ್ರಾಹ್ಮಣನು, ಕೃತಕೃತ್ಯನು, ವಿನೀತನು, ಶಾಂತನು, ದಾಂತನು.

೮೭-೯೦. ದ್ವೈತಿಗಳ ಯುಕ್ತಿಯಿಂದಲೇ **ಅಜಾತಿವಾದ**ವನ್ನು ಸಾಧಿಸಿದ್ದಾಯಿತು. ವೇದಾಂತಪ್ರಕ್ರಿಯೆಯಾದ ಅವಸ್ಥಾತ್ರಯಪರೀಕ್ಷೆಯ ದೃಷ್ಟಿಯಿಂದ ನೋಡಿದರಂತೂ ಅವಸ್ಥೆಗಳು ಒಂದರಲ್ಲೊಂದು ಲಯವಾಗಿ ಕೊನೆಗೆ ಅವಸ್ಥಾರಹಿತವಾದ ಆತ್ಮತತ್ತ್ವವೇ ಉಳಿಯುತ್ತದೆ. ಅವಸ್ಥೆಗಳು, ಪಾಂಡಿತ್ಯಬಾಲ್ಯಮೌನಗಳೆಂಬ ಸಾಧನಗಳು, ಶಮಾದಿಗಳು - ಇವೆಲ್ಲವೂ ಸಾಧಕನ ದೃಷ್ಟಿಯಿಂದ ಬೇಕಾದವುಗಳಾದರೂ ಇವುಗಳು ಕೂಡ ಅವಿದ್ಯಾಕಾರ್ಯವೇ ಆಗಿರುತ್ತವೆ ; ಕೂಟಸ್ಥಚೈತನ್ಯವಾದ ಬ್ರಹ್ಮಾತ್ಮನೆಂಬ ತತ್ತ್ವವೊಂದೇ ಪರಮಾರ್ಥವಾಗಿರುತ್ತದೆ.

೯೧-೧೦೦. ಅಜಾದ್ವಿತೀಯವಾದ ಬ್ರಹ್ಮವೊಂದೇ ಸತ್ಯವು. ಅದು ನಿತ್ಯಶುದ್ಧಬುದ್ಧಮುಕ್ತಸ್ವಭಾವವಾಗಿರುತ್ತದೆ ; ಅದೇ ನಮ್ಮಗಳೆಲ್ಲರ ಆತ್ಮನು. ಹೀಗೆಂದು ತಿಳಿದವರು ಮಹಾಜ್ಞಾನಿಗಳು ; ಮಿಕ್ಕವರು ಕೃಪಣರು. ನಮ್ಮಗಳ ಆತ್ಮನಾಗಿ ನಿತ್ಯವೂ ಕೂಟಸ್ಥವೂ ಆಗಿರುವ ಅದ್ವಿತೀಯಚೈತನ್ಯವನ್ನು ಬೋಧಿಸಿರುವದೇ ವೇದಾಂತದ ವಿಶೇಷವು. ಇದನ್ನು ತಿಳಿದುಕೊಂಡರೆ ಗೌತಮಬುದ್ಧನು ಉಪದೇಶಿಸಿರುವ ವಿಜ್ಞಾನಕ್ಕೂ ವೇದಾಂತಿಗಳು ಹೇಳಿರುವ ಆತ್ಮತತ್ತ್ವಕ್ಕೂ ಇರುವ ತಾರತಮ್ಯವು ಸ್ಫುಟವಾಗಿ ತಿಳಿದಂತಾಗುವದು.

ಐತರೇಯೋಪನಿಷತ್

ಪೀಠಿಕೆ

ಉಪನಿಷತ್ತಿನ ಸ್ಥಾನ

ಐತರೇಯೋಪನಿಷತ್ತು ಋಗ್ವೇದಕ್ಕೆ ಸೇರಿದ್ದು. ಋಗ್ವೇದದ ಸಂಹಿತೆಯು **ಶಾಕಲಸಂಹಿತೆ**ಯೆಂದೂ **ಶಾಂಖಾಯನಸಂಹಿತೆ**ಯೆಂದೂ ಎರಡು ಬಗೆಯಾಗಿರುವಂತೆ ತೋರುತ್ತದೆ. ಶಾಕಲಸಂಹಿತೆಯ ಮಂತ್ರಗಳನ್ನು ವಿವರಿಸುವ ಭಾಗಕ್ಕೆ **ಐತರೇಯಬ್ರಾಹ್ಮಣ**ವೆಂದು ಹೆಸರು. ಶಾಂಖಾಯನಸಂಹಿತೆಯು ಈವರೆಗೆ ನಮಗೆ ದೊರಕಿರುವದಿಲ್ಲ ; ಆದರೆ ಶಾಂಖಾಯನಬ್ರಾಹ್ಮಣವು ಆನಂದಾಶ್ರಮ ಗ್ರಂಥಾವಳಿಯಲ್ಲಿ ಮುದ್ರಿತವಾಗಿರುತ್ತದೆ. ಬ್ರಾಹ್ಮಣಗಳಿಗೆ ಪರಿಶಿಷ್ಟವಾಗಿ ಆರಣ್ಯಕಗಳು ಸೇರಿಕೊಂಡಿವೆ. ಐತರೇಯಬ್ರಾಹ್ಮಣದ ಆರಣ್ಯಕದಲ್ಲಿ ಪ್ರಕೃತವಾದ ಈ ಉಪನಿಷತ್ತು ಕಂಡುಬಂದಿದೆ. ಆದ್ದರಿಂದ ಇದಕ್ಕೆ **ಐತರೇಯೋಪನಿಷತ್ತು** ಎಂಬ ಹೆಸರು ಬಂದಿದೆ. 'ಐತರೇಯ' ಎಂಬ ಹೆಸರು 'ಇತರಾ' ಎಂಬಾಕೆಯ ಮಗನಾದ ''ಮಹಿದಾಸ''ನೆಂಬ ಸಂಪ್ರದಾಯಪ್ರವರ್ತಕನಾದ ಋಷಿಯಿಂದ ಬಂದದ್ದು. ಐತರೇಯಾರಣ್ಯಕದಲ್ಲಿ ಒಟ್ಟು ಐದು ಭಾಗಗಳಿವೆ. ಒಂದನೆಯ ಆರಣ್ಯಕದಲ್ಲಿ **ಮಹಾವ್ರತ**ವೆಂಬ ಕರ್ಮದ ವಿಚಾರವಿದೆ. ಎರಡನೆಯ ಆರಣ್ಯಕದಲ್ಲಿ ಪ್ರಾಣೋಪಾಸನೆಯೂ ಆತ್ಮವಿಚಾರವೂ ಇದೆ ಮೂರನೆಯ ಆರಣ್ಯಕದಲ್ಲಿ ಸಂಹಿತಾವಿಷಯಕವಾದ ಉಪಾಸನೆಯನ್ನು ಹೇಳಿದೆ. ನಾಲ್ಕನೆಯ ಆರಣ್ಯಕ ದಲ್ಲಿಯೂ ಐದನೆಯ ಆರಣ್ಯಕದಲ್ಲಿಯೂ ಮಹಾವ್ರತದ ವಿವರಗಳಿವೆ.

ಭಾಷ್ಯದ ವಿಚಾರಕ್ಷೇತ್ರ

ಮೇಲೆ ಕೊಟ್ಟಿರುವ ವಿಂಗಡದಿಂದ ಎರಡನೆಯ ಆರಣ್ಯಕದಲ್ಲಿ ಮಾತ್ರವೇ ಉಪನಿಷತ್ತಿಗೆ ಬೇಕಾದ ಮುಖ್ಯವಾದ ಆತ್ಮವಿಚಾರವು ಅಡಕವಾಗಿರುವದೆಂದು ಕಂಡುಬರುತ್ತದೆಯಷ್ಟೆ. ಆದ್ದರಿಂದಲೇ ಶಂಕರಾಚಾರ್ಯರವರು ಈ ಭಾಗಕ್ಕೇ ಭಾಷ್ಯವನ್ನು ಬರೆದಿರುತ್ತಾರೆ. ಆದರೆ ಅವರು ಭಾಷ್ಯವನ್ನು ಗ್ರಂಥದ ಯಾವ ಭಾಗದಿಂದ ಪ್ರಾರಂಭಿಸಿರುತ್ತಾರೆ ?- ಎಂಬ ಬಗ್ಗೆ ಸಂಶಯಕ್ಕೆಡೆಯಿದೆ. ಏಕೆಂದರೆ

ಈಗ ಅಚ್ಚಾಗಿರುವ ಭಾಗದಲ್ಲಿ ಉಪನಿಷತ್ತಿನ ಸಂಬಂಧಭಾಷ್ಯವು ಪ್ರಾರಂಭವನ್ನು ಸೂಚಿಸುವದಿಲ್ಲ. ಹಿಂದಿನ ಭಾಗಕ್ಕೂ ಆಚಾರ್ಯರು ಭಾಷ್ಯವನ್ನು ಬರೆದಿರಬಹುದೆಂಬ ಕಲ್ಪನೆಗೆ ಅವಕಾಶವನ್ನು ಕೊಡುವ ಎರಡು ವಾಕ್ಯಗಳು ಇಲ್ಲಿ ಕಂಡು ಬರುತ್ತವೆ. ಹೇಗೆಂದರೆ :

(೧) **''ತಸ್ಮಾತ್ ಏಷ ಪನ್ಥಾ ಏತತ್ ಕರ್ಮೈತತ್ಸತ್ಯಮ್ ಯದೇತತ್ಪರಬ್ರಹ್ಮವಿಜ್ಞಾನಮ್''** (ಭಾ. ಭಾ. ೩೭). ಇಲ್ಲಿ ಹಿಂದೆ (೨-೧-೧ರಲ್ಲಿ) ಹೇಳಿದ್ದಕ್ಕೆ ಕಾರಣವಾಗಿ ದೇವತೆಗಳೂ ಸಂಸಾರಿಗಳೆಂಬ ವಾಕ್ಯದರ್ಥವನ್ನು ಸಂಬಂಧಿಸಿರುತ್ತದೆ. ಈ ವಾಕ್ಯಕ್ಕೆ ವ್ಯಾಖ್ಯಾನಕಾರರು ತಮ್ಮ ಟೀಕೆಯಲ್ಲಿ ''ಯದ್ಯಪ್ಯೇತದ್ವಾಕ್ಯವ್ಯಾಖ್ಯಾನಾವಸರೇ ಕರ್ಮಮಾರ್ಗೋಽಪಿ ಪಥಿಶಬ್ದಾರ್ಥತ್ವೇನೋಕ್ತಃ, ತಥಾಪಿ ಜ್ಞಾನಮಾರ್ಗೋಪಾಯತ್ವೇನ ಸ ಉಕ್ತಃ, ನ ಪ್ರಾಧಾನ್ಯೇನ- ಇತಿ ಭಾವಃ'' (ಈ ವಾಕ್ಯಕ್ಕೆ ವ್ಯಾಖ್ಯಾನಮಾಡುವ ಕಾಲದಲ್ಲಿ ಭಾಷ್ಯದಲ್ಲಿ 'ಪನ್ಥಾಃ' ಎಂಬುದಕ್ಕೆ ಕರ್ಮಮಾರ್ಗವೂ ಅರ್ಥವಾಗುವದೆಂದು ಹೇಳಿತ್ತಾದರೂ ಅದು ಜ್ಞಾನಮಾರ್ಗಕ್ಕೆ ಉಪಾಯವೆಂಬ ದೃಷ್ಟಿಯಿಂದಲೇ ಹಾಗೆ ಹೇಳಿದೆಯೇ ಹೊರತು ಅದೇ ಮುಖ್ಯವೆಂಬ ಅಭಿಪ್ರಾಯದಿಂದಲ್ಲ ಎಂದು ಭಾವ). ಎಂದು ಬರೆದಿರುತ್ತಾರೆ. ಅದನ್ನು ನೋಡಿದರೆ ಟೀಕಾಕಾರರಿಗೆ ಭಾಷ್ಯವು ''ಏಷ ಪನ್ಥಾಃ'' ಎಂಬ ವಾಕ್ಯದಿಂದಲೂ ಆರಂಭಿಸಿದೆ ಎಂಬ ಅಭಿಪ್ರಾಯವಿತ್ತೆಂದು ಹೇಳಬೇಕಾಗುತದೆ.

(೨) **''ಕರಣಸಂಹತಿರೂಪಶ್ಚ ಪ್ರಾಣಃ ಇತ್ಯವೋಚಾಮ ಪ್ರಾಣಸಂವಾದಾದೌ ॥''** (ಭಾ. ಭಾ. ೮೫). ಇಲ್ಲಿ 'ಪ್ರಾಣಸಂವಾದದ ಮೊದಲಿನಲ್ಲಿ' ಪ್ರಾಣವೆಂದರೆ ಕರಣಗಳ ಸಂಘಾತವು ಎಂದು ಹೇಳಿರುತ್ತೇವೆ - ಎಂದದ್ದರಿಂದ ಹಿಂದೆ (೨-೧-೪ರಲ್ಲಿ) ಮಿಕ್ಕ ಕರಣಗಳೆಲ್ಲವೂ ಪ್ರಾಣವೇ ಉಕ್ತನೆಂದೂ ತಾವೆಲ್ಲರೂ ಪ್ರಾಣನನ್ನೇ ಅವಲಂಬಿಸಿದವರೆಂದೂ ಒಪ್ಪಿಕೊಂಡದ್ದರ ಪರಾಮರ್ಶವಿದೆ. ''ಹೀಗೆಂದು ಹೇಳಿರುತ್ತೇವೆ'' ಎಂಬ ಮಾತು ಆ ಭಾಗಕ್ಕೂ ಆಚಾರ್ಯರು ಭಾಷ್ಯವನ್ನು ಬರೆದಿದಾರೆಂಬ ಊಹೆಗೆ ಅವಕಾಶವನ್ನು ಕೊಡುವಂತಿದೆ.

ಹಿಂದಿನ ಮೂರು ಅಧ್ಯಾಯಗಳ ಸಂಬಂಧವನ್ನು ಈ ಭಾಷ್ಯದಲ್ಲಿ ಮತ್ತೆಮತ್ತೆ ವಿಚಾರಮಾಡಿರುತ್ತದೆ. ಆ ಅಧ್ಯಾಯಗಳಲ್ಲಿರುವ ಕೆಲವು ವಾಕ್ಯಗಳು ಮಿಕ್ಕ ಉಪನಿಷತ್ತುಗಳ ಮತ್ತು ಬ್ರಹ್ಮಸೂತ್ರದ ಭಾಷ್ಯಗಳಲ್ಲಿಯೂ ಆಗಾಗ್ಗೆ

ಉದಾಹೃತವಾಗಿರುತ್ತವೆ. ಆಚಾರ್ಯರು ಈ ಮೂರು ಅಧ್ಯಾಯಗಳಿಗೂ ಭಾಷ್ಯವನ್ನು ಬರೆದಿರಬಹುದೆಂಬ ತರ್ಕಕ್ಕೆ ಇದೂ ಬೆಂಬಲವನ್ನು ಕೊಡುತ್ತದೆ.

ಐತರೇಯೋಪನಿಷತ್ತನ್ನು **"ಆತ್ಮಷಟ್ಕ"**ವೆಂದು ಕರೆಯುವ ರೂಢಿಯೊಂದು ಇರುತ್ತದೆ. "ಆತ್ಮಾ ವಾ ಇದಮಗ್ರ ಆಸೀತ್" ಎಂಬಲ್ಲಿಂದಲೇ ಉಪನಿಷತ್ತು ಮೊದಲಾಗಿರುವದೆಂದು ಇಟ್ಟುಕೊಂಡರೆ ಈ ಹೆಸರು ಉಪನಿಷತ್ತಿಗೆ ಏತಕ್ಕೆ ಬಂದಿರಬಹುದು ಎಂಬುದನ್ನು ಗೊತ್ತುಪಡಿಸುವದು ಕಷ್ಟವಾಗುತ್ತದೆ. ಈ ಗ್ರಂಥದಲ್ಲಿ ಆರು ಅಧ್ಯಾಯಗಳಾಗಲಿ ಆರು ಖಂಡಗಳಾಗಲಿ ಇರುವದಿಲ್ಲ. "ವಾಙ್ಮೇ ಮನಸಿ" ಎಂಬ ಮುಂದಿನ ಖಂಡವನ್ನೂ ಸೇರಿಸಿ ಆರು ಖಂಡಗಳಾಯಿತು ಎನ್ನುವವರಿಗೆ ನಾಲ್ಕು ಅಧ್ಯಾಯಗಳಿರುವದರಿಂದ ಆತ್ಮಚತುಷ್ಕವೆಂಬ ಹೆಸರೇಕೆ ಬಂದಿಲ್ಲ ?- ಎಂಬ ಶಂಕೆಗಾಗಲಿ ಭಾಷ್ಯಕಾರರೇಕೆ ಐದನೆಯ ಖಂಡದ ಕೊನೆಯಲ್ಲಿಯೇ ತಮ್ಮ ಭಾಷ್ಯವನ್ನು ಮುಗಿಸಿದರು ? ಎಂಬ ಶಂಕೆಗಾಗಲಿ ಪರಿಹಾರವು ದೊರಕುವದಿಲ್ಲ. ಆದ್ದರಿಂದ ಹಿಂದಿನ ಮೂರು ಅಧ್ಯಾಯಗಳೂ ಈ ಮೂರು ಅಧ್ಯಾಯಗಳೂ ಸೇರಿ ಪರಾಪರಬ್ರಹ್ಮರೂಪನಾದ ಪರಮಾತ್ಮನ ವಿಚಾರವನ್ನು ಮಾಡುವದರಿಂದ ಇದಕ್ಕೆ ಆತ್ಮಷಟ್ಕವೆಂದು ಹೆಸರು ಬಂದಿದೆ ಎಂದು ಬಗೆಯುವದು ಹೆಚ್ಚು ಯುಕ್ತವಾಗಿರುತ್ತದೆ. ಈ ಉಪನಿಷತ್ತಿನ ಭಾಷ್ಯವನ್ನು ಅರ್ಥಮಾಡಿಕೊಳ್ಳುವದಕ್ಕೆ ಈ ಆರು ಅಧ್ಯಾಯಗಳನ್ನೂ ಒಟ್ಟುಗೂಡಿಸಿಕೊಂಡು ನೋಡುವದು ಅವಶ್ಯ ವೆಂಬುದನ್ನು ಓದುಗರು ಲಕ್ಷ್ಯದಲ್ಲಿಟ್ಟಿರಬೇಕು. ಆಚಾರ್ಯರು ಈ ಆರು ಅಧ್ಯಾಯಗಳ ಅಭಿಪ್ರಾಯವನ್ನೂ ಒಟ್ಟಾಗಿಯೇ ಇಟ್ಟುಕೊಂಡು ವಿಚಾರಮಾಡಿ ರುತ್ತಾರೆಂಬುದು ಸ್ಪಷ್ಟವಾಗಿರುತ್ತದೆ.

ಭಾಷ್ಯದಲ್ಲಿ ಮುಖ್ಯಾಂಶಗಳು

ಈ ಉಪನಿಷತ್ತಿನಲ್ಲಿ ಮುಖ್ಯವಾಗಿ ಕರ್ಮಸಂಬಂಧವಿಲ್ಲದ ಆತ್ಮನ ವಿಚಾರವನ್ನೇ ಹೇಳಿದೆ ಎಂಬುದೊಂದು, ಆತ್ಮನು ಅದ್ವಿತೀಯನಿರ್ವಿಶೇಷ ಚಿನ್ಮಾತ್ರನು ಎಂಬುದೊಂದು - ಹೀಗೆ ಮುಖ್ಯವಾಗಿ ಎರಡು ವಿಚಾರಗಳನ್ನು ಭಾಷ್ಯಕಾರರು ಚರ್ಚೆಗೆ ತೆಗೆದುಕೊಂಡಿರುತ್ತಾರೆ. ಇವೆರಡೂ ಸಿದ್ಧಾಂತಕ್ಕೆ ಅಡಿಗಟ್ಟಾಗಿರುವದರಿಂದ ಇವುಗಳ ವಿಷಯಕ್ಕೆ ಭಾಷ್ಯದಲ್ಲಿ ಅನುಸರಿಸಿರುವ ವಿಚಾರ ಸರಣಿಯನ್ನು ಸಂಕ್ಷೇಪವಾಗಿ ನಿರೂಪಣೆಮಾಡುವದು ಪ್ರಯೋಜನಕರವಾಗಿರುತದೆ.

(ಅ) ಕೇವಲಾತ್ಮಜ್ಞಾನ

ಎರಡನೆಯ ಆರಣ್ಯಕದಲ್ಲಿ ಪ್ರಾಣನೆಂಬ ಅಪರಬ್ರಹ್ಮದ ಉಪಾಸನೆಯಿದೆಯಾದ್ದರಿಂದಲೂ ಅದನ್ನು ಕರ್ಮಕ್ಕೆ ಸಂಬಂಧಪಡಿಸಿಯೇ ಉಪದೇಶಮಾಡಿರುವದರಿಂದಲೂ ಈ ಉಪನಿಷತ್ತು ಮುಗಿದಬಳಿಕ ಮತ್ತೆ ಸಂಹಿತೋಪಾಸನೆಯೇ ಮುಂತಾದವುಗಳನ್ನು ಹೇಳಿರುವದರಿಂದಲೂ ನಡುವೆ ಉಪನಿಷತ್ತಿನಲ್ಲಿರುವ ಆತ್ಮಜ್ಞಾನವೂ ಕರ್ಮಕ್ಕೆ ಸಂಬಂಧಪಟ್ಟದ್ದೇ ಎಂದು ಜ್ಞಾನಕರ್ಮಸಮುಚ್ಚಯವಾದಿಗಳು ಕಲ್ಪಿಸಿರುತ್ತಾರೆ.

ಪೂರ್ವಪಕ್ಷಿಗಳ ಅಭಿಪ್ರಾಯವೇನೆಂದರೆ :- ಹಿಂದಿನ ಭಾಗದಲ್ಲಿ ಪ್ರಾಣನು ಸರ್ವಾತ್ಮನು ಎಂದು ಉಪಸಂಹಾರಮಾಡಿರುವಂತೆ ಇಲ್ಲಿಯೂ ಆತ್ಮನು ಸರ್ವರ ಆತ್ಮನೆಂದು ಉಪಸಂಹಾರಮಾಡಿರುತ್ತದೆ. ಅಲ್ಲಿ ಸೂರ್ಯನಲ್ಲಿರುವ ಪ್ರಾಣನೂ ನಮ್ಮ ಶರೀರದಲ್ಲಿರುವ ಪ್ರಜ್ಞಾತ್ಮನೂ ಒಬ್ಬನೇ ಎಂದು ಹೇಳಿರುವಂತೆ ಇಲ್ಲಿಯೂ ಪ್ರಜ್ಞಾನವು ಬ್ರಹ್ಮವು ಎಂದು ಹೇಳಿರುತ್ತದೆ. ಉಪನಿಷತ್ತಿನ ಮುಂದೆ ಬರುವ ಸಂಹಿತೋಪನಿಷತ್ತಿನಲ್ಲಿಯೂ ಎಲ್ಲರ ಆತ್ಮನಾಗಿರುವ ಬ್ರಹ್ಮವು ಪ್ರಾಣವೇ ಎಂದು ಹೇಳಿರುತ್ತದೆ. ಆದ್ದರಿಂದ ಸಗುಣಬ್ರಹ್ಮವು ಜಗಜ್ಜನ್ಮಾದಿಕಾರಣವೆಂದು ಉಪಾಸನೆಮಾಡಬೇಕೆಂದು ತಿಳಿಸುವದಕ್ಕೆ, ಅಥವಾ ಕರ್ಮವನ್ನು ಮಾಡದೆ ಇರುವಾಗ ಬರಿಯ ಆತ್ಮನನ್ನೇ ಉಪಾಸನೆಮಾಡಬೇಕೆಂದು ತಿಳಿಸುವದಕ್ಕೆ ಅಥವಾ ಈ ಆತ್ಮನು ತನಗಿಂತ ಬೇರೆಯಲ್ಲವೆಂದೂ ಉಪಾಸನೆಮಾಡಬೇಕೆಂದು ತಿಳಿಸುವದಕ್ಕೆ ಉಪನಿಷತ್ತು ಬಂದಿರುತ್ತದೆ. ಕರ್ಮತ್ಯಾಗಪೂರ್ವಕವಾಗಿ ಆತ್ಮಜ್ಞಾನವನ್ನು ಸಂಪಾದಿಸಬೇಕೆಂದು ಇಲ್ಲಿ ಹೇಳಿಯೇ ಇಲ್ಲ ; ಕರ್ಮದೊಡನೆ ಆತ್ಮೋಪಾಸನೆಯನ್ನೂ ಮಾಡಬೇಕೆಂಬುದು ಉಪನಿಷತ್ತಿನ ತಾತ್ಪರ್ಯವು. ಮನುಷ್ಯನು ಬದುಕಿರುವವರೆಗೆ ಕರ್ಮವನ್ನು ಮಾಡುತ್ತಲೇ ಇರಬೇಕೆಂದೂ ಹುಟ್ಟಿದವರೆಲ್ಲ ಋಣತ್ರಯವನ್ನು ತೀರಿಸಲೇಬೇಕೆಂದೂ ಕರ್ಮವನ್ನು ವಿಧಿಸುವ ಶ್ರುತಿಯೂ ಈ ಅಭಿಪ್ರಾಯಕ್ಕೆ ಬೆಂಬಲವಾಗಿರುತ್ತದೆ.

ಇದಕ್ಕೆ **ಸಿದ್ಧಾಂತಿಯ ಉತ್ತರವೇನೆಂದರೆ :-** ಎಲ್ಲರ ಆತ್ಮನಾದ ಬ್ರಹ್ಮದ ಜ್ಞಾನವನ್ನು ಇಲ್ಲಿ ಹೇಳಿರುತ್ತದೆ, ಉಪಾಸನೆಯನ್ನು ಹೇಳಿಲ್ಲ. ಈ ಆತ್ಮಜ್ಞಾನವುಂಟಾದ ಬಳಿಕ ಕರ್ಮದಿಂದ ಆಗುವ ಪ್ರಯೋಜನವು ಬೇಕಾಗುವದೇ ಇಲ್ಲ. ಆದ್ದರಿಂದ ಈ ಜ್ಞಾನವು ಕರ್ಮಿಗೆ ಹೇಳಿದ್ದಲ್ಲ. ಬದುಕಿರುವವರೆಗೆ

ಕರ್ಮವನ್ನು ಮಾಡಬೇಕೆಂದು ವಿಧಿಸಿರುವದೂ ಋಣತ್ರಯವನ್ನು ತೀರಿಸಲೇ ಬೇಕೆಂದು ವಿಧಿಸಿರುವದೂ ಆತ್ಮಜ್ಞಾನಿಗಳಲ್ಲದವರಿಗಾಗಿ. ಆತ್ಮಜ್ಞಾನವಿಲ್ಲದವರು ಕೂಡ ವಿರಕ್ತರಾದರೆ ಕರ್ಮಸಂನ್ಯಾಸವನ್ನು ಮಾಡಿ ಆತ್ಮನಿಷ್ಠೆಯನ್ನು ಸಂಪಾದಿಸಿ ಕೊಳ್ಳಬೇಕೆಂದು ಶ್ರುತಿಯಲ್ಲಿದೆ ; ಆದ್ದರಿಂದ ಮುಮುಕ್ಷುಗಳಲ್ಲದ ಅಜ್ಞರಿಗೆ ಮಾತ್ರ ಕರ್ಮವಿಧಿಯು ಸಂಬಂಧಿಸಿರುತ್ತದೆ ಎಂದು ತಿಳಿಯಬೇಕು. ಕರ್ಮೋಪಾಸನೆಗಳ ಸಮುಚ್ಚಯಕ್ಕೆ **'ದೇವತಾಪ್ಯಯ'** (ಉಪಾಸನೆಮಾಡಿದ ದೇವತೆಗಳಲ್ಲಿ ಸೇರಿಹೋಗುವದು) ಎಂಬುದು ಪರಮಫಲವು. ಆದರೆ ದೇವತೆಗಳೂ ಸಂಸಾರಕ್ಷೇತ್ರದಲ್ಲಿಯೇ ಇರುವದರಿಂದ ಸಮುಚ್ಚಯದಿಂದಲೂ ಮುಕ್ತಿಯು ದೊರಕಲಾರದು. ಕರ್ಮವನ್ನು ಮಾಡಿ ಚಿತ್ತಶುದ್ಧಿಯನ್ನು ಹೊಂದಿ ಜ್ಞಾನದಿಂದ ಮುಕ್ತಿಯನ್ನೂ ಪಡೆದುಕೊಳ್ಳಬೇಕೆಂಬುದು ಶ್ರುತಿಯ ಅಭಿಪ್ರಾಯವೇ ಹೊರತು ಕರ್ಮವನ್ನೂ ಜ್ಞಾನವನ್ನೂ ಒಬ್ಬನೇ ಒಂದೇ ಕಾಲದಲ್ಲಿ ಸೇರಿಸಿ ಅನುಷ್ಠಾನ ಮಾಡಬೇಕೆಂಬುದಲ್ಲ. ಕರ್ಮವು ಆತ್ಮನನ್ನು ಅರಿಯದ್ದರ ಫಲವಾದ್ದರಿಂದ ಕರ್ಮವೂ ಜ್ಞಾನವೂ ಒಂದೇ ಕಾಲದಲ್ಲಿ ಒಬ್ಬನಲ್ಲಿಯೇ ಇರಲೂ ಆರವು. ಹಿಂದಿನ ಗ್ರಂಥಭಾಗದಲ್ಲಿ ಹೇಳಿರುವ ಪ್ರಾಣನು ಸವಿಶೇಷನಾಗಿರುತ್ತಾನೆ ; ಅವನು ಸರ್ವಜೀವರ ಕರಣಾತ್ಮನಾಗಿರುತ್ತಾನೆ. ಈ ಉಪನಿಷತ್ತಿನ ಭಾಗದಲ್ಲಿ ಹೇಳಿರುವ ಆತ್ಮನು ನಿರ್ವಿಶೇಷಚಿನ್ಮಾತ್ರನು ; ಅವನು ಜೀವರುಗಳ ಪರಮಾರ್ಥ ಸ್ವರೂಪವೇ ಆಗಿರುತ್ತಾನೆ. ಆದ್ದರಿಂದ ಆರಣ್ಯಕದ ಈ ಎರಡು ಭಾಗಗಳಲ್ಲಿ ಹೇಳಿರುವ ಆತ್ಮಜ್ಞಾನವೂ ಅವುಗಳ ಫಲವಾದ ಸರ್ವಾತ್ಮಭಾವವೂ ಬೇರೆ ಬೇರೆಯ ಜಾತಿಯವಾಗಿರುತ್ತವೆ. ಆದಕಾರಣ ಹಿಂದೆ ಹೇಳಿರುವ ಆತ್ಮಜ್ಞಾನವು ಕರ್ಮಕ್ಕೆ ಸಂಬಂಧಪಟ್ಟಿದ್ದರೂ ಇಲ್ಲಿ ಹೇಳಿರುವ ಜ್ಞಾನವು ಕರ್ಮಕ್ಕೆ ಸಂಬಂಧಪಟ್ಟಿದ್ದಲ್ಲವೆಂದೇ ನಿಶ್ಚಯಿಸಬೇಕು.

(ಆ) ನಿರ್ವಿಶೇಷಚಿನ್ಮಾತ್ರವಾದ

ಆತ್ಮನು ಜಗತ್ತೆಲ್ಲವನ್ನೂ ಸೃಷ್ಟಿಮಾಡಿ ಅದರಲ್ಲಿ ಜೀವರೂಪದಿಂದ ಒಳಹೊಕ್ಕು ಸಂಸಾರಮಾಡುತ್ತಿದ್ದು ವಿಚಾರದಿಂದ ನಾನು ಚಿನ್ಮಾತ್ರಸ್ವರೂಪನು ಎಂದು ಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ ಎಂದು ಈ ಉಪನಿಷತ್ತಿನಲ್ಲಿ ವರ್ಣಿಸಿದೆಯಷ್ಟೆ. ಇದರ ಅಭಿಪ್ರಾಯವನ್ನು ಸ್ಪಷ್ಟಗೊಳಿಸುವದಕ್ಕಾಗಿ ಆಚಾರ್ಯರು ಬರೆದಿರುವದರ ಸಾರವೇನೆಂದರೆ :-

ಆತ್ಮನೆಂದರೆ ನಮ್ಮ ಸ್ವರೂಪವೇ. ಅವನಲ್ಲಿ ಶಬ್ದವೇ ಮುಂತಾದ ಗುಣಗಳು ಯಾವವೂ ಇಲ್ಲದ್ದರಿಂದ ಅವನನ್ನು ಪ್ರತ್ಯಕ್ಷದಿಂದಲಾಗಲಿ ಅನುಮಾನ ದಿಂದಲಾಗಲಿ ಅರಿಯುವದಕ್ಕೆ ಆಗುವದಿಲ್ಲ. ನಾವು ಜೀವರೆಂದೂ ಶ್ರವಣಮನನ ವಿಜ್ಞಾನಾದಿಧರ್ಮಗಳುಳ್ಳವರೆಂದೂ ತಿಳಿಯುವದು ಅಂತಃಕರಣದ ಶ್ರವಣಾದಿ ರೂಪವಾದ ವೃತ್ತಿಗಳಿಂದಾದ ಭ್ರಾಂತಿಯು. ಶ್ರವಣಾದಿಗಳಿಂದ ಆಗುವಂತೆ ತೋರುವ ಅರಿವು ನಮ್ಮ ಸ್ವರೂಪವೇ ಆಗಿರುವದರಿಂದ ಅದು ನಿತ್ಯವಾಗಿರುತ್ತದೆ; 'ಶ್ರವಣಮಾಡಿದೆನು' ಎಂದು ಅನಿತ್ಯವಾಗಿ ತೋರುವದು ಅಂತಃಕರಣದ ವೃತ್ತಿಯು, ಆತ್ಮನ ಅರಿವಲ್ಲ. ನಿತ್ಯವಾದ ಅರಿವು, ಅನಿತ್ಯವಾದ ವೃತ್ತಿ - ಇವುಗಳೆರಡನ್ನೂ ಬಿಡಿಸಿ ತಿಳಿದುಕೊಳ್ಳಲಾರದೆ ಜನರು ಆತ್ಮನ ವಿಷಯಕ್ಕೆ ಬಗೆಬಗೆಯ ವಿಕಲ್ಪಗಳನ್ನು ಮಾಡುತ್ತಿರುವರು. ಆತ್ಮನಲ್ಲಿ ಗುಣಗಳನ್ನೂ ಜೀವ, ಈಶ್ವರ, ಬ್ರಹ್ಮ - ಎಂದು ಭೇದವನ್ನೂ ಕಲ್ಪಿಸಿರುವದು ಈ ಅಜ್ಞಾನದಿಂದಲೇ. ಸರಿಯಾಗಿ ನೋಡಿದರೆ ಆತ್ಮನನ್ನಾಗಲಿ ಆತ್ಮನ ಭೇದಗಳನ್ನಾಗಲಿ ಧರ್ಮಗಳ ನ್ನಾಗಲಿ ಅರಿಯುವದಕ್ಕೆ ಯಾವ ಪ್ರಮಾಣವೂ ಸಾಧಕವಾಗಲಾರದು. ಏಕೆಂದರೆ ಪ್ರಮಾಣವು ಪ್ರಮೇಯವನ್ನು ವಿಷಯೀಕರಿಸೀತೇ ಹೊರತು ಪ್ರಮಾತೃವಿನ ಸ್ವರೂಪವನ್ನು ಎಂದಿಗೂ ವಿಷಯೀಕರಿಸಲಾರದು. ಆತ್ಮನು ತಾನೇ ತನ್ನ ಸ್ವರೂಪವನ್ನು ಅರಿಯುವದಕ್ಕೆ ತನ್ನಲ್ಲಿ ಎರಡು ಅಂಶಗಳಿರಬೇಕಾಗುವದು ; ಅಥವಾ ತನ್ನನ್ನು ಅರಿಯುವದಕ್ಕೆ ತನಗಿಂತ ಬೇರೆಯಾಗಿರುವ ಮತ್ತೊಂದು ಅರಿವು ಇದೆ ಎಂದರೆ ಅದನ್ನು ಅರಿಯುವದಕ್ಕೆ ಮತ್ತೊಂದು, ಅದನ್ನು ಅರಿಯುವದಕ್ಕೆ ಮತ್ತೊಂದು- ಹೀಗೆ ಕೊನೆಯಿಲ್ಲದೆ ಅರಿವುಗಳ ಸಾಲು ಬೇಕಾಗುವದು. ಇವೆರಡೂ ಆಗುವಹಾಗಿಲ್ಲವಾದ್ದರಿಂದ ನಿತ್ಯಚೈತನ್ಯಸ್ವರೂಪನಾದ ಆತ್ಮನನ್ನು ಅರಿಯುವದಕ್ಕೆ ಮತ್ತೆ ಯಾವ ಪ್ರಮಾಣವೂ ಬೇಕಿಲ್ಲನೆಂದು ನಿಶ್ಚಯಿಸಬೇಕು. ಆತ್ಮನಲ್ಲಿ ಕಲ್ಪಿಸಿರುವ ಅನಾತ್ಮವನ್ನೂ ಅನಾತ್ಮಧರ್ಮಗಳನ್ನೂ ಅಲ್ಲಗಳೆಯುವ ಶಾಸ್ತ್ರದ ಪ್ರಮಾಣದಿಂದ ಆತ್ಮನು ನಿರ್ವಿಶೇಷಚಿನ್ಮಾತ್ರನೇ ಎಂದು ಮನಗಾಣ ಬೇಕು. ಇದೇ ಆತ್ಮಸಾಕ್ಷಾತ್ಕಾರವು.

(೫) ಶಾಸ್ತ್ರಪ್ರಾಮಾಣ್ಯ

ಹೀಗೆ ಆತ್ಮನಲ್ಲಿಲ್ಲದ ಧರ್ಮಗಳನ್ನು ಅಲ್ಲಗಳೆಯುವದರಿಂದಮಾತ್ರವೇ ಶಾಸ್ತ್ರವು ಆತ್ಮನ ವಿಷಯಕ್ಕೆ ಪ್ರಮಾಣವೆನಿಸಿರುತ್ತದೆ. ಶಾಸ್ತ್ರವು ವಿಧಿಪರವೆಂದೂ

ಅದು ಜ್ಞಾನಿಯನ್ನೂ ವಿಧಿಗೆ ಕಟ್ಟುಬೀಳಿಸುವದೆಂದೂ ಕೆಲವರು ಬಗೆಯುತ್ತಾರೆ. ಅದು ಸರಿಯಲ್ಲ. ಏಕೆಂದರೆ ಶಾಸ್ತ್ರವು ಜೀವನ ಪರಮಾರ್ಥಸ್ವರೂಪವು ಪರಮಾತ್ಮನೇ ಎಂದು ಬೋಧಿಸುತ್ತದೆ. ಪರಮಾತ್ಮನಿಂದಲೇ ಉಂಟಾಗಿರುವ ಶಾಸ್ತ್ರವು ಪರಮಾತ್ಮನನ್ನೇ ಕರ್ಮಕ್ಕೆ ಕಟ್ಟುಬೀಳಿಸುವದೆಂಬುದು ಸರಿಯಲ್ಲ. ಶಾಸ್ತ್ರವು ನಿತ್ಯವೆಂಬ ಮಿಮಾಂಸಕರ ಪಕ್ಷವನ್ನು ಇಟ್ಟುಕೊಂಡರೂ ಅದು ಒಬ್ಬ ಜೀವನಿಗೇ ಕರ್ತೃತ್ವವನ್ನೂ ಅಕರ್ತೃತ್ವವನ್ನೂ ಬೋಧಿಸುತ್ತದೆ ಎಂದು ತಿಳಿಯುವದು ವಿರುದ್ಧವಾಗಿರುತ್ತದೆ. ಆದ್ದರಿಂದ ಜ್ಞಾನವನ್ನು ಉಪದೇಶಿಸಿದ ಬಳಿಕ ಕರ್ಮವನ್ನೂ ವಿಧಿಸುತ್ತದೆ ಎಂಬುದು ಸರಿಯಲ್ಲ. ಶಾಸ್ತ್ರವು ಜೀವನಿಗೆ ಪರಮಾತ್ಮಸ್ವರೂಪವೇ ನೀನೆಂದು ಉಪದೇಶಿಸುತ್ತಿರುವದರಿಂದಲೂ ಆ ಉಪದೇಶದಿಂದ ಉಂಟಾಗುವ ಜ್ಞಾನವು ಬಾಧಿತವಾಗುವದಿಲ್ಲವಾದ್ದರಿಂದಲೂ ಶಾಸ್ತ್ರಪ್ರಾಮಾಣ್ಯಕ್ಕೆ ಹಾನಿಯಿಲ್ಲ - ಎಂದು ಭಾಷ್ಯಕಾರರು ಶಾಸ್ತ್ರಪ್ರಾಮಾಣ್ಯವನ್ನು ಉಪಪಾದಿಸಿರುತ್ತಾರೆ.

(ಈ) ಮಹಾವಾಕ್ಯ

ಜೀವಪರಮಾತ್ಮೈಕ್ಯವನ್ನು ಬೋಧಿಸುವ ವಾಕ್ಯಗಳನ್ನು ಮಹಾವಾಕ್ಯಗಳು ಎಂದು ಕರೆಯುವದು ಈಗಿನ ವೇದಾಂತಗ್ರಂಥಗಳಲ್ಲಿ ರೂಢಿಯಾಗಿದೆ. ಮಹಾವಾಕ್ಯವೆಂಬ ಶಬ್ದವು ಈ ಉಪನಿಷತ್ತಿನ ಭಾಷ್ಯದಲ್ಲಿ ಒಂದು ಕಡೆ (ಭಾ. ಭಾ. ೫೭ ; ''ವೇದಾನ್ತಮಹಾವಾಕ್ಯಭೇರ್ಯಾಮ್'' ಎಂಬಲ್ಲಿ) ಕೆಲವು ಪುಸ್ತಕಗಳಲ್ಲಿ ಕಂಡುಬರುತ್ತದೆ. ಆದರೆ ಅಲ್ಲಿ (ಮಹಾಭೇರ್ಯಾಮ್ ಎಂಬ) ಪಾಠಾಂತರವಿರುವದರಿಂದಲೂ ಮಿಕ್ಕ ಭಾಷ್ಯಗಳಲ್ಲಿ ಎಲ್ಲಿಯೂ ''ಮಹಾವಾಕ್ಯ'' ವೆಂಬ ಶಬ್ದವು ಕಾಣದೆ ಇರುವದರಿಂದಲೂ ಆಚಾರ್ಯರು ಈ ಶಬ್ದವನ್ನು ಪಾರಿಭಾಷಿಕವಾಗಿ ಎಣಿಸಿದ್ದರೆಂಬುದಕ್ಕೆ ಆಧಾರವೇನೂ ಕಾಣಿಸುವದಿಲ್ಲ. ಆದರೂ ಉಪನಿಷತ್ತುಗಳ ಮಹಾತಾತ್ಪರ್ಯವು ಆತ್ಮೈಕ್ಯವನ್ನು ತಿಳಿಸುವದರಲ್ಲಿಯೇ ಇರುವದರಿಂದ ಇಂಥ ವಾಕ್ಯಗಳನ್ನು ಮಹಾವಾಕ್ಯಗಳು ಎಂದು ಕರೆದರೆ ತಪ್ಪೇನೂ ಇಲ್ಲ. ಆದರೆ ಒಂದೊಂದು ವೇದಕ್ಕೆ ಒಂದೊಂದರಂತೆ 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ', 'ಅಯಮಾತ್ಮಾ ಬ್ರಹ್ಮ', 'ಪ್ರಜ್ಞಾನಂ ಬ್ರಹ್ಮ' ಎಂದು ನಾಲ್ಕೇ ಮಹಾವಾಕ್ಯಗಳೆಂದು ಕೆಲವರು ಕಲ್ಪಿಸಿರುವದು ಸರಿಯಲ್ಲವೆಂದೇ ಹೇಳಬೇಕಾಗಿದೆ. ಪ್ರತಿಯೊಂದು ಉಪನಿಷತ್ತಿನಲ್ಲಿಯೂ ಆತ್ಮೈಕ್ಯವನ್ನು ತಿಳಿಸಿರುತ್ತದೆ. ಆ

ಅಭಿಪ್ರಾಯವನ್ನು ತಿಳಿಸುವ ವಾಕ್ಯಗಳನ್ನೆಲ್ಲ ''ಮಹಾವಾಕ್ಯ''ಗಳೆಂದು ಕರೆಯುವದೇ ಯುಕ್ತವಾಗಿರುತ್ತದೆ. ಮಹಾವಾಕ್ಯಗಳನ್ನು ಮಂತ್ರಗಳೆಂದು ಭಾವಿಸಿ ಜಪಮಾಡುವದಕ್ಕೆ ವಿನಿಯೋಗಿಸಬೇಕೆಂದು ಕೂಡ ಈಗಿನ ಕೆಲವರು ಹೇಳುತ್ತಿರುವರು. ಈ ಅಭಿಪ್ರಾಯಕ್ಕೆ ಮುಖ್ಯವಾದ ಉಪನಿಷತ್ತುಗಳಲ್ಲಾಗಲಿ ಆಚಾರ್ಯರ ಭಾಷ್ಯಗಳಲ್ಲಾಗಲಿ ಎಲ್ಲಿಯೂ ಬೆಂಬಲವು ಸಿಕ್ಕುವದಿಲ್ಲ.

ಜ್ಞಾನಕ್ಕೆ ಮಹಾವಾಕ್ಯವನ್ನು ಕರಣವೆನ್ನಬೇಕೆ, ಅಂತಃಕರಣವನ್ನು ಕರಣವೆನ್ನಬೇಕೆ ? - ಎಂಬ ಬಗ್ಗೆ ವ್ಯಾಖ್ಯಾನಕಾರರಲ್ಲಿ ಎರಡು ಭಿನ್ನಾಭಿಪ್ರಾಯ ಗಳಿರುತ್ತವೆ. ಆಚಾರ್ಯರ ಭಾಷ್ಯದಲ್ಲಿ ಈ ವಿಷಯಕ್ಕೆ ಅಷ್ಟೇನೂ ಮಹತ್ತ್ವವಿಲ್ಲ. ಏಕೆಂದರೆ ವಾಕ್ಯದ ಸಹಾಯವಿಲ್ಲದ ಅಂತಃಕರಣದಿಂದಲಾಗಲಿ ಅಂತಃಕರಣದ ಸಂಬಂಧವಿಲ್ಲದ ಬರಿಯ ವಾಕ್ಯದಿಂದಲಾಗಲಿ ಜ್ಞಾನವುಂಟಾಗುವದೆಂದು ಯಾರೂ ಹೇಳುವಂತಿಲ್ಲ. ಶಾಸ್ತ್ರಾಚಾರ್ಯಸಂಸ್ಕೃತವಾದ ಮನಸ್ಸೇ ಕರಣವು, ಶ್ರವಣಮನನನಿದಿಧ್ಯಾಸನಗಳಿಂದ ಕೂಡಿದ ಶಾಸ್ತ್ರವೇ ಪ್ರಮಾಣವು - ಎಂಬ ವಾಕ್ಯಗಳಿಗೆ ರೂಪಭೇದವೇ ಹೊರತು ತಾತ್ಪರ್ಯದಲ್ಲಿ ಭೇದವಿಲ್ಲ. ಆದ್ದರಿಂದ **''ಶಾಸ್ತ್ರಯೋನಿತ್ವಾತ್''** ಎಂಬ (ಬ್ರ. ಸೂ. ೧-೧-೩) ಬಾದರಾಯಣಸೂತ್ರ ವನ್ನೂ ಬಹುಮತವನ್ನೂ ಅನುಸರಿಸಿ ವಾಕ್ಯವು ಬ್ರಹ್ಮಾತ್ಮಜ್ಞಾನಕ್ಕೆ ಕರಣವೆಂದು ಹೇಳುವದಕ್ಕೆ ಯಾವ ಬಾಧಕವೂ ತೋರುವದಿಲ್ಲ.

ಭಾಷ್ಯದ ವ್ಯಾಖ್ಯಾನಕಾರರು

ಈ ಉಪನಿಷದ್ಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವ **''ಆನಂದಗಿರಿ''**ಗಳ ವಿಷಯದಲ್ಲಿ ಕೆಲವು ಮಾತುಗಳನ್ನು ಬರೆಯುವದು ಅತ್ಯವಶ್ಯವಾಗಿರುತ್ತದೆ. ಆನಂದಗಿರಿಗಳು ಶ್ರೀಶಂಕರಾಚಾರ್ಯರವರ ಸಾಕ್ಷಾಚ್ಛಿಷ್ಯರೆಂಬ ನಂಬಿಕೆಯು ನಮ್ಮಲ್ಲಿ ಅನೇಕರಿಗೆ ಇರುತ್ತದೆ. ''ಇತಿ ಶ್ರೀಮದ್ಭಗವತ್ಪೂಜ್ಯಪಾದಶಿಷ್ಯ ಶ್ರೀ ಮದಾನನ್ದಜ್ಞಾನಕೃತಾವೈತರೇಯೋಪನಿಷದ್ಭಾಷ್ಯಟೀಕಾಯಾಂ ದ್ವಿತೀಯೋऽ ಧ್ಯಾಯಃ' ಎಂದು ಆನಂದಾಶ್ರಮಮುದ್ರಣಾಲಯದ ಪುಸ್ತಕದಲ್ಲಿ ಅಚ್ಚಾಗಿಯೂ ಇದೆ. ಆದರೂ ''ಆನಂದಗಿರಿಯ''ವೆಂದು ಹೆಸರುಪಡೆದಿರುವ ಟೀಕೆಗಳೆಲ್ಲ ಒಬ್ಬರೇ ಬರಹಗಾರರ ಕೈವಾಡವಲ್ಲವೆಂಬುದನ್ನು ನಾನು ಕೇನಕಠಭಾಷ್ಯಗಳ ಅನುವಾದದ ಪೀಠಿಕೆಯಲಿ ತೋರಿಸಿಕೊಟ್ಟಿರುತ್ತೇನೆ. ಐತರೇಯದ

ಟೀಕಾಕಾರರು **ಸಾಯಣರ ದೀಪಿಕೆ**ಯನ್ನು ಉದಾಹರಿಸಿ (ಆನಂದಾಶ್ರಮ ಮುದ್ರಣ ಪು. ೨೫, ೨೭, ೪೨) ಕೆಲವು ಕಡೆಗಳಲ್ಲಿ ಸಮ್ಮತಿಯನ್ನೂ ಮತ್ತೆ ಕೆಲವು ಕಡೆಗಳಲ್ಲಿ ತಮ್ಮ ಸ್ವಂತ ಅಭಿಪ್ರಾಯವನ್ನೂ ಕೊಟ್ಟಿರುತ್ತಾರೆ. ಈ ಟೀಕೆಯು **ಅಭಿನವನಾರಾಯಣೇಂದ್ರಸರಸ್ವತಿ** ಎಂಬವರದ್ದೆಂದು ಕಾಶ್ಮೀರದ ರಘುನಾಥ ದೇವಾಲಯದ ಕೈಪ್ರತಿಗಳಲ್ಲಿರುವದಾಗಿ "ಆನಂದಗಿರಿಕೃತತರ್ಕಸಂಗ್ರಹದ" (Gaikwad's Oriental Series) ಇಂಗ್ಲಿಷು ಪೀಠಿಕೆಯಲ್ಲಿ ಬರೆದಿದೆ. ಪ್ರಶ್ನೋಪನಿಷತ್ತಿನ ಭಾಷ್ಯದ ಟೀಕೆಯನ್ನು ಬರೆದವರೂ ಇದೇ ಅಭಿನವ ನಾರಾಯಣೇಂದ್ರಸರಸ್ವತಿಗಳೆಂದು ಆನಂದಾಶ್ರಮಮುದ್ರಣಾಲಯದಲ್ಲಿರುವ ಕೆಲವು ಕೈಬರಹದ ಪುಸ್ತಕಗಳಲ್ಲಿ ಆಧಾರವು ಸಿಕ್ಕುತ್ತದೆ. ಆ ಟೀಕೆಯಲ್ಲಿ **ಶಂಕರಾನಂದರ ಉಪನಿಷದ್ದೀಪಿಕೆಯನ್ನು** ಉದಾಹರಿಸಿರುತ್ತದೆ. ಇದರಿಂದ ಈ ಟೀಕಾಕಾರರು ಶಂಕರಾಚಾರ್ಯರಿಗಿಂತ ಬಹಳ ಈಚಿನವರೆಂದು ಸ್ಪಷ್ಟವಾಗುತ್ತದೆ. ಭಾಷ್ಯಕ್ಕೆ ಟೀಕೆಯನ್ನು ಬರೆದವರು ಆನಂದಗಿರಿಗಳೆಂಬ ಹೆಸರಿನ ಒಬ್ಬರೇ ವ್ಯಕ್ತಿಗಳೆಂದೂ ಆನಂದಗಿರಿಗಳು ಶ್ರೀಶಂಕರಾಚಾರ್ಯರವರ ನೇರಾದ ಶಿಷ್ಯರೆಂದೂ ಭ್ರಮೆಯಿಂದ ಇಟ್ಟುಕೊಂಡು ಭಾಷ್ಯಕ್ಕೆ ತಾತ್ಪರ್ಯವನ್ನು ನಿಶ್ಚಯಿಸುವಾಗ ಟೀಕೆಯನ್ನೇ ಉಪಯೋಗಿಸುವದಕ್ಕೆ ಹೋಗುವದು ಅಪಾಯಕರವೆಂಬುದಕ್ಕೆ ಐತರೇಯಭಾಷ್ಯವೇ ಸಾಕಾದಷ್ಟು ಆಧಾರವನ್ನು ಕೊಡುತ್ತದೆ. ಏಕೆಂದರೆ ಈ ವ್ಯಾಖ್ಯಾನಕಾರರು ಭಾಷ್ಯದಲ್ಲಿ ಪಾಠಾಂತರವನ್ನು ಕಲ್ಪಿಸಿ ಭಾಷ್ಯಪ್ರಕ್ರಿಯೆಯನ್ನೇ ತಲೆಕೆಳಗುಮಾಡುವ ಅರ್ಥವನ್ನು ಕೊಟ್ಟಿರುವ ಸಂದರ್ಭಗಳೂ ಇಲ್ಲದೆ ಇಲ್ಲ. ಅವರ ಕೆಲವು ಯುಕ್ತಿಗಳೂ ಭಾಷ್ಯವ್ಯಾಖ್ಯಾನ ಗಳೂ ಬಹಳ ಶ್ಲಾಘನೀಯವಾಗಿರುತ್ತವೆ ; ಕೆಲವು ಕಡೆಗಳಲ್ಲಿ ಮಾತ್ರ ತೀರ ದಾರಿಯನ್ನು ಬಿಟ್ಟುಹೋಗಿ ಮುಗ್ಗರಿಸಿರುತ್ತಾರೆ. ಅವರ ಅಭಿಪ್ರಾಯಗಳು ಅಸಮ್ಮತವಾದವೆಂದು ನನಗೆ ತೋರಿದ ಕಡೆಗಳಲ್ಲಿ ಟಿಪ್ಪಣಿಗಳಲ್ಲಿ ಅದನ್ನು ಸೂಚಿಸಿರುತ್ತೇನೆ. ಭಾಷ್ಯವನ್ನು ಕನ್ನಡಿಸುವಾಗ ನಾನು ಮಿಕ್ಕ ಅನುವಾದಕಾರ ರಂತೆ ಯಾವಾಗಲೂ ವ್ಯಾಖ್ಯಾನವನ್ನೇ ಬೆಂಬಿಡದೆ ಹಿಂಬಾಲಿಸದೆ ಇರುವದಕ್ಕೆ ಕಾರಣವೇನೆಂಬುದು ಇದರಿಂದ ವಾಚಕರಿಗೆ ಸ್ಪಷ್ಟವಾಗುವದೆಂದು ನಂಬಿರುತ್ತೇನೆ. ಆದರೆ ನನ್ನ ಅನುವಾದವು ಪ್ರಸ್ಥಾನತ್ರಯಭಾಷ್ಯದ ಪ್ರಕ್ರಿಯೆಯನ್ನು ಬಿಟ್ಟು ಒಂದು ಹೆಜ್ಜೆಯೂ ಅತ್ತಿತ್ತ ಕದಲದಂತೆ ಎಚ್ಚರಿಕೆಯಿಂದ ನೋಡಿಕೊಂಡಿರುತ್ತೇನೆ.

ಭಾಷ್ಯದ ಅನುವಾದ

ಆನಂದಾಶ್ರಮದ ಮುದ್ರಿತಪ್ರತಿಯನ್ನು ಈ ಅನುವಾದಕ್ಕೆ ಮುಖ್ಯವಾದ ಆಧಾರವಾಗಿಟ್ಟುಕೊಂಡಿರುತ್ತೇನಾದರೂ ವಾಣೀವಿಲಾಸ ಶ್ರೀರಂಗಮ್; ವೇದಾಂತವಿದ್ಯಾವಿಲಾಸ, ಮದರಾಸು - ಮುಂತಾದ ಮುದ್ರಣಪ್ರತಿಗಳನ್ನೂ ಹೋಲಿಕೆಗೆ ತೆಗೆದುಕೊಂಡಿರುತ್ತೇನೆ. ಈ ಅನುವಾದಕ್ಕೆ ವ್ಯಾಖ್ಯಾನವೇ ಅಲ್ಲದೆ ಶ್ರೀಯುತ **ಆರ್.ಜಿ. ಬ್ಹಡಕಾಮಕರ್**ರವರು ಪ್ರಕಟಿಸಿರುವ ಅನುವಾದ, ರಾಜಸೇವಾಸಕ್ತ ವಿದ್ಯಾಭ್ಯಾಸದ ಇಲಾಖೆಯ ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್ **ಶ್ರೀ ಡಿ. ವೆಂಕಟರಾಮಯ್ಯ**ನವರು ಬರೆದಿರುವ ಅನುವಾದ, **ಶ್ರೀಯುತ ವಿ. ಸಿ. ಶೇಷಾಚಾರಿ**ಯವರು ಪ್ರಕಟಿಸಿರುವ ಅನುವಾದ - ಈ ಮೂರು ಇಂಗ್ಲಿಷು ಅನುವಾದಗಳ ಸಹಾಯವನ್ನೂ ಅಲ್ಲಲ್ಲಿ ತೆಗೆದುಕೊಂಡಿರುತ್ತೇನೆ. ಆದರೆ ಶಾಂಕರಸಿದ್ಧಾಂತಕ್ಕೆ ಅನುಗುಣವೆಂದು ಪ್ರಸ್ಥಾನತ್ರಯಭಾಷ್ಯದ ಹೋಲಿಕೆಯಿಂದ ತಿಳಿದುಬಂದ ಅರ್ಥವನ್ನನುಸರಿಸಿಯೇ ಸ್ವತಂತ್ರವಾಗಿ ಕನ್ನಡಿಸಿರುವದರಿಂದ ಒಟ್ಟಿನಲ್ಲಿ ಈ ಅನುವಾದಕ್ಕೆ ನಾನೇ ನೇರಾಗಿ ಹೊಣೆಯಾಗಿರುತ್ತೇನೆ. ಪಾಠಾಂತರಗಳಿಂದಲೂ ಶಬ್ದಸ್ಖಾಲಿತ್ಯಗಳಿಂದಲೂ ಕೂಡಿರುವದರಿಂದ ಬಹುಕಷ್ಟವಾಗಿ ತೋರುವ ಈ ಭಾಷ್ಯದ ಅರ್ಥವನ್ನು ತಿಳಿಯುವದಕ್ಕೆ ಈ ಅನುವಾದವು ಜಿಜ್ಞಾಸುಗಳಿಗೆ ಒಂದಿಷ್ಟಾದರೂ ಸಹಾಯವನ್ನು ಮಾಡಿದರೆ ನಾನು ಕೃತಕೃತ್ಯನು.

ಗ್ರಂಥಕರ್ತ.

(೧೯೪೫)

ಉಪನಿಷತಿನ ಸಾರ

ಒಂದನೆಯ ಅಧ್ಯಾಯ

(ಖಂಡ ೧) :- ಮೊದಲು ಆತ್ಮನೊಬ್ಬನೇ ಇರತ್ತಿದ್ದನು, ಅವನಿಗಿಂತ ಬೇರೆಯಾಗಿ ಮತ್ತೇನೇನೂ ಇರಲಿಲ್ಲ. ಅವನು ಲೋಕಗಳನ್ನು ಸೃಷ್ಟಿಸುವೆನು - ಎಂದು ಯೋಚಿಸಿ ಅಂಭಸ್ಸು, ಮರೀಚಿ, ಮರ, ಅಪ್ಪು - ಎಂಬ ಪಂಚಭೂತಾತ್ಮಕವಾದ ಲೋಕಗಳನ್ನು ಸೃಷ್ಟಿಸಿದನು. ಆಮೇಲೆ ಈ ಲೋಕಗಳನ್ನು ಕಾಪಾಡುವ ದೇವತೆಗಳನ್ನು ಸೃಷ್ಟಿಸುವೆನು - ಎಂದುಕೊಂಡು ಅದೇ ಪಂಚಭೂತಗಳಿಂದ ಒಬ್ಬ ಪುರುಷನ ಆಕೃತಿಯನ್ನು ಮಾಡಿ ಅದನ್ನು ಕುರಿತು ಧ್ಯಾನಮಾಡಲು ಅದರಿಂದ ಮುಖ, ವಾಕ್ಕು, ಅಗ್ನಿ ; ಮೂಗು, ಪ್ರಾಣ, ವಾಯು ; ಕಣ್ಣು, ಚಕ್ಷುರಿಂದ್ರಿಯ, ಆದಿತ್ಯ ; ಕಿವಿ, ಶ್ರೋತ್ರೇಂದ್ರಿಯ, ದಿಗ್ದೇವತೆಗಳು ; ಚರ್ಮ, ಕೂದಲು, ಔಷಧಿ, ವನಸ್ಪತಿದೇವತೆಗಳು ; ಹೃದಯ, ಮನಸ್ಸು, ಚಂದ್ರ ; ಹೊಕ್ಕಳು, ಅಪಾನ, ಮೃತ್ಯು ; ಶಿಶ್ನ, ರೇತಸ್ಸು, ಅಪ್ಪು - ಹೀಗೆ ಅವಯವಗಳೂ ಇಂದ್ರಿಯಗಳೂ ದೇವತೆಗಳೂ ಉಂಟಾದರು.

(ಖಂಡ ೨) :- ಈ ದೇವತೆಗಳು ಸಂಸಾರಕ್ಕೆ ಒಳಗಾದರು. ಮೊದಲು ಸೃಷ್ಟಿಸಿದ್ದ ವಿರಾಟ್ಪುರುಷನಿಗೆ ಆತ್ಮನು ಹಸಿವು ನೀರಡಿಕೆಗಳನ್ನು ಕೂಡಿಸಿದ್ದರಿಂದ ಆ ಪುರುಷನಿಂದಾದ ದೇವತೆಗಳಿಗೂ ಹಸಿವುನೀರಡಿಕೆಗಳುಂಟಾದವು. ಹಸಿವು ನೀರಡಿಕೆಗಳನ್ನು ತೀರಿಸಿಕೊಳ್ಳುವದಕ್ಕೆ ತಕ್ಕ ಶರೀರವನ್ನು ನಮಗೆ ಸೃಷ್ಟಿಮಾಡಿ ಕೊಡಬೇಕು - ಎಂದು ಅವರು ಪರಮೇಶ್ವರನನ್ನು ಬೇಡಿಕೊಂಡರು. ಆಗ ಪರಮಾತ್ಮನು ಕ್ರಮಕ್ರಮವಾಗಿ ಪ್ರಾಣಿಗಳೆಲ್ಲವನ್ನೂ ಸೃಷ್ಟಿಸಿದನು. ಅವುಗಳಲ್ಲಿ ಯಾವದೊಂದರ ಶರೀರವೂ ತಮಗೆ ತಕ್ಕದ್ದಲ್ಲವೆಂದು ದೇವತೆಗಳು ಹೇಳಲು ಈಶ್ವರನು ಮನುಷ್ಯನನ್ನು ಸೃಷ್ಟಿಸಿದನು. ಅವರು ''ಭಲೆ ; ಇದು ಚೆನ್ನಾಗಿದೆ'' ಎಂದು ಮೆಚ್ಚಿ ಈಶ್ವರನ ಅಪ್ಪಣೆಯನ್ನು ಪಡೆದು ಆ ಶರೀರವನ್ನು ಹೊಕ್ಕರು. ದೇವತೆಗಳಲ್ಲಿ ವಿರಾಟ್ಪುರುಷನ ಯಾವ ಇಂದ್ರಿಯದಿಂದ ಇವನು ಹೊರಕ್ಕೆ ಬಂದಿದ್ದನೋ ಮನುಷ್ಯಶರೀರದಲ್ಲಿಯೂ ಆಯಾ ಇಂದ್ರಿಯವನ್ನೇ ಆಯಾ ದೇವತೆಯು ಹೊಕ್ಕಬಳಿಕ ಹಸಿವುನೀರಡಿಕೆಗಳ ದೇವತೆಗಳಿಗೆ ಜೀರಿಸ್ಥಾನವಿಲ್ಲದೆ ಹೋದ್ದರಿಂದ ಅವರಿಬ್ಬರೂ ಆಯಾ ದೇವತೆಗಳೊಡನೆಯೇ ಇದ್ದು ಅವರ ತೃಪ್ತಿಯಿಂದಲೇ ತೃಪ್ತಿಹೊಂದಬೇಕೆಂದು ಈಶ್ವರನು ಗೊತ್ತುಮಾಡಿದನು.

(ಖಂಡ ೩) :- ಇದಾದ ಬಳಿಕ ಲೋಕಪಾಲಕರಿಗೋಸ್ಕರ ಈಶ್ವರನು ಅದೇ ಪಂಚಭೂತಗಳಿಂದ ಅನ್ನವೆಂಬ ಒಂದು ಆಕಾರವನ್ನು ಸೃಷ್ಟಿಮಾಡಿದನು. ಆದರೆ ಅದು ಓಡಿಹೋಗುವದಕ್ಕೆಳಸಿತು. ಲೋಕಪಾಲಕರ ಒಟ್ಟಾದ ವಿರಾಟ್ ಪುರುಷನಿಗೆ ಅದನ್ನು ಯಾವ ಇಂದ್ರಿಯದಿಂದಲೂ ಹಿಡಿಯುವದಕ್ಕಾಗಲಿಲ್ಲ. ಒಂದೊಂದಾಗಿ ಪರೀಕ್ಷಿಸಿ ನೋಡಿ ಕೊನೆಗೆ ಮುಖದೊಳಕ್ಕೆ ಎಳೆದುಕೊಳ್ಳುವದಕ್ಕೆ ಅನುಕೂಲವಾದ ಅಪಾನವಾಯುವಿನಿಂದ ಅನ್ನವನ್ನು ಎಳೆದುಕೊಂಡನು. ಆದ್ದರಿಂದ ಈಗಲೂ ವಿರಾಟ್ಪುರುಷನ ವಂಶಜರಾದ ಜೀವರುಗಳು ಅನ್ನವನ್ನು ಹಾಗೆಯೇ ಒಳಕ್ಕೆಳೆದುಕೊಳ್ಳುತ್ತಿದ್ದಾರೆ.

ಇಷ್ಟೆಲ್ಲ ಆದಮೇಲೆ ಇಂದ್ರಿಯಗಳು ತಮ್ಮ ಕೆಲಸವನ್ನು ಯಾರಿಗೋಸ್ಕರ ಮಾಡಬೇಕೋ ಅಂಥ ಸ್ವತಂತ್ರವಾದ ಒಡೆಯನೊಬ್ಬನು ಶರೀರದಲ್ಲಿರಬೇಕೆಂದು ಆತ್ಮನು ತಾನೇ ಜೀವರೂಪದಿಂದ ಒಳಹೊಕ್ಕನು. ಪ್ರಾಣನು ಈ ಶರೀರವನ್ನು ಮುಂಗಾಲುಗಳ ಮೂಲಕವಾಗಿ ಹೊಕ್ಕಿದ್ದರಿಂದ ಆ ದಾರಿಯನ್ನು ಬಿಟ್ಟು ಅವನ ತಲೆಯ ಬೈತಲೆಯನ್ನು ಸೀಳಿಕೊಂಡು ಅದರ ಮೂಲಕ ಶರೀರವನ್ನು ಸೇರಿದನು. ಇದರಿಂದ ಆತ್ಮನನ್ನು ಅರಿತುಕೊಳ್ಳುವದಕ್ಕೆ ಒಂದು ಸಾಧನವು ದೊರಕಿದಂತಾಯಿತು. ಶರೀರವನ್ನು ಹೊಕ್ಕ ಜೀವನಿಗೆ ಇಂದ್ರಿಯ, ಮನಸ್ಸು, ಹೃದಯಾಕಾಶ - ಎಂಬ ಮೂರು ಸ್ಥಾನಗಳಿವೆ ; ಎಚ್ಚರ, ಕನಸು, ತನಿನಿದ್ರೆ ಎಂಬ ಮೂರು ಸ್ಥಿತಿಗಳಾಗುತ್ತಿವೆ. ಜೀವನು ಈ ಮೂರನ್ನೂ ಇದೊಂದು, ಇದೊಂದು - ಎಂದು ಅನುಭವಿಸುತ್ತಿರುತ್ತಾನೆ.

ಈ ರೀತಿಯಲ್ಲಿ ಜೀವನಾದ ಮೇಲೆ ಆತ್ಮನು ಭೂತಗಳೆಲ್ಲವನ್ನೂ ವಿಂಗಡಿಸಿ ನೋಡಿ, ಮತ್ತೆ ಯಾವದನ್ನೂ ಕಾಣದೆ, ತನ್ನ ಸ್ವರೂಪವೇ ಎಲ್ಲವನ್ನೂ ವ್ಯಾಪಿಸಿರುವದೆಂದು ಕಂಡುಕೊಂಡನು. ''ಇದನ್ನು ಕಂಡೆನು'' ಎಂದು ಕಂಡುಕೊಂಡದ್ದರಿಂದ ಅವನಿಗೆ ''ಇದಂದ್ರ'' ಎಂಬ ಹೆಸರಾಯಿತು. ಜ್ಞಾನಿಗಳು ಈ ಹೆಸರನ್ನು ''ಇಂದ್ರನು'' ಎಂದು ಪರೋಕ್ಷವಾಗಿ ವ್ಯವಹರಿಸುತ್ತಾರೆ. ದೇವತೆಗಳಿಗೆ ಪರೋಕ್ಷನಾಮದಲ್ಲಿ ಪ್ರೀತಿಯಿರುವದರಿಂದ ದೇವದೇವನಾದ ಆತ್ಮನಿಗೂ ಪರೋಕ್ಷನಾಮವು ಪ್ರಿಯವಾಗಿರುತ್ತದೆ.

ಎರಡನೆಯ ಅಧ್ಯಾಯ

ಈ ಜೀವನು ಪುರುಷನಲ್ಲಿ ಅನ್ನರಸದಿಂದಾಗುವ ರಕ್ತವೇ ಮುಂತಾದ ಧಾತುಗಳಿಂದ ರೇತಸ್ಸಿನ ರೂಪದಿಂದ ಗರ್ಭವಾಗುತ್ತಾನೆ. ಆ ರೇತಸ್ಸನ್ನು ತನ್ನ ದೇಹದಂತೆಯೇ ಕಾಪಾಡಿಕೊಂಡಿದ್ದು ಹೆಂಡತಿಯೊಡನೆ ಬೆರೆಯುವಾಗ ಹೊರಗೆ ಹಾಕುವನಷ್ಟೆ. ಅದೇ **ಜೀವನ ಒಂದನೆಯ ಜನ್ಮವು.** ಆ ಸ್ತ್ರೀಯ ದೇಹದಲ್ಲಿ ನಿಂತ ರೇತಸ್ಸನ್ನು ಆಕೆಯು ತನ್ನ ದೇಹದಂತೆಯೇ ಕಾಪಾಡುತ್ತಾಳೆ. ಆಮೇಲೆ ಪುತ್ರರೂಪದಿಂದ ಅದು ಹೊರಕ್ಕೆ ಬರುತ್ತದೆ. ಅದು **ಜೀವನ ಎರಡನೆಯ ಜನ್ಮವು.** ತಂದೆಯು ಮಗುವಿಗೆ ಸಂಸ್ಕಾರಗಳನ್ನು ಮಾಡಿಸಿ ತನ್ನ ಸ್ವರೂಪವೆಂದೇ ಅವನನ್ನು ಪೋಷಿಸುತ್ತಿದ್ದು ಸಾಯುವ ಮುಂಚೆ ತಾನು ಆವರೆಗೆ ಮಾಡುತ್ತಿದ್ದ ಅಧ್ಯಯನ, ಯಜ್ಞ - ಮುಂತಾದ ಕರ್ಮಗಳನ್ನು ಮಗನಿಗೆ ಒಪ್ಪಿಸಿ ಶರೀರವನ್ನು ಬಿಟ್ಟು ಮತ್ತೊಂದು ದೇಹವನ್ನು ಧರಿಸುತ್ತಾನೆ. ಹೀಗೆ ಸ್ತ್ರೀಯ ಗರ್ಭದಿಂದ ಹೊರಕ್ಕೆ ಬಂದು ಜೀವನಯಾತ್ರೆಯನ್ನು ಮುಗಿಸಿ ಮತ್ತೊಂದು ಶರೀರವನ್ನು ಪಡೆದುಕೊಳ್ಳುವದು **ಜೀವನಿಗೆ ಮೂರನೆಯ ಜನ್ಮವು.**

ಹೀಗೆ ಮೂರು ಶರೀರಗಳನ್ನು ಪಡೆಯುವದನ್ನೇ ಜೀವನ ಮೂರು ವಾಸಸ್ಥಾನಗಳೆಂದು ಭಾವಿಸಬಹುದಾಗಿದೆ. ಈ ಜನನಮರಣಗಳನ್ನು ಆತ್ಮಜ್ಞಾನಿಯು ಮಾತ್ರ ದಾಟುವನು. ಹೀಗೆಂದು ಋಗ್ವೇದದ ಒಂದು ಮಂತ್ರವು ಹೇಳುತ್ತದೆ ; ''ನಾನು ಗರ್ಭದಲ್ಲಿಯೇ ಇದ್ದುಕೊಂಡು ಈ ದೇವತೆಗಳ ಜನ್ಮವೆಲ್ಲವನ್ನೂ ಅರಿತುಕೊಂಡೆನು, ಇಂಥ ನೂರಾರು ಶರೀರಗಳು ನನ್ನನ್ನು ಕಬ್ಬಿಣದ ಕೋಟೆಯಂತೆ ಭದ್ರವಾಗಿ ಬಿಗಿದಿಟ್ಟುಕೊಂಡಿದ್ದವು. ಆದರೆ ಈ ನಾನು ಜ್ಞಾನದಿಂದ ಗಿಡುಗನು ಬಲೆಯಿಂದ ತಪ್ಪಿಸಿಕೊಂಡು ಬರುವಂತೆ ಶರೀರಗಳ ಕಟ್ಟನ್ನು ಬಿಡಿಸಿಕೊಂಡು ಈಚೆಗೆ ಬಂದುಬಿಟ್ಟಿದೇನೆ'' ಎಂಬುದು ಮಂತ್ರದ ಅರ್ಥವು. ಈ ವಾಕ್ಯವನ್ನು **ವಾಮದೇವ**ಋಷಿಯು ಗರ್ಭದಲ್ಲಿರುವಾಗಲೇ ಹೇಳಿದನು ! ಆ ವಾಮದೇವನು ನಿತ್ಯಶುದ್ಧವಾದ ತನ್ನ ಆತ್ಮನ ಸ್ವರೂಪವನ್ನು ಜ್ಞಾನದಿಂದ ತಿಳಿದುಕೊಂಡು ಅವಿದ್ಯೆಯಿಂದಾದ ಶರೀರವನ್ನು ನಾಶಪಡಿಸಿ ಕೊಂಡು ಉತ್ಕೃಷ್ಟವಾದ ಪರಮಾತ್ಮಸ್ವರೂಪವನ್ನು ಹೊಂದಿ ಕಾಮಗಳೆಲ್ಲವನ್ನೂ ಪಡೆದುಕೊಂಡು ಅಮೃತನಾದನು.

ಮೂರನೆಯ ಅಧ್ಯಾಯ

ಶ್ರುತಿಯಲ್ಲಿ ಹೇಳಿರುವಂತೆ ವಾಮದೇವನು ಅರಿತುಕೊಂಡು ಮುಕ್ತನಾದ ಆತ್ಮಸ್ವರೂಪವು ಯಾವದು ? ಅದನ್ನೇ ನಾವೂ ಅರಿತುಕೊಂಡು ಕೃತಕೃತ್ಯರಾಗ ಬೇಕೆಂದು ಮುಮುಕ್ಷುಗಳಾದವರು ವಿಚಾರಿಸುವಲ್ಲಿ ಅವರಿಗೆ ಈ ಜಿಜ್ಞಾಸೆ ಯುಂಟಾಗುವದು. ಮುಂಗಾಲುಗಳ ಮೂಲಕ ಶರೀರವನ್ನು ಹೊಕ್ಕ ಪ್ರಾಣ ನೊಬ್ಬನು, ಬೈತಲೆಯನ್ನು ಸೀಳಿಕೊಂಡು ಒಳಹೊಕ್ಕವನು ಮತ್ತೊಬ್ಬನು - ಈ ಇಬ್ಬರಲ್ಲಿ ನಿಜವಾದ ಆತ್ಮನು ಯಾರು ? ಮುಂಗಾಲುಗಳಿಂದ ಹೊಕ್ಕಿರುವ ಆತ್ಮನು ಅಂತಃಕರಣವೃತ್ತಿಗಳಿಂದ ಬೇರೆಬೇರೆಯ ವಿಷಯಗಳನ್ನು ಅರಿಯುವದಕ್ಕೆ ಸಾಧನ ವಾಗಿರುತ್ತಾನೆ. ನೋಡುವದು, ಕೇಳುವದು, ಮೂಸುವದು, ಮಾತಾಡು ವದು, ಸವಿಯುವದು - ಇವೆಲ್ಲವೂ ಈ ಪ್ರಾಣಾತ್ಮನಿಂದಲೇ ಆಗುವವು. ಅವನು ಕರಣ ರೂಪನಾಗಿರುವದರಿಂದ ಅವನು ನಿಜವಾಗಿ ಆತ್ಮನಲ್ಲ. ಕರಣವು ಕರ್ತೃವಿಗಾಗಿ ಇರುತ್ತದೆ. ಆದ್ದರಿಂದ ಈ ನೋಡುವದು, ಕೇಳುವದು - ಮುಂತಾದ ಕ್ರಿಯೆಗಳನ್ನು ಯಾವನು ಮಾಡುತ್ತಿರುವನೋ ಅವನೇ ಆತ್ಮನೆಂಬುದು ಯುಕ್ತ.

ಈ **ಮುಖ್ಯಾತ್ಮನು** ಪ್ರಜ್ಞಾನದ ಎಂದರೆ ಬರಿಯರಿವಿನ ಸ್ವರೂಪನಾಗಿರು ತ್ತಾನೆ. ಅಂತಃಕರಣದ ವೃತ್ತಿಗಳಿಂದ ಈ ಪ್ರಜ್ಞಾನಕ್ಕೆ ಅನೇಕ ಹೆಸರುಗಳು ಬರುವವು. ಆದರೆ ಎಚ್ಚರುವದು, ಸ್ವತಂತ್ರನೆಂದು ಭಾವಿಸುವದು, ಕಲಾದಿಗಳ ವಿಜ್ಞಾನ - ಮುಂತಾದ ಅರಿವಿನ ಈ ಭೇದಗಳು ಅಂತಃಕರಣಕ್ಕೆ ಸಂಬಂಧಪಟ್ಟವೇ ಹೊರತು ಪ್ರಜ್ಞಾನರೂಪಕ್ಕೆ ಸಂಬಂಧಪಟ್ಟಿರುವದಿಲ್ಲ. ಈ **ಪ್ರಜ್ಞಾನ**ವೆಂಬ ಶುದ್ಧಚೈತನ್ಯವೇ **ಹಿರಣ್ಯಗರ್ಭ**ನೆಂದೂ ಇಂದ್ರನೆಂದೂ **ಪ್ರಜಾಪತಿ**ಯೆಂದೂ ದೇವತೆಗಳೆಂದೂ ಬಗೆಬಗೆಯ ಹೆಸರುಗಳನ್ನು ತಳೆಯುತ್ತಿರುವದು ; ಭೂತಭೌತಿಕ ಗಳೆಲ್ಲವೂ ಪ್ರಜ್ಞಾನರೂಪವಾದ ಈ ಪರಮಾತ್ಮನಲ್ಲಿಯೇ ಇದ್ದುಕೊಂಡು ಹುಟ್ಟು, ಇರವು, ಸಾವುಗಳನ್ನು ಕಾಣುತ್ತಿರುವದು. ಪ್ರಜ್ಞಾನಕ್ಕಿಂತ ಬೇರೆಯಾಗಿ ಯಾವದೊಂದೂ ಇಲ್ಲವಾದ್ದರಿಂದ ಪ್ರಜ್ಞಾನವೇ ಬ್ರಹ್ಮವು.

ಪ್ರಜ್ಞಾನರೂಪವಾಗಿರುವ ಈ ಆತ್ಮಸ್ವರೂಪವನ್ನು ಜ್ಞಾನದಿಂದ ಪಡೆದು ಕೊಂಡಾತನು ಅವಿದ್ಯಾಕೃತವಾದ ಈ ಲೋಕವನ್ನು ದಾಟಿ ಆನಂದರೂಪನಾಗಿ ರುವ ಪರಮಾತ್ಮನ ರೂಪದಿಂದ ಸರ್ವಕಾಮಗಳನ್ನೂ ಪಡೆದು ಅಮೃತನಾಗುವನು.

ತೈತ್ತಿರೀಯೋಪನಿಷತ್ತು

ಪೀಠಿಕೆ

ಉಪನಿಷತ್ತಿನ ಸ್ಥಾನ

ತೈತ್ತಿರೀಯೋಪನಿಷತ್ತು ನಮ್ಮ ದೇಶದಲ್ಲಿ ಸುಪ್ರಸಿದ್ಧವಾಗಿರುತ್ತದೆ. ಈ ಕಡೆಯಲ್ಲಿ ತೈತ್ತಿರೀಯಶಾಖೆಯವರು ಹೆಚ್ಚಿನ ಸಂಖ್ಯೆಯಲ್ಲಿ ಸಿಕ್ಕುತ್ತಾರೆ. ಈಗ ವೈದಿಕರು ಸ್ವರಸಹಿತವಾಗಿ ಪಠಿಸುವ ಕೆಲವೇ ಉಪನಿಷತ್ತುಗಳಲ್ಲಿ ಇದೂ ಒಂದು ಮುಖ್ಯವಾದ ಉಪನಿಷತ್ತಾಗಿದೆ. **ಈ ಉಪನಿಷತ್ತು ತೈತ್ತಿರೀಯಾರಣ್ಯಕದ ಏಳನೆಯ ಪ್ರಪಾಠಕದಿಂದ ಒಂಬತ್ತನೆಯ ಪ್ರಪಾಠಕದವರೆಗಿನ ಭಾಗವು.** ಹತ್ತನೆಯ ಪ್ರಪಾಠಕವಾದ 'ನಾರಾಯಣಪನ್ನ ಅಥವಾ ಅಂಭಸಿ' ಎಂದು ವೈದಿಕರಲ್ಲಿ ಪ್ರಸಿದ್ಧವಾಗಿರುವ ಭಾಗವನ್ನು ಆಚಾರ್ಯರು ಸೂತ್ರಭಾಷ್ಯ (೩-೩-೨೪)ವೇ ಮುಂತಾದವುಗಳಲ್ಲಿ ಪ್ರಮಾಣವಾಗಿ ಉದಾಹರಿಸಿರುತ್ತಾರಾದರೂ ಅದೇಕೋ ಅದಕ್ಕೆ ಭಾಷ್ಯವನ್ನು ಬರೆದಿರುವದಿಲ್ಲ. **ಸಾಯಣಾಚಾರ್ಯರು** ಇಡಿಯ ವೇದಕ್ಕೇ ಭಾಷ್ಯವನ್ನು ಬರೆಯುವದಕ್ಕೆ ಹೊರಟವರಾದ್ದರಿಂದ ಆ ಭಾಗಕ್ಕೂ ವಿವರಣೆಯನ್ನು ಬರೆದಿರುತ್ತಾರೆ. ಅವರ ಮತದಲ್ಲಿ ತೈತ್ತಿರೀಯೋಪನಿಷತ್ತು 'ಸಾಂಹಿತೀ', 'ವಾರುಣೀ', 'ಯಾಜ್ಞಿಕೀ' - ಎಂದು ಮೂರು ಬಗೆಯಾಗಿರುತ್ತದೆ. ಸಂಹಿತೆಗಳ ವಿಷಯವನ್ನು ಒಳಗೊಂಡಿರುವದರಿಂದ ಏಳನೆಯ ಪ್ರಪಾಠಕವು - 'ಸಾಂಹಿತೀ ಉಪನಿಷತ್ತು' ; ಎಂಟು, ಒಂಬತ್ತು- ಈ ಎರಡು ಪ್ರಪಾಠಕಗಳಿಗೆ ವರುಣನು ಸಂಪ್ರದಾಯಪ್ರವರ್ತಕನಾಗಿರುವದರಿಂದ ಅವೆರಡೂ ಸೇರಿ 'ವಾರುಣೀ ಉಪನಿಷತ್ತು' ; ಹತ್ತನೆಯ ಪ್ರಪಾಠಕದಲ್ಲಿ ಯಜ್ಞೋಪಯುಕ್ತವಾದ ಮಂತ್ರಗಳೂ ಅಲ್ಲಲ್ಲಿ ಕಂಡುಬರುವದರಿಂದ ಅದು 'ಯಾಜ್ಞಿಕೀ ಉಪನಿಷತ್ತು' ಎಂದು ಅವರು ಉಪನಿಷತ್ತಿನ ಸಂಬಂಧಭಾಷ್ಯದಲ್ಲಿ ಬರೆದಿರುತ್ತಾರೆ. ತೈತ್ತಿರೀಯರ ಬ್ರಹ್ಮಯಜ್ಞತರ್ಪಣದಲ್ಲಿ ಈ ಹೆಸರುಗಳನ್ನು ಉಪಯೋಗಿಸುವ ಪದ್ಧತಿಯೂ ಇದೆ. ಆದರೆ ಶಂಕರಾಚಾರ್ಯರು ಈ ವಿಭಾಗವನ್ನು ಒಪ್ಪಿದ್ದರೋ ಇಲ್ಲವೋ ಎಂಬುದನ್ನು ಭಾಷ್ಯದ ಆಧಾರದಿಂದ ನಿಶ್ಚಯಿಸುವದಕ್ಕೆ ಬರುವಂತಿಲ್ಲ. ನಾರಾಯಣದಲ್ಲಿ ಅಥವಾ ಯಾಜ್ಞಿಕೀ

ಉಪನಿಷತ್ತಿನಲ್ಲಿ ಆರುವತ್ತುನಾಲ್ಕು ಅನುವಾಕಗಳ ದ್ರಾವಿಡಪಾಠ, ಎಂಬತ್ತೊಂಬತ್ತು ಅನುವಾಕಗಳ ಮತ್ತೊಂದು ಪಾಠ - ಹೀಗೆ ನಾಲ್ಕು ಪಾಠಸಂಪ್ರದಾಯಗಳು ಇರುವವೆಂದು ಸಾಯಣಭಾಷ್ಯದಲ್ಲಿ ಬರೆದಿದೆ. ಆಚಾರ್ಯರ ಕಾಲದಲ್ಲಿ ಈ ಸಂಪ್ರದಾಯಗಳು ಇದ್ದವೋ ಇಲ್ಲವೋ ಎಂಬುದನ್ನು ನಿರ್ಣಯಿಸುವದಕ್ಕೂ ನಮಗೆ ಸಾಕಾದಷ್ಟು ಆಧಾರವಿರುವದಿಲ್ಲ.

ಉಪನಿಷತ್ತಿನ ಭಾಷ್ಯ

''ಪದವಾಕ್ಯಪ್ರಮಾಣಗಳನ್ನು ಅನುಸರಿಸಿ ಸರ್ವ ಉಪನಿಷತ್ತುಗಳಿಗೂ ವಿವರವನ್ನು ಬರೆದಿರುವ ಗುರುಗಳಿಗೆ ನಾನು ನಿತ್ಯವೂ ನಮಸ್ಕರಿಸುವೆನು'' ಎಂಬ ವಾಕ್ಯವೊಂದು ಈ ಭಾಷ್ಯದ ಆದಿಯಲ್ಲಿ ಕಂಡುಬರುತ್ತದೆ. ಭಾಷ್ಯಕಾರರು ಇಲ್ಲಿ ಯಾವ ಗುರುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರುವರೋ ಊಹಿಸುವದಕ್ಕೆ ಬರುವಂತಿಲ್ಲ. ಸದ್ಯಕ್ಕೆ ಅದ್ವೈತಿಗಳಿಗೆಲ್ಲ ಮಾನ್ಯವಾಗಿ ನಮಗೆ ಸಿಕ್ಕುವ ಅತ್ಯಂತ ಪ್ರಾಚೀನಭಾಷ್ಯವೆಂದರೆ ಈ ಆಚಾರ್ಯರ ಭಾಷ್ಯವೇ ಆಗಿರುತ್ತದೆ. ತೈತ್ತಿರೀಯ ಭಾಷ್ಯದಲ್ಲಿ ಸಿದ್ಧಾಂತದ ಸಾರವನ್ನೆಲ್ಲ ಹಿಂಡಿಟ್ಟಿರುತ್ತದೆ. ಶಂಕರಭಗವತ್ಪಾದರವರ ಶೈಲಿಯು ಸ್ವಭಾವದಿಂದ ಲಲಿತವೇ ಆದರೂ ಈ ಉಪನಿಷತ್ತಿನ ಭಾಷ್ಯವು ಇನ್ನಷ್ಟು ವಿವರವಾಗಿರಬೇಕಾಗಿತ್ತೆಂದು ಅನ್ನಿಸುವ ಭಾಗಗಳೂ ಕೆಲವು ಕಂಡುಬರುತ್ತವೆ. ಈ ಭಾಷ್ಯಕ್ಕೆ ವಾರ್ತಿಕವನ್ನು ಬರೆದಿರುವ **ಸುರೇಶ್ವರಾಚಾರ್ಯರು** ಭಾಷ್ಯಕಾರರ ಬೆಂಬಳಿಯ ಶಿಷ್ಯರಾಗಿದ್ದರೂ ಅವರ ಬರೆವಣಿಗೆಯಿಂದ ಭಾಷ್ಯದಲ್ಲಿ ಗಡುಚಾಗಿ ಕಾಣುವ ಸ್ಥಳಗಳಲ್ಲಿ ಸಹಾಯವೇನೂ ಆಗುವಂತಿಲ್ಲ. ಭಾಷ್ಯಾರ್ಥವನ್ನು ಬಹು ಸಂಕ್ಷೇಪವಾಗಿ ವಿವರಿಸಿ, ಅದ್ವೈತಿಗಳಲ್ಲಿ ತಮ್ಮ ಕಾಲಕ್ಕೆ ಕಾಣಿಸಿಕೊಂಡಿದ್ದ ಪ್ರಕ್ರಿಯಾಭೇದಗಳನ್ನು ವಿಮರ್ಶಿಸುವದಕ್ಕೆಂದೇ ಅವರ ವಾರ್ತಿಕವು ಹೊರಟಿರುವಂತೆ ಕಾಣುತ್ತದೆ. ಮುಖ್ಯವಾಗಿ ಬ್ರಹ್ಮಜ್ಞಾನವು ವಸ್ತುತಂತ್ರವಾದದ್ದು, ವಿಧಿಗೆ ವಿಷಯವಲ್ಲ - ಎಂಬುದನ್ನು ಸ್ಪಷ್ಟಪಡಿಸುವದಕ್ಕೇ ಅವರು ತಮ್ಮ ಗ್ರಂಥದ ಬಹುಭಾಗವನ್ನು ವಿನಿಯೋಗಿಸಿರುತ್ತಾರೆ. **ಸಾಯಣಾಚಾರ್ಯರು** ಆಚಾರ್ಯರಿಗಿಂತ ಬಹಳ ಈಚಿನವರಾಗಿರುವದರಿಂದಲೂ ಕೆಲವು ಕಡೆಗಳಲ್ಲಿ ತಮ್ಮದೇ ಆಗಿರುವ ಸ್ವತಂತ್ರ ವ್ಯಾಖ್ಯಾನವನ್ನು ಅವರು ಬರೆದಿರುವದರಿಂದಲೂ ಭಾಷ್ಯಾರ್ಥವನ್ನು ನಿರ್ಣಯಿಸುವದಕ್ಕೆ ಅವರ ವೇದಭಾಷ್ಯವೂ ಅಷ್ಟು ಪ್ರಯೋಜನಕರ

ವಾಗಿರುವದಿಲ್ಲ. ಈ ಸಂನಿವೇಶದಲ್ಲಿ ನಾವು ಆಚಾರ್ಯರ ಬೇರೆಯ ಉಪನಿಷತ್ತುಗಳ ಮತ್ತು ಗೀತೆಯ ಭಾಷ್ಯಗಳ ಆಧಾರದಿಂದಲೇ ಸಾಧ್ಯವಾದಮಟ್ಟಿಗೂ ಪ್ರಕೃತದಲ್ಲಿ ಅಲ್ಲಲ್ಲಿ ಸಿಕ್ಕುವ ಕಗ್ಗಂಟುಗಳನ್ನು ಬಿಚ್ಚುವದಕ್ಕೆ ಪ್ರಯತ್ನವನ್ನು ಮಾಡಬೇಕಾಗಿರುತ್ತದೆ. ಅದರಲ್ಲಿಯೂ ಮುಖ್ಯವಾಗಿ ಆಚಾರ್ಯರ ಬೃಹದಾರಣ್ಯಕಭಾಷ್ಯವು ಉಪನಿಷದ್ಭಾಷ್ಯಗಳಲ್ಲೆಲ್ಲ ಅತ್ಯಂತ ವಿಸ್ತಾರವಾಗಿರುವದರಿಂದಲೂ ಆ ಭಾಷ್ಯಕ್ಕೆ ವಾರ್ತಿಕವನ್ನು ಬರೆದಿರುವ **ಸುರೇಶ್ವರಾಚಾರ್ಯರು** ಅಲ್ಲಿಯ ಅನೇಕಶ್ಲೋಕಗಳನ್ನು ಇಲ್ಲಿಯೂ ಹಾಗೆಯೇ ಜೋಡಿಸಿಟ್ಟಿರುವದು ಕಂಡುಬರುವದರಿಂದಲೂ ಈ ಎರಡು ಉಪನಿಷದ್ಭಾಷ್ಯಗಳ ಹೋಲಿಕೆಯಿಂದ ಭಾಷ್ಯದ ಹೃದಯವನ್ನು ಗೊತ್ತುಪಡಿಸುವದು ಯುಕ್ತವೆಂದು ನಾನು ಭಾವಿಸಿರುತ್ತೇನೆ. ಆದ್ದರಿಂದ ಮಿಕ್ಕ ವ್ಯಾಖ್ಯಾನಗಳ ಸಹಾಯವನ್ನೂ ತೆಗೆದುಕೊಂಡೇ ಹೊರಟಿದ್ದರೂ ಭಾಷ್ಯಾನುವಾದದಲ್ಲಿ ನಾನು ಸ್ವತಂತ್ರವಾಗಿಯೇ ಪ್ರವರ್ತಿಸಿರುವಂತೆ ಕೆಲವು ಕಡೆ ತಟ್ಟನೆ ಕಂಡರೆ ಅದಕ್ಕೆ ಭಾಷ್ಯಹೃದಯವನ್ನು ಭಾಷ್ಯದ ಬೆಂಬಲದಿಂದಲೇ ಕಂಡುಹಿಡಿಯಲು ಮಾಡಿರುವ ಪ್ರಯತ್ನವೇ ಕಾರಣವೆಂದು ಇಲ್ಲಿ ಬಿನ್ನವಿಸಿಕೊಂಡಿರುತ್ತೇನೆ.

ಭಾಷ್ಯದ ವಿಭಾಗಗಳು

ಉಪನಿಷತ್ತಿನಲ್ಲಿ ಶೀಕ್ಷಾವಲ್ಲಿ, ಆನಂದವಲ್ಲಿ, ಭೃಗುವಲ್ಲಿ - ಎಂಬ ಮೂರು ಭಾಗಗಳಿರುತ್ತವೆ. ಶೀಕ್ಷಾವಲ್ಲಿಯಲ್ಲಿ ವರ್ಣಸ್ವರಾದಿಗಳ ವಿಚಾರವು ಮಾತ್ರವೇ ಇರುವದಿಲ್ಲ; ಅದರಲ್ಲಿ ಹಲವು ಉಪಾಸನೆಗಳೂ ಇವೆ. ಮುಖ್ಯವಾಗಿ ಅಪರಬ್ರಹ್ಮದ ಅಥವಾ ಸೋಪಾಧಿಕಬ್ರಹ್ಮದ ಉಪಾಸನೆಯನ್ನೂ ಮುಮುಕ್ಷುಗಳಿಗೆ ಬೇಕಾಗಿರುವ ಕರ್ಮದ ವಿಚಾರವನ್ನೂ ಅಲ್ಲಿ ತಿಳಿಸಿರುತ್ತದೆ. ಆದ್ದರಿಂದ ಅದಕ್ಕೆ **ಶೀಕ್ಷಾವಲ್ಲಿ** ಎಂದು ಪ್ರಚಾರದಲ್ಲಿರುವ ಹೆಸರಾಗಲಿ 'ಸಾಂಹಿತೀ ಉಪನಿಷತ್ತು' ಎಂದು ಸಾಯಣರು ಕೊಟ್ಟಿರುವ ಹೆಸರಾಗಲಿ ಅನ್ವರ್ಥವಾಗಿರುವದಿಲ್ಲ. ಎರಡನೆಯ ವಲ್ಲಿಯಲ್ಲಿ ನಮ್ಮ ಪರಮಾತ್ಮ ಸ್ವರೂಪವಾದ ಆನಂದವೇ ಸತ್ಯವೂ ಜ್ಞಾನವೂ ಅನಂತವೂ ಆಗಿರುವ ಬ್ರಹ್ಮವು ಎಂಬ ಜ್ಞಾನದಿಂದ ಪರಮಪುರುಷಾರ್ಥವು ದೊರಕುವದೆಂದು ಪ್ರತಿಪಾದಿಸಿದೆ. ಆದ್ದರಿಂದ 'ಬ್ರಹ್ಮವಲ್ಲಿ', **ಆನಂದವಲ್ಲಿ**, 'ಬ್ರಹ್ಮಾನಂದವಲ್ಲಿ' ಎಂದು ರೂಢಿಯಲ್ಲಿರುವ ಹೆಸರುಗಳು ಅದಕ್ಕೆ ಅನ್ವರ್ಥವಾಗಿವೆ ಎನ್ನಬಹುದು. ಆದರೆ

ಆಚಾರ್ಯರು ಕಂಠೋಕ್ತವಾಗಿ **ಆನಂದವಲ್ಲಿ** ಎಂದೇ ಕರೆದಿರುವದರಿಂದ ಈ ಅನುವಾದದಲ್ಲಿ ಅದೇ ಹೆಸರನ್ನೇ ಇಟ್ಟುಕೊಂಡಿದೆ. ಮೂರನೆಯ ವಲ್ಲಿಯಲ್ಲಿ ಭೃಗುವಿಗೆ ವರುಣನು ಉಪದೇಶಿಸಿದ ತಪಸ್ಸೆಂಬ ಬ್ರಹ್ಮವಿದ್ಯಾಸಾಧನದ ವಿಚಾರವಿದೆ ; ಭೃಗುವು ಅನ್ನದಿಂದ ಹಿಡಿದು ಕ್ರಮಕ್ರಮವಾಗಿ ವಿಚಾರಮಾಡುತ್ತಾ ಆನಂದವೇ ಬ್ರಹ್ಮವೆಂದು ನಿಶ್ಚಯಿಸಿದ ವಿವರವಿದೆ ; ಬ್ರಹ್ಮದ ಬಗೆಬಗೆಯ ಉಪಾಸನೆಗಳ ಮತ್ತು ಅವುಗಳ ಫಲದ ವಿವರವೂ ಇದೆ. ಆದ್ದರಿಂದ ಅದಕ್ಕೆ **'ಭೃಗುವಲ್ಲಿ'** ಎಂದು ಪ್ರಚಾರದಲ್ಲಿರುವ ಹೆಸರಾಗಲಿ ಆನಂದವಲ್ಲಿಯನ್ನೂ ಸೇರಿಸಿಕೊಂಡು ಸಾಯಣಾಚಾರ್ಯರವರು ಇಟ್ಟಿರುವ 'ವಾರುಣೀ ಉಪನಿಷತ್ತು' ಎಂಬ ಹೆಸರಾಗಲಿ ಅದರ ಸ್ವರೂಪವನ್ನು ವರ್ಣಿಸುವಷ್ಟು ವ್ಯಾಪಕವಾಗಿರುವದಿಲ್ಲ ವೆಂದು ಹೇಳಬೇಕಾಗಿದೆ.

ಅನುವಾಕಗಳ ವಿಂಗಡ

ಈ ಮೂರು ವಲ್ಲಿಗಳ ಭಾಷ್ಯವನ್ನು ಕನ್ನಡಿಸುವದರಲ್ಲಿ ಒಂದು ನಿಯತವಾದ ವಿಭಾಗಕ್ರಮವನ್ನು ಅನುಸರಿಸುವದು ಸಾಧ್ಯವಾಗಲಿಲ್ಲ. ವೈದಿಕಪಾಠದ ಸಂಪ್ರದಾಯದಂತೆ ಶೀಕ್ಷಾವಲ್ಲಿಯಲ್ಲಿ ಹತ್ತು (ಶಾಂತಿಯೂ ಸೇರಿ ಹನ್ನೊಂದು) ಅನುವಾಕಗಳಿರುತ್ತವೆ ; ಆನಂದವಲ್ಲಿಯಲ್ಲಿ ಒಂಬತ್ತು (ಶಾಂತಿಯೂ ಸೇರಿ ಹತ್ತು), ಭೃಗುವಲ್ಲಿಯಲ್ಲಿ ಹತ್ತು - ಹೀಗೆ ಅನುವಾಕಗಳಿರುತ್ತವೆ. ಅನುವಾಕಗಳನ್ನೂ ಅವುಗಳಲ್ಲಿರುವ ವಾಕ್ಯಗಳನ್ನು ಹತ್ತು ಹತ್ತಾಗಿ ವಿಂಗಡಿಸಿಕೊಳ್ಳುವ ಹನಸುಗಳನ್ನೂ ಲೆಕ್ಕಮಾಡಿಕೊಂಡು ವೈದಿಕರು ಅಧ್ಯಯನ ಮಾಡುತ್ತಿರುವರಾದರೂ ಅರ್ಥಕ್ಕನುಸಾರವಾಗಿ ನೋಡಿದರೆ ಆನಂದವಲ್ಲಿಯಲ್ಲಾಗಲಿ ಭೃಗುವಲ್ಲಿಯಲ್ಲಾಗಲಿ ಆ ಕ್ರಮವನ್ನು ಅನುಸರಿಸುವದು ಸಾಧ್ಯವೇ ಇಲ್ಲ. ಭಾಷ್ಯಕಾರರಾಗಲಿ ಸಾಯಣರಾಗಲಿ ಈ ಪ್ರಚಾರದಲ್ಲಿರುವ ಅನುವಾಕ ವಿಭಾಗವನ್ನು ಅನುಸರಿಸಿರುವದಿಲ್ಲ. ವೇದಭಾಷ್ಯವನ್ನು ಅನುವಾಕಾನುಸಾರವಾಗಿ ವಿಂಗಡಿಸಿಕೊಂಡು ಬರೆದಿರುವ ಸಾಯಣರು ಕೂಡ ಆನಂದವಲ್ಲಿಯ ಶಾಂತಿಯನ್ನು ಬಿಟ್ಟು ಮಿಕ್ಕದ್ದೆಲ್ಲ ಒಂದು ಅನುವಾಕವೆಂದೂ ಭೃಗುವಲ್ಲಿಯೇ ಮತ್ತೊಂದು ಅನುವಾಕವೆಂದೂ ಭಾವಿಸಿ ಎಂಟನೆಯ ಪ್ರಪಾಠಕಕ್ಕೆ ಮೂರು ಅನುವಾಕಗಳೆಂದು ಎಣಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ನಾನು ಅನುವಾಕಗಳ ವಿಂಗಡಣೆಯನ್ನು ಲೆಕ್ಕಕ್ಕೆ ತಾರದೆ ಭಾಷ್ಯದ ಪ್ರತಿಪಾದನೆಗೆ ತಕ್ಕಂತೆ

ಅರ್ಥಕ್ಕನುಗುಣವಾಗಿ ಈ ಎರಡು ವಲ್ಲಿಗಳನ್ನೂ ಕೆಲವು ಖಂಡಗಳಾಗಿ ವಿಂಗಡಿಸಿಕೊಂಡಿರುತ್ತೇನೆ. ಭಾಷ್ಯವನ್ನು ಇಂಗ್ಲಿಷಿಗೆ ರೂಪಾಂತರಗೊಳಿಸಿರುವ **ಕೈಲಾಸವಾಸಿ ಎ. ಮಹಾದೇವಶಾಸ್ತ್ರಿ**ಗಳವರ ಗ್ರಂಥದಿಂದ ಈ ವಿಭಾಗಕ್ರಮವೇ ಸರಿಯೆಂದು ನನಗೆ ಮೊಟ್ಟಮೊದಲು ಮನದಲ್ಲಿ ಮಿಂಚಿತಾದರೂ ವಿಭಾಗಗಳನ್ನೂ ಅವುಗಳ ಹೆಸರುಗಳನ್ನೂ ನನಗೆ ಯುಕ್ತವಾಗಿ ಕಂಡಂತೆ ಮಾರ್ಪಡಿಸಿಕೊಂಡಿರುತ್ತೇನೆ. ಭಾಷ್ಯದ ವಿಚಾರಸರಣಿಯನ್ನು ಮನದಟ್ಟುಮಾಡಿಕೊಳ್ಳಬೇಕೆನ್ನುವವರಿಗೆ ಈ ಪದ್ಧತಿಯಿಂದ ಹೆಚ್ಚಿನ ಸಹಾಯವಾಗುವದೆಂದು ನಂಬಿರುತ್ತೇನೆ.

ಭಾಷ್ಯದ ಮುಖ್ಯಾಂಶಗಳು

ಭಾಷ್ಯದಲ್ಲಿ ಸಿದ್ಧಾಂತಕ್ಕೆ ಅಡಿಗಲ್ಲಾಗಿರುವ ಅನೇಕ ವಿಷಯಗಳನ್ನು ಪ್ರತಿಪಾದಿಸಿರುತ್ತದೆ. ಮುಖ್ಯವಾಗಿ ಕರ್ಮಗಳಿಗೂ ಜ್ಞಾನಕ್ಕೂ ಇರುವ ಸಂಬಂಧ, ಅಪರಬ್ರಹ್ಮಪ್ರಾಪ್ತಿಗೂ ಪರಬ್ರಹ್ಮಪ್ರಾಪ್ತಿಗೂ ಇರುವ ತಾರತಮ್ಯ, ನಿರ್ವಿಶೇಷವಾದ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಕ್ಕೆ ತಂದುಕೊಂಡರೆ ಪರಮಮುಕ್ತಿಯು ಲಭಿಸುವದು ಎಂಬುದರ ರಹಸ್ಯ, ದ್ವೈತವೂ ಜೀವನ ಸಂಸಾರಿತ್ವವೂ ಅವಿದ್ಯಕವೆಂದೂ ವಿದ್ಯಾವಿದ್ಯೆಗಳು ಕೂಡ ನಿಜವಾಗಿ ಆತ್ಮನ ಧರ್ಮಗಳಲ್ಲವೆಂದೂ ಮನಗಾಣಿಸುವ ಯುಕ್ತಿ - ಇವಿಷ್ಟನ್ನು ಜಿಜ್ಞಾಸುಗಳು ಮನದಟ್ಟುಮಾಡಿಕೊಳ್ಳತಕ್ಕದ್ದಿದೆ. ಒಂದೊಂದರ ವಿಷಯಕ್ಕೂ ದಿಗ್ದರ್ಶಕವಾಗಿ ಎರಡು ಮಾತುಗಳನ್ನು ಇಲ್ಲಿ ಹೇಳುವದು ಅಂಥವರಿಗೆ ಸಹಾಯಕವಾದೀತೆಂದು ನಂಬಿರುತ್ತೇನೆ.

(೧) ಕರ್ಮಗಳಿಗೂ ಜ್ಞಾನಕ್ಕೂ ಸಂಬಂಧ

ಕರ್ಮದಿಂದಲೇ ಎಂದಿಗೂ ಮೋಕ್ಷವಾಗಲಾರದು (ಭಾ. ಭಾ. ೮, ೭೧). ಸಂಚಿತಕರ್ಮಗಳೂ ಆಗಾಮಿಕರ್ಮಗಳೂ ಯಾವಾಗಲೂ ಉಳಿದುಕೊಂಡೇ ಇರುತ್ತವೆಯಾದ್ದರಿಂದ ಅವುಗಳ ಫಲದಿಂದ ಬಿಡುಗಡೆಯನ್ನು ಹೊಂದುವದಕ್ಕೆ ಯಾವ ಕರ್ಮವೂ ಸಹಾಯಕವಾಗಲಾರದು (ಭಾ. ಭಾ. ೪). ಉಪಾಸನೆಯಿಂದ **ಕಾರ್ಯಬ್ರಹ್ಮ**ವನ್ನು ಮುಟ್ಟಬಹುದು ; ಆದರೆ ಎಲ್ಲಕ್ಕೂ ಕಾರಣವಾಗಿರುವ ಪರಬ್ರಹ್ಮವನ್ನು ಸೇರುವದು ಅದರಿಂದಾಗಲಾರದು. ಕರ್ಮಕ್ಕೆ ಉತ್ಪತ್ತಿ, ಸಂಸ್ಕಾರ, ವಿಕಾರ, ಆಪ್ತಿ - ಎಂಬ ನಾಲ್ಕೇ ಬಗೆಯಾದ ಫಲವನ್ನು

ಕೊಡುವ ಶಕ್ತಿಯಿದೆ ; ಆದರೆ ಬ್ರಹ್ಮಸ್ವರೂಪವಾದ ನಿತ್ಯವಾದ ಮುಕ್ತಿಯು ಈ ನಾಲ್ಕರಲ್ಲಿ ಒಂದೂ ಅಲ್ಲ (೭೪ ರಿಂದ ೭೬). ನಾವು ಅಜ್ಞಾನದಿಂದಲೇ ಪರಬ್ರಹ್ಮಕ್ಕಿಂತ ಬೇರೆಯಾಗಿರುವದರಿಂದ ಜ್ಞಾನದಿಂದಲೇ ಅದನ್ನು ಸೇರಬೇಕಾಗಿರುವದು (೯೦ ರಿಂದ ೯೩). ಅಕರ್ತ್ರಾತ್ಮ ಬುದ್ಧಿರೂಪವಾದ ಬ್ರಹ್ಮಜ್ಞಾನದೊಳಗೆ ಅಜ್ಞಾನದಿಂದಾಗಿರುವ ಕರ್ತೃತ್ವಬುದ್ಧಿಯಿಂದೊಡಗೂಡಿದ ಕರ್ಮವು ಇರಲೇ ಆರದು (೭೭). ಆದರೂ ಕರ್ಮಗಳನ್ನು ವಿಧಿಸಿರುವದು ವ್ಯರ್ಥವಲ್ಲ ; ಅವುಗಳನ್ನು ಉಪಾಸನೆಯ ಜೊತೆಗೆ ಅನುಷ್ಠಾನಮಾಡುತ್ತಿದ್ದರೆ ಅಪರಬ್ರಹ್ಮವನ್ನು ಸೇರಿ ಸ್ವಾರಾಜ್ಯವನ್ನು ಪಡೆದುಕೊಳ್ಳಬಹುದು ; ನಿಷ್ಕಾಮವಾಗಿ ಅನುಷ್ಠಾನಮಾಡಿ ಚಿತ್ತಶುದ್ಧಿಯ ಮೂಲಕವಾಗಿ ಪರಬ್ರಹ್ಮದ ಜ್ಞಾನವನ್ನೂ ಪಡೆದುಕೊಳ್ಳಬಹುದು (ಭಾ. ೫೩ ರಿಂದ ೫೯, ೭೯, ೮೧). ಆದರೆ ಮೋಕ್ಷಕ್ಕೆ ಗೃಹಸ್ಥಾಶ್ರಮದ ಕರ್ಮಗಳೇ ಆಗಬೇಕೆಂಬ ನಿರ್ಬಂಧವೇನೂ ಇಲ್ಲ ; ಪೂರ್ವಜನ್ಮದಲ್ಲಿ ಕರ್ಮವನ್ನು ಮಾಡಿ ಚಿತ್ತಸಂಸ್ಕಾರವಾಗಿರುವವರಿಗೆ ಆಶ್ರಮಾಂತರದಲ್ಲಿಯೇ ಇದ್ದುಕೊಂಡು ಸತ್ಯ, ಬ್ರಹ್ಮಚರ್ಯ, ಅಹಿಂಸೆ, ತಪಸ್ಸು - ಮುಂತಾದ ಸಾಧನಗಳಿಂದಲೇ ಈಶ್ವರನ ಅನುಗ್ರಹವುಂಟಾಗಿ ಜ್ಞಾನವುಂಟಾಗಬಹುದಾಗಿದೆ. ಇದಲ್ಲದೆ ಶ್ರವಣ, ಮನನ, ನಿದಿಧ್ಯಾಸನ - ಎಂಬಿವೇ ಜ್ಞಾನಕ್ಕೆ ಬೇಕಾದ ಸಾಕ್ಷಾತ್ಸಾಧನಗಳಾಗಿರುತ್ತವೆ (೮೦ ರಿಂದ ೮೫) - ಎಂದು ಭಾಷ್ಯಕಾರರು ಪ್ರತಿಪಾದಿಸಿರುತ್ತಾರೆ.

ಕರ್ಮಕಾಂಡದಲ್ಲಿ ಅಲ್ಲಲ್ಲಿ ಜ್ಞಾನವಾಕ್ಯಗಳೂ ಕಾಣುವದುಂಟು ; ಜ್ಞಾನಕಾಂಡದಲ್ಲಿ ಕರ್ಮಗಳೂ ವಿಹಿತವಾಗಿರುವದು ಕಾಣುತ್ತದೆ. ಆದರೆ ಕರ್ಮಕಾಂಡದಲ್ಲಿರುವ ಜ್ಞಾನವು ಕರ್ಮಕ್ಕೆ ಅಂಗವಾಗಿರುತ್ತದೆ ; ಜ್ಞಾನಕಾಂಡದಲ್ಲಿರುವ ಕರ್ಮಗಳೂ ಜ್ಞಾನಾರ್ಥವಾಗಿರುತ್ತವೆ. ಕರ್ಮವು ಚಿತ್ತಶುದ್ಧಿಗಾಗಿ ಉಪಯುಕ್ತವಾಗಿ ಜ್ಞಾನಕ್ಕೆ ಹೇತುವಾಗಿರುತ್ತದೆ. ಅದು ಅವಿದ್ಯೆಯಿಂದಾಗಿರುವ ಕಾಮವನ್ನು ಮೂಲವಾಗಿಟ್ಟುಕ್ಕೊಂಡೇ ಹೊರಟಿರುವದರಿಂದ ಅವಿದ್ಯೆಯನ್ನು ಅತ್ಯಂತಿಕವಾಗಿ ನಾಶಪಡಿಸುವ ಜ್ಞಾನವು ಜ್ಞಾನಕಾಂಡದಲ್ಲಿ ಮಾತ್ರವೇ ಸಿಕ್ಕುತ್ತದೆ ಎಂಬುದನ್ನು ಆಚಾರ್ಯರು ಈ ಉಪನಿಷತ್ತಿನ ಭಾಷ್ಯದಲ್ಲಿ ಸ್ಪಷ್ಟಪಡಿಸಿ ಜ್ಞಾನಕರ್ಮಸಮುಚ್ಚಯವಾದಿಗಳ ಭ್ರಾಂತಿಯನ್ನು ತೊಲಗಿಸಿರುತ್ತಾರೆ (ಭಾ. ಭಾ. ೧, ೨, ೩೦, ೫೪, ೫೯, ೯೦).

(೨) ಪರಾಪರಬ್ರಹ್ಮಪ್ರಾಪ್ತಿಗಳ ತಾರತಮ್ಯ

ಬ್ರಹ್ಮವು ಅಪರಬ್ರಹ್ಮ, ಕಾರ್ಯಬ್ರಹ್ಮ, ಸೋಪಾಧಿಕಬ್ರಹ್ಮ - ಎಂಬ ಹೆಸರಿನ **ಹಿರಣ್ಯಗರ್ಭ**ನೆಂದೂ (೧೪, ೫೦, ೭೬, ೯೦) ಪರಬ್ರಹ್ಮ, ಕಾರಣಬ್ರಹ್ಮ, ನಿರುಪಾಧಿಕಬ್ರಹ್ಮ - ಎಂಬ ಸರ್ವರ ಆತ್ಮರೂಪವಾದ ಬ್ರಹ್ಮವೆಂದೂ (೫೦, ೭೬, ೯೦) ಎರಡು ಬಗೆಯಾಗಿರುತ್ತದೆ. **ಅಪರಬ್ರಹ್ಮ**ವನ್ನು ಪಾಜ್ಯರೂಪದಿಂದ, 'ಮಹಃ' ಎಂಬ ವ್ಯಾಹೃತಿಯ ಮೂಲಕವಾಗಿ, ಓಂಕಾರದ ಮೂಲಕವಾಗಿ - ಎಂದು ಬಗೆಬಗೆಯಿಂದ ಉಪಾಸನೆಮಾಡುವರು ; ಇದೇ ಅಪರಬ್ರಹ್ಮವಿದ್ಯೆ, ಬ್ರಹ್ಮವನ್ನು ಹೃದಯಪುಂಡರೀಕದಲ್ಲಿ ಇಂಥಿಂಥ ಗುಣಗಳುಳ್ಳದ್ದೆಂದು, ಉಪಾಸನೆಮಾಡಿ ಸಾಕ್ಷಾತ್ಕಾರಮಾಡಿಕೊಂಡರೆ, ಸುಷುಮ್ನಾನಾಡಿಯ ಮೂಲಕವಾಗಿ ಶರೀರವನ್ನು ಬಿಟ್ಟು ಹೊರಟು ಹಿರಣ್ಯಗರ್ಭನ ಸಾಯುಜ್ಯವನ್ನು ಪಡೆಯುತ್ತಾನೆ. ಆ ಸಾಯುಜ್ಯವನ್ನು ಪಡೆದವನಿಗೆ ಐಶ್ವರ್ಯವು - ಎಂದರೆ ಧರ್ಮಜ್ಞಾನಸ್ವಾತಂತ್ರ್ಯಾದಿಗಳು ಲಭಿಸುವದು ಫಲವು (೪೦ ರಿಂದ ೪೫, ೧೪೧). ಅವನು ಸರ್ವಕಾಮಗಳನ್ನೂ ಪಡೆಯುವನು. ಅಪರಬ್ರಹ್ಮವಿದ್ಯೆಯನ್ನು ಕ್ರಮಕ್ರಮವಾಗಿ ವಿವರಿಸುವದೇ ಶೀಕ್ಷಾವಲ್ಲಿಯ ಮುಖ್ಯೋದ್ದೇಶವು.

ಆದರೆ **ಪರಬ್ರಹ್ಮವನ್ನು** ಪಡೆದುಕೊಂಡವನಿಗೆ ಪರಮಪುರುಷಾರ್ಥವೇ ದೊರಕುವದು. ಪರಬ್ರಹ್ಮಪ್ರಾಪ್ತಿ ಎಂದರೆ ಅಜ್ಞಾನದಿಂದ ಅಪ್ರಾಪ್ತವಾದಂತೆ ಇದ್ದ ತನ್ನ ಆತ್ಮನೇ ಆಗಿರುವ ಸರ್ವಾಧಾರವಾದ ಸತ್ಯಜ್ಞಾನಾನಂತರೂಪವಾದ ಪರಮಾನಂದವನ್ನು ಅನಾತ್ಮವಿಷಯಗಳಿಂದ ಹಿಂತಿರುಗಿ ನಾನೇ ಎಲ್ಲರ ಆತ್ಮನು ಎಂದು ಇಲ್ಲಿಯೇ ಅಂತಃಕರಣಸಾಕ್ಷಿಯ ರೂಪದಿಂದಲೇ ಅರಿತುಕೊಳ್ಳುವದು (೯೦ ರಿಂದ ೧೧೩, ೨೧೩, ೨೨೦). ಈ ಆತ್ಮನನ್ನು ವಿಷಯವಾಗಿ ಅರಿತುಕೊಳ್ಳಬೇಕೆಂದೇನೂ ಅರ್ಥವಲ್ಲ ; ತಾನು ಅದ್ವಿತೀಯನು, ಜ್ಞಾತೃಜ್ಞಾನಜ್ಞೇಯವಿಭಾಗಶೂನ್ಯನು - ಎಂಬ ಅನುಭವವನ್ನು ಅಂತಃಕರಣದಲ್ಲಿ ಪಡೆದುಕೊಳ್ಳುವದೇ ಪ್ರಾಪ್ತಿ (೯೯, ೧೦೦). ಈ ಆತ್ಮಜ್ಞಾನವನ್ನುಂಟುಮಾಡುವದಕ್ಕೆಂದೇ ಶ್ರುತಿಯಲ್ಲಿ ಬ್ರಹ್ಮವು ತಾನು ಬಹುವಾಗಿ ಆಕಾಶಾದಿಜಗತ್ತನ್ನು ಸೃಷ್ಟಿಮಾಡಿ ಅದರೊಳಗೆ ಹೊಕ್ಕಿತೆಂದೂ ಜ್ಞಾನಿಗಳು ಅದರ ಸ್ವರೂಪವನ್ನು ಪಡೆದುಕೊಂಡು ಆನಂದಿಗಳಾಗಿ ಅಭಯದಿಂದ ತಮ್ಮ ಪರಮಾರ್ಥಸ್ವರೂಪದಲ್ಲಿ ನೆಲೆನಿಲ್ಲುವರೆಂದೂ ವರ್ಣಿಸಿದೆ

ಪೀಠಿಕೆಯಲ್ಲಿ ಸೂಚಿಸಿರುವ ಭಾ. ಭಾ. ಗಳು ಗ್ರಂಥರಚನೆಯ ಮುದ್ರಣಕ್ಕೆ ಹೋಲುತ್ತವೆ.

(೨೦೯, ೨೨೧). ಅಪರಬ್ರಹ್ಮವನ್ನು ಸೇರುವವನು ಸರ್ವಕಾಮಗಳನ್ನೂ ಒಂದೊಂದಾಗಿ ಪಡೆದುಕೊಳ್ಳುತ್ತಾನೆ ; ಆದರೆ ಪರಬ್ರಹ್ಮವನ್ನು ಅರಿತುಕೊಂಡವನು ಎಲ್ಲಾ ಕರ್ಮಗಳನ್ನೂ ಎಲ್ಲಾ ಕಾಮಗಳನ್ನೂ ಬ್ರಹ್ಮರೂಪವಾಗಿಯೇ ಮಾಡಿಕೊಳ್ಳುವದರಿಂದ ಅವನು ಬ್ರಹ್ಮರೂಪದಿಂದಲೇ ಎಲ್ಲಾ ಕಾಮಗಳನ್ನೂ ಒಟ್ಟಿಗೆ ಅನುಭವಿಸುವನು (೯೨, ೧೦೯, ೨೨೬). ಅಪರಬ್ರಹ್ಮವನ್ನು ಪಡೆಯುವವನಿಗೆ ತಾನು ಇಚ್ಛಿಸಿದ ರೂಪವೂ ಇಚ್ಛಿಸಿದ ಭೋಗವೂ ಸಿಕ್ಕುವವು ; ಅವನು ಯಾವ ಲೋಕವನ್ನು ಬೇಕಾದರೂ ಸಂಕಲ್ಪಮಾತ್ರದಿಂದ ಪಡೆದುಕೊಳ್ಳಬಹುದು. ಇಂಥ ಐಶ್ವರ್ಯವು ಅವನಿಗೆ ಉಪಾಸನೆಯ ಫಲವಾಗಿ ದೊರಕುತ್ತದೆ. ಆದರೆ ಪರಬ್ರಹ್ಮಜ್ಞಾನಿಯು ಅಪರಬ್ರಹ್ಮವನ್ನು ಪಡೆದುಕೊಂಡವನಿಗೂ ಆತ್ಮನಾಗಿರುವದರಿಂದ ಅವನ ಭೋಗವೂ ಇವನದೇ ಆಗಿರುತ್ತದೆ (೨೫೮). ಭೋಕ್ತೃ, ಭೋಗ್ಯ, ಭೋಗ - ಎಂಬ ವಿಭಾಗವು ಅವಿದ್ಯೆಯಿಂದಾಗಿರುವದಾದ್ದರಿಂದ ಇಂಥ ಜ್ಞಾನಿಯು ಅದೆಲ್ಲವೂ ತಾನೇ ಆಗಿರುವೆನೆಂದೂ ತನಗಿಂತ ವ್ಯತಿರಿಕ್ತವಾದ ಭೋಗ್ಯಾದಿಗಳು ಇಲ್ಲವೆಂದೂ ತಿಳಿದಿರುತ್ತಾನೆ (೨೫೭, ೨೬೨, ೨೬೩). ಉಪಾಸಕರು ಅನ್ಯದೃಷ್ಟಿಯಿಂದ ಉಪಾಸನೆಮಾಡುವ ಪ್ರಾಣಾದಿಗಳೂ ವಾಕ್ಯ, ವೃಷ್ಟಿ - ಮುಂತಾದವುಗಳಲ್ಲಿ ಕ್ಷೇಮ, ತೃಪ್ತಿ - ಮುಂತಾದ ರೂಪದಿಂದ ಬ್ರಹ್ಮವು ನೆಲೆಸಿರುವದೆಂದು ಮಾಡುವದರಿಂದ ದೊರೆಯುವ ಫಲಗಳೂ ಬ್ರಹ್ಮವೇ ಆಗಿರುವದರಿಂದ ಬ್ರಹ್ಮಾಭಿನ್ನನಾದ ಜ್ಞಾನಿಯನ್ನೇ ನಿಜವಾಗಿ ಅವರೆಲ್ಲರೂ ಉಪಾಸನೆಮಾಡುತ್ತಿರುವರು (೨೪೮ ರಿಂದ ೨೫೧). ಬ್ರಹ್ಮವನ್ನು ಯಾವ ಯಾವ ದೃಷ್ಟಿಯಿಂದ ಉಪಾಸನೆಮಾಡುವರೋ ಅಂಥಂಥ ಫಲಗಳು ದೊರಕುವವು (೨೫೧). ಆದರೆ ಬ್ರಹ್ಮವೆಂದೇ ಅದನ್ನು ಅರಿತುಕೊಂಡವನಿಗೆ ಕ್ರಿಯಾಕಾರಕಫಲರೂಪವಾದ ಯಾವ ಸಂಸಾರವೂ ಇರುವದಿಲ್ಲ, ಅವನು ಬ್ರಹ್ಮವೇ ಆಗಿರುತ್ತಾನೆ (೨೫೨ ರಿಂದ ೨೫೪).

(೩) ಸದ್ಯೋಮುಕ್ತಿ

ಪರಬ್ರಹ್ಮವನ್ನು ಹೃದಯದಲ್ಲಿರುವ ಬುದ್ಧಿಗೆ ಸಾಕ್ಷಿಯಾಗಿ ಅರಿತುಕೊಳ್ಳುವದೇ ಅದರ ಪ್ರಾಪ್ತಿಯು, ಅದೇ ಪರಮಪುರುಷಾರ್ಥವು. ಬ್ರಹ್ಮವು ನಮ್ಮ ಸ್ವರೂಪವೇ ಎಂದು ಅರಿಯದೆ ಅನಾತ್ಮಗಳಾದ ಪಂಚಕೋಶಗಳನ್ನೇ ನಾವೆಂದು ಭಾವಿಸಿರುವ ಅವಿದ್ಯೆಯಿಂದ ಅದು ಅಪ್ರಾಪ್ತವಾಗಿರುವದು. ಅದರ ನಿಜವನ್ನು

ಅರಿತುಕೊಂಡ ಕೂಡಲೆ ಅದು ದೊರೆಯುವದು (೯೩). ಬ್ರಹ್ಮವು ನಮ್ಮ ತೀರ ಒಳಗಿನ ಆತ್ಮನಾಗಿರುತ್ತದೆ. ಅದನ್ನು ಅರಿತುಕೊಳ್ಳುವದಕ್ಕಾಗಿ ಅನ್ನಮಯವೇ ಮುಂತಾದ **ಪಂಚಕೋಶ**ಗಳನ್ನು ಒಂದೊಂದಾಗಿ ಅರಿತುಕೊಳ್ಳುತ್ತಾ ಹೋಗಬೇಕು (೧೧೭). ನಮ್ಮ ಅನ್ನಮಯದೇಹವು ಸ್ಥೂಲವಾಗಿರುವ ವಿರಾಟ್ಪುರುಷನ ಉಪಾಧಿಯಾದ ಸಮಷ್ಟಿಶರೀರದಲ್ಲಿ ಅಡಕವಾಗಿದೆ. ಪ್ರಾಣವು ಸೂತ್ರಾತ್ಮನಲ್ಲಿ, ಮನಸ್ಸು ಮತ್ತು ವಿಜ್ಞಾನಗಳು ಹಿರಣ್ಯಗರ್ಭನ ಜ್ಞಾತೃತ್ವಕರ್ತೃತ್ವಗಳಲ್ಲಿ ಅಡಕವಾಗಿರುತ್ತವೆ, ನಮ್ಮ ಭೋಕ್ತೃತ್ವದ ಸುಖವು ಹಿರಣ್ಯಗರ್ಭನ ಆನಂದದಲ್ಲಿ ಅಡಕವಾಗಿರುತ್ತದೆ. ಅನ್ನಮಯನಿಂದ ಹಿಡಿದು ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ - ಎಂಬ ಪಂಚಕೋಶಗಳನ್ನು ಅರಿತುಕೊಳ್ಳುತ್ತಾ ಹೋದಂತೆ ಒಳಗೊಳಗೆ ಹೊಕ್ಕು ಕೊನೆಗೆ ಆನಂದಮಯನಿಗೂ ಆತ್ಮನಾಗಿರುವ ಆನಂದಸ್ವರೂಪವಾದ ನಮ್ಮ ನಿಜವಾದ ಆತ್ಮನಾದ ಬ್ರಹ್ಮದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಹುದು (೧೪೯). ಆನಂದಮಯನಾದ ಆತ್ಮನೇ ನಮಗೆ ತೀರ ಒಳಗಿರುವಂತೆ ತೋರಿದರೂ ಅವನು ಸವಿಶೇಷನಾಗಿರುವದರಿಂದಲೂ ಫಲರೂಪದಿಂದ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುತ್ತಿರುವದರಿಂದಲೂ ತಾರತಮ್ಯಯುಕ್ತನಾಗಿರುವದರಿಂದಲೂ ಅವನು ಪರಮಾತ್ಮನಲ್ಲ (೧೪೫, ೧೪೬). ಆನಂದವೇ ನಿಜವಾದ ಆತ್ಮನು (೧೪೮)"; ಈ ಆನಂದವು ವಿಷಯವಿಷಯಿಗಳ ಸಂಬಂಧದಿಂದ ಹುಟ್ಟುವದಲ್ಲ ; ಮನುಷ್ಯರಿಂದ ಹಿಡಿದು ಹಿರಣ್ಯಗರ್ಭನವರೆಗೆ ತೋರುವ ಆನಂದದ ಉತ್ಕರ್ಷವೆಲ್ಲ ಉಪಾಧಿತಾರತಮ್ಯದಿಂದ ಆಗಿರುವದೇ ಹೊರತು ಸ್ವತಃ ಅದರಲ್ಲಿ ಯಾವ ತಾರತಮ್ಯವೂ ಇಲ್ಲ (೨೦೦ ರಿಂದ ೨೦೮). ಅದರಲ್ಲಿ ಯಾವ ವಿಶೇಷವೂ ಇರುವದಿಲ್ಲ (೧೯೧), ಅದನ್ನು ಯಾವ ಮಾತಿನಿಂದಲಾದರೂ ತಿಳಿಸುವದಕ್ಕಾಗಲಿ, ಯಾವ ಪ್ರತ್ಯಯದಿಂದಲಾದರೂ ವಿಷಯೀಕರಿಸುವದಕ್ಕಾಗಲಿ ಆಗುವಹಾಗಿಲ್ಲ (೨೨೧, ೨೨೨). ಅದು ಸತ್ಯ, ಜ್ಞಾನ, ಅನಂತ - ಎಂದು ಹೇಳುವದೂ ಆ ಶಬ್ದಪ್ರತ್ಯಯಗಳಿಗೆ ಅದು ವಿಷಯವೆಂಬ ಅಭಿಪ್ರಾಯದಿಂದ ಅಲ್ಲ ; ಆ ಶಬ್ದಗಳಿಗೆ ಅದು ಬರಿಯ ಲಕ್ಷ್ಯಾರ್ಥವು (೧೦೭). ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಸತ್ಯಜ್ಞಾನಾನಂತವೆಂದು ನಾವು ನಮ್ಮಲ್ಲಿಯೇ ಕಂಡುಕೊಳ್ಳುವದಕ್ಕೆ ಆಗುತ್ತದೆ. (೧೧೪, ೨೨೨). ಹೀಗೆ ಕಂಡುಕೊಳ್ಳುವದೆಂಬುದೂ ಅವಿದ್ಯೆಯನ್ನು ತೊಲಗಿಸಿಕೊಳ್ಳುವದರಿಂದ ಮಾತ್ರವೇ (೨೨೦) ಆಗಿರುತ್ತದೆ.

(೪) ಸಂಸಾರವೆಲ್ಲವೂ ಅವಿದ್ಯಕ

ನಿರ್ವಿಶೇಷವಾದ ಈ ಬ್ರಹ್ಮವೇ ಮೊದಲು ಸೂಕ್ಷ್ಮರೂಪದಿಂದ ಅವ್ಯಾಕೃತವಾಗಿದ್ದು ಬಳಿಕ ಮೂರ್ತಾಮೂರ್ತಗಳ ರೂಪದಿಂದ **ವ್ಯಾಕೃತ**ವಾಗಿರುವಂತೆ ಅವಿದ್ಯೆಯಿಂದ ತೋರುತ್ತಿರುವದು. ಶರೀರದಲ್ಲಿ ಜೀವರೂಪದಿಂದ ಒಳಹೊಕ್ಕು ನೋಡುವದು, ಕೇಳುವದು, ಯೋಚಿಸುವದು, ಅರಿತುಕೊಳ್ಳುವದು, ಮುಂತಾದ - ಸಂಸಾರಧರ್ಮದಿಂದ ಕೂಡಿಕೊಂಡಿರುವಂತೆಯೂ ತೋರುತ್ತಿರುವದು (೧೬೪ ರಿಂದ ೧೮೧). ವ್ಯಾಕೃತಾವ್ಯಾಕೃತವಾದ ನಾಮರೂಪಗಳೆಂಬ ಉಪಾಧಿಗಳು ಆತ್ಮನಾದ ಈ ಬ್ರಹ್ಮವನ್ನು ಬಿಟ್ಟು ಎಂದಿಗೂ ಇರಲಾರವು. ಬ್ರಹ್ಮವೇ ಅವುಗಳ ತಿರುಳು (೧೬೬). ಆದ್ದರಿಂದ **ಅನ್ನಮಯಾದಿಪಂಚಕೋಶಗಳೂ ಅವಿದ್ಯಾಕೃತವಾಗಿರುತ್ತವೆ** (೧೨೨, ೧೨೭). ಆದ್ದರಿಂದ ಮಿಥ್ಯಾಕಲ್ಪಿತವಾದ (೧೩೩) ಈ ಕೋಶಗಳ ಧರ್ಮವನ್ನು ಆತ್ಮನು ಯಾವಾಗಲೂ ಮೀರಿರುತ್ತಾನೆ. ಬ್ರಹ್ಮವನ್ನು ಅರಿತವನಿಗೆ ಈ ದ್ವೈತವು ಸತ್ಯವಾಗಿ ತೋರುವದೇ ಇಲ್ಲ. ಆದ್ದರಿಂದಲೇ ಶ್ರುತಿಯು ಬ್ರಹ್ಮವನ್ನು ಅರಿತುಕೊಳ್ಳಬೇಕೆಂದು ಉಪದೇಶಿಸುತ್ತದೆ ; ಅರಿತಮೇಲೆ ಮಾಡಬೇಕಾದ ಸಾಧನವನ್ನು ಯಾವದನ್ನೂ ಉಪದೇಶಿಸುವದಿಲ್ಲ (೨೧೩).

ದ್ವೈತವು ಪರಮಾರ್ಥವಲ್ಲ ಎಂಬುದು **ಸುಷುಪ್ತಿಯ ಅನುಭವ**ದಿಂದ ಸಿದ್ಧವಾಗುತ್ತದೆ. ಎಚ್ಚರಕನಸುಗಳಲ್ಲಿ ಮಾತ್ರ ದ್ವೈತವು ಕಾಣುವದರಿಂದಲೂ ತನಿನಿದ್ರೆಯಲ್ಲಿಯೂ ಸಮಾಧಿಯಲ್ಲಿಯೂ ಕಾಣಿಸದೆ ಇರುವದರಿಂದಲೂ ಅದು ಪರಮಾರ್ಥವಲ್ಲವೆಂದೂ ಸ್ಪಷ್ಟವಾಗುತ್ತದೆ. ಸುಷುಪ್ತಿಯು ಸ್ವಾಭಾವಿಕವಾದ ಅವಸ್ಥೆ ; ಎಚ್ಚರಕನಸುಗಳಲ್ಲಿ ಆತ್ಮನಿಗೆ ವಿಶೇಷವಾದ ಅನುಭವವಾಗುತ್ತಿರುವದರಿಂದಲೂ ಆ ಅನುಭವಕ್ಕೆ ಕಾರಕಗಳ ಅಪೇಕ್ಷೆಯಿರುವದರಿಂದಲೂ ಅವು ಸ್ವಾಭಾವಿಕವಾದ ಅವಸ್ಥೆಗಳಲ್ಲ, ಅವಿದ್ಯಾಕೃತವಾಗಿರುತ್ತವೆ. ಅದ್ದರಿಂದ **ದ್ವೈತವು ಅವಿದ್ಯಾಕೃತ**ವೆಂದೂ ಆತ್ಮನು ಅದ್ವಿತೀಯನೆಂದೂ ನಿರ್ಧರಿಸುತ್ತದೆ (೨೧೫).

(೫) ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ

ಅವಿದ್ಯೆಯಿಂದ ತೋರುವ ಸಂಸಾರವು ವಿದ್ಯೆಯಿಂದ ಅಪರಮಾರ್ಥವೆಂದು ತಿಳಿಯಬರುತ್ತದೆ - ಎಂದದ್ದರಿಂದ ವಿದ್ಯಾವಿದ್ಯೆಗಳೆಂಬ ವಿಶೇಷಗಳು

ಆತ್ಮನಲ್ಲಿರುತ್ತವೆಯೆಂದು ತಿಳಿಯುವದಕ್ಕಿಲ್ಲ. ಏಕೆಂದರೆ ಅವಿದ್ಯೆಯೆಂದರೆ ಬ್ರಹ್ಮಸ್ವರೂಪವನ್ನರಿಯದೆ ಅನೃತವಾದ ಅನಾತ್ಮಗಳನ್ನು ತಾನೆಂದು ತಪ್ಪಾಗಿ ತಿಳಿದುಕೊಂಡಿರುವದು (೯೩) ; ವಿದ್ಯೆಯೆಂದರೆ ಬ್ರಹ್ಮಸ್ವರೂಪವು ಇಂಥದ್ದೆಂದು ಅರಿತುಕೊಳ್ಳುವದು. ಇವೆರಡೂ ಅಂತಃಕರಣದ ಧರ್ಮಗಳಾಗಿರುತ್ತವೆ (೨೧೮). ಅವು ಅನುಭವಕ್ಕೆ ವಿಷಯವಾಗಿರುವದರಿಂದಲೂ ವಿದ್ಯೆಯ ಉಪದೇಶ, ಗ್ರಹಣ-ಇವುಗಳಿಂದ ಅವಿದ್ಯೆಯು ಹೋಗುವದರಿಂದಲೂ ಅವು ನಾಮರೂಪಪಕ್ಷಕ್ಕೇ ಸೇರಿದವುಗಳಾಗಿವೆ ; ನಾಮರೂಪಗಳು ಆತ್ಮನಲ್ಲಿ ಕಲ್ಪಿತವಾಗಿರುವವೇ ಹೊರತು ಪರಮಾರ್ಥವಲ್ಲವೆಂದು ಆಗಲೆ ತಿಳಿಸಿದ್ದೂ ಆಗಿದೆ. ಆದ್ದರಿಂದ ಆತ್ಮನಲ್ಲಿ ಕಲ್ಪಿತವಾಗಿದ್ದ ಅವಿದ್ಯಾನಾಶವೇ ಪರಮಪುರುಷಾರ್ಥವೆಂದು ಏರ್ಪಡುತ್ತದೆ (೨೨೦).

ಭಾಷ್ಯದ ವ್ಯಾಖ್ಯಾನಕಾರರು

ತೈತ್ತಿರೀಯಭಾಷ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವವರು **ಆನಂದಗಿರಿ**ಗಳೆಂದು ಪ್ರಸಿದ್ಧರಾಗಿರುತ್ತಾರೆ. ಇವರು 'ಶ್ರೀಮಚ್ಛಂಕರಭಗವತ್ಪಾದರ ಶಿಷ್ಯರು' ಎಂದು ಆನಂದಾಶ್ರಮದ ಮುದ್ರಿತಪುಸ್ತಕದಲ್ಲಿ ಅಚ್ಚಾಗಿರುವದು ಲೇಖಕರ ಭ್ರಾಂತಿಯಿಂದ ಎಂಬುದನ್ನು ಹೇಳಬೇಕಾಗಿಯೇ ಇಲ್ಲ. ಅದೇ ಪುಸ್ತಕದಲ್ಲಿ ''ಶ್ರೀಮಚ್ಛುದ್ಧಾನಂದಭಗವತ್ಪೂಜ್ಯಪಾದಶಿಷ್ಯಶ್ರೀಮದ್ಭಗವದಾನಂದಜ್ಞಾನ ವಿರಚಿತಾಯಾಮ್'' ಎಂದೂ ಬರೆದಿರುವದರಿಂದ ಇವರ ಹೆಸರು ನಿಜವಾಗಿ ಆನಂದಜ್ಞಾನರೆಂಬುದು ಸ್ಪಷ್ಟವಾಗಿರುತ್ತದೆ. ಪುಸ್ತಕದ ಕೈಪ್ರತಿಯನ್ನು ಬರೆದವರು, ಆನಂದಗಿರಿಗಳೆಂಬವರು ಶಂಕರಾಚಾರ್ಯರ ನೇರಾದ ಶಿಷ್ಯರೆಂಬ ಭ್ರಾಂತಿಗೆ ಪಕ್ಕಾಗಿ ಹೀಗೆ ಉಲ್ಲೇಖಿಸಿರುವರೆಂಬುದೂ ಸ್ಪಷ್ಟವಾಗುತ್ತದೆ.

ಈ ವ್ಯಾಖ್ಯಾನಕಾರರಾದ 'ಆನಂದಜ್ಞಾನರು' ಏಕಾಏಲಿಯಲ್ಲಿ **''ತತ್ತ್ವಪ್ರದೀಪಿಕ''**, **''ಪ್ರಕಟಾರ್ಥ''** - ಎಂಬ ತಮ್ಮ ಗ್ರಂಥಗಳನ್ನು ಪರಾಮರ್ಶಿಸಿಕೊಂಡಿರುತ್ತಾರೆ. ''ಸತ್ಯಂ ಜ್ಞಾನಮನಂತಂ ಬ್ರಹ್ಮ'' ಎಂಬ ಲಕ್ಷಣವಾಕ್ಯದ ವ್ಯಾಖ್ಯಾನದಲ್ಲಿ ಲಕ್ಷಣಲಕ್ಷಣವನ್ನು ವಿವರಿಸುವಾಗ **ಶ್ರೀಹರ್ಷನ ಖಂಡನ** ಗ್ರಂಥವನ್ನು ಪರಾಮರ್ಶಿಸಿರುತ್ತಾರೆ. ''ಸುಷುಪ್ತಿಯಲ್ಲಿ ಏನನ್ನೂ ಕಾಣದಿರುವದರಿಂದ ಅಲ್ಲಿ ದ್ವೈತವು ಕಾಣದೆ ಇರುವದಕ್ಕೆ ಅನ್ಯಾಸಕ್ತಿಯು ಕಾರಣವಲ್ಲ'' (೨೧೫)

ಎಂಬ ಭಾಷ್ಯಕ್ಕೆ ''ಅಲ್ಲಿರುವ ಅಜ್ಞಾನವು ಆತ್ಮನಿಗಿಂತ ಅತಿರಿಕ್ತವೆಂದು ನಿರ್ವಚನ ಮಾಡಿ ಹೇಳುವದಕ್ಕೆ ಬರುವಂತಿಲ್ಲವಾದ್ದರಿಂದ ತಾತ್ತ್ವಿಕದ್ವಿತೀಯವಸ್ತುವಲ್ಲ'' ಎಂದು **ಅನಿರ್ವಚನೀಯಾವಿದ್ಯಾವಾದವನ್ನು** ಸೇರಿಸಿಕೊಂಡು ವ್ಯಾಖ್ಯಾನಮಾಡಿರುತ್ತಾರೆ. ''ವಿದ್ಯಾವಿದ್ಯೆಗಳು ಆತ್ಮನ ಧರ್ಮವಲ್ಲ ; ಅನುಭವವೇದ್ಯವಾಗಿ ಅಂತಃಕರಣಧರ್ಮಗಳಾಗಿರುವದರಿಂದ ಅವು ನಾಮರೂಪಪಕ್ಷಕ್ಕೆ ಸೇರಿದವುಗಳೇ'' ಎಂಬ (೨೧೮) ಭಾಷ್ಯಕ್ಕೆ ''ಚಿನ್ಮಾತ್ರತಂತ್ರವಾದ ಅನಾದಿಯಾದ ಅನಿರ್ವಾಚ್ಯವಾದ ಅವಿದ್ಯೆಯು ಅಂತಃಕರಣವಾಗಿ ಪರಿಣಮಿಸುತ್ತದೆ. ಅದರಲ್ಲಿ ಪ್ರತಿಬಿಂಬಿಸಿದ ಚಿದ್ಧಾತುವು ತನ್ನ ಉಪಾಧಿಯ ಧರ್ಮದಿಂದಲೇ ಭ್ರಾಂತಿಯನ್ನು ಹೊಂದಿತೆಂದೂ ಸರಿಯಾಗಿ ಅರಿತುಕೊಂಡಿತೆಂದೂ ವ್ಯವಹರಿಸಲ್ಪಡುತ್ತದೆ. ಆದ್ದರಿಂದ ನಿಜವಾಗಿ ಅದರಲ್ಲಿ ವಿದ್ಯೆಯಾಗಲಿ ಅವಿದ್ಯೆಯಾಗಲಿ ಇರುವದಿಲ್ಲ'' ಎಂದು ಈಚಿನ ವೇದಾಂತಿಗಳ **ಅನಿರ್ವಚನೀಯಾವಿದ್ಯಾವಾದವನ್ನೂ** ಸೇರಿಸಿಕೊಂಡು ವ್ಯಾಖ್ಯಾನಮಾಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ನಾನು ಈ ವ್ಯಾಖ್ಯಾನಕಾರರು ಭಾಷ್ಯಕ್ಕೆ ಕೊಟ್ಟಿರುವ ಅರ್ಥವನ್ನು ಸ್ವೀಕರಿಸುವಾಗ ಪೂರ್ವಾಪರ ಸಂದರ್ಭಗಳಿಗೂ ಭಾಷ್ಯಾಂತರಕ್ಕೂ ಹೋಲಿಸಿಯೇ ತೆಗೆದುಕೊಂಡಿರುತ್ತೇನೆ- ಎಂದು ವಿಜ್ಞಾಪಿಸಿ ಈ ಪೀಠಿಕೆಯನ್ನು ಪೂರ್ಣಗೊಳಿಸುವೆನು.

೫-೨-೧೯೪೭ -ಗ್ರಂಥಕರ್ತ

ಉಪನಿಷತಿನ ಸಾರ

ಶೀಕ್ಷಾವಲ್ಲಿ

(ಅನು. ೧) ಬ್ರಹ್ಮವಿದ್ಯೆಯನ್ನು ಸಂಪಾದಿಸಿಕೊಳ್ಳಬೇಕೆನ್ನುವಾತನು ತನ್ನ ಕರಣಗಳಿಗೆ ಬಲವನ್ನು ಕೊಟ್ಟು ಸುಖಿವನ್ನುಂಟುಮಾಡುವಂತೆ ಮಿತ್ರಾದಿದೇವತೆಗಳನ್ನು ನಿತ್ಯವೂ ಪ್ರಾರ್ಥಿಸುತ್ತಿರಬೇಕು. ಇದರಂತೆ ಅಪರಬ್ರಹ್ಮವಾದ ವಾಯುವನ್ನು (ಅಥವಾ ಹಿರಣ್ಯಗರ್ಭನನ್ನು) ಶ್ರದ್ಧಾಭಕ್ತಿಗಳಿಂದ ನಮಸ್ಕರಿಸುತ್ತಾ ಬ್ರಹ್ಮಭಾವನೆಯಿಂದ ಸ್ತುತಿಸುತ್ತಿರಬೇಕು. ಇದರಿಂದ ಗುರುಗಳಿಗೆ ವಿದ್ಯೆಯನ್ನು ಹೇಳಿಕೊಡುವ ಸಾಮರ್ಥ್ಯವೂ ತನಗೆ ವಿದ್ಯೆಯ ಪ್ರಾಪ್ತಿಯೂ ಆಗುವದು, ಅಧ್ಯಾತ್ಮಾದಿತಾಪತ್ರಯಗಳೂ ತೊಲಗುವವು.

(೨) ಉಪನಿಷತ್ತಿಗೆ ಅರ್ಥವೇ ಮುಖ್ಯವಾದರೂ ಸ್ವರವರ್ಣಾದಿಗಳನ್ನು ಸರಿಯಾಗಿ ಉಚ್ಚರಿಸಿ ಅಧ್ಯಯನಮಾಡುವದನ್ನು ಮರೆಯಬಾರದು.

(೩) ವೇದದಲ್ಲಿ ಆಗುವ **ಸಂಹಿತೆ** (ಸಂಧಿ)ಗಳನ್ನುಕುರಿತು ಐದು ಬಗೆಯಲ್ಲಿ ಉಪಾಸನೆಮಾಡಬೇಕು. (ಅ) ಹಿಂದಿನ ವರ್ಣವು ಪೃಥ್ವಿ ; ಮುಂದಿನದು ಸ್ವರ್ಗ ; ಸಂಧಿಯು ಎಂದರೆ ಈ ವರ್ಣಗಳ ನಡುವೆ ಆಕಾಶವು ಎಂದು ಲೋಕದೃಷ್ಟಿಯಿಂದಲೂ (ಆ) ಇದರಂತೆ ಈ ಅವಯವಗಳನ್ನು ಅಗ್ನಿ, ಆದಿತ್ಯ, ಅಪ್ಪು, ಮಿಂಚು ಎಂದು ಜ್ಯೋತಿಯ ದೃಷ್ಟಿಯಿಂದಲೂ (ಇ) ಆಚಾರ್ಯ, ಶಿಷ್ಯ, ವಿದ್ಯೆ, ಹೇಳಿಕೊಡುವ ಕರ್ಮ - ಎಂದು ವಿದ್ಯೆಯ ದೃಷ್ಟಿಯಿಂದಲೂ (ಈ) ತಾಯಿ, ತಂದೆ, ಪ್ರಜೆ, ಪ್ರಜೋತ್ಪತ್ತಿಯೆಂದು ಪ್ರಜಾದೃಷ್ಟಿಯಿಂದಲೂ (ಉ) ಕೆಳದವಡೆ, ಮೇಲುದವಡೆ, ಮಾತು, ನಾಲಗೆ - ಎಂಬ ಅಧ್ಯಾತ್ಮದೃಷ್ಟಿಯಿಂದಲೂ ಉಪಾಸನೆಮಾಡಬೇಕು. ಹೀಗೆ ಐದು ಬಗೆಯಿಂದ ಮಾಡುವ ಉಪಾಸನೆಯಿಂದ ಗುರುವಿಗೂ ಶಿಷ್ಯನಿಗೂ ಕೀರ್ತಿಯೂ ಬ್ರಹ್ಮವರ್ಚಸ್ಸೂ ಉಂಟಾಗುತ್ತದೆ.

(೪) **ಮುಮುಕ್ಷುವಾದ**ವನು ವೇದಸಾರವಾದ ಓಂಕಾರವನ್ನು ಹೊಗಳುವ 'ಯಶ್ಛನ್ದಸಾಮ್' ಎಂಬ ಮಂತ್ರವನ್ನು ಜಪಿಸುತ್ತಿರಬೇಕು. ಇದರಿಂದ ಧಾರಣಶಕ್ತಿ ಉಂಟಾಗುತ್ತದೆ. ಶರೀರೇಂದ್ರಿಯಗಳು ಜ್ಞಾನಸಂಪಾದನೆಗೆ ತಕ್ಕವಾಗುತ್ತವೆ, ಜ್ಞಾನವು ದಕ್ಕುತ್ತದೆ. ಇದರಂತೆ **ಶ್ರೀಕಾಮನಾದವನು** 'ಆವಹನ್ತೀ' ಮುಂತಾದ ಮಂತ್ರದಿಂದ ಹೋಮವನ್ನು ಮಾಡಬೇಕು. ಶಿಷ್ಯರು ತನಗೆ ಆಗಬೇಕೆನ್ನುವವನು 'ಆ ಮಾ ಯನ್ತು' ಮುಂತಾದ ಮಂತ್ರಗಳಿಂದ ಹೋಮವನ್ನು ಮಾಡಬೇಕು. ಇಲ್ಲಿ ಹೇಳಿರುವ ಶ್ರೀಕಾಮಾದಿಗಳು ಕರ್ಮದ್ವಾರದಿಂದ ಚಿತ್ತಶುದ್ಧಿಯಾಗಿ ಜ್ಞಾನವು ಪ್ರಾಪ್ತವಾಗಲೆಂಬ ಉದ್ದೇಶದಿಂದ ಉಕ್ತವಾಗಿವೆ.

(೫) ಬ್ರಹ್ಮವನ್ನು 'ಮಹಃ' ಎಂಬ ವ್ಯಾಹೃತಿರೂಪವಾದದ್ದೆಂದೂ ಭೂಃ ಭುವಃ ಸುವಃ ಎಂಬ ಅಂಗಗಳುಳ್ಳದ್ದೆಂದೂ ಉಪಾಸನೆಮಾಡಬೇಕು. ಭೂರಾದಿ ಲೋಕಗಳನ್ನು ವ್ಯಾಪಿಸಿಕೊಂಡಿರುವ ಆದಿತ್ಯ, ಅಗ್ನಿವಾಯ್ವಾದಿತ್ಯರನ್ನು ವ್ಯಾಪಿಸಿರುವ ಚಂದ್ರ, ಋಕ್ಸಾಮಯಜುಸ್ಸುಗಳನ್ನು ವ್ಯಾಪಿಸಿರುವ ಓಂಕಾರ, ಪ್ರಾಣಾಪಾನವ್ಯಾನಗಳನ್ನು ಪೋಷಿಸುವ ಮೂಲಕ ವ್ಯಾಪಿಸಿರುವ ಅನ್ನ -

ಇವೆಲ್ಲವೂ 'ಮಹಃ' ಎಂಬ ವ್ಯಾಹೃತಿಯೇ. ಈ ವ್ಯಾಹೃತಿಯನ್ನು **ಮಾಹಾಚಮಸ್ಯ**ನೆಂಬ ಋಷಿಯು ಕಂಡುಹಿಡಿದಿರುತ್ತಾನೆ. ಅದು ಬ್ರಹ್ಮವೇ, ಮಿಕ್ಕ ವ್ಯಾಹೃತಿಗಳ ಆತ್ಮನೇ. ಈ ಬ್ರಹ್ಮವು ಹೃದಯಾಕಾಶದಲ್ಲಿ ಮನೋಮಯವಾಗಿ ಅಮೃತವಾಗಿ ಹಿರಣ್ಮಯವಾಗಿ ನೆಲೆಸಿರುತ್ತದೆ ; ಆಕಾಶಶರೀರವುಳ್ಳದ್ದು, ಸತ್ಯರೂಪವಾದದ್ದು, ಪ್ರಾಣಾರಾಮವಾದದ್ದು, ಆನಂದಕಾರಿಯಾಗಿರುವ ಮನಸ್ಸುಳ್ಳದ್ದು, ಶಾಂತಿಯಿಂದ ಚೆನ್ನಾಗಿ ಅನುಭವಕ್ಕೆ ಬರತಕ್ಕದ್ದು - ಹೀಗೆಂದು ಉಪಾಸನೆ ಮಾಡಬೇಕು. ಉಪಾಸಕನು ಹೃದಯದಿಂದ ಮೇಲಕ್ಕೆ ಹೋಗಿ ಮೂರ್ಧಪ್ರದೇಶವನ್ನು ಒಡೆದುಕೊಂಡು ಹೋಗಿರುವ ಸುಷುಮ್ನಾನಾಡಿಯ ಮೂಲಕವಾಗಿ ಹೊರಟು ಭೂ ಎಂಬ ವ್ಯಾಹೃತಿಯ ಅರ್ಥವಾದ ಅಗ್ನಿಯ ರೂಪವನ್ನೂ ಭುವಃ ಎಂಬುದರರ್ಥವಾದ ವಾಯುವಿನ ರೂಪವನ್ನೂ ಸುವಃ ಎಂಬುದರ ಅರ್ಥವಾದ ಆದಿತ್ಯನ ರೂಪವನ್ನೂ ಕ್ರಮಕ್ರಮವಾಗಿ ಪಡೆದುಕೊಂಡು ಕೊನೆಗೆ ''ಮಹಃ'' ಎಂಬ ವ್ಯಾಹೃತಿಯ ಅರ್ಥವಾದ ಇಂದ್ರಿಯಗಳ ಮತ್ತು ಅಂತಃಕರಣಗಳ ಒಟ್ಟಿನ ಒಡೆಯನಾಗಿರುವ ಮೇಲೆ ಹೇಳಿರುವ ಬ್ರಹ್ಮದ ರೂಪದಲ್ಲಿ ನೆಲೆನಿಲ್ಲುತ್ತಾನೆ.

(೬) ೩ದೇ ಬ್ರಹ್ಮವನ್ನು ಲೋಕಪಾಙ್ಕ್ತ, ದೇವತಾಪಾಙ್ಕ್ತ, ಭೂತಪಾಙ್ಕ್ತ, ವಾಯುಪಾಙ್ಕ್ತ, ಇಂದ್ರಿಯಪಾಙ್ಕ್ತ, ಧಾತುಪಾಙ್ಕ್ತ - ಎಂಬ ಪಾಙ್ಕ್ತಗಳ ರೂಪದಿಂದ ಉಪಾಸನೆ ಮಾಡಬಹುದು. ಪಾಙ್ಕ್ತವೆಂದರೆ ಐದೈದಾಗಿ ವಿಂಗಡಿಸಿಕೊಂಡಿರುವದು. ಆಧ್ಯಾತ್ಮಿಕವಾದ ಪಾಙ್ಕ್ತವನ್ನು ಹೊರಗಿನ ಪಾಙ್ಕ್ತಗಳೊಡನೆ ಒಂದುಗೂಡಿಸಿ ಇಡಿಯ ಜಗತ್ತೇ ಪಾಙ್ಕ್ತರೂಪವಾಗಿರುತ್ತದೆಯೆಂದು ಮಾಡಿಕೊಂಡು ಪಾಙ್ಕ್ತವೆಂಬ ಉಪಾಧಿಯ ಮೂಲಕವಾಗಿ ಬ್ರಹ್ಮವನ್ನು ಉಪಾಸನೆಮಾಡುವಾತನಿಗೆ ಪಾಙ್ಕ್ತರೂಪನಾದ ಪ್ರಜಾಪತಿಯ ರೂಪವೇ ಪ್ರಾಪ್ತವಾಗುತ್ತದೆ.

(೭) **ಓಂಕಾರವೆಂಬುದು** ಪರಬ್ರಹ್ಮದ ಉಪಾಸನೆಗೂ ಅಪರಬ್ರಹ್ಮದ ಉಪಾಸನೆಗೂ ಅಂಗವಾಗಿರುತ್ತದೆ. ಓಂಕಾರವನ್ನು ಪ್ರತೀಕವಾಗಿ ಮಾಡಿಕೊಂಡು ಈ ಎರಡು ಬಗೆಯ ಬ್ರಹ್ಮವನ್ನೂ ಉಪಾಸನೆಮಾಡಿ ಪಡೆದುಕೊಳ್ಳಬಹುದು. ಓಂಕಾರವು ಸರ್ವವೂ ಆಗಿರುತ್ತದೆ. ಓಂಕಾರಪೂರ್ವಕವಾಗಿ ಮಾಡುವ ಕರ್ಮಗಳೆಲ್ಲವೂ ಸಫಲವಾಗುತ್ತವೆ. ಆದ್ದರಿಂದ ಓಂಕಾರವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು. (೮-೧೧) ಉಪಾಸನೆಯಿಂದಲೇ ಬ್ರಹ್ಮವನ್ನು ಪಡೆದುಕೊಳ್ಳಬಹುದೆಂದದ್ದರಿಂದ ಕರ್ಮಗಳು ವ್ಯರ್ಥವೆಂದು ತಿಳಿಯಬಾರದು. ಋತ,

ಸತ್ಯ, ತಪಸ್ಸು, ದಮ, ಶಮ, ಅಗ್ನಿಹೋತ್ರ, ಅತಿಥಿಪೂಜೆ, ಲೌಕಿಕವ್ಯವಹಾರ, ಪ್ರಜಾಸಂತತಿಪ್ರಾಪ್ತಿ- ಈ ಎಲ್ಲಾ ಕರ್ಮಗಳೂ ಅವಶ್ಯ ; ಅಧ್ಯಯನವೂ ಅಧ್ಯಾಪನವೂ ಅತ್ಯದಸ್ಯ. ಸತ್ಯ, ತಪಸ್ಸು ಅಧ್ಯಯನಾಧ್ಯಾಪನಗಳು - ಈ ಮೂರೂ ಕರ್ಮಗಳಲ್ಲಿ ಮುಖ್ಯವಾದವುಗಳು. ಕರ್ಮದಿಂದ ಉತ್ತಮವಾದ **ಆರ್ಷದರ್ಶನ**ಗಳು ಉಂಟಾಗುವವು ; ಹೀಗೆ ಉಂಟಾದ ದರ್ಶನದಿಂದ ತ್ರಿಶಂಕುವೆಂಬ ಋಷಿಯು ಹೊರಪಡಿಸಿರುವ 'ಅಹಂ ವೃಕ್ಷಸ್ಯ' ಎಂಬ ಮಂತ್ರವನ್ನು ಮುಮುಕ್ಷುಗಳು ನಿತ್ಯವೂ ಜಪಿಸುತ್ತಿರಬೇಕು. ಕರ್ಮಗಳಿಂದ ಚಿತ್ತಶುದ್ಧಿಯಾಗಿ ಬ್ರಹ್ಮಜ್ಞಾನವೂ ಉಂಟಾಗುತ್ತದೆಯಾದ್ದರಿಂದ ಜ್ಞಾನೋತ್ಪತ್ತಿಗಾಗಿಯೂ ಕರ್ಮಗಳನ್ನು ಮಾಡುತ್ತಿರಬೇಕು. ಇದುವರೆಗೂ ಹೇಳಿದ ಕರ್ಮಗಳೂ ಉಪಾಸನೆಗಳೂ ಶಾಸ್ತ್ರವಿಹಿತವಾಗಿರುವದರಿಂದಲೂ ಹಿರಿಯರು ಉಪದೇಶಿಸಿರುವವಾದ್ದರಿಂದಲೂ ವೇದದ ರಹಸ್ಯವಾಗಿರುವದರಿಂದಲೂ ಇವನ್ನು ಅವಶ್ಯವಾಗಿ ಅನುಷ್ಠಾನ ಮಾಡಬೇಕು.

ಆನಂದವಲ್ಲಿ

(ಭಾ.ಭಾ. ೮೭-೮೯) **ಹಿಂದಿನ ವಲ್ಲಿಯಲ್ಲಿ** ಹೇಳಿರುವದು **ಅಪರಬ್ರಹ್ಮದ** ಉಪಾಸನೆ ; ಈ **ವಲ್ಲಿಯಲ್ಲಿ** ಪ್ರಾರಂಭಿಸಿರುವದು **ಪರಬ್ರಹ್ಮದ ಜ್ಞಾನ.** ಈ ಜ್ಞಾನದ ಪ್ರಾಪ್ತಿಗೆ ಇರುವ ಅಡ್ಡಿಗಳನ್ನು ಕಳೆದುಕೊಳ್ಳಬೇಕೆನ್ನುವವರು ಶಂ ನೋ ಮಿತ್ರಃ', 'ಸಹ ನಾವವತು' ಎಂಬ ಶಾಂತಿಗಳನ್ನು ನಿತ್ಯವೂ ಪಠಿಸುತ್ತಿರಬೇಕು.

೯೦-೧೦೯. ಬ್ರಹ್ಮವನ್ನು ಅರಿತುಕೊಂಡವನು ಪರಮಪುರುಷಾರ್ಥವನ್ನು ಪಡೆಯುತ್ತಾನೆ. ಬ್ರಹ್ಮವು ಸತ್ಯಜ್ಞಾನಾನಂತಸ್ವರೂಪವಾಗಿದೆ. ಅದು ಹೃದಯಾಕಾಶದಲ್ಲಿ ಬುದ್ಧಿಗುಹೆಯಲ್ಲಿದೆ- ಎಂದು ತಿಳಿದುಕೊಂಡವನಿಗೆ ಎಲ್ಲಾ ಕಾಮಗಳೂ ಒಮ್ಮೆಗೇ ದೊರಕುವವು ; ಬ್ರಹ್ಮರೂಪದಿಂದ ಅವನ್ನು ಅವನು ಅನುಭವಿಸುತ್ತಾನೆ.

೧೧೦-೧೫೩. ಬ್ರಹ್ಮವು ನಮ್ಮೆಲ್ಲರ ಆತ್ಮನೇ ; ಅದರಿಂದಲೇ ಆಕಾಶಾದಿಪಂಚಭೂತಗಳಾಗಿರುತವೆ. ಭೂಮಿಯಲ್ಲಿರುವ ಸಸ್ಯಗಳಿಂದ

ಅನ್ನವಾಗಿ ಅನ್ನದಿಂದ ಮನುಷ್ಯನ ಶರೀರವಾಗುತ್ತದೆಯಷ್ಟೆ. ಈ ಅನ್ನಮಯವಾದ ಶರೀರದಿಂದ ಒಡಿದು **ಪ್ರಾಣಮಯ,** ಮನೋಮಯ, ವಿಜ್ಞಾನಮಯ, ಆನಂದಮಯ - ಎಂಬ ನಾಲ್ಕು **ಕೋಶಗಳು** ಒಂದರೊಳಗೊಂದು ಇರುತ್ತವೆ. ಇವುಗಳನ್ನು ಒಂದೊಂದಾಗಿ ಮುಂದುಮುಂದಿನದು ಆತ್ಮನೆಂಬ ತಿಳಿವಳಿಕೆಯನ್ನು ಸಂಪಾದಿಸಿಕೊಂಡು ಹಿಂದುಹಿಂದಿನದನ್ನು ಅನಾತ್ಮಬುದ್ಧಿಯಿಂದ ಕೈಬಿಡುತ್ತಾ ಹೋಗಿ ಕೊನೆಗೆ ಆನಂದಮಯಕೋಶದ ಆತ್ಮನಾಗಿರುವ **ಆನಂದವೇ ನಿಜವಾದ** ಬ್ರಹ್ಮವೆಂದೂ ಆನಂದಮಯಕ್ಕೂ ಅದು ಆಧಾರವಾಗಿರುವದೆಂದೂ ತಿಳಿದುಕೊಳ್ಳಬೇಕು. ಈ ಬ್ರಹ್ಮವು ಇಲ್ಲವೆಂದು ತಿಳಿದರೆ ತಾನೇ ಇಲ್ಲವಾಗುವನು; ಅದು ಇದೆ ಎಂದು ಅರಿತುಕೊಂಡರೆ ತಾನೇ ಇದ್ದಂತೆ.

೧೫೪-೧೫೬. ಈವರೆಗೆ ಹೇಳಿದ ಉಪದೇಶವನ್ನು ಪಡೆದವರು ಈ ಪ್ರಶ್ನೆಗಳನ್ನು ಕೇಳಬಹುದು ; ಬ್ರಹ್ಮವು ಎಲ್ಲರಿಗೂ ಆತ್ಮನಾದಮೇಲೆ ಅಜ್ಞನು ಅದನ್ನು ಹೊಂದುವದಿಲ್ಲವೇಕೆ ? ಅವನಿಗೆ ಅದು ದೊರಕದಿದ್ದರೆ ಜ್ಞಾನಿಗಾದರೂ ಅದು ದೊರಕುವದೆಂದು ಹೇಗೆ ಗೊತ್ತು ? ಇಲ್ಲವೆಂದು ಅರಿತವನಿಗೆ ಇಂಥ ಗತಿ, ಇದೆಯೆಂದು ಅರಿತವನಿಗೆ ಇಂಥ ಗತಿ ಎಂದದ್ದರಿಂದ ಒಂದು ಸಂಶಯವುಂಟಾಗುತ್ತದೆ; ಅದು ಇದೆಯೊ, ಇಲ್ಲವೊ ? ಅದು ಇದೆ ಎಂಬುದು ಹೇಗೆ ?

೧೫೭-೧೯೫. ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳಬೇಕಷ್ಟೆ. ಮೊದಲು ಬ್ರಹ್ಮವು ಇದ ಎಂಬುದಕ್ಕ ಉತ್ತರವನ್ನು ಹೇಳಲಾಗುತ್ತದೆ : ಬ್ರಹ್ಮವು (೧) ಜಗತ್ತನ್ನು ವಿಚಾರಪೂರ್ವಕವಾಗಿ ಸೃಷ್ಟಿಸುವ ಕಾರಣವಾಗಿರುವದರಿಂದ ಇದೆ. (೨) ಸೃಷ್ಟಿಸಿರುವ ಜಗತ್ತಿನಲ್ಲಿ ಜೀವರೂಪದಿಂದ ಹೊಕ್ಕಿರುವದರಿಂದ ಇದೆ. (೩) ಹೊರಗೆ ಕಾಣುವ ಮೂರ್ತಾಮೂರ್ತಪದಾರ್ಥಗಳೆಲ್ಲವೂ ಅದೇ ಆಗಿರುವದರಿಂದ ಇದೆ. (೪) ಬ್ರಹ್ಮವು ತಾನೇ ತನ್ನನ್ನು ಮಾಡಿಕೊಂಡಿರುವದರಿಂದಲೂ ಪುಣ್ಯಕ್ಕೆ ಫಲವನ್ನು ಕೊಡುವದರಿಂದಲೂ ಇದೆ. (೫) ಜೀವರ ಆನಂದಕ್ಕೆ ಹೇತುವಾದ್ದರಿಂದ ಇದೆ. (೬) ಪ್ರಾಣಿಗಳ ಪ್ರವೃತ್ತಿಗೆ ಕಾರಣವಾಗಿರುವದರಿಂದ ಇದೆ. (೭) ಜ್ಞಾನಿಗೂ ಅಜ್ಞಾನಿಗೂ ಭಯಾಭಯಗಳಿಗೆ ಕಾರಣವಾಗಿರುವದರಿಂದಲೂ ಇದೆ.

೧೯೬-೨೦೮. ಬ್ರಹ್ಮಸ್ವರೂಪವಾದ ಆನಂದವು ಪ್ರಾಣಿಗಳಲ್ಲಿ ಮನುಷ್ಯನಿಂದ ಹಿಡಿದು ಬ್ರಹ್ಮನವರೆಗೆ ತಾರತಮ್ಯದಿಂದ ಇರುವಂತೆ ಕಂಡರೂ ನಿಜವಾಗಿ

ಅದ್ವಿತೀಯವಾಗಿರುತ್ತದೆ. ಉತ್ಕೃಷ್ಟೋಪಾಧಿಯಾದ ಸೂರ್ಯನಲ್ಲಿಯೂ ನಿಕೃಷ್ಟೋಪಾಧಿಯಾದ ಮನುಷ್ಯನಲ್ಲಿಯೂ ಒಂದೇ ಆಗಿರುತ್ತದೆ. ಅದು ವಿಷಯವಿಷಯಿಗಳ ಸಂಬಂಧದಿಂದ ಉಂಟಾದದ್ದಲ್ಲ, ಸ್ವಾಭಾವಿಕವಾದದ್ದು. ಶ್ರೋತ್ರಿಯನೂ ಅಕಾಮಹತನೂ ಆದವನಿಗೆ ಈ ಆನಂದದ ಅನುಭವವಿರುತ್ತದೆ.

೨೦೯-೨೨೭. ಈಗ ಉಳಿದ ಇನ್ನೆರಡು ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಾಗುತ್ತದೆ. ಯಾವನು ಇಂಥ ಸ್ವಾಭಾವಿಕವಾದ ಆನಂದವೇ ಸತ್ಯಜ್ಞಾನಾನಂತವಾಗಿರುವ ಬ್ರಹ್ಮವು ಎಂದು ತಿಳಿಯುತ್ತಾನೋ ಅವನು ಈ ಲೋಕದಿಂದ ಹಿಂತಿರುಗಿ ಅನ್ನಮಯಾದಿಗಳನ್ನು ಮೀರಿ ಅದೃಶ್ಯತ್ವಾದಿಗುಣಗಳಿಂದ ಕೂಡಿರುವ ಈ ಬ್ರಹ್ಮದಲ್ಲಿ ಅಭಯಪ್ರತಿಷ್ಠೆಯನ್ನು ಹೊಂದುತ್ತಾನೆ. ಮನೋವಾಕ್ಕುಗಳಿಗೆ ದೂರವಾಗಿರುವ ಬ್ರಹ್ಮಾನಂದವು ತನ್ನ ಆತ್ಮನೇ ಎಂದು ತಿಳಿದವನು ಮಾತ್ರ ಏತಕ್ಕೂ ಹೆದರುವದಿಲ್ಲ. ಆದ್ದರಿಂದ ಅಂಥ ಜ್ಞಾನಿಯು ಮಾತ್ರ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. ಅಜ್ಞಾನಿಗೆ ಬ್ರಹ್ಮವು ಆತ್ಮನಾಗಿದ್ದರೂ ಅವನಿಗೆ ಅದರ ಪ್ರಾಪ್ತಿಯಿಲ್ಲ, ಪಾಪವನ್ನು ಮಾಡಿರುವದರಿಂದಲೂ ಪುಣ್ಯವನ್ನು ಮಾಡದಿರುವದರಿಂದಲೂ ಆಗುವ ಸಂತಾಪವು ಆತನಿಗೆ ಉಂಟು. ಆದರೆ ಜ್ಞಾನಿಯ ದೃಷ್ಟಿಯಲ್ಲಿ ಪಾಪಪುಣ್ಯಗಳು, ಅವುಗಳ ಫಲಗಳು - ಎಲ್ಲವೂ ಆನಂದಸ್ವರೂಪನಾದ ಆತ್ಮನೇ ಆಗಿಬಿಟ್ಟಿರುವದರಿಂದ ಅವನಿಗೆ ಯಾವ ಸಂತಾಪವೂ ಇರುವದಿಲ್ಲ. ಈ ಜ್ಞಾನವೇ ವಿದ್ಯೆಗಳಲ್ಲೆಲ್ಲ ರಹಸ್ಯವೆನಿಸಿರುವ ಬ್ರಹ್ಮವಿದ್ಯೆಯು.

ಭೃಗುವಲ್ಲಿ

೨೨೮-೨೩೧. ಭೃಗುವೆಂಬಾತನು ತಂದೆಯಾದ ವರುಣನಲ್ಲಿಗೆ ಬಂದು 'ಪೂಜ್ಯನೆ, ಬ್ರಹ್ಮವನ್ನು ತಿಳಿಸಿಕೊಡು' ಎಂದು ಕೇಳಿಕೊಂಡನು. ತಂದೆಯು ಶರೀರ, ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು, ವಾಕ್ಕು - ಎಂಬ ಜ್ಞಾನದ್ವಾರಗಳನ್ನು ಅವನಿಗೆ ಉಪದೇಶಿಸಿದನು. ಬಳಿಕ "ಯಾವದರಿಂದ ಭೂತಗಳು ಹುಟ್ಟುತ್ತವೆಯೋ ಹುಟ್ಟಿದ ಬಳಿಕ ಯಾವದರಿಂದ ಭೂತಗಳು ಬದುಕಿರುತ್ತವೆಯೋ ಕೊನೆಗೆ ಯಾವದರಲ್ಲಿ ಸೇರಿ ಒಂದಾಗಿ ಬಿಡುವವೋ ಅದನ್ನು ತಿಳಿದುಕೊ ; ಅದೇ ಬ್ರಹ್ಮವು" ಎಂದು ಬ್ರಹ್ಮದ ಸಾಮಾನ್ಯಲಕ್ಷಣವನ್ನು ಹೇಳಿಕೊಟ್ಟನು.

೨೩೨-೨೩೫. ಭೃಗುವು ಇಂದ್ರಿಯಗಳನ್ನೂ ಅಂತಃಕರಣಗಳನ್ನೂ ಏಕಾಗ್ರವಾಗಿಸಿ ವಿಚಾರಮಾಡುವ ತಪಸ್ಸಿನಿಂದ ಅನ್ನವನ್ನು ಬ್ರಹ್ಮವೆಂದು ತಿಳಿದುಕೊಂಡನು. ಆಮೇಲೆ ಅದಕ್ಕೆ ಲಕ್ಷಣವು ಪೂರ್ಣವಾಗಿ ಹೊಂದುವದಿಲ್ಲವೆಂದು ಮತ್ತೆ ತಂದೆಯ ಉಪದೇಶದಿಂದ ತಪಸ್ಸು ಮಾಡಿ **ಪ್ರಾಣವನ್ನು** ಬ್ರಹ್ಮವೆಂದು ತಿಳಿದುಕೊಂಡನು. ಆಮೇಲೆ ಅದರಿಂದಲೂ ಸಮಾಧಾನವನ್ನು ಹೊಂದದೆ ಕ್ರಮಕ್ರಮವಾಗಿ **ಮನಸ್ಸು, ವಿಜ್ಞಾನ**- ಇವುಗಳನ್ನು ಬ್ರಹ್ಮವೆಂದು ತಿಳಿದುಕೊಂಡು ಕೊನೆಗೆ ಎಲ್ಲಕ್ಕೂ ಒಳಗಿರುವ ಆನಂದವೇ ಬ್ರಹ್ಮವೆಂದು ನಿಶ್ಚಯಿಸಿದನು.

೨೩೬-೨೩೮. ಭೃಗುವಿನಂತೆಯೇ ತಪಸ್ಸುಮಾಡಿ ಈ ಅಭ್ಯೈತಾನಂದವನ್ನು ಬ್ರಹ್ಮವೆಂದು ಮನಗಂಡವನು ಬ್ರಹ್ಮವೇ ಆಗುತ್ತಾನೆ. ಅವನಿಗೆ ಬೇಕಾದಷ್ಟು ಅನ್ನವು ದೊರೆಯುತ್ತದೆ ; ಅವನು ಅನ್ನವನ್ನುಣ್ಣುವ ದೀಪ್ತಾಗ್ನಿಯಾಗುತ್ತಾನೆ ; ಅವನಿಗೆ ಪ್ರಜಾಸಂತತಿ, ಪಶುಗಳು, ಬ್ರಹ್ಮವರ್ಚಸ್ಸು, ಕೀರ್ತಿ - ಇವೆಲ್ಲವೂ ಹೆಚ್ಚುತ್ತವೆ.

೨೪೦-೨೪೭. ಪ್ರಾಣವು ಅನ್ನವು, ಶರೀರವು ಅನ್ನಾದವು ; ಇನ್ನೊಂದು ದೃಷ್ಟಿಯಿಂದ ಶರೀರವೇ ಅನ್ನವು, ಪ್ರಾಣವು ಅನ್ನಾದವು. ಹೀಗೆ ಅನ್ನವನ್ನು ಉಪಾಸನೆಮಾಡುವವನು ಅನ್ನವನ್ನು ನಿಂದಿಸಬಾರದು. ಶರೀರಪ್ರಾಣಗಳನ್ನು ಅನ್ನವೆಂದು ಉಪಾಸನೆಮಾಡುವವನು ಅನ್ನುವನ್ನು ಬೇಡ ಎನ್ನಬಾರದು. ಹೀಗೆಯೇ ಅಪ್ಪು, ಜ್ಯೋತಿ - ಇವುಗಳು ಪರಸ್ಪರವಾಗಿ ಅನ್ನಾನ್ನಾದಗಳೆಂದು ಉಪಾಸನೆಮಾಡಬೇಕು ; ಹಾಗೆ ಮಾಡುವವನು ಅನ್ನವನ್ನು ಹೆಚ್ಚಾಗಿ ಸಂಪಾದಿಸಿಕೊಳ್ಳಬೇಕು. ಪೃಥಿವಿ, ಆಕಾಶ - ಇವುಗಳು ಒಂದಕ್ಕೊಂದು ಅನ್ನಾನ್ನಾದಗಳೆಂದು ಉಪಾಸನೆಮಾಡಬೇಕು. ಈ ಉಪಾಸಕನು ಎಲ್ಲರಿಗೂ ವಾಸಗೃಹವನ್ನು ಕೊಟ್ಟು ಅನ್ನಪಾನವನ್ನೂ ನೀಡಬೇಕು. ಯಾವನು ಇವುಗಳಲ್ಲಿ ಯಾವಯಾವ ಜೋಡಿಯನ್ನು ಅನ್ನಾನ್ನಾದವೆಂದೂ ಒಂದರಲಿ ಒಂದು ನಿಂತಿರುವವೆಂದೂ ಉಪಾಸನೆಮಾಡುತ್ತಾನೋ ಅವನು ಆಯಾ ರೂಪದಿಂದ ನೆಲೆನಿಲ್ಲುವನು ; ಪ್ರಜಾದಿಗಳನ್ನು ಪಡೆದುಕೊಳ್ಳುವನು. ಯಾವನು ಅನ್ನೋಪಾಸಕನಾಗಿ ಅನ್ನವನ್ನು ಯಾವಯಾವ ಅವಸ್ಥೆಯಲ್ಲಿ ಹೇಗೆಹೇಗೆ ದಾನಮಾಡಿರುವನೋ ಅವನಿಗೆ ಹಾಗೆಹಾಗೆಯೇ ಹಿಂತಿರುಗಿ ಅನ್ನವು ಒದಗುವದು.

೨೪೮-೨೬೩. ಬ್ರಹ್ಮವನ್ನು ಆಧ್ಯಾತ್ಮಿಕವಾಗಿಯೂ ಆಧಿದೈವಿಕವಾಗಿಯೂ ಶಾಸ್ತ್ರದಲ್ಲಿ ೀಳಿರುವಂತೆ ಉಪಾಸನೆಮಾಡುವವರಿಗೆ ಶಾಸ್ತ್ರದಲ್ಲಿ ಹೇಳಿರುವ ಬಗೆಬಗೆಯ ದೃಷ್ಟಫಲಗಳಾಗುವವು. ಆದರೆ ಭೋಕ್ತೃಭೋಜ್ಯವೆಂಬ ಅನ್ನಾನ್ನಾದ ರೂಪವಾಗಿರುವದೆಲ್ಲವೂ ಸಂಸಾರವೇ ಆಗಿರುವದರಿಂದ ಯಾವನು ಈ ಸಂಸಾರ ಲೋಕವನ್ನು ತೊರೆದು ಆತ್ಮನು ಒಬ್ಬನೇ ಇರುವವನು, ಅವನಲ್ಲಿ ಉಪಾಧಿ ಗಳಿಂದ ತೋರುವ ಉತ್ಕರ್ಷಾಪಕರ್ಷಗಳು ಯಾವವೂ ಇರುವದಿಲ್ಲ - ಎಂಬ ತತ್ತ್ವವನ್ನು ಮನಗಾಣುವನೋ ಅವನು ಅನ್ನಮಯಾದಿಯಾಗಿ ಆನಂದಮಯನ ವರೆಗಿನ ಅನಾತ್ಮಗಳನ್ನು ಮೀರಿ ಸರ್ವರಿಗೂ ಆತ್ಮನಾಗಿರುವ ಅದ್ವೈತಾನಂದವೆಂಬ ಬ್ರಹ್ಮಸ್ವರೂಪದಿಂದ ಎಲ್ಲವನ್ನೂ ಅನುಭವಿಸುತ್ತಾ ಹೀಗೆಂದುಕೊಳ್ಳುತ್ತಿರುವನು ; ''ಆಹಾ ! ಅನ್ನ, ಅನ್ನಾದ, ಇವುಗಳ ಸಂಬಂಧದಿಂದಾಗಿರುವ ಒಟ್ಟು ಇದೆಲ್ಲವೂ ನಾನೇ ! ಸರ್ವಜಗತ್ತಿಗೂ ಅಗ್ರಜನಾಗಿರುವ, ದೇವತೆಗಳೆಲ್ಲರಿಗೂ ಪೂರ್ವಜ ನಾದ, ಹಿರಣ್ಯಗರ್ಭನೂ ನಾನೇ. ಸರ್ವರಿಗೂ ಮುಕ್ತಿಯು ನನ್ನಿಂದಲೇ ಆಗುತ್ತದೆ. ಅನ್ನರೂಪನಾದ ನನ್ನನ್ನು ದಾನಮಾಡುವವರಿಗೆ ಅನ್ನವು ಸುರಕ್ಷಿತ ವಾಗಿ ದೊರಕುವದು. ದಾನಮಾಡದೆ ತಿನ್ನುವವರನ್ನು ಅನ್ನರೂಪನಾದ ನಾನೇ ತಿನ್ನುತ್ತಿರುವೆನು ! ನನ್ನ ಬ್ರಹ್ಮ ಸ್ವರೂಪದಲ್ಲಿ ಇಡಿಯ ಜಗತ್ತೇ ಲಯವಾಗುತ್ತದೆ ; ನಾನು ನಿತ್ಯಸ್ವಯಂಪ್ರಕಾಶನು !

೨೬೪. ಹೀಗೆಂಬ ತತ್ತ್ವವನ್ನು ಯಾರು ಭೃಗುವಿನಂತೆ ಮನಗಾಣುವರೋ ಅವರೂ ಈ ಫಲವನ್ನು ಹೊಂದುವರು. ಇದೇ ಆನಂದವಲ್ಲಿ, ಭೃಗುವಲ್ಲಿ - ಈ ಎರಡರಲ್ಲಿ ಹೇಳಿರುವ ಪರಮಾತ್ಮಜ್ಞಾನವು.

ಛಾಂದೋಗ್ಯೋಪನಿಷತ್ತು

ಪೀಠಿಕೆ

ಸಾಮವೇದ

ಛಾಂದೋಗ್ಯೋಪನಿಷತ್ತು ಸಾಮವೇದಕ್ಕೆ ಸೇರಿದ್ದು. ಸಾಮವೇದದ ವಿಷಯಕ್ಕೆ ತಿಳಿಸಬೇಕಾದದ್ದನ್ನೂ ವೇದಸಾಮಾನ್ಯದ ವಿಷಯವಾಗಿಯೂ ವೈದಿಕ ಕರ್ಮಗಳ ವಿಷಯವಾಗಿಯೂ ತಿಳಿಸಬೇಕಾದದ್ದನ್ನೂ ಸಂಗ್ರಹಿಸಿ **ಪರಿಶಿಷ್ಟ**[1]ದಲ್ಲಿ ಕೊಡಲಾಗಿದೆ.

ಛಾಂದೋಗ್ಯೋಪನಿಷತ್ತಿನ ಸ್ಥಾನ

ಪರಿಶಿಷ್ಟದಲ್ಲಿ ಕೊಟ್ಟಿರುವ ವಿವರದಿಂದ ಛಾಂದೋಗ್ಯವು ತಾಂಡ್ಯಬ್ರಾಹ್ಮಣಕ್ಕೆ ಸೇರಿದ್ದೆಂದೂ ಆ ಬ್ರಾಹ್ಮಣವು ಕೌಥುಮಶಾಖೆಯದೆಂದೂ ಕಲ್ಪಿಸಬೇಕಾಗಿರುತ್ತದೆ. ಆದರೆ ಶ್ರೀಶಂಕರಾಚಾರ್ಯರು ಭಾಷ್ಯವನ್ನು ಬರೆದಿರುವ ಉಪನಿಷತ್ತು ಕೌಥುಮ ಶಾಖೆಯದೆ, ಅಲ್ಲವೆ ? - ಎಂಬ ಬಗೆಗೆ ಕೆಲವು ವಿಚಾರಣೀಯವಿಷಯಗಳಿರುತ್ತವೆ. ಅದನ್ನು ವಿಮರ್ಶಿಸುವದು ವೈದಿಕವಾಙ್ಮಯದಲ್ಲಿ ಈ ಉಪನಿಷತ್ತಿನ ಸ್ಥಾನವನ್ನು ನಿರ್ಣಯಿಸುವದಕ್ಕೆ ಅವಶ್ಯವಾಗಿರುತ್ತದೆ.

೧. **ಸೂತ್ರಭಾಷ್ಯದಲ್ಲಿ** (೩-೩-೨೩ರಲ್ಲಿ) **ರಾಣಾಯನೀಯ ಶಾಖೆ**ಯವರ ಉಪನಿಷತ್ತಿನ ಪರಾಮರ್ಶವು (ಭಾ.ಭಾ. ೩೬೧) ಕಾಣಬರುತ್ತದೆ. ಅಲ್ಲಿ ಹೆಸರಿಸಿರುವ ಶಾಂಡಿಲ್ಯವಿದ್ಯೆ, ದಹರವಿದ್ಯೆ, ಉಪಕೋಸಲವಿದ್ಯೆಗಳು ಪ್ರಕೃತವಾದ ಛಾಂದೋಗ್ಯದಲ್ಲಿ ಕಾಣಬರುತ್ತಿವೆ. ಅದೇ ಸೂತ್ರಭಾಷ್ಯದಲ್ಲಿ (೩-೩-೨೪ರಲ್ಲಿ) **ತಾಂಡಿ, ಪೈಂಗಿ ಶಾಖೆ**ಗಳ ರಹಸ್ಯಬ್ರಾಹ್ಮಣದ ಪರಾಮರ್ಶವು (ಭಾ. ಭಾ. ೩೬೩) ಕಾಣಬರುತ್ತದೆ. ಅಲ್ಲಿ ಕೊಟ್ಟಿರುವ 'ಪುರುಷಯಜ್ಞ'ದ ವರ್ಣನೆಯೂ ಪ್ರಕೃತವಾದ ಛಾಂದೋಗ್ಯದಲ್ಲಿದೆ. ಇನ್ನು ಸೂತ್ರಭಾಷ್ಯದಲ್ಲಿ (೩-೩-೨೬ರಲ್ಲಿ) **ತಾಂಡಿಗಳ ಶ್ರುತಿ** ಎಂದು ಉದಾಹರಿಸಿರುವ (ಭಾ. ಭಾ.

1. ಪೀಠಿಕೆಯ ಕೊನೆಯಲ್ಲಿ ಸೇರಿಸಿದೆ.

೩೬೮) ವಾಕ್ಯವೂ ಪ್ರಕೃತ ಛಾಂದೋಗ್ಯದಲ್ಲಿ ಕಾಣಬರುತ್ತಿದೆ. ಈ ಮೂರು ಸೂತ್ರಭಾಷ್ಯಪರಾಮರ್ಶಗಳಿಂದ ಛಾಂದೋಗ್ಯವು ತಾಂಡಿ, ರಾಣಾಯನೀಯ, ಪೈಂಗಿ - ಈ ಮೂರರಲ್ಲಿ ಯಾವದಾದರೊಂದು ಶಾಖೆಯದಾಗಿರಬಹುದಾಗಿದೆ ; ಅಥವಾ ಈ ಮೂರರಲ್ಲಿಯೂ ಇದೇ ಉಪನಿಷತ್ತಿನ ಭಾಗಗಳು ಇದ್ದಿದ್ದರೂ ಇರಬಹುದು ಎಂಬ ಊಹೆಗೆ ಎಡೆಯಿರುತ್ತದೆ.

೨. - ಇನ್ನು **ಛಾಂದೋಗ್ಯಭಾಷ್ಯದ** ಆರಂಭದಲ್ಲಿ ಬರೆದಿರುವ ಅವತರಣಿಕೆಯಲ್ಲಿ 'ಪ್ರಾಣವೇ ಮುಂತಾದವುಗಳ ಉಪಾಸನೆಗಳಿಂದೊಡಗೂಡಿರುವದರಿಂದ ಅರ್ಚಿರಾದಿಮಾರ್ಗದಿಂದ ಬ್ರಹ್ಮಪ್ರಾಪ್ತಿಗೆ ಕಾರಣವಾಗಿರುವ ಕರ್ಮ, ಧೂಮಾದಿಮಾರ್ಗದಿಂದ ಚಂದ್ರಲೋಕಪ್ರಾಪ್ತಿಗೆ ಕಾರಣವಾಗಿರುವ ಬರಿಯ ಕರ್ಮ - ಇವುಗಳನ್ನು ತಿಳಿಸಿದ್ದಾಗಿದೆ. ಅಜ್ಞಾನಸ್ವಭಾವದಿಂದ ಪ್ರವೃತ್ತರಾದವರಿಗೆ ಈ ಎರಡು ಮಾರ್ಗಗಳೂ ತಪ್ಪಿ, ಕಷ್ಟವಾದ ಅಧೋಗತಿಯಾಗುವದೆಂದು ಹೇಳಲಾಯಿತು' (ಛಾ. ಭಾ. ೨) ಎಂದಿದೆ. ಆದರೆ ಈ ಉಪಾಸನೆಗಳನ್ನಾಗಲಿ ಗತಿಗಳನ್ನಾಗಲಿ ಹೇಳುವ ಭಾಗವು ತಾಂಡ್ಯಬ್ರಾಹ್ಮಣದಲ್ಲಿ ಕಾಣುತ್ತಿಲ್ಲ. ಈ ಶಾಖೆಯ ಆರಣ್ಯಕಭಾಗವೊಂದು ಬೇರೆಯಿದೆಯೊ ಇಲ್ಲವೊ, ತಿಳಿಯದು. ಇದನ್ನು ಮನದಂದುಕೊಂಡರೂ ಛಾಂದೋಗ್ಯೋಪನಿಷತ್ತು ತಾಂಡ್ಯಬ್ರಾಹ್ಮಣಕ್ಕೆ ಸೇರಿದ್ದಲ್ಲವೇನೊ ಎಂಬ ಸಂಶಯವುಂಟಾಗುತ್ತದೆ. ಸಾಮವೇದದ ಬೇರೆಯ ಶಾಖೆಗಳ ಬ್ರಾಹ್ಮಣಗಳು ನಮಗೆ ಸದ್ಯಕ್ಕೆ ಸಿಕ್ಕಿಲ್ಲವಾದ್ದರಿಂದ ಈ ವಿಷಯವನ್ನು ನಿರ್ಣಯಿಸುವದನ್ನು ವೈದಿಕವಾಙ್ಮಯಶೋಧನೆಯಲ್ಲಿ ಹೆಚ್ಚಿನ ಪರಿಶ್ರಮವುಳ್ಳ ವಿದ್ವಾಂಸರಿಗೇ ಬಿಡಬೇಕಾಗಿದೆ.

ಈ ಉಪನಿಷತ್ತಿನ ಹೆಚ್ಚುಗಾರಿಕೆ

ಬೃಹದಾರಣ್ಯಕವನ್ನು ಬಿಟ್ಟರೆ ಛಾಂದೋಗ್ಯದಷ್ಟು ದೊಡ್ಡದಾದ ಉಪನಿಷತ್ತು ನಮಗೆ ಸಿಕ್ಕುವದಿಲ್ಲ. ಸೂತ್ರಭಾಷ್ಯದಲ್ಲಿ ಈ ಉಪನಿಷತ್ತಿನಿಂದ ಆರಿಸಿಕೊಂಡಿರುವಷ್ಟು ಹೆಚ್ಚಿನ ಸಂಖ್ಯೆಯ ವಾಕ್ಯಗಳನ್ನು ಮತ್ತೆ ಯಾವ ಉಪನಿಷತ್ತಿನಿಂದಲೂ ಆರಿಸಿಕೊಂಡಿರುವದಿಲ್ಲ. ಬ್ರಹ್ಮಸೂತ್ರದ ಸಮನ್ವಯಾಧ್ಯಾಯದಲ್ಲಿ ಈ ಉಪನಿಷತ್ತಿನ ವಾಕ್ಯಗಳನ್ನು ಯಥಾಪಠಿತವಾದ ಅನುಕ್ರಮದಲ್ಲಿಯೇ (೧-೬-೬, ೧-೯-೧, ೧-೧೧-೫, ೩-೧೩-೭, ೩-೧೪-೧, ೪-೧೫-೧, ೫-೧೧ ರಿಂದ ೨೪, ೭-೨೩-೧, ೮-೧-೧, ೮-೧೨-೩, ೮-೧೪) ತೆಗೆದುಕೊಂಡು ವಿಚಾರಮಾಡಿ

ರುವದನ್ನೂ ಸಂಗತಿಗೆ ಹೊಂದುವಂತೆ ತೈತ್ತಿರೀಯ, ಕೌಷೀತಕಿ, ಕಠ, ಮುಂಡಕ, ಪ್ರಶ್ನ - ಇವುಗಳ ವಾಕ್ಯಗಳನ್ನು ಅಲ್ಲಲ್ಲಿಗೆ ಹೆಣೆದುಕೊಂಡಿರುವದನ್ನೂ ನೋಡಿದರೆ ಸೂತ್ರಭಾಷ್ಯದಲ್ಲಿ ಇದಕ್ಕೆ ಕೊಟ್ಟಿರುವ ಪೆಚ್ಚಿನ ಸ್ಥಾನವು ಮನಸ್ಸಿಗೆ ತಟ್ಟುವದು. ಎಲ್ಲಕ್ಕೂ ಮಿಗಿಲಾಗಿ ಉಪಾಸನೆಗಳಿಗೆ ಈ ಉಪನಿಷತ್ತಿನಲ್ಲಿ ಕೊಟ್ಟಿರುವ ಪ್ರಾಧಾನ್ಯವನ್ನು ಮತ್ತೆ ಯಾವ ಉಪನಿಷತ್ತಿನಲ್ಲಿಯೂ ಕೊಟ್ಟಿರುವದು ಕಂಡುಬರುವದಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಉಪನಿಷತ್ತಿಗೆ ವೇದಾಂತವಾಙ್ಮಯದಲ್ಲಿ ಬಹುಮುಖ್ಯಸ್ಥಾನವಿದೆ ಎಂದು ಹೇಳಬೇಕಾಗಿದೆ.

ಉಪನಿಷದ್ಭಾಷ್ಯವನ್ನು ಬರೆದವರು

ಈ ಉಪನಿಷತ್ತಿಗೆ ಭಾಷ್ಯವನ್ನು ಬರೆದಿರುವವರು ಸೂತ್ರಭಾಷ್ಯವನ್ನು ಬರೆದಿರುವ ಶ್ರೀಶಂಕರಾಚಾರ್ಯರೇ ಎಂದು ಎಲ್ಲೆಲ್ಲಿಯೂ ಪ್ರಸಿದ್ಧವಾಗಿರುತ್ತದೆ. 'ಶಾರೀರಕದಲ್ಲಿ ಉಪನಿಷತ್ತನ್ನು ವಿಸ್ತಾರವಾಗಿ ವಿವರಿಸಿದೆಯಾದರೂ ಪಾಠಕ್ರಮವನ್ನನುಸರಿಸಿ ಬರೆದಿಲ್ಲ; ಪಾಠಕ್ರಮವನ್ನಾಶ್ರಯಿಸಿ **ದ್ರವಿಡಾಚಾರ್ಯರು** ಬರೆದಿರುವ ಭಾಷ್ಯವು[1] ವಿಸ್ತಾರವಾಗಿದೆ. ಇಲ್ಲಿ ಸಂಕ್ಷೇಪವಾಗಿ ಪಾಠಕ್ರಮದಲ್ಲಿಯೇ ಅರ್ಥವನ್ನು ಸ್ಫುಟಗೊಳಿಸಿದೆ ಎಂದು ಆನಂದಗಿರಿಗಳ ಟೀಕೆಯಲ್ಲಿ ಬರೆದಿದೆ. ಬರೆವಣಿಗೆಯ ಶೈಲಿಯನ್ನು ನೋಡಿದರೂ ಇದು ಸುಪ್ರಸಿದ್ಧ ಶಂಕರಾಚಾರ್ಯರದೇ ಆಗಿರಬೇಕೆಂದು ಹೇಳಬೇಕಾಗುತ್ತದೆ. ಹೀಗಿದ್ದರೂ ಈ ಉಪನಿಷತ್ತಿನ ಭಾಷ್ಯ, ಬೃಹದಾರಣ್ಯಕಭಾಷ್ಯ - ಇವುಗಳನ್ನು ಸೂತ್ರಭಾಷ್ಯಕ್ಕೆ ಹೋಲಿಸುವಾಗ ಕೆಲವು ಮತಭೇದಗಳು ಕಂಡುಬರುತ್ತವೆ. ಅವನ್ನು ಯಥಾಮತಿಯಾಗಿ ಟಿಪ್ಪಣಿಯಲ್ಲಿ ಅಲ್ಲಲ್ಲಿ[2] ವಾಚಕರ ಲಕ್ಷ್ಯಕ್ಕೆ ತಂದಿರುತ್ತೇವೆ. ಈ ಮತಭೇದಗಳಿಗೆ ಕಾರಣ

1. ಈ ದ್ರಾವಿಡಭಾಷ್ಯವು ಇನ್ನೂ ಸಿಕ್ಕಿರುವದಿಲ್ಲವಾದ್ದರಿಂದ ದ್ರವಿಡಾಚಾರ್ಯರ ವಿಷಯಕ್ಕೆ ಪೆಚ್ಚಿಗೆಯೇನೂ ತಿಳಿದಿಲ್ಲ. ಆದರೆ ಗ್ರಂಥದಿಂದ ಕೆಲವು ವಿಷಯಗಳನ್ನು ಇಲ್ಲಿ ಸಂಗ್ರಹಿಸಿರುತ್ತಾರೆಂದು ಟೀಕೆಯಿಂದ ತಿಳಿದುಬಂದಿದೆ. ಇದೇ ಆಚಾರ್ಯರ ವಾಕ್ಯಗಳು ಮಾಂಡೂಕ್ಯ, ಬೃಹದಾರಣ್ಯಕ - ಇವುಗಳ ಭಾಷ್ಯದಲ್ಲಿ ಉದಾಹೃತವಾಗಿರುವದನ್ನು ನೋಡಿದರೆ ಇವರು ಅದ್ವೈತಿಗಳೆಂಬುದು ಸ್ಫುಟವಾಗುವದು. ಶ್ರೀರಾಮಾನುಜಾಚಾರ್ಯರು ಉದಾಹರಿಸಿರುವ ದ್ರವಿಡಾಚಾರ್ಯರು ಬೇರೆ ಎಂಬುದನ್ನು "ವೇದಾರ್ಥಸಂಗ್ರಹ"ದ ಭೂಮಿಕೆಯಲ್ಲಿ ನಾವು ಸ್ಪಷ್ಟಗೊಳಿಸಿರುವೆವು.

2. ೧೨೧, ೧೩೨, ೧೩೫, ೩೧೩, ೩೩೮ ೩೪೨, ೪೧೬, ೫೯೦, ೬೩೦, ೬೮೪, ೭೬೦೫, ೮೬೫, ೯೬೩, ೧೦೨೩ - ಮುಂತಾದ ಪುಟಗಳಲ್ಲಿ.

ವೇನೆಂಬುದನ್ನು ಈ ಮೂರು ಭಾಷ್ಯಗಳನ್ನೂ ಚಿಕಿತ್ಸಾದೃಷ್ಟಿಯಿಂದ ಓದಿ ವಿದ್ವಾಂಸರೇ ನಿರ್ಣಯಿಸಬೇಕಾಗಿದೆ. ಮುಖ್ಯಸಿದ್ಧಾಂತದ ವಿಷಯದಲ್ಲಿ ಮಾತ್ರ ಯಾವ ಅನ್ಯೋನ್ಯವಿರೋಧವೂ ಕಾಣಿಸುತ್ತಿಲ್ಲವೆಂಬುದು ಮುಮುಕ್ಷುಗಳಿಗೆ ಮನಃ ಸಮಾಧಾನಕ್ಕೆ ಕಾರಣವಾಗಿರುತ್ತದೆ.

ಉಪಾಸನೆಗಳು

ಈ ಉಪನಿಷತ್ತಿನಲ್ಲಿ ಉಪಾಸನೆಯ ವಿಧಾನಕ್ಕೆ ಹೆಚ್ಚಿನ ಭಾಗವನ್ನು ವಿನಿಯೋಗಿಸಿದೆ ಎಂಬುದು ಎದ್ದುಕಾಣಬರುವಂತಿದೆ. ಈ ಉಪಾಸನೆಗಳನ್ನು ಒಂದಾನೊಂದು ಕ್ರಮವನ್ನು ಅನುಸರಿಸಿ ಸೋಪಾನಕ್ರಮದಿಂದ ಹೇಳುತ್ತಾಬಂದಿದೆ ಎಂಬುದನ್ನು ಒಳಹೊಕ್ಕು ವಿಚಾರಮಾಡುವವರು ಕಾಣಬಹುದು. ಮೊದಲು ಉದ್ಗೀಥಭಕ್ತಿಯ ಅವಯವವಾದ ಓಂಕಾರದ ಉಪಾಸನೆಯನ್ನು ಹೇಳಿದೆ ; ಅದನ್ನು ಬಗೆಬಗೆಯ ದೃಷ್ಟಿಯಿಂದ ಬಗೆಬಗೆಯಾಗಿ ಉಪಾಸನೆಮಾಡಬಹುದೆಂಬುದನ್ನು ವಿವರಿಸಿದ ಬಳಿಕ ಆ ಪ್ರಸಂಗದಿಂದ 'ಪ್ರಸ್ತಾವ', 'ಪ್ರತಿಹಾರ' - ಎಂಬ **ಭಕ್ತಿ**ಗಳ ಉಪಾಸನೆಯನ್ನು ಹೇಳಿದೆ. ಆಮೇಲೆ ಸಾಮಗಾನಗಳಲ್ಲಿ ಬರುವ **ಸ್ತೋಭ**ಗಳ ವಿಷಯವಾದ ಉಪಾಸನೆಯನ್ನು ಹೇಳಿದೆ. ಹೀಗೆ ಸಾಮಾವಯವಗಳ ಉಪಾಸನೆಯಾದ ಬಳಿಕ **ಸಮಸ್ತಸಾಮ**ದ ಉಪಾಸನೆಗಳನ್ನು ಹೇಳಿದೆ ; ಸಮಸ್ತಸಾಮವನ್ನು ಪಾಂಚಭಕ್ತಿಕವೆಂದೂ ಸಾಪ್ತಭಕ್ತಿಕವೆಂದೂ ವಿಂಗಡಿಸಿಕೊಂಡು ಬೇರೆಬೇರೆಯ ಪ್ರಕಾರದ ಉಪಾಸನೆಗಳನ್ನು ಹೇಳಿದೆ.[1] ಇದಾದ ಬಳಿಕ ಉದ್ಗಾತೃವಿಗೆ ಗಾನ ವಿಶೇಷಗಳಲ್ಲಿರಬೇಕಾದ ಗಾನವಿಶೇಷಗಳ ಮತ್ತು ಸ್ವರಾದಿಪರ್ಣಗಳ ವಿಷಯದ ಭಾವನೆಯನ್ನು ಹೇಳಿದೆ. ಇದಾದ ಮೇಲೆ ಪ್ರಾಸಂಗಿಕವಾಗಿ ಪರಮಾತ್ಮಪ್ರತೀಕವಾದ **ಓಂಕಾರಮಾತ್ರದ ಉಪಾಸನೆ**ಯನ್ನು ಹೇಳಿದೆ. ಆ ಬಳಿಕ **ಯಜ್ಞಾಂಗ** ಭೂತವಾದ ಸಾಮಹೋಮಾದಿವಿಜ್ಞಾನವನ್ನು ತಿಳಿಸಿದೆ. ಅನಂತರ **ಯಜ್ಞದ ಫಲ**ವಾದ ಆದಿತ್ಯನ ಮಧುವಿದ್ಯೆ ಎಂಬ ಉಪಾಸನೆಯನ್ನು ಹೇಳಿದೆ ; ಹೀಗೆ ಆದಿತ್ಯನ ಮೂಲಕ ಬ್ರಹ್ಮೋಪಾಸನೆಯನ್ನು ಹೇಳಿದ ಮೇಲೆ ಛಂದಸ್ಸುಗಳಲ್ಲೆಲ್ಲ ಶ್ರೇಷ್ಠವೆನಿಸಿರುವ **ಗಾಯತ್ರಿ**ಯ ಮೂಲಕವೂ ಅದೇ ಬ್ರಹ್ಮದ ಉಪಾಸನೆಯನ್ನು ಹೇಳಿದೆ. ಆ ಬಳಿಕ ಅದೇ ಬ್ರಹ್ಮವನ್ನು ಮನೋಮಯತ್ವಾದಿವಿಶಿಷ್ಟಶಕ್ತಿಗಳಿಂದೊಡಗೂಡಿ ಉಪಾಸನೆಮಾಡುವ ಬಗೆಯನ್ನು ತಿಳಿಸಿದೆ. ಇದರ ಮುಂದೆ ಬ್ರಹ್ಮದ

1. ಭಕ್ತಿಗಳ ವಿಷಯಕ್ಕೆ ಪರಿಶಿಷ್ಟವನ್ನು ನೋಡಿ.

ಏಕದೇಶವಾಗಿ ಉಪದೇಶಿಸಿದ ಮನಆಕಾಶಗಳನ್ನು **ಸಮಸ್ತಬ್ರಹ್ಮದೃಷ್ಟಿ**ಯಿಂದ ಉಪಾಸನೆಮಾಡಬೇಕೆಂದು ವಿಧಿಸಿದೆ ; ಅಲ್ಲಿ ಚತುಷ್ಪಾದ್ಬ್ರಹ್ಮನ ಪಾದವೆಂದು ಹೇಳಿದ್ದ ಆದಿತ್ಯನನ್ನು ಸಕಲಬ್ರಹ್ಮದೃಷ್ಟಿಯಿಂದ ಉಪಾಸನೆಮಾಡಬೇಕೆಂದು ಆಮೇಲೆ ತಿಳಿಸಿದೆ ; ಹೀಗೆಯೇ ಬ್ರಹ್ಮದ ಪಾದಗಳೆಂದು ಮೊದಲು ಹೇಳಿದ್ದ ವಾಯುಪ್ರಾಣಗಳಲ್ಲಿ ನೇರಾಗಿ ಬ್ರಹ್ಮದೃಷ್ಟಿಯನ್ನು ವಿಧಿಸಿದೆ. ಆಮೇಲೆ ಇಡಿಯ ಜಗತ್ತನ್ನು ಪದಿನಾರುಕಲೆಗಳಾಗಿ ವಿಂಗಡಿಸಿ **ಷೋಡಶಕಲಬ್ರಹ್ಮವಿದ್ಯೆ**ಯನ್ನು ಉಪದೇಶಿಸಿದೆ. ಮತ್ತೆ ಯಜ್ಞದ ಅಗ್ನಿಗಳ ಮೂಲಕ **ಅಕ್ಷಿಪುರುಷ**ನಾದ ದೃಷ್ಟಿದ್ರಷ್ಟವೇ ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ಬೋಧಿಸಿದೆ. ಆ ಬಳಿಕ **ಪಂಚಾಗ್ನಿವಿದ್ಯೆ**ಯಿಂದ ಗೃಹಸ್ಥರಿಗೂ ಹಿರಣ್ಯಗರ್ಭಾದ್ಯುಪಾಸಕರಿಗೂ ಉತ್ತರಮಾರ್ಗವನ್ನು ಅನುವಾದಮಾಡಿಕೊಂಡು ಕೇವಲಕರ್ಮಿಗಳಿಗೆ ದಕ್ಷಿಣ ಮಾರ್ಗಗತಿಯನ್ನೂ ಮಿಕ್ಕವರಿಗೆ ಕ್ಷುದ್ರಜಂತುಗಳ ಜನ್ಮದ ಪ್ರಾಪ್ತಿಯನ್ನೂ ವೈರಾಗ್ಯಪ್ರಾಪ್ತಿಗಾಗಿ ಬೋಧಿಸಿ, ಮುಂದೆ ಸರ್ವಜಗದಾತ್ಮನಾದ ವೈಶ್ವಾನರನ ಉಪಾಸನೆಯನ್ನು ಹೇಳಿದೆ. ಈ ಕ್ರಮವನ್ನು ಮನಸ್ಸಿನಲ್ಲಿ ಹೊರಳಿಸಿ ನೋಡಿದರೆ ಕರ್ಮದ ಅಂಗವಾದ ಸಾಮವನ್ನೂ ಛಂದಸ್ಸನ್ನೂ ಕರ್ಮವನ್ನೂ ಫಲವನ್ನೂ ನೆಪಮಾಡಿಕೊಂಡು ಉಪಾಸನೆಗಳನ್ನು ವಿಧಿಸುತ್ತಾ ಕ್ರಮಕ್ರಮವಾಗಿ ಉಪಾಸ್ಯಸ್ವರೂಪವನ್ನು ಹೆಚ್ಚುಹೆಚ್ಚಾಗಿ ವ್ಯಾಪಕವಾಗಿ ತಿಳಿಸುತಾಹೋಗಿದೆ ಎಂಬುದು ಜಿಜ್ಞಾಸುಗಳ ಮನಸ್ಸಿನಲ್ಲಿ ಮಿಂಚದೆ ಇರಲಾರದು.

ಈ ಉಪಾಸನೆಗಳ ವಿಷಯದಲ್ಲಿ ಸೂಕ್ಷ್ಮಮತಿಗಳಾದ ಜಿಜ್ಞಾಸುಗಳಿಗೆ ಹೊಳೆಯಬಹುದಾದ ಮತ್ತೊಂದು ವಿಷಯವೇನೆಂದರೆ ಅಧ್ಯಾತ್ಮಕರ್ಮವು ಬಹಿರ್ದೃಷ್ಟಿಯವರಿಗೆ ವಿಹಿತವಾಗಿದ್ದರೂ ಅದೇ ಕರ್ಮಕ್ಕೆ ಅಂಗವಾಗಿ ಉದ್ಗಾತೃವೇ ಮುಂತಾದ ಋತ್ವಿಜರು ಅಂತರ್ಮುಖರಾಗಿದ್ದರೆ ಉಪಾಸನೆಯನ್ನೂ ಮಾಡಿ ಕರ್ಮ ಫಲಕ್ಕಿಂತ ಹೆಚ್ಚಿನ ಫಲವನ್ನು ಸಂಪಾದಿಸಿಕೊಳ್ಳಬಹುದೆಂಬುದನ್ನು ಇಲ್ಲಿ ತೋರಿಸಿ ಕೊಟ್ಟಿರುತ್ತದೆ. ಇಷ್ಟೇ ಅಲ್ಲ ; ಓಂಕಾರ, ಉದ್ಗೀಥ, ಗಾಯತ್ರೀಛಂದಸ್ಸು, ಕರ್ಮ ಫಲವಾದ ಆದಿತ್ಯ, ಸಾಮಗಾನಕ್ಕೆ ಬೇಕಾದ ಪ್ರಾಣ - ಇವುಗಳಿಗೆ ಪರಮಾತ್ಮನನ್ನು ಸಂಬಂಧಿಸಿ ವಿಶಿಷ್ಟವಾದ ಗುಣಗಳೂ ಶಕ್ತಿಗಳೂ ಇರುವ ಆ ಈಶ್ವರನೆಂಬ ದೃಷ್ಟಿಯಿಂದ ಉಪಾಸನೆಮಾಡಬೇಕೆಂದು ತಿಳಿಸಿ ಕರ್ಮವನ್ನು ಕರ್ಮಯೋಗವಾಗಿ ಮಾರ್ಪಡಿಸಿರುವ ಕೌಶಲವೂ ಇಲ್ಲಿ ಕಾಣಬರುತ್ತಿದೆ. ಹೀಗೆ ಕರ್ಮಗಳಿಂದ ಈಶ್ವರೋಪಾಸನೆಗೆ ಮನಸ್ಸನ್ನು ತಿರುಗಿಸಿದ ಬಳಿಕವೇ ಕೇವಲೋಪಾಸನೆಗಳನ್ನು

ವಿಧಿಸಿರುವದರಿಂದ ಅಧಿಕಾರಿಗಳನ್ನು ಸೋಪಾನಕ್ರಮದಿಂದ ಈಶ್ವರೋಪಾಸನೆಗೆ ಅಣಿಮಾಡುವದೇ ಉಪನಿಷತ್ತಿನ ಗುರಿ ಎಂಬುದು ವಿಚಾರಶೀಲರಿಗೆ ಮನವರಿಕೆಯಾಗುವಂತಿದೆ.

ಜ್ಞಾನವೂ ಉಪಾಸನೆಯೂ

ಆಚಾರ್ಯರ ಸಿದ್ಧಾಂತದಂತೆ ಕರ್ಮನಿರಪೇಕ್ಷವಾದ ಅದ್ವೈತಾತ್ಮ ವಿಜ್ಞಾನವೇ ಪರಮಪುರುಷಾರ್ಥಕ್ಕೆ ಸಾಧನವಾಗಿರುತ್ತದೆ. ಹೀಗಿರುವಲ್ಲಿ ಉಪನಿಷತ್ತುಗಳಲ್ಲಿಯೂ ಕರ್ಮೋಪಾಸನೆಗಳನ್ನು ಏತಕ್ಕೆ ಹೇಳಿರುತ್ತದೆ ? – ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವದು ಅದ್ವೈತಸಂಪ್ರದಾಯದ ದೃಷ್ಟಿಯಂತೆ ಅತ್ಯಂತ ಅವಶ್ಯವಾಗಿರುತ್ತದೆ.

ಅಧ್ಯಯನ, ಅಗ್ನಿಹೋತ್ರಾದಿಗಳು – ಮುಂತಾದ ಕರ್ಮಗಳನ್ನು ಮಾಡುತ್ತಿರಬೇಕೆಂದು ತೈತ್ತಿರೀಯೋಪನಿಷತ್ತಿನ ಶೀಕ್ಷಾವಲ್ಲಿಯಲ್ಲಿ ಒತ್ತಿಹೇಳಿರುತ್ತದೆ. ಆ ಉಪನಿಷತ್ತಿನಲ್ಲಿ ಕರ್ಮಗಳನ್ನು ಮಾಡಬೇಕೆಂದು ಎರಡು ಸಾರಿ ಉಪದೇಶಿಸಿರುವದಕ್ಕೆ ಕಾರಣವೇನೆಂಬ ಪ್ರಶ್ನೆಗೆ ಭಾಷ್ಯಕಾರರು ಹೀಗೆ ಉತ್ತರವನ್ನು ಬರೆದಿರುತ್ತಾರೆ: ''ಋತಾದೀನಾಂ ಪೂರ್ವತ್ರೋಪದೇಶಃ ಅನರ್ಥಕ್ಯಪರಿಹಾರಾರ್ಥಃ । ಇಹ ತು ಜ್ಞಾನೋತ್ಪತ್ತ್ಯರ್ಥತ್ವಾತ್ ಕರ್ತವ್ಯತಾನಿಯಮಾರ್ಥಃ'' (ಭಾ. ಭಾ. ೬೦) ಕರ್ಮಗಳನ್ನು ಮೊದಲು ಉಪದೇಶಿಸಿರುವದು ಕರ್ಮಗಳಿಗೆ ಆನರ್ಥಕ್ಯವನ್ನು ಪರಿಹರಿಸುವದಕ್ಕೆ ; ಎಂದರೆ ಉಪಾಸನೆಯಿಂದಲೇ ಸ್ವಾರಾಜ್ಯರೂಪವಾದ ಮುಕ್ತಿಯು ದೊರಕುವದರಿಂದ ಕರ್ಮವು ವ್ಯರ್ಥ – ಎಂದು ಶಂಕಿಸಬಾರದೆಂಬುದನ್ನು ತಿಳಿಸುವದಕ್ಕೆ. ಮತ್ತೆ ಎರಡನೆಯ ಸಲ ಕರ್ಮಗಳನ್ನು ಉಪದೇಶಿಸಿರುವದು ಕರ್ಮಗಳು ಚಿತ್ತಶುದ್ಧಿಯ ಮೂಲಕವಾಗಿ ಜ್ಞಾನೋತ್ಪತ್ತಿಗೆ ಕಾರಣವಾಗಿರುವದರಿಂದ ಅವಶ್ಯವಾಗಿ ಅವನ್ನು ಮಾಡಬೇಕು – ಎಂಬುದನ್ನು ತಿಳಿಸುವದಕ್ಕೆ- ಎಂದು ಆ ಭಾಷ್ಯವಾಕ್ಯದ ಅಭಿಪ್ರಾಯ. ಇದು ಕರ್ಮಗಳಿಗೂ ಜ್ಞಾನಕ್ಕೂ ಇರುವ ಸಂಬಂಧವನ್ನು ಕುರಿತ ವಿಚಾರವು.

ಈ ಛಾಂದೋಗ್ಯೋಪನಿಷತ್ತಿನಲ್ಲಿ ಬಲು ಹೆಚ್ಚಿನ ಭಾಗವನ್ನು ಉಪಾಸನೆಗಳಿಗೇ ವಿನಿಯೋಗಿಸಿರುವದೇಕೆ ? – ಎಂಬ ಪ್ರಶ್ನೆಗೆ ಆಚಾರ್ಯರು ಈ ಉತ್ತರವನು ಬರೆದಿರುತ್ತಾರೆ. 'ರಹಸ್ಯಸಾಮಾನ್ಯಾತ್, ಮನೋವೃತ್ತಿಸಾಮಾನ್ಯಾಚ್ಚ'

(ಭಾ. ಭಾ. ಶಿ) ಈ ಎರಡೂ ಕರ್ಮಕ್ಕೆ ಹೋಲಿಸಿದರೆ ರಹಸ್ಯವಿದ್ಯೆಗಳಾಗಿರುತ್ತವೆ, ಮತ್ತು ಎರಡೂ ಮನೋವೃತ್ತಿಗಳಾಗಿರುತ್ತವೆ. ಆದ್ದರಿಂದ ಉಪನಿಷತ್ತಿನಲ್ಲಿಯೇ ಉಪಾಸನೆಗಳನ್ನು ಹೇಳಿರುತ್ತದೆ ಎಂಬುದು ವಾಕ್ಯದ ಅಭಿಪ್ರಾಯ. ತಟ್ಟನೆ ನೋಡಿದರೆ ಉಪಾಸನೆಗೂ ಜ್ಞಾನಕ್ಕೂ ರೂಪದಲ್ಲಿರುವ ಸಾಮಾನ್ಯವೊಂದೇ ಉಪಾಸನೆಯನ್ನು ಉಪನಿಷತ್ತಿನಲ್ಲಿ ಸೇರಿಸಿರುವದಕ್ಕೆ ಕಾರಣವೆಂದು ಕಾಣಿಸುತ್ತದೆ. ಆದರೆ ಆಚಾರ್ಯರು ಮತ್ತೊಂದು ವಾಕ್ಯದಿಂದ ತಮ್ಮ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿರುತ್ತಾರೆ : ''ತಾನ್ಯೇತಾನಿ ಉಪಾಸನಾನಿ ಸತ್ತ್ವಶುದ್ಧಿಕರತ್ವೇನ ವಸ್ತು ತತ್ತ್ವಾವಭಾಸಕತ್ವಾತ್ ಅದ್ವೈತಜ್ಞಾನೋಪಕಾರಕಾಣಿ ಆಲಮ್ಬನವಿಷಯತ್ವಾತ್ ಸುಸಾಧ್ಯಾನಿ ಚ ಇತಿ ಪೂರ್ವಮ್ ಉಪನ್ಯಸ್ಯನ್ತೇ'' (ಭಾ. ಭಾ. ೬) **ಈ ಉಪಾಸನೆಗಳು ಸತ್ತ್ವಶುದ್ಧಿಯನ್ನುಂಟುಮಾಡಿ ವಸುತತ್ತ್ವವನ್ನು ತೋರಿಸಿಕೊಡುವದರಿಂದ ಅದ್ವೈತಜ್ಞಾನಕ್ಕೆ ಉಪಕಾರಕವಾಗಿರುತ್ತವೆ ; ಆಲಂಬನವನ್ನಿಟ್ಟುಕೊಂಡಿರುವ ವೃತ್ತಿರೂಪವಾಗಿರುವದರಿಂದ ಇವುಗಳನ್ನು ಸುಲಭವಾಗಿ ಸಾಧಿಸಿಕೊಳ್ಳಲೂಬಹುದು. ಆದ್ದರಿಂದ ಜ್ಞಾನವನ್ನು ಹೇಳುವದಕ್ಕಿಂತ ಮೊದಲು ಇವನ್ನು ಹೇಳಿರುತ್ತದೆ-** ಎಂಬುದು ವಾಕ್ಯದ ಅಭಿಪ್ರಾಯ. ಕರ್ಮಗಳಿಂದಾಗುವ ಚಿತ್ತಶುದ್ಧಿಯು ಬಾಹ್ಯವಿಷಯದ ಚಿಂತೆಯನ್ನು ತಪ್ಪಿಸುತ್ತದೆ ; ಉಪಾಸನೆಯಿಂದಾಗುವ ಚಿತ್ತಶುದ್ಧಿಯು ಚಿತ್ತದ ಕಾಲುಷ್ಯವನ್ನು ಕಳೆಯುವದರ ಜೊತೆಗೆ ಅದರ ಚಾಂಚಲ್ಯವನ್ನೂ ಕಳೆದು ಪ್ರತ್ಯಗಾತ್ಮನನ್ನು ಅರಿತುಕೊಳ್ಳುವದಕ್ಕೆ ಅದನ್ನು ಅಣಿಗೊಳಿಸುತ್ತದೆ. ಭಗವದ್ಗೀತೆಯಲ್ಲಿ ಹೇಳಿರುವ ಕರ್ಮಯೋಗ, ಧ್ಯಾನಯೋಗ - ಇವುಗಳ ಸಂಬಂಧವನ್ನು ಇಲ್ಲಿ ವಾಚಕರು ಮನದಂದುಕೊಳ್ಳಬೇಕು.

ಜ್ಞಾನೋಪಾಸನೆಗಳ ತಾರತಮ್ಯ

ಜ್ಞಾನೋಪಾಸನೆಗಳೆರಡೂ ಮನೋವೃತ್ತಿಗಳೇ ಆದರೂ ಇವೆರಡಕ್ಕೂ ತಾರತಮ್ಯವಿದೆ. ಭಾಷ್ಯಕಾರರು ಇದನ್ನು ಹೀಗೆ ತಿಳಿಸಿಕೊಟ್ಟಿರುತ್ತಾರೆ : ''ಸ್ವಾಭಾವಿಕಸ್ಯ ಆತ್ಮನಿ ಅವಿಕ್ರಿಯೇ ಅಧ್ಯಾರೋಪಿತಸ್ಯ ಕರ್ತ್ರಾದಿಕಾರಕಕ್ರಿಯಾಫಲ ಭೇದವಿಜ್ಞಾನಸ್ಯ ನಿವರ್ತಕಮ್ ಅದ್ವೈತವಿಜ್ಞಾನಮ್ । ರಜ್ಜ್ವಾದಾವಿವ ಸರ್ಪಾದ್ಯಧ್ಯಾರೋಪಲಕ್ಷಣಜ್ಞಾನಸ್ಯ ರಜ್ಜ್ವಾದಿಸ್ವರೂಪನಿಶ್ಚಯಃ ಪ್ರಕಾಶನಿಮಿತ್ತಃ । ಉಪಾಸನಂ ತು ಯಥಾಶಾಸ್ತ್ರ ಸಮರ್ಪಿತಂ ಕಿಂಚಿದಾಲಮ್ಬನಮ್ ಉಪಾದಾಯ

ತಸ್ಮಿನ್ ಸಮಾನಚಿತ್ತವೃತ್ತಿಸಂತಾನಕರಣಂ ತದ್ವಿಲಕ್ಷಣಪ್ರತ್ಯಯಾನನ್ತರಿತಮ್ ಇತಿ ವಿಶೇಷಃ ॥'' (ಭಾ. ಭಾ. ೫) ಅದ್ವೈತವಿಜ್ಞಾನವೆಂದರೆ ಆತ್ಮನು ಇರುವ ರೂಪದಿಂದ ಅವನನ್ನು ತಿಳಿಯಿಸಿಕೊಡುವ ಅರಿವು ; ಮಿಕ್ಕ ಅರಿವುಗಳಂತೆಯೇ ಅದು ತನ್ನ ವಿಷಯದ ಅಜ್ಞಾನವನ್ನು ತೊಲಗಿಸುತ್ತದೆ. **ನಮ್ಮ ಆತ್ಮನು ಕರ್ತೃರೂಪನು, ಕಾರಕಗಳಿಂದ ಕ್ರಿಯೆಯನ್ನು ಮಾಡಿ ಫಲವನ್ನು ಪಡೆದುಕೊಳ್ಳುವ ಸ್ವಭಾವದವನು - ಎಂಬುದು ಲೋಕದ ಜನರ ನಂಬಿಕೆ. ಇದು ತಪ್ಪುತಿಳಿವಳಿಕೆಯೆಂಬುದನ್ನು ತೋರಿಸಿಕೊಟ್ಟು ಇದನ್ನು ತೊಲಗಿಸಿ ಆತ್ಮನು ಅದ್ವಿತೀಯನೇ ಎಂಬುದನ್ನು ತಿಳಿಸಿಕೊಡುವದೇ ವೇದಾಂತಜ್ಞಾನವೆಂದೂ ಆಚಾರ್ಯರ ಅಭಿಪ್ರಾಯವು. ಇನ್ನು ಉಪಾಸನೆ ಎಂದರೆ ಶಾಸ್ತ್ರದಲ್ಲಿ ತಿಳಿಸಿಕೊಟ್ಟಿರುವ ಒಂದಾನೊಂದು ಆಲಂಬನವನ್ನು ಮನಸ್ಸಿಗೆ ತಂದು ಕೊಂಡು ಅದನ್ನೇ ಎಡಬಿಡದೆ - ಮತ್ತೊಂದು ಬಗೆಯ ಪ್ರತ್ಯಯವನ್ನು ನಡುವೆ ಬರಗೊಡದೆ ಚಿತ್ತವೃತ್ತಿಯನ್ನು ಧಾರಾಕಾರವಾಗಿ ಮಾಡುವದು.** ಇದರಲ್ಲಿ ವಸ್ತುವಿನ ಸ್ವರೂಪವು ಹೇಗೇ ಇರಲಿ, ಶಾಸ್ತ್ರದಲ್ಲಿ ವಿಧಿಸಿರುವ ರೂಪದಿಂದಲೇ ಅದನ್ನು ಭಾವಿಸುವದು ಮುಖ್ಯವು. ಈ ಕ್ರಿಯೆಯು ಭಾವನೆ ಮಾಡುವ ಕರ್ತೃವಿಗೆ ಅಧೀನವಾಗಿರುತ್ತದೆ- ಎಂಬುದು ಆಚಾರ್ಯರ ಆಶಯ.

ಜ್ಞೇಯೋಪಾಸ್ಯಬ್ರಹ್ಮಗಳಿಗೆ ಸಂಬಂಧ

ಉಪಾಸನೆಗೆ ಶಾಸ್ತ್ರೋಕ್ತವಾದ ಬೇರೆಬೇರೆಯ ಆಲಂಬನಗಳು ಇರಬಹುದೆಂದು ಮೇಲೆ ನಿಶ್ಚಯವಾಯಿತಷ್ಟೆ. ಇಂಥ ಆಲಂಬನಗಳು ಓಂಕಾರಾದಿ ಶಬ್ದರೂಪವಾಗಿರಬಹುದು ; ಅಗ್ನಿಯೇ ಮುಂತಾದ ಕರ್ಮಾಂಗವಸ್ತುಗಳಾಗಿರ ಬಹುದು ; ಮನಸ್ಸು ಮುಂತಾದ ಅಧ್ಯಾತ್ಮವಸ್ತುವಾಗಿರಬಹುದು ; ಆಕಾಶ, ಆದಿತ್ಯ - ಮುಂತಾದ ಅಧಿದೈವತವಸ್ತುಗಳಾಗಿರಬಹುದು ; ಇಷ್ಟೇ ಅಲ್ಲ ; ಬ್ರಹ್ಮವೂ ಆಗಿರಬಹುದು. ಇದನ್ನು ಆಚಾರ್ಯರು ''ತತ್ರೈತಸ್ಮಿನ್ ಅದ್ವೈತವಿದ್ಯಾಪ್ರಕರಣೇ ಅಭ್ಯುದಯಸಾಧನಾನಿ ಉಪಾಸನಾನಿ ಉಚ್ಯನ್ತೇ । ಕೈವಲ್ಯಸಂನಿಕೃಷ್ಟಫಲಾನಿ ಚ ಅದ್ವೈತಾತ್ ಈಷದ್ವಿಕೃತಬ್ರಹ್ಮವಿಷಯಾಣಿ 'ಮನೋಮಯಃ ಪ್ರಾಣಶರೀರಃ' (೩-೪-೧೨) ಇತ್ಯಾದೀನಿ । ಕರ್ಮಸಮೃದ್ಧಿಫಲಾನಿ ಚ ಕರ್ಮಾಙ್ಗಸಂಬನ್ಧೀನಿ ।'' (ಭಾ. ಭಾ. ೫) ಎಂಬ ವಾಕ್ಯದಿಂದ ತಿಳಿಸಿರುತ್ತಾರೆ. ಇಲ್ಲಿ ಹೇಳಿರುವ ಫಲಗಳು ಕರ್ಮಸಮೃದ್ಧಿ, ಅಭ್ಯುದಯ - ಇವೇ ಅಲ್ಲದೆ 'ಕೈವಲ್ಯಕ್ಕೆ ಸಮೀಪವಾಗಿರುವ

ಫಲವೂ' ಉಂಟು, ಎಂದು ಆಚಾರ್ಯರು ಹೇಳಿರುತ್ತಾರೆಂಬುದನ್ನು ಲಕ್ಷಿಸತಕ್ಕ ದ್ದಾಗಿದೆ. ಜ್ಞಾನದಿಂದಾಗುವ ಕೈವಲ್ಯಕ್ಕೆ ಹತ್ತಿರವಾದ ಫಲವು ಉಪಾಸನೆಯಿಂದ ಹೇಗೆ ದೊರೆಯುತ್ತದೆ ?- ಎಂಬುದನ್ನು ವಿಮರ್ಶಿಸತಕ್ಕದ್ದಿದೆ. ಏಕೆಂದರೆ ಉಪಾಸನೆಯಿಂದ ಸಿಕ್ಕುವದು ಬ್ರಹ್ಮಲೋಕ ; ಅದು ಕಾರಕಗಳಿಂದ ಕ್ರಿಯೆಯನ್ನು ಮಾಡಿ ಅರ್ಚಿರಾದಿಮಾರ್ಗದಿಂದ ಪಡೆಯುವ ಫಲವು. ಹೀಗಿರುವಲ್ಲಿ ಕ್ರಿಯಾಕಾರಕಫಲಗಳಿಲ್ಲದ ಅದ್ವೈತಬ್ರಹ್ಮರೂಪವಾದ ಕೈವಲ್ಯಕ್ಕೆ ಅದು ಹೇಗೆ ಸಮೀಪವಾಗಿದ್ದೀತು ? - ಎಂಬ ಸಂಶಯವು ಮನಸ್ಸಿನಲ್ಲಿ ಎದ್ದುಕೊಳ್ಳುವದು ಸಹಜವಾಗಿದೆ.

ಇದಕ್ಕೆ ಉತ್ತರವನ್ನು ವೇದಾಂತಮೀಮಾಂಸಾಸೂತ್ರದಲ್ಲಿ ಕಂಡುಕೊಳ್ಳ ಬೇಕಾಗಿದೆ. ಬ್ರಹ್ಮವು ಕಾರ್ಯರೂಪವಾಗಿರುವ **ಅಪರಬ್ರಹ್ಮ**ವೆಂದೂ ಅವಿಕೃತ ವಾದ ಮುಖ್ಯಬ್ರಹ್ಮ ಅಥವಾ **ಪರಬ್ರಹ್ಮ**ವೆಂದೂ ಎರಡು ರೂಪದಲ್ಲಿರುವದು (ಸೂ. ಭಾ. ೪-೩-೭, ಭಾ. ಭಾ. ೫೭೩). ಉಪಾಸಕರು ಕಾರ್ಯಬ್ರಹ್ಮವನ್ನೇ ಅರ್ಚಿರಾದಿಮಾರ್ಗದಿಂದ ಹೋಗಿ ಮುಟ್ಟಿರುತ್ತಾರೆ. ಸಮಸ್ತಜಗತ್ತಿಗೂ ಜನ್ಮಾದಿ ಕಾರಣವಾಗಿರುವದೇ ಮುಖ್ಯಬ್ರಹ್ಮವಾದರೂ ಕಾರ್ಯಬ್ರಹ್ಮವನ್ನು ಬ್ರಹ್ಮವೆಂದು ಕರೆಯುವದು ತಪ್ಪಲ್ಲ ; ಏಕೆಂದರೆ ವಿಶುದ್ಧವಾದ ಉಪಾಧಿಗಳ ಸಂಬಂಧವುಳ್ಳದ್ದಾಗಿ ನಾಮರೂಪಕರ್ಮಗಳಾದ ಮನೋಮಯತ್ವಾದಿಧರ್ಮಗಳಿಂದ ಉಪಾಸನೆ ಮಾಡಬೇಕೆಂದು ಶಾಸ್ತ್ರದಲ್ಲಿ ವಿಹಿತವಾಗಿರುವಾಗ ಆ ಪರಬ್ರಹ್ಮವೇ ಅಪರಬ್ರಹ್ಮವೆಂಬ ಹೆಸರಿಗೆ ತಕ್ಕದ್ದಾಗಿರುತ್ತದೆ. ಆದ್ದರಿಂದ ಅಪರಬ್ರಹ್ಮವು ಕಾರಣಬ್ರಹ್ಮಕ್ಕೆ ಸಮೀಪವಾಗಿ ರುತ್ತದೆ (ಸೂ. ಭಾ. ೪-೩-೯, ಭಾ. ಭಾ. ೫೭೬). ಇನ್ನು ಕಾರ್ಯಬ್ರಹ್ಮವನ್ನು ಪಡೆದವರಿಗೆ ಆಗುವ ಫಲವು ಕೈವಲ್ಯಕ್ಕೆ ಹತ್ತಿರವಿರುವದು. ಹೇಗೆಂದರೆ ಕಾರ್ಯ ಬ್ರಹ್ಮವು ಪ್ರಲಯವಾಗುವ ಕಾಲವು ಬಂದಾಗ **ಅಲ್ಲಿಯೇ ಸಮ್ಯಗ್ಜ್ಞಾನವನ್ನು ಪಡೆದುಕೊಂಡವರು ಅಪರಬ್ರಹ್ಮವೆನಿಸುವ ಹಿರಣ್ಯಗರ್ಭನೊಡನೆ ಅದ್ವೈತಮುಕ್ತಿಯನ್ನು ಪಡೆದುಕೊಳ್ಳುತ್ತಾರೆ. ಇದಕ್ಕೆ ಕ್ರಮಮುಕ್ತಿ** ಎಂದು ಹೆಸರು. ಈ ದೃಷ್ಟಿಯಿಂದ ಆ ಫಲವು ಕೈವಲ್ಯಕ್ಕೆ ಹತ್ತಿರವೆನಿಸುತ್ತದೆ.

ಯಾರಿಗೆ ಬ್ರಹ್ಮಲೋಕದಲ್ಲಿಯೇ ಸಮ್ಯಗ್ಜ್ಞಾನವಾಗುವದಿಲ್ಲವೋ ಅವರು ಈ ಕಲ್ಪವಾದ ಬಳಿಕ ಮತ್ತೊಂದು ಕಲ್ಪದಲ್ಲಿ ಸಂಸಾರಕ್ಕೆ ಮರಳಿ ಬಂದೇತೀರುತ್ತಾರೆ

ಎಂಬುದನ್ನು ಈ ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿಯೇ (೫-೧೦-೨ ಭಾ. ಭಾ. ೪೦೫ರಲ್ಲಿ), ಸ್ಪಷ್ಟಪಡಿಸಿರುತ್ತದೆ.

ಉಪನಿಷತ್ತಿನಲ್ಲಿ ನಿರ್ಗುಣಬ್ರಹ್ಮವಿಚಾರವಿದೆಯೆ ?

ಮೇಲೆ ಹೇಳಿರುವಂತೆ ಒಂದೇ ಬ್ರಹ್ಮವನ್ನೇ ಉಪಾಸನೆಗಾಗಿ ಸಗುಣವೆಂದೂ ಜ್ಞಾನಕ್ಕಾಗಿ ನಿರ್ಗುಣವೆಂದೂ ಹೇಳಿರುತ್ತದೆ ಎಂಬುದು ಆಚಾರ್ಯರ ಅಭಿಪ್ರಾಯವಷ್ಟೆ ಈ ವಿಷಯದಲ್ಲಿ ಈಗಿನ ವೇದಾಂತಿಗಳೆಲ್ಲರಲ್ಲಿಯೂ ಒಂದೇ ಅಭಿಪ್ರಾಯವಿರುವದಿಲ್ಲ. ಉಪನಿಷತ್ತುಗಳಲ್ಲಿ ಒಂದೇ ಬ್ರಹ್ಮವನ್ನು ಹೇಳಿರುವದು ನಿಜವಾದರೂ ಅಲ್ಲಿ ಪ್ರತಿಪಾದಿತವಾಗಿರುವದು ಸಗುಣಬ್ರಹ್ಮವೇ ಆಗಿರುತ್ತದೆ - ಎಂದು ಅಭಿಪ್ರಾಯಪಡುವ ಭಾಷ್ಯಕಾರರುಗಳೂ ಇರುತ್ತಾರೆ. ಅವರನ್ನು ಅನುಸರಿಸುವವರು ಈ ಉಪನಿಷತ್ತಿನಲ್ಲಿ ಹೇಳಿರುವ 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ' (೩-೧೪-೧) ಮುಂತಾದ ಕಡೆಯಲ್ಲಿಯೇ ಅಲ್ಲದೆ 'ಸದೇವ ಸೋಮ್ಯೇದಮಗ್ರ ಆಸೀತ್' (೬-೨-೧) ಎಂಬ ಆರುಣೇವಾಕ್ಯದಲ್ಲಿಯೂ 'ಯ ಆತ್ಮಾಽಪಹತಪಾಪ್ಮಾ' (೮-೭-೧) ಎಂಬ ಪ್ರಜಾಪತಿವಾಕ್ಯದಲ್ಲಿಯೂ ಸಗುಣವಿದ್ಯೆಯನ್ನೇ ಹೇಳಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. 'ಸದೇವ' ಎಂಬಲ್ಲಿ ಬ್ರಹ್ಮವು 'ನಾನು ಬಹುವಾಗುವೆನು, ಹುಟ್ಟುವೆನು'- ಎಂದು ಸಂಕಲ್ಪಿಸಿ ಜಗತ್ತನ್ನು ಸೃಷ್ಟಿಸಿರುತ್ತದೆಯೆಂದೂ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುವದೆಂದೂ ಸ್ಪಷ್ಟವಾಗಿ ಹೇಳಿರುವದರಿಂದ ಬ್ರಹ್ಮವು ಕಾರ್ಯಕಾರಣಾವಸ್ಥೆಗಳುಳ್ಳದ್ದೆಂದು ತಿಳಿಯುವದೂ ಪ್ರಕರಣಾಂತರದಲ್ಲಿ ಹೇಳಿರುವ ಸರ್ವಜ್ಞತ್ವ ಸರ್ವಶಕ್ತಿತ್ವ ಸರ್ವೇಶ್ವರತ್ವಾದಿ ಗುಣಗಳನ್ನೂ ಆ ಬ್ರಹ್ಮಕ್ಕೆ ಸೇರಿಸಿಕೊಳ್ಳುವದೂ ಯುಕ್ತವಾಗಿರುತ್ತದೆ ಎಂದು ಅವರು ಭಾವಿಸಿರುತ್ತಾರೆ. ದಹರವಿದ್ಯೆಯಲ್ಲಿ ಹೇಳಿರುವಂತೆಯೇ ಪ್ರಜಾಪತಿವಾಕ್ಯದಲ್ಲಿ ಸತ್ಯಕಾಮತ್ವಸತ್ಯಸಂಕಲ್ಪತ್ವಾದಿಗಳನ್ನು ಹೇಳಿರುವದರಿಂದಲೂ ಈ ಎರಡು ಸಂದರ್ಭಗಳಲ್ಲಿ ಹೇಳಿರುವ ಆತ್ಮವರ್ಣನೆಯು ಒಂದೇ ರೂಪವಾಗಿರುವದರಿಂದಲೂ ಈ ವಾಕ್ಯಗಳಲ್ಲಿ ಬೇರೆಬೇರೆಯ ಬ್ರಹ್ಮವನ್ನು ಹೇಳಿರುತ್ತದೆ ಎಂಬುದಕ್ಕೆ ಗಮಕವೇನೂ ಇಲ್ಲ -ಎಂಬುದು ಅವರ ಅಭಿಪ್ರಾಯ. ಪ್ರತ್ಯಕ್ಷಾದಿಪ್ರಮಾಣಗಳಾಗಲಿ ಶಬ್ದಪ್ರಮಾಣವಾಗಲಿ ನಿರ್ವಿಶೇಷವಸ್ತುಗಳನ್ನು ತಿಳಿಸುವ ಯೋಗ್ಯತೆಯೇ ಇಲ್ಲದವಾಗಿರುವದರಿಂದ ನಿರ್ಗುಣವಾಕ್ಯಗಳೆಂದು ಅದ್ವೈತಿಗಳು ಎಣಿಸಿರುವ ವಾಕ್ಯಗಳಿಗೂ ಸಗುಣ

ವಾಕ್ಯಗಳಿಗೆ ಅವಿರುದ್ಧವಾಗಿಯೇ ಅರ್ಥವನ್ನು ಮಾಡುವದು ಯುಕ್ತವಾಗಿದೆ ಎಂಬುದು ಅವರ ಆಶಯವಾಗಿದೆ.

ಮತಾಂತರದವರ ಸಿದ್ಧಾಂತವನ್ನು ವಿಮರ್ಶಿಸುವದರಿಂದ ಪ್ರಕೃತಭಾಷ್ಯವನ್ನು ಓದುವವರಿಗೆ ಯಾವ ಪ್ರಯೋಜನವೂ ಇರುವದಿಲ್ಲವಾದರೂ ಮತಾಂತರದವರು ಆಚಾರ್ಯರ ಭಾಷ್ಯವಿವರಣೆಗೆ ಅಂಟಿಸಿರುವ ದೋಷಗಳಿಗೆ ಪ್ರಸ್ಥಾನತ್ರಯ ಭಾಷ್ಯದಲ್ಲಿ ಯಾವ ಪರಿಹಾರವು ದೊರಕುತ್ತದೆ ಎಂಬುದನ್ನು ಸಂಗ್ರಹವಾಗಿ ತಿಳಿಸುವದರಿಂದ ಭಾಷ್ಯಾರ್ಥಚಿಂತಕರಿಗೆ ಪ್ರಯೋಜನವುಂಟು. ಆದ್ದರಿಂದ ಇಲ್ಲಿ ಈ ಉಪನಿಷತ್ತಿನ ಒಟ್ಟುತಾತ್ಪರ್ಯವನ್ನು ನಿರ್ಣಯಿಸುವದಕ್ಕೆ ಪ್ರಯತ್ನಿಸುವೆವು.

'ಅತ್ರ ಬ್ರಹ್ಮ ಸಮಶ್ನುತೇ' (ಕಾ. ೨-೩-೧೪), 'ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ. ೩-೨-೯) - ಎಂಬ ಶ್ರುತಿಗಳಲ್ಲಿ ಹೇಗೆ ಬ್ರಹ್ಮಜ್ಞಾನದಿಂದ ಸಿಕ್ಕುವ ಬ್ರಹ್ಮಾತ್ಮರೂಪಕೈವಲ್ಯವು ಇಲ್ಲಿಯೇ ದೊರಕುವದೆಂದು ಹೇಳಿದೆಯೋ ಹಾಗೆಯೇ ಇಲ್ಲಿಯೂ 'ತತ್ತ್ವಮಸಿ' ಎಂಬ ಬ್ರಹ್ಮಾತ್ಮೈಕ್ಯವನ್ನು ಅತ್ಯಂತಸ್ಪಷ್ಟವಾಗಿ ಹೇಳಿರುತ್ತದೆ. ಪ್ರಜಾಪತಿವಾಕ್ಯದಲ್ಲಿ ಇಂದ್ರನು ತನಗೆ ಉಪದಿಷ್ಟವಾದ ಅರ್ಥವನ್ನು ವಿಮರ್ಶಿಸಿ 'ನಾಹಮತ್ರ ಭೋಗ್ಯಂ ಪಶ್ಯಾಮಿ' (೮-೯-೧, ೨ ; ೮-೧೦-೨, ೩೪ ; ೮-೧೧-೧, ೨) ಎಂದು ಮತ್ತೆ ಮತ್ತೆ ಹೇಳಿರುತ್ತಾನೆ. 'ಈ ಜ್ಞಾನದಿಂದ ನನಗೆ ಯಾವ ಭೋಗ್ಯಫಲವೂ ಕಾಣಿಸುತ್ತಿಲ್ಲ' ಎಂದು ಹೇಳುವದು ದೃಷ್ಟಫಲವಾದ ಜ್ಞಾನಕ್ಕೆ ಹೊಂದುತ್ತದೆಯೇ ಹೊರತು ಸತ್ತ ಮೇಲೆ ಅರ್ಚಿರಾದಿಮಾರ್ಗದಿಂದ ಹೋಗಿ ಪಡೆಯಬೇಕಾಗಿರುವ ಫಲಕ್ಕಾಗಿ ಮಾಡುವ ಉಪಾಸನೆಗೆ ಅಷ್ಟು ಸಮಂಜಸವಾಗಿ ಹೊಂದುವದಿಲ್ಲ. 'ಈ ಯಾಗವನ್ನು ಮಾಡಿದರೆ ಸ್ವರ್ಗವು ಸಿಕ್ಕುವದು' ಎಂದು ಶಾಸ್ತ್ರದಲ್ಲಿ ಹೇಳಿದ್ದನ್ನು ಕೇಳಿ ಆಸ್ತಿಕನಾದವನು ನನಗೆ ಇದರಲ್ಲಿ ಯಾವ ಫಲವೂ ಕಾಣಿಸುತ್ತಿಲ್ಲ - ಎಂದಾನೇನು ? ಇಲ್ಲ. ಹೀಗೆಯೇ ಅದೃಷ್ಟಫಲವನ್ನು ಕೊಡುವ ಉಪಾಸನೆಯ ವಿಷಯದಲ್ಲಿಯೂ ಅವಿಶ್ವಾಸಪ್ರದರ್ಶನಕ್ಕೆ ಅವಕಾಶವಿರುವದಿಲ್ಲ. ಇದರಿಂದಲೂ ಪ್ರಜಾಪತಿಯು ಉಪದೇಶಮಾಡಿರುವದು ಇಲ್ಲಿಯೇ ಫಲವನ್ನು ಕೊಡುವ ಜ್ಞಾನವೇ ಎಂದು ಗೊತ್ತಾಗುತ್ತದೆ. ಇದಲ್ಲದೆ ಉಪಾಸನೆಯನ್ನು ವಿಧಿಸಿರುವ ವಾಕ್ಯಗಳಲ್ಲಿ ಸಂಶಯಕ್ಕೆ ಪರಿಹಾರವಾಗಿ ದೃಷ್ಟಫಲವುಳ್ಳ ಅನುಭವವನ್ನು ವಿಮರ್ಶೆಮಾಡಿರುವದು ಎಲ್ಲಿಯೂ ಕಂಡುಬರುವದಿಲ್ಲ. ಅಲ್ಲೆಲ್ಲ ಶಾಸ್ತ್ರವು ಇಂಥ ಉಪಾಸನೆಯನ್ನು ಮಾಡಿದವನಿಗೆ ಇಂಥ

ಅನುಗುಣವಾದ ಫಲವು ಸಿಕ್ಕುತ್ತದೆ ಎಂದಿಷ್ಟೇ ಹೇಳಿರುತ್ತದೆ. ಇಲ್ಲಿಯಾದರೋ ಆತ್ಮಸ್ವರೂಪದ ಜ್ಞಾನಕ್ಕಾಗಿ ಅವಸ್ಥಾತ್ರಯವಿಚಾರವನ್ನು ಮಾಡಿ 'ಅದೇ ಆತ್ಮನನ್ನೇ ಹೇಳುತ್ತೇನೆ' ಎಂದು ಮತ್ತೆ ಮತ್ತೆ ಪ್ರಜಾಪತಿಯು ಆತ್ಮಸ್ವರೂಪವನ್ನು ತಿಳಿಸಿಕೊಟ್ಟಿರುತ್ತಾನೆ. ಅವಸ್ಥಾತ್ರಯವನ್ನು ವಿಚಾರಮಾಡಿದರೆ ಆತ್ಮನು ಅಶರೀರನೆಂಬುದು ಗೊತ್ತಾಗುತ್ತದೆ ಎಂಬುದು ಉಪದೇಶ; ಈಗಲೂ ಯಾರು ಅವಸ್ಥಾತ್ರಯವನ್ನು ಪರೀಕ್ಷೆಮಾಡಿದರೂ ಆ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಈ ಎಲ್ಲಾ ಕಾರಣಗಳಿಂದ ಪ್ರಜಾಪತಿವಾಕ್ಯದಲ್ಲಿ ಅಶರೀರನಾದ ನಿರ್ವಿಶೇಷಾತ್ಮನನ್ನೇ ಉಪದೇಶಿಸಿದೆ ಎಂದು ನಿರ್ಣಯಿಸುವದು ಅಯುಕ್ತವೆಂದು ಹೇಳುವದಕ್ಕೆ ಬರುವದಿಲ್ಲ. ಈ ಜ್ಞಾನವು ಅಪರೋಕ್ಷವಾಗಿ ಇಲ್ಲಿಯೇ ಆಗುತ್ತಿರುವದರಿಂದ ಇಲ್ಲಿ ಹೇಳಿರುವ ಸತ್ಯಕಾಮ, ಸತ್ಯಸಂಕಲ್ಪ - ಮುಂತಾದ ವಿಶೇಷಣಗಳನ್ನೂ 'ಜಕ್ಷತ್ ಕ್ರೀಡನ್ ರಮಮಾಣಃ' (೮-೧೨-೩) ಎಂದುಮುಂತಾಗಿರುವ ಫಲವಾಕ್ಯಗಳನ್ನೂ ವಿಷಯಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬೇಕೆಂಬುದು ಯುಕ್ತವಾಗಿರುತ್ತದೆ ; ಆಚಾರ್ಯರು ಹಾಗೆ ಹೊಂದಿಸಿ ಹೇಳಿಯೂ ಇರುತ್ತಾರೆ.

ಇನ್ನು 'ಸದೇವ ಸೋಮ್ಯೇದಮಗ್ರ ಆಸೀತ್' ಮುಂತಾಗಿರುವ ಉಪದೇಶವು ಸಗುಣಬ್ರಹ್ಮಪರವೆ ?- ಎಂಬುದನ್ನು ವಿಮರ್ಶಿಸಿ ನೋಡಿದರೆ ಇಲ್ಲಿ ತಂದಿರುವ ಬಗೆಬಗೆಯ ದೃಷ್ಟಾಂತಗಳಿಂದ ಶ್ವೇತಕೇತುವಿಗೆ ಸದ್ಬ್ರಹ್ಮದ ಸ್ವರೂಪವನ್ನು ಉಪಪಾದನೆಮಾಡಿ ತಿಳಿಸಿರುವದು ಕಂಡುಬರುತ್ತದೆ. ಪ್ರಜಾಪತಿವಾಕ್ಯದಲ್ಲಿ ಹೇಗೋಹಾಗೆ ಇಲ್ಲಿಯೂ ಈ ಕಾರಣದಿಂದಲೇ ಪ್ರಕರಣವು ದೃಷ್ಟಫಲವುಳ್ಳ ಜ್ಞಾನಕ್ಕೆ ಹೊಂದುಗೆಯಾಗಿದೆಯೆಂದು ಹೇಳಬೇಕಾಗುತ್ತದೆ. 'ತತ್ತ್ವಮಸಿ' ಅದೇ ನೀನಾಗಿರುವೆ - ಎಂದು ಮತ್ತೆಮತ್ತೆ ಹೇಳಿರುವ ಅಭ್ಯಾಸವು ಈಗಲೇ ಶ್ವೇತಕೇತುವು ಸದ್ಬ್ರಹ್ಮಸ್ವರೂಪನಾಗಿರುತ್ತಾನೆ ಎಂಬುದನ್ನು ತಿಳಿಸುವದಕ್ಕೇ ತಂದೆಯು ಪ್ರಯತ್ನಿಸುತ್ತಿದಾನೆಂಬುದನ್ನು ದೃಢಪಡಿಸುತ್ತದೆ. ಕೊನೆಯಲ್ಲಿ 'ತದ್ಧಾಸ್ಯ ವಿಜಿಜ್ಞೌ', 'ಈ ತಂದೆಯ ಆ ಉಪದೇಶವನ್ನು ಅವನು ಅರಿತುಕೊಂಡನು' ಎಂದೇ ಉಪಸಂಹಾರಮಾಡಿದೆಯೇ ಹೊರತು ಓಗೆಂದು ಉಪಾಸನೆಮಾಡಿ ಉತ್ತರ ಮಾರ್ಗದಿಂದ ಹೋಗಿ ಫಲವನ್ನು ಪಡೆದನು ಎಂದೇನೂ ಹೇಳಿಲ್ಲ. ಈ ಎಲ್ಲಾ ಕಾರಣದಿಂದ ಶ್ರುತಿಯು ಜ್ಞಾನಪರವೇ ಎಂಬ ಸಂಭಾವನಾಯುಕ್ತಿಯು ಏರ್ಪಡುತದೆ.

ಈಗ ಇಲ್ಲಿ ಬ್ರಹ್ಮದ ಕಾರ್ಯಕಾರಣಾವಸ್ಥೆಗಳ ಉಪದೇಶವನ್ನು ಮಾಡುವದಕ್ಕೆ ಶ್ರುತಿಯು ಹೊರಟಿದೆಯೆ ?- ಎಂಬುದನ್ನು ವಿಚಾರಿಸಿನೋಡೋಣ. ತಂದೆಯು ಮೊದಲು ಜ್ಞಾನಕ್ಕೆ ದೃಷ್ಟಾಂತವಾಗಿ ತೆಗೆದುಕೊಂಡಿರುವ ಮೃದಾದಿ ದೃಷ್ಟಾಂತದಲ್ಲಿ 'ವಾಚಾರಮ್ಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್' (೬-೧-೪) ಎಂದುಮುಂತಾಗಿ ಕಾರಣವೇ ಸತ್ಯವೆಂದು ಅವಧಾರಣೆ ಮಾಡಿದಂತೆ 'ತತ್ಸತ್ಯಂ ಸ ಆತ್ಮಾ' (ಅದೇ ಸತ್ಯವು, ಅದೇ ಆತ್ಮನು) ಎಂದು ಮತ್ತೆಮತ್ತೆ (೬-೮-೭, ೬-೯-೪, ೬-೧೦-೩, ೬-೧೧-೩, ೬-೧೨-೩, ೬-೧೩-೩, ೬-೧೪-೩, ೬-೧೫-೩, ೬-೧೬-೩) ಅವಧಾರಣೆಮಾಡಿರುವದನ್ನು ಮನದಂದರೆ ಸನ್ಮಾತ್ರವೇ ಸತ್ಯವು, ಅದೇ ಆತ್ಮನು - ಎಂಬುದೇ ಶ್ರುತಿಗೆ ಒಪ್ಪೆಂದು ಏರ್ಪಡುತ್ತದೆ. ಕಾರ್ಯವು ವಾಚಾರಂಭಣಮಾತ್ರವೆಂದು ತಿಳಿಸುವದಕ್ಕೆ 'ಅಪಾಗಾದಗ್ನೇ-ರಗ್ನಿತ್ವಮ್, ಅಪಾಗಾದಾದಿತ್ಯಾದಾದಿತ್ಯತ್ವಮ್' (೬-೩-೧ ರಿಂದ ೪) ಎಂದು ಮುಂತಾಗಿ ಕಾರ್ಯದ ಕಾರ್ಯತ್ವವನ್ನು ಅಲ್ಲಗಳೆಯುವದೂ ಇಲ್ಲಿ ಕಾರ್ಯಕಾರಣ ಭಾವವು ಶವಲ್ಲವೆಂಬುದಕ್ಕೆ ಪೋಷಕಯುಕ್ತಿಯಾಗಿದೆ. 'ಅನ್ನವೆಂಬ ಶುಂಗದಿಂದ ಅಪ್ಪೆಂಬ ಮೂಲವನ್ನು ಹುಡುಕು, ಅಪ್ಪೆಂಬ ಶುಂಗದಿಂದ ತೇಜೋಮೂಲವನ್ನು ಹುಡುಕು. ತೇಜಸ್ಸೆಂಬ ಶುಂಗದಿಂದ ಸನ್ಮೂಲವನ್ನು ಹುಡುಕು' ಎಂದು ಕಾರ್ಯದಿಂದ ಕಾರಣವನ್ನು ಹುಡುಕಿ ಅರಿಯಲೆಂದೇ ಇಲ್ಲಿ ಸೃಷ್ಟಿಯನ್ನು ಹೇಳಿದೆಯೆಂದು ಗೊತ್ತಾಗುತ್ತದೆ. ಆದ್ದರಿಂದ 'ಸೋಮ್ಯನೆ, ಈ ಎಲ್ಲಾ ಪ್ರಜೆಗಳೂ ಸನ್ಮೂಲವಾದವು, ಸದಾಯತನಗಳು, ಸತ್ಪ್ರತಿಷ್ಠೆಗಳು' (೬-೮-೪) ಎಂಬ ವಾಕ್ಯವು ಸತ್ತಿನಿಂದ ಕಾರ್ಯಗಳು ಹುಟ್ಟಿವೆ ಎಂಬುದನ್ನು ತಾತ್ಪರ್ಯದಿಂದ ಹೇಳುವದಕ್ಕೆ ಬಂದಿಲವೆಂದೂ ಸನ್ಮಾತ್ರವೇ ಸರ್ವಕಾರ್ಯದ ತಿರುಳೆಂದು ಹೇಳುವದಕ್ಕೇ ಬಂದಿವೆಯೆಂದೂ ತೀರ್ಮಾನಮಾಡಬೇಕಾಗುತ್ತದೆ. ಸೃಷ್ಟಿಯನ್ನರಿತವನಿಗೆ ಯಾವ ಫಲವನ್ನೂ ಹೇಳದೆ, 'ಯಾವದರ ಶ್ರವಣಮನನವಿಜ್ಞಾನದಿಂದ, ಶ್ರವಣಾದಿಗಳನ್ನು ಮಾಡದೆ ಇರುವದೆಲ್ಲವನ್ನೂ ಶ್ರವಣಾದಿಗಳಿಂದ ಅರಿತಂತೆ ಆಗುವದೋ ಅದರ ಉಪದೇಶವನ್ನು ಪಡೆದುಕೊಂಡಿರುವೆಯೇನು ?'- ಎಂದು ಕಾರಣರೂಪವನ್ನು ಅರಿತಮಾತ್ರದಿಂದಲೇ ಸರ್ವಜ್ಞತ್ವವು ಬರುವದೆಂದು ಹೊಗಳಿರುವದೂ ಕಾರ್ಯಕಾರಣಭಾವವನ್ನು ಹೇಳುವದಕ್ಕೆ ಶ್ರುತಿಯು ಬಂದಿಲ್ಲವೆಂದೂ ಕಾರಣದಂತೆ ಕಾಣುವ ಸದಾತ್ಮವಸ್ತುವೊಂದೇ ಸತ್ಯವೆಂಬುದರ ಜ್ಞಾನವನ್ನು ಉಪದೇಶಿಸುವದಕ್ಕೇ ಅದು ಬಂದಿದೆಯೆಂದೂ ನಿರ್ಣಯಿಸುವದಕ್ಕೆ ಸಾಕಾದ ಯುಕ್ತಿಯಾಗಿರುತ್ತದೆ.

ಇನ್ನೊಂದು ವಿಷಯ. ಶ್ವೇತಕೇತುವಿಗೆ ತಂದೆಯು ಆತ್ಮತತ್ತ್ವವನ್ನು ಹೇಳಿ ಕೊಡುವದಕ್ಕಾಗಿ ಉಪಯೋಗಿಸಿರುವ ಯಾವ ದೃಷ್ಟಾಂತದಲ್ಲಿಯೂ ಸವಿಶೇಷ ವಾದ ಸಗುಣಬ್ರಹ್ಮವನ್ನುಪದೇಶಿಸಿರುವದು ಕಂಡುಬರುವದಿಲ್ಲ ; ಅಲ್ಲಿ ದೃಷ್ಟಾಂತಕ್ಕೆ ತೆಗೆದುಕೊಂಡಿರುವ ಸುಷುಪ್ತ್ಯಾದಿಗಳಲ್ಲಿ ಯಾವ ವಿಶೇಷವೂ ಇಲ್ಲದ ಆತ್ಮನ ಅನುಭವವೇ ಕಂಡುಬರುತ್ತಿದೆ. ಈ ಅನುಭವವನ್ನು ಯಾರೂ ಅಲ್ಲಗಳೆಯುವದ ಕ್ಕಿಲ್ಲ. ಸುಷುಪ್ತಿಯಲ್ಲಿಯೂ ಸವಿಶೇಷಾನುಭವವೇ ಇದೆ ಎಂದು ಜಾಗ್ರದವಸ್ಥೆಯ **ನೆನಪಿನ ಆಧಾರದಿಂದ** ತರ್ಕಿಸುವವರೂ ಇರುತ್ತಾರೆ ; ಆದರೆ ಸುಷುಪ್ತಿಯ **ಅನುಭವವನ್ನು** ಅವರೂ ಅಲ್ಲಗಳೆಯುವದಕ್ಕೆ ಆಗುವದಿಲ್ಲ. ಹೀಗಿರುವದರಿಂದ ನಿರ್ವಿಶೇಷವಸ್ತುವನ್ನು ಯಾವ ಪ್ರಮಾಣವೂ ತಿಳಿಸಲಾರದು ಎಂಬ ಯುಕ್ತಿಯು ಯಾವ ಕೆಲಸಕ್ಕೂ ಬರಲಾರದು ; ಏಕೆಂದರೆ ಅನುಭವವು ಎಲ್ಲಾ ಪ್ರಮಾಣಗಳಿಗಿಂತಲೂ ಹೆಚ್ಚಿನದಾಗಿರುತ್ತದೆ, ಪ್ರಮಾಣಗಳಿಗೂ ಅನುಭವವೇ ಬೆಲೆಯನ್ನು ತಂದುಕೊಡತಕ್ಕದ್ದಾಗಿರುತ್ತದೆ.

ಈ ಎಲ್ಲಾ ಕಾರಣಗಳಿಂದ 'ಸದೇವ ಸೋಮ್ಯ' ಎಂಬಲ್ಲಿರುವದು ವಸ್ತುತಂತ್ರವಾದ ಅದ್ವೈತಜ್ಞಾನವೇ ಎಂದು ನಿಶ್ಚಯಿಸಬೇಕಾಗಿರುತ್ತದೆ.

ಬ್ರಹ್ಮಜ್ಞಾನವಾಕ್ಯಗಳಿಗೂ ಉಪಾಸನಾವಾಕ್ಯಗಳಿಗೂ ತಾರತಮ್ಯ

ಈಗ ಉಪನಿಷತ್ತುಗಳಲ್ಲಿ ಹೇಳಿರುವ ಬ್ರಹ್ಮಸ್ವರೂಪವರ್ಣನವಾಕ್ಯಗಳಲ್ಲಿ ಯಾವವು ಪ್ರಬಲ ? ಅವೇ ಪ್ರಬಲವೆಂಬುದಕ್ಕೆ ಗಮಕವೇನು ?- ಎಂಬುದನ್ನು ನಿರ್ಣಯಿಸುವ ಕೆಲಸವೊಂದು ಉಳಿದಿರುತ್ತದೆ. ಬ್ರಹ್ಮವು ಸತ್ಯಕಾಮನೂ, ಸತ್ಯಸಂಕಲ್ಪನೂ ಜಗತ್ಕಾರಣನೂ ಅಂತರ್ಯಾಮಿಯೂ ಪ್ರಶಾಸಿತೃವೂ ಆದ ಪರಮೇಶ್ವರನಾಗಿರುತ್ತಾನೆ ಎಂದು ಕೆಲವು ವಾಕ್ಯಗಳಿಂದ ತಿಳಿಯಬರುತ್ತದೆ ; ಅದರಲ್ಲಿ ಯಾವ ವಿಶೇಷವೂ ಇಲ್ಲ, ಅದು ವಿದಿತಾವಿದಿತಗಳಿಗಿಂತ ಬೇರೆ, ವಾಙ್ಮನಸ್ಸುಗಳಿಗೆ ವಿಷಯವಲ್ಲ, ಉಪಶಾಂತಸ್ವರೂಪವಾಗಿರುತ್ತದೆ ಎಂದುಮುಂತಾಗಿ ಕೆಲವು ವಾಕ್ಯಗಳಿಂದ ತಿಳಿದುಬರುತ್ತದೆ. ಹೀಗಿರುವದರಿಂದ ಸಗುಣವಾಕ್ಯಗಳನ್ನು ಮುಖ್ಯವೆಂದು ಹಿಡಿದು ನಿರ್ಗುಣವಾಕ್ಯಗಳನ್ನು ಪರಮಾತ್ಮನು ಹೇಯಗುಣ ರಹಿತನೆಂಬ ಅರ್ಥಾಂತರ ವಿಷಯಕವೆಂದು ತಿರುಗಿಸಿಕೊಳ್ಳುವದು ಯುಕ್ತವೆ, ಅಥವಾ ನಿರ್ಗುಣ ವಾಕ್ಯಗಳನ್ನು ಮುಖ್ಯವೆಂದು ಹಿಡಿದು ಸಗುಣವಾಕ್ಯಗಳನ್ನೇ ಬೇರೊಂದು ಅರ್ಥವುಳ್ಳವೆಂದು ಕಲ್ಪಿಸುವದು ಯುಕ್ತವೆ ? ವೇದವು ಸರ್ವಥಾ

ಪ್ರಮಾಣವಾಗಿರುವದರಿಂದ ಯಾವ ವಾಕ್ಯಕ್ಕಾದರೂ ಕಡಿಮೆಯ ಪ್ರಾಮಾಣ್ಯವನ್ನು ಏಕೆ ಕೊಡಬೇಕು ?- ಎಂಬ ಪ್ರಶ್ನೆಯು ಎದ್ದುಕೊಳ್ಳುವದು ಸ್ವಾಭಾವಿಕವಾಗಿರುತ್ತದೆ.

ಇದಕ್ಕೆ ಆಚಾರ್ಯರು ಸೂತ್ರಭಾಷ್ಯದಲ್ಲಿ ಒಂದು ಉತ್ತರವನ್ನು ಕೊಟ್ಟಿರುತ್ತಾರೆ. ಬ್ರಹ್ಮವು ರೂಪಾದಿವಿಶೇಷಗಳಿಲ್ಲದ್ದೆಂದು ನಿರ್ಣಯಿಸುವದೇ ಯುಕ್ತ ; ಏಕೆಂದರೆ ನಿರ್ವಿಶೇಷಬ್ರಹ್ಮವನ್ನು ತಿಳಿಸುವ ವಾಕ್ಯಗಳು **ತತ್ಪ್ರಧಾನವಾಗಿರುತ್ತವೆ.** ಅವುಗಳು ಬ್ರಹ್ಮವಸ್ತುವಿನಲ್ಲಿಯೇ ಸಮನ್ವಯವಾಗುತ್ತವೆ. ಅವುಗಳು ಬ್ರಹ್ಮವನ್ನು ಯಾವದೊಂದು ವಿಧಿಗೂ ಶೇಷವಾಗಿ ತಿಳಿಸುವದಿಲ್ಲ ; ಆದರೆ ಸವಿಶೇಷಬ್ರಹ್ಮವನ್ನು ತಿಳಿಸುವ ವಾಕ್ಯಗಳೋ ಎಂದರೆ ಅವು ಬ್ರಹ್ಮಸ್ವರೂಪಪ್ರತಿ ಪಾದನಪರವಾಗಿರುವ ದಿಲ್ಲ, ಅವು ಉಪಾಸನಾವಿಧಿಪರವಾಗಿರುತ್ತವೆ. ಅಲ್ಲಿ ವರ್ಣಿಸಿರುವ ಬ್ರಹ್ಮರೂಪವು ಉಪಾಸನಾವಿಧಿಗೆ ಶೇಷವಾಗಿರುತ್ತದೆ. ಆದ್ದರಿಂದ ತತ್ಪರವಾಗಿರುವ ವಾಕ್ಯವು ಅತತ್ಪರವಾಗಿರುವ ವಾಕ್ಯಗಳಿಗಿಂತ ಪ್ರಬಲವಾಗಿರುತ್ತದೆ. ಈ ಅರ್ಥವು ಸೂತ್ರ ಭಾಷ್ಯದಲ್ಲಿ (೩-೨-೧೪) ಸ್ಪಷ್ಟವಾಗಿ ಲಿಖಿತವಾಗಿರುತ್ತದೆ. ಅಲ್ಲಿರುವ ಉಭಯ ಲಿಂಗಾಧಿಕರಣದ ಸೂತ್ರಗಳ ಭಾಷ್ಯವನ್ನೆಲ್ಲ (ಸೂ. ಭಾ.೩-೨-೧೧ ರಿಂದ ೨೧ರವರೆಗಿನ ಗ್ರಂಥವನ್ನೆಲ್ಲ) ಸಾವಧಾನವಾಗಿ ವಾಚಕರು ಓದಿ ಮನನ ಮಾಡಿಕೊಂಡರೆ ಈ ವಿಷಯದಲ್ಲಿ ಯಾವ ಸಂಶಯವೂ ಉಳಿಯಲಾರದು.

ಉಪನಿಷತ್ತಿನಲ್ಲಿ ಅದ್ವೈತಜ್ಞಾನಕ್ಕಿರುವ ಪ್ರಾಶಸ್ತ್ಯ

ಉಪನಿಷತ್ತುಗಳಲ್ಲಿ ಉಪಾಸನೆ, ವಸ್ತುಬೋಧಕಜ್ಞಾನ- ಇವೆರಡನ್ನೂ ಉಪದೇಶಿಸಿರುತ್ತದೆ. ಅನೇಕರು ತತ್ತ್ವಜ್ಞಾನವನ್ನು ಸಂಪಾದಿಸುವದಕ್ಕೆ ತಕ್ಕ ಅಧಿ ಕಾರವುಳ್ಳವರಾಗಿರುವದಿಲ್ಲವಾದ್ದರಿಂದ ಮಧ್ಯಮಾಧಿಕಾರಿಗಳಾದವರಿಗಾಗಿ ಶ್ರುತಿಯು ಉಪಾಸನೆಯನ್ನೇ ಬಹಳವಾಗಿ ಹೇಳಿರುವದು ಯುಕ್ತವೇ ಆಗಿರುತ್ತದೆ. ಈಗ್ಗೆ ವೇದಾಂತಿಗಳೆಂದು ಹೇಳಿಕೊಳ್ಳುತ್ತಿರುವ ಅನೇಕರು ಕೆಲವು ಶ್ರುತಿವಾಕ್ಯಗಳನ್ನು ಉದಾಹರಿಸಿ ಶುಷ್ಕತರ್ಕಪ್ರಧಾನವಾದ ವಾಕ್ಯಗಳನ್ನು ಬಳಸುತ್ತಾ ತಾವು ಜ್ಞಾನಿ ಗಳೆಂದು ಹೊರಗೆ ತೋರಿಸಿಕೊಳ್ಳುತ್ತಿರುವದರಿಂದ ಉಪಾಸನೆಯ ಹೆಚ್ಚುಗಾರಿಕೆ ಯನ್ನು ಅರಿಯದ ಅನೇಕರು ವೇದಾಂತದ ವಿಷಯಕ್ಕೆ ತಪ್ಪುಕಲ್ಪನೆಗಳನ್ನು ಮಾಡಿಕೊಳ್ಳುವ ಸಂಭವವಿದೆ. ಅಂಥವರು ಈ ಉಪನಿಷತ್ತನ್ನು ಮನ ಮುಟ್ಟಿ ಓದಿ ಚಿಂತನೆಮಾಡಿದರೆ ಆಚಾರ್ಯರ ವೇದಾಂತದಲ್ಲಿ ಉಪಾಸನೆಗೆ ಇರುವ ಹೆಚ್ಚಿನ ಬೆಲೆಯು ಗೊತಾದೀತು.

ಆದರೆ ಉಪನಿಷತ್ತಿನ ಪರಮತಾತ್ಪರ್ಯವು ಬ್ರಹ್ಮಾತ್ಮೈಕ್ಯಜ್ಞಾನದಲ್ಲಿಯೇ ಎಂಬುದನ್ನು ಮಾತ್ರ ಯಾರೂ ಅಲ್ಲಗಳೆಯುವದಕ್ಕಿಲ್ಲ. ಆತ್ಮಜ್ಞಾನದ ಆಧಾರದಿಂದಲೇ ಸಗುಣಬ್ರಹ್ಮಶರಣರಿಗೂ ಆವೃತ್ತಿರಹಿತಮುಕ್ತಿಯಾಗುವದು (ಸೂ. ಭಾ. ೪-೪-೨೨) ಎಂದು ಆಚಾರ್ಯರು ಕಂಠೋಕ್ತವಾಗಿ ಹೇಳಿಟ್ಟಿರುತ್ತಾರೆ. ಈ ಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಕರ್ಮೋಪಾಸನೆಗಳು ಒದಗಿಸಿಕೊಡುವವಾದರೂ ಅವೇ ನೇರಾಗಿ ಎಂದಿಗೂ ಕೈವಲ್ಯವನ್ನು ಕೊಡಲಾರವು. ಆಶ್ರಮತ್ರಯದಲ್ಲಿ ನಿಷ್ಟರಾಗಿರುವವರಿಗೆ ಪುಣ್ಯಲೋಕವು ಆಗುವದು, ಬ್ರಹ್ಮಸಂಸ್ಥನಾದ ಸಂನ್ಯಾಸಿಗೆ ಮಾತ್ರ ಅಮೃತತ್ವವು ಸಿಕ್ಕುವದು - ಎಂದು ಪ್ರಣವೋಪಾಸನಾವಿಧಿಗೆ ಶೇಷವಾಗಿರುವ ಅರ್ಥವಾದಶ್ರುತಿಯು (೨-೨-೧) ಒಂದು ಅಮೋಘತತ್ತ್ವವನ್ನು ಸಾರುತ್ತದೆ. ಇದರಿಂದ ಅಮೃತತ್ವಕ್ಕೆ ಕರ್ಮದ ಹಂಗಿಲ್ಲವೆಂದು ಉಪಾಸನಾಪ್ರಕರಣದಲ್ಲಿಯೂ ಸ್ಪಷ್ಟವಾಗಿ ಹೇಳಿದಂತೆ ಆಗಿರುತ್ತದೆ. ಇಲ್ಲಿ ಮರೆಯದೆ ಲಕ್ಷ್ಯದಲ್ಲಿಡಬೇಕಾದ ವಿಷಯವೊಂದಿದೆ. ಆತ್ಮನು ಪರಮಾರ್ಥದೃಷ್ಟಿಯಿಂದ ಅದ್ವಿತೀಯನೇ ಆಗಿದ್ದರೂ ಅವನಲ್ಲಿ ಅವಿದ್ಯೆಯಿಂದ ಕಲ್ಪಿತವಾದ ನಾಮರೂಪಗಳಿಂದಾದ ಉಪಾಧಿಗಳು ತೋರುತ್ತಿರುವವು. ಈ ಉಪಾಧಿಗಳ ಕೆಲವು ಧರ್ಮಗಳನ್ನು ವಿಶೇಷಣವಾಗಿಟ್ಟುಕೊಂಡು ಮಧ್ಯಮಾಧಿಕಾರಿಗಳಿಗೆ ಬ್ರಹ್ಮೋಪಾಸನೆಯನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ. ವಿಚಾರಪ್ರಧಾನರಾದ ಜಿಜ್ಞಾಸುಗಳಿಗೆ ಇದೇ ಉಪಾಧಿಗಳನ್ನೇ - ಮನುಷ್ಯನ ಜ್ಞಾನಕ್ಕೆ ಸಾಧನವಾಗಿರುವ ನೆರಳಿನಂತೆ- ಆತ್ಮಜ್ಞಾನಕ್ಕೆ ಉಪಾಯವಾಗಿಯೂ ಉಪದೇಶಿಸಿರುತ್ತದೆ. ಉಪಾಸನಾವಾಕ್ಯದಲ್ಲಿ ಉಪಾಧಿಗಳು ವಿವಕ್ಷಿತವಾಗಿರುತ್ತವೆ, ಜ್ಞಾನವಾಕ್ಯದಲ್ಲಿ ಉಪಾಯಮಾತ್ರವಾಗಿರುವದರಿಂದ ಅವಿವಕ್ಷಿತವಾಗಿರುತ್ತವೆ - ಎಂಬುದೊಂದು ವಿಶೇಷ. (ಸೂ.ಭಾ.೧-೧-೧೨, ಭಾ. ಭಾ.೯೧, ೯೨)ನ್ನು ನೋಡಿ. ಒಂದೇ ಬ್ರಹ್ಮವನ್ನೇ ಉಪಾಸ್ಯವಾಗಿಯೂ ಜ್ಞೇಯವಾಗಿಯೂ ಶ್ರುತಿಯಲ್ಲಿ ಹೇಳಿರುವದರಿಂದ ಉಪಾಸನಾಪ್ರಕರಣದಲ್ಲಿ ಉಪಾಸನೆಗಾಗಿ ಹೇಳಿದ ರೂಪವನ್ನು ಕೂಡ ಜ್ಞಾನಪ್ರಕರಣದಲ್ಲಿ ವಸ್ತುನಿರೂಪಣೆಗೆ ಉಪಯೋಗಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್' (೩-೧೪-೧) ಎಂದು ಉಪಾಸನಾಪ್ರಕರಣದಲ್ಲಿ ಹೇಳಿದ್ದ ಜಗಜ್ಜನ್ಮಾದಿಕಾರಣತ್ವವನ್ನೇ 'ಸದೇವ ಸೋಮ್ಯ' ಎಂಬ ಜ್ಞಾನಪ್ರಕರಣದಲ್ಲಿ ಉಪಪಾದನೆಮಾಡಿ ಅದ್ವೈತಾತ್ಮಸ್ವರೂಪವನ್ನು ನಿರ್ಧರಿಸಿರುತ್ತದೆ ; ಇದರಂತೆ ಉಪಾಸನಾಪ್ರಕರಣದಲ್ಲಿ ವೈಶ್ವಾನರಾತ್ಮನಿಗೆ ಹೇಳಿರುವ ದ್ಯುಮೂರ್ಧತ್ವಾದಿ

(೫-೧೮-೨) ವಿಶೇಷಣಗಳನ್ನು ಜಾಗರಿತಸ್ಥಾನದ ಆತ್ಮನ ಸ್ವರೂಪದ ನಿರೂಪಣೆಗೆ ಮಾಂಡೂಕ್ಯದಲ್ಲಿ ಉಪಯೋಗಿಸಿಕೊಂಡು ಅದ್ವಿತೀಯಾತ್ಮನಾದ ತುರೀಯನ ತತ್ತ್ವವನ್ನು ನಿಶ್ಚಯಿಸುವದಕ್ಕೆ ವಿನಿಯೋಗಿಸಿರುವದನ್ನು ಇಲ್ಲಿ ಮನದಂದುಕೊಳ್ಳ ಬಹುದು. ಹೀಗೆಯೇ ಉಪಾಸ್ಯವಾದದ್ದು ಪರಬ್ರಹ್ಮವೊ, ಅಲ್ಲವೊ ?- ಎಂಬುದನ್ನು ಗೊತುಮಾಡುವದಕ್ಕೆ ಆತ್ಮನಾಗಿರುವದೇ ಮುಂತಾದ ಪರಮಾತ್ಮ ಸ್ವರೂಪಬೋಧಕವಾದ ವಿಶೇಷಣಗಳನ್ನು ಉಪಯೋಗಿಸಿಕೊಂಡು ಉಪಾಸ್ಯವು ಬ್ರಹ್ಮವೇ ಎಂದು ನಿಶ್ಚಯಿಸಿರುವ ಉದಾಹರಣೆಗಳನ್ನು ಸೂತ್ರಭಾಷ್ಯದಲ್ಲಿ ವಾಚಕರು ಕಾಣಬಹುದಾಗಿದೆ.

ಇದೂ ಅಲ್ಲದೆ ಜ್ಞಾನದ ಫಲವು ಪ್ರತ್ಯಕ್ಷವಾಗಿ ಅನುಭವಕ್ಕೆ ಬರುವದಾಗಿರುತ್ತದೆ. ಇದನ್ನು ಇಲ್ಲವೆನ್ನುವದು ಯಾರಿಂದಲೂ ಆಗುವದಿಲ್ಲ - ಎಂದು ಭಾಷ್ಯಕಾರರು ತಮ್ಮ ಭಾಷ್ಯಗಳಲ್ಲಿ ಮತ್ತೆ ಮತ್ತೆ ಬರೆದಿರುತ್ತಾರೆ. ಅದ್ವೈತಜ್ಞಾನವಾದ ಬಳಿಕ ಯಾವ ಶಂಕೆಯೂ ಉಳಿಯುವಂತೆಯೇ ಇಲ್ಲವಾದ್ದರಿಂದ ಅದ್ವೈತಸಿದ್ಧಾಂತದಲ್ಲಿ ಯಾವ ದೋಷವನ್ನೂ ಯಾರೂ ಆರೋಪಿಸುವದಕ್ಕೆ ಬರುವಹಾಗಿಲ್ಲ. ಅದ್ವೈತಾನು-ಭವವು ಬಂದಾಗ ಎಲ್ಲಾ ದ್ವೈತವನ್ನೂ ಬಾಧಿಸಿಯೇ ಬರುವದರಿಂದ ಆಮೇಲೆ ಉಪಾಸನಾವಾಕ್ಯಗಳಿಗೆ ಗತಿಯೇನು ?- ಎಂಬ ಶಂಕೆಗಂತೂ ಯಾವ ಅವಕಾಶವೂ ಉಳಿಯುವದಿಲ್ಲ. ಈ ಕಾರಣದಿಂದಲೇ 'ತತ್ತ್ವಮಸಿ' ಮುಂತಾದ ವಾಕ್ಯಗಳಿಗೆ ಉಪಾಸನಾವಿಧಿಪರವಾದ ಅರ್ಥವನ್ನು ಕಲ್ಪಿಸುವದಾಗಲಿ ಇದು ಕೇವಲ ಸ್ತುತಿಗಾಗಿ ಬಂದಿರುವ ಅರ್ಥವಾದವೆಂದು ಕಲ್ಪಿಸುವದಾಗಲಿ ಆಗಲಾರದು - ಎಂದು ಆಚಾರ್ಯರು ಆರನೆಯ ಅಧ್ಯಾಯದ ಉಪಸಂಹಾರಭಾಷ್ಯ (ಭಾ. ಭಾ. ೫೪೧)ದಲ್ಲಿ ಸ್ಪಷ್ಟಪಡಿಸಿರುತ್ತಾರೆ. ಈ ಯುಕಿಗಳ ಜೊತೆಗೆ ಕೇವಲ ತರ್ಕ ಪ್ರಧಾನರಾಗಿರುವವರ ಸಲುವಾಗಿ ಮತೊಂದು ಯುಕ್ತಿಯನ್ನು ಇಲ್ಲಿ ಹೇಳಬಹುದು. ದ್ವೈತವನ್ನು ಸಿದಾಂತವೆಂದು ಇಟುಕೊಂಡರೆ ಅಲಿ ಶಂಕಾಸಮಾಧಾನಗಳಿಗೆ ಅವಕಾಶವಿದೇ ಇರುತವೆ ಏಕೆಂದರೆ ಶಂಕೆಯೂ ಸಮಾಧಾನವೂ ದ್ವೈತಕ್ಷೇತ್ರ ದೊಳಗೆ ಇದ್ದೇಇರುತ್ತವೆ. ಆದರೆ ಅದ್ವೈತವನ್ನು ಸಿದ್ಧಾಂತವೆಂದು ವಾದಕ್ಕಾಗಿ ಒಪ್ಪಿ ಇಟ್ಟುಕೊಂಡರೂ ಯಾವ ಶಂಕೆಗೂ ಅವಕಾಶವಿರುವದಿಲ್ಲ. ಜಿಜ್ಞಾಸುಗಳು ಇದನ್ನು ನೆನಪಿನಲ್ಲಿಟ್ಟರೆ ಅದ್ವೈತದ ಮೇಲಿನ ಆಕ್ಷೇಪಗಳಿಗೆಲ್ಲ ಪರಿಹಾರವು ದೊರಕುವದು.

ತತ್ತ್ವಪ್ರತಿಪಾದನಪ್ರಕ್ರಿಯೆಗಳು

ಮೇಲೆ ತಿಳಿಸಿರುವಂತೆ ಜಿಜ್ಞಾಸುಗಳಿಗೆ ತತ್ತ್ವವನ್ನು ಬೋಧಿಸುವದಕ್ಕೆಂದು ಶ್ರುತಿಯಲ್ಲಿ ಬೇರೆಬೇರೆಯ ಉಪಾಧಿಗಳನ್ನವಲಂಬಿಸಿರುತ್ತದೆ. ಆದರೆ ಅವುಗಳಲ್ಲಿ ಯಾವದೊಂದು ಉಪಾಧಿಯೂ ವಿವಕ್ಷಿತವಲ್ಲ. ಆದ್ದರಿಂದ ಕೊನೆಯಲ್ಲಿ ಅದ್ವೈತಾತ್ಮನನ್ನು ಅವಧಾರಣೆಮಾಡಿಯೇ ಉಪದೇಶವನ್ನು ಮುಗಿಸಿರುತ್ತದೆ. ಅಧಿಕಾರಿಗಳು ಬೇರೆಬೇರೆಯ ಚಿತ್ತಭೂಮಿಕೆಯಲ್ಲಿರುತ್ತಾರಾದ್ದರಿಂದ ಅವರವರಿಗೆ ತಕ್ಕಂತೆ ಉಪದೇಶದ ಪ್ರಕ್ರಿಯೆಯೂ ಬೇರೆಬೇರೆಯಾಗಿರುತ್ತದೆ. ಅಷ್ಟೆ

ಪ್ರಕೃತೋಪನಿಷತ್ತಿನಲ್ಲಿ ಉಪಯೋಗಿಸಿರುವ ಪ್ರಕ್ರಿಯೆಗಳು ಹೀಗಿವೆ:

(೧) **ಆರನೆಯ ಅಧ್ಯಾಯದಲ್ಲಿ** ಶ್ವೇತಕೇತುವಿಗೆ ನೀನು ಸಂಸಾರಿಯಲ್ಲ, ಪರಮಾತ್ಮನೇ ಎಂಬುದನ್ನು ಬೋಧಿಸುವದಕ್ಕಾಗಿ ಮುಖ್ಯವಾಗಿ ಜಗತ್ಕಾರಣವಾದ ಸದ್ಬ್ರಹ್ಮವನ್ನು ಹೇಳುವದಕ್ಕೆ ಉಪಕ್ರಮಿಸಿ ಆ ಸತ್ತೇ ಜೀವರೂಪದಿಂದ ಕಾರ್ಯಕರಣಸಂಘಾತದಲ್ಲಿ ಒಳಹೊಕ್ಕು ನಾಮರೂಪಗಳನ್ನು ವ್ಯಾಕರಣಮಾಡಿದೆ – ಎಂಬ ಕಾರ್ಯಕಾರಣಪ್ರಕ್ರಿಯೆಯನ್ನು ಹೇಳಿರುತ್ತದೆ. ಇಡಿಯ ಜಗತ್ತೆಲ್ಲವೂ ನಿಜವಾಗಿ ಆ ಸದಾತ್ಮಕಬ್ರಹ್ಮವೇ ಆಗಿರುತ್ತದೆ, ಅಂಥ ಅದ್ವಿತೀಯಬ್ರಹ್ಮವೇ ನೀನು, ಕಾರ್ಯಕರಣಸಂಘಾತಕ್ಕೆ ಕಟ್ಟುಬಿದ್ದವನಲ್ಲ – ಎಂಬುದನ್ನು ಬಗೆಬಗೆಯ ಶಂಕಾಸಮಾಧಾನಗಳ ರೂಪದಿಂದ ಶ್ವೇತಕೇತುವಿಗೆ ತಂದೆಯು ಬೋಧಿಸಿದನೆಂದು ತಿಳಿಸಿದೆ.

(೨) **ಏಳನೆಯ ಅಧ್ಯಾಯದಲ್ಲಿ** ನಾರದನಿಗೆ ಸನತ್ಕುಮಾರ ಭಗವಂತನು ಋಗ್ವೇದಾದಿಗಳನ್ನೆಲ್ಲ ನಾಮಮಾತ್ರದಲ್ಲಿ ಅಡಗಿಸಿ, ನಾಮದಿಂದ ಪ್ರಾಣಾಂತವಾದ ಕಾರ್ಯಗಳು ಒಂದಕ್ಕಿಂತ ಒಂದು ವ್ಯಾಪಕವಾಗಿರುವದರಿಂದ ಆ [illegible] ಹೆಚ್ಚು ಹೆಚ್ಚು ಅರ್ಹವಾಗಿರುವವೆಂಬುದನ್ನು ತಿಳಿಸಿಕೊಟ್ಟು ಆ ಪ್ರಾಣವನ್ನು ಕೂಡ ಪರಮಾರ್ಥಸತ್ಯವಾದ ಭೂಮವೆಂಬ ಹೆಸರಿನ ಪರಮಾತ್ಮನು ವ್ಯಾಪಿಸಿಕೊಂಡಿರುತ್ತಾನೆಂದೂ ಅದ್ವಿತೀಯನಾದ ಆ ಪರಮಾತ್ಮನೇ ಮುಖ್ಯಾರ್ಥದಲ್ಲಿ ಆತ್ಮನೆಂದೂ ತಿಳಿಸಿಕೊಟ್ಟಿರುತ್ತದೆ.

(೩) **ಎಂಟನೆಯ ಅಧ್ಯಾಯದಲ್ಲಿ** ಪ್ರಜಾಪತಿಯು ಇಂದ್ರನಿಗೆ ಅಪಹತಪಾಪ್ಮನೂ ಅಶನಾಯಾದ್ಯತೀತನೂ ಆದ ಅಮೃತಾಭಯಬ್ರಹ್ಮವೇ ನಿಜವಾದ ಆತ್ಮನೆಂಬುದನ್ನು ಇಂದ್ರಿಯಜ್ಞಾನ, ಸ್ವಪ್ನಜ್ಞಾನ, ಸುಷುಪ್ತಿಜ್ಞಾನ – ಇವುಗಳ ಮೂಲಕ

ವಾಗಿ ಕಾರ್ಯಕರಣಸಂಘಾತರಹಿತನಾದ ಅಶರೀರಾತ್ಮನ ಸ್ವರೂಪದ ತಿಳಿವಳಿಕೆಯನ್ನು ಕ್ರಮಕ್ರಮವಾಗಿ ಮಾಡಿಕೊಟ್ಟು, ಮನಗಾಣಿಸಿರುತಾನೆ. ಕೊನೆಯಲ್ಲಿ "ನಾನು ಈ ಇಂದ್ರಿಯದಿಂದ ಇದನ್ನು ಅರಿಯುತ್ತೇನೆ" ಎಂಬ ಪ್ರಮಾತೃಪ್ರಮಾಣ ಪ್ರಮೇಯವಿಭಾಗವು ಯಾವ ಚೈತನ್ಯರೂಪವಾದ ಆತ್ಮನಿಗೆ ತೋರುತ್ತಿರುವದೋ ಅವನೇ ಆತ್ಮನು ಎಂದು ಸಾಕ್ಷಿಸ್ವರೂಪವನ್ನು ತಿಳಿಸಿಕೊಟ್ಟಿರುತ್ತಾನೆ.

ಇಲ್ಲಿ **ಶ್ವೇತಕೇತುವು** ಗುರುಗಳಲ್ಲಿ ಎಲ್ಲವನ್ನೂ ಕಲಿತೆನೆಂದು ತಪ್ಪುತಿಳಿವಳಿಕೆಯ ಅಭಿಮಾನದಿಂದ ಬಂದಿದ್ದಾಗ ಆತ್ಮಜ್ಞಾನದಿಂದಲೇ ಸರ್ವಜ್ಞತ್ವವು ಬರುವದೆಂದು ತಿಳಿಸುವದಕ್ಕಾಗಿ ಕಾರಣವಿಜ್ಞಾನದಿಂದ ಕಾರ್ಯವೆಲ್ಲವನ್ನೂ ಅರಿತಂತಾಗುವದೆಂಬ ಪ್ರಕ್ರಿಯೆಯನ್ನು ಉಪಯೋಗಿಸಿರುತ್ತದೆ. **ನಾರದನು** ನಾನು ಬರಿಯ ಮಂತ್ರರೂಪವಾದ ಶಬ್ದಜ್ಞಾನವುಳ್ಳವನು, ಅವುಗಳಿಗೆ ಗುರಿಯಾದ ಆತ್ಮನನ್ನು ಅರಿಯದೆ ಶೋಕಿಸುತ್ತಿರುವೆನು ಎಂದುಹೇಳಿಕೊಂಡದ್ದರಿಂದ ಆ ಶಬ್ದದಿಂದಲೇ ಮೊದಲು ಮಾಡಿಕೊಂಡು ಪ್ರಾಣಾಂತವಾದ ವ್ಯಾಪಕತತ್ತ್ವವನ್ನು ಬೋಧಿಸಿ ಸರ್ವವ್ಯಾಪಕವಾದ ಅದ್ವಿತೀಯಾತ್ಮನೇ ಸುಖವು ಎಂದು ಶೋಕಪರಿಹಾರೋಪಾಯವನ್ನು ಉಪದೇಶಿಸಿದೆ. **ಇಂದ್ರನು** ಯಾವ ಆತ್ಮಸ್ವರೂಪವನ್ನು ತಿಳಿದರೆ ಸರ್ವಲೋಕಗಳಲ್ಲಿಯೂ ಕಾಮಚಾರರೂಪವಾದ ಭೋಗವು ದೊರಕೀತು ? - ಎಂಬುದನ್ನು ಅರಿತುಕೊಳ್ಳುವದಕ್ಕಾಗಿ ಬಂದದ್ದರಿಂದ ಅಶರೀರಾತ್ಮಜ್ಞಾನವೇ ಸರ್ವಾತ್ಮಭಾವದಿಂದ ಸರ್ವಕಾಮಾಪ್ತಿಗೆ ಮಾರ್ಗವೆಂದು ಉಪದೇಶಿಸಿದೆ. ಹೀಗೆ ಅಧಿಕಾರಭೇದದಿಂದ ಉಪದೇಶಪ್ರಕ್ರಿಯೆಯು ಬೇರೆಬೇರೆಯಾದರೂ ಅದ್ವೈತಜ್ಞಾನವೆಂಬ ಗುರಿಯು ಒಂದೇ ಆಗಿರುತ್ತದೆ.

ಸಾಧನವೂ ಫಲವೂ

ಜ್ಞಾನವಾಗಲಿ ಉಪಾಸನೆಯಾಗಲಿ ಬರಿಯ ಒಣತರ್ಕದಿಂದ ಎಂದಿಗೂ ದಕ್ಕುವದಿಲ್ಲವೆಂಬುದನ್ನು ಈ ಉಪನಿಷತ್ತಿನಲ್ಲಿ ಆಯಾ ಆಖ್ಯಾನದ ಮೂಲಕ ಮತ್ತೆಮತ್ತೆ ಮನಗಾಣಿಸಿದೆ. ಗುರುಶುಶ್ರೂಷೆ, ಬ್ರಹ್ಮಚರ್ಯ, ಗುರುವಿನಲ್ಲಿ ವಿನಯದಿಂದ ಪ್ರಶ್ನೆಮಾಡುವದು - ಇವುಗಳಿಂದಲೇ ಪರಮಾತ್ಮಪ್ರಾಪ್ತಿಗೆ ಸಾಧನವಾದ ಉಪಾಸನೆಯಾಗಲಿ ಜ್ಞಾನವಾಗಲಿ ಅಳವಡುವದೇ ಹೊರತು ಆಸುರಸಂಪತ್ತಿನವರಿಗೆ ದಕ್ಕಲಾರದು - ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ಉಪಾಸನೆ

ಯಲ್ಲಿಯೂ ಪರಮಾತ್ಮಜ್ಞಾನಲ್ಲಿಯೂ ನೆಲೆನಿಂತ ಮಹನೀಯರ ಮಹಿಮೆಯನ್ನು ಆಯಾ ಉಪಾಸನೆಯ ಮತ್ತು ಜ್ಞಾನದ ಪ್ರಕರಣದಲ್ಲಿ ತಿಳಿಯಪಡಿಸಿದೆ. ವಿನೀತರಾಗಿ ಸದ್ಗುರುವಿನ ಮೂಲಕವೇ ಪರಮಪುರುಷಾರ್ಥದ ಸಾಧನವನ್ನು ಪಡೆದು ಕೃತಾರ್ಥರಾಗಬೇಕೆಂಬುದನ್ನು ಮುಮುಕ್ಷುಗಳೆಲ್ಲರೂ ಇಲ್ಲಿರುವ ಬೇರೆಬೇರೆಯ ಆಖ್ಯಾನಗಳಿಂದ ಗ್ರಹಿಸಬಹುದಾಗಿರುತ್ತದೆ.

ಉಪಸಂಹಾರ

ಹೀಗೆ ಶ್ರುತಿಯುಕ್ತ್ಯನುಭವಗಳಿಗೆ ಸಂಮತವಾಗಿರುವ ಆಚಾರ್ಯರ ಭಾಷ್ಯವನ್ನು ಯಥಾಮತಿಯಾಗಿ ಕನ್ನಡಿಸುವ ಸುಯೋಗವನ್ನು ಅನುಗ್ರಹಿಸಿರುವ ದಕ್ಕಾಗಿ ಆ ಮಹಾತ್ಮರನ್ನು ಪೂಜ್ಯಬುದ್ಧಿಯಿಂದ ಮತ್ತೆ ಮತ್ತೆ ನಮಸ್ಕರಿಸಿ ಈ ಪೀಠಿಕೆಯನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ಮನ್ಮಥ ಸಂ II, ಮಾಘ ಬಹುಳ ೧೧ **ಅನುವಾದಕ.**

(೧೯೫೬)

ಪರಿಶಿಷ್ಟ

ವೇದೋಕ್ತಕರ್ಮಗಳು

ಛಾಂದೋಗ್ಯೋಪನಿಷತ್ತಿನಲ್ಲಿ ಮಿಕ್ಕ ಎಲ್ಲಾ ಉಪನಿಷತ್ತುಗಳಲಿರುವದ ಕ್ಕಿಂತಲೂ ಹೆಚ್ಚಾಗಿ ಕರ್ಮಗಳ ಪರಾಮರ್ಶವು ಕಂಡುಬರುವದರಿಂದ ವೇದಗಳಿಗೂ ಕರ್ಮಗಳಿಗೂ ಇರುವ ಸಂಬಂಧವನ್ನು ಈ ಪರಿಶಿಷ್ಟದಲ್ಲಿ ಸ್ವಲ್ಪಮಟ್ಟಿಗೆ ತಿಳಿಸಲಾಗಿರುತ್ತದೆ. ಇಲ್ಲಿರುವ ಪಾರಿಭಾಷಿಕಶಬ್ದಗಳನ್ನು ಮಿಕ್ಕ ಉಪನಿಷತ್ತುಗಳಲ್ಲಿ ಅಥವಾ ಭಾಷ್ಯಗಳಲ್ಲಿ ಪ್ರಯೋಗಿಸಿರುವದು ಕಂಡುಬಂದರೆ ವಾಚಕರು ಅಲ್ಲಿಯೂ ಈ ಪರಿಶಿಷ್ಟದಲ್ಲಿ ಕೊಟ್ಟಿರುವ ವಿವರಣೆಯನ್ನೇ ಮನದಂದುಕೊಳ್ಳಬಹುದು.

ಕರ್ಮಗಳಲ್ಲಿ ನಿತ್ಯತ್ವಾದಿವಿಭಾಗ

ಎಲ್ಲಾ ಕರ್ಮಗಳನ್ನೂ ನಿತ್ಯ, ನೈಮಿತ್ತಿಕ, ಕಾಮ್ಯ - ಎಂದು ಮೂರು ವಿಭಾಗ ಗಳಾಗಿ ವಿಂಗಡಿಸಿರುತ್ತಾರೆ. ಅವಶ್ಯವಾಗಿ ಆಯಾ ಕಾಲದಲ್ಲಿ ಮಾಡಲೇ ಬೇಕಾಗಿದ್ದು ಮಾಡದೆ ಇದ್ದರೆ **ಪ್ರತ್ಯವಾಯ**(ದೋಷ)ವುಂಟೆಂದು ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳು **ನಿತ್ಯಕರ್ಮಗಳು.** ಯಾವದಾದರೂ ನಿಮಿತ್ತವು ಬಂದೊದಗಿದಾಗ ಆಗಲೇ ಅವಶ್ಯವಾಗಿ ಮಾಡಬೇಕೆಂದು ವಿಧಿಸಿರುವ ಕರ್ಮಗಳು **ನೈಮಿತ್ತಿಕಕರ್ಮ ಗಳು.** ಸರಿಯಾಗಿ ನೋಡಿದರೆ ಈ ಎರಡು ಬಗೆಯ ಕರ್ಮಗಳೂ ನಿಮಿತ್ತವಿರು ವಾಗಲೇ ಮಾಡತಕ್ಕವಾದ್ದರಿಂದ ನೈಮಿತ್ತಿಕವೇ ಆದರೂ ನಿಮಿತ್ತವು ನಿಯತವಾಗಿ ಪ್ರಾಪ್ತವಾದದ್ದು ನಿತ್ಯ, ಅನಿಯತವಾಗಿ ಪ್ರಾಪ್ತವಾದದ್ದು ನೈಮಿತ್ತಿಕ - ಎಂದು ಇವುಗಳನ್ನು ಶಾಸ್ತ್ರದಲ್ಲಿ ವ್ಯವಹರಿಸಿರುತ್ತದೆ (೩) ಫಲೇಚ್ಛೆಯಿಂದ ಮಾಡುವ ಕರ್ಮಗಳು **ಕಾಮ್ಯಕರ್ಮಗಳು.** (೪) ಕರ್ಮಗಳಲ್ಲಿ ಆಗಬಹುದಾದ ಲೋಪಾದಿದೋಷಗಳ ಪರಿಹಾರಕ್ಕಾಗಿ ಮಾಡುವವು **ಪ್ರಾಯಶ್ಚಿತ್ತಕರ್ಮಗಳು.**

ವೈದಿಕಕರ್ಮಗಳು

ವೇದೋಕ್ತಕರ್ಮಗಳು ನಾಲ್ಕು ಬಗೆ : (೧) ಪ್ರತಿದಿನವೂ ಸಾಯಂಪ್ರಾತಃ ಕಾಲಗಳಲ್ಲಿ ಮೊಸರು, ಹಾಲು, ಅಕ್ಕಿ - ಮುಂತಾದ ವಿಹಿತದ್ರವ್ಯಗಳಿಂದ ಮಾಡುವ **ಅಗ್ನಿಹೋತ್ರವೇ** ಮುಂತಾದ ಕೆಲವು ಹೋಮಗಳಿಗೆ **'ದರ್ವೀಹೋಮ'** ಗಳೆಂದು ಹೆಸರು. (೨) ಪ್ರತಿಯೊಂದು ಅಮಾವಾಸ್ಯೆ ಅಥವಾ ಹುಣ್ಣಿಮೆ - ಈ

ದಿನಗಳಲ್ಲಿ ಚರು, ಪುರೋಡಾಶ - ಮುಂತಾದ ವಿಹಿತದ್ರವ್ಯಗಳಿಂದ ಮಾಡುವ ಯಾಗವಿಶೇಷಗಳಿಗೆ **ಇಷ್ಟಿಗಳು** ಎಂದು ಹೆಸರು ; ಇವುಗಳನ್ನು **ಯಾಗ**ಗಳೆಂದು ಕರೆಯುವದುಂಟು. (೩) ಪ್ರತಿ ವರ್ಷರ್ತುವಿನಲ್ಲೂ ಬೇರೆ ಗೊತ್ತಾದ ಕಾಲಗಳಲ್ಲಿಯೂ ಆಯಾ ಫಲಕ್ಕಾಗಿ ಪಶುವಿನ ಹೃದಯವೇ ಮುಂತಾದ ಅಂಗಗಳಿಂದ ಮಾಡುವ ಯಾಗಗಳಿಗೆ **'ಪಶುಯಾಗಗಳು'** ಎಂದು ಹೆಸರು. (೪) ವಸಂತದಲ್ಲಿ ಅಥವಾ ಬೇರೆಯ ಆಯಾ ಗೊತ್ತಾದ ಕಾಲಗಳಲ್ಲಿ ಆಯಾ ಫಲದ ಪ್ರಾಪ್ತಿಗಾಗಿ ಸೋಮಲತೆಯನ್ನು ಕ್ರಯಕ್ಕೆ ಕೊಂಡು ಅದರ ರಸವನ್ನು 'ಗ್ರಹ', 'ಚಮಸ' - ಮುಂತಾದ ಪಾತ್ರೆಗಳಲ್ಲಿ ತುಂಬಿ ದೇವತೆಗಳಿಗೆ ಕೊಡುವದು **'ಸೋಮಯಾಗ'**ವು.

ಈ ಕರ್ಮಗಳೆಲ್ಲವೂ 'ಆಹಿತಾಗ್ನಿಯಾದ' ವಿವಾಹಿತನಾದ ದ್ವಿಜನು (ಬ್ರಾಹ್ಮಣ, ಕ್ಷತ್ರಿಯ, ಅಥವಾ ವೈಶ್ಯನು) ಮಾಡತಕ್ಕವು. ಕರ್ಮಕ್ಕಾಗಿ **ಗಾರ್ಹಪತ್ಯ, ದಕ್ಷಿಣಾಗ್ನಿ, ಆಹವನೀಯ - ಎಂಬ ಮೂರು ಅಗ್ನಿಗಳನ್ನು ಆಗ್ನ್ಯಾಧಾನ**ವೆಂಬ ಕರ್ಮದಿಂದ ಸಂಪಾದಿಸಿಕೊಂಡಿರಬೇಕು. ಇವುಗಳಲ್ಲಿ **ಗಾರ್ಹ್ಯಪತ್ಯ**ವು ಆಧಾನವಾದಂದಿನಿಂದ ಬದುಕಿರುವವರೆಗೂ ಧಾರಣೆಮಾಡತಕ್ಕದ್ದು : ಮಿಕ್ಕಿರಡನ್ನೂ ಆಯಾ ಕರ್ಮಕ್ಕೆ ಬೇಕಾಗುವಂತೆ ಗಾರ್ಹಪತ್ಯದಿಂದ ಎತ್ತಿ ತಮ್ಮ ತಮ್ಮ ಸ್ಥಾನಗಳಲ್ಲಿ ಇಟ್ಟುಕೊಳ್ಳಬೇಕಾಗುವದು. ಕರ್ಮವು ಮುಗಿದಮೇಲೆ ಅವು ಮತ್ತೊಂದು ಯಜ್ಞಕ್ಕೆ ಉಪಯೋಗವಾಗುವದಿಲ್ಲ. ಗಾರ್ಹಪತ್ಯಾಗ್ನಿಯು ಯಾವ ಕಾರಣದಿಂದಲಾದರೂ ನಾಶವಾದರೆ ಕೂಡಲೆ **ಪ್ರಾಯಶ್ಚಿತ್ತ**ವನ್ನು ಮಾಡಿಕೊಂಡು ಮತ್ತೆ ಅದನ್ನು ಉತ್ಪಾದನೆಮಾಡಿಕೊಳ್ಳಬೇಕು ; ಬಹುಕಾಲ ಹೀಗೆ ವಿಚ್ಛಿತ್ತಿಯಾದರೆ **ಪುನರಾಧಾನ**ವೆಂಬ ಕ್ರಮದಿಂದ ಅದನ್ನು ಮತ್ತೆ ಪರ್ಯಡಿಸಿಕೊಳ್ಳಬೇಕಾಗುವದು. ಒಬ್ಬನ ಅಗ್ನಿಯಲ್ಲಿ ಇನ್ನೊಬ್ಬನು ಯಾಗಾದಿಗಳನ್ನು ಮಾಡುವದಕ್ಕೆ ಬರುವದಿಲ್ಲ.

ಕರ್ಮಗಳ ಪ್ರಕೃತಿವಿಕೃತಿಭಾವವೂ ಅಂಗಾಂಗಿಭಾವವೂ

ಇಷ್ಟಿ, ಪಶುಯಾಗ, ಸೋಮಯಾಗ - ಇವುಗಳಂತೆ ಇರುವ ಬೇರೆಯ ಕರ್ಮಗಳು ಇವುಗಳ **ವಿಕೃತಿ**ಗಳೆನಿಸುವವು. ಯಾವ ಕರ್ಮಕ್ಕೆ ಸಮಗ್ರವಾಗಿ ಅಂಗಗಳೆಲ್ಲ ಉಪದಿಷ್ಟವಾಗಿರುವವೋ ಅದು **ಪ್ರಕೃತಿ** ; ಯಾವದಕ್ಕೆ ಮತ್ತೊಂದರಿಂದ ಅಂಗಗಳನ್ನು ತಂದು ಸೇರಿಸಿಕೊಳ್ಳಬೇಕಾಗಿರುವದೋ ಅದು

ವಿಕೃತಿ- ಎಂಬುದು ಸಾಮಾನ್ಯನಿಯಮ. ಪ್ರಕೃತಿವಿಕೃತಿಗಳಿಗೆ ಸಾಮ್ಯವು ದ್ರವ್ಯದಿಂದ, ದೇವತೆಯಿಂದ, ಅಥವಾ ದೇವತಾವಾಚಿಪದಾಕ್ಷರದಿಂದ - ಹೀಗೆ ಮೂರು ಬಗೆಯಲ್ಲಿರಬಹುದು. ಇಷ್ಟಿಗಳಿಗೆಲ್ಲಕ್ಕೂ ಅಗ್ನೀಷೋಮಾಯಪಶುಯಾಗಕ್ಕೂ **ದರ್ಶಪೂರ್ಣಮಾಸ**ಗಳು ಪ್ರಕೃತಿ ; ಮಿಕ್ಕ ಪಶುಯಾಗಗಳಿಗೆಲ್ಲ **ಅಗ್ನೀಷೋಮಾಯ ಪಶುಯಾಗವು** ಪ್ರಕೃತಿ ; ಮಿಕ್ಕ ಸೋಮಯಾಗಗಳಿಗೆಲ್ಲ **ಜ್ಯೋತಿಷ್ಟೋಮ**ವೆಂಬ ಸೋಮಯಾಗವು ಪ್ರಕೃತಿ. ಇದು ಸಾಮಾನ್ಯನಿಯಮವು ; ವಿಶೇಷಗಳನ್ನು ಮಹರ್ಷಿಗಳ ಸೂತ್ರದಿಂದ ತಿಳಿದುಕೊಳ್ಳಬೇಕು.

ಇಷ್ಟಿಗಳು ಬೇರೆಯ ಇಷ್ಟಿಗಳಿಗೆ **ಅಂಗ**ವಾಗಿರಬಹುದು ; ಪಶುಯಾಗಕ್ಕೂ ಸೋಮಯಾಗಕ್ಕೂ ಅಂಗವಾಗಿರಬಹುದು ; **ಪಶುಯಾಗ**ಗಳು ಸೋಮಯಾಗಗಳಿಗೆ ಮಾತ್ರ ಅಂಗ ; **ಸೋಮಯಾಗ**ಗಳು ಬೇರೆಯ ಸೋಮಯಾಗಗಳಿಗೆ ಮಾತ್ರ ಅಂಗವಾಗಿರುವವು.

ಕರ್ಮಗಳಿಗೆ ವೇದಗಳ ಸಂಬಂಧ

ಅಗ್ನಿಹೋತ್ರವು **ಯಜುರ್ವೇದವಿಹಿತ**ವಾಗಿರುತ್ತದೆ. ದರ್ಶಪೂರ್ಣಮಾಸವೇ ಮುಂತಾದ ಇಷ್ಟಿಗಳೂ ಪಶುಯಾಗವೂ ಋಗ್ವೇದಯಜುರ್ವೇದಗಳನ್ನನುಸರಿಸಿ ನಡೆಯುವವು. ಅಲ್ಲಿ **ಋಗ್ವೇದದಿಂದ ಯಾಜ್ಯಾ, ಪುರೋನುವಾಕ್ಯಾ, ಸಾಮಧೇನೀ, ಪ್ರೈಷ** - ಮುಂತಾದವುಗಳನ್ನು ಮಾಡಬೇಕಾಗುವದು ; **ಶಾಖಾಚ್ಛೇದ, ಹವಿರ್ನಿರ್ವಾಪ, ಅವಘಾತ, ಪ್ರೋಕ್ಷಣ, ಪೇಷಣ, ಪುರೋಡಾಶಶ್ರಪಣ, ಪ್ರಯಾಜಾನುಯಾಜಾದಿಗಳು - ಇವೆಲ್ಲ ಯಜುರ್ವೇದವನ್ನು ಅನುಸರಿಸಿರುವವು. ಹೀಗೆಯೇ ಪಶುಯಾಗದಲ್ಲಿ ಯೂಪಚ್ಛೇದನ, ಉಪಾಕರಣ** - ಮುಂತಾದ ಕ್ರಿಯೆಗಳು ಯಜುರ್ವೇದದಿಂದಲೂ ಯಾಜ್ಯಾದಿಗಳು ಋಗ್ವೇದದಿಂದಲೂ ಆಗುವವು ; ಸೋಮಯಾಗವು ಮೂರು ವೇದಗಳಿಂದಲೂ ಆಗುವದು.

ಋಗ್ವೇದಯಜುರ್ವೇದಸಾಮವೇದಗಳಲ್ಲಿ ಪ್ರತಿಪಾದಿತವಾಗಿರುವ ವಿಷಯ

ಋಗ್ವೇದಯಜುರ್ವೇದಗಳಲ್ಲಿ ಅಗ್ನಿಹೋತ್ರ, ಇಷ್ಟಿ ಪಶುಗಳು-ಎಂಬ ಮೂರನ್ನು ಮಾತ್ರ ವಿಶೇಷವಾಗಿ ಹೇಳಿರುತ್ತದೆ ; ಸೋಮಯಾಗಗಳಲ್ಲಿ ಕೆಲವನ್ನು ಮಾತ್ರ ವಿಧಿಸಿದೆ. ಯಜುರ್ವೇದದ ಶಾಖೆಗಳಲ್ಲಿ ಆಗ್ನ್ಯಾಧಾನ, ಅಗ್ನಿಹೋತ್ರ, ಪುನರಾಧಾನ, ಆಗ್ರಯಣ, ಚಾತುರ್ಮಾಸ್ಯಗಳು, ಕಾಮ್ಯೇಷ್ಟಿಗಳು, ಕಾಮ್ಯಪಶುಗಳು, ಸೌತ್ರಾಮಣಿ, ಅಗ್ನಿಚಯನ, ಅಗ್ನಿಷ್ಟೋಮಾದಿಸಪ್ತಸೋಮಸಂಸ್ಥೆಗಳು[1], ರಾಜಸೂಯ, ಅಂತ್ಯೇಷ್ಟಿ ಪುರುಷಮೇಧ, ಅಶ್ವಮೇಧ, ಗವಾಮಯನ - ಇಷ್ಟು ಕರ್ಮಗಳನ್ನು ಮಾತ್ರ ಅಂಗಸಮೇತವಾಗಿ ವಿಧಿಸಿದೆ ; ತೈತ್ತಿರೀಯದಲ್ಲಿ ಇನ್ನೂ ಕೆಲವು ಸೋಮಯಾಗಗಳನ್ನು ಹೆಚ್ಚಾಗಿ ವಿಧಿಸಿರುತ್ತದೆ. **ಸಾಮವೇದ**ದಲ್ಲಿ ಇಷ್ಟಿಪಶು ಚಾತುರ್ಮಾಸ್ಯಗಳನ್ನು ಬಿಟ್ಟು ಸೋಮಯಾಗವನ್ನೇ ವಿಶೇಷವಾಗಿ ವಿಧಿಸಿರುತ್ತದೆ.

ಸಾಮವೇದಸಂಹಿತೆ

ಮಿಕ್ಕ ವೇದಗಳಂತೆ ಸಾಮವೇದವೂ ಸಂಹಿತೆ, ಬ್ರಾಹ್ಮಣ - ಎಂಬ ಎರಡೂ ಮಹಾಭಾಗಗಳಾಗಿ ವಿಂಗಡವಾಗಿರುತ್ತದೆ. ಸಂಹಿತೆಯಲ್ಲಿ **ಆರ್ಚಿಕ, ಗಾನ** - ಎಂಬ ಎರಡು ವಿಭಾಗಗಳಿವೆ. ಆರ್ಚಿಕದಲ್ಲಿ ಪೂರ್ವಾರ್ಚಿಕ (ಛಂದ ಆರ್ಚಿಕ), ಉತ್ತರಾರ್ಚಿಕ - ಎಂದು ಎರಡು ಪ್ರವಿಭಾಗಗಳುಂಟು. ಇವೆರಡರಲ್ಲಿಯೂ ಬರಿಯ ಋಕ್ಕುಗಳೇ ಇರುತ್ತವೆ. ಮೊದಲನೆಯ ಪ್ರವಿಭಾಗದಲ್ಲಿ ಸಾಮಗಳಿಗೆ ಆಧಾರವಾದ ಋಕ್ಕುಗಳನ್ನೂ, ಎರಡನೆಯದರಲ್ಲಿ ಕ್ರತುಗಳಲ್ಲಿ ಗಾನಮಾಡತಕ್ಕ ಸಾಮಗಳಿಗೆ ಆಧಾರವಾಗಿರುವ ಋಕ್ಕುಗಳನ್ನೂ **ಸೂಕ್ತ**ರೂಪದಿಂದ ಹೇಳಿರುತ್ತದೆ.

ಸಾಮಗಾನ

ಒಂದೊಂದು ಸಾಮಕ್ಕೆ ಆಧಾರವಾಗಿರುವ ಒಂದೊಂದು ಋಕ್ಕಿನೊಡನೆ ಮುಂದಿನ ಎರಡನ್ನು ಸೇರಿಸಿಕೊಂಡು ಈ ಮೂರನ್ನು ಒಂದಾನೊಂದು ಆವೃತ್ತಿಕ್ರಮದಿಂದ ಗಾನಮಾಡಬೇಕಾಗುತ್ತದೆ ಎಂಬುದು ಸಾಮಾನ್ಯನಿಯಮವು ; ಹಾಗೆ ಮಾಡುವದು **ಸ್ತೋತ್ರ**ವೆನಿಸುವದು. ಸ್ತುತಿಯು ಮುಗಿಯುವದಕ್ಕೆ ಬೇಕಾದಷ್ಟು ಋಕ್ಕುಗಳ ಸಮುದಾಯವೇ **ಸೂಕ್ತ**ವು.

---

1. ಸಂಸ್ಥೆಗಳ ವಿಷಯಕ್ಕೆ ೧೮೦ನೆಯ ಪುಟದ ಟಿಪ್ಪಣಿಯನ್ನು ನೋಡಿ.

ಸಾಮವೇದದ ಗಾನಭಾಗವು **ಪ್ರಕೃತಿ, ಆರಣ್ಯಕ, ಊಹ, ರಹಸ್ಯ** - ಎಂದು ನಾಲ್ಕು ಬಗೆ. ಮೊದಲನೆಯದನ್ನು ಊರಿನಲ್ಲಿಯೂ ಎರಡನೆಯದನ್ನು ಅರಣ್ಯದಲ್ಲಿಯೂ ಗಾನಮಾಡತಕ್ಕದ್ದು - ಎಂಬ ವಿಶೇಷವನ್ನು ಬಿಟ್ಟರೆ ಈ ಎರಡಕ್ಕೆ ಮತ್ತೆಯಾವ ತಾರತಮ್ಯವೂ ಇರುವದಿಲ್ಲ. ಪ್ರಕೃತಗ್ರಂಥದಲ್ಲಿ ಬಲುಮಟ್ಟಿಗೆ ಪೂರ್ವಾರ್ಚಿಕದಲ್ಲಿರುವ ಋಕ್ಕುಗಳನ್ನೇ ಗಾನವಾಗಿ ಮಾರ್ಪಡಿಸಿಕೊಂಡಿರುತ್ತದೆ. ಗಾನದಲ್ಲಿ ಸ್ವರಗಳೆಂದರೆ ಮಿಕ್ಕ ವೇದಭಾಗದಲ್ಲಿರುವಂತೆ ಉದಾತ್ತಾದಿಗಳೆಂದು ಅಭಿಪ್ರಾಯವಲ್ಲ ; ಸಂಗೀತಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಸಪ್ತಸ್ವರಗಳೇ ಆಗಿವೆ. ಗಾನಪದ್ಧತಿಯನ್ನು ಬಲ್ಲವರಿಂದ ಹೇಳಿಸಿಕೊಂಡು ಕಲಿಯಬೇಕು.[1]

ಒಂದೊಂದು ಋಕ್ಕಿನಿಂದ ಒಂದೊಂದು ಸಾಮವು ಹುಟ್ಟಿರುವದೆಂದೂ ಆ ಸಾಮಗಳನ್ನು ಪ್ರಕೃತಿಗ್ರಂಥದಲ್ಲಿ ತೋರಿಸಿದೆ ಎಂದೂ ತಿಳಿಸಿದ್ದಾಗಿದೆಯಷ್ಟೆ. ಈ ಸಾಮಗಳನ್ನು ಇದೇ ಕ್ರಮದಲ್ಲಿ ಕ್ರತುಗಳಲ್ಲಿ ಗಾನಮಾಡುವದಕ್ಕೆ ಬರುವದಿಲ್ಲ. ಆದ್ದರಿಂದ ಯಾವ ಯಾವ ಋಕ್ಕಿಗ ಯಾವ ಯಾವ ಋಕ್ಕುಗಳನ್ನು ಸೇರಿಸಿಕೊಂಡು ಯಾವ ಯಾವ **ತೃಚ**ಗಳನ್ನು ಹೇಗೆಹೇಗೆ ಗಾನಮಾಡಬೇಕಾಗುವದೆಂಬುದನ್ನು ಊಹಿಸಿ ಒಂದು ಗ್ರಂಥವನ್ನು ಏರ್ಪಡಿಸಿರುತ್ತಾರೆ. ಇದಕ್ಕೆ **ಊಹಗ್ರಂಥ**ವೆಂದು ಹೆಸರು. ಹೀಗೆಯೇ ಆರಣ್ಯಗೇಯಸಾಮಗಳಿಂದಾಗಿರುವ ತೃಚಗಳನ್ನು **ರಹಸ್ಯ ಗ್ರಂಥ**ದಲ್ಲಿ ತಿಳಿಸಿದೆ. ಈ ಕಾರಣದಿಂದ **ಊಹ, ರಹಸ್ಯ - ಇವೆರಡೂ ಪೌರುಷೇಯವೆಂದು ಮೀಮಾಂಸಕರು ಭಾವಿಸಿರುತ್ತಾರೆ.**

ಸಾಮವೇದದ ಬ್ರಾಹ್ಮಣಗಳು

ಸಾಮವೇದಕ್ಕೆ ಸಾವಿರ ಶಾಖೆಗಳೆಂದು ಪ್ರಸಿದ್ಧಿ. ಅವುಗಳಲ್ಲಿ ಕೌಥುಮ, ರಾಣಾಯನೀಯ, ಜೈಮಿನೀಯ (ತಲವಕಾರೀಯ) - ಎಂಬೀ ಮೂರು ಶಾಖೆಗಳು ಈಗಲೂ ಕಂಡುಬರುತ್ತವೆ ; ಇವುಗಳಲ್ಲಿಯೂ ಕೌಥುಮಶಾಖೆಯೇ ಬಹಳ ಪ್ರಸಿದ್ಧ ; ಆ ಶಾಖೆಗೆ ಸೇರಿದ **ತಾಂಡ್ಯಬ್ರಾಹ್ಮಣ**ವೊಂದೇ ಈಗ ಮುದ್ರಿತವಾಗಿ ಸಿಕ್ಕುವ ಗ್ರಂಥ. ತಾಂಡಿ ಎಂಬ ಋಷಿಯಿಂದ ದೃಷ್ಟವಾಗಿರುವದರಿಂದ

1. ಗ್ರಾಮೇ ಗೇಯ (ಅಥವಾ ವೇಯ, ಪ್ರಕೃತಿ) ಗಾನ ಮತ್ತು ಆರಣ್ಯಕಗಾನ - ಇವೆರಡನ್ನೂ "ಬೊಂಬಾಯಿಪ್ರಾಂತದ ಸ್ವಾಧ್ಯಾಯಮಂಡಲ"ದವರು ಪ್ರಕಟಿಸಿರುತ್ತಾರೆ. ಆ ಗ್ರಂಥದ ಭೂಮಿಕೆಯಲ್ಲಿ ಸಾಮಸ್ವರಗಳ ವಿಚಾರವನ್ನು ಸ್ವಲ್ಪಮಟ್ಟಿಗೆ ತಿಳಿಸಿದೆ.

ಇದಕ್ಕೆ **ತಾಂಡ್ಯಬ್ರಾಹ್ಮಣ**ವೆಂದು ಹೆಸರು. ಇದರಲ್ಲಿ ಇಪ್ಪತ್ತೈದು ಪ್ರಪಾಠಕಗಳಿರುವದರಿಂದ ಇದಕ್ಕೆ **ಪಂಚವಿಂಶತಿಬ್ರಾಹ್ಮಣ**ವೆಂದೂ ಹೆಸರುಂಟು. **ಪ್ರೌಢಬ್ರಾಹ್ಮಣ**ವೆಂಬುದು ಇದಕ್ಕೆ ಇನ್ನೊಂದು ಹೆಸರು.

ತಾಂಡ್ಯಬ್ರಾಹ್ಮಣದಲ್ಲಿ ಜ್ಯೋತಿಷ್ಟೋಮದಿಂದ ಹಿಡಿದು ಸಹಸ್ರಸಂವತ್ಸರ ಪರ್ಯಂತವಾದ ಸೋಮಯಾಗಗಳನ್ನೂ ಅವಕ್ಕೆ ಅಂಗವಾಗಿರುವ ಸ್ತೋತ್ರಗಳು, ಅವುಗಳು ಇಂತಿಷ್ಟು ಸಂಖ್ಯೆ ಎಂದು ಗೊತ್ತಾಗಿರುವ **ಸ್ತೋಮ**ಗಳು, ಅವುಗಳನ್ನು ಹೇಗೆ ಹೇಳಬೇಕಾದದ್ದು - ಎಂಬಿದನ್ನೂ ಪ್ರತಿಪಾದಿಸಿದೆ. ಪ್ರೌಢಬ್ರಾಹ್ಮಣ, ಷಡ್ವಿಂಶಬ್ರಾಹ್ಮಣ, ಸಾಮವಿಧಾನಬ್ರಾಹ್ಮಣ, ಆರ್ಷೇಯಬ್ರಾಹ್ಮಣ, ದೈವತ ಬ್ರಾಹ್ಮಣ, ಛಾಂದೋಗ್ಯೋಪನಿಷತ್ತು, ಸಂಹಿತೋಪನಿಷತ್ತು, ವಂಶಬ್ರಾಹ್ಮಣ - ಎಂದು ಬ್ರಾಹ್ಮಣಗ್ರಂಥಗಳು ಒಟ್ಟು ಎಂಟು - ಎಂದು ಸಾಯಣಾಚಾರ್ಯರು ಬರೆದಿರುತ್ತಾರೆ.

ಸೋಮಯಾಗಸ್ವರೂಪದ ವರ್ಣನೆ

ಇಲ್ಲಿ **ಅಗ್ನಿಷ್ಟೋಮಸಂಸ್ಥಾಪಕವಾದ**[1] ಜ್ಯೋತಿಷ್ಟೋಮವೇ ಮುಂತಾದ ಸೋಮಯಾಗಗಳನ್ನು ಹೇಳಿದೆ ಎಂದು ಮೇಲೆ ಹೇಳಿದ್ದಾಗಿದೆ. ಈ ಯಾಗಗಳಿಗೆ ಮೂರು ವೇದಗಳ ಸಂಬಂಧವೂ ಇದೆ ಎಂಬುದನ್ನೂ ತಿಳಿಸಿದ್ದಾಗಿದೆ. ಸೋಮ ಯಾಗಕ್ಕೆ ಋಗ್ವೇದಯಜುರ್ವೇದವಿಹಿತವಾದ ಕರ್ಮಗಳನ್ನು ಮಾಡುವದಕ್ಕೆ ನಾಲ್ಕುನಾಲ್ಕು ಜನ, ಸಾಮವೇದವಿಹಿತವಾದ ಕ್ರಿಯಾಕಲಾಪಗಳನ್ನು ಮಾಡುವವರು ನಾಲ್ಕು ಜನ, ಕರ್ಮಗಳಲ್ಲಿ ನ್ಯೂನಾತಿರೇಕಗಳನ್ನು ನೋಡುವದಕ್ಕೆ ನಾಲ್ಕು ಜನ -

1. ಸಂಸ್ಥೆ ಎಂದರೆ ಕ್ರತುವಿನ ಸಮಾಪ್ತಿ. ಯಾವ ಸಾಮವನ್ನು ಉಚ್ಚರಿಸಿದಮೇಲೆಯೇ ಯಾವ ಕ್ರತುವು ಮುಗಿಯುವದೋ ಅದು ಆ ಸಂಸ್ಥೆಯುಳ್ಳದ್ದು. ಉದಾಹರಣೆಗೆ ಅಗ್ನಿಷ್ಟೋಮ ಎಂಬುದು ಒಂದಾನೊಂದು ಸಾಮವು ; ಅದು ಯಾವ ಸೋಮಯಾಗದಲ್ಲಿರುವದೋ ಅಲ್ಲಿ ಅದನ್ನು ಗಾನಮಾಡಿದ ಬಳಿಕ ಮತ್ತೆ ಯಾವ ಗಾನವನ್ನೂ ಮಾಡುವದಿಲ್ಲ. ಆದ್ದರಿಂದ ಆ ಸಮಾಪ್ತಿಗೆ ಅಗ್ನಿಷ್ಟೋಮಸಂಸ್ಥೆ - ಎಂದು ಹೆಸರು. ಆದಕಾರಣ ಆ ಕ್ರತುವನ್ನು ಅಗ್ನಿಷ್ಟೋಮಸಂಸ್ಥಾಕವೆನ್ನುವರು. ಹೀಗೆ ಉಕ್ಥಸಂಸ್ಥಾಕ, ಷೋಡಶಿಸಂಸ್ಥಾಕ - ಎಂದು ಮುಂತಾಗಿ ಕ್ರತುಗಳನ್ನು ಕರೆಯುತ್ತಾರೆ. ಸಂಸ್ಥಾಪದವನ್ನು ಬಿಟ್ಟು ಅಗ್ನಿಷ್ಟೋಮ, ಉಕ್ಥ್ಯ- ಎಂದು ಮುಂತಾಗಿ ಸಂಕ್ಷೇಪವಾಗಿಯೂ ಕರೆಯುವದುಂಟು. ಇಂಥ ಸಂಸ್ಥೆಗಳು ಏಳು ಉಂಟು.

ಹೀಗೆ **ಹದಿನಾರು ಜನ ಋತ್ವಿಜರು** ಬೇಕಾಗುವರು. ಇವರೆಲ್ಲರೂ ಆಹಿತಾಗ್ನಿಗಳೇ ಆಗಿರಬೇಕು. ಯಾಗವನ್ನು ಮಾಡುವವನು ಯಜಮಾನನೆನಿಸುವನು ; ಅವನಿಗೆ ಋತ್ವಿಜರ ಸಹಾಯವಿಲ್ಲದೆ ಈ ಕರ್ಮಗಳನ್ನು ಮಾಡುವದು ಸಾಧ್ಯವೇ ಇಲ್ಲ. ಋತ್ವಿಜರ ವಿವರವು ಹೀಗಿರುತ್ತದೆ : ಹೋತೃ, ಮೈತ್ರಾವರುಣ, ಅಚ್ಛಾವಾಕ, ಗ್ರಾವಸ್ತುತ್ - ಇದು **ಹೋತೃಗಣ** ; ಅಧ್ವರ್ಯು, ಪ್ರತಿಪ್ರಸ್ಥಾತಾ, ನೇಷ್ಟಾ ಉನ್ನೇತಾ - ಇದು **ಅಧ್ವರ್ಯುಗಣ** ಉದ್ಗಾತೃ, ಪ್ರಸ್ತೋತೃ, ಪ್ರತಿಹರ್ತೃ, ಸುಬ್ರಹ್ಮಣ್ಯ - ಇದು **ಉದ್ಗಾತೃಗಣ** ; ಬ್ರಹ್ಮ, ಬ್ರಾಹ್ಮಣಾಚ್ಛಂಸಿ, ಆಗ್ನೀಧ್ರ, ಪೋತೃ - ಇದು ಬ್ರಹ್ಮಗಣ. ಈ ಗಣಗಳಲ್ಲಿ ಮೊದಲನೆಯವರಿಗೆ ಸಹಾಯಕರಾಗಿ ಮಿಕ್ಕ ಮೂರು ಮೂರು ಪುರುಷರು ; ಅವರನ್ನು ಹೋತೃಪುರುಷರು. ಅಧ್ವರ್ಯುಪುರುಷರು - ಎಂದು ಮುಂತಾಗಿ ಕರೆಯುತ್ತಾರೆ.

ಆಯಾ ದೇವತೆಯನ್ನುದ್ದೇಶಿಸಿ ಆಯಾ ಹವಿಸ್ಸನ್ನು ಕೊಡುವದೇ **ಯಾಗವು** **ಅಧ್ವರ್ಯುವು ಜುಹೂ** ಮುಂತಾದ ಪಾತ್ರೆಯಲ್ಲಿ ಹವಿಸ್ಸನ್ನಿಟ್ಟುಕೊಂಡು ಹೋತೃವನ್ನು ನೋಡಿ 'ಅಗ್ನಯೇऽನುಬ್ರೂಹಿ' (ಅಗ್ನಿಗಾಗಿ ಅನುವಾಕ್ಯಾಋಕ್ಕನ್ನು ಹೇಳು) ಎನ್ನುವನು. ಈ **ಪ್ರೈಷವು** (ಕೇಳಿಕೊಂಡದ್ದು) ಆದ ಬಳಿಕವೇ ಹೇಳುವದಾದ್ದರಿಂದ ಈ ಋಕ್ಕಿಗೆ **'ಅನುವಾಕ್ಯಾ'** ಎಂದು ಹೆಸರು. ಈ ಋಕ್ಕನ್ನು ಪಠಿಸಿದ ಮೇಲೆ **ಆಗ್ನೀಧ್ರ**ನನ್ನು ಕುರಿತು 'ಆಶ್ರಾವಯ' (ಹವಿಸ್ಸನ್ನು ಕೊಡುತ್ತೇನೆ, ದೇವತೆಗೆ ಇದನ್ನು ತಿಳಿಸು) ಎಂದು ಅಧ್ವರ್ಯು ಕೇಳಿಕೊಳ್ಳುವನು ; ಆಗ ಅವನು 'ಅಸ್ತು ಶ್ರೌಷಟ್' (ಆಗಲಿ ತಿಳಿಸುತ್ತೇನೆ) ಎನ್ನುವನು. ಇದಾದ ಬಳಿಕ **ಹೋತೃ**ವನ್ನು ಕುರಿತು 'ಯಜ' (ಪ್ರಕೃತದೇವತೆಯ **ಯಾಜ್ಯಾ**ಋಕ್ಕನ್ನು ಹೇಳು) ಎಂದು ಕೇಳಿಕೊಳ್ಳುವನು. ಹೋತೃವು ಆ ಋಕ್ಕನ್ನು ಹೇಳಿ ಅದರ ಕೊನೆಯಲ್ಲಿ 'ವೌಷಟ್', 'ವಷಟ್' ಮುಂತಾದ ವಷಟ್ಕಾರವನ್ನು ಹೇಳುತ್ತಾನೆ. ಇದಾದಮೇಲೆ **ಅಧ್ವರ್ಯುವು** ತನ್ನ ಕೈಯಲ್ಲಿದ್ದ ಹವಿಸ್ಸನ್ನು ಅಗ್ನಿಯಲ್ಲಿ ಹಾಕಬೇಕು ; ಹಾಗೆ ಹಾಕುವ ಸಮಕಾಲದಲ್ಲಿಯೇ **ಯಜಮಾನನು** ದೇವತೆಗಾಗಿ ಹವಿಸ್ಸಿನ ಸ್ವತ್ವದ ತ್ಯಾಗವನ್ನು ತಿಳಿಸುವಂತೆ (ಇದಮಗ್ನಯೇ ನ ಮಮ, ಅಗ್ನಯ ಇದಂ ನ ಮಮ - ಮುಂತಾದದ್ದನ್ನು ಇದು ನನ್ನದಲ್ಲ ಅಗ್ನಿಗೋಸ್ಕರವಿದು ಎಂಬರ್ಥವನ್ನು ಸೂಚಿಸುವದಕ್ಕಾಗಿ) ಉಚ್ಚರಿಸಬೇಕು. ಇಷ್ಟಿಗಳಲ್ಲಿ ಇದು ಸಾಮಾನ್ಯಕ್ರಮವು. ಪಶುಸೋಮ ಯಾಗಗಳಲ್ಲಿ ಮಾತ್ರ **ಮೈತ್ರಾವರುಣ**ನೆಂಬ ಹೋತೃಗಣದ ಎರಡನೆಯ

ಋತ್ವಿಜನು **ಪುರೋನುವಾಕ್ಯಾ** ಎಂಬ ಋಕ್ಕನ್ನು ಹೇಳಿದ ಬಳಿಕವೇ ಹೋತೃವು ಯಾಜ್ಯಾಋಕ್ಕನ್ನು ಪಠಿಸಬೇಕಾಗುವದು. ಗಾನವಿಲ್ಲದೆ ಸ್ವರತ್ರಯವೂ ಇಲ್ಲದೆ ಒಂದೇ ಸ್ವರದ ಋಕ್ಕಿನಿಂದ ಮಾಡುವ ದೇವತಾಸ್ತುತಿಗೆ **ಶಸ್ತ್ರ**ವೆಂದು ಹೆಸರು ; ಹೋತೃವು ಶಸ್ತ್ರವನ್ನು ಹೇಳುತ್ತಿರುವಾಗ ಅಧ್ವರ್ಯುವು ಅವನನ್ನು ಪ್ರೋತ್ಸಾಹಿಸುವದಕ್ಕಾಗಿ 'ಓಥಾಮೋ ದೇವ', 'ಮದಾಮೋದ ಇವ' ಎಂದು ಮುಂತಾಗಿ ಪಠಿಸುವ ವಾಕ್ಯಕ್ಕೆ 'ಪ್ರತಿಗರ'ವೆಂದು ಹೆಸರು. ಇದರ ಪ್ರಕಾರ ವಿಶೇಷಗಳನ್ನು ಆಯಾ ಸೂತ್ರಗಳಲ್ಲಿ ವಿವರಿಸಿರುತ್ತದೆ.

ಯಾಗದಲ್ಲಿ ಸವನಗಳು, ಮಂತ್ರಗಳ ಛಂದಸ್ಸು

ಸೋಮಯಾಗದಲ್ಲಿ ಪ್ರಾತಃಸವನ, ಮಾಧ್ಯಾಹ್ನಿಕಸವನ, ಸಾಯಂಸವನ - ಎಂಬ ಮೂರು ನಿಯತಕಾಲಗಳಿರುತ್ತವೆ. ಆಗಲೆ ಸೋಮವನ್ನು ಹಿಂಡಿ ಯಾಗವನ್ನು ಮಾಡತಕ್ಕದ್ದು. ಇಂಥಿಂಥ ಸವನಕಾಲಕ್ಕೆ, ಇಂಥಿಂಥದ್ದು ಅಧಿದೇವತೆ, ಅದರ ಮುಂದೆ ಅಥವಾ ಹಿಂದೆ ಇಂಥಿಂಥ ಮಂತ್ರಗಳನ್ನು ವಿನಿಯೋಗಿಸತಕ್ಕದ್ದೆಂಬ ನಿಯಮವುಂಟು. ಮಂತ್ರಗಳು ಋಕ್ಕು, ಸಾಮ, ಯಜುಸ್ಸು - ಎಂಬ ಮೂರು ಪ್ರಕಾರವಾಗಿರುತ್ತವೆ. ಋಕ್ಕುಗಳು ಇಂತಿಷ್ಟು ಅಕ್ಷರದ ಇಂತಿಷ್ಟು ಪಾದದಲ್ಲಿದ್ದರೆ ಇಂಥಿಂಥ ಛಂದಸ್ಸಿಗೆ ಸೇರಿದವು ಎಂಬ ನಿಯಮವಿದೆ. ಸಾಮಗಳಿಗೆ ಋಕ್ಕುಗಳೇ ಮೂಲವಾಗಿರುವದರಿಂದ ಅವುಗಳಿಗೇ ಅದೇ ಛಂದಸ್ಸುಗಳೆಂಬುದು ಸ್ಪಷ್ಟವಾಗಿದೆ. ಯಜುಸ್ಸುಗಳಿಗೆ ಮಾತ್ರ ಈ ನಿಯಮವಿಲ್ಲ. ಮಂತ್ರಗಳ ಋಷಿ, ಛಂದಸ್ಸು, ದೇವತೆ, ವಿನಿಯೋಗ - ಇಷ್ಟನ್ನು ತಿಳಿದಿರಬೇಕಾದದ್ದು ಅವಶ್ಯವು. ವೇದದಲ್ಲಿ ಬರುವ ಛಂದಸ್ಸುಗಳು ಯಾವವೆಂದರೆ ಗಾಯತ್ರೀ, ಉಷ್ಣಿಕ್, ಅನುಷ್ಟುಪ್ ; ಬೃಹತೀ, ಪಙ್ಕ್ತಿ, ತ್ರಿಷ್ಟುಪ್, ಜಗತೀ - ಎಂಬೀ ಏಳು. ಗಾಯತ್ರಿಗೆ ಇಪ್ಪತ್ತು ನಾಲ್ಕು ಅಕ್ಷರಗಳು; ಅದಕ್ಕಿಂತ ನಾಲ್ಕು ಹೆಚ್ಚು ಅಕ್ಷರಗಳು ಅಂದರೆ ಇಪ್ಪತ್ತೆಂಟು ಉಷ್ಣಿಕ್ಛಂದಸ್ಸಿಗೆ ; ಹೀಗೆಯೇ ಮುಂದುಮುಂದಕ್ಕೆ ಹೆಚ್ಚು ಅಕ್ಷರಗಳು ಅನುಷ್ಟುಬಾದಿಗಳಿಗೆ ಇರುತ್ತವೆ. ಇವುಗಳಲ್ಲಿ ಗಾಯತ್ರಿಗೇ ಹೆಚ್ಚಿನ ಪ್ರಾಶಸ್ತ್ಯವನ್ನು ವೇದದಲ್ಲಿ ಕೊಟ್ಟಿರುತ್ತದೆ.

ಸ್ತೋತ್ರಗಳು. ಸ್ತೋಮಗಳು

ಆಯಾ ಗ್ರಹ, ಚಮಸ - ಮುಂತಾದ ಪಾತ್ರೆಗಳಲ್ಲಿ ಆಯಾ ದೇವತೆಗಳಿಗೆ ಸ್ಕರ ಸೋಮರಸವನ್ನು ಇಟ್ಟುಕೊಂಡಾದ ಮೇಲೆ, ಸದಸ್ಸೆಂಬ ಮಂಟಪದ **'ಔದುಂಬರೀ'** ಎಂಬ ಕಂಬದ ಬಳಿಯಲ್ಲಿ[1] ಕುಳಿತುಕೊಂಡರುವ ಉದ್ಗಾ ಪ್ರಸ್ತೋತೃ, ಪ್ರತಿಹರ್ತೃ - ಎಂಬ ಮೂವರು ಋತ್ವಿಜರು ಸಾಮವಿಶಿಷ್ಟವಾ ಋಕ್ಕುಗಳಿಂದ ಮಾಡುವ ಸ್ತುತಿಗೆ **ಸ್ತೋತ್ರ**ವೆಂದು ಹೆಸರು. ಆಗ ಒಂದೊಂ ಸಾಮವನ್ನು ಮೂರು ಮೂರು ಋಕ್ಕುಗಳಿಂದ ಗಾನಮಾಡಬೇಕಾಗುವದ ಗಾನಕ್ಕೆ ಇಂತಿಷ್ಟೆಂಬ ಸಂಖ್ಯೆಯನ್ನು ವಿಧಿಸಿ ಹೇಳಿರುತ್ತ , ಆ ಸಂಖ್ಯೆಗಳ **ಸ್ತೋಮ**ಗಳು ಎಂದು ಹೆಸರು. ತ್ರಿವೃತ್ (ಒಂಬತ್ತು), ಪಂಚದಶ (ಹದಿನೈದು) ಸಪ್ತದಶ (ಹದಿನೇಳು), ಏಕವಿಂಶ (ಇಪ್ಪತ್ತೊಂದು), ತ್ರಿಣವ (ಇಪ್ಪತ್ತೇಳು), ತ್ರಯಸ್ತ್ರಿಂಶ (ಮೂವತ್ತುಮೂರು), ಚತುರ್ವಿಂಶ (ಇಪ್ಪತ್ತುನಾಲ್ಕು), ಚತುಶ್ಚತ್ವಾರಿಂಶ (ನಲವತ್ತುನಾಲ್ಕು), ಅಷ್ಟಾಚತ್ವಾರಿಂಶ(ನಲವತ್ತೆಂಟು) - ಹೀಗೆ ಸಂಖ್ಯಾವಿಶೇಷಗಳಿಂದ **ಈ ಸ್ತೋಮಗಳು ಒಂಬತ್ತು** ಬಗೆಯಾಗಿರುತ್ತದೆ.

ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಸಂಖ್ಯೆಯ ಸ್ತೋತ್ರಗಳನ್ನು ಗಾನ ಮಾಡಬೇಕೆಂದು ವಿಧಿಸಿರುತ್ತದೆಯೋ ಅಲ್ಲಲ್ಲಿ ಮೂರು ಋಕ್ಕುಗಳನ್ನು ಮೂರು ಸಲ ಆವೃತ್ತಿಮಾಡಿಕೊಂಡು ಆಯಾ ಸಂಖ್ಯೆಯನ್ನು ಏರ್ಪಡಿಸಿಕೊಳ್ಳಬೇಕಾಗುವದು. ಉದಾಹರಣೆಗೆ **ಮಾಧ್ಯಂದಿನ ಪವಮಾನ** ಎಂಬ ಒಂದು ಸ್ತೋತ್ರವುಂಟು. ಅದರಲ್ಲಿ **ಒಂದನೆಯ ಪರ್ಯಾಯಕ್ಕೆ** ಮೊದಲನೆಯ ಋಕ್ಕನ್ನು ಮೂರು ಸಾರಿ, ಎರಡನೆಯ ಮೂರನೆಯ ಋಕ್ಕುಗಳನ್ನು ಒಂದೊಂದು ಸಾರಿ, ಹೀಗೆ ಗಾನಮಾಡಬೇಕು ; **ಎರಡನೆಯ ಪರ್ಯಾಯಕ್ಕೆ** ಅದೇ ಒಂದನೆಯ ಋಕ್ಕನ್ನು ಒಂದು ಸಾರಿ, ಎರಡನೆಯದನ್ನು ಮೂರು ಸಾರಿ, ಮೂರನೆಯದನ್ನು ಒಂದು ಸಾರಿ- ಹೀಗೆ ಗಾನಮಾಡಬೇಕು ; **ಮೂರನೆಯ ಪರ್ಯಾಯಕ್ಕೆ** ಒಂದೆರಡನೆಯ ಋಕ್ಕುಗಳನ್ನು ಒಂದೊಂದು ಸಾರಿ, ಮೂರನೆಯದನ್ನು ಮೂರು ಸಾರಿ - ಹೀಗೆ ಗಾನಮಾಡಬೇಕು. ಇಲ್ಲಿಗೆ ಹದಿನೈದು ಸಾರಿಯಾಗುವದರಿಂದ ಇದು

---

1. ಇದರಲ್ಲಿ ಉತ್ತರಕ್ಕೆ ಮುಖವಾಗಿ ಉದ್ಗಾತೃ ಪಶ್ಚಿಮಕ್ಕೆ ಪ್ರಸ್ತೋತೃ ದಕ್ಷಿಣಕ್ಕೆ ಪ್ರತಿಹರ್ತೃ, ಮಿಕ್ಕ ಹೋತ್ರಾದಿಋತ್ವಿಜರು ಪೂರ್ವಾಭಿಮುಖರಾಗಿರುವರು ಎಂದು ತಾ. ಬ್ರಾ. ೬-೪-೧೪.

ಪಂಚವಿಂಶತಿಸ್ತೋಮವೆನಿಸುತ್ತದೆ. ಈ ಸ್ತೋಮಕ್ಕೆ ಈಗ ಹೇಳಿದ ಪ್ರಕಾರವಲ್ಲದೆ ಇನ್ನೂ ಎರಡು ಪ್ರಕಾರಗಳುಂಟು. ಇದರಂತೆ ಮೇಲೆ ಹೇಳಿದ ಒಂಬತ್ತು ಸ್ತೋಮಗಳಿಗೂ ಇಂಥ **ವಿಷ್ಟುತಿ**ಗಳು ಒಟ್ಟು ಇಪ್ಪತ್ತೆಂಟು ಇರುತ್ತವೆ. ಈ ವಿಷ್ಟುತಿಗಳನ್ನೆಲ್ಲ ಬ್ರಾಹ್ಮಣದಲ್ಲಿ ವಿವರಿಸಿ ಹೇಳಿದೆ. ಗಾನಗಳನ್ನು ಎಣಿಸುವದಕ್ಕೆ 'ಕುಶಾ' ಎಂಬ ಹೆಸರಿನ ಚೋಟುದ್ದದ ಚೂಪುತುದಿಯುಳ್ಳ ಅತ್ತಿಮರದ ಕಡ್ಡಿಗಳನ್ನು ಒಂದಾನೊಂದು ಗೊತ್ತಾದ ಕ್ರಮದಿಂದ ಅಡ್ಡಡ್ಡಲಾಗಿ ಅಥವಾ ನೀಟಾಗಿ ಇಡುವರು. ಉದಾಹರಣೆಗೆ ಮೇಲೆ ವಿವರಿಸಿದ ಮಾಧ್ಯಂದಿನಪವಮಾನದ ವಿಷ್ಟುತಿಪ್ರಕಾರಕ್ಕೆ ಹೀಗೆ ಕುಶಾನಿಕ್ಷೇಪಮಾಡಬೇಕು :

(೩) — — ೦

(೨) । ೦ ।

(೧) ೦ — —

ಸಾಮದಲ್ಲಿ ಭಕ್ತಿಗಳು, ಸ್ತೋಭಗಳು

ಸಾಮವನ್ನು ಅವಯವಗಳಾಗಿ ವಿಂಗಡಿಸಿಕೊಂಡು ಉದ್ಗಾತೃವೇ ಮುಂತಾದವರು ಪಠಿಸುತ್ತಾರೆ. ಇವಕ್ಕೆ **ಭಕ್ತಿ**ಗಳು ಎಂದು ಸಂಜ್ಞೆ. ಸಾಮದ ಆದಿಯಲ್ಲಿ ಉದ್ಗಾತೃವು ಪಠಿಸುವ ಓಮ್ ಎಂಬ ಶಬ್ದವು **ಹಿಂಕಾರವು** ; ಪ್ರಸ್ತೋತೃವು ಗಾನಮಾಡುವ ಸಾಮಾವಯವವು **ಪ್ರಸ್ತಾವವು** ; ಉದ್ಗಾತೃವು ಗಾನ ಮಾಡುವ ಭಾಗವು **ಉದ್ಗೀಥವು** ; ಪ್ರತಿಹರ್ತೃವು ಗಾನಮಾಡುವ ಭಾಗವು **ಪ್ರತಿಹಾರವು** ; ಕೊನೆಯಲ್ಲಿ ಎಲ್ಲರೂ ಒಟ್ಟಾಗಿ ಮಾಡುವ ಗಾನಭಾಗವು **ನಿಧನವು**. ಇವು ಪಂಚಭಕ್ತಿಗಳು. ಆದಿ ಎಂಬ ಹೆಸರಿನ ಓಂಕಾರವನ್ನೂ **ಉಪದ್ರವ** ಎಂಬ ಉಪಾಂತ್ಯಭಾಗವನ್ನೂ ಸೇರಿಸಿಕೊಂಡರೆ ಸಾಮಕ್ಕೆ ಸಪ್ತಭಕ್ತಿಗಳಾಗುವವು ; ಈ ಎರಡು ಭಕ್ತಿಗಳನ್ನೂ ಉದ್ಗಾತೃವೇ ಹಾಡುತ್ತಾನೆ.

ಸಾಮಗಳನ್ನು ಗಾನಮಾಡುವಾಗ ಗಾನಕ್ಕಾಗಿ ಸಾಮವೇದಿಗಳು ನಡುನಡುವೆ ಸೇರಿಸಿಕೊಳ್ಳುವ ಅರ್ಥಶೂನ್ಯವಾದ ಅಕ್ಷರಗಳಿಗೆ **ಸ್ತೋಭ**ಗಳು ಎಂದು ಹೆಸರು. ಹಾಉ, ಹಾಇ, ಅಥ, ಇಹ, ಈ ಊ, ಏ, ಔಹೋಇ, ಹಾ, ಸ್ವರ, ಪಾಕ್, ಅನಿರುಕ್ತವಾದ ಹುಂಕಾರ - ಇಷ್ಟು ಸ್ತೋಭಗಳ ಹೆಸರುಗಳನ್ನೂ

ಮೇಲೆ ಹೇಳಿದ ಸಾಮಭಕ್ತಿಗಳ ಹೆಸರುಗಳನ್ನೂ ಛಾಂದೋಗ್ಯೋಪನಿಷತ್ತಿನಲ್ಲಿ ಉಪಾಸನಾಪ್ರಸಂಗದಿಂದ ಪರಾಮರ್ಶಿಸಿರುವದು ಕಂಡುಬರುತ್ತದೆ. ಇಂಥಿಂಥ ಸ್ತೋಭಗಳು ರಥಂತರ, ವಾಮದೇವ - ಮುಂತಾದ ಇಂಥಿಂಥ ಹೆಸರಿನ ಸಾಮದಲ್ಲಿ ಕಾಣಬರುತ್ತವೆ - ಎಂದು ಉಪನಿಷದ್ಭಾಷ್ಯದಲ್ಲಿ ಹೇಳಿದೆ. ಈ ಸಾಮಗಳ ಹೆಸರುಗಳನ್ನು ಶಬ್ದಾನುಕ್ರಮಣಿಕೆಯಲ್ಲಿ ನೋಡಬೇಕು.

ಷಡ್ವಿಂಶಾದಿಬ್ರಾಹ್ಮಣಗಳು

(೨) **ಷಡ್ವಿಂಶ**ವೆಂಬ ಎರಡನೆಯ ಬ್ರಾಹ್ಮಣವು ತಾಂಡ್ಯಬ್ರಾಹ್ಮಣದ ಶೇಷವೇ. ತಾಂಡ್ಯೋಕ್ತವಾದ ಕೆಲವು ಕರ್ಮಗಳ ವಿಶೇಷವನ್ನೂ ಅಲ್ಲಿ ಹೇಳದಿರುವ ಕೆಲವು ಕರ್ಮಗಳನ್ನೂ ಇಲ್ಲಿ ಪ್ರತಿಪಾದಿಸಿದೆ. (೩) **ಸಾಮವಿಧಾನ**ಬ್ರಾಹ್ಮಣದಲ್ಲಿ ಕೃಚ್ಛ್ರಚಾಂದ್ರಾಯಣಾದಿಪ್ರಾಯಶ್ಚಿತ್ತಗಳನ್ನು ಹೇಳಿದೆ ; ಅವೆಲ್ಲ ಆಯಾ ಸಾಮಾಧ್ಯಯನರೂಪವಾಗಿರುತ್ತವೆ. ಅವಕ್ಕೆ ಅಂಗವಾದ ಕೆಲವು ಹೋಮಗಳನ್ನೂ ಅಲ್ಲಿ ಹೇಳಿದೆ. (೪) **ಆರ್ಷೇಯಬ್ರಾಹ್ಮಣ**ದಲ್ಲಿ ಸಂಹಿತೋಕ್ತವಾದ ಸಾಮಗಳ ಋಷ್ಯಾದಿಗಳನ್ನು ತಿಳಿಸಿದೆ. (೫) ದೈವತಬ್ರಾಹ್ಮಣದಲ್ಲಿ ನಿಧನದೇವತೆಗಳು, ಛಂದಸ್ಸುಗಳು, ಅವುಗಳ ದೇವತೆಗಳು - ಮುಂತಾದ ವಿಷಯಗಳಿವೆ. (೬) **ಉಪನಿಷತ್ತು** ಆರನೆಯ ಬ್ರಾಹ್ಮಣಗ್ರಂಥವೆಂದು ಪರಿಗಣಿಸಲಾಗಿದೆ. ಇದರ ವಿಷಯಕ್ಕೆ **ಪೀಠಿಕೆ**ಯನ್ನು ನೋಡಿ. (೭) **ಸಂಹಿತೋಪನಿಷತ್ತಿನಲ್ಲಿ** ಮಂತ್ರಸಂಹಿತಾಭೇದಗಳು, ಅಧ್ಯಯನಪ್ರಶಂಸೆ - ಮುಂತಾದ ವಿಚಾರಗಳಿವೆ. (೮) **ವಂಶಬ್ರಾಹ್ಮಣ**ವೆಂಬುದು ಕೊನೆಯ ಬ್ರಾಹ್ಮಣವು. ಅದರಲ್ಲಿ ಸಂಪ್ರದಾಯಪ್ರವರ್ತಕರಾದ ಆಚಾರ್ಯರ ಪರಂಪರೆಯ ವರ್ಣನೆಯಿದೆ.

ಒಂದನೆಯ ಅಧ್ಯಾಯದ ಸಾರ

ಈ ಅಧ್ಯಾಯದಲ್ಲಿ ಮುಖ್ಯವಾಗಿ ಉದ್ಗೀಥಾವಯವವಾದ ಓಂಕಾರದ ಉಪಾಸನೆಗಳೂ ಸ್ತೋಭಗಳ ಉಪಾಸನೆಗಳೂ ಇರುತ್ತವೆ. ಇಲ್ಲಿರುವ ಸಂಖ್ಯೆಗಳು ಕ್ರಮವಾಗಿ ಖಂಡ, ಕಂಡಿಕೆ-ಇವನ್ನು ಸೂಚಿಸುವವು.

ಒಂದನೆಯ ಖಂಡ

೧-೮. ಪೃಥ್ವಿ, ಅಪ್ಪು, ಸಸ್ಯಗಳು, ಪುರುಷ, ವಾಕ್ಕು, ಋಕ್ಕು, ಸಾಮ, ಉದ್ಗೀಥ- ಇವುಗಳಲ್ಲಿ ಹಿಂದಿನದರ ರಸವು ಮುಂದಿನದು ; ಆದ್ದರಿಂದ ಉದ್ಗೀಥವು, ಎಂದರೆ ಅದರ ಅವಯವವಾದ ಓಂಕಾರವು ರಸಗಳಲ್ಲೆಲ್ಲ ರಸತಮವು, ವಾಕ್ಕೆಂಬ ಋಕ್ಕಾರಣ, ಪ್ರಾಣವೆಂಬ ಸಾಮಕಾರಣ - ಇವೆರಡೂ ಸೇರಿದ ಮಿಥುನವು ಓಂಕಾರದಲ್ಲಿ ಸೇರಿಕೊಂಡಿರುತ್ತದೆ. ದಂಪತಿಗಳು ಕೂಟದಿಂದ ತಮ್ಮ ತಮ್ಮ ಕಾಮವನ್ನು ಪಡೆಯುವಂತೆ, ಓಂಕಾರವು ಆಪ್ತಿಗುಣವುಳ್ಳದ್ದೆಂದು ಉಪಾಸನೆಮಾಡಿ ದಾತನಿಗೂ ಕಾಮಗಳ ಆಪ್ತಿಯಾಗುವದು. ಓಂಕಾರವು ಅನುಜ್ಞಾಕ್ಷರವಾಗಿರುವದರಿಂದ ಸಮೃದ್ಧಿಗುಣವುಳ್ಳದ್ದೂ ಆಗಿದೆ.

೯-೧೦. ವೇದೋಕ್ತಕರ್ಮವೆಲ್ಲವೂ ಓಂಕಾರಪೂರ್ವಕವಾಗಿಯೇ ನಡೆಯುತ್ತದೆ ; ಕರ್ಮದಲ್ಲಿರುವ ಋತ್ವಿಗ್ಯಜಮಾನರೇ ಮುಂತಾದವರು ಇದರ ಮಹಿಮೆ. ವ್ರೀಹಿಯವಾದಿಗಳು ಇದರ ರಸವು. ಆದ್ದರಿಂದ ಕರ್ಮವು ಸಫಲವಾಗುತ್ತದೆ. ಈ ಅಕ್ಷರದ ರಸತಮತ್ವ, ಆಪ್ತಿ, ಸಮೃದ್ಧಿ - ಎಂಬ ಗುಣ ವಿಶೇಷಗಳನ್ನು ಅರಿತುಕೊಂಡು ಕರ್ಮವನ್ನು ಮಾಡುವವನ ಕರ್ಮವು ಸಾಮಾನ್ಯರ ಕರ್ಮಕ್ಕಿಂತಲೂ ವೀರ್ಯವತ್ತರವಾಗುವದು.

ಎರಡನೆಯ ಖಂಡ

೧-೭. ದೇವಾಸುರರ ಸಂಗ್ರಾಮದಲ್ಲಿ ದೇವತೆಗಳು ಜ್ಯೋತಿಷ್ಟೋಮಾದಿಕರ್ಮದಲ್ಲಿ ಬರುವ ಔದ್ಗಾತ್ರಕರ್ಮವನ್ನು ಸ್ವೀಕರಿಸಿದರು. ಅವರು ಅನುಕ್ರಮದಿಂದ ಘ್ರಾಣ, ವಾಕ್ಕು, ಚಕ್ಷು, ಶ್ರೋತ್ರ, ಮನಸ್ಸು - ಈ ಮುಂತಾದ ದೇವತೆಗಳ ದೃಷ್ಟಿಯಿಂದ ಉದ್ಗೀಥಾವಯವವಾದ ಓಂಕಾರವನ್ನು ಉಪಾಸನೆ ಮಾಡಿದರು ; ಆದರೆ ಅಸುರರು ಆ ದೇವತೆಗಳನ್ನು ಅಧರ್ಮಾಸಂಗರೂಪವಾದ

ಪಾಪಸಂಬದ್ಧರನ್ನಾಗಿಮಾಡಿದರು. ಆಗ ದೇವತೆಗಳು ಆ ಘ್ರಾಣಾದಿದೇವತೆಗಳನ್ನು ಕೈಬಿಟ್ಟು ಮುಖ್ಯಪ್ರಾಣದೃಷ್ಟಿಯಿಂದಲೇ ಓಂಕಾರವನ್ನು ಉಪಾಸನೆಮಾಡಿದರು. ಅಸುರರು ಆ ಪ್ರಾಣನಮೇಲೆ ಬೀಳುವದಕ್ಕೆ ಯತ್ನಿಸುತ್ತಿರುವಲ್ಲಿ ಕಲ್ಲುಬಂಡೆಯ ಮೇಲೆ ಬಿದ್ದ ಮಣ್ಣುಹೆಂಟೆಯಂತೆ ಪುಡಿಪುಡಿಯಾದರು.

೮-೯. ಆದ್ದರಿಂದ ಯಾವನು ಉದ್ಗೀಥೋಂಕಾರವನ್ನು ಪ್ರಾಣದೃಷ್ಟಿಯಿಂದ ಉಪಾಸನೆಮಾಡುವನೋ ಅವನ ವಿಷಯದಲ್ಲಿ ಕೆಟ್ಟದ್ದನ್ನಾಚರಿಸುವದಕ್ಕೆ ಹೋಗುವವನು ಕಲ್ಲುಬಂಡೆಯ ಮೇಲೆ ಬೀಳುವ ಮಣ್ಣುಹೆಂಟೆಯಂತೆ ವಿಧ್ವಸ್ತನಾಗುವನು. ಮುಖ್ಯಪ್ರಾಣನು ಯಾವ ಪಾಪಸಂಬಂಧವೂ ಇಲ್ಲದವನು ; ತಾನು ತಿಂದು ಕುಡಿಯುವದರಿಂದಲೇ ಮಿಕ್ಕ ಪ್ರಾಣಗಳನ್ನು ಕಾಪಾಡುತಾನೆ.

೧೦-೧೪. ಈ ಮುಖ್ಯಪ್ರಾಣನನ್ನು ಅಂಗಿರಸೆಂಬ ಋಷಿಯು ಅಂಗಿರಸನು- ಅಂಗಗಳ ರಸವುಳ್ಳವನು - ಎಂಬ ಗುಣದಿಂದ ಕೂಡಿದವನೆಂದೂ, ಬೃಹಸ್ಪತಿಯು ಬೃಹಸ್ಪತಿ, ದೊಡ್ಡದಾದ ವಾಕ್ಕಿನ ಪತಿ- ಎಂಬ ಗುಣದಿಂದ ಕೂಡಿದವನೆಂದೂ ಉಪಾಸನೆಮಾಡಿದರು. ಆದ್ದರಿಂದ ಪ್ರಾಣನಿಗೆ ಅಂಗಿರಸತ್ವಾದಿ ಗುಣಗಳಿರುವವೆಂದು ಆಯಾಸ್ಯನು ಆಸ್ಯದಿಂದ ಬರುವವನು - ಎಂಬ ಗುಣದಿಂದ ಕೂಡಿದವನೆಂದೂ ತಿಳಿಯಬೇಕು. ಬಕದಾಲ್ಭ್ಯನೆಂಬ ಋಷಿಯು ಮೇಲೆ ಹೇಳಿದಂಥ ಪ್ರಾಣನನ್ನು ಉಪಾಸನೆಮಾಡಿದ್ದರಿಂದ ನೈಮಿಷೀಯರಿಗೆ ಉದ್ಗಾತೃವಾಗಿದ್ದಾಗ ಅವರ ಕಾಮಗಳನ್ನೆಲ್ಲ ಆಗಾನಮಾಡಿಕೊಟ್ಟನು. ಹೀಗೆಯೇ ಈ ಗುಣಗಳಿಂದೊಡಗೂಡಿ ಪ್ರಾಣನೆಂಬ ದೃಷ್ಟಿಯಿಂದ ಉದ್ಗೀಥೋಂಕಾರವನ್ನು ಯಾವನು ಉಪಾಸನೆಮಾಡುವನೋ ಅವನು ಕಾಮಗಳನ್ನು ಗಾನಮಾಡಬಲ್ಲವನಾಗುವನು ; ಅವನಿಗೆ ಪ್ರಾಣಾತ್ಮಭಾವವೆಂಬ ದೃಷ್ಟಫಲವೂ ಆಗುವದು.

ಇಲ್ಲಿಯವರೆಗೆ ಹೇಳಿದ್ದು ಅಧ್ಯಾತ್ಮವಾದ ಉದ್ಗೀಥೋಪಾಸನೆ.

ಮೂರನೆಯ ಖಂಡ

೧-೫. ಇನ್ನು ಅಧಿದೈವತವಾದ ಉದ್ಗೀಥೋಪಾಸನೆಯನ್ನು ಹೇಳಲಾಗುವದು.

ಆದಿತ್ಯದೃಷ್ಟಿಯಿಂದ ಉಪಾಸನೆಮಾಡಿದರೆ ಸಂಸಾರಭಯವೂ ಅದಕ್ಕೆ ಕಾರಣವಾದ ತಮಸ್ಸೂ ತೊಲಗುವವು. ಪ್ರಾಣನೂ ಆದಿತ್ಯನೂ ಉಷ್ಣಗುಣ

ದಿಂದಲೂ ಸ್ವರ, ಪ್ರತ್ಯಾಸ್ವರ ಎಂಬ ನಾಮದಿಂದಲೂ ಸಮಾನರಾಗಿರುತ್ತಾರೆ ; ಆದ್ದರಿಂದ ಅವರಿಬ್ಬರ ದೃಷ್ಟಿಯಿಂದಲೂ ಉದ್ಗೀಥವನ್ನು ಉಪಾಸನೆಮಾಡಬೇಕು ; ಪ್ರಾಣವೃತ್ತಿಯಾದ ವ್ಯಾನದ ದೃಷ್ಟಿಯಿಂದಲೂ ಉದ್ಗೀಥವನ್ನು ಉಪಾಸನೆ ಮಾಡ ಬೇಕು ; ಏಕೆಂದರೆ ವ್ಯಾನದಿಂದಲೇ ವಾಕ್ಕನ್ನೂ ಸಾಮವನ್ನೂ ಉಚ್ಚಾರಣ ಮಾಡುತ್ತಾರೆ, ವೀರ್ಯವತ್ಕರ್ಮಗಳನ್ನು ಅದರಿಂದಲೇ ಮಾಡುತ್ತಾರೆ. ಈ ಉಪಾಸನೆಯಿಂದ ಕರ್ಮವು ವೀರ್ಯವತ್ತರವಾಗುವದು.

೬-೭. ಇನ್ನು ಉದ್ಗೀಥವೆಂಬ ಹೆಸರಿನ ಅಕ್ಷರಗಳನ್ನು ಹೀಗೆ ಉಪಾಸನೆ ಮಾಡಬೇಕು : ಪ್ರಾಣದಿಂದ (ಉತ್ತಿಷ್ಠತಿ) ಮನುಷ್ಯನು ಮೇಲಕ್ಕೇಳುತ್ತಾನಾದ್ದರಿಂದ ಉತ್ ಎಂಬುದನ್ನು ಪ್ರಾಣನೆಂದು ; ವಾಕ್ಕನ್ನು ಗೀಃ ಎಂದು ಕರೆಯುವದರಿಂದ ಗೀ ಎಂಬುದನ್ನು ವಾಕ್ಕೆಂದು ; ಅನ್ನದಲ್ಲಿ ಎಲ್ಲವೂ ಸ್ಥಿತವಾಗಿ (ಆಶ್ರಯಿಸಿರುವ ದಾಗಿ)ರುವದರಿಂದ ಥ ಎಂಬುದನ್ನು ಅನ್ನವೆಂದು ಉಪಾಸನೆಮಾಡಬೇಕು. ಇದರಂತೆ ಉತ್ತನ್ನು ದ್ಯುಲೋಕವೆಂದೂ ಗೀ ಎಂಬುದನ್ನು ಪೃಥಿವಿಯೆಂದೂ ಥ ಎಂಬುದನ್ನು ಆದಿತ್ಯನೆಂದೂ - ಉಪಾಸನೆಮಾಡಿದರೆ ವಾಗ್ಭೋಹವನ್ನು ಎಂದರೆ ಋಗ್ವೇದಾದಿಶಬ್ದಸಾಧ್ಯವಾದ ಫಲವನ್ನು ವಾಕ್ಕು ಕೊಡುವದಲ್ಲದೆ ಉಪಾಸಕನು ಅನ್ನವಂತನೂ ಅನ್ನಾದನೂ ಆಗುವನು.

೮-೧೨. ಇನ್ನು ಕಾಮಸಮೃದ್ಧಿಗೆ ಮಾಡಬೇಕಾದದಿದು ಯಾವ ಸಾಮದಿಂದ ಸ್ತೋತ್ರಮಾಡಲಿರುವನೋ ಆ ಸಾಮವನ್ನು ಚಿಂತಿಸಬೇಕು ; ಯಾವ ಛಂದಸ್ಸಿನಿಂದ ಸ್ತೋತ್ರಮಾಡಲಿರುವನೋ, ಯಾವ ಸ್ತೋಮದಿಂದ ಸ್ತೋತ್ರಮಾಡಲಿರುವನೋ ಆ ಛಂದಸ್ಸನ್ನೂ ಆ ಸ್ತೋಮವನ್ನೂ ಚಿಂತಿಸಬೇಕು ; ಯಾವ ದಿಕ್ಕಿಗೆ ಸ್ತೋತ್ರಮಾಡಲಿರುವನೋ ಆ ದಿಕ್ಕನ್ನು ಚಿಂತಿಸಿಕೊಳ್ಳಬೇಕು. ಕೊನೆಗೆ ತನ್ನನ್ನು ಗೋತ್ರನಾಮಾದಿಗಳಿಂದ ಚಿಂತಿಸಿಕೊಂಡು ತನ್ನ ಕಾಮವನ್ನು ನೆನೆಸಿಕೊಳ್ಳುತ್ತಾ ಸ್ತೋತ್ರಮಾಡಬೇಕು. ಯಾವ ಕಾಮವುಳ್ಳವನಾಗಿ ಸ್ತೋತ್ರ ಮಾಡುವನೋ ಆ ಕಾಮವು ಸಮೃದ್ಧವಾಗುವದು.

ನಾಲ್ಕನೆಯ ಖಂಡ

೧-೪. ದೇವತೆಗಳು ಮೃತ್ಯುವಿಗೆ ಅಂಜಿಕೊಂಡು ವೈದಿಕಕರ್ಮಗಳನ್ನು ಹೊಕ್ಕು ಬೇರೆ ಮಂತ್ರಗಳಿಂದಲೂ ತಮ್ಮನ್ನು ಆಚ್ಛಾದನೆಮಾಡಿಕೊಂಡರು

ಆದ್ದರಿಂದಲೇ ಆ ಮಂತ್ರಗಳು ಛಂದಸ್ಸು ಎಂಬ ಹೆಸರಿನಿಂದ ಪ್ರಸಿದ್ಧವಾದವು. ಮೃತ್ಯುವು ಋಗ್ಯಜುಃಸಾಮಗಳಲ್ಲಿ ಅವರಿರುವದನ್ನು ಕಂಡುಹಿಡಿದುಕೊಂಡನು ; ಆದ್ದರಿಂದ ಅವರು ಕರ್ಮವನ್ನು ಬಿಟ್ಟು ಓಂಕಾರೋಪಾಸನೆಯನ್ನೇ ಕೈಗೊಂಡರು. ಋಗ್ಯಜುಃಸಾಮಗಳನ್ನು ಪಡೆದುಕೊಳ್ಳುವಾಗ ಓಂಕಾರವನ್ನೇ ಉಚ್ಚರಿಸುತ್ತಾರಲ್ಲವೆ? ಈ **ಓಂಕಾರವು ಅಮೃತವೂ ಅಭಯವೂ ಆಗಿರುತ್ತದೆ** ; ಆದ್ದರಿಂದ ಇದನ್ನು ಪ್ರವೇಶಿಸಿದ ದೇವತೆಗಳೂ ಅಮೃತರೂ ಅಭಯರೂ ಆದರು.

೫. ಈ ಗುಣಗಳಿಂದ ಕೂಡಿದ್ದೆಂದು ಯಾವನು ಈ ಅಕ್ಷರವನ್ನು ಉಪಾಸನೆಮಾಡುವನೋ ದೇವತೆಗಳಂತೆಯೇ ಅಮೃತನೂ ಅಭಯನೂ ಆಗುವನು.

ಐದನೆಯ ಖಂಡ

೧-೪. ಸಾಮವೇದಿಗಳ ಉದ್ಗೀಥೋಂಕಾರವೂ ಋಗ್ವೇದಿಗಳ ಪ್ರಣವವೂ ಒಂದೇ. ಆದಿತ್ಯನೇ ಉದ್ಗೀಥವು ; ಅವನನ್ನು ಧ್ಯಾನಮಾಡಿದರೆ ಏಕಪುತ್ರಲಾಭವಾಗುವದು ; ಆದರೆ ಆದಿತ್ಯನನ್ನೂ ರಶ್ಮಿಗಳನ್ನೂ ಭಿನ್ನವಾಗಿ ಉಪಾಸನೆಮಾಡಿದರೆ ಬಹುಪುತ್ರರು ಲಾಭವಾಗುವರು - ಎಂದು ಕೌಷೀತಕಿಯು ತನ್ನ ಮಗನಿಗೆ ಹೇಳಿರುತ್ತಾನೆ. ಇದು ಅಧಿದೈವತೋಪಾಸನೆಯು. ಇನ್ನು ಅಧ್ಯಾತ್ಮೋಪಾಸನೆ. ಮುಖ್ಯಪ್ರಾಣದೃಷ್ಟಿಯಿಂದ ಉದ್ಗೀಥವನ್ನು ಉಪಾಸನೆಮಾಡಿದರೆ ಏಕಪುತ್ರಲಾಭವಾಗುವದು ; ಆದರೆ ಈ ಪ್ರಾಣನನ್ನೂ ವಾಗಾದಿಪ್ರಾಣಗಳನ್ನೂ ಬೇರೆಯೆಂದೆಣಿಸಿ ಉಪಾಸನೆಮಾಡಿದರೆ ಬಹುಪುತ್ರಲಾಭವಾಗುವದು - ಎಂದು ಕೌಷೀತಕಿಯು ಮಗನಿಗೆ ಹೇಳಿರುತ್ತಾನೆ. ಆದ್ದರಿಂದ ಬಹುಪುತ್ರಲಾಭಕ್ಕಾಗಿ ರಶ್ಮಿಗಳನ್ನೂ ವಾಗಾದಿಪ್ರಾಣಗಳನ್ನೂ ಬೇರ್ಪಡಿಸಿಕೊಂಡು ಉಪಾಸನೆಮಾಡಬೇಕು.

೫. ಪ್ರಣವೋದ್ಗೀಥಗಳನ್ನು ಒಂದೆಂದು ತಿಳಿದು ಮಾಡಿದ ಉಪಾಸನೆಯಿಂದ ಚೆನ್ನಾಗಿ ಪ್ರಯೋಗಿಸಿದ ಹೌತ್ರಕರ್ಮದಿಂದ ಉದ್ಗೀಥಗಾನದ ದೋಷವನ್ನೂ ಸರಿಪಡಿಸಿಕೊಳ್ಳಬಹುದೆಂಬ ಫಲವುಂಟಾಗುವದು.

ಆರನೆಯ ಖಂಡ

೧-೬. ಋಕ್ಕು ಪೃಥಿವಿ, ಸಾಮವು ಅಗ್ನಿ. ಪೃಥಿವಿಯೇ ಸಾ, ಅಗ್ನಿಯೇ ಅಮ.

ಪೃಥಿವ್ಯಗ್ನಿಗಳು ಋಕ್ಸಾಮಗಳಂತೆ ನಿತ್ಯಸಂಬದ್ಧವಾಗಿವೆ. ಇದರಂತೆ ಋಕ್ಕು ಅಂತರಿಕ್ಷವು. ವಾಯುವು ಸಾಮ ; ಅವೂ ಹೀಗೆಯೇ ಸಂಬದ್ಧವಾಗಿವೆ. ಋಕ್ಕು ದ್ಯುಲೋಕವು, ಆದಿತ್ಯನು ಸಾಮವು ; ನಕ್ಷತ್ರಗಳು ಋಕ್ಕು, ಚಂದ್ರನು ಸಾಮ ; ಆದಿತ್ಯನ ಶುಕ್ಲಕಾಂತಿಯು ಋಕ್ಕು, ಹೆಚ್ಚಿನ ಕಪ್ಪುಕಾಂತಿಯು ಸಾಮ. ಹೀಗೆ ಋಕ್ಸಾಮಗಳಲ್ಲಿ ಪೃಥಿವ್ಯಾದಿದೃಷ್ಟಿಯನ್ನು ಮಾಡಿಕೊಳ್ಳಬೇಕು.

೬-೮. ಆದಿತ್ಯನಲ್ಲಿ ಚೈತನ್ಯಜ್ಯೋತಿರ್ಮಯನೂ ಜ್ಯೋತಿರ್ಮಯವಾದ ಸರ್ವಶರೀರವುಳ್ಳವನೂ ಬಹುಕೆಂಪಾದ ಕಣ್ಣುಳ್ಳವನೂ ಆದ ಪುರುಷನು ನಿವೃತ್ತೇಂದ್ರಿಯರೂ ಸಮಾಹಿತಚಿತ್ತರೂ ಬ್ರಹ್ಮಚರ್ಯಾದಿಸಾಧನಗಳುಳ್ಳವರೂ ಆದವರಿಗೆ ಕಾಣಬರುತ್ತಾನೆ, ಅವನಿಗೆ ಉತ್ ಎಂದು ಹೆಸರು ; ಅವನು ಸರ್ವಪಾಪಗಳನ್ನೂ ಮೀರಿರುವನಾಗಿರುತ್ತಾನೆ. ಅವನಿಗೆ ಮೇಲೆ ವರ್ಣಿಸಿರುವ ಋಕ್ಸಾಮಗಳೇ ಗೆಣ್ಣುಗಳು. ಹೀಗೆ (ಉದ್‌ಗೇಷ್ಣು)ನಾದ್ದರಿಂದ ಅವನನ್ನು ಉದ್ಗೀಥನೆಂಬ ಪರೋಕ್ಷನಾಮದಿಂದ ಕರೆಯುತ್ತಾರೆ. ಅವನನ್ನು ಗಾನಮಾಡುವದರಿಂದಲೇ ಋತ್ವಿಜನಿಗೆ 'ಉದ್ಗಾತೃ' ಎಂಬ ಹೆಸರು ಬಂದಿರುತ್ತದೆ. ಅವನು ಸೂರ್ಯನಿಂದಾಚೆಗಿರುವ ಲೋಕಗಳಿಗೂ ದೇವಕಾಮಗಳಿಗೂ ಒಡೆಯನು. ಇದು ಅಧಿದೈವತವಾಗಿ ಹೇಳಿದ್ದು.

ಏಳನೆಯ ಖಂಡ

೧-೪. ಇನ್ನು ಅಧ್ಯಾತ್ಮವಾಗಿ ನೋಡಿದರೆ, ಋಕ್ಕು ವಾಕ್ಕು, ಸಾಮವು ಪ್ರಾಣವು : ಋಕ್ಕು ಚಕ್ಷುಸ್ಸು, ಸಾಮವು ಅಲ್ಲಿರುವ ಛಾಯಾತ್ಮ ; ಋಕ್ಕು ಶ್ರೋತ್ರವು, ಸಾಮವು ಮನಸ್ಸು ; ಋಕ್ಕು ಕಣ್ಣಿನ ಶುಕ್ಲಕಾಂತಿ ; ಸಾಮವು ಕೃಷ್ಣಕಾಂತಿ. ಹೀಗೆ ಋಕ್ಸಾಮಗಳನ್ನು ಈ ದೃಷ್ಟಿಯಿಂದ ಕಾಣಬೇಕು.

೫. 'ಚಕ್ಷುಸ್ಸಿನಲ್ಲಿರುವ ಪುರುಷನಿದಾನಲ್ಲ, ಅವನೇ ಋಕ್ಕು, ಸಾಮ, ಉಕ್ಥ, ಯಜುಸ್ಸು, ಮೂರು ವೇದಗಳು, ಏಕೆಂದರೆ ಸರ್ವಕಾರಣನೂ ಸರ್ವಾತ್ಮಕನೂ ಆಗಿರುತ್ತಾನೆ. ಇವನಿಗೂ ಆದಿತ್ಯಾಂರ್ಗತಪುರುಷನ ರೂಪವೇ, ಅವನ ಗೆಣ್ಣುಗಳೇ, ಅವನ ನಾಮವೇ. ಇವನು ಈ ಆಧ್ಯಾತ್ಮಿಕಾತ್ಮನಿಗಿಂತ ಕೆಳಕ್ಕೆ ಇರುವ ಲೋಕಗಳಿಗೂ ಮನುಷ್ಯಕಾಮಗಳಿಗೂ ಒಡೆಯನು.

೬. ಏಣೆಯಲ್ಲಿ ಗಾನಮಾಡುವವರು ಈ ಈಶ್ವರನನ್ನೇ ಗಾನಮಾಡುತ್ತಾರೆ. ಹೀಗೆಂದು ಈ ಉದ್ಗೀಥಪುರುಷನನ್ನರಿತು ಯಾವನು ಸಾಮಗಾನಮಾಡುತ್ತಾನೋ ಅವನು ಆದಿತ್ಯನಾಗಿ ಮೇಲಿನ ಲೋಕಗಳನ್ನೂ ದೇವಕಾಮಗಳನ್ನೂ ಪಡೆದು ಕೊಳ್ಳವನು. ಈ ಚಾಕ್ಷುಷಪುರುಷನಾಗಿ ಕೆಳಗಿನ ಲೋಕಗಳನ್ನೂ ಮನುಷ್ಯಕಾಮ ಗಳನ್ನೂ ಪಡೆದುಕೊಳ್ಳುವನು.

೭-೯. ಆದಿತ್ಯಚಕ್ಷುರಂತರ್ಗತನಾಗಿರುವ ಈ ಉದ್ಗೀಥಪುರುಷನನ್ನು ಹೀಗೆಂದರಿತಿರುವ ಉದ್ಗಾತೃವು ಕಾಮಾಗಾನಕ್ಕೆ ಸಮರ್ಥನು. ಅವನು ಯಜಮಾನನಿಗೆ ಯಾವ ಕಾಮವನ್ನಾದರೂ ಗಾನಮಾಡಿಕೊಡಬಲ್ಲನು.

ಆದ್ದರಿಂದ ಓಂಕಾರವನ್ನು ಈ ಆದಿತ್ಯಚಕ್ಷುಃಪುರುಷನ ದೃಷ್ಟಿಯಿಂದ ಉಪಾಸನೆಮಾಡಬೇಕು.

ಎಂಟನೆಯ ಖಂಡ

೧-೨. ಉದ್ಗೀಥದಲ್ಲಿ ಜಾಣರಾದ ಶಿಲಕ ಶಾಲಾವತ್ಯ, ಚೈಕಿತಾಯನ ದಾಲ್ಭ್ಯ, ಪ್ರವಾಹಣ ಜೈವಲಿ ಎಂಬ ಮೂವರು ಒಂದು ಕಡೆ ಸೇರಿ ಉದ್ಗೀಥದ ವಿಷಯಕ್ಕೆ ಚರ್ಚೆಯನ್ನು ಆರಂಭಿಸಿದರು. ರಾಜನಾದ ಪ್ರವಾಹಣಜೈವಲಿಯು ಮಿಕ್ಕ ಇಬ್ಬರು ಮೊದಲು ವಾದಮಾಡುವಂತೆ ಕೇಳಿಕೊಂಡನು.

೩-೫. ಶಿಲಕ ಶಾಲಾವತ್ಯನು ಚೈಕಿತಾಯನ ದಾಲ್ಭ್ಯನನ್ನು 'ಸಾಮಕ್ಕೆ ಎಂದರೆ ಉದ್ಗೀಥಕ್ಕೆ ಗತಿ ಯಾವದು ?' ಎಂದು ಕೇಳಲು ಅವನು 'ಸ್ವರವು' ಎಂದನು. 'ಸ್ವರಕ್ಕೆ ಗತಿ ಯಾವದು ?' ಎಂದು ಶಿಲಕನು ಮತ್ತೆ ಕೇಳಲು 'ಪ್ರಾಣವು' ಎಂದನು : 'ಪ್ರಾಣಕ್ಕೆ ಗತಿಯೊ ?' ಎಂದು ಕೇಳಿದ್ದಕ್ಕೆ 'ಅನ್ನವು' ಎಂದನು. 'ಅನ್ನಕ್ಕೊ ?' ಎಂದದ್ದಕ್ಕೆ 'ಅಪ್ಪು' ; 'ಅಪ್ಪಿಗೊ ?' ಎಂದದ್ದಕ್ಕೆ 'ಆ ಲೋಕವು' ಎಂದನು. 'ಆ ಲೋಕಕ್ಕೆ ?' ಎಂದು ಶಿಲಕನು ಕೇಳಲು 'ಸ್ವರ್ಗವನ್ನು ದಾಟಬಾರದು, ಸಾಮವೇದವು ಸ್ವರ್ಗವೇ - ಎಂದು ಹೊಗಳುತ್ತಾರೆ'- ಎಂದು ತನ್ನ ಸಿದ್ಧಾಂತವನ್ನು ನಿಲ್ಲಿಸಿದನು.

೬-೭. ಆದರೆ ಶಿಲಕನು ''ನಿನ್ನ ಸಾಮವು ಅಪ್ರತಿಷ್ಠಿತವಾಗಿದೆ ; ಈಗ 'ನಿನ್ನ ತಲೆ ಬಿದ್ದುಹೋಗಲಿ !' - ಎಂದು ಯಾವನಾದರೂ ಬಲ್ಲ ಉಪಾಸಕನು

ನುಡಿದರೆ ಅದು ಬಿದ್ದೇ ಹೋದೀತು !'' ಎಂದನು. ಆಗ ದಾಲ್ಭ್ಯನು ''ಹಾಗಾದರೆ ತಾವು ಹೇಳಿಕೊಡಬೇಕು, ಆ ಲೋಕಕ್ಕೆ ಗತಿ ಯಾವದು ?'' ಎಂದು ಕೇಳಿ ಕೊಂಡನು. ಶಿಲಕನು ಆ ಲೋಕಕ್ಕೆ ಈ ಲೋಕವೇ ಗತಿ, ಇದು ಪ್ರತಿಷ್ಠಾರೂಪ ವಾಗಿರುವದರಿಂದ ಇದರ ಮುಂದಕ್ಕೆ ಇನ್ನಿಲ್ಲ !'' ಎಂದು ತನ್ನ ಸಿದ್ಧಾಂತವನ್ನು ನಿಲ್ಲಿಸಿದನು.

೮. ಆಗ ಪ್ರವಾಹಣ ಜೈವಲಿಯು ''ಶಾಲಾವತ್ಯನೆ, ನಿನ್ನ ಸಾಮವು ಅಂತವುಳ್ಳದ್ದು. ಆದ್ದರಿಂದ ಈಗ ನಿಜವಾದ ಉಪಾಸಕನೊಬ್ಬನು 'ನಿನ್ನ ತಲೆ ಬೀಳಲಿ !' ಎಂದರೆ ಅದು ಬಿದ್ದೇ ಹೋದೀತು !'' ಎಂದನು. ಆಗ ಶಿಲಕನು ''ಹಾಗಾದರೆ ತಾವು ಹೇಳಿಕೊಡಬೇಕು !'' ಎಂದು ಕೇಳಿಕೊಂಡನು.

ಒಂಬತನೆಯ ಖಂಡ

೧-೨. ಶಿಲಕನು 'ಈ ಲೋಕಕ್ಕೆ ಗತಿ ಯಾವದು ?' ಎಂದು ಕೇಳಿಕೊಂಡದ್ದಕ್ಕೆ ಆಕಾಶವೇ ಅದಕ್ಕೆ ಗತಿಯು, ಆಕಾಶದಿಂದ ಸರ್ವಭೂತಗಳೂ ಹುಟ್ಟುತ್ತವೆ, ಆಕಾಶವನ್ನೇ ಬಂದುಸೇರುತ್ತವೆ ; ಆಕಾಶವು ಇವೆಲ್ಲಕ್ಕಿಂತಲೂ ದೊಡ್ಡದು, ಆಕಾಶವೇ ಎಲ್ಲಕ್ಕೂ ಪರಾಯಣವು ಎಂದು ಪರಮಾತ್ಮಾಕಾಶವೆಂದು ನಿರ್ಧರಿಸಿದನು.

ಹೀಗೆ ಎಲ್ಲಕ್ಕಿಂತಲೂ ಹೆಚ್ಚಿನ ಪರಮಾಕಾಶವೆಂದು ಉಪಾಸನೆಮಾಡುವದು ಪರೋವರೀಯೋದ್ಗೀಥೋಪಾಸನೆಯು. ಹೀಗೆಂದು ಉಪಾಸನೆಮಾಡುವ ಉಪಾಸಕನಿಗೆ ಉತ್ತರೋತ್ತರ ವೃದ್ಧಿಯೂ ಉತ್ತರೋತ್ತರವಾಗಿ ವಿಶಿಷ್ಟವಾದ ಲೋಕಗಳ ಪ್ರಾಪ್ತಿಯೂ ಆಗುವದು.

೩-೪. ಅತಿಧನ್ವ ಶೌನಕನೆಂಬವನು ಈ ಉದ್ಗೀಥವಿದ್ಯೆಯನ್ನು ಉದರ ಶಾಂಡಿಲ್ಯನಿಗೆ ತಿಳಿಸಿಕೊಟ್ಟು ''ನಿನ್ನ ಸಂತತಿಯವರು ಈ ವಿದ್ಯೆಯನ್ನಿಟ್ಟುಕೊಂಡಿ ರುವವರೆಗೂ ಅವರಿಗೆ ಈ ಲೋಕದಲ್ಲಿ ಉತ್ತರೋತ್ತರಾಭಿವೃದ್ಧಿಯ ಜೀವನವು ಆಗುತ್ತಿರುವದು, ಆ ಲೋಕದಲ್ಲಿಯೂ ಆಗುತ್ತಿರುವದು'' ಎಂದನಂತೆ. ಯಾವನು ಈ ಪರೋವರೀಯಗುಣಕವಾದ ಉದ್ಗೀಥವನ್ನು ಓಗೆಂದು ಉಪಾಸನೆಮಾಡು ತ್ತಿರುವನೋ ಅವನಿಗೆ ಈ ಲೋಕದಲ್ಲಿ ಉತ್ತರೋತ್ತರಾಭ್ಯುದಯವಾಗುವದು, ಆ ಲೋಕದಲ್ಲಿಯೂ ಪರೋವರೀಯಲೋಕವು ಸಿಕ್ಕುವದು.

ಆದ್ದರಿಂದ ಪರೋವರೀಯಗುಣವಿಶಿಷ್ಟವಾದ ಪರಮಾತ್ಮಾಕಾಶವೆಂದು ಉದ್ಗೀಥವನ್ನು ಉಪಾಸನೆಮಾಡಬೇಕು.

ಹತ್ತನೆಯ ಖಂಡ

ಈ ಖಂಡದಲ್ಲಿ ಪ್ರಸಂಗವಶದಿಂದ ಪ್ರಸ್ತಾವಪ್ರತಿಹಾರಭಕ್ತಿಗಳ ಉಪಾಸನೆಯನ್ನು ಹೇಳಿದೆ.

೧-೭. ಕುರುದೇಶದಲ್ಲಿ ಬಹಳವಾಗಿ ಸಿಡಿಲು ಬಿದ್ದು ಪೈರುಪಚ್ಚೆಯೆಲ್ಲ ಹಾಳಾಗಿತ್ತು. ಆ ಕಾಲದಲ್ಲಿ ಉಷಸ್ತಿಚಾಕ್ರಾಯಣನು ಇನ್ನೂ ಹುಡುಗಿಯಾದ ತನ್ನ ಹೆಂಡತಿಯೊಡನೆ ಅಲ್ಲಲ್ಲಿ ಭಿಕ್ಷಾರ್ಥಿಯಾಗಿ ಅಲೆದಾಡುತ್ತಿದ್ದನು. ಅವನು ಹುರುಳಿಯನ್ನು ತಿನ್ನುತ್ತಿದ್ದ ಒಬ್ಬ ಮಾವಟಿಗನನ್ನು ಕಂಡು ಅನ್ನವನ್ನು ಕೇಳಲು ಅವನು 'ಈ ಪಾತ್ರೆಯಲ್ಲಿರುವದೇ ಹೊರತು ಮತ್ತೆ ಬೇರೆ ಇಲ್ಲವಲ್ಲ !' ಎಂದನು. ಉಷಸ್ತಿಯು 'ಇದನ್ನೇ ಕೊಡು !' ಎಂದು ಕೇಳಲು ಮಾವಟಿಗನು ಕೊಟ್ಟು ಅನುಪಾನಕ್ಕೆ ನೀರನ್ನು ಕೊಡುವದಕ್ಕೆ ಹೋದನು. ಆದರೆ ಚಾಕ್ರಾಯಣನು 'ಬೇಡ, ಅನ್ನವಿಲ್ಲದೆ, ಸಾಯುತ್ತಿದ್ದೆನಾದ್ದರಿಂದ ಉಚ್ಛಿಷ್ಟವಾದರೂ ಹುರುಳಿಯನ್ನು ತಿಂದೆನು ; ಆದರೆ ಕುಡಿಯುವ ನೀರು ಎಲ್ಲಿಯಾದರೂ ದೊರಕುತ್ತದೆ !' ಎಂದನು. ಅವನು ಆ ಹುರುಳಿಯನ್ನು ತಿಂದು ಉಳಿದದ್ದನ್ನು ಹೆಂಡತಿಗೆ ಕೊಟ್ಟನು, ಆದರೆ ಆಕೆಗೆ ಆಗಲೆ ಆಹಾರವು ದೊರತಿದ್ದದ್ದರಿಂದ ಅದನ್ನು ಒಂದುಕಡೆಯಲ್ಲಿಟ್ಟುಕೊಂಡಳು. ಮಾರನೆಯ ದಿನ ಬೆಳಗ್ಗೆ ಏಳುತ್ತಲೂ, ಅವನು 'ಅಯ್ಯೋ, ಒಂದಿಷ್ಟು ಅನ್ನವು ಸಿಕ್ಕಿದರೆ ತಿಂದು ಸ್ವಲ್ಪ ಧನವನ್ನು ಸಂಪಾದಿಸಿಕೊಳ್ಳಬಹುದಲ್ಲ ! ಏಕೆಂದರೆ ಹತ್ತಿರದಲ್ಲಿಯೇ ರಾಜನು ಯಾಗಮಾಡುತ್ತಿರುವನು. ನನ್ನನ್ನು ಕಂಡರೆ ಎಲ್ಲಾ ಆರ್ತ್ವಿಜ್ಯಕ್ಕೂ ಕರೆದಾನು !'' ಎಂದನು. ಆಕೆಯು 'ಈ ಹುರುಳಿಹೊರತು ಮತ್ತೇನೂ ಇಲ್ಲ' ಎಂದು ಅವನಿಗೆ ಕೊಟ್ಟಳು. ಅವನು ಅದನ್ನೇ ತಿಂದು ಯಜ್ಞವಾಗುತ್ತಿದ್ದಲ್ಲಿಗೆ ಬಂದನು.

೮-೧೧. ಅವನು ಅಲ್ಲಿ ಉದ್ಗಾತೃಪುರುಷರು ಇರುವಲ್ಲಿ ಕುಳಿತುಕೊಂಡು ಪ್ರಸ್ತೋತೃವನ್ನು ಕುರಿತು 'ಎಲೈ ಪ್ರಸ್ತೋತೃವೆ, ಪ್ರಸ್ತಾವದೇವತೆಯನ್ನರಿಯದೆ ನನ್ನೆದುರಿಗೆ ಸ್ತೋತ್ರಮಾಡುವೆಯಾದರೆ ನಿನ್ನ ತಲೆ ಬಿದ್ದುಹೋಗಲಿ !' ಎಂದನು. ಹೀಗೆಯೇ ಉದ್ಗಾತೃವನ್ನೂ ಪ್ರತಿಹರ್ತೃವನ್ನೂ ''ಕುರಿತು ಉದ್ಗೀಥದೇವತೆಯ

ನ್ನಾಗಲಿ ಪ್ರತಿಹಾರದೇವತೆಯಲ್ಲಾಗಲಿ ಅರಿಯದೆ ಸೋತ್ರಮಾಡಿದರೆ ನಿಮ್ಮ ತಲೆಯು ಬೀಳಲಿ !''- ಎಂದನು. ಅವರು ಮೂವರೂ ತಮ್ಮ ಕರ್ಮವನ್ನು ಮಾಡದೆ ಸುಮ್ಮನೆ ಕುಳಿತುಬಿಟ್ಟರು.

ಹನ್ನೊಂದನೆಯ ಖಂಡ

೧-೩. ಆಗ ಯಜಮಾನನು 'ತಾವು ಯಾರು ?' ಎಂದು ವಿಚಾರಿಸಿ ಉಷಸ್ತಿ ಚಾಕ್ರಾಯಣನೆಂಬ ಪ್ರಸಿದ್ಧಪುರುಷನೆಂದು ತಿಳಿದ ಕೂಡಲೆ ಅವನನ್ನು ಎಲ್ಲಾ ಆರ್ತ್ವಿಜ್ಯಗಳಿಗೂ ವರಣಮಾಡಿದನು. ಆದರೆ 'ಬೇಡ, ನನ್ನ ಅನುಮತಿಯಿಂದ ಇವರೇ ಸ್ತೋತ್ರಮಾಡಲಿ ! ಅವರಿಗೆ ಕೊಡುವಷ್ಟು ಧನವನ್ನು ನನಗೂ ಕೊಡು !'' ಎಂದು ಋಷಿಯು ನುಡಿದನು.

೪-೫. ಆಗ ಪ್ರಸ್ತೋತೃವು, ''ಪೂಜ್ಯರೆ, ಪ್ರಸ್ತಾವಭಕ್ತಿಯ ದೇವತೆ ಯಾವದು, ನನಗೆ ಹೇಳಿಕೊಡಬೇಕು'' ಎನ್ನಲು ಚಾಕ್ರಾಯಣನು ''ಪ್ರಾಣನೆಂಬ ಪರಮಾತ್ಮನೇ ಆ ದೇವತೆ. ಈ ಎಲ್ಲಾ ಭೂತಗಳೂ ಪ್ರಾಣನಿಂದಲೇ ಹುಟ್ಟಿ ಪ್ರಾಣನನ್ನೇ ಸೇರುವವು. ಈ ದೇವತೆಯನ್ನರಿಯದೆ ನೀನು ಪ್ರಸ್ತಾವವನ್ನು ಮಾಡಿದ್ದರೆ ನಿನ್ನ ತಲೆಯು ನನ್ನ ವಾಕ್ಯದಂತೆ ಬಿದ್ದುಹೋಗುತ್ತಿತ್ತು !'' ಎಂದನು.

೬-೭. ಇದರಂತೆ ಉದ್ಗಾತೃವು ಉದ್ಗೀಥದೇವತೆ ಯಾರೆಂದೂ ಪ್ರತಿಹರ್ತೃವು ಪ್ರತಿಹಾರದೇವತೆ ಯಾರೆಂದೂ ಕೇಳಿದರು. ಚಾಕ್ರಾಯಣನು ಆದಿತ್ಯನು ಉದ್ಗೀಥದೇವತೆ, ಅನ್ನವೇ ಪ್ರತಿಹಾರದೇವತೆ. ಏಕೆಂದರೆ ಮೇಲುಗಡೆ ಇರುವ ಸೂರ್ಯನನ್ನೇ ಉದ್ಗಾತೃಗಳು ಗಾನಮಾಡುತ್ತಾರೆ ; ಭೂತಗಳೆಲ್ಲವೂ ಅನ್ನವನ್ನು ಪ್ರತಿಹಾರಮಾಡಿಕೊಂಡೇ ಜೀವಿಸಿವೆ'' ಎಂದು ತಿಳಿಸಿಕೊಟ್ಟನು.

ಆದ್ದರಿಂದ ಉದ್ಗಾತೃಪುರುಷರು ಈ ದೇವತೆಗಳನ್ನು ಅರಿತು ಸ್ತೋತ್ರ ಮಾಡಬೇಕು ; ಎಂದರೆ ಪ್ರಸ್ತಾವ, ಉದ್ಗೀಥ, ಪ್ರತಿಹಾರ ಎಂಬ ಸಾಮಭಕ್ತಿಗಳನ್ನು ಪ್ರಾಣ, ಆದಿತ್ಯ, ಅನ್ನ - ಎಂಬ ದೃಷ್ಟಿಯಿಂದ ಉಪಾಸನೆಮಾಡಬೇಕು. ಇದಕ್ಕೆ ಕರ್ಮಸಮೃದ್ಧಿಯೂ ದೇವತಾಸಾಯುಜ್ಯವೂ ಫಲವು.

ಹನ್ನೆರಡನೆಯ ಖಂಡ

ಈ ಖಂಡದಲ್ಲಿ ಶೌವಉದ್ಗೀಥವನ್ನು ತಿಳಿಸಿಕೊಟ್ಟಿದೆ.

೧-೩. ಬಕದಾಲ್ಭ್ಯ, ಗಾವಮೈತ್ರೇಯ - ಎಂಬ ಹೆಸರಿನವನು ಸ್ವಾಧ್ಯಾಯಕ್ಕಾಗಿ ಊರಿನ ಹೊರಕ್ಕೆ ಹೋದನು. ಅವನಿಗೆ ಒಂದಾನೊಂದು ದೇವತೆಯು ಪ್ರಸನ್ನವಾಗಿ ಬಿಳಿಯ ನಾಯಿಯ ರೂಪದಲ್ಲಿ ಕಾಣಿಸಿಕೊಂಡಿತು. ಅದರ ಸುತ್ತಲೂ ಸಣ್ಣಪುಟ್ಟ ನಾಯಿಗಳಿದ್ದವು ; ಅವು 'ಭಗವಂತನೆ, ನಮಗೆ ಹಸಿವಾಗಿದೆ, ಅನ್ನವನ್ನು ಆಗಾನಮಾಡಿಕೊಡು !' ಎಂದು ಬೇಡಿಕೊಂಡವು. 'ನಾಳೆ, ಪ್ರಾತಃಕಾಲಕ್ಕೆ ಇಲ್ಲಿಗೆ ಬನ್ನಿರಿ, ಆಗಾನಮಾಡುತ್ತೇನೆ' ಎಂದು ಬಿಳಿಯ ನಾಯಿ ಎಂದಿತು.

೩-೫. ಬ್ರಾಹ್ಮಣನು ಆ ಕಾಲಕ್ಕೆ ಸರಿಯಾಗಿ ಅವನ್ನು ನಿರೀಕ್ಷಿಸಿ ಕೊಂಡಿದ್ದನು. ನಾಯಿಗಳು ಅಲ್ಲಿಗೆ ಬಂದವು. ಬಹಿಷ್ಪವಮಾನದಿಂದ ಸ್ತೋತ್ರ ಮಾಡಲಿರುವವರು ಹೇಗೆ ಒಬ್ಬರನ್ನೊಬ್ಬರು ಮುಟ್ಟಿಕೊಂಡು ಸುತ್ತುವರೋ ಹಾಗೆಯೇ ನಾಯಗಳೂ ಸುತ್ತಿ ಕುಳಿತುಕೊಂಡು ಹಿಂಕಾರವನ್ನು ಮಾಡಿ ಈ ಗಾನವನ್ನು ಮಾಡಿದವು. (ಅದರ ಅರ್ಥವಿದು) : ''ಓಮ್ ! ನಾವು ಅನ್ನವನ್ನುಣ್ಣುವಂತಾಗಲಿ ! ನೀರನ್ನು ಕುಡಿಯುವಂತೆ ಆಗಲಿ ! ವರುಣ, ಪ್ರಜಾಪತಿ ಸವಿತೃ - ಎಂಬ ಹೆಸರುಗಳುಳ್ಳ ಆದಿತ್ಯನು ನಮಗೆ ಅನ್ನವನ್ನು ಕೊಡಲಿ ! ಅನ್ನಪತಿಯೆ, ಅನ್ನವನ್ನು ತಂದುಕೊಡು ! ಓಮ್ !

ಈ ಉದ್ಗಾನವು ಅನ್ನಫಲಕ್ಕಾಗಿ ಮಾಡತಕ್ಕದ್ದು.

ಹದಿಮೂರನೆಯ ಖಂಡ

ಈ ಖಂಡದಲ್ಲಿ ಸಾಮಾವಯವವಾದ ಸ್ತೋಭಗಳ ಉಪಾಸನೆಯಿದೆ.

೧-೩. ಹಾಉಕಾರವು ಈ ಲೋಕವು ; ಹಾಇಕಾರವು ವಾಯು ; ಅಥಕಾರವು ಚಂದ್ರನು ; ಇಹಕಾರವು ಆತ್ಮನು, ಊಕಾರವು ಆತ್ಮನು, ಏಕಾರವು ಆಹ್ವಾನವು ; ಓಹೋ ಇಕಾರವು ವಿಶ್ವೇದೇವತೆಗಳು ; ಹಿಂಕಾರವು ಪ್ರಜಾಪತಿಯು ; ಸ್ವರವು ಪ್ರಾಣವು ; ಯಾ ಎಂಬಿದು ಅನ್ನವು ; ವಾಕ್ಕೆಂಬುದು ವಿರಾಟ್. ಇವುಗಳಿಗೆ ಹದಿಮೂರನೆಯದಾಗಿರುವ ಹುಂಕಾರವು ಅನಿರುಕ್ತವೂ ಸಂಚರವೂ ಆಗಿದೆ ಎಂದು ಉಪಾಸನೆಮಾಡಬೇಕು.

೪. ಹೀಗೆಂದು ಉಪಾಸನೆಮಾಡಿದವರಿಗೆ ವಾಕ್ಕು ತ್ರಯೀವಿದ್ಯೆಯ ಫಲವೆಂಬ ವಾಗ್ದೋಹವನ್ನು ಮಾಡುವದು ; ಅವನು ಅನ್ನವಂತನೂ ದೀಪ್ತಾಗ್ನಿಯೂ ಆಗುವನು.

ಎರಡನೆಯ ಅಧ್ಯಾಯದ ಸಾರ

ಈ ಅಧ್ಯಾಯದ ಗ್ರಂಥವು ಸುಸ್ಪಷ್ಟವಾಗಿರುವದರಿಂದ ಇದಕ್ಕೆ ಸಾರವನ್ನು ಬಹಳ ಸಂಕ್ಷಿಪ್ತವಾಗಿ ಬರೆದಿದೆ.

ಒಂದನೆಯ ಖಂಡ

೧-೪. ಮುಂದೆ ಹೇಳುವ ಸಮಸ್ತಸಾಮಭಕ್ತಿಗಳ ವಿಷಯಕವಾದ ಸಾಮಗಳಲ್ಲಿ ಸಾಧುದೃಷ್ಟಿಯನ್ನು ಮಾಡಬೇಕು, ಆಯಾ ಸಂದರ್ಭದಲ್ಲಿ ವಿಧಿಸಿರುವ ನೃಷ್ಟಿಯನ್ನು ಮಾಡಬೇಕು.

ಎರಡನೆಯ ಖಂಡ

೧-೩. ಪೃಥಿವಿ, ಅಗ್ನಿ, ಅಂತರಿಕ್ಷ, ಆದಿತ್ಯ, ದ್ಯುಲೋಕ - ಈ ದೃಷ್ಟಿಯಿಂದಲೂ ದ್ಯುಲೋಕ, ಆದಿತ್ಯ, ಅಂತರಿಕ್ಷ, ಅಗ್ನಿ, ಪೃಥಿವಿ - ಈ ದೃಷ್ಟಿಯಿಂದಲೂ ಸಾಮದ ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ, ನಿಧನ - ಎಂಬ ಭಕ್ತಿಗಳನ್ನು ಉಪಾಸನೆಮಾಡಬೇಕು. ಉಪಾಸಕರಿಗೆ ಪುಣ್ಯಲೋಕಗಳು ದೊರಕುವವು.

ಖಂ. ೩ ಕಂ. ೧-೨. ಮುಂಗಾಳಿ, ಮೇಘ, ಮಳೆ, ಮಿಂಚು, ಗುಡುಗು - ಈ ದೃಷ್ಟಿಗಳಿಂದ ಹಿಂಕಾರಾದಿಗಳನ್ನು ಉಪಾಸನೆಮಾಡಿದರೆ ಇಚ್ಛೆಯಂತೆ ಮಳೆಯಾಗುವದು.

ಖಂ. ೪ ಕಂ. ೧-೨. ಮೋಡಗಳು ಒಟ್ಟಾಗುವದು, ಮಳೆ, ಪೂರ್ವಕ್ಕೆ

ಹರಿಯುವ ನದಿ, ಪಶ್ಚಿಮಕ್ಕೆ ಹರಿಯುವ ನದಿ, ಸಮುದ್ರ - ಇವುಗಳ ದೃಷ್ಟಿಯಿಂದ ಉಪಾಸನೆಮಾಡಿದರೆ ನೀರಿನಲ್ಲಿ ಸಾವಿಲ್ಲ, ಹೆಚ್ಚಾಗಿ ನೀರಿನ ಲಾಭ.

ಖಂ. ೫ ಕಂ. ೧-೨. ವಸಂತ, ಗ್ರೀಷ್ಮ, ವರ್ಷಾಕಾಲ, ಶರತ್ಕಾಲ, ಹೇಮಂತ - ಇವುಗಳೆಂದು ಉಪಾಸನೆಮಾಡಿದರೆ ಋತುಗಳು ಭೋಗ್ಯಗಳಾಗುವವು.

ಖಂ. ೬ ಕಂ. ೧-೨. ಆಡು, ಕುರಿ, ಗೋವು, ಕುದುರೆ, ಮನುಷ್ಯ - ಈ ದೃಷ್ಟಿಗೆ ಪಶುಫಲ.

ಖಂ. ೭ ಕಂ. ೧-೨. ಪ್ರಾಣ, ವಾಕ್ಕು, ಚಕ್ಷುಸ್ಸು, ಶ್ರೋತ್ರ, ಮನಸ್ಸು - ಈ ದೃಷ್ಟಿಗೆ ಉತ್ತರೋತ್ತರಾಭಿವೃದ್ಧಿ.

ಇನ್ನು ಮುಂದೆ ಹೇಳಿರುವವು ಸಪ್ತವಿಧಸಾಮೋಪಾಸನೆಗಳು.

ಖಂ. ೮ ಕಂ. ೧-೩. ವಾಕ್ಕಿನಲ್ಲಿರುವ ಹುಂಕಾರವು ಹಿಂಕಾರವು, ಪ್ರ ಎಂಬುದು ಪ್ರಸ್ತಾವ, ಆ ಎಂಬುದು ಆದಿ (ಓಂಕಾರ), **ಉತ್** ಎಂಬುದು ಉದ್ಗೀಥ, ಪ್ರತಿ ಎಂಬುದು ಪ್ರತಿಹಾರ, ಉಪ ಎಂಬುದು ಉಪದ್ರವ, ನಿ ಎಂಬುದು ನಿಧನ - ಎಂದು ಸಾಮದ **ಸಪ್ತಭಕ್ತಿ**ಗಳನ್ನುಪಾಸನೆಮಾಡಿದರೆ ವಾಕ್ಕಿನಿಂದಾಗುವ ಪೂರ್ಣ ಫಲ. ಅನ್ನವಂತನೂ ಅನ್ನಾದನೂ ಆಗುವನು.

ಒಂಭತ್ತನೆಯ ಖಂಡ

೧-೮. ಸೂರ್ಯನ ಉದಯಕ್ಕಿಂತ ಮುನ್ನಿನ ರೂಪವು ಹಿಂಕಾರ, ಅದನ್ನು ಪಶುಗಳು ಉಪಜೀವಿಸಿಕೊಂಡಿರುವವು. ಹುಟ್ಟಿದಾಗಿನ ರೂಪವು ಪ್ರಸ್ತಾವ, ಅವನ್ನು ಮನುಷ್ಯರು ಉಪಜೀವಿಸಿಕೊಂಡಿರುವರು. ಸಂಗವಕಾಲದ ರೂಪವು ಆದಿ ; ಅದನ್ನು ಹಕ್ಕಿಗಳು ಉಪಜೀವಿಸಿಕೊಂಡಿರುವವು. ನಡುಹಗಲಿನ ರೂಪವು ಉದ್ಗೀಥವು, ಅದನ್ನು ದೇವತೆಗಳು ಉಪಜೀವಿಸಿಕೊಂಡಿರುವರು. ಅಪರಾಹ್ಣಕ್ಕೆ ಮುನ್ನಿನ ರೂಪವು ಪ್ರತಿಹಾರವು, ಅದನ್ನು ಗರ್ಭಗಳು ಉಪಜೀವಿಸಿಕೊಂಡಿರುವವು. ಅಪರಾಹ್ಣವಾದಮೇಲೆ ಸಂಜೆಯ ಮುನ್ನಿನ ರೂಪವು ಉಪದ್ರವವು ; ಅದನ್ನು ಆರಣ್ಯಪಶುಗಳು ಉಪಜೀವಿಸಿಕೊಂಡಿರುವವು. ಸಂಜೆಯು ನಿಧನವು, ಅದನ್ನು ಪಿತೃಗಳು ಉಪಜೀವಿಸಿಕೊಂಡಿರುವರು. ಯಾವನು

ಹೀಗೆ ಸಪ್ತವಿಧಾದಿತ್ಯದೃಷ್ಟಿಯಿಂದ ಸಾಮಭಕ್ತಿಗಳನ್ನು ಉಪಾಸನೆಮಾಡುವನೋ ಅವನಿಗೆ ಆದಿತ್ಯಪ್ರಾಪ್ತಿಯು ಫಲವು.

ಹತ್ತನೆಯ ಖಂಡ

೧-೬. ಇಲ್ಲಿ ಸಪ್ತವಿಧಭಕ್ತಿಗಳ ಅಕ್ಷರಗಳನ್ನು ಮೂರುಮೂರಾಗಿ ವಿಂಗಡಿಸಿ ಉಪದ್ರವ ಎಂಬುದರಲ್ಲಿ ಮೂರನ್ನು ತೆಗೆದುಕೊಂಡು ಉಳಿಯುವದೂ ಅಕ್ಷರವೇ ಆದ್ದರಿಂದ ಅದೂ ಮೂರೇ ಆಯಿತು - ಎಲ್ಲವೂ ಸಮವಾಯಿತು, ಎಂದು ಭಾವಿಸಬೇಕು. ಇವುಗಳ ಅಕ್ಷರಗಳು ಇಪ್ಪತ್ತೆರಡಾಗುವವು. ಆದಿತ್ಯನು ಇಲ್ಲಿಂದ ಎಣಿಸಿದರೆ ಇಪ್ಪತ್ತೊಂದನೆಯವನಾಗುತ್ತಾನೆ ; ಆದ್ದರಿಂದ ಇಪ್ಪತ್ತೆರಡಕ್ಷರಗಳ ಉಪಾಸನೆಯಿಂದ ಅತಿಮೃತ್ಯುವಾದ ಆದಿತ್ಯನಿಂದಾಚೆಯ ಲೋಕವನ್ನು ಜಯಿಸಿಕೊಳ್ಳುತ್ತಾನೆ.

ಇಲ್ಲಿಂದ ಮುಂದಕ್ಕೆ ಗಾಯತ್ರಾದಿಸಾಮಭಕ್ತಿಗಳ ಉಪಾಸನೆ

ಖಂ. ೧೧ ಕಂ. ೧-೨. ಮನಸ್ಸು, ವಾಕ್ಕು, ಚಕ್ಷುಸ್ಸು, ಶ್ರೋತ್ರ, ಪ್ರಾಣ - ಇವುಗಳ ದೃಷ್ಟಿಯಿಂದ ಗಾಯತ್ರಸಾಮದ ಭಕ್ತಿಗಳನ್ನು ಉಪಾಸನೆಮಾಡಿದರೆ ಪ್ರಾಣಗಳು ಪೂರ್ಣವಾಗಿ ಸರ್ವಾಯುಸ್ಸು ಫಲ.

ಖಂ. ೧೨ ಕಂ. ೧-೨. ಮಂಥನ, ಧೂಮ, ಜ್ವಾಲೆ, ಅಂಗಾರ, ಉಪಶಾಂತಿ, ಸಂಶಾಂತಿಗಳು - ಇವುಗಳ ದೃಷ್ಟಿಯಿಂದ ರಥಂತರಸಾಮವನ್ನು ಉಪಾಸಿಸಿದರೆ ಬ್ರಹ್ಮವರ್ಚಸ್ಸು, ಅನ್ನಾದತ್ವ, ಸರ್ವಾಯುಸ್ಸು.

ಖಂ. ೧೩ ಕಂ. ೧-೨. ಉಪಮಂತ್ರಣಾದಿಗಳ ದೃಷ್ಟಿಯಿಂದ ವಾಮದೇವ್ಯ ಸಾಮವನ್ನು ಉಪಾಸನೆಮಾಡಿದರೆ ಅಮೋಘರೇತಸ್ಸು.

ಈ ಅಧ್ಯಾಯದಲ್ಲಿ ಮುಖ್ಯವಾಗಿ ಸಾಮೋಪಾಸನೆಗಳನ್ನೂ ಪ್ರಣವೋಪಾಸನೆಯನ್ನೂ ಹೇಳಿದೆ.

ಖಂ. ೧೪ ಕಂ. ೧-೨. ಉದಯಿಸುತ್ತಿರುವ ಸೂರ್ಯ ಮುಂತಾದ ದೃಷ್ಟಿಯಿಂದ ಬೃಹತ್ಸಾಮವನ್ನು ಉಪಾಸನೆಮಾಡಿದರೆ ತೇಜಸ್ವಿಯೂ ಅನ್ನಾದನೂ ಆಗುವನು, ಸರ್ವಾಯುಸ್ಸು, ಪ್ರಜೆ, ಕೀರ್ತಿ.

ಖಂ. ೧೫ ಕಂ. ೧-೨. ಅಭ್ರಾದಿಗಳ ದೃಷ್ಟಿಯಿಂದ ವೈರೂಪಸಾಮವನ್ನು ಉಪಾಸನೆಮಾಡಿದರೆ ಬಹುವಿಧಪಶುಪ್ರಾಪ್ತಿ, ಸರ್ವಾಯುಸ್ಸು, ಪ್ರಜೆ, ಕೀರ್ತಿ.

ಖಂ. ೧೬. ಕಂ. ೧-೨. ವಸಂತಾದಿಗಳ ದೃಷ್ಟಿಯಿಂದ ವೈರಾಜಸಾಮವನ್ನು ಉಪಾಸನೆಮಾಡಿದರೆ ಪ್ರಜಾದಿಗಳು ಫಲ.

ಖಂ. ೧೭ ಕಂ. ೧-೨. ಪೃಥಿವ್ಯಾದಿಗಳ ದೃಷ್ಟಿಯಿಂದ ಶಕ್ವರೀಸಾಮವನ್ನು ಉಪಾಸನೆಮಾಡಿದರೆ ಲೋಕ, ಆಯುಸ್ಸು, ಪ್ರಜಾದಿಗಳು.

ಖಂ. ೧೮ ಕಂ. ೧-೨. ಅಜಾದಿಗಳ ದೃಷ್ಟಿಯಿಂದ ರೇವತೀಸಾಮವನ್ನು ಉಪಾಸನೆಮಾಡಿದರೆ ಪಶ್ವಾದಿಗಳು.

ಖಂ. ೧೯ ಕಂ. ೧-೨. ಲೋಮಾದಿಗಳ ದೃಷ್ಟಿಯಿಂದ ಯಜ್ಞಾಯಜ್ಞೀಯ ಸಾಮವನ್ನು ಉಪಾಸನೆಮಾಡಿದರೆ ಅಂಗವು ವೈಕಲ್ಯವಿಲ್ಲದೆ ಇರುವದು.

ಖಂ. ೨೦ ಕಂ. ೧-೨. ಅಗ್ನ್ಯಾದಿಗಳ ದೃಷ್ಟಿಯಿಂದ ರಾಜನಸಾಮವನ್ನು ಉಪಾಸನೆಮಾಡಿದರೆ ದೇವತೆಗಳ ಸಾಲೋಕ್ಯಸಾರ್ಷ್ಟಿತ್ವವೂ ಆಯುರಾದಿಗಳೂ.

ಖಂ. ೨೧ ಕಂ. ೧-೩. ತ್ರಯೀವಿದ್ಯಾದಿಗಳ ದೃಷ್ಟಿಯಿಂದ ಸಾಮ ಸಮುದಾಯವನ್ನು ಉಪಾಸನೆಮಾಡಿದರೆ ಸರ್ವಾಪ್ತಿ.

ಮೇಲೆ ಹೇಳಿರುವವು ಭಕ್ತ್ಯುಪಾಸನೆಗಳು ಮಾತ್ರ. ಗಾಯತ್ರಾದಿಸಾಮಗಳು ಪ್ರಾಣಾದಿಗಳಲ್ಲಿ ಪ್ರೋತವೆಂದು ಶ್ರುತಿಯಲ್ಲಿ ಹೇಳಿರುವದರಿಂದ ಆಯಾ ಒಟ್ಟು ಸಾಮವನ್ನು ಆಯಾ ಪ್ರಾಣಾದಿಗಳ ದೃಷ್ಟಿಯಿಂದಲೂ ಉಪಾಸನೆಮಾಡತಕ್ಕದ್ದು.

ಇಪ್ಪತ್ತೆರಡನೆಯ ಖಂಡ

ಇದರಲ್ಲಿ ಗಾನವಿಶೇಷಗಳು ಹೇಗೆ ಇರಬೇಕೆಂಬುದನ್ನೂ ವರ್ಣಾದಿಗಳನ್ನು ಹೇಗೆ ಉಚ್ಚರಿಸಬೇಕೆಂಬುದನ್ನೂ ಉದ್ಗಾತೃವಿಗೆ ಉಪದೇಶಿಸಿರುತ್ತದೆ.

ಇಪ್ಪತ್ತುಮೂರನೆಯ ಖಂಡ

೧. ನೈಷ್ಠಿಕಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ- ಇವರಿಗೆ ತಮ್ಮತಮ್ಮ ಧರ್ಮಗಳನ್ನು ಆಚರಿಸುವದರಿಂದ ಪುಣ್ಯಲೋಕಪ್ರಾಪ್ತಿಯಾಗುವದು ; ಆದರೆ ಓಂಕಾರನಿಷ್ಠನಿಗೆ ಅಮೃತತ್ವವೇ ದೊರಕುವದು.

೨-೩. ಪ್ರಜಾಪತಿಯು ಲೋಕಗಳ ಸಾರವನ್ನು ಆಲೋಚಿಸಲಾಗಿ ಕ್ರಮಕ್ರಮವಾಗಿ ತ್ರಯೀವಿದ್ಯೆ, ವ್ಯಾಹೃತಿಗಳು, ಓಂಕಾರ - ಇವು ಜಿನುಗಿ ತೋರಿದವು. ಆದ್ದರಿಂದ ಓಂಕಾರವೇ ಸರ್ವವೂ ಆಗಿದೆ ಎಂದು ಉಪಾಸನೆ ಮಾಡಬೇಕು.

ಇಪ್ಪತ್ತುನಾಲ್ಕನೆಯ ಖಂಡ

೧-೨. ಯಜ್ಞದ ಸವನಗಳು ಮೂರೂ ಕ್ರಮವಾಗಿ ವಸುಗಳು, ರುದ್ರರು, ಆದಿತ್ಯರು ಇವರುಗಳಿಗೆ ಸೇರಿರುತ್ತವೆ. ಆದ್ದರಿಂದ ಯಜಮಾನನು ಯಜ್ಞಫಲವಾದ ಲೋಕವನ್ನು ಪೂರ್ಣವಾಗಿ ಪಡೆದುಕೊಳ್ಳುವದಕ್ಕೆ ಆಯಾ ಸವನದ ಸಾಮ, ಹೋಮ, ಉತ್ಥಾನ - ಇವುಗಳನ್ನು ಅರಿತುಕೊಂಡಿರಬೇಕು.

೩-೧೬. ಇಂಥಿಂಥ ಸಾಮಗಳನ್ನು ಆಯಾ ಸವನದಲ್ಲಿ ಗಾನಮಾಡಿ, ಆಯಾ ಮಂತ್ರಗಳಿಂದ ಹೋಮವನ್ನೂ ಉತ್ಥಾನವನ್ನೂ ಆಚರಿಸಿದರೆ ಸವನದೇವತೆಗಳು ಸವನದ ಫಲವನ್ನು ಕೊಡುತ್ತಾರೆಂದು ಈ ಕಂಡಿಕೆಗಳಲ್ಲಿ ಹೇಳಿದೆ.

ಮೂರನೆಯ ಅಧ್ಯಾಯದ ಸಾರ

ಈ ಅಧ್ಯಾಯದಲ್ಲಿ ಮಧುವಿದ್ಯೆ, ಗಾಯತ್ರೀಬ್ರಹ್ಮೋಪಾಸನೆ, ಶಾಂಡಿಲ್ಯವಿದ್ಯೆ, ಕೋಶವಿದ್ಯೆ, ಪುರುಷವಿದ್ಯೆ, ಮನಆಕಾಶಬ್ರಹ್ಮೋಪಾಸನೆಗಳು - ಇವುಗಳನ್ನು ಹೇಳಿದೆ.

ಖಂಡಗಳು ಒಂದರಿಂದ ಹನ್ನೊಂದರವರೆಗೆ

ಸೂಚನೆ : ಇಲ್ಲಿ ಮೊದಲು ಕೊಟ್ಟಿರುವದು ಖಂಡಸಂಖ್ಯೆ, ಮುಂದೆ ಕೊಟ್ಟಿರುವದು ಕಂಡಿಕೆಗಳ ಸಂಖ್ಯೆ.

ಖಂ. ೧ ಕಂ. ೧-೪. ಆದಿತ್ಯನು ದೇವಮಧು. ಆ ಮಧುವಿಗೆ ದ್ಯುಲೋಕವೇ ಆಡ್ಡಬಿದಿರು ; ಅಂತರಿಕ್ಷವು ಹುಟ್ಟಿ ; ರಶ್ಮಿಗಳಲ್ಲಿರುವ ಅಪ್ಪೇ

ಭ್ರಮರಬೀಜಗಳು. ಋಕ್ಕುಗಳೆಂಬ ಭ್ರಮರಗಳು ಋಗ್ವೇದವೆಂಬ ಹೂವಿನಿಂದ ಹೀರಿಕೊಂಡುಬಂದಿರುವ - ಕರ್ಮದಲ್ಲಿ ಅವು ಉಪಯುಕ್ತವಾದಾಗ ಉಂಟಾಗುವ ಯಶಸ್ಸು, ತೇಜಸ್ಸು, ಇಂದ್ರಿಯ, ವೀರ್ಯ, ಅನ್ನ -ಎಂಬ ರಸವು ಪೂರ್ವದಿಕ್ಕಿನ ರಶ್ಮಿಗಳೆಂಬ ಮಧುನಾಡಿಗಳಲ್ಲಿ ರೋಹಿತರೂಪದಿಂದ ನಿಂತಿರುತ್ತದೆ.

ಖಂ. ೨ ಕಂ. ೧-೩. ಹೀಗೆಯೇ ಯಜುಸ್ಸುಗಳಿಂದ ಉಂಟಾದ ರಸವು ದಕ್ಷಿಣದಿಕ್ಕಿನ ರಶ್ಮಿಗಳಲ್ಲಿ ಶುಕ್ಲರೂಪದಿಂದ ನಿಂತಿರುತ್ತದೆ.

ಖಂ. ೩ ಕಂ. ೧-೩. ಸಾಮಗಳಿಂದ ಉಂಟಾದ ರಸವು ಪಶ್ಚಿಮದಿಕ್ಕಿನ ರಶ್ಮಿಗಳಲ್ಲಿ ಕೃಷ್ಣರೂಪದಿಂದ ನಿಂತಿರುತ್ತದೆ.

ಖಂ. ೪ ಕಂ. ೧-೩. ಅಥರ್ವಾಂಗಿರಸನಿಂದ ದೃಷ್ಟವಾದ ಮಂತ್ರಗಳು ಪಾರಿಪ್ಲವನದಲ್ಲಿ ಪ್ರಯುಕ್ತವಾಗುವ ಇತಿಹಾಸಪುರಾಣಗಳೆಂಬ ಪುಷ್ಪಗಳಿಂದ ತಂದ ರಸವು ಹೆಚ್ಚಿನ ಕೃಷ್ಣರೂಪವಾಗಿ ಉತ್ತರದ ರಶ್ಮಿಗಳಲ್ಲಿ ನಿಂತಿರುತ್ತದೆ.

ಖಂ. ೫ ಕಂ. ೧-೩. ಲೋಕದ್ವಾರೀಯಾದಿ ವಿಧಿಗಳೂ ಕರ್ಮಾಂಗ ವಿಷಯವಾದ ಉಪಾಸನೆಗಳೂ ಪ್ರಣವವೆಂಬ ಪುಷ್ಪದಿಂದ ತಂದ ರಸವು ಆದಿತ್ಯನ ಮೇಲುಗಡೆಯ ರಶ್ಮಿಗಳಲ್ಲಿ ಆದಿತ್ಯನ ನಡುವೆ ಇರುತ್ತದೆ.

೬ ರಿಂದ ೧೦ನೆಯ ಖಂಡಗಳು. ಕೆಂಪುಬಣ್ಣದ ಮೊದಲನೆಯ ಅಮೃತರಸವನ್ನು ಅಗ್ನಿಪ್ರಮುಖರಾದ ವಸುಗಳು ದರ್ಶನಮಾಡುವದರಿಂದಲೇ ಉಪಭೋಗಿಸಿ ತೃಪ್ತರಾಗಿರುತ್ತಾರೆ. ಅವರು ತಮ್ಮ ಕಾಲವು ಬಂದಾಗಲೇ ಉತ್ಸಾಹಭರಿತರಾಗಿ ಆ ರಸವನ್ನು ಉಪಭೋಗಿಸುತ್ತಾರೆ ; ಮಿಕ್ಕ ಕಾಲದಲ್ಲಿ ಉದಾಸೀನರಾಗಿರುತ್ತಾರೆ. ಇದರಂತೆ ಬಿಳಿಯಬಣ್ಣದ ಎರಡನೆಯ ಅಮೃತರಸವನ್ನು ರುದ್ರರು ಉಪಭೋಗಿಸುತ್ತಾರೆ ; ಮೂರನೆಯದಾದ ಕೃಷ್ಣರೂಪದ ಅಮೃತವನ್ನು ಆದಿತ್ಯರು ಉಪಭೋಗಿಸುತ್ತಾರೆ ; ನಾಲ್ಕನೆಯದಾದ ಹೆಚ್ಚುಕಪ್ಪಿನ ಬಣ್ಣದ ಅಮೃತ ರಸವನ್ನು ಮರುತ್ತರು ಉಪಭೋಗಿಸುತ್ತಾರೆ ಐದನೆಯದನ್ನು ಸಾಧ್ಯರು ಉಪಭೋಗಿಸುತ್ತಾರೆ.

ಯಾವನು ಹೀಗೆಂದು ಉಪಾಸನೆಮಾಡುವನೋ ಅವನು ವಸುಸಾಯುಜ್ಯವನ್ನು ಹೊಂದಿ, ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಮುಳುಗುವಷ್ಟು ಕಾಲವೂ ವಸುಗಳ ಅಧಿಪತ್ಯವನ್ನೂ ಸ್ವಾರಾಜ್ಯವನ್ನೂ ಪಡೆದುಕೊಂಡಿರು

ವನು; ಅದರ ಎರಡರಷ್ಟು ಕಾಲದವರೆಗೆ - ಸೂರ್ಯನು ದಕ್ಷಿಣದಲ್ಲಿ ಉದಯಿಸಿ ಉತ್ತರದಲ್ಲಿ ಮುಳುಗುವಷ್ಟು ಕಾಲವೂ - ರುದ್ರರ ಸ್ವಾರಾಜ್ಯವನ್ನು ಪಡೆದುಕೊಂಡಿರುವನು ; ಅದರ ಎರಡರಷ್ಟು ಕಾಲ - ಸೂರ್ಯನು ಪಶ್ಚಿಮದಲ್ಲಿ ಉದಯಿಸಿ ಪೂರ್ವದಲ್ಲಿ ಅಸ್ತಮವಾಗುವಷ್ಟು ಕಾಲವೂ - ಆದಿತ್ಯರ ಸಾಯುಜ್ಯವನ್ನು ಪಡೆದಿರುವನು ; ಅದರ ಎರಡರಷ್ಟು ಕ - ಸೂರ್ಯನು ಉತ್ತರದಲ್ಲಿ ಉದಯಿಸಿ ದಕ್ಷಿಣದಲ್ಲಿ ಅಸ್ತವಾಗುವಷ್ಟು ಕಾಲವೂ - ಮರುತ್ತರ ಸ್ವಾರಾಜ್ಯವನ್ನು ಪಡೆದುಕೊಂಡಿರುವನು ; ಅದರ ಎರಡರಷ್ಟು ಕಾಲ ಸೂರ್ಯನು ಮೇಲುಗಡೆ ಉದಯಿಸಿ ಕೆಳಗಡೆ ಅಸ್ತವಾಗುವವರೆಗೂ - ಸಾಧ್ಯರ ಸ್ವಾರಾಜ್ಯವನ್ನು ಪಡೆದುಕೊಂಡಿರುವನು.

ಖಂ. ೧೧ ಕಂ. ೧-೩. ಆಮೇಲೆ ಸೂರ್ಯನಿಗೆ ಉದಯಾಸ್ತಗಳಿರುವದಿಲ್ಲ; ಬ್ರಹ್ಮ ಸ್ವರೂಪದಲ್ಲಿಯೇ ಆಗ ಸ್ಥಿತಿಯಿದ್ದುಬಿಡುತ್ತದೆ. ಈ ಉಪಾಸಕನಿಗೂ ಎಂದೆಂದಿಗೂ ಹಗಲೇ ಆಗಿರುತ್ತದೆ. ಆಗ ಅದ್ವಿತೀಯವಾದ ಸ್ವಯಂಜ್ಯೋತಿಯಾದ ಬ್ರಹ್ಮದ ಬೆಳಕಿನಲ್ಲಿಯೇ ಅವನು ಇದ್ದುಕೊಂಡುಬಿಡುತ್ತಾನೆ.

ಖಂ. ೧೧ ಕಂ. ೪-೬. ಈ ಮಧುವಿದ್ಯೆಯನ್ನು ಹಿರಣ್ಯಗರ್ಭನು ಪ್ರಜಾಪತಿಗೆ ಹೇಳಿಕೊಟ್ಟನು ; ಅವನು ಮನುವಿಗೂ ಮನುವು ಮಿಕ್ಕ ಪ್ರಜೆಗಳಿಗೂ ತಿಳಿಸಿಕೊಟ್ಟರು. ಈ ವಿದ್ಯೆಯನ್ನು ಜ್ಯೇಷ್ಠಪುತ್ರನಾದ ಉದ್ದಾಲಕ ಆರುಣಿಗೂ ಅವನ ತಂದೆಯು ತಿಳಿಸಿಕೊಟ್ಟನು. ಈ ವಿದ್ಯೆಯನ್ನು ಮಿಕ್ಕವರು ತಮ್ಮ ಜ್ಯೇಷ್ಠಪುತ್ರನಿಗೆ ಅಥವಾ ಯೋಗ್ಯನಾದ ಶಿಷ್ಯನಿಗೆ ಹೇಳಿಕೊಡಬೇಕು ; ಮಿಕ್ಕವರಿಗೆ ಹೇಳಿಕೊಡಬಾರದು. ಏಕೆಂದರೆ ಈ ವಿದ್ಯೆಯ ದಾನವೆಂಬುದು ಧನಪೂರ್ಣವಾದ ಇಡಿಯ ಭೂಮಿಯ ದಾನಕ್ಕಿಂತಲೂ ಹೆಚ್ಚಿನದು.

ಖಂಡಗಳು ಹನ್ನೆರಡರಿಂದ ಹದಿಮೂರು ಪೂರ

ಖಂ. ೧೨ ಕಂ. ೧-೫. ಸ್ಥಾವರಜಂಗಮಾತ್ಮಕವಾದ ಭೂತಗಳ ರೂಪದಲ್ಲಿರುವ ಇದೆಲ್ಲವೂ ಗಾಯತ್ರಿಯೇ. ಹೇಗೆಂದರೆ ಗಾಯತ್ರಿಯು ವಾಕ್ಕೇ ; ಏಕೆಂದರೆ ವಾಕ್ಕು ಎಲ್ಲಾ ಭೂತಗಳನ್ನೂ ಹೇಳುತ್ತದೆ (ಗಾಯತಿ), ಮತ್ತು ಕಾಪಾಡುತ್ತದೆ (ತ್ರಾಯತೇ). ಈ ಸರ್ವಭೂತವಾಗಿರುವ ಗಾಯತ್ರಿಯು ಪೃಥಿವಿಯೇ ; ಏಕೆಂದರೆ ಸರ್ವಭೂತಗಳೂ ಪೃಥಿವಿಯಲ್ಲಿ ಇವೆ. ಹೀಗೆ ಸರ್ವ

ಭೂತಗಳ ಸಂಬಂಧದಿಂದ ಪೃಥಿವಿಯೂ ಗಾಯತ್ರಿಯಾಯಿತು. ಈ ಪೃಥಿವಿಯು ಪಾರ್ಥಿವಶರೀರವೇ ; ಶರೀರದಲ್ಲಿ ಭೂತಶಬ್ದವಾಚ್ಯವಾದ ಪ್ರಾಣಗಳಿರುವದರಿಂದ ಅದಕ್ಕೂ ಗಾಯತ್ರೀತ್ವವಿದೆ. ಈ ಶರೀರಗಾಯತ್ರಿಯು ಹೃದಯವೇ ; ಏಕೆಂದರೆ ಹೃದಯದಲ್ಲಿಯೇ ಭೂತಶಬ್ದವಾಚ್ಯವಾದ ಪ್ರಾಣಗಳಿರುತ್ತವೆ. ಹೀಗೆ ನಾಲ್ಕು ಪಾದ ಗಳುಳ್ಳ ಗಾಯತ್ರಿಯು ವಾಕ್ಕು, ಭೂತ, ಪೃಥಿವಿ, ಶರೀರ, ಹೃದಯ, ಪ್ರಾಣ - ಎಂಬ ಆರು ರೂಪವಾಗಿರುತ್ತದೆ - ಎಂದು ಉಪಾಸನೆಮಾಡಬೇಕು.

ಖಂ. ೧೨ ಕಂ. ೬. ಈ ಗಾಯತ್ರೀಬ್ರಹ್ಮದ ಮಹಿಮೆಯನ್ನೇ ಋಕ್ಕು ಹೀಗೆಂದು ವರ್ಣಿಸುತ್ತದೆ. ಈತನ ಮಹಿಮೆಯು ಇಷ್ಟೂ ಆಗಿದೆ ; ಆದರೆ ಈ ಪುರುಷನು ಅದಕ್ಕಿಂತ ಹೆಚ್ಚಿನ ಸ್ವರೂಪದವನಾಗಿರುತ್ತಾನೆ. ಇವನಿಗೆ ಭೂತಗಳೆಲ್ಲವೂ ಪಾದಮಾತ್ರ, ಇವನ ಅಮೃತವಾದ ಮೂರು ಪಾದವು ದಿವದಲ್ಲಿ ಎಂದರೆ ಸ್ವಾತ್ಮರೂಪದಲ್ಲಿಯೇ ಇದ್ದುಕೊಂಡಿರುತ್ತದೆ.

ಖಂ. ೧೨ ಕಂ. ೭-೯. ಗಾಯತ್ರೀದ್ವಾರದಿಂದ ಹೇಳಿದ ಈ ಬ್ರಹ್ಮವಿದೆಯಲ್ಲ, ಇದು ಹೊರಗಿನ ಭೂತಾಕಾಶವೇ ; ಆ ಭೂತಾಕಾಶವು ಶರೀರ ದೊಳಗಿನ ಕನಸ್ಸಿನ ಆಕಾಶವೇ ; ಆ ಶರೀರಾಕಾಶವು ಹೃದಯದೊಳಗಿನ ಆಕಾಶವೇ. ಆ ಆಕಾಶದಲ್ಲಿ ಚಿಂತಿಸುವ ಬ್ರಹ್ಮವು ಪೂರ್ಣವಾದದ್ದು, ಅವಿನಾಶಿ ಎಂದು ಉಪಾಸನೆಮಾಡಬೇಕು. ಯಾವನು ಈ ಬ್ರಹ್ಮವನ್ನು ಸಾಕ್ಷಾತ್ಕಾರಮಾಡಿಕೊಳ್ಳು ವನೋ ಅವನಿಗೆ ಪೂರ್ಣವೂ ಅವಿನಾಶಿಯೂ ಆದ ಶ್ರೇಯ ಲಾಭವಾಗುವದು.

ಖಂ. ೧೩ ಕಂ. ೧ ರಿಂದ ೬. ಹೃದಯದಲ್ಲಿ ಉಪಾಸನೆಮಾಡಬೇಕಾಗಿ ರುವ ಈ ಗಾಯತ್ರೀಬ್ರಹ್ಮಕ್ಕೆ ಐವರು ದ್ವಾರಪಾಲರು. ಹೃದಯದ ಪೂರ್ವದ ರಂಧ್ರದಲ್ಲಿರುವ ಪ್ರಾಣವು, ಚಕ್ಷುಸ್ಸು, ಆದಿತ್ಯನು ; ಆದಿತ್ಯನು ಚಕ್ಷುಃಪ್ರಾಣಗಳ ಸಂಬಂಧದಿಂದ ಹೃದಯದಲ್ಲಿರುತ್ತಾನೆ ಎಂದು ಉಪಾಸನೆಮಾಡಬೇಕು. ಹೀಗೆಯೇ ಚಂದ್ರ, ಶ್ರೋತ್ರ, ವ್ಯಾನ - ಇವುಗಳು ದಕ್ಷಿಣದ ರಂಧ್ರದಲ್ಲಿರುತ್ತವೆ ; ಅಗ್ನಿ, ವಾಕ್ಕು, ಅಪಾನ - ಇವು ಪಶ್ಚಿಮರಂಧ್ರಲ್ಲಿರುತ್ತವೆ ; ಪರ್ಜನ್ಯ, ಮನಸ್ಸು, ಸಮಾನ - ಇವು ಉತ್ತರರಂಧ್ರದಲ್ಲಿರುತ್ತವೆ ; ಆಕಾಶ, ವಾಯು, ಉದಾನ - ಇವು ಮೇಲುಗಡೆಯ ರಂಧ್ರದಲ್ಲಿ. ಈ ಐದು ರಂಧ್ರಗಳಲ್ಲಿರುವ ದ್ವಾರಪಾಲರನ್ನು ಕ್ರಮವಾಗಿ ತೇಜಸ್ಸು, ಅನ್ನಾದ್ಯ ; ಶ್ರೀ, ಯಶಸ್ಸು ; ಬ್ರಹ್ಮವರ್ಚಸ್ಸು, ಅನ್ನಾದ್ಯ ; ಕೀರ್ತಿ, ವ್ಯುಷ್ಟಿ ; ಓಜಸ್ಸು

ಮಹತ್ತ್ವ - ಎಂದು ಉಪಾಸನೆಮಾಡಬೇಕು. ಈ ಉಪಾಸಕನಿಗೆ ವೀರಪುತ್ರನು ಜನಿಸುವನು. ಹಾರ್ದಬ್ರಹ್ಮದ ಪ್ರವೇಶವು ದೊರಕುವದು.

ಖಂ. ೧೩ ಕಂ. ೭ ರಿಂದ ೮ ಪೂರ. ಸಂಸಾರವನ್ನು ಮೀರಿ ಸ್ವಯಂ ಜ್ಯೋತಿಯಾಗಿರುವ ಮಿಗಿಲಿಲ್ಲದಷ್ಟು ಉತ್ತಮವಾಗಿರುವ ಲೋಕಗಳಲ್ಲಿಯೂ ಇರುವ ಜ್ಯೋತಿಯೇ ಚಕ್ಷುಶ್ರೋತ್ರಗ್ರಾಹ್ಯವಾದ ಬಿಸಿ ಮತ್ತು ಸದ್ದು - ಎಂಬ ಲಿಂಗಗಳಿಂದ ಗಮ್ಯವಾಗಿ ಶರೀರದೊಳಗೆ ಇರುತ್ತದೆ ; ಇದು ದೃಷ್ಟವು, ಶ್ರುತವು ಎಂದು ಉಪಾಸನೆಮಾಡಬೇಕು. ಅದರಿಂದ ದರ್ಶನೀಯನೂ ವಿಶ್ರುತನೂ ಆಗುವನು, ಉತ್ತಮವಾದ ಸ್ವರ್ಗಲೋಕವೆಂಬ ಫಲವನ್ನು ಪಡೆದುಕೊಳ್ಳುವನು.

ಹದಿನಾಲ್ಕನೆಯ ಖಂಡ

ಈ ಖಂಡದಲ್ಲಿ ಶಾಂಡಿಲ್ಯವಿದ್ಯೆಯನ್ನು ಉಪದೇಶಿಸಿದೆ.

೧-೩. ಮನುಷ್ಯನು ಯಾವ ನಿಶ್ಚಯದಿಂದ ಸಾಯುವನೋ ಅದಕ್ಕನು ಗುಣವಾಗಿ ಸತ್ತಬಳಿಕ ಫಲವಾಗುವದು. ಇದೆಲ್ಲವೂ ಬ್ರಹ್ಮದಿಂದ ಹುಟ್ಟಿ ಅದರಲ್ಲಿಯೇ ಇದ್ದು, ಅದರಲ್ಲಿಯೇ ಲಯವಾಗುತ್ತಿರುವದರಿಂದ, ಬ್ರಹ್ಮವೇ ಆಗಿರುವದರಿಂದ ಶಾಂತನಾಗಿ ಹೀಗೆಂದು ನಿಶ್ಚಯಮಾಡಿಕೊಂಡು ಉಪಾಸನೆಮಾಡಬೇಕು. ಪರಮಾತ್ಮನು ಮನೋಮಯನು, ಪ್ರಾಣಶರೀರನು, ಭಾರೂಪನು, ಸತ್ಯಸಂಕಲ್ಪನು, ಆಕಾಶಾತ್ಮನು, ಸರ್ವಕರ್ಮನು, ಸರ್ವಕಾಮನು, ಸರ್ವಗಂಧನು, ಸರ್ವರಸನು, ಇದೆಲ್ಲವನ್ನೂ ವ್ಯಾಪಿಸಿರುವವನು, ವಾಗಾದಿಕರಣಹಿತನು, ಸಂಭ್ರಮರಹಿತನು ; ಅಣುವಿಗಿಂತಲೂ ಅಣುವಾಗಿ ಮಹತ್ತಿಗಿಂತಲೂ ಮಹತ್ತಾಗಿರುವವನು. ಇವನೇ ನನ್ನ ಆತ್ಮನು - ಎಂದು ಉಪಾಸನೆಮಾಡಬೇಕು.

೪. ಈ ಗುಣಗಳಿಂದ ಕೂಡಿದವನೇ ನನ್ನ ಆತ್ಮನಾದ ಬ್ರಹ್ಮವು ; ಇವನನ್ನು ದೇಹಪಾತವಾದ ಬಳಿಕ ಸೇರುವೆನು - ಎಂದು ಗುಣವಿಶಿಷ್ಟವಾದ ಬ್ರಹ್ಮವನ್ನು ಉಪಾಸನೆಮಾಡಬೇಕು. ಹೀಗೆಯೇ ಫಲವಾಗುವದೆಂದು ನಿಶ್ಚಿತವಾದ ಬುದ್ಧಿಯೊಡನೆ ಯಾವನು ಉಪಾಸನೆಮಾಡುವನೋ ಅವನಿಗೆ ಅಂಥ ಈಶ್ವರಭಾವವೇ ಫಲವಾಗುವದು - ಎಂದು ಶಾಂಡಿಲ್ಯನು ಹೇಳಿರುತ್ತಾನೆ.

ಹದಿನೈದನೆಯ ಖಂಡ

ಈ ಖಂಡದಲ್ಲಿ ವೀರಪುತ್ರನು ಹುಟ್ಟುವದಕ್ಕೆ ಬೇಕಾದ ಕೋಶವಿದ್ಯೆಯನ್ನು ಹೇಳಿದೆ.

೧-೨. ವಿಶ್ವಕೋಶಕ್ಕೆ ಅಂತರಿಕ್ಷವೇ ಹೊಟ್ಟೆ ಭೂಮಿಯೇ ತಳ ; ದ್ಯುಲೋಕವೇ ಮೇಲುಬಾಯಿ, ಇದು ಚಿರಕಾಲ ಇರತಕ್ಕದ್ದು. ಅದಕ್ಕೆ ಪೂರ್ವದಲ್ಲಿ ಜುಹೂ, ದಕ್ಷಿಣಕ್ಕೆ ಸಹಮಾನಾ, ಪಶ್ಚಿಮಕ್ಕೆ ರಾಜ್ಞೀ, ಉತ್ತರಕ್ಕೆ ಸುಭೂತಾ - ಎಂಬ ಭಾಗಗಳು. ಆ ದಿಕ್ಕುಗಳಿಗೆ ವಾಯುವೇ ಮಗು. ಹೀಗೆಂದು ತಿಳಿದವನಿಗೆ ಪುತ್ರಶೋಕವಿಲ್ಲ.

೩-೭. ಈ ಕೋಶವನ್ನು ಧ್ಯಾನಮಾಡಿ ಅರಿಷ್ಟಂ ಕೋಶಂ ಪ್ರಪದ್ಯೇ, ಪ್ರಾಣಂ ಪ್ರಪದ್ಯೇ, ಭೂಃ ಪ್ರಪದ್ಯೇ, ಭುವಃ ಪ್ರಪದ್ಯೇ, ಸ್ವಃ ಪ್ರಪದ್ಯೇ - ಎಂಬ ಮಂತ್ರಗಳನ್ನು ಅರ್ಥಾನುಸಂಧಾನಪೂರ್ವಕವಾಗಿ ಜಪಮಾಡಬೇಕು. ಇದರಿಂದ ಪುತ್ರನು ದೀರ್ಘಾಯುವಾಗುವನು.

ಹದಿನಾರನೆಯ ಖಂಡ

ಹದಿನಾರು ಹದಿನೇಳನೆಯ ಖಂಡಗಳಲ್ಲಿ ದೀರ್ಘಾಯುಸ್ಸಿಗಾಗಿ ಮಾಡುವ ಪುರುಷವಿದ್ಯೆಯನ್ನು ಹೇಳಿದೆ.

೧-೨. ಪುರುಷನೇ ಯಜ್ಞವು. ಅದಕ್ಕೆ ಇಪ್ಪತ್ತುನಾಲ್ಕು ವರ್ಷಗಳು ಪ್ರಾತಃಸವನವು ; ಏಕೆಂದರೆ ಗಾಯತ್ರಿಗೆ ಅಷ್ಟು ಅಕ್ಷರಗಳು. ಅದಕ್ಕೆ ಪ್ರಾಣಗಳೇ ವಸುಗಳು. ಆ ವಯಸ್ಸಿನಲ್ಲಿ ಯಾವದಾದರೂ ರೋಗವು ಬಂದರೆ 'ಪ್ರಾಣಗಳೆಂಬ ವಸುಗಳೇ. ಈ ನನ್ನ ಪ್ರಾತಃಸವನವನ್ನು ಮಾಧ್ಯಂದಿನಸವನಕ್ಕೆ ಸೇರಿಸಿರಿ !' ಎಂಬರ್ಥದ ಮಂತ್ರವನ್ನು ಜಪಿಸಬೇಕು.

೩-೪. ಮುಂದಿನ ನಲವತ್ತುನಾಲ್ಕು ವರ್ಷಗಳು ಮಾಧ್ಯಂದಿನ ಸವನವು; ಏಕೆಂದರೆ ತ್ರಿಷ್ಟುಪ್ಪಿಗೆ ಅಷ್ಟು ಅಕ್ಷರಗಳು. ಅದಕ್ಕೆ ಪ್ರಾಣಗಳೇ ರುದ್ರರು. ಆ ವಯಸ್ಸಿನಲ್ಲಿ ಯಾವದಾದರೂ ರೋಗವು ಬಂದರೆ ಪ್ರಾಣಗಳೆಂಬ ರುದ್ರರನ್ನು ಪ್ರಾರ್ಥಿಸುವ ಮಂತ್ರವನ್ನು ಜಪಿಸಬೇಕು.

೫-೬. ಮುಂದಿನ ನಲವತ್ತೆಂಟು ವರ್ಷಗಳು ಸಾಯಂಸವನವು ; ಏಕೆಂದರೆ ಜಗತೀ ಛಂದಸ್ಸಿಗೆ ಅಷ್ಟು ಅಕ್ಷರಗಳು. ಅದಕ್ಕೆ ಪ್ರಾಣಗಳೇ ಆದಿತ್ಯರು. ಆ ವಯಸ್ಸಿನಲ್ಲಿ ಏನಾದರೂ ರೋಗವು ಬಂದರೆ ಪ್ರಾಣಗಳೆಂಬ ಆದಿತ್ಯರನ್ನು ಪ್ರಾರ್ಥಿಸುವ ಮಂತ್ರವನ್ನು ಜಪಿಸಬೇಕು.

೭. ಈ ಯಜ್ಞದರ್ಶನವನ್ನು ಮಹಿದಾಸ ಐತರೇಯನು ಅರಿತುಕೊಂಡು 'ಎಲೈ ರೋಗವೆ, ನನ್ನನ್ನು ಸುಮ್ಮನೆ ಏತಕ್ಕೆ ಗೋಳುಗುಟ್ಟಿಸುತ್ತಿರುವೆ ? ಇಷ್ಟರಿಂದ ನಾನು ಸಾಯುವದಿಲ್ಲ !'- ಎಂದನಂತೆ. ಯಾವನು ಹೀಗೆಂದು ಉಪಾಸನೆ ಮಾಡುವನೋ ಅವನು ಮಹಿದಾಸನಂತೆ ನೂರುಹದಿನಾರು ವರ್ಷಗಳು ಜೀವಿಸಿರುತಾನೆ.

ಹದಿನೇಳನೆಯ ಖಂಡ

೧-೫. ಈ ಪುರುಷಯಜ್ಞಕ್ಕೆ ಹಸಿವು, ನೀರಡಿಕೆ, ಅರತಿ -ಇವೇ ದೀಕ್ಷೆಗಳು ; ತಿನ್ನುವದು, ಕುಡಿಯುವದು, ರತಿ - ಇವೇ ಉಪಸತ್ತುಗಳು ; ನಗುವದು, ಭಕ್ಷಿಸುವದು, ಮೈಥುನ - ಇವೇ ಸುತ್ತಶಸ್ತ್ರಗಳು ; ತಪಸ್ಸು, ದಾನ, ಆರ್ಜವ, ಅಹಿಂಸೆ, ಸತ್ಯವಚನ - ಇವೇ ದಕ್ಷಿಣೆಗಳು ; ಜನನವೇ ಸವನವು, ಮರಣವೇ ಅವಭೃಥವು. ಹೀಗೆಂದು ಯಜ್ಞತ್ವಸಂಪಾದನೆಯನ್ನು ಮಾಡಿಕೊಳ್ಳಬೇಕು.

೬-೭. ಈ ಯಜ್ಞದರ್ಶನವನ್ನು ಘೋರ ಆಂಗಿರಸನು ದೇವಕೀಪುತ್ರನಾದ ಕೃಷ್ಣನಿಗೆ ಹೇಳಿದ್ದರಿಂದ ಅವನಿಗೆ ಮತ್ತೊಂದು ಉಪಾಸನೆಯಲ್ಲಿ ಆಶೆಯೇ ಇಲ್ಲವಾಯಿತು. ಉಪಾಸಕನು ಸಾಯುವ ಕಾಲಕ್ಕೆ ಅಕ್ಷಿತಮಸಿ, ಅಚ್ಯುತಮಸಿ, ಪ್ರಾಣಸಂಶಿತಮಸಿ - ಎಂಬ ಮಂತ್ರತ್ರಯವನ್ನು ಜಪಿಸಬೇಕು. ಈ ವಿದ್ಯೆಯನ್ನು ಹೊಗಳುವದಕ್ಕೆ ಎರಡು ಋಕ್ಕುಗಳು ವೇದದಲ್ಲಿವೆ. ಸೂರ್ಯನಲ್ಲಿರುವ ಪರಮಾತ್ಮನನ್ನೂ ಹೃದಯದಲ್ಲಿರುವ ಪ್ರಾಣನನ್ನೂ ಒಂದೆಂದು ಭಾವಿಸಿ - ಈ ಯಜುಸ್ಸಿನಲ್ಲಿ ಪ್ರಕಾಶಿಸಿರುತ್ತದೆ, ಆ ಋಕ್ಕುಗಳಲ್ಲಿಯೂ ಹೊಗಳಿರುತ್ತದೆ.

ಹದಿನೆಂಟನೆಯ ಖಂಡ

ಈ ಖಂಡದಲ್ಲಿ ಅಧ್ಯಾತ್ಮವಾಗಿ ಮನೋಬ್ರಹ್ಮವನ್ನೂ ಅಧಿದೈವತವಾಗಿ ಆದಿತ್ಯಬ್ರಹ್ಮವನ್ನೂ ಉಪಾಸನೆಮಾಡಬೇಕೆಂದು ವಿಧಿಸಿದೆ.

೧-೨. ಅಧ್ಯಾತ್ಮವಾಗಿ ಮನಸ್ಸನ್ನು ಬ್ರಹ್ಮವೆಂದೂ ಅಧಿದೈವತವಾಗಿ ಆದಿತ್ಯನನ್ನು ಬ್ರಹ್ಮವೆಂದೂ ಉಪಾಸನೆಮಾಡಬೇಕು. ಮನೋಬ್ರಹ್ಮಕ್ಕೆ ವಾಕ್ಕು, ಪ್ರಾಣ, ಚಕ್ಷುಸ್ಸು ಶ್ರೋತ್ರ - ಎಂಬಿವು ಪಾದಗಳು ; ಆಕಾಶಬ್ರಹ್ಮಕ್ಕೆ ಅಗ್ನಿ, ವಾಯು, ಆದಿತ್ಯ, ದಿಕ್ಕುಗಳು - ಇವು ಪಾದಗಳು.

೩-೬. ಮನೋಬ್ರಹ್ಮದ ವಾಕ್ಪಾದಕ್ಕೆ ಅಗ್ನಿ, ಪ್ರಾಣಪಾದಕ್ಕೆ ವಾಯು, ಚಕ್ಷುಃಪಾದಕ್ಕೆ ಆದಿತ್ಯ, ಶ್ರೋತ್ರಪಾದಕ್ಕೆ ದಿಕ್ಕುಗಳು - ಹೀಗೆ ಅನುಗ್ರಹೀತೃಗಳು. ಅಧಿದೈವತಪಾದಗಳಿಂದ ಅಧ್ಯಾತ್ಮಪಾದಗಳು ಹೊಳೆಯುತ್ತಿವೆ, ತಮ್ಮ ತಮ್ಮ ಕಾರ್ಯದಲ್ಲಿ ವ್ಯಾಪೃತವಾಗುತ್ತಿವೆ.

ಹತ್ತೊಂಬತ್ತನೆಯ ಖಂಡ

ಇಲ್ಲಿ ಆದಿತ್ಯಬ್ರಹ್ಮದ ಉಪಾಸನೆಯನ್ನು ಹೇಳಿದೆ.

೧-೩. ಆದಿತ್ಯನೇ ಬ್ರಹ್ಮವೆಂದು ಉಪಾಸನೆಮಾಡಬೇಕು. ಆದಿತ್ಯನು ಹುಟ್ಟಿದ್ದು ಹೇಗೆಂದರೆ ಅವ್ಯಾಕೃತವಾದ ಜಗತ್ತು ವ್ಯಾಕೃತವಾಗುವಾಗ ಮೊಳೆತು ಅಂಡವಾಯಿತು. ಸಂವತ್ಸರದ ಮೇಲೆ ಒಡೆದುಕೊಂಡಿತು. ಅದರಿಂದ ಪೃಥಿವೀರೂಪದ ರಜತಕಪಾಲವೂ ದ್ಯುರೂಪವಾದ ಸುವರ್ಣಕಪಾಲವೂ ಆದವು. ಅದು ಒಡೆದುಕೊಳ್ಳುವಾಗ ಜರಾಯುವು ಪರ್ವತಗಳಾಯಿತು, ತೆಳುವಿನ ಪೊರೆಯು ಮೋಡವೂ ಮಂಜೂ ಆಯಿತು ; ನಾಡಿಗಳು ನದಿಗಳಾದವು, ಬಸ್ತಿಯ ಉದಕವು ಸಮುದ್ರವಾಯಿತು. ಕೊನೆಗೆ ಹುಟ್ಟಿದ ಶಿಶುವೇ ಆದಿತ್ಯನು. ಆದಿತ್ಯನು ಹುಟ್ಟಿದಾಗ ಮಹಾ ಕೋಲಾಹಲವಾಯಿತು, ಸರ್ವಭೂತಗಳೂ ಸರ್ವಕಾಮಗಳೂ ಹುಟ್ಟಿಕೊಂಡವು. ಈಗಲೂ ಸೂರ್ಯೋದಯವಾಗುವಾಗ ಹಾಗೆಯೇ ಆಗುತ್ತಿರುತ್ತದೆ.

೪. ಹೀಗೆಂದರಿತು ಯಾವನು ಆದಿತ್ಯನನ್ನು ಬ್ರಹ್ಮವೆಂದು ಉಪಾಸನೆಮಾಡುವನೋ ಅವನ ಬಳಿಗೆ ಸಾಧುಘೋಷಗಳು ಬರುವವು, ಸುಖವನ್ನೂ ಉಂಟುಮಾಡುವವು.

ನಾಲ್ಕನೆಯ ಅಧ್ಯಾಯದ ಸಾರ

ಒಂದರಿಂದ ಮೂರನೆಯ ಖಂಡಗಳ ಸಾರ

ಒಂದನೆಯ ಖಂಡ

೧-೬. ಜಾನಶ್ರುತಿಪೌತ್ರಾಯಣನು ಶ್ರದ್ಧೆಯಿಂದ ಛತ್ರಗಳನ್ನು ಕಟ್ಟಿಸಿ ಅನ್ನದಾನವನ್ನು ಮಾಡಿಸುವದರಲ್ಲಿ ಪ್ರಖ್ಯಾತನಾಗಿದ್ದನು. ಒಂದು ದಿನ ರಾತ್ರೆ ಅರಮನೆಯ ಮೇಲೆ ಕೆಲವು ಹಂಸಗಳು ಹಾದುಹಾರಿಹೋಗುತ್ತಿರುವಲ್ಲಿ ಆ ಸಾಲಿನಲ್ಲಿ ಹಿಂದುಗಡೆಯಿದ್ದ ಹಂಸವೊಂದು ತೀರ ಮುಂದೆ ಇದ್ದ ಹಂಸವನ್ನು ಕುರಿತು "ಭಲ್ಲಾಕ್ಷನೆ, ಜಾನಶ್ರುತಿಯ ಕಡೆಗೆ ಕಾಲಚಾಚದಿರು ; ಅವನ ಧರ್ಮಜ್ಯೋತಿಯು ನಿನ್ನನ್ನು ಸುಟ್ಟುಹಾಕಬಹುದು' ಎಂದಿತು. ಆಗ ಭಲ್ಲಾಕ್ಷನು "ಇವನೇನು ಮಹಾಪುರುಷ ? ಬಂಡಿಯ ರೈಕ್ವನೋ ಎನ್ನುವಹಾಗೆ ಹೇಳುತ್ತಿರುವೆಯಲ್ಲ !" ಎಂದಿತು. "ಆ ರೈಕ್ವನು ಎಂದರೆ ಹೇಗಿರುವನು ?" ಎಂದು ಹಿಂದಿನ ಹಂಸವು ಕೇಳಿದ್ದಕ್ಕೆ "ಪಗಡೆಯಲ್ಲಿ ಕೃತಾಯವನ್ನು ಗೆದ್ದರೆ ಕೆಳಗಿನ ತ್ರೇತೆ, ದ್ವಾಪರ, ಕಲಿ - ಎಲ್ಲವೂ ಅದರಲ್ಲಿ ಹೇಗೆ ಸೇರಿಹೋಗಿರುವವೋ ಹಾಗೆಯೇ ಆ ರೈಕ್ವನು ಅರಿತಿರುವ ದೇವತೆಯನ್ನು ಉಪಾಸನೆಮಾಡುವವನಿಗೆ ಜನರು ಮಾಡುವ ಪುಣ್ಯವೆಲ್ಲವೂ ಸೇರಿಹೋಗಿರುವದು" ಎಂದಿತು.

೭-೮. ರಾಜನು ಬೆಳಗಾಗುತ್ತಲೂ ಎದ್ದು ತನ್ನ ದೂತನಿಗೆ ಆ ರೈಕ್ವನನ್ನು ಹುಡುಕುವಂತೆ ಅಪ್ಪಣೆ ಮಾಡಿದನು. ಊರೂರನ್ನು ಹುಡುಕಿ "ಸಿಕ್ಕಲಿಲ್ಲ' ಎಂದು ಅವನು ಹಿಂತಿರುಗಿದನು. 'ಬ್ರಹ್ಮಜ್ಞಾನಿಗಳು ಇರಬಹುದಾದ ಏಕಾಂತಸ್ಥಲಗಳಲ್ಲಿ ಹುಡುಕು' ಎಂದು ರಾಜನು ಮತ್ತೆ ಕಳುಹಿಸಲು 'ಆ ದೂತನು ಒಂದು ಬಂಡಿಯ ಕೆಳಗೆ ಕಜ್ಜಿಯನ್ನು ತುರಿಸಿಕೊಳ್ಳುತ್ತಾ ಕುಳಿತಿದ್ದ ರೈಕ್ವನನ್ನು ಕಂಡು ವಿಚಾರಿಸಿ ತಿಳಿದುಕೊಂಡು ರಾಜನ ಬಳಿಗೆ ಬಂದು ಹೇಳಿದನು.

ಎರಡನೆಯ ಖಂಡ

೧-೨. ಜಾನಶ್ರುತಿಪೌತ್ರಾಯಣನು ಆರುನೂರು ಗೋಗಳು, ಒಂದು ಕಂಠಮಾಲಿಕೆ, ಒಂದು ರಥ - ಇಷ್ಟನ್ನು ತೆಗೆದುಕೊಂಡು ಹೋಗಿ "ಭಗವಂತನೆ, ಇದನ್ನು ತೆಗೆದುಕೊಂಡು, ತಾವು ಉಪಾಸನೆಮಾಡುವ ದೇವತೆಯ ವಿದ್ಯೆಯನ್ನು ನನಗೆ ತಿಳಿಸಿಕೊಡಬೇಕು" ಎಂದು ಬೇಡಿಕೊಂಡನು.

೩-೫. ರೈಕ್ವನು ಪರೋಕ್ಷಜ್ಞಾನದಿಂದ ಜಾನಶ್ರುತಿಯು ಶೋಕಗ್ರಸ್ತನಾಗಿ ಬಂದಿರುವನೆಂದು ತಿಳಿದುಕೊಂಡನು. ಆದರೂ ಶೂದ್ರನಂತೆ ಬರಿಯ ಧನಮಾತ್ರ ದಿಂದ ಉಪಾಸನೆಯನ್ನು ಕಲಿತುಕೊಳ್ಳುವದಕ್ಕೆ ಪ್ರಯತ್ನಿಸಿದ್ದರಿಂದ ರಾಜನನ್ನು "ಎಲಾ ಶೂದ್ರ, ಈ ಅಲ್ಪಧನವು ನಿನ್ನಲ್ಲೇ ಇರಲಿ, ನನಗೇತಕ್ಕೆ ?" ಎಂದನು. ಆಗ ಜಾನಶ್ರುತಿಯು ಮತ್ತೆ ಸಾವಿರ ಗೋಗಳನ್ನೂ ಹಾರವನ್ನೂ ರಥವನ್ನೂ ತನ್ನ ಮಗಳನ್ನೂ ತೆಗೆದುಕೊಂಡು ಅವನ ಬಳಿಗೆ ಬಂದು "ರೈಕ್ವನೆ, ಇದೆಲ್ಲವನ್ನೂ ತೆಗೆದುಕೊ, ನನಗೆ ಆ ದೇವತಾವಿದ್ಯೆಯನ್ನು ಹೇಳಿಕೊಡು !" ಎಂದು ಕೇಳಿ ಕೊಂಡನು. ಅವನಿಗೆ ವಾಸಕ್ಕೆ ಒಂದು ಗ್ರಾಮವನ್ನೂ ಕೊಟ್ಟನು. ಆಗ ಋಷಿಯು ಈ ಸ್ತ್ರೀದಾನವನ್ನೇ ದ್ವಾರವಾಗಿಮಾಡಿಕೊಂಡು ಅವನಿಗೆ ವಿದ್ಯೆಯನ್ನು ಉಪದೇಶಿಸಿ ದನು. ರೈಕ್ವನು ವಾಸಮಾಡಿಕೊಂಡಿದ್ದ ಬಳಿಯ ಗ್ರಾಮಗಳು ಮಹಾವೃಷದೇಶದಲ್ಲಿ ರೈಕ್ವಪರ್ಣಗಳು ಎಂದು ಪ್ರಸಿದ್ಧವಾದವು.

ಮೂರನೆಯ ಖಂಡ

೧-೪. ಆಗ ರೈಕ್ವನು ಹೀಗೆಂದು ಉಪದೇಶಿಸಿದನು ; ಅಧಿದೈವತವಾಗಿ ವಾಯುವೇ ಸಂವರ್ಗವು. ಏಕೆಂದರೆ ಪ್ರಲಯದಲ್ಲಿ ಅಗ್ನಿ, ಸೂರ್ಯ, ಚಂದ್ರ, ಅಪ್ಪು- ಇವೆಲ್ಲ ವಾಯುವಿನಲ್ಲಿಯೇ ಲಯವಾಗುವವು. ಅಧ್ಯಾತ್ಮವಾಗಿ ಪ್ರಾಣವೇ ಸಂವರ್ಗವು ; ಏಕೆಂದರೆ ಸುಷುಪ್ತಿಯಲ್ಲಿ ವಾಕ್ಕು, ಚಕ್ಷುಸ್ಸು, ಶ್ರೋತ್ರ, ಮನಸ್ಸು - ಇವು ಪ್ರಾಣದಲ್ಲಿಯೇ ಲಯವಾಗುವವು. ಆದ್ದರಿಂದ ವಾಯು, ಪ್ರಾಣ - ಇವೆರಡನ್ನೂ ಸಂವರ್ಗವೆಂದು ಉಪಾಸನೆಮಾಡಬೇಕು.

೫-೭. ಹಿಂದಕ್ಕೆ ಶೌನಕ ಕಾಪೇಯ, ಅಭಿಪ್ರತಾರಿ ಕಾಕ್ಷಸೇನಿ - ಎಂಬಿಬ್ಬರು ಊಟಕ್ಕೆ ಕುಳಿತುಕೊಳ್ಳುತ್ತಿರುವಲ್ಲಿ ಈ ಸಂವರ್ಗವಿದ್ಯೆಯನ್ನು ಬಲ್ಲ ಬ್ರಹ್ಮಜ್ಞಾನಿಯೊಬ್ಬನು ಭಿಕ್ಷೆಗೆ ಬಂದನು. ಆಗ ಅವರಿಬ್ಬರೂ ಇವನು ಎಷ್ಟರಮಟ್ಟಿಗೆ ತಿಳಿದಿರುವನೋ ನೋಡೋಣ ಎಂದು ಭಿಕ್ಷೆಯನ್ನು ಹಾಕಿಸಲಿಲ್ಲ. ಆಗ ಆ ಬ್ರಹ್ಮಚಾರಿಯು "ನಾಲ್ವರು ದೇವತೆಗಳನ್ನು ನುಂಗುವ ಒಬ್ಬ ದೇವನಿರುವನು ; ಅವನು ಭುವನಕ್ಕೆಲ್ಲ ರಕ್ಷಕನು. ಬಹುಪ್ರಕಾರದಲ್ಲಿರುವ ಆತನನ್ನು ಮರ್ತ್ಯರು ಅರಿಯರು, ಕಾಪೇಯನೆ, ಅಭಿಪ್ರತಾರಿಯೆ, ಅವನಿಗಾಗಿಯೇ ಮಾಡಿಸಿರುವ ಅನ್ನವನ್ನು ನೀವು ಅವನಿಗೆ ಕೊಡಲಿಲ್ಲ!" ಎಂದನು. ಅದನ್ನು ಶೌನಕ ಕಾಪೇಯನು

ಮನದಟ್ಟುಮಾಡಿಕೊಂಡು ಹೀಗೆ ಉತ್ತರವಿತ್ತನು ; ''ದೇವತೆಗಳಿಗೆ ಆತ್ಮನೂ ಪ್ರಜೆಗಳ ಜನಕನೂ ಆಗಿರುವ ಅಭಜ್ಜದಂಷ್ಟ್ರನಾದ ಭಕ್ಷಕನಾದ ಸೂರಿಯೇ ಅವನು. ಅವನ ಮಹಿಮೆಯು ಅನಂತವು ; ಏಕೆಂದರೆ ಅವನು ಅನ್ನವಲ್ಲದ್ದನ್ನೂ ತಿನ್ನುತ್ತಿರುವನು. ಬ್ರಹ್ಮಚಾರಿಯೆ, ನಾವು ಈ ದೇವತೆಯನ್ನು ಚೆನ್ನಾಗಿ ಅರಿತು ಉಪಾಸನೆಮಾಡುತ್ತಿರುವೆವು'' ಎಂದು ಭಿಕ್ಷವನ್ನು ಬ್ರಹ್ಮಚಾರಿಗೆ ಕೊಡಿಸಿದನು.

೮. ಈ ದೇವತೆಗಳು ಅಧಿದೈವವಾಗಿ ಐದು, ಅಧ್ಯಾತ್ಮವಾಗಿ ಐದು - ಹೀಗೆ ಹತ್ತಾಗಿರುವದರಿಂದ ಇದು ಕೃತವಾಯಿತು. ಹತ್ತು ದಿಕ್ಕುಗಳಲ್ಲಿಯೂ ಇರುವ ಇದು ವಿರಾಟ್ಪುರುಷನಂತೆ ಅನ್ನವೂ ಕೃತಾಯದಂತೆ ಅನ್ನಾದಿಯೂ ಆಗಿರುತ್ತದೆ. ಇದು ಎಲ್ಲವನ್ನೂ ಒಳಗೊಂಡಿರುವದರಿಂದ ಎಲ್ಲವನ್ನೂ ಕಂಡುಕೊಂಡಿದೆ. ಯಾವನು ಹೀಗೆಂದು ಉಪಾಸನೆಮಾಡುವನೋ ಅವನಿಗೆ ಇದೆಲ್ಲವೂ ದೃಷ್ಟವಾಗುತ್ತದೆ, ಅವನು ದೀಪ್ತಾಗ್ನಿಯಾದ ಅನ್ನಾದನೂ ಆಗಿರುವನು. ಪ್ರಜಾಪತಿಪ್ರಾಪ್ತಿಯೆಂಬ ಅದೃಷ್ಟಫಲವೂ ಅವನಿಗೆ ಆಗುವದು.

ನಾಲ್ಕನೆಯ ಅಧ್ಯಾಯ

ನಾಲ್ಕನೆಯ ಖಂಡದಿಂದ ಒಂಬತ್ತನೆಯ ಖಂಡದವರೆಗಿನ ಗ್ರಂಥದ ಸಾರ

ಈ ಭಾಗದಲ್ಲಿ **ಷೋಡಶಕಲವಿದ್ಯೆ**ಯನ್ನು ಉಪದೇಶಿಸಿದೆ.

ನಾಲ್ಕನೆಯ ಖಂಡ

ಸತ್ಯಕಾಮಜಾಬಾಲನೆಂಬ ಹುಡುಗನು ತಾಯಿಯಾದ ಜಬಾಲೆಯನ್ನು 'ನಾನು ಬ್ರಹ್ಮಚರ್ಯವನ್ನು ಮಾಡಬೇಕು ; ನಮ್ಮ ಗೋತ್ರವು ಯಾವದು ?' ಎಂದು ಕೇಳಿದನು. ತಾಯಿಯು 'ಚಿಕ್ಕಂದಿನಲ್ಲಿ ನಿನ್ನನ್ನು ಪಡೆದೆನು ; ನಿಮ್ಮ ತಂದೆಯು ಬೇಗನೆ ಕಾಲವಾದರು. ಆದ್ದರಿಂದ ನನಗೆ ಗೋತ್ರವು ನೆನಪಿಲ್ಲ. ನಿನ್ನ ಹೆಸರು ಸತ್ಯಕಾಮ ಜಾಬಾಲ ; ಹೀಗೆಂದೇ ಗುರುಗಳಲ್ಲಿ ಹೇಳು' ಎಂದಳು.

ಸತ್ಯಕಾಮನು ಹಾರಿದ್ರುಮತ ಗೌತಮರಲ್ಲಿಗೆ ಬಂದು 'ತಮ್ಮ ಶಿಷ್ಯನಾಗಿರುತ್ತೇನೆ ; ನನಗೆ ದಯವಿಟ್ಟು ಉಪನಯನಮಾಡಿಸಬೇಕು' ಎಂದು

ಕೇಳಿಕೊಂಡನು. 'ನಿಮ್ಮ ಗೋತ್ರವು ಯಾವದು ?' ಎಂದು ಅವರು ಕೇಳಲು ತಾಯಿಯು ಹೇಳಿದ್ದನ್ನೇ ತಿಳಿಸಿದನು. ಅವರು 'ನಿಜವನ್ನೇ ಹೇಳಿದ್ದೀಯೆ ; ಆದ್ದರಿಂದ ನೀನು ಬ್ರಾಹ್ಮಣನೇ' ಎಂದು ಅವನಿಗೆ ಉಪನಯನವನ್ನು ಮಾಡಿಸಿದರು ಅವನಿಗೆ ನಾನೂರು ಬಡಕಲುದನಗಳನ್ನು ಕೊಟ್ಟು 'ಇವುಗಳನ್ನು ಕಾಯುತ್ತಿರು' ಎಂದು ಕಟ್ಟುಮಾಡಿದರು. ಇವುಗಳನ್ನು ಸಾವಿರಕ್ಕೆ ಹೆಚ್ಚಿಸಿದ ಮೇಲೆಯೇ ಹಿಂತಿರುಗುತ್ತೇನೆಂಬ ಪ್ರತಿಜ್ಞೆಯಿಂದ ಸತ್ಯಕಾಮನು ಹೊರಟನು.

ಐದನೆಯ ಖಂಡ

ಕಾಲಕ್ರಮದಲ್ಲಿ ದನಗಳು ಸಾವಿರವಾದವು. ಆಗ ವಾಯುದೇವತೆಯು ಒಂದು ಎತ್ತಿನಲ್ಲಿ ಆವಿಷ್ಟವಾಗಿ ''ಸತ್ಯಕಾಮನೆ, ಸಾವಿರ ದನಗಳಾದವು. ನಮ್ಮನ್ನು ಗುರುಗಳ ಮನೆಗೆ ಹೊಡೆದುಕೊಂಡು ಹೋಗು. ನಿನಗೆ ಬ್ರಹ್ಮದ ಒಂದು ಪಾದವನ್ನು ಹೇಳಿಕೊಡುವೆನು, ಕೇಳು. ಪೂರ್ವದಿಕ್ಕು, ಪಶ್ಚಿಮದಿಕ್ಕು, ದಕ್ಷಿಣದಿಕ್ಕು, ಉತ್ತರದಿಕ್ಕು - ಎಂಬ ನಾಲ್ಕು ಕಲೆಗಳುಳ್ಳದ್ದು ಬ್ರಹ್ಮದ ಒಂದು ಪಾದವು. ಇದಕ್ಕೆ ಪ್ರಕಾಶವಂತ ಎಂದು ಹೆಸರು. ಹೀಗೆಂದರಿತು ಇದನ್ನು ಉಪಾಸನೆಮಾಡಿದವನು ಪ್ರಖ್ಯಾತಿಪ್ರಕಾಶದಿಂದ ಬಾಳಿ ಪರದಲ್ಲಿ ಪ್ರಕಾಶಯುಕ್ತಲೋಕಗಳನ್ನೇ ಪಡೆದುಕೊಳ್ಳುವನು'' ಎಂದನು.

ಆರನೆಯ ಖಂಡ

''ಇನ್ನೊಂದು ಪಾದವನ್ನು ನಿನಗೆ ಅಗ್ನಿಯು ತಿಳಿಸಿಕೊಡುವದು'' ಎಂದು ಎತ್ತು ಸುಮ್ಮನಾಯಿತು. ಸತ್ಯಕಾಮನು ಮಾರನೆಯ ದಿನ ದನಗಳನ್ನು ಅಟ್ಟಿಕೊಂಡು ಹೊರಟನು. ಸಾಯಂಕಾಲದಲ್ಲಿ ಅವನ್ನು ಒಕ್ಕಡೆಯಲ್ಲಿ ತಡೆಗಟ್ಟಿ ಅಗ್ನಿಯನ್ನು ಇಟ್ಟುಕೊಂಡು ಪೂರ್ವಾಭಿಮುಖವಾಗಿ ಹತ್ತಿರಹತ್ತಿರವೇ ಕುಳಿತುಕೊಂಡನು.

ಅಗ್ನಿಯು ''ಸತ್ಯಕಾಮನೆ, ನಿನಗೆ ಬ್ರಹ್ಮದ ಒಂದು ಪಾದವನ್ನು ಹೇಳಿಕೊಡುವೆನು. ಪೃಥಿವಿ, ಅಂತರಿಕ್ಷ, ದ್ಯುಲೋಕ, ಸಮುದ್ರ - ಈ ನಾಲ್ಕು ಇದರ ಕಲೆಗಳು. ಬ್ರಹ್ಮದ ಈ ಪಾದಕ್ಕೆ ಅನಂತವಂತ ಎಂದು ಹೆಸರು. ಹೀಗೆಂದರಿತು ಇದನ್ನು ಉಪಾಸನೆಮಾಡಿದವನು ಅನಂತಗುಣಯುಕ್ತನಾಗಿ ಬಾಳಿ ಪರದಲ್ಲಿ ಅನಂತಗುಣವುಳ್ಳ ಲೋಕಗಳನ್ನು ಪಡೆದುಕೊಳ್ಳುವನು'' ಎಂದನು.

ಏಳನೆಯ ಖಂಡ

''ಹಂಸವು ನಿನಗೆ ಇನ್ನೊಂದು ಪಾದವನ್ನು ಹೇಳಿಕೊಡುವದು'' ಎಂದು ಅಗ್ನಿಯು ಸುಮ್ಮನಾಯಿತು. ಅವನು ಮಾರನೆಯ ದಿನವೂ ಮುಂದಕ್ಕೆ ಹೊರಟು ಸಾಯಂಕಾಲದಲ್ಲಿ ಅಗ್ನಿಯನ್ನಿಟ್ಟುಕೊಂಡು ಪೂರ್ವಾಭಿಮುಖವಾಗಿ ಕುಳಿತನು.

ಹಂಸವು ಅವನ ಬಳಿಗೆ ಬಂದು ಇಂತೆಂದಿತು : (ಇಲ್ಲಿ ಹಂಸದಲ್ಲಿ ಒಳಹೊಕ್ಕ ಆದಿತ್ಯನನ್ನೇ ಹಂಸವೆಂದಿದೆ). ''ಸತ್ಯಕಾಮನೆ, ನಿನಗೆ ಬ್ರಹ್ಮದ ಒಂದು ಪಾದವನ್ನು ಹೇಳಿಕೊಡುವೆನು. ಅಗ್ನಿ, ಸೂರ್ಯ, ಚಂದ್ರ, ಮಿಂಚು- ಇವೇ ಈ ಪಾದದ ನಾಲ್ಕು ಕಲೆಗಳು. ಇದಕ್ಕೆ ಜ್ಯೋತಿಷ್ಮಂತನೆಂದು ಹೆಸರು. ಯಾವನು ಹೀಗೆಂದರಿತು ಈ ಪಾದವನ್ನು ಉಪಾಸನೆಮಾಡುವನೋ ಅವನು ಕಾಂತಿಯುಕ್ತನಾಗಿ ಬಾಳಿ ಪರದಲ್ಲಿ ಜ್ಯೋತಿರ್ಯುಕ್ತವಾದ ಚಂದ್ರಾದಿತ್ಯಾದಿಲೋಕಗಳನ್ನು ಪಡೆದುಕೊಳ್ಳುವನು'' ಎಂದಿತು.

ಎಂಟನೆಯ ಖಂಡ

''ನೀರುಕೋಳಿಯು ನಿನಗೆ ಇನ್ನೊಂದು ಪಾದವನ್ನು ಹೇಳಿಕೊಡುವದು'' ಎಂದು ಹಂಸವು ಸುಮ್ಮನಾಯಿತು. ಅವನು ಮಾರನೆಯ ದಿನ ಸಾಯಂಕಾಲವೂ ಮತ್ತೊಂದು ಕಡೆಯಲ್ಲಿ ದನವನ್ನು ಕೂಡಿಸಿ ಹಿಂದಿನ ದಿನದಂತೆ ಅಗ್ನಿಯ ಬಳಿಯಲ್ಲಿ ಕುಳಿತನು.

ನೀರುಕೋಳಿಯು (ಅದರಲ್ಲಿ ಪ್ರವಿಷ್ಟನಾದ ಪ್ರಾಣನು), ''ಸತ್ಯಕಾಮನೆ, ನಿನಗೆ ಬ್ರಹ್ಮದ ನಾಲ್ಕನೆಯ ಪಾದವನ್ನು ಹೇಳಿಕೊಡುವೆನು. ಪ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು - ಇವೇ ಇದರ ಕಲೆಗಳು. ಇದಕ್ಕೆ ಆಯತನವೆಂದು ಹೆಸರು ಯಾವನು ಬ್ರಹ್ಮದ ಈ ಪಾದವನ್ನು ಹೀಗೆಂದರಿತು ಉಪಾಸನೆಮಾಡುವನೋ ಅವನು ಈ ಲೋಕದಲ್ಲಿ ಆಶ್ರಯವುಳ್ಳವನಾಗಿ ಬಾಳಿ, ಪರದಲ್ಲಿ ಅವಕಾಶಯುಕ್ತವಾದ ಲೋಕಗಳನ್ನು ಪಡೆದುಕೊಳ್ಳುವನು.

ಒಂಬತ್ತನೆಯ ಖಂಡ

ಸತ್ಯಕಾಮನು ಕೊನೆಗೆ ಗುರುಗಳ ಮನೆಗೆ ಬಂದನು. ಹಾರಿದ್ರುಮತರು ''ಸತ್ಯಕಾಮನೆ, ಬ್ರಹ್ಮಜ್ಞಾನಿಯಂತೆ ಕಾಣಿಸುತ್ತಿರುವೆಯಲ್ಲ! ನಿನಗೆ ಈ ವಿದ್ಯೆಯನ್ನು

ಯಾರು ಹೇಳಿಕೊಟ್ಟರು ?'' ಎಂದು ಕೇಳಿದರು. ಸತ್ಯಕಾಮನು ''ಮನುಷ್ಯರಂತೂ ಅಲ್ಲ. ಆದರೆ ಯಾರು ಹೇಳಿಕೊಟ್ಟರೇನು ? ನನಗೆ ತಾವೇ ಉಪದೇಶಿಸಬೇಕೆಂಬ ಇಚ್ಛೆ. ಆಚಾರ್ಯರಿಂದಲೇ ವಿದ್ಯೆಯನ್ನು ಪಡೆದುಕೊಂಡರೆ ಅದು ಉತ್ತಮಫಲವನ್ನು ಕೊಡುವದು ಎಂದು ತಮ್ಮಂಥವರಿಂದ ಕೇಳಿರುತ್ತೇನೆ'' ಎಂದನು. ಆಗ ಗುರುಗಳು ಇದೇ ಷೋಡಶಕಲವಿದ್ಯೆಯನ್ನು ಅವನಿಗೆ ಉಪದೇಶಿಸಿದರು. ಅದರಿಂದ ವಿದ್ಯೆಯಲ್ಲಿ ಒಂದಿಷ್ಟೂ ಅವನನ್ನು ಬಿಟ್ಟು ಹೋಗದಂತೆ ಗಟ್ಟಿಯಾಯಿತು.

ನಾಲ್ಕನೆಯ ಅಧ್ಯಾಯದ ಸಾರ

ಹತ್ತನೆಯ ಖಂಡದಿಂದ ಹದಿನೈದನೆಯ ಖಂಡಗಳ ಗ್ರಂಥದ ಸಾರ

ಈ ಭಾಗದಲ್ಲಿ ಅಗ್ನಿವಿದ್ಯೆಯನ್ನೂ ಉಪಕೋಸಲವಿದ್ಯೆಯನ್ನೂ ಹೇಳಿದೆ.

ಹತ್ತನೆಯ ಖಂಡ

ಉಪಕೋಸಲಕಾಮಲಾಯನನು ಸತ್ಯಕಾಮಜಾಬಾಲನಲ್ಲಿ ಬ್ರಹ್ಮಚಾರಿಯಾಗಿದ್ದುಕೊಂಡಿದ್ದನು. ಗುರುವು ಮಿಕ್ಕ ಶಿಷ್ಯರಿಗೆ ವಿದ್ಯೆಯನ್ನು ಹೇಳಿ ಮನೆಗೆ ಕಳುಹಿದ ಮೇಲೂ ಇವನಿಗೆ ಮಾತ್ರ ಹೇಳದೆ ಇದ್ದನು. ಹೆಂಡತಿಯು ಅರಿಕೆಮಾಡಿಕೊಂಡ ಮೇಲೂ ಆಚಾರ್ಯನು ತನಗೆ ವಿದ್ಯೆಯನ್ನು ಹೇಳದೆ ಇದ್ದದ್ದರಿಂದ ದುಃಖಿತನಾದ ಉಪಕೋಸಲನು ಸಂತಪ್ತನಾಗಿ ಊಟಮಾಡದೆ ಇದ್ದುಬಿಟ್ಟನು.

ಆಗ ಅಗ್ನಿಗಳೆಲ್ಲವೂ ಒಟ್ಟಾಗಿ ಪ್ರಾಣವು ಬ್ರಹ್ಮವು ; ಕಂ ಬ್ರಹ್ಮ, ಖಂ ಬ್ರಹ್ಮ - ಎಂದು ಉಪದೇಶಿಸಿದವು. ಉಪಕೋಸಲನಿಗೆ ಕಂ ಖಂ ಎಂಬಿವು ಹೇಗೆ ಬ್ರಹ್ಮವೆಂಬುದು ತಿಳಿಯಲಿಲ್ಲ. ಆಗ ಕಂ ಖಂ ಎಂಬಿವೆರಡೂ ಒಂದೇ ಬ್ರಹ್ಮದ ಸ್ವರೂಪವೆಂದೂ ಸರ್ವವ್ಯಾಪಿಯಾದ ಅಲೌಕಿಕಾನಂದವೇ ಬ್ರಹ್ಮವೆಂದೂ ತಿಳಿಸಿಕೊಟ್ಟವು.

ಹನ್ನೊಂದರಿಂದ ಹದಿಮೂರನೆಯ ಖಂಡದವರೆಗೆ

ಆಮೇಲೆ ಅಗ್ನಿಗಳು ಒಂದೊಂದಾಗಿ ತಮ್ಮತಮ್ಮ ವಿದ್ಯೆಯನ್ನು ತಿಳಿಸಿಕೊಟ್ಟವು. ಗಾರ್ಹಪತ್ಯಾಗ್ನಿಯು 'ಪೃಥಿವಿ, ಅಗ್ನಿ, ಅನ್ನ, ಆದಿತ್ಯ - ಎಂಬಿವು ನನ್ನ ತನುಗಳು ;

ಅಗ್ನ್ಯಾದಿತ್ಯರೂಪದಿಂದ ನಾನೊಬ್ಬನೇ ಇದೇನೆ. ಹೀಗೆಂದು ನನ್ನನ್ನು ಉಪಾಸನೆಮಾಡಿದವನು ಈ ಲೋಕದಲ್ಲಿ ನೂರು ವರ್ಷವೂ ಸುಖದಿಂದ ಪ್ರಜಾಸಂತತಿಯುಕ್ತನಾಗಿ ಬಾಳಿ ಸತ್ತಬಳಿಕ ನನ್ನ ಲೋಕವನ್ನು ಪಡೆಯುತ್ತಾನೆ' - ಎಂದು ತಿಳಿಸಿಕೊಟ್ಟಿತು.

ಆ ಬಳಿಕ ದಕ್ಷಿಣಾಗ್ನಿಯು 'ಅಪ್ಪು, ದಿಕ್ಕು, ನಕ್ಷತ್ರಗಳು, ಚಂದ್ರ - ಇವು ನನ್ನ ತನುಗಳು ; ಅಗ್ನಿಚಂದ್ರರ ರೂಪದಿಂದ ನಾನೊಬ್ಬನೇ ಇರುತ್ತೇನೆ. ಹೀಗೆಂದು ನನ್ನನ್ನು ಉಪಾಸನೆಮಾಡಿದವನಿಗೆ ಉಕ್ತರೀತಿಯಿಂದ ಇಹಪರಗತಿಯಾಗುವದು' ಎಂದು ತಿಳಿಸಿಕೊಟ್ಟಿತು.

ಆ ಬಳಿಕ ಆಹವನೀಯವು 'ಪ್ರಾಣ, ಆಕಾಶ, ದ್ಯುಲೋಕ, ಮಿಂಚು - ಎಂಬಿವು ನನ್ನ ತನುಗಳು. ಮಿಂಚಿನಲ್ಲಿರುವ ಪುರುಷನೂ ನಾನೂ ಬೇರೆಬೇರೆಯಲ್ಲ ; ಎರಡೂ ನಾನೇ. ಹೀಗೆಂದು ನನ್ನನ್ನು ಉಪಾಸನೆಮಾಡಿದವನಿಗೆ ಉಕ್ತರೀತಿಯ ಫಲವಾಗುವದು.

ಹದಿನಾಲ್ಕನೆಯ ಖಂಡ

ಅಗ್ನಿಗಳು ಒಟ್ಟಾಗಿ "ಅಪ್ಪ, ಇದು ನಮ್ಮಗಳ ಅಗ್ನಿವಿದ್ಯೆ, ಮತ್ತು ಆತ್ಮವಿದ್ಯೆ. ಮುಂದೆ ಆಚಾರ್ಯನು ಆತ್ಮವಿದ್ಯೆಯ ಗತಿಯನ್ನು ತಿಳಿಸಿಕೊಡುವನು" ಎಂದವು.

ಆಚಾರ್ಯನಾದ ಸತ್ಯಕಾಮನು ಕಾಲಾನುಕಾಲಕ್ಕೆ ಬಂದು "ನಿನ್ನ ಮುಖವನ್ನು ನೋಡಿದರೆ ಬ್ರಹ್ಮಜ್ಞಾನಿಯಂತೆ ಕಾಣುತ್ತಿರುವೆ ; ನಿನಗೆ ಹೇಳಿಕೊಟ್ಟವರು ಯಾರು ?" ಎಂದು ಕೇಳಿದನು. ಉಪಕೋಸಲನು ಅಗ್ನಿಗಳು ಹೇಳಿಕೊಟ್ಟ ವಿಷಯಗಳನ್ನು ಸಂಗ್ರಹವಾಗಿ ತಿಳಿಸಿದನು.

ಆಗ ಗುರುವು "ಅವು ಪೃಥಿವ್ಯಾದಿಲೋಕಗಳನ್ನು ಮಾತ್ರ ತಿಳಿಸಿಕೊಟ್ಟಿರುತ್ತವೆ. ನಾನು ಆ ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ಹೇಳಿಕೊಡುವೆನು. ಇದನ್ನು ಅರಿತುಕೊಂಡವನಿಗೆ, ತಾವರೆಯೆಲೆಗೆ ನೀರು ಅಂಟದಿರುವಂತೆ, ಪಾಪಕರ್ಮದ ಲೇಪವುಂಟಾಗದೆ ಇರುವದು" ಎಂದನು.

ಹದಿನೈದನೆಯ ಖಂಡ

ಸತ್ಯಕಾಮನು ಉಪಕೋಸಲನಿಗೆ ಮಾಡಿದ ಉಪದೇಶವೇನೆಂದರೆ :

"ಕಣ್ಣಿನಲ್ಲಿರುವ ಸರ್ವದ್ರಷ್ಟೃವಾದ ಪುರುಷನಿರುವನಲ್ಲ, ಅವನೇ ವ್ಯಾಪಕಾನಂದಸ್ವರೂಪನಾದ ಆ ಪರಮಾತ್ಮನು ; ಅದೇ ಅಮೃತವೂ ಅಭಯವೂ ಆದ ಬ್ರಹ್ಮವು. ಆ ಬ್ರಹ್ಮದ ಸ್ಥಾನವಾದದ್ದರಿಂದಲೇ ಕಣ್ಣಿನಲ್ಲಿ ತುಪ್ಪ ನೀರು - ಮುಂತಾದದ್ದನ್ನು ಚಿಮುಕಿಸಿದರೆ ಕಡೆಗಣ್ಣಿಗೇ ಬಂದುಬಿಡುವದು.

ಈ ಆತ್ಮನು ಸಂಯದ್ವಾಮನು, ಎಂದರೆ ಸರ್ವವಾಂಛಿತಗಳೂ ಬಂದು ಸೇರುವವು. ಇವನೇ ವಾಮನಿಯು ; ಎಂದರೆ ಸರ್ವವಾಮಗಳನ್ನೂ ಪುಣ್ಯಕರ್ಮ ಫಲಗಳನ್ನೂ ಪ್ರಾಣಿಗಳಿಗೆ ಒದಗಿಸತಕ್ಕವನು. ಇವನೇ ಭಾಮನಿಯು, ಎಂದರೆ ಎಲ್ಲಾ ಲೋಕಗಳಲ್ಲಿಯೂ ಹೊಳೆಯುತ್ತಿರುವವನು.

ಈ ಬ್ರಹ್ಮವಿದ್ಯೆಯನ್ನು ಅಳವಡಿಸಿಕೊಂಡವನಿಗೆ ಅಂತ್ಯಕರ್ಮವನ್ನು ಮಾಡಲಿ ಬಿಡಲಿ, ಅವನು ಅರ್ಚಿ, ಅಹಸ್ಸು, ಆಪೂರ್ಯಮಾಣಪಕ್ಷ, ಉತ್ತರಾಯಣಮಾಸ, ಸಂವತ್ಸರ, ಆದಿತ್ಯ, ಚಂದ್ರ, ವಿದ್ಯುತ್ - ಈ ದೇವತೆಗಳನ್ನು ಪಡೆಯುವನು. ಆ ವಿದ್ಯುತ್ತಿನಲ್ಲಿರುವಾಗ ಬ್ರಹ್ಮ ಲೋಕದಿಂದ ಬಂದ ಅಮಾನವಪುರುಷನು ಇವನನ್ನು ಹಿರಣ್ಯಗರ್ಭನ ಸಮೀಪಕ್ಕೆ ಒಯ್ಯುವನು. ಇದೇ ದೇವಪಥವು, ಬ್ರಹ್ಮಪಥವು. ಇದರಿಂದ ಹೋದವರು ಈ ಆವರ್ತರೂಪದ ಮಾನವಸೃಷ್ಟಿಗೆ ಮರಳಿಬರುವದಿಲ್ಲ."

ಹದಿನಾರು ಹದಿನೇಳನೆಯ ಖಂಡಗಳ ಸಾರ

ಈ ಖಂಡಗಳಲ್ಲಿ ಪ್ರಾಸಂಗಿಕವಾಗಿ ಕೆಲವು ಯಜ್ಞಧರ್ಮಗಳನ್ನು ವಿಧಿಸಿದೆ.

ಹದಿನಾರನೆಯ ಖಂಡ

ಯಜ್ಞವೆಂಬುದು ಈ ವಾಯುವೇ ; ಏಕೆಂದರೆ ಇದು ಬೀಸುತ್ತಿರುವಾಗ ಎಲ್ಲವನ್ನೂ ಶುದ್ಧಿಗೊಳಿಸುತ್ತದೆ - ಎಂದು ವಾಯುದೃಷ್ಟಿಯಿಂದ ಯಜ್ಞವನ್ನು ನೋಡ ಬೇಕು. ಈ ಯಜ್ಞಕ್ಕೆ, ವಾಕ್ಕು, ಮನಸ್ಸು - ಎಂದು ಎರಡು ಮಾರ್ಗಗಳಿವೆ. ಈ ಮಾರ್ಗಗಳಿಂದಲೇ ಯಜ್ಞವು ಮುಂದಕ್ಕೆ ಸಾಗುತ್ತದೆ. ಬ್ರಹ್ಮನೆಂಬ ಋತ್ವಿಜನು ಮೌನಾಚರಣೆಯಿಂದಲೂ ಹೋತೃ, ಅಧ್ವರ್ಯು, ಉದ್ಗಾತೃ- ಇವರು

ಮಂತ್ರೋಚ್ಚಾರಣೆಯಿಂದಲೂ ಈ ಮಾರ್ಗಗಳಿಗೆ ಸಂಸ್ಕಾರವನ್ನುಂಟುಮಾಡುತ್ತಾರೆ. ಈ ಎರಡರಲ್ಲಿ ಯಾವ ಸಂಸ್ಕಾರವು ತಪ್ಪಿದರೂ ಯಜ್ಞವು ಕೆಟ್ಟುಹೋಗುತ್ತದೆ, ಯಜಮಾನನಿಗೆ ಫಲವಾಗುವದಿಲ್ಲ.

ಬ್ರಹ್ಮನು ಪ್ರಾತರನುವಾಕದಿಂದ ಹಿಡಿದು ಪರಿಧಾನೀಯಋಕ್ಕುಗಳನ್ನು ಹೇಳುವವರೆಗೂ ಮೌನದಿಂದಿರಬೇಕು. ಹಾಗಿದ್ದರೆ ಮನೋಮಾರ್ಗವು ಸಂಸ್ಕೃತವಾಗುತ್ತದೆ, ಇಲ್ಲದಿದ್ದರೆ ಇಲ್ಲ.

ಹದಿನೇಳನೆಯ ಖಂಡ

ಪ್ರಜಾಪತಿಯು ಚೆನ್ನಾಗಿ ಧ್ಯಾನಮಾಡಿ ಲೋಕಗಳ ಸಾರವು ಅಗ್ನಿ, ವಾಯು, ಆದಿತ್ಯ - ಈ ದೇವತೆಗಳೆಂದೂ, ಈ ದೇವತೆಗಳ ಸಾರವು ಋಗ್ಯಜುಃಸಾಮಗಳೆಂದೂ, ಅವುಗಳ ಸಾರವು ಭೂರ್ಭುವಃಸ್ವರೆಂಬ ವ್ಯಾಹೃತಿಗಳೆಂದೂ ಕಂಡುಹಿಡಿದನು.

ಆದ್ದರಿಂದ ಋಕ್ಕಿನಿಂದ ಆದ ಕೊರತೆಯನ್ನು 'ಭೂಃ ಸ್ವಾಹಾ' ಎಂದು ಗಾರ್ಹಪತ್ಯದಲ್ಲಿ ಹೋಮಮಾಡುವದರಿಂದಲೂ ಯಜುಸ್ಸುಗಳಿಂದಾದ ಕೊರತೆಯನ್ನು 'ಭುವಃ ಸ್ವಾಹಾ' ಎಂದು ದಕ್ಷಿಣಾಗ್ನಿಯಲ್ಲಿ ಹೋಮಮಾಡುವದರಿಂದಲೂ ಸಾಮದಿಂದಾದ ಕೊರತೆಯನ್ನು 'ಸ್ವಃ ಸ್ವಾಹಾ' ಎಂದು ಆಹವನೀಯದಲ್ಲಿ ಹೋಮಮಾಡುವದರಿಂದಲೂ ಬ್ರಹ್ಮನು ಸರಿಪಡಿಸಿಕೊಳ್ಳಬೇಕು.

ಕ್ಷಾರ, ಚಿನ್ನ, ಬೆಳ್ಳಿ, ತವರ, ಸೀಸ, ಕಬ್ಬಿಣ, ಕಟ್ಟಿಗೆ, ಚರ್ಮ - ಇವುಗಳನ್ನು ಒಂದಕ್ಕೊಂದನ್ನು ಕೂಡಿಸುವ ಜಾಣನಂತೆ ಬ್ರಹ್ಮನು ಈ ಲೋಕದೇವತಾತ್ರಯಾವಿದ್ಯೆಗಳ ವೀರ್ಯದಿಂದ ಯಜ್ಞದ ಕೊರತೆಯನ್ನು ಹೋಗಲಾಡಿಸುವನು.

ಹೀಗೆ ಮೌನಪ್ರಾಯಶ್ಚಿತ್ತಗಳನ್ನು ಅರಿತಿರುವ ಬ್ರಹ್ಮನು ಋತ್ವಿಜನಾಗಿರುವ ಯಜ್ಞವು ಉತ್ತರಾಯಣಗತಿಗೆ ಕಾರಣವಾಗುವದು. ಜಾತಿಯ ಹೆಣ್ಣುಕುದುರೆಯು ಯೋಧರನ್ನು ರಕ್ಷಿಸುವಂತೆ ಈ ವಿದ್ಯೆಯನ್ನು ಬಲ್ಲ ಬ್ರಹ್ಮನೇ ಯಜ್ಞ, ಯಜಮಾನ, ಋತ್ವಿಜರು - ಎಲ್ಲರನ್ನೂ ಕಾಪಾಡುತ್ತಾನೆ. ಆದ್ದರಿಂದ ಇಂಥ ಬಲ್ಲ ಬ್ರಹ್ಮನೇ ಋತ್ವಿಜನಾಗಿರುವಂತೆ ಯಜಮಾನನು ನೋಡಿಕೊಳ್ಳಬೇಕು.

ಐದನೆಯ ಅಧ್ಯಾಯದ ಸಾರ

ಒಂದು ಎರಡನೆಯ ಖಂಡಗಳ ಸಾರ

ಇವುಗಳಲ್ಲಿ ಪ್ರಾಣೋಪಾಸನೆಯನ್ನೂ ಪ್ರಾಣೋಪಾಸಕನಿಗೆ ಮಂಥಕರ್ಮವನ್ನೂ ವಿಧಿಸಿದೆ.

ಒಂದನೆಯ ಖಂಡ

೧-೫. ಪ್ರಾಣಗಳಲ್ಲಿ ಜ್ಯೇಷ್ಠವೂ ಶ್ರೇಷ್ಠವೂ ಯಾವದೆಂಬುದನ್ನು ತಿಳಿದವನು ಜ್ಯೇಷ್ಠನೂ ಶ್ರೇಷ್ಠನೂ ಆಗುತ್ತಾನೆ. ಪ್ರಾಣವೇ ಜ್ಯೇಷ್ಠವೂ ಶ್ರೇಷ್ಠವೂ ಆಗಿರುತ್ತದೆ. ವಸಿಷ್ಠವನ್ನು ತಿಳಿದವನು ತಾನೂ ವಸಿಷ್ಠಧನವಂತನಾಗುತ್ತಾನೆ. ಪ್ರತಿಷ್ಠೆಯನ್ನು ತಿಳಿದವನು ಇಹಪರಲೋಕಗಳಲ್ಲಿ ಪ್ರತಿಷ್ಠೆಯನ್ನು ಹೊಂದುತ್ತಾನೆ. ಸಂಪತ್ತನ್ನು ತಿಳಿದವನು ಕಾಮಸಂಪತ್ತಿಯನ್ನು ಪಡೆದುಕೊಳ್ಳುತ್ತಾನೆ. ಆಯತನವನ್ನು ತಿಳಿದವನು ತನ್ನವರಿಗೆ ಆಯತನವಾಗುತ್ತಾನೆ ; ವಾಕ್ಕೇ ವಸಿಷ್ಠ, ಚಕ್ಷುಸ್ಸೇ ಪ್ರತಿಷ್ಠೆ, ಶ್ರೋತ್ರವೇ ಸಂಪತ್ತು, ಮನಸ್ಸೇ ಆಯತನ.

೬-೧೫. ವಾಗಾದಿಪ್ರಾಣಗಳು ತಮ್ಮಲ್ಲಿ ಯಾವನು ಶ್ರೇಷ್ಠನೆಂಬುದನ್ನು ನಿರ್ಧರಿಸುವದಕ್ಕಾಗಿ ಪ್ರಜಾಪತಿಯ ಬಳಿಗೆ ಹೋದವು. 'ನಿಮ್ಮಲ್ಲಿ ಯಾವನು ಉತ್ಕ್ರಾಂತನಾದರೆ ಶರೀರವು ಅತ್ಯಂತ ಅಮಂಗಲವಾಗಿ ಕಾಣುವದೋ ಅವನೇ ಶ್ರೇಷ್ಠನು' ಎಂದು ಪ್ರಜಾಪತಿಯೆಂದನು. ವಾಗಾದಿಗಳು ಈಗ ಒಂದೊಂದಾಗಿ ಶರೀರವನ್ನು ಬಿಟ್ಟು ವರ್ಷದವರೆಗೆ ಹೊರಗೆ ಇದ್ದು ಮತ್ತೆ ಹಿಂತಿರುಗಿಬಂದವು. ಶರೀರವು ಬದುಕಿಯೇ ಇತ್ತು ; ಆದ್ದರಿಂದ ಅವುಗಳು ತಾವು ಯಾರೊಬ್ಬರೂ ಶ್ರೇಷ್ಠರಲ್ಲವೆಂಬುದನ್ನು ಕಂಡುಕೊಂಡವು.

ಆಗ ಮುಖ್ಯಪ್ರಾಣವು ಶರೀರವನ್ನು ಬಿಟ್ಟುಹೋಗುವದಕ್ಕೆ ಯತ್ನಿಸುತ್ತಿರಲು ಜಾತ್ಯಶ್ವವು ಕಾಲಿಗೆ ಕಟ್ಟಿದ್ದ ಗೂಟಗಳನ್ನು ಕಿತ್ತುಕೊಳ್ಳುವಂತೆ ಮಿಕ್ಕ ಪ್ರಾಣಗಳನ್ನೆಲ್ಲ ಸ್ವಸ್ಥಾನದಿಂದ ಕಿತ್ತು ಅಲುಗಾಡಿಸಿತು. ಆಗ ಪ್ರಾಣಗಳೆಲ್ಲವೂ 'ಭಗವಂತನೆ, ನೀನೇ ಶ್ರೇಷ್ಠನು, ಉತ್ಕ್ರಾಂತನಾಗದಿರು' ಎಂದು ಬೇಡಿಕೊಂಡವು. ವಾಕ್ಕು ತನ್ನ ವಸಿಷ್ಠತ್ವವೂ ಶ್ರೋತ್ರವು ತನ್ನ ಸಂಪತ್ತೂ ಮನಸ್ಸು ತನ್ನ ಆಯತನತ್ವವೂ ಮುಖ್ಯ

ಪ್ರಾಣನದೇ ಎಂದು ಒಪ್ಪಿಕೊಂಡವು. ಆದ್ದರಿಂದ ಮುಖ್ಯಪ್ರಾಣನ ಹೆಸರಿನಿಂದಲೇ ಅವುಗಳೆಲ್ಲವನ್ನೂ ಪ್ರಾಣಗಳು ಎಂದು ಕರೆಯುತ್ತಾರೆ.

ಎರಡನೆಯ ಖಂಡ

೧-೨. ಆಗ ಮುಖ್ಯಪ್ರಾಣನು 'ನನಗೆ ಅನ್ನವು ಯಾವದು ?' ಎಂದಿತು. ವಾಗಾದಿಗಳು 'ನಾಯಿಗಳವರೆಗೂ ಹಕ್ಕಿಗಳವರೆಗೂ ಪ್ರಾಣಿಗಳಿಗೆ ಅನ್ನವಾಗಿರುವದೆಲ್ಲ ನಿನ್ನ ಅನ್ನವೇ' ಎಂದವು ; 'ನನಗೆ ಬಟ್ಟೆ ಯಾವದು ?' ಎಂದು ಮುಖ್ಯಪ್ರಾಣವು ಕೇಳಲು 'ಅಪ್ಪು' ಎಂದವು ; ಆದ್ದರಿಂದಲೇ ಊಟಮಾಡುವ ಮೊದಲು, ಆಮೇಲೂ ಉಪಾಸಕರು ಆಚಮನಮಾಡಿ ಪ್ರಾಣನಿಗೆ ಹೊದಿಕೆಯನ್ನು ಏರ್ಪಡಿಸುತ್ತಾರೆ ; ಸ್ಮೃತಿವಿಹಿತವಾದ ಆಚಮನದಲ್ಲಿ ಇದು ಪ್ರಾಣನ ವಸ್ತ್ರವು ಎಂದು ಭಾವನೆಮಾಡುತ್ತಾರೆ.

೩. ಈ ಪ್ರಾಣೋಪಾಸನೆಯ ಮಹಿಮೆಯನ್ನು ಹೊಗಳಿ 'ಒಣಗಿದ ಮೋಟುಮರಕ್ಕೆ ಹೇಳಿದರೂ ಅದು ಚಿಗುರು ಎಲೆಗಳನ್ನು ಬಿಡುವದು' ಎಂದು ಸತ್ಯಕಾಮ ಜಾಬಾಲನು ಗೋಶ್ರುತಿ ಎಂಬ ತನ್ನ ಶಿಷ್ಯನಿಗೆ ಹೇಳಿರುತ್ತಾನೆ.

೪-೮. ಈ ಪ್ರಾಣೋಪಾಸನೆಯನ್ನು ಬಲ್ಲವನಿಗೆ ಮಂಥವೆಂಬ ಕರ್ಮದಲ್ಲಿ ಅಧಿಕಾರವು. ತಾನು ದೊಡ್ಡವನಾಗಿ ಶ್ರೀಮಂತನಾಗಬೇಕೆಂದೂ ಆಮೂಲಕ ಕರ್ಮಾನುಷ್ಠಾನವನ್ನು ಮಾಡಿ ಸದ್ಗತಿಯನ್ನು ಪಡೆಯಬೇಕೆಂದೂ ಯಾವನು ಇಚ್ಛಿಸುತ್ತಾನೋ ಅವನು ಅಮಾವಾಸ್ಯೆಯಲ್ಲಿ ದೀಕ್ಷಾವಿಧಿಯನ್ನು ಕೈಕೊಂಡು ಪೌರ್ಣಮಾಸಿಯ ರಾತ್ರೆಯಲ್ಲಿ ಈ ಕರ್ಮವನ್ನು ಮಾಡಬೇಕು. ಯಾವಚ್ಛಕ್ತಿಯಾಗಿ ಎಲ್ಲಾ ಸಸ್ಯಗಳ ಮಂಥವನ್ನು ಮಾಡಿ ಅದಕ್ಕೆ ಮೊಸರು ಜೇನುತುಪ್ಪ ಇವುಗಳನ್ನು ಸೇರಿಸಿ 'ಜ್ಯೇಷ್ಠಾಯ ಶ್ರೇಷ್ಠಾಯ ಸ್ವಾಹಾ !' 'ವಸಿಷ್ಠಾಯ ಸ್ವಾಹಾ' 'ಪ್ರತಿಷ್ಠಾಯೈ ಸ್ವಾಹಾ !' 'ಸಂಪದೇ ಸ್ವಾಹಾ !' 'ಆಯತನಾಯ ಸ್ವಾಹಾ !' ಎಂದು ಮಂತ್ರಗಳನ್ನುಚ್ಚರಿಸುತ್ತಾ ಸ್ವಾಹಾಂತದಲ್ಲಿ ಸ್ರುವದಲ್ಲಿರುವ ಮಂಥಶೇಷವನ್ನು ಹೋಮಮಾಡಬೇಕು. ಆಮೇಲೆ 'ಅಮೋ ನಾಮಾಸಿ' ಎಂಬ ಮಂತ್ರವನ್ನು ಜಪಿಸಬೇಕು. ಬಳಿಕ 'ತತ್ಸವಿತುರ್ವರೇಣ್ಯಮಹೇ' ಎಂಬ ಮಂತ್ರದ ಪಾದಗಳನ್ನು ಉಚ್ಚರಿಸುತ್ತಾ ಮಂಥಭಾಗಗಳನ್ನು ಕುಡಿದು ಕೊನೆಯ ಸಲಕ್ಕೆ ಎಲ್ಲವನ್ನೂ ಕುಡಿದುಬಿಡಬೇಕು ; ಕೈತೊಳೆದುಕೊಂಡು ಆಚಮನಮಾಡಿ ಅಗ್ನಿಯ ಹಿಂದುಗಡೆ

ಚರ್ಮದ ಮೇಲೆ ಅಥವಾ ನೆಲದ ಮೇಲೆ ಮಲಗಬೇಕು. ಸ್ವಪ್ನದಲ್ಲಿ ಸ್ತ್ರೀದರ್ಶನವಾದರೆ ಕರ್ಮವು ಸಮೃದ್ಧವಾಯಿತೆಂದು ತಿಳಿಯಬೇಕು.

ಐದನೆಯ ಅಧ್ಯಾಯದ

ಮೂರರಿಂದ ಹತ್ತನೆಯ ಖಂಡದವರೆಗಿನ ಸಾರ

ಇವುಗಳಲ್ಲಿ **ಪಂಚಾಗ್ನಿವಿದ್ಯೆ**ಯ ವಿವರಣೆಯೂ **ಸಂಸಾರಗತಿ**ಯ ವರ್ಣನೆಯೂ ಇದೆ.

ಮೂರನೆಯ ಖಂಡ

೧-೩. ಆರುಣೇಯಶ್ವೇತಕೇತು ಪಂಚಾಲರಾಜನಾದ ಪ್ರವಾಹಣ ಜೈವಲಿಯ ಬಳಿಗೆ ಬಂದನು. ರಾಜನು 'ನಿಮ್ಮ ತಂದೆಯು ನಿನಗೆ ಅನುಶಾಸನಮಾಡಿರುತ್ತಾನೊ ?' ಎಂದು ಕೇಳಲು 'ಮಾಡಿರುತ್ತಾನೆ' ಎಂದು ಅವನು ಉತ್ತರಕೊಟ್ಟನು. ರಾಜನು ಅವನನ್ನು ಐದು ಪ್ರಶ್ನೆಗಳನ್ನು ಕೇಳಿದನು. (೧) ಇಲ್ಲಿಂದ ಹೋದವರು ಎಲ್ಲಿಗೆ ಹೋಗುತ್ತಾರೆ ? (೨) ಅವರು ಹಿಂತಿರುಗಿ ಬರುವದು ಹೇಗೆ ? (೩) ದೇವಯಾನಪಿತೃಯಾಣಗಳು ಅಗಲುವದು ಎಲ್ಲಿ ? (೪) ದ್ಯುಲೋಕವು ಪೂರ್ಣವಾಗುವದಿಲ್ಲವೇಕೆ ? (೫) ಐದನೆಯ ಆಹುತಿಯಲ್ಲಿ ಅಪ್ಪು ಪುರುಷ ಶಬ್ದವಾಚ್ಯವಾಗುವದು ಹೇಗೆ ?

ನನಗೆ ಇವುಗಳಲ್ಲಿ ಒಂದೂ ತಿಳಿಯದು ಎಂದು ಶ್ವೇತಕೇತು ಹೇಳಿದನು.

೪. 'ಹಾಗಾದರೆ ನನಗೆ ಅನುಶಾಸನವಾಗಿದೆ ಎಂದು ಏಕೆ ಹೇಳಿದೆ? ಇವುಗಳನ್ನು ತಿಳಿಯದೆ ಅನುಶಿಷ್ಟನಾಗಿರುವೆನೆಂದು ಹೇಳಬಹುದೆ ?' ಎಂದು ರಾಜನು ಹಂಗಿಸಿದನು. ಶ್ವೇತಕೇತು ತಂದೆಯಬಳಿಗೆ ಬಂದು 'ನೀನು ನನಗೆ ಅನುಶಾಸನಮಾಡಿದೇನೆಂದಿದ್ದೆಯಲ್ಲ! ರಾಜನು ಕೇಳಿದ ಐದು ಪ್ರಶ್ನೆಗಳಿಗೂ ನನಗೆ ಉತ್ತರವು ತಿಳಿಯಲೇ ಇಲ್ಲ' ಎಂದು ದೂರುಹೇಳಿಕೊಂಡನು. 'ನನಗೂ ಇವುಗಳ ಉತ್ತರವು ತಿಳಿಯದು, ತಿಳಿದಿದ್ದರೆ ನಿನಗೆ ಹೇಗೆತಾನೆ ಹೇಳದೆ ಇರುತ್ತಿದ್ದೆನು ?' ಎಂದು ತಂದೆಯು ರಾಜನ ಬಳಿಗೆ ಬಂದು ಸತ್ಕಾರವನ್ನು ಹೊಂದಿದ ಬಳಿಕ ರಾಜನು

'ಮಾನುಷವಿತ್ತವನ್ನು ಕೇಳಿಕೊ !' ಎಂದನು. ಗೌತಮನು 'ನನಗೇನೂ ಆ ವಿತ್ತವು ಬೇಡ ; ನನ್ನ ಮಗನಿಗೆ ನೀನು ಹಾಕಿದ ಪ್ರಶ್ನೆಗಳ ಉತ್ತರವನ್ನು ತಿಳಿಸಿಕೊಡು' ಎಂದು ಕೇಳಿಕೊಂಡನು. ರಾಜನು ಅವನನ್ನು ಚಿರಕಾಲ ಬ್ರಹ್ಮಚರ್ಯದಿಂದಿರುವಂತೆ ಹೇಳಿ ಕೊನೆಗೆ ವಿನಯದಿಂದ ಈ ಪಂಚಾಗ್ನಿ ವಿದ್ಯೆಯನ್ನು ಹೇಳಿಕೊಟ್ಟನು.

ನಾಲ್ಕನೆಯ ಖಂಡದಿಂದ ಎಂಟನೆಯ ಖಂಡದವರೆಗೆ

ಐದನೆಯ ಪ್ರಶ್ನೆಗೆ ಉತ್ತರವಿದು : ದ್ಯುಲೋಕವೆಂಬ ಅಗ್ನಿಗೆ ಆದಿತ್ಯನು ಸಮಿತ್ತು, ರಶ್ಮಿಗಳು ಹೊಗೆ, ಹಗಲು ಉರಿ, ಚಂದ್ರನು, ಕೆಂಡ, ನಕ್ಷತ್ರಗಳು ಕಿಡಿಗಳು. ಈ ಅಗ್ನಿಯಲ್ಲಿ ಶ್ರದ್ಧಾಶಬ್ದವಾಚ್ಯವಾದ ಅಪ್ಪನ್ನು ದೇವತೆಗಳು ಹೋಮಮಾಡಲು ಅದರಲ್ಲಿ ಸೋಮರಾಜನು ಹುಟ್ಟುತ್ತಾನೆ.

ಈ ಸೋಮರಾಜನನ್ನು ಪರ್ಜನ್ಯಾಗ್ನಿಯಲ್ಲಿ ದೇವತೆಗಳು ಹೋಮಮಾಡುತ್ತಾರೆ. ಆ ಅಗ್ನಿಗೆ ವಾಯುವೇ ಸಮಿತ್ತು, ಮೋಡವು ಹೊಗೆ, ಮಿಂಚು ಉರಿ, ಸಿಡಿಲು ಕೆಂಡ, ಗುಡುಗುಗಳು ಕಿಡಿಗಳು. ಈ ಅಗ್ನಿಯಲ್ಲಿ ಹಾಕಿದ ಆಹುತಿಯಿಂದ ಮಳೆಯಾಗುತ್ತದೆ.

ಈ ಮಳೆಯನ್ನು ಪೃಥಿವಿಯೆಂಬ ಅಗ್ನಿಯಲ್ಲಿ ದೇವತೆಗಳು ಹೋಮಮಾಡುತ್ತಾರೆ. ಈ ಅಗ್ನಿಗೆ ಸಂವತ್ಸರವೇ ಸಮಿತ್ತು, ಆಕಾಶವೇ ಹೊಗೆ, ರಾತ್ರಿಯೇ ಉರಿ, ದಿಕ್ಕುಗಳೇ ಕೆಂಡ, ಅವಾಂತರದಿಕ್ಕುಗಳೇ ಕಿಡಿಗಳು. ಇದರಲ್ಲಿ ಹಾಕಿದ ಆಹುತಿಯಿಂದ ಅನ್ನವುಂಟಾಗುತ್ತದೆ.

ಈ ಅನ್ನವನ್ನು ಪುರುಷಾಗ್ನಿಯಲ್ಲಿ ದೇವತೆಗಳು ಹೋಮಮಾಡತ್ತಾರೆ. ಈ ಅಗ್ನಿಗೆ ವಾಕ್ಕೇ ಸಮಿತ್ತು, ಪ್ರಾಣವೇ ಹೊಗೆ, ನಾಲಗೆಯೇ ಉರಿ, ಕಣ್ಣೇ ಕೆಂಡ, ಕಿವಿಯೇ ಕಿಡಿಗಳು, ಆ ಇದರಲ್ಲಿ ಹಾಕಿದ ಆಹುತಿಯಿಂದ ರೇತಸ್ಸು ಉಂಟಾಗುತ್ತದೆ.

ಈ ರೇತಸ್ಸನ್ನು ದೇವತೆಗಳು ಸ್ತ್ರೀ ಎಂಬಗ್ನಿಯಲ್ಲಿ ಹೋಮಾಡುತ್ತಾರೆ. ಈ ಅಗ್ನಿಗೆ ಉಪಸ್ಥವೇ ಸಮಿತ್ತು, ಉಪಮಂತ್ರಣವೇ ಹೊಗೆ, ಯೋನಿಯೇ ಉರಿ, ಅಂತಃಕರ್ಮವೇ ಕೆಂಡ, ಕ್ಷುದ್ರಸುಖಗಳೇ ಕಿಡಿಗಳು. ಈ ಅಗ್ನಿಯಲ್ಲಿ ಹಾಕಿದ ಆಹುತಿಯಿಂದ ಗರ್ಭವುಂಟಾಗುತ್ತದೆ. ಹೀಗೆ ಐದನೆಯ ಆಹುತಿಯಲ್ಲಿ ಅಪ್ಪು ಪುರುಷಶಬ್ದವಾಚ್ಯವಾಗುತ್ತದೆ.

ಒಂಬತ್ತನೆಯ ಖಂಡ

ಗರ್ಭವು ಸ್ತ್ರೀಯ ಹೊಟ್ಟೆಯಲ್ಲಿ ಒಂಬತ್ತು ಅಥವಾ ಹತ್ತುತಿಂಗಳಿದ್ದು ಹುಟ್ಟುತ್ತದೆ. ಹೀಗೆ ಹುಟ್ಟಿದ ಪುರುಷನು ಆಯುಸ್ಸಿರುವವರೆಗೆ ಬದುಕಿರುತ್ತಾನೆ. ಅವನು ಸಾಯಲು ಅವನು ಯಾವ ಅಗ್ನಿಯಿಂದ ಬಂದಿದ್ದನೋ ಆ ಅಗ್ನಿಗೆ ಅಂತ್ಯಕರ್ಮಕ್ಕಾಗಿ ಒಯ್ಯುತ್ತಾರೆ.

ಹತ್ತನೆಯ ಖಂಡ

೧-೨. ಇನ್ನು ಮೊದಲನೆಯ ಪ್ರಶ್ನೆಗೆ ಉತ್ತರವನ್ನು ಹೇಳಬೇಕಷ್ಟೆ ? ಪಂಚಾಗ್ನಿವಿದ್ಯೆಯನ್ನು ಬಲ್ಲವರೂ ಅರಣ್ಯದಲ್ಲಿರುವ ವಾನಪ್ರಸ್ಥ ಸಾಧಾರಣ ಸಂನ್ಯಾಸಿಗಳು - ಎಂಬ ಉಪಾಸಕರೂ ಅರ್ಚಿಸ್ಸು, ಅಹಸ್ಸು, ಅಪೂರ್ಯಮಾಣ ಪಕ್ಷ, ಉತ್ತರಾಯಣಮಾಸಗಳು, ಸಂವತ್ಸರ, ಆದಿತ್ಯ, ಚಂದ್ರ, ವಿದ್ಯುತ್ತು - ಈ ದೇವತೆಗಳನ್ನು ಕ್ರಮದಿಂದ ಪಡೆಯುತ್ತಾರೆ. ವಿದ್ಯುತ್ತಿನಲ್ಲಿ ಅಮಾನವಪುರುಷನು ಬಂದು ಇವರನ್ನು ಕರೆದುಕೊಂಡು ಹೋಗಿ ಬ್ರಹ್ಮವನ್ನು ಸೇರಿಸುತ್ತಾನೆ. ಇದು **ದೇವಯಾನದ ಮಾರ್ಗವು.**

೩-೪. ಇನ್ನು ಇಷ್ಟಾಪೂರ್ತಗಳು, ದತ್ತ - ಮುಂತಾದ ಕರ್ಮಗಳನ್ನು ಮಾಡುವ ಗೃಹಸ್ಥರು ಧೂಮ, ರಾತ್ರಿ, ಅಪರಪಕ್ಷ, ದಕ್ಷಿಣಾಯನಮಾಸಗಳು - ಇವುಗಳನ್ನು ಪಡೆಯುತ್ತಾರೆ. ಇವರು ಸಂವತ್ಸರಕ್ಕೆ ಹೋಗುವದಿಲ್ಲ; ಮಾಸದಿಂದ ಪಿತೃಲೋಕ, ಆಕಾಶ, ಚಂದ್ರ - ಇವುಗಳನ್ನು ಸೇರುತ್ತಾರೆ. ಚಂದ್ರನು ದೇವತೆಗಳ ಅನ್ನ. ಆ ಚಂದ್ರನಲ್ಲಿ ಉಪಭೋಗದ ಕರ್ಮವು ಮುಗಿಯುವವರೆಗೂ ಸುಖದಿಂದಿರುತಾರೆ. ಇದು **ಪಿತೃಯಾಣಮಾರ್ಗ.**

೫-೭. ಇನ್ನು ಹೋದವರು ಹಿಂತಿರುಗುವ ಮಾರ್ಗವನ್ನು ಹೇಳಬೇಕಷ್ಟೆ? ದೇವಯಾನದಿಂದ ಹೋದವರಿಗೆ ಈ ಕಲ್ಪದಲ್ಲಿ ಪುನರಾವೃತ್ತಿಯಿಲ್ಲ. ಇಷ್ಟಾಪೂರ್ತವನ್ನು ಮಾಡಿದವರು ಆಕಾಶ, ವಾಯು, ಧೂಮ, ಅಭ್ರ, ಮೇಘ - ಇವುಗಳಲ್ಲಿ ಸೇರಿ ಮಳೆಯೊಂದಿಗೆ ಕೆಳಕ್ಕೆ ಇಳಿದು ಬತ್ತ, ಜವೆ, ಗಿಡಮರಗಳು, ಎಳ್ಳು ಉದ್ದು - ಇಂಥವುಗಳಲ್ಲಿ ಸೇರಿಕೊಳ್ಳುತ್ತಾರೆ. ಇಲ್ಲಿಂದ ಮುಂದಕ್ಕೆ ಹೊರಕ್ಕೆ ಬರುವದು ಬಹಳ ಕಷ್ಟ; ಈ ಅನ್ನವನ್ನು ಯಾವನಾದರೂ ತಿಂದು ರೇತಸ್ಸನ್ನು ಸೇಚನಮಾಡಿದರೆ ಅದರ ಭಾವದ ಆಕೃತಿಯೇ, ಇವರಿಗೂ ಬರುವದು.

೮. ವಿದ್ಯಾಕರ್ಮಗಳನ್ನು ಅನುಷ್ಠಾನಮಾಡದವರು ಮತ್ತೆಮತ್ತೆ ಹುಟ್ಟಿಸಾಯುವ ಕ್ಷುದ್ರಜಂತುಗಳಾಗುವರು. ಇದು ದೇವಯಾನ ಪಿತೃಯಾಣ - ಇವುಗಳಿಗಿಂತ ಬೇರೆಯಾದ ಮೂರನೆಯ ಗತಿಯ ಫಲವು. ಆದ್ದರಿಂದ ಈ ಸಂಸಾರಗತಿಯ ಪ್ರಕಾರವನ್ನು ತಿಳಿದವನು ಇದಕ್ಕೆ ಹೇಸಬೇಕು.

ಹೀಗೆ ಇಷ್ಟಾಪೂರ್ತಗಳನ್ನು ಮಾಡಿದವರು ಮರಳಿಬರುವದರಿಂದಲೂ ಹಲವರು ಕ್ಷುದ್ರ ಜಂತುಗಳಾಗಿ ಹುಟ್ಟಿಸಾಯುತ್ತಿರುವದರಿಂದಲೂ ಆ ಪರಲೋಕವು ತುಂಬಿಕೊಳ್ಳದೆ ಇರುತ್ತದೆ - ಎಂಬುದು ನಾಲ್ಕನೆಯ ಪ್ರಶ್ನೆಗೆ ಉತ್ತರವು. ದೇವಯಾನ ಪಿತೃಯಾಣಗಳಲ್ಲಿ ಹೋಗುವವರು ಅಗಲುವ ಸ್ಥಾನವು ಯಾವದೆಂಬ ಮೂರನೆಯ ಪ್ರಶ್ನೆಗೆ ಆ ಗತಿಗಳ ವಿವರವನ್ನು ಹೇಳುವದರಿಂದಲೇ ಉತ್ತರವನ್ನು ಹೇಳಿದ್ದಾಗಿದೆ.

೯-೧೦. ಪಂಚಾಗ್ನಿವಿದ್ಯೆಯು ಬಹಳ ಪವಿತ್ರವಾದದ್ದು. ಏಕೆಂದರೆ ಪಂಚ ಮಹಾಪಾತಕಿಗಳ ಸಖ್ಯವಹಾರದಿಂದಲೂ ಈ ವಿದ್ಯೆಯನ್ನು ಬಲ್ಲವನಿಗೆ ಪಾಪಲೇಪ ವಾಗುವದಿಲ್ಲ. ಅವನಿಗೆ ಬ್ರಹ್ಮಲೋಕವೇ ಮುಂತಾದ ಪುಣ್ಯಲೋಕಪ್ರಾಪ್ತಿಯೇ ಆಗುವದು.

ಐದನೆಯ ಅಧ್ಯಾಯದ

ಹನ್ನೊಂದನೆಯ ಖಂಡದಿಂದ ಸಮಾಪ್ತಿಯವರೆಗಿನ ಗ್ರಂಥದ ಸಾರ

ಈ ಭಾಗದಲ್ಲಿ **ವೈಶ್ವಾನರವಿದ್ಯೆ**ಯನ್ನು ವರ್ಣಿಸಿರುತ್ತದೆ.

ಹನ್ನೊಂದನೆಯ ಖಂಡ

ಪ್ರಾಚೀನಶಾಲಔಪಮನ್ಯವ, ಸತ್ಯಯಜ್ಞಪೌಲುಷಿ, ಇಂದ್ರದ್ಯುಮ್ನಭಾಲ್ಲ ವೇಯ, ಜನಶಾರ್ಕರಾಕ್ಷ್ಯ, ಬುಡಿಲಆಶ್ವತರಾಶ್ವಿ - ಎಂಬ ಮಹಾಶ್ರೋತ್ರಿಯ ರಾದ ಗೃಹಸ್ಥರು ಒಕ್ಕಡೆಯಲ್ಲಿ ಸೇರಿ 'ನಮ್ಮ ಆತ್ಮನಾಗಿರುವ ಬ್ರಹ್ಮವು ಯಾವದು ?' ಎಂದು ತಮ್ಮತಮ್ಮೊಳಗೆ ವಿಚಾರಮಾಡಿ ನಿಶ್ಚಯಿಸಲಾರದೆ ಉದ್ದಾಲಕ ಆರುಣಿಯ ಬಳಿಗೆ ಬಂದರು. ಆತನಿಗೂ ಎಲ್ಲವೂ ತಿಳಿದಿರಲಿಲ್ಲವಾಗಿ 'ಅಶ್ವಪತಿ ಕೈಕೇಯನ ಬಳಿಗೆ ಹೋಗೋಣ' ಎಂದು ಎಲ್ಲರನ್ನೂ ಕರೆದುಕೊಂಡು ಅವನಲ್ಲಿಗೆ ಹೋದನು.

ರಾಜನು ತನ್ನಲ್ಲಿಗೆ ಬಂದ ಆ ಬ್ರಾಹ್ಮಣರಿಗೆ ಸತ್ಕಾರವನ್ನು ಮಾಡಿ ಅವರಿಗೆ ತಾನು ಇಷ್ಟರಲ್ಲಿಯೇ ಯಜ್ಞವನ್ನು ಮಾಡಲಿರುವದಾಗಿಯೂ ಅಲ್ಲಿಯವರೆಗೆ ಉಳಿದುಕೊಂಡರೆ ಒಬ್ಬೊಬ್ಬ ಋತ್ವಿಜನಿಗೆ ಕೊಡುವಷ್ಟು ಹಣವನ್ನು ನಿಮಗೂ ಒಬ್ಬೊಬ್ಬರಿಗೆ ಕೊಡುವೆನು ಎಂದನು. ಆದರೆ ಅವರು 'ನಾವು ಧನಕ್ಕಾಗಿ ಬಂದಿಲ್ಲ ನೀನರಿತಿರುವ ವೈಶ್ವಾನರವಿದ್ಯೆಯನ್ನೇ ಹೇಳಿಕೊಡು' ಎಂದು ಕೇಳಿಕೊಂಡರು.

ಹನ್ನೆರಡನೆಯ ಖಂಡದಿಂದ ಹದಿನೇಳನೆಯ ಖಂಡದವರೆಗೆ

ಮಾರನೆಯ ದಿನ ರಾಜನು ಅವರನ್ನು 'ನೀವು ಯಾರನ್ನು ವೈಶ್ವಾನರನ ಆತ್ಮನೆಂದು ಉಪಾಸನೆಮಾಡುತ್ತಿರುವಿರಿ ?-' ಎಂದು ಒಬ್ಬೊಬ್ಬರನ್ನಾಗಿ ಹೆಸರು ಹಿಡಿದು ಕರೆದು ಕೇಳಿದನು.

ಔಪಮನ್ಯವನು ದ್ಯುಲೋಕವನ್ನೇ ವೈಶ್ವಾನರಾತ್ಮನೆಂದು ಉಪಾಸನೆಮಾಡುತ್ತಿದ್ದನು. ಆ ಆತ್ಮನಿಗೆ ಸುತೇಜನೆಂಬ ಹೆಸರು. ಅವನ ಉಪಾಸನೆಯಿಂದ ಕೆಲವು ಉತ್ತಮಫಲಗಳಿದ್ದರೂ ಅವನು ಪೂರ್ಣಾತ್ಮನಲ್ಲ, ವೈಶ್ವಾನರನ ತಲೆ ಮಾತ್ರ. ಆದ್ದರಿಂದ ಒಂದು ಭಾಗವನ್ನೇ ಪೂರ್ಣವೈಶ್ವಾನರನೆಂದು ಭಾವಿಸುತ್ತಿದ್ದ ದೋಷದಿಂದಾಗಿ ಪೂರ್ಣಾತ್ಮನನ್ನು ತಿಳಿಯುವದಕ್ಕೆ ಪ್ರಯತ್ನಿಸದೆ ಹೋಗಿದ್ದರೆ 'ನಿನ್ನ ತಲೆಯೇ ಬಿದ್ದುಹೋಗುತ್ತಿತ್ತು' ಎಂದು ರಾಜನು ತಿಳಿಸಿದನು.

ಸತ್ಯಯಜ್ಞ ಪೌಲುಷಿಯು ಆದಿತ್ಯನನ್ನು ವೈಶ್ವಾನರನೆಂದು ಉಪಾಸನೆ ಮಾಡುತ್ತಿದ್ದನು. ಅವನಿಗೆ ವಿಶ್ವರೂಪನೆಂದು ಹೆಸರು. ಆದರೆ ಅದು ವೈಶ್ವಾನರನ ಚಕ್ಷುಸ್ಸು ಮಾತ್ರ. ಪೂರ್ಣಾತ್ಮನನ್ನು ತಿಳಿಯುವದಕ್ಕೆ ಬಾರದಿದ್ದರೆ 'ನಿನ್ನ ಕಣ್ಣು ಹೋಗಿಬಿಡುತಿತು' ಎಂದು ರಾಜನು ತಿಳಿಸಿದನು.

ಇಂದ್ರದ್ಯುಮ್ನ ಭಾಲ್ಲವೇಯನು ವಾಯುವನ್ನು ವೈಶ್ವಾನರನೆಂದು ಉಪಾಸನೆಮಾಡುತ್ತಿದ್ದನು. ಅವನಿಗೆ ಪೃಥಗ್ವರ್ತ್ಮಾತ್ಮನೆಂದು ಹೆಸರು. ಆದರೆ ವಾಯುವು ವೈಶ್ವಾನರನ ಪ್ರಾಣವು ಮಾತ್ರ. 'ನೀನು ನನ್ನ ಬಳಿಗೆ ಬಾರದಿದ್ದರೆ ನಿನ್ನ ಪ್ರಾಣವು ಉತ್ಕ್ರಾಂತವಾಗುತ್ತಿತ್ತು!' ಎಂದು ರಾಜನು ನುಡಿದನು.

ಜನ ಶಾರ್ಕರಾಕ್ಷ್ಯನು ಆಕಾಶವನ್ನು ವೈಶ್ವಾನರನೆಂದು ಉಪಾಸನೆಮಾಡುತ್ತಿದ್ದನು. ಅವನಿಗೆ ಬಹುಲನೆಂದು ಹೆಸರು. ಆದರೆ ಅವನು ವೈಶ್ವಾನರನ ಶರೀರವು

ಮಾತ್ರ. 'ನೀನು ನನ್ನಲ್ಲಿಗೆ ಬಾರದಿದ್ದರೆ ನಿನ್ನ ಶರೀರವು ಶಿಥಿಲವಾಗಿಹೋಗುತ್ತಿತ್ತು' ಎಂದು ರಾಜನು ಹೇಳಿದನು.

ಬುಡಿಲ ಅಶ್ವತರಾಶ್ವಿಯು ಅಪ್ಪನ್ನೇ ವೈಶ್ವಾನರನೆಂದು ಉಪಾಸನೆಮಾಡುತ್ತಿದ್ದನು. ಅವನಿಗೆ ರಯಿ ಎಂದು ಹೆಸರು. ಆದರೆ ಅವನು ವೈಶ್ವಾನರನಿಗೆ ಬಸ್ತಿ ಮಾತ್ರ. 'ನೀನು ನನ್ನಲ್ಲಿಗೆ ಬಾರದಿದ್ದರೆ ನಿನ್ನ ಮೂತ್ರಕೋಶವು ಒಡೆದುಕೊಳ್ಳುತ್ತಿತ್ತು' ಎಂದು ರಾಜನು ನುಡಿದನು.

ಉದ್ದಾಲಕ ಆರುಣಿಯು ಪೃಥಿವಿಯನ್ನು ವೈಶ್ವಾನರನೆಂದು ಉಪಾಸನೆಮಾಡುತ್ತಿದ್ದನು. ಆ ಆತ್ಮನಿಗೆ ಪ್ರತಿಷ್ಠಾತ್ಮನೆಂದು ಹೆಸರು. 'ನೀನು ಇಲ್ಲಿಗೆ ಬಾರದೇ ಇದ್ದಿದ್ದರೆ ನಿನ್ನ ಪಾದಗಳು ಬತ್ತಿಹೋಗುತ್ತಿದ್ದವು' ಎಂದು ರಾಜನೆಂದನು.

ಹದಿನೆಂಟನೆಯ ಖಂಡ

ರಾಜನು ಅವರನ್ನು ಕುರಿತು ''ನೀವು ಈ ವೈಶ್ವಾನರಾತ್ಮನು ಪೂರ್ಣನಾಗಿದ್ದರೂ ಇವನ ಒಂದೊಂದು ಅವಯವವನ್ನೇ ಬೇರೆಬೇರೆಯಾಗಿ ಸಮಸ್ತಾತ್ಮನೆಂದು ಉಪಾಸನೆಮಾಡುತ್ತಿರುವದರಿಂದ ಪರಿಚ್ಛಿನ್ನಾತ್ಮರಾಗಿಯೇ ಅನ್ನವನ್ನುಣ್ಣುತ್ತಿರುವಿರಿ. ಆದರೆ ಈ ಎಲ್ಲಾ ಪ್ರದೇಶಗಳಲ್ಲಿಯೂ ಇರುವ ಅಭಿವಿಮಾನಾತ್ಮನನ್ನು ವೈಶ್ವಾನರನೆಂದು ಯಾವನು ಉಪಾಸನೆಮಾಡುವನೋ ಅವನು ಎಲ್ಲಾ ಲೋಕಗಳಲ್ಲಿಯೂ ಎಲ್ಲಾ ಭೂತಗಳಲ್ಲಿಯೂ ಎಲ್ಲಾ ಕಾರ್ಯಕರಣಸಂಘಾತಗಳಲ್ಲಿ ಎಲ್ಲರ ಆತ್ಮನಾಗಿ ಅನ್ನವನ್ನುಣ್ಣುತ್ತಿರುವನು.''

ಈ ವೈಶ್ವಾನರಾತ್ಮನಿಗೆ ಸುತೇಜನು ತಲೆ, ವಿಶ್ವರೂಪನು ಕಣ್ಣು, ಪೃಥಗ್ವರ್ತ್ಮಾತ್ಮನು ಪ್ರಾಣವು, ಬಹುಲನು ಶರೀರವು, ರಯಿಯು ಬಸ್ತಿ, ಪೃಥಿವಿಯು ಪಾದವು ; ಹೀಗೆಂದು ಉಪಾಸನೆಮಾಡುವವನ ಎದೆಯೇ ವೇದಿ, ಲೋಮಗಳೇ ಬರ್ಹಿಸ್ಸು, ಹೃದಯವೇ ಗಾರ್ಹಪತ್ಯವು, ಮನಸ್ಸೇ ಅನ್ವಾಹಾರ್ಯಪಚನವು, ಮುಖವೇ ಆಹವನೀಯವು. ಹೀಗೆಂದು ಮೇಲೆ ಹೇಳಿದ ಗುಣಗಳಿಂದ ಸಮಸ್ತವೈಶ್ವಾನರನನ್ನೇ ಉಪಾಸನೆಮಾಡಬೇಕು.

ಹತ್ತೊಂಬತ್ತರಿಂದ ಇಪ್ಪತ್ತುಮೂರನೆಯ ಖಂಡದವರೆಗೆ

ಈ ಉಪಾಸಕನು ತನ್ನ ಭೋಜನವನ್ನೇ ಅಗ್ನಿಹೋತ್ರವೆಂದು ಕಲ್ಪಿಸಬೇಕು. ಮೊದಲನೆಯ ಸಲ ಬರುವ ಆಹಾರವನ್ನು ಹೋಮಮಾಡಬೇಕು. ಮೊದಲನೆಯ ಹೋಮವನ್ನು 'ಪ್ರಾಣಾಯ ಸ್ವಾಹಾ !' ಎಂದು ತನ್ನ ಮುಖದಲಿ ಹೋಮಮಾಡಬೇಕು. ಇದರಿಂದ ಕ್ರಮಕ್ರಮವಾಗಿ ಪ್ರಾಣ, ಚಕ್ಷುಸ್ಸು ಆದಿತ್ಯ, ದ್ಯುಲೋಕ, ದ್ಯುಲೋಕಾದಿತ್ಯರ ಅಧೀನದಲ್ಲಿರುವವರು - ಇವರು ತೃಪ್ತರಾಗುವರು. ಉಪಾಸಕನೂ ತೃಪ್ತನಾಗಿ ಪ್ರಜೆ, ಪಶುಗಳು, ಅನ್ನಾದ್ಯ, ತೇಜಸು, ಬ್ರಹ್ಮವರ್ಚಸ್ಸುಗಳಿಂದ ಕೂಡಿರುವನು.

ಎರಡನೆಯದನ್ನು 'ವ್ಯಾನಾಯ ಸ್ವಾಹಾ !' ಎಂದು ಹೋಮಮಾಡಬೇಕು. ಅದರಿಂದ ವ್ಯಾನ, ಶ್ರೋತ್ರ, ಚಂದ್ರ, ದಿಕ್ಕುಗಳು, ದಿಕ್ಕುಚಂದ್ರರ ಅಧೀನರು - ಇವರು ಕ್ರಮವಾಗಿ ತೃಪ್ತರಾಗುವರು. ಇದರಿಂದ ಉಪಾಸಕನಿಗೆ ಮೇಲೆ ಹೇಳಿದಂತೆ ಫಲವಾಗುವದು.

ಮೂರನೆಯದನ್ನು 'ಅಪಾನಾಯ ಸ್ವಾಹಾ !' ಎಂದು ಹೋಮಮಾಡ ಬೇಕು. ಅದರಿಂದ ಅಪಾನ, ವಾಕ್ಕು, ಅಗ್ನಿ ಪೃಥಿವಿ, ಪೃಥಿವ್ಯಗ್ನಿಗಳ ಅಧೀನದಲ್ಲಿ ರುವವರು - ಎಲ್ಲವೂ ತೃಪ್ತರಾಗುವರು. ಉಪಾಸಕನೂ ಮೇಲೆ ಹೇಳಿದಂತೆ ತೃಪ್ತನಾಗುವನು.

ನಾಲ್ಕನೆಯದನ್ನು 'ಸಮಾನಾಯ ಸ್ವಾಹಾ !' ಎಂದು ಹೋಮಮಾಡಬೇಕು. ಅದರಿಂದ ಸಮಾನ, ಮನಸ್ಸು ಪರ್ಜನ್ಯ, ವಿದ್ಯುತ್ತು ವಿದ್ಯುತ್ಪರ್ಜನ್ಯರಧೀನ ದಲ್ಲಿರುವವರು - ಎಲ್ಲರೂ ತೃಪ್ತರಾಗುವರು. ಉಪಾಸಕನೂ ಮೇಲೆ ಹೇಳಿದಂತೆಯೇ ತಪ್ತನಾಗುವನು.

ಇನ್ನು ಐದನೆಯದನ್ನು 'ಉದಾನಾಯ ಸ್ವಾಹಾ !' ಎಂದು ಹೋಮಮಾಡ ಬೇಕು. ಅದರಿಂದ ಉದಾನ, ತ್ವಕ್ಕು, ವಾಯು, ಆಕಾಶ, ವಾಯ್ವಾಕಾಶಗಳ ಅಧೀನ ದಲ್ಲಿರುವವರು - ಎಲ್ಲರೂ ತೃಪ್ತರಾಗುವರು, ಉಪಾಸಕನೂ ತೃಪ್ತನಾಗಿ ಪ್ರಜೆ, ಪಶು, ಅನ್ನಾದ್ಯ, ತೇಜಸ್ಸು, ಬ್ರಹ್ಮವರ್ಚಸ್ಸು - ಇವುಗಳಿಂದ ಕೂಡಿರುವನು.

ಇಪ್ಪತ್ತುನಾಲ್ಕನೆಯ ಖಂಡ

ಈ ವಿದ್ಯೆಯನ್ನರಿಯದೆ ಅಗ್ನಿಹೋತ್ರಮಾಡುವದು ಇದನ್ನರಿತು ಮಾಡಿದ್ದಕ್ಕೆ ಹೋಲಿಸಿದಾಗ ಕೆಂಡವಿಲ್ಲದ ಬರಿಯ ಬೂದಿಯಲ್ಲಿ ಹೋಮಮಾಡಿದಷ್ಟು ಅಲ್ಪಫಲವುಳ್ಳದ್ದಾಗಿರುವದು. ಇದನ್ನರಿತು ಮಾಡಿದವನು ಸರ್ವಲೋಕಗಳಲ್ಲಿಯೂ ಸರ್ವಭೂತಗಳಲ್ಲಿಯೂ ಸರ್ವಸಂಘಾತಗಳಲ್ಲಿಯೂ ಹೋಮಮಾಡಿದವನಾಗುವನಾದ್ದರಿಂದ ವೈಶ್ವಾನರನಾಗಿ ಎಲ್ಲೆಲ್ಲಿಯೂ ಅನ್ನವನ್ನುಣ್ಣುವನು.

ಹೀಗೆಂದರಿತು ಅಗ್ನಿಹೋತ್ರವನ್ನು ಮಾಡುವವನ ಪಾಪಪುಣ್ಯಗಳೆಲ್ಲವೂ ನೊದೆಹುಲ್ಲಿನ ಕಡ್ಡಿಯನ್ನು ಬೆಂಕಿಯಲ್ಲಿ ಹಾಕಿದರೆ ಹೇಗೋ ಹಾಗೆ ಸುಟ್ಟುಹೋಗುವವು. ಪ್ರಾರಬ್ಧಕರ್ಮವು ಮುಗಿಯಲು ಅಪರಬ್ರಹ್ಮವನ್ನೇ ಪಡೆದುಕೊಳ್ಳುವನು.

ಈ ಉಪಾಸಕನು ತನ್ನ ಉಚ್ಛಿಷ್ಟವನ್ನು ಚಂಡಾಲನಿಗೆ ಕೊಟ್ಟರೂ ದೋಷವಾಗುವದಿಲ್ಲ. ಅದು ವೈಶ್ವಾನರಾತ್ಮನಲ್ಲಿ ಹೋಮಮಾಡಿದಂತೆಯೇ ಸತ್ಫಲವನ್ನು ಕೊಡುವದು. ಲೋಕದಲ್ಲೆಲ್ಲರೂ ಇವನ ಭೋಜನದಿಂದ ತೃಪ್ತರಾಗುವರಾದ್ದರಿಂದ ಈತನು ಪ್ರಾಣಾಗ್ನಿಹೋತ್ರವನ್ನು ಯಾವಾಗ ಮಾಡುವನೋ ಎಂದು ಕಾದುಕೊಂಡಿರುವರು.

ಆರನೆಯ ಅಧ್ಯಾಯದ ಸಾರ

ಈ ಅಧ್ಯಾಯದಲ್ಲಿ ಸದ್ಬ್ರಹ್ಮವಿದ್ಯೆಯನ್ನು ತಿಳಿಸಿಕೊಟ್ಟಿದೆ.

ಒಂದನೆಯ ಖಂಡ

೧-೩. ಶ್ವೇತಕೇತು ಆರುಣೇಯನಿಗೆ ತಂದೆಯು ಬ್ರಹ್ಮಚರ್ಯವಾಸವನ್ನು ಮಾಡಿಕೊಂಡು ಬರುವಂತೆ ಹೇಳಿದನು. ಅವನು ಹನ್ನೆರಡುವರ್ಷಗಳವರೆಗೆ ಬ್ರಹ್ಮಚರ್ಯವನ್ನು ಮಾಡಿ ವೇದಗಳನ್ನೆಲ್ಲ ಅಧ್ಯಯನಮಾಡಿಕೊಂಡು ತಾನು ಅನೂಚಾನನೆಂಬ ಅಭಿಮಾನದಿಂದ ಕೂಡಿ ಹಿಂತಿರುಗಿಬಂದನು. ಅವಿನೀತನಾಗಿದ್ದ ಅವನನ್ನು ಕುರಿತು "ಇದೇನು, ಹೀಗೆ ಸ್ತಬ್ಧನಾಗಿರುವೆಯಲ್ಲ! ಯಾವದನ್ನು ಅರಿತರೆ

ಅಶ್ರುತವಾದದ್ದು ಶ್ರುತವಾಗುವದೋ ಅಮತವಾದದ್ದು ಮತವಾಗುವದೋ ಅವಿಜ್ಞಾತವಾದದ್ದು ವಿಜ್ಞಾತವಾಗುವದೋ ಅದರ ಉಪದೇಶವನ್ನು ಕೇಳಿದ್ದೀಯೊ?' ಎಂದು ತಂದೆಯು ಕೇಳಿದನು. ''ಆ ಉಪದೇಶವು ಎಂಥದ್ದು?''- ಎಂದು ಕೇಳಲು ತಂದೆಯು ಇಂತೆಂದನು.

೪-೬. ''ಏನಯ್ಯ, ಒಂದು ಮಣ್ಣುಮುದ್ದೆಯನ್ನು ಅರಿತರೆ ಮಣ್ಣಿನದೆಲ್ಲವನ್ನೂ ಹೇಗೆ ಅರಿತಂತೆ ಆಗುವದೋ, ಒಂದು ಚಿನ್ನದ ಗಟ್ಟಿಯನ್ನು ಅಥವಾ ಕಬ್ಬಿಣದ ಗಟ್ಟಿಯನ್ನು ಅರಿತರೆ ಹೇಗೆ ಚಿನ್ನದಿಂದಾದ ಅಥವಾ ಕಬ್ಬಿಣದಿಂದಾದ ವಸ್ತುಗಳೆಲ್ಲವನ್ನೂ ಅರಿತುಕೊಂಡಂತೆ ಆಗುವದೋ ಹಾಗೆ ಒಂದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತಂತಾಗುವದು. ಅದನ್ನು ಕೇಳಿರುವೆಯೇನು ?''

೭. ಆಗ ಶ್ವೇತಕೇತುವು ''ನಮ್ಮ ಗುರುಗಳಿಗೆ ಇದು ತಿಳಿಯದೆ ಇದ್ದಿರಬಹುದು. ತಿಳಿದಿದ್ದರೆ ನನಗೆ ಹೇಗೆ ತಾನೆ ಹೇಳದೆ ಇರುತ್ತಿದ್ದರು ? ಪೂಜ್ಯನಾದ ನೀನೇ ನನಗೆ ಅದನ್ನು ಹೇಳಿಕೊಡಬೇಕು'' ಎಂದನು.

ಎರಡನೆಯ ಖಂಡ

೧-೪. ತಂದೆ ಇಂತೆಂದನು : ಮೊದಲು ತನಗೆರಡನೆಯದಿಲ್ಲದ ಸತ್ತೊಂದೇ ಇತ್ತು ; ಅದರಿಂದಲೇ ಇದೆಲ್ಲವೂ ಆಯಿತು. ಅಸತ್ತಿನಿಂದಲೇ ಇದೆಲ್ಲವೂ ಆಗಿದೆ - ಎಂದು ಕೆಲವರೆನ್ನುವರು. ಅದು ಹೇಗೆ ಸರಿಯಾದೀತು ? ಸತ್ತೊಂದೇ ಇದ್ದಿತು. ಅದು ತನ್ನೊಳಗೆ ಆಲೋಚಿಸಿಕೊಂಡು 'ಬಹುವಾಗುವೆನು, ಹುಟ್ಟುವೆನು' - ಎಂದು ಕೊಂಡಿತು. ತೇಜಸ್ಸನ್ನು ಸೃಷ್ಟಿಸಿತು. ತೇಜಸ್ಸಾದ ಅದು ಮತ್ತೆ ಹಾಗೇ ಯೋಚಿಸಿ ಅಪ್ಪನ್ನುಂಟುಮಾಡಿತು. ಆ ಅಪ್ಪು ಯೋಚಿಸಿ ಅನ್ನವನ್ನು ಸೃಷ್ಟಿಮಾಡಿತು. ಆದ್ದರಿಂದಲೇ ಈಗಲೂ ತೇಜಸ್ಸಿನಿಂದ ಅಪ್ಪು, ಅಪ್ಪಿನಿಂದ ಅನ್ನ - ಹೀಗೆ ಆಗುವದು ಕಂಡುಬರುತ್ತದೆ.

ಮೂರನೆಯ ಖಂಡ

೧-೪. ಪ್ರಪಂಚದಲ್ಲಿರುವ ಪಕ್ಷ್ಯಾದಿಭೂತಗಳಿಗೆ ಅಂಡಜ, ಜೀವಜ, ಉದ್ಭಿಜ್ಜ-ಎಂದು ಮೂರು ಬೀಜಗಳು. ಈ ತೇಜೋಬನ್ನಕಾರ್ಯವಾದ

ಭೂತಗಳಲ್ಲಿ ಮೂಲಕಾರಣವಾದ ಸತ್ತೆಂಬ ದೇವತೆಯು ಜೀವರೂಪದಿಂದ ಒಳಹೊಕ್ಕು ನಾಮರೂಪಗಳನ್ನು ವಿಂಗಡಿಸುವೆನು - ಎಂದುಕೊಂಡು ಆವುಗಳಲ್ಲಿ ಒಂದೊಂದರಲ್ಲಿಯೂ ಉಳಿದೆರಡರ ಬೆರಕೆಯನ್ನು ಮಾಡಿಕೊಂಡು ತ್ರಿವೃತ್ಕರಣ ಮಾಡಿ ಅವುಗಳೊಳಗೆ ಹೊಕ್ಕಿತು.

ನಾಲ್ಕನೆಯ ಖಂಡ

೧-೪. ಅಗ್ನಿಯಲ್ಲಿರುವ ಕೆಂಪುರೂಪವು ತೇಜಸ್ಸಿನದು, ಬಿಳಿಯದು ಅಪ್ಪಿನದು, ಕಪ್ಪಾದದ್ದು ಅನ್ನದ್ದು ; ಹೀಗೆ ಅರಿತುಕೊಂಡರೆ ಅಗ್ನಿಯು ಅಗ್ನಿಯಲ್ಲದೆ ಹೋಗುವದು, ರೋಹಿತಾದಿರೂಪತ್ರಯಮಾತ್ರವೇ ಆಗುವದು. ಹೀಗೆಯೇ ಆದಿತ್ಯ, ಚಂದ್ರ, ಮಿಂಚು - ಇವುಗಳಲ್ಲಿಯೂ ತೇಜೋಽಬನ್ನಗಳ ರೂಪಗಳೇ ಇರುವವು.

೫-೭. ಈ ತತ್ತ್ವವನ್ನರಿತ ಹಿಂದಿನ ವಿದ್ವಾಂಸರು ಈ ಉದಾಹರಣೆಗಳಿಂದ ಎಲ್ಲವೂ ಹೀಗೆಯೇ ತ್ರಿವೃತ್ಕೃತವಾಗಿದೆ ಎಂದು ನಿಶ್ಚಯಿಸಿಕೊಂಡರು. ಯಾವದರ ಲ್ಲಿಯೇ ಆಗಲಿ, ಈ ತೇಜೋಽಬನ್ನಗಳ ರೂಪವೇ ಇರುತ್ತದೆ ಎಂದು ನಿಶ್ಚಯಿಸಿದರು.

ಈ ತೇಜೋಽಬನ್ನಗಳು ಪುರುಷಶರೀರದಲ್ಲಿ ಹೇಗೆ ತ್ರಿವೃತ್ಕೃತವಾಗಿ ರುವವೆಂಬುದನ್ನು ಹೇಳುವೆನು ಕೇಳು :

ಐದನೆಯ ಖಂಡದಿಂದ ಏಳನೆಯ ಖಂಡ ಪೂರ

೫-೧ ರಿಂದ ೪. ಉಂಡ ಅನ್ನವು ಮೂರು ಬಗೆಯಾಗಿರುತ್ತದೆ : ಅದರಲ್ಲಿ ತೀರ ಸ್ಥೂಲವಾದ ಭಾಗವು ಪುರೀಷವಾಗುವದು, ನಡುವಿನ ಭಾಗವು ಮಾಂಸವಾಗುತ್ತದೆ, ತೀರ ಸೂಕ್ಷ್ಮವಾದದ್ದು ಮನಸ್ಸಾಗುತ್ತದೆ. ಕುಡಿದ ಅಪ್ಪು ಹೀಗೆಯೇ ಮೂರು ಬಗೆಯಾಗಿ ಪರಿಣಮಿಸುತ್ತದೆ : ಸ್ಥೂಲತಮವಾದದ್ದು ಮೂತ್ರವು, ನಡುವಣ ಭಾಗವು ರಕ್ತವು, ಅಣುತಮವಾದದ್ದು ಪ್ರಾಣವು. ಹೀಗೆಯೇ ಮನುಷ್ಯನು ತೆಗೆದುಕೊಂಡ ಎಣ್ಣೆತುಪ್ಪ ಮುಂತಾದ ತೇಜೋದ್ರವ್ಯವೂ ಮೂರು ಬಗೆಯಾಗುತ್ತದೆ : ಸ್ಥೂಲತಮವಾದದ್ದು ಎಲುಬು, ನಡುವಣ ಭಾಗವು ಮಜ್ಜೆ, ಅಣುತಮವಾದದ್ದು ವಾಕ್ಕು. ಅಂತೂ ಹೀಗೆ ಮನಸ್ಸು ಅನ್ನಮಯ, ಪ್ರಾಣವು ಆಮ್ಮಯ, ವಾಕ್ಕು ತೇಜೋಮಯವು.

೬-೧ ರಿಂದ ೫. ಶ್ವೇತಕೇತುವು ಇದನ್ನು ಇನ್ನಷ್ಟು ಸ್ಪಷ್ಟಪಡಿಸಬೇಕೆನ್ನಲು ತಂದೆ ಇಂತೆಂದನು : ಕಡೆದ ಮೊಸರಿನ ಸೂಕ್ಷ್ಮಾಂಶವು ಮೇಲಕ್ಕೆ ಬೆಣ್ಣೆಯಾಗಿ ಏರುತ್ತದೆಯಷ್ಟೆ ? ಇದರಂತೆ ಉಂಡ ಅನ್ನದ ಸೂಕ್ಷ್ಮಾಂಶವು ಮನಸ್ಸಾಗುತ್ತದೆ ; ಅಪ್ಪಿನ ಸೂಕ್ಷ್ಮಾಂಶವು ಪ್ರಾಣವಾಗುತ್ತದೆ, ತೇಜಸ್ಸಿನ ಸೂಕ್ಷ್ಮಾಂಶವು ವಾಕ್ಕಾಗುತ್ತದೆ. ಆದ್ದರಿಂದ ಮನಸ್ಸು ಅನ್ನಮಯ, ಪ್ರಾಣವು ಆಪ್ಯಮಯ, ವಾಕ್ಕು ತೇಜೋಮಯ.

೭-೧. ಈಗ ಶ್ವೇತಕೇತುವು ಮನಸ್ಸು ಅನ್ನಮಯವೆಂಬುದನ್ನು ಇನ್ನಷ್ಟು ಸ್ಪಷ್ಟಪಡಿಸಿ ಹೇಳಬೇಕೆಂದು ಕೇಳಿಕೊಂಡನು. ತಂದೆ ಇಂತೆಂದನು : 'ಅಪ್ಪ ಈ ಮನುಷ್ಯನು ಹದಿನಾರು ಕಲೆಗಳುಳ್ಳವನು. ನೀನು ಹದಿನೈದು ದಿನಗಳು ಊಟಮಾಡದೆ ಇರು ; ಬೇಕಾದಷ್ಟು ನೀರು ಕುಡಿಯಬಹುದು' - ಎಂದನು.

೭-೨ ರಿಂದ ೩. ಶ್ವೇತಕೇತು ಹದಿನೈದು ದಿನಗಳು ಉಪವಾಸದಿಂದಿದ್ದು ಬಂದು ''ಏನು ಹೇಳಲಿ ?'' ಎಂದನು. ''ಋಕ್ಕುಗಳು, ಯಜಸ್ಸುಗಳು, ಸಾಮಗಳು- ಇವನ್ನು ಹೇಳು'' ಎಂದು ತಂದೆ ಕೇಳಲು ಅವನಿಗೆ ಯಾವದೊಂದೂ ತೋಚಲಿಲ್ಲ. ಆಗ ತಂದೆ ಹೇಳುತ್ತಾನೆ : ''ದೊಡ್ಡ ಉರಿಯುವ ಕೆಂಡದಲ್ಲಿ ಒಂದು ಸಣ್ಣಕಿಡಿ ಮಾತ್ರ ಉಳಿದಿರುವಲ್ಲಿ ಹೇಗೆ ಏನನ್ನೂ ಬಲವಾಗಿ ಸುಡಲಾರದೆ ಇರುವದೋ ಹಾಗೆ ನಿನ್ನಲ್ಲಿ ಹದಿನಾರರಲ್ಲಿ ಒಂದು ಕಲೆಮಾತ್ರ ಉಳಿದಿರುವದರಿಂದ ಏನೂ ತೋಚದೆ ಇದೆ. ಊಟಮಾಡು, ಆಮೇಲೆ ಎಲ್ಲವೂ ತಿಳಿಯುವದು.''

೪ ರಿಂದ ೬. ಮಗನು ಅದರಂತೆ ಊಟಮಾಡಿ ಬಳಿಗೆ ಬಂದನು ಕೇಳಿದ್ದೆಲ್ಲವನ್ನೂ ಒಪ್ಪಿಸಿದನು. ತಂದೆಯು ''ಅಪ್ಪ ಉಳಿದಿರುವ ಒಂದು ಸಣ್ಣಕಿಡಿಯನ್ನೇ ಹುಲ್ಲುಕಡ್ಡಿಗಳನ್ನು ಹಾಕಿ ಹೊತ್ತಿಸಿದರೆ ಹೇಗೆ ಅದು ಇನ್ನೂ ಬಲವಾಗಿ ಸುಡುವದೋ ಹಾಗೆಯೇ ನಿನ್ನಲ್ಲಿದ್ದ ಒಂದು ಕಲೆಯು ಅನ್ನದಿಂದ ಬೆಳೆದುಕೊಂಡು ಉರಿಯಿತು ; ಅದರಿಂದಲೇ ವೇದಗಳನ್ನೆಲ್ಲ ಈಗ ಅರಿಯುತ್ತಿರುವೆ. ಆದ್ದರಿಂದ ಮನಸ್ಸು ಅನ್ನಮಯವೆಂದೂ ಪ್ರಾಣವು ಆಪ್ಯಮಯವೆಂದೂ ವಾಕ್ಕು ತೇಜೋಮಯವೆಂದೂ ನಾನು ಹೇಳುತ್ತಿದ್ದೇನೆ'' ಎಂದನು. ಶ್ವೇತಕೇತುವಿಗೆ ಈ ಅಧ್ಯಾತ್ಮಿಕ ತ್ರಿವೃತ್ಕರಣದ ವಿವರವು ತಿಳಿಯಿತು.

ಎಂಟನೆಯ ಖಂಡ

೧-೨. ಉದ್ದಾಲಕ ಆರುಣಿಯು ಶ್ವೇತಕೇತುವಿಗೆ ತ್ರಿವೃತ್ಕೃತವಾದ ತೇಜೋಽಬನ್ನಗಳ ವಿಕಾರಗಳೊಳಗೆ ಅನ್ನವಿಕಾರವಾದ ಮನಸ್ಸಿನಲ್ಲಿ ಸದ್ರೂಪಪರ ದೇವತೆಯು ಜೀವರೂಪದಿಂದ ಒಳಹೊಕ್ಕು ತೇಜೋಽಮ್ಮಯಗಳಾದ ವಾಕ್ಪ್ರಾಣ ಗಳೊಡನೆ ಸೇರಿಕೊಂಡಿರುವದು. ಆ ಜೀವನು ಆಗ ಮನನದರ್ಶನಶ್ರವಣಾದಿ ವ್ಯವಹಾರಗಳನ್ನು ಮಾಡುತ್ತಿದ್ದು ಸುಷುಪ್ತಿಯಲ್ಲಿ ಅದೇ ಸದಾಖ್ಯಿಪರಮಾತ್ಮನಲ್ಲಿ ಸೇರುತ್ತಾನೆಂಬುದನ್ನು ತಿಳಿಸಬೇಕೆಂದು ಇಂತೆಂದನು : ''ಅಪ್ಪ , ಈ ಪುರುಷನಿಗೆ 'ಸ್ವಪಿತಿ' (ನಿದ್ರಿಸುತ್ತಾನೆ) ಎಂಬ ಹೆಸರು ಬಂದಾಗ ತನ್ನ ಸ್ವರೂಪವಾದ ಸತ್ತಿನಲ್ಲಿಯೇ ಅವನು ಲಯವಾಗಿರುತ್ತಾನೆ. ಹೇಗೆ ದಾರದಿಂದ ಕಟ್ಟಿರುವ ಹಕ್ಕಿಯು ಅತ್ತಿತ್ತ ಹಾರಾಡಿ ಮತ್ತೆಲ್ಲಿಯೂ ಆಶ್ರಯವು ಸಿಕ್ಕದೆ ತನ್ನನ್ನು ಕಟ್ಟಿಹಾಕಿರುವ ಸ್ಥಲಕ್ಕೇ ಬರುವದೋ ಹಾಗೆಯೇ ಈ ಮನಉಪಾಧಿಕನಾದ ಜೀವನು ಸುಷುಪ್ತಿಯಲ್ಲಿ ಪರಮಾತ್ಮನಲ್ಲಿಯೇ ಸೇರಿಕೊಳ್ಳುತ್ತಾನೆ.

೩-೪. ಇದರಂತೆ ಅಶನಾಯಾ (ಹಸಿವು) ಎಂಬ ಶಬ್ದವು ಅಪ್ಪಿಗೆ ಹೆಸರು; ಏಕೆಂದರೆ ಅದು ಅಶಿತವನ್ನು (ಉಂಡದ್ದನ್ನು) ತೆಗೆದುಕೊಂಡು ಹೋಗುತ್ತದೆ. ಈ ಅಪ್ಪಿನ ಸಹಾಯದಿಂದಾಗಿರುವ ಶರೀರವೆಂಬ ಕಾರ್ಯವು ಅನ್ನದಿಂದ ಉಂಟಾಗಿರುತ್ತದೆ ; ಅನ್ನವು ಅಪ್ಪಿನಿಂದ, ಅಪ್ಪು ತೇಜಸ್ಸಿನಿಂದ, ತೇಜಸ್ಸು ಸತ್ತಿನಿಂದ, ಆಗಿರುವದು. ಈ ಪ್ರಜೆಗಳಿಗೆಲ್ಲ ಸತ್ತೇ ಮೂಲವು, ಸತ್ತೇ ಆಧಾರವು, ಸತ್ತಿನ ಕಡೆಗೇ ಇವೆಲ್ಲವೂ ತೆರಳುವವು.

೫-೬. ಇನ್ನು ಉದನ್ಯಾ (ಬಾಯಾರಿಕೆ) ಎಂಬ ಮಾತೂ ಹೀಗೆಯೇ ತೇಜಸ್ಸಿಗೆ ಸೇರಿದ್ದು. ಕುಡಿದದ್ದನ್ನು ತೇಜಸ್ಸೇ ಒಣಗಿಸಿ ಅತ್ತ ಒಯ್ಯುವದು. ಅನ್ನದಿಂದ ಹೇಗೆ ಈ ಶರೀರವೆಂಬ ಕಾರ್ಯವುಂಟಾಗಿರುವದೋ ಅಪ್ಪಿನಿಂದಲೂ ಹಾಗೆಯೇ ಉಂಟಾಗಿರುತ್ತದೆ, ಆದ್ದರಿಂದ ಅಪ್ಪೆಂಬ ಕಾರ್ಯದಿಂದ ತೇಜಸ್ಸನ್ನೂ ತೇಜಸ್ಸಿನಿಂದ ಸತ್ತನ್ನೂ ಕಾರಣವೆಂದು ತಿಳಿದುಕೊ. ಈ ಪ್ರಜೆಗಳೆಲ್ಲ ಸತ್ತಿನಿಂದಲೇ ಹುಟ್ಟಿ ಅದರಲ್ಲಿಯೇ ಇದ್ದು, ಅದರಲ್ಲಿಯೇ ಹೋಗಿ ಸೇರುತ್ತಿರುವವು.

೬-೭. ಈ ಪುರುಷನಲ್ಲಿ ಈ ಮೂರು ದೇವತೆಗಳೂ ಸೇರಿ ತ್ರಿವೃತ್ಕರಣವಾಗುವ ಬಗೆಯನ್ನು ಆಗಲೇ ಹೇಳಿರುವೆನಷ್ಟೆ. ಈ ಪುರುಷನು ಸಾಯುವಾಗ ವಾಕ್ಕು ಮನಸ್ಸಿನಲ್ಲಿಯೂ ಮನಸ್ಸು ಪ್ರಾಣದಲ್ಲಿಯೂ ಪ್ರಾಣವು

ತೇಜಸ್ಸಿನಲ್ಲಿಯೂ ತೇಜಸ್ಸು ಸತ್ತೆಂಬ ಪರದೇವತೆಯಲ್ಲಿಯೂ ಸೇರಿಕೊಳ್ಳುವವು. ಸುಷುಪ್ತಿಯಲ್ಲಿಯೂ ಮರಣದಲ್ಲಿಯೂ ಯಾವ ಈ ಸತ್ತೆಂಬ ಪರಮಾತ್ಮನಲ್ಲಿ ಜೀವನು ಸೇರಿಕೊಳ್ಳುವನೋ ಆ ಸತ್ತೇ ಜಗತ್ತಿಗೆಲ್ಲ ಆತ್ಮನು, ಅದೇ ಸತ್ಯವು, ಅದೇ ಆತ್ಮನು. ಶ್ವೇತಕೇತುವೆ, ಅದೇ ನೀನು – ಎಂದು ತಂದೆಯು ಬೋಧಿಸಿದನು.

ಆಗ ಶ್ವೇತಕೇತುವು ಸುಷುಪ್ತಿಯಲ್ಲಿ ಜೀವರು ಈ ಸತ್ತಿನಲ್ಲಿ ಸೇರಿದರೂ ಹಾಗೆ ಸೇರಿಕೊಳ್ಳುತ್ತೀವೆಂದು ಅರಿತುಕೊಳ್ಳದೆ ಇರುವರಲ್ಲ ! ಇದನ್ನು ದೃಷ್ಟಾಂತದಿಂದ ಸ್ಪಷ್ಟಪಡಿಸಬೇಕು ಎಂದು ಕೇಳಿಕೊಂಡನು. ತಂದೆಯುಹಾಗೇ ಆಗಲಿ ಎಂದು ಹೀಗೆಂದನು :

ಒಂಬತ್ತನೆಯ ಖಂಡ

೧-೩. ಜೇನುಹುಳುಗಳು ಬೇರೆಬೇರೆ ಕಡೆಯಿಂದ ಗಿಡಗಳ ರಸವನ್ನು ತಂದು ಒಟ್ಟುಗೂಡಿಸಿ ಒಂದು ರಸವನ್ನಾಗಿ ಮಾಡುತ್ತವೆ. ಅಲ್ಲಿ ಎಲ್ಲವೂ ಸೇರಿರುವಾಗ ಹೇಗೆ ಸಿಹಿ, ಹುಳಿ – ಮುಂತಾದ ಬಗೆಬಗೆಯ ರಸಗಳು ತಮ್ಮ ವಿಶೇಷಸ್ವರೂಪದಿಂದ ಗೊತ್ತಾಗುವಂತೆ ಇರುವದಿಲ್ಲವೋ ಹಾಗೆಯೇ ಈ ಜೀವರುಗಳು ಸುಷುಪ್ತಿಯಲ್ಲಿ ಸದ್ರೂಪನಾದ ಪರಮಾತ್ಮನಲ್ಲಿ ಒಂದಾಗಿರುವಲ್ಲಿ 'ನಾವು ಸತ್ತಿನಲ್ಲಿ ಸೇರಿರುತ್ತೇವೆ' ಎಂಬ ಅರಿವು ಅವರಿಗಿರುವದಿಲ್ಲ. ಅವರು ಹುಲಿ, ಸಿಂಹ – ಮುಂತಾದ ಯಾವಯಾವ ವಾಸನೆಯಿಂದೊಡಗೂಡಿ ಸತಿನಲಿ ಸೇರಿರುತ್ತಾರೋ ಆಯಾ ಶರೀರವನ್ನೇ ಪಡೆದುಕೊಳ್ಳುತ್ತಾರೆ.

೪. ಹೀಗೆ ಯಾವ ಸದ್ಬ್ರಹ್ಮದಲ್ಲಿ ಎಲ್ಲರೂ ಸುಷುಪ್ತಿಯಲ್ಲಿ ಒಂದಾಗಿರುವರೋ ಅದೇ ಎಲ್ಲಕ್ಕೂ ಆತ್ಮವು, ಅದೇ ಸತ್ಯವು, ಅದೇ ನೀನು – ಎಂದು ತಂದೆ ಹೇಳಲು ಸತ್ತಿನಿಂದ ಬಂದ ಮೇಲೆ ಎಚ್ಚರದಲ್ಲಾದರೂ 'ಸತ್ತಿನಿಂದ ನಾನು ಬಂದೆನು' ಎಂದೇಕೆ ತಿಳಿಯುವದಿಲ್ಲ ?– ಎಂದು ಶ್ವೇತಕೇತು ಕೇಳಿದನು. ತಂದೆ ಹೇಳುತಾನೆ :

ಹತ್ತನೆಯ ಖಂಡ

೧-೩. ಗಂಗಾದಿ-ನದಿಗಳು ಬೇರೆಬೇರೆ ದಿಕ್ಕಿಗೆ ಹರಿದು ಸಮುದ್ರದಲ್ಲಿ ಒಂದಾಗುತ್ತವೆ. ಆ ಸಮುದ್ರದಿಂದ ಮತ್ತೆ ಮೋಡಗಳಾಗಿ ಮೇಲಕ್ಕೇರಿ ಮಳೆಗರೆದು

ಇನ್ನೊಂದು ಸಲ ನದಿಯಾಗಿ ಹರಿಯುವವು. ಆ ನದಿಗಳು ಗಂಗೆ, ಸಿಂಧು - ಮುಂತಾದ ವಿಶೇಷರೂಪದಿಂದ ಸಮುದ್ರದಲ್ಲಿ ವಿವಿಕ್ತವಾಗಿರುವದಿಲ್ಲ; ಮತ್ತು ಬಂದ ಮೇಲೆ ಸಮುದ್ರದಿಂದ ಮತ್ತೆ ಬಂದ ನದಿಯಿದು ಎಂದೂ ಗೊತ್ತಾಗುವದಿಲ್ಲ. ಸತ್ತನ್ನು ಸೇರಿ ಮತ್ತೆ ಹೊರಕ್ಕೆ ಬಂದ ಜೀವರೂ ಹೀಗೆಯೇ 'ಸತ್ತಿನಿಂದ ಬಂದಿದೇವೆ' ಎಂಬುದನ್ನು ತಿಳಿದುಕೊಳ್ಳದೆ ಇರುವವು. ಯಾವ ಸತ್ತಿನಿಂದ ಜೀವರೆಲ್ಲರೂ ಹೀಗೆ ಮತೆ ಎಚ್ಚರುವರೋ ಅದೇ ನೀನು.

ಹೀಗೆನ್ನಲು ಸತ್ತಿನಲ್ಲಿ ಪ್ರವಿಷ್ಟರಾದ ಜೀವರು ಅಲೆ, ನೊರೆ, ಗುಳ್ಳೆ - ಮುಂತಾದವು ನೀರಿನಲ್ಲಿ ಸೇರಿಕೊಂಡಾಗ ನಷ್ಟವಾಗುವಂತೆ ಏತಕ್ಕೆ ನಾಶವಾಗುವ ದಿಲ್ಲ?- ಎಂದು ಶಂಕಿಸಿದನು. ಅದಕ್ಕೆ ತಂದೆ ಹೇಳುತ್ತಾನೆ :

ಹನ್ನೊಂದನೆಯ ಖಂಡ

ಒಂದು ದೊಡ್ಡಮರದ ಯಾವ ಭಾಗವನ್ನು ಕೊಡಲಿ ಮುಂತಾದದ್ದರಿಂದ ಹೊಡೆದರೂ ಅದರ ರಸವು ಸ್ರವಿಸುವದು. ಆ ಮರದಲ್ಲೆಲ್ಲ ಮರದ ಜೀವನು ವ್ಯಾಪಿಸಿಕೊಂಡಿರುತ್ತಾನೆ. ಆ ಜೀವನು ಯಾವಯಾವ ಕೊಂಬೆಯನ್ನು ಬಿಡುತ್ತಾನೋ ಆದದು ಒಣಗಿಹೋಗುತ್ತದೆ ; ಆದರೆ ಜೀವನು ಮರದ ಮಿಕ್ಕ ಭಾಗದಲ್ಲಿ ವ್ಯಾಪಿಸಿಕೊಂಡಿರುತ್ತಾನೆ. ಇದರಂತೆ ಜೀವನು ಬಿಟ್ಟ ಶರೀರವು ಸಾಯುವದೇ ಹೊರತು ಜೀವನು ಸಾಯುವದಿಲ್ಲ. ಹೀಗೆ ಜೀವರೆಲ್ಲರೂ ಹೋಗಿ ಸೇರಿಕೊಳ್ಳುವ ಸದ್ಬ್ರಹ್ಮವೇ ನೀನು.

ಈಗ ಶ್ವೇತಕೇತುವು ಅತ್ಯಂತಸೂಕ್ಷ್ಮವಾದ ಸದ್ಬ್ರಹ್ಮದಿಂದ ಅತ್ಯಂತಸ್ಥೂಲವಾದ ನಾಮರೂಪಗಳ ಜಗತ್ತು ಹೇಗೆ ಉಂಟಾಗುತ್ತದೆ ? ಎಂದು ಕೇಳಲು ಅದಕ್ಕೆ ತಂದೆ ಹೀಗೆಂದನು :

ಹನ್ನೆರಡನೆಯ ಖಂಡ

೧-೩. ಆಲದ ಹಣ್ಣಿನಲ್ಲಿರುವ ಬೀಜವನ್ನು ಒಡೆದು ನೋಡಿದರೆ ಅದರಲ್ಲಿ ಮತ್ತೇನೂ ಕಾಣಿಸುವದಿಲ್ಲ. ಆದರೆ ಆ ಸೂಕ್ಷ್ಮಾಂಶದಿಂದಲೇ ದೊಡ್ಡದಾದ ಆಲದಮರವು ಹುಟ್ಟಿ ಬೆಳೆದುಕೊಂಡಿರುವದು. ಇದರಂತೆ ಅಣುವಾದ ಸದಾತ್ಮನಿಂದ ಜಗತ್ತು ಹುಟ್ಟಿರುವದು. ಆ ಸದ್ಬ್ರಹ್ಮವೇ ನೀನು.

'ಜಗತ್ತಿಗೆ ಮೂಲವಾಗಿರುವ ಈ ಸತ್ತು ಏತಕ್ಕೆ ತಿಳಿದುಬರುತ್ತಿಲ್ಲ ?' ಎಂದು ಶ್ವೇತಕೇತುವು ಕೇಳಲು ಅದಕ್ಕೆ ತಂದೆ ಹೀಗೆಂದು ಉತ್ತರವಿತ್ತನು :

ಹದಿಮೂರನೆಯ ಹದಿನಾಲ್ಕನೆಯ ಖಂಡಗಳು

೧೩-೧ ರಿಂದ ೩. ಉಪ್ಪಿನ ಪರಳನ್ನು ನೀರಿನಲ್ಲಿ ಹಾಕಿದರೆ ಕರಗಿಹೋಗುವದು. ಆಗ ಅದನ್ನು ಕೈಯಿಂದ ತೆಗೆಯಲು ಆಗುವದಿಲ್ಲ. ಆದರೂ ಆ ನೀರನ್ನು ಸವಿದುನೋಡಿದರೆ ಎಲ್ಲೆಲ್ಲಿಯೂ ಉಪ್ಪೇ ಆಗಿರುತ್ತದೆ. ಇದರಂತೆ ಜಗನ್ಮೂಲವಾದ ಸತ್ತನ್ನು ಸಾಮಾನ್ಯಸಾಧನದ ಮೂಲಕ ತಿಳಿಯುವದಕ್ಕೆ ಆಗದೆ ಇದ್ದರೂ ಉಪಾಯಾಂತರದಿಂದ ತಿಳಿದುಕೊಳ್ಳಬಹುದು.

೧೪-೧ ರಿಂದ ೩. ೀಗೆಂದರೆ ಒಬ್ಬ ಗಂಧಾರದೇಶದ ಪುರುಷನನ್ನು ಕಳ್ಳರು ಕಣ್ಣುಕಟ್ಟಿ ತಂದು ನಿರ್ಜನವಾದ ಕಾಡಿನಲ್ಲಿ ಬಿಟ್ಟುಬಿಟ್ಟರು. ಅವನು ಕೂಗಿಕೊಳ್ಳುತ್ತಾ ಅಲ್ಲಿ ಅತ್ತಿತ್ತ ತಿರುಗಾಡುತ್ತಾ ಜನರ ಸಹಾಯವನ್ನು ಬೇಡಿಕೊಳ್ಳುತ್ತಿದ್ದನು. ಅಲ್ಲಿಗೆ ಬಂದಿದ್ದ ದಾರಿಹೋಕನೊಬ್ಬನು ಕುರಣೆಯಿಂದ ಅವನ ಕಣ್ಣುಕಟ್ಟನ್ನು ಬಿಚ್ಚಿ 'ಗಂಧಾರದೇಶವು ಈ ದಿಕ್ಕಿಗೆ ಇದೆ, ಈ ಕಡೆಗೆ ಹೋಗು !' ಎಂದು ತಿಳಿಸಲು ಆತನು ವಿವೇಕಿಯಾದ್ದರಿಂದ ಜನರಲ್ಲಿ ದಾರಿಯನ್ನು ಕೇಳುತ್ತಾ ಊರಿಂದೂರಿಗೆ ಹೋಗಿ ಕೊನೆಗೆ ಗಂಧಾರದೇಶವನ್ನೇ ಸೇರಿಕೊಂಡನು. ಹೀಗೆಯೇ ಆತ್ಮನನ್ನು ಅರಿಯದವನು ಆಚಾರ್ಯನ ಉಪದೇಶವೆಂಬ ಉಪಾಯದಿಂದ ಆತ್ಮನನ್ನು ಅರಿತುಕೊಳ್ಳುವನು. ಪ್ರಾರಬ್ಧಕರ್ಮವು ಮುಗಿಯುತ್ತಲೂ ಅವನು ಸದ್ಬ್ರಹ್ಮದಲ್ಲಿಯೇ ಸೇರಿಕೊಂಡು ಮುಕ್ತನಾಗಿಬಿಡುವನು. ಆ ಸದ್ಬ್ರಹ್ಮವೇ ನೀನು.

ಹೀಗೆನ್ನಲು ಶ್ವೇತಕೇತುವು 'ಜ್ಞಾನಿಯು ಯಾವ ಕ್ರಮದಿಂದ ಸದ್ಬ್ರಹ್ಮವನ್ನು ಸೇರಿಕೊಳ್ಳುತ್ತಾನೆ ?' ಎಂದು ಕೇಳಿದನು. ತಂದೆಯು ಹೀಗೆಂದು ಉತ್ತರವಿತ್ತನು :

ಹದಿನೈದನೆಯ ಖಂಡ

೧-೩. ಜ್ವರಾದಿಗಳಿಂದ ನರಳುತ್ತಾ ಸಾಯಲಾಗಿರುವವನ ಜ್ಞಾತಿಗಳು ಹತ್ತಿರ ಬಂದು 'ನಾನು ಯಾರು, ಹೇಳು' ಎಂದು ಕೇಳುತ್ತಿರುವರು. ಕೊನೆಗೆ ಅವನ ವಾಕ್ಕು ಮನಸ್ಸಿನಲ್ಲಿಯೂ ಮನಸ್ಸು ಪ್ರಾಣದಲ್ಲಿಯೂ ಪ್ರಾಣವು ತೇಜಸ್ಸಿನಲ್ಲಿಯೂ ತೇಜಸ್ಸು ಪರದೇವತೆಯಾದ ಸದ್ಬ್ರಹ್ಮದಲ್ಲಿಯೂ ಸೇರಿಕೊಳ್ಳುವದು. ಆಗ ಅವನಿಗೆ ಬಾಹ್ಯಜ್ಞಾನವು ಇಲ್ಲವಾಗುವದು. ಆ ಸದ್ಬ್ರಹ್ಮವೇ ನೀನು.

ಹೀಗೆನ್ನಲು ಶ್ವೇತಕೇತುವು 'ಹೀಗೆ ಜ್ಞಾನಿಯೂ ಅಜ್ಞಾನಿಯೂ ಸದ್ಬ್ರಹ್ಮವನ್ನೆ ಸೇರುತ್ತಾರಾದರೆ ಜ್ಞಾನಿಯು ಮಾತ್ರ ಹಿಂದಕ್ಕೆ ಬರುವದಿಲ್ಲವೇಕೆ ?' ಎಂದು ಕೇಳಿದನು. ತಂದೆಯು ಈ ದೃಷ್ಟಾಂತವನ್ನು ಹೇಳಿದನು :

ಹದಿನಾರನೆಯ ಖಂಡ

೧-೩. ಕಳವುಮಾಡಿರುವನೆಂಬ ಸಂಶಯಕ್ಕೆ ಈಡಾದ ಪುರುಷನನ್ನು ಕೈಗೆ ಬೇಡಿಹಾಕಿ ಕರೆತಂದು 'ನೀನು ಇಂಥವನ ಸ್ವತ್ತನ್ನು ಕದ್ದಿರುವೆಯ ?'- ಎಂದು ರಾಜಪುರುಷರು ಕೇಳುವಾಗ ಅವನು ಇಲ್ಲವೆನ್ನುತ್ತಾನೆ. ಪರೀಕ್ಷೆಯಿಂದ ನಿಜವನ್ನು ಕಂಡುಹಿಡಿಯುವದಕ್ಕಾಗಿ 'ಕಾದ ಕೊಡಲಿಯನ್ನು ಹಿಡಿದುಕೊ !' ಎಂದು ಅವರು ಕೇಳುತ್ತಾರೆ. ಆಗ ಅವನು 'ನಾನು ಕದ್ದಿಲ್ಲ' ಎಂದು ಸುಳ್ಳೇ ಹೇಳಿ ಮುಟ್ಟಿದರೆ ಅವನನ್ನು ಬೆಂಕಿ ಸುಡುತ್ತದೆ ; ನಿಜವನ್ನೇ ಹೇಳಿದ್ದರೆ, ಸುಡುವದಿಲ್ಲ. ಇದರಂತೆ ಯಾವನು ಸತ್ಯವಾದ ಸದ್ಬ್ರಹ್ಮವನ್ನೇ ಅರಿತು ಅದರಲ್ಲಿ ಸೇರಿಕೊಳ್ಳುತ್ತಾನೋ ಅವನು ಸಂಸಾರಕ್ಕೆ ಮರಳಿ ಬರುವದಿಲ್ಲ.

ತಂದೆಯು ಜ್ಞಾನದಿಂದ ಸದ್ಬ್ರಹ್ಮವನ್ನು ಸೇರಿದವನಿಗೆ ಮುಕ್ತಿಯಾಗುವ ಪರಿಯನ್ನು ಹೀಗೆ ತಿಳಿಸಿಕೊಡಲು ಶ್ವೇತಕೇತುವು ಅದನ್ನು ಅರಿತುಕೊಂಡು ಕೃತಕೃತ್ಯನಾದನು.

ಏಳನೆಯ ಅಧ್ಯಾಯದ ಸಾರ

ಇಲ್ಲಿ ನಾಮಾದಿಯಾಗಿ ಪ್ರಾಣಾಂತವಾಗಿರುವ ಬ್ರಹ್ಮವಿಕಾರಗಳನ್ನು ಕ್ರಮಕ್ರಮವಾಗಿ ವಿವರಿಸಿ ಅನಂತವಾದ **ಭೂಮಬ್ರಹ್ಮದ ತತ್ತ್ವ**ವನ್ನು ತಿಳಿಸಿಕೊಟ್ಟಿದೆ.

ಒಂದನೆಯ ಖಂಡ

ನಾರದನು ಸನತ್ಕುಮಾರನ ಬಳಿಗೆ ಬಂದು ಬ್ರಹ್ಮವಿದ್ಯೆಯನ್ನು ಹೇಳಿಕೊಡ ಬೇಕೆಂದು ಬೇಡಿಕೊಂಡನು. ''ನಿನಗೆ ತಿಳಿದಿರುವದನ್ನು ಹೇಳು, ಅಲ್ಲಿಂದ ಮುಂದಕ್ಕೆ

ಹೇಳಿಕೊಡುವೆನು'' ಎಂದು ಸನತ್ಕುಮಾರನು ಆಜ್ಞಾಪಿಸಲು ಅದರಂತೆ ನಾರದನು ತನಗೆ ಬಂದಿದ್ದ ಋಗ್ವೇದಾದಿಗಳ ತಿಳಿವಳಿಕೆಯನ್ನು ಒಂದೊಂದಾಗಿ ವಿವರಿಸಿ ''ಭಗವಂತನೆ, ನಾನು ಬರಿಯ ಕರ್ಮೋಪಯುಕ್ತವಾದ ಮಂತ್ರಗಳನ್ನರಿತಿರುವೆನೇ ಹೊರತು ಆತ್ಮನನ್ನರಿತುಕೊಂಡಿಲ್ಲ. ಆತ್ಮನನ್ನು ಅರಿತುಕೊಂಡವನಿಗೆ ಶೋಕವು ತೊಲಗುವದೆಂದು ದೊಡ್ಡವರಿಂದ ಕೇಳಿರುತ್ತೇನೆ. ದಯವಿಟ್ಟು ನನಗೆ ಶೋಕದಿಂದ ಪಾರುಮಾಡುವ ಆತ್ಮವಿದ್ಯೆಯನ್ನು ಹೇಳಿಕೊಡಬೇಕು'' ಎಂದು ಕೇಳಿಕೊಂಡನು.

ಸನತ್ಕುಮಾರನು ''ನಿನಗೆ ತಿಳಿದಿರುವದೆಲ್ಲವೂ ನಾಮವೇ. ನಾಮವೇ ಬ್ರಹ್ಮವೆಂದು ಉಪಾಸನೆಮಾಡು ; ಅದರಿಂದ ನಾಮಕ್ಷೇತ್ರದಲ್ಲೆಲ್ಲ ನಿನಗೆ ಸ್ವಾತಂತ್ರ್ಯದ ವಿಹಾರವು ಬರುವದು'' ಎಂದು ಉಪದೇಶಿಸಿದನು. ಆಗ ನಾರದನು ''ಭಗವಂತನೆ, ನಾಮಕ್ಕಿಂತ ಹೆಚ್ಚಿನದುಂಟೆ ?'' ಎಂದು ಕೇಳಲು ಸನತ್ಕುಮಾರನು ಅದಕ್ಕಿಂತ ವಾಕ್ಕು ಹೆಚ್ಚಿನದು ಎಂದು ಉಪದೇಶಿಸಿದನು.

ಎರಡರಿಂದ ಹದಿನೈದರವರೆಗಿನ ಖಂಡಗಳು

ಹೀಗೆಯೇ ವಾಕ್ಕು, ಮನಸ್ಸು ಸಂಕಲ್ಪ ಚಿತ್ತ ಧ್ಯಾನ, ವಿಜ್ಞಾನ, ಅನ್ನ ಅಪ್ಪು ತೇಜಸ್ಸು ಆಕಾಶ, ಸ್ಮರ, ಆಶೆ, ಪ್ರಾಣ – ಎಂಬ ಹದಿಮೂರು ತತ್ತ್ವಗಳ ಸ್ವರೂಪ, ಮಹಿಮೆ, ಅವುಗಳನ್ನು ಬ್ರಹ್ಮವೆಂದು ಉಪಾಸನೆಮಾಡುವದರ ಫಲ – ಇವುಗಳನ್ನು ವಿವರಿಸಿ ಹೇಳಿದನು. ಇವು ಒಂದಕ್ಕಿಂತ ಒಂದು ಹೆಚ್ಚಾಗಿರುವವು. ಮುಂದೆಮುಂದೆ ಹೇಳಿದ ತತ್ತ್ವವು ಹಿಂದು ಹಿಂದಿನದಕ್ಕೆ ಕಾರಣವಾಗಿರುವದು ; ಆಯಾ ತತ್ತ್ವವನ್ನು ಬ್ರಹ್ಮವೆಂದು ಉಪಾಸನೆಮಾಡಿದವನಿಗೇ ಆಯಾ ತತ್ತ್ವದ ಕ್ಷೇತ್ರದಲ್ಲೆಲ್ಲ ಕಾಮಚಾರಿತ್ವವಿರುವದು– ಎಂದು ತಿಳಿಸಿದ ಬಳಿಕ ಪ್ರಾಣವನ್ನು ಉಪಾಸನೆಮಾಡಿದವನು ಮಿಕ್ಕ ಎಲ್ಲಾ ತತ್ತ್ವಗಳನ್ನೂ ಅತಿಕ್ರಮಿಸಿದ ತತ್ತ್ವವನ್ನು ಅರಿತವನಾಗಿರುತ್ತಾನೆ ; ಆದ್ದರಿಂದ ಪ್ರಾಣವನ್ನವಲಂಬಿಸಿ ವ್ಯವಹರಿಸುವವನು ಅತಿವಾದಿಯಾಗಿರುತ್ತಾನೆ – ಎಂದು ಪ್ರಾಣವಿದ್ಯೆಯನ್ನು ವಿಶೇಷವಾಗಿ ಹೊಗಳಿದನು.

ಹದಿನಾರರಿಂದ ಇಪ್ಪತ್ತೈದರವರೆಗಿನ ಖಂಡಗಳು

ನಾರದನು ಪ್ರಾಣವಿದ್ಯೆಯೇ ಎಲ್ಲಕ್ಕೂ ಹೆಚ್ಚಿನದೆಂದು ಭಾವಿಸಿ ಮುಂದೆ 'ಇದಕ್ಕಿಂತ ಹೆಚ್ಚಿನದು ಇದೆಯೆ ?' ಎಂದು ಕೇಳಲಿಲ್ಲ. ಆದರೂ ಸನತ್ಕುಮಾರನು

ಶಿಷ್ಯನಿಗೆ ಪರಮಾರ್ಥವನ್ನು ಹೇಳಿಯೇಕೊಡಬೇಕೆಂದು ತಾನೇ ಉಪದೇಶಿಸುವ ದಕ್ಕೆ ಪ್ರಾರಂಭಿಸಿದನು.

"ಪರಮಾರ್ಥಸತ್ಯವನ್ನವಲಂಬಿಸಿ ಅತಿವಾದಮಾಡುವವನೇ, ನಿಜವಾದ ಅತಿವಾದಿಯು. ಅದನ್ನು ಅರಿತುಕೊಳ್ಳುವದೇ ವಿಜ್ಞಾನವು. ಆ ವಿಜ್ಞಾನಕ್ಕೆ ಮನನವೂ ಅದಕ್ಕೆ ಶ್ರದ್ಧೆಯೂ, ಅದಕ್ಕೆ ನಿಷ್ಠೆಯೂ, ಅದಕ್ಕೆ ಇಂದ್ರಿಯಜಯವೂ, ಚಿತ್ತೈಕಾಗ್ರತೆಯೂ, ಅವಶ್ಯವು ; ಅದಕ್ಕೆ ಪರಮಾರ್ಥವಾದ ನಿರತಿಶಯಸುಖ ಪ್ರಾಪ್ತಿಯ ನಿಶ್ಚಯವೇ ಕಾರಣವು. ಆ ಸುಖವೆಂಬುದು ಭೂಮವೇ, ಅಲ್ಪವಲ್ಲ ; ಆದ್ದರಿಂದ ಭೂಮವನ್ನೇ ಅರಿತುಕೊಳ್ಳಬೇಕು" ಎಂದು ಬೋಧಿಸಿದ ಸನತ್ಕುಮಾರನ ವಚನವನ್ನು ಕೇಳಿ ಭೂಮಜ್ಞಾನವೇ ತನಗೆ ಬೇಕೆಂದು ನಾರದನು ಕೇಳಿಕೊಂಡನು.

"ಎಲ್ಲಿ ಮತ್ತೊಂದರ ಅರಿವೇ ಆಗುವದಿಲ್ಲವೋ ಅದೇ ಭೂಮವು, ಅದೇ ಅಮೃತವಾದದ್ದು. ಮಿಕ್ಕದ್ದು ಅಲ್ಪವು, ಮರ್ತ್ಯವು. **ವ್ಯವಹಾರದೃಷ್ಟಿಯಿಂದ ಅದು ತನ್ನಲ್ಲಿ ತಾನಿರುವದು ಪರಮಾರ್ಥದೃಷ್ಟಿಯಿಂದ ನೋಡಿದರೆ ಅದು ನಿರಾಧಾರವಾಗಿರುವದು, ಏಕೆಂದರೆ ಅದರಲ್ಲಿ ಯಾವ ದ್ವೈತವೂ ಇರುವದೇ ಇಲ್ಲ. ಆ ಭೂಮವೇ ಎಲ್ಲೆಲ್ಲಿಯೂ ಇರುತ್ತದೆ ; ಅದೇ ಎಲ್ಲರಲ್ಲಿಯೂ ನಾನು ಎಂದು ಕರೆಯಿಸಿಕೊಳ್ಳತಕ್ಕದ್ದು. ಆದರೆ ಅದು ನಾನು ಎಂದು ಜನರು ಕರೆಯುತ್ತಿರುವ ದೇಹಾದಿಸಂಘಾತವಲ್ಲ. ಎಲ್ಲಕ್ಕೂ ತಿರುಳಾಗಿರುವ ಪರಿಶುದ್ಧನಾದ ಪ್ರತ್ಯಗಾತ್ಮನೇ ಭೂಮವು. ಈ ತತ್ತ್ವವನ್ನು ಮನನವಿಜ್ಞಾನಗಳ ಮೂಲಕ ಕಂಡುಕೊಂಡಿರುವಾತನಿಗೆ ನಿರಂಕುಶ 'ವಾದ ಕಾಮಚಾರವಿರುವದು, ಅವನು ಸ್ವಯಂರಾಜನಾಗಿರುವನು ; ಮಿಕ್ಕವರಂತೆ ಅವನ ಲೋಕಗಳು ನಾಶವಾಗುವದಿಲ್ಲ, ಅವನ ಮೇಲೆ ಮತ್ತೊಬ್ಬ ರಾಜನಿರುವದಿಲ್ಲ"** ಎಂದು ತಿಳಿಸಿಕೊಟ್ಟನು.

ಇಪ್ಪತ್ತಾರನೆಯ ಖಂಡ

ಯಾವನು ಹೀಗೆಂದು ಮನನವಿಜ್ಞಾನಗಳಿಂದ ತತ್ತ್ವವನ್ನು ಕಂಡುಕೊಂಡಿರುವನೋ ಅವನಿಗೆ ಪ್ರಾಣಾದಿಯಾಗಿ ನಾಮಾಂತವಾದ ಒಂದೆ ಹೇಳಿರುವದೆಲ್ಲವೂ ಆತ್ಮನಿಂದಲೇ ಉಂಟಾಗುವವೆಂಬ ಅರಿವು ಉಂಟಾಗುತ್ತದೆ. ಅವನ ವ್ಯವಹಾರವೆಲ್ಲವೂ ಈ ಆತ್ಮನನ್ನೇ ಅವಲಂಬಿಸಿಕೊಂಡಿರುತ್ತದೆ. ಈ ಆತ್ಮಜ್ಞಾನಿಗೆ

ರೋಗ, ದುಃಖ - ಮುಂತಾದ ಅನರ್ಥಗಳು ಯಾವವೂ ಕಾಣಿಸಿಕೊಳ್ಳುವದಿಲ್ಲ ; ಆತನೇ ಎಲ್ಲವೂ ಆಗಿ ಎಲ್ಲವನ್ನೂ ಪಡೆದುಕೊಳ್ಳುವನು. ತಾನು ಒಬ್ಬನೇ ಆಗಿದ್ದರೂ ಸೃಷ್ಟಿಯಿಂದ ಅನಂತಪ್ರಕಾರಗಳಾಗಿ ತೋರಿಕೊಂಡು ಪ್ರಲಯಕಾಲದಲ್ಲಿ ಒಬ್ಬನೇ ಆಗುವ ಸ್ವಾತಂತ್ರ್ಯವು ಆತನದು.

ಈ **ಆತ್ಮಜ್ಞಾನವಾಗುವದಕ್ಕೆ ಆಹಾರಶುದ್ಧಿಯು, ಎಂದರೆ ರಾಗದ್ವೇಷಾದಿಗಳಿಲ್ಲದ ವಿಷಯವಿಜ್ಞಾನವು, ಅತ್ಯವಶ್ಯವು. ಆಹಾರಶುದ್ಧಿಯಿಂದ ಆತ್ಮಜ್ಞಾನವುಂಟಾಗುವದು, ಅದು ಉಂಟಾದರೆ ಹೃದಯದಲ್ಲಿರುವ ಅವಿದ್ಯಾವಾಸನಾಗ್ರಂಥಿಗಳೆಲ್ಲವೂ ಬಿಚ್ಚಿಕೊಳ್ಳುವವು** - ಎಂದು ಭಗವಂತನಾದ ಸನತ್ಕುಮಾರನು ರಾಗದ್ವೇಷಾದಿರಹಿತನಾದ ನಾರದನಿಗೆ ಉಪದೇಶ ಮಾಡಿದನು. ಆ ಸನತ್ಕುಮಾರನೇ ಸ್ಕಂದನು ಎಂದು ಬಲ್ಲವರು ಹೇಳುತ್ತಾರೆ.

ಎಂಟನೆಯ ಅಧ್ಯಾಯದ ಸಾರ

ಒಂದರಿಂದ ಆರರವರೆಗಿನ ಖಂಡಗಳ ಸಾರ

ಈ ಗ್ರಂಥಭಾಗದಲ್ಲಿ **ದಹರವಿದ್ಯೆ**ಯನ್ನು ವರ್ಣಿಸಿದೆ.

ಒಂದನೆಯ ಖಂಡ

ಈ ಬ್ರಹ್ಮಪುರವಾದ ದೇಹದಲ್ಲಿ ದಹರವಾದ ಪುಂಡರೀಕವೆಂಬ ಮನೆಯಿದೆ, ಅದರೊಳಗಿನ ದಹರಾಕಾಶದಲ್ಲಿ ಯಾವದಿದೆಯೋ ಅದನ್ನು ಹುಡುಕಿ ಅರಿತುಕೊಳ್ಳಬೇಕು. ''ಇದರಲ್ಲಿ ಅರಿತುಕೊಳ್ಳತಕ್ಕದ್ದೇನಿದೆ ?'' ಎಂಬು ಶಿಷ್ಯರು ಕೇಳಿದರೆ ''ಹೊರಗಿರುವ ಆಕಾಶದಷ್ಟೂ ಆ ಆಕಾಶವಿದೆ. ಅದರಲ್ಲಿ ದ್ಯಾವಾಪೃಥಿವಿಗಳು, ಅಗ್ನಿವಾಯುಗಳು, ಸೂರ್ಯಾಚಂದ್ರಮಸರು, ಮಿಂಚು ನಕ್ಷತ್ರಗಳು, ಮಿಕ್ಕದ್ದೆಲ್ಲವೂ ಅದರೊಳಗೆ ಇದುಕೊಂಡಿರುವದು'' ಎಂದು ಆಚಾರ್ಯನು ಹೇಳಬೇಕು.

''ಈ ದೇಹದಲ್ಲಿ ಎಲ್ಲವೂ, ಎಲ್ಲಾ ಭೂತಗಳೂ ಎಲ್ಲಾ ಕಾಮಗಳೂ ಇರುವದಾದರೆ ಇದಕ್ಕೆ ಮುಪ್ಪಾಗಲಿ ಸಾವಾಗಲಿ ಬಂದರೆ ಆಮೇಲೆ ಏನೂ ಉಳಿಯುವದಿಲ್ಲವಲ್ಲ !'' ಎಂದು ಅವರು ಕೇಳಬಹುದು. ''ಇದರ ಮುಪ್ಪಿನಿಂದ

ಅದಕ್ಕೆ ಮುಪ್ಪಿಲ್ಲ, ಇದರ ಸಾವಿನಿಂದ ಅದಕ್ಕೆ ಸಾವಿಲ್ಲ ; ಅದರಲ್ಲಿ ಕಾಮಗಳೆಲ್ಲವೂ ಇರುತ್ತವೆ. ಅದೇ ಎಲ್ಲರ ಆತ್ಮನು, ಅಪಹತಪಾಪ್ಮನು, ವಿಜರನು, ವಿಮೃತ್ಯು, ವಿಶೋಕನು, ಹಸಿವಿಲ್ಲದವನು, ಬಾಯಾರಿಕೆಯಿಲ್ಲದವನು ; ಸತ್ಯಕಾಮನು, ಸತ್ಯಸಂಕಲ್ಪನು. ಈ ಆತ್ಮನನ್ನು ಅರಿತುಕೊಳ್ಳದವರು ಪರವಶರಾಗಿ ತಮ್ಮ ಕರ್ಮಫಲವನ್ನು ಅನುಭವಿಸುತ್ತಿರುವರು. ಈ ಲೋಕದಲ್ಲಿ ಕರ್ಮದ ಫಲವು ನಾಶವಾಗುವಂತೆ ಸ್ವರ್ಗಾದಿಪುಣ್ಯಫಲವೂ ನಾಶವಾಗುವದು. ಆದರೆ ಯಾರು ಈ ಆತ್ಮನನ್ನು ಉಪಾಸನೆಮಾಡಿ ದೇಹವನ್ನು ಬಿಡುವರೋ ಅವರಿಗೆ ಸರ್ವಕಾಮಗಳೂ ಇಚ್ಛಾನುಸಾರವಾಗಿ ದೊರೆಯುವವು'' ಎನ್ನಬೇಕು.

ಎರಡನೆಯ ಖಂಡ

ಈ ಉಪಾಸಕನಿಗೆ ಪಿತೃಲೋಕ, ಮಾತೃಲೋಕ, ಭ್ರಾತೃಲೋಕ, ಸ್ವಸೃಲೋಕ, ಗಂಧಮಾಲ್ಯಲೋಕ, ಗೀತವಾದಿತ್ರಲೋಕ, ಸ್ತ್ರೀಲೋಕ - ಹೀಗೆ ಯಾವಯಾವದರ ಇಚ್ಛೆಯುಂಟಾದರೂ ಅದದು ಅವನಿಗೆ ಸಂಕಲ್ಪಮಾತ್ರ ದಿಂದಲೇ ಎದುರಿಗೆ ಬಂದು ನಿಲ್ಲುವದು. ಅದರ ಭೋಗದಿಂದ ಅವನು ಪೂಜ್ಯನೂ ಮಹಿಮಾವಂತನೂ ಆಗುವನು.

ಮೂರನೆಯ ಖಂಡ

ಈ ಆತ್ಮನಲ್ಲಿರುವ ಸತ್ಯಕಾಮಗಳಿಗೆ ವಿಷಯತೃಷ್ಣೆ ಎಂಬ ಅನೃತವೇ ಮುಸುಕು. ಆ ಅನೃತಕ್ಕೆ ವಶರಾದವರಿಗೆ ಆ ಕಾಮಗಳು ಹೋದರೆ ಮತ್ತೆ ಸಿಗದೆ ಇರುವವು. ಆದರೆ ಈ ಹಿಂದೆ ಹೇಳಿದ ರೀತಿಯಿಂದ ಉಪಾಸನೆಮಾಡಿದವರಿಗೆ ಅವೆಲ್ಲವೂ ದೊರಕುವವು. ಅರಿಯದವರು ಚಿನ್ನದ ನಿಕ್ಷೇಪವಿರುವ ನೆಲದ ಮೇಲೆಯೇ ಓಡಾಡುತ್ತಿದ್ದರೂ ಅದು ಅವರಿಗೆ ಸಿಕ್ಕದೆ ಇರುವಂತೆ ಮಿಕ್ಕ **ಜೀವರು ಪ್ರತಿದಿನವೂ ಸುಷುಪ್ತಿಕಾಲದಲ್ಲಿ ಈ ಬ್ರಹ್ಮವನ್ನು ಸೇರುತ್ತಿದ್ದರೂ ಅದನ್ನು ಪಡೆಯದೆ ಇರುವರು** ; ಏಕೆಂದರೆ ಅವರನ್ನು ಹಿಂದೆ ಹೇಳಿದ ತೃಷ್ಣರೂಪವಾದ ಅನೃತವು ಹೊರಕ್ಕೆ ದಬ್ಬುವದು.

ಈ ಅಪಹತಪಾಪ್ಮತ್ವವೇ ಮುಂತಾದ ಗುಣಗಳಿಂದೊಡಗೂಡಿದ ಆತ್ಮನು ಹೃದಯದಲ್ಲಿರುತ್ತಾನೆ. ಆದ್ದರಿಂದ ಅವನಿಗೆ 'ಹೃದಯಮ್' (ಹೃದಯದಲ್ಲಿ

ಇವನು) ಎಂಬುದೇ ನಿರ್ವಚನವು. ಹೀಗೆಂದರಿತವನು ದಿನದಿನವೂ ಸುಷುಪ್ತಿ ಕಾಲದಲ್ಲಿ ಈ ದಹರಾಕಾಶವೆಂಬ ಸ್ವರ್ಗಲೋಕಕ್ಕೆ ಹೋಗುತ್ತಿರುವನು. ಹೀಗೆ ಸುಷುಪ್ತಿಯಲ್ಲಿ ಬ್ರಹ್ಮವನ್ನು ಪಡೆಯುವ ಈ ಸಂಪ್ರಸಾದನು ಈ ಸಂಸಾರವನ್ನು ಬಿಟ್ಟೆದ್ದು ಶರೀರಾಭಿಮಾನವನ್ನು ಬಿಟ್ಟು ತನ್ನ ರೂಪದಿಂದ ನಿಲ್ಲುವನು, ಇವನೇ ಆತ್ಮನು - ಎಂಬುದು ಗುರುವಚನವು. ಇದೇ ಅಮೃತವು, ಅಭಯವು ; ಇದೇ ಬ್ರಹ್ಮವು.

ಈ ಬ್ರಹ್ಮಕ್ಕೆ 'ಸತ್ಯ' ಎಂಬುದು ನಾಮವು. ಸ, ತ್, ಯ - ಎಂಬ ಮೂರಕ್ಷರಗಳೊಳಗೆ ಸತ್ ಎಂಬುದು ಅಮೃತವು, ತ್ ಎಂಬುದು ಮರ್ತ್ಯವು, ಯ ಎಂಬುದು ಇವೆರಡನ್ನೂ ಕೂಡಿಸಿದುವದು. ಹೀಗೆ ಸತ್ಯವೆಂಬ ನಾಮವುಳ್ಳ ಬ್ರಹ್ಮವನ್ನು ತಿಳಿದವನು ದಿನದಿನವೂ ಸುಷುಪ್ತಿಯಲ್ಲಿ ಸ್ವರ್ಗಲೋಕಕ್ಕೆ ಹೋಗುತ್ತಿರುತ್ತಾನೆ.

ನಾಲ್ಕನೆಯ ಖಂಡ

ಈ ಆತ್ಮನು ಸೇತು- ವಿಧೃತಿಯು, ಈ ಲೋಕಗಳು ನಾಶವಾಗದಂತೆ ನೋಡಿಕೊಳ್ಳುವ ಕರ್ಮಫಲದಾತೃವು. ಈ ಸೇತುವನ್ನು ಅಹೋರಾತ್ರಿಗಳು ಮುಟ್ಟವು. ಜರಾಮೃತ್ಯುಗಳಾಗಲಿ ಶೋಕವಾಗಲಿ ಸುಕೃತದುಷ್ಕೃತಗಳಾಗಲಿ ಸೋಂಕವು. ಇದರಿಂದಿಚೆಗೇ ಎಲ್ಲಾ ಪಾಪಗಳೂ ಸರಿಯುತ್ತವೆ. ಏಕೆಂದರೆ ಇದು ಅಪಹತಪಾಪ್ಮವಾದ ಬ್ರಹ್ಮಲೋಕವು.

ಈ ಸೇತುವನ್ನು ಮುಟ್ಟಿದ ಕುರುಡನು ಇನ್ನು ಕುರುಡನಲ್ಲ, ಗಾಯಗೊಂಡವನು ಗಾಯಗೊಂಡವನಲ್ಲ, ನರಳುವವನು ನರಳುವವನಲ್ಲ. ಆದ್ದರಿಂದ ಈ ಸೇತುವನ್ನು ಮುಟ್ಟಿದರೆ ರಾತ್ರಿಯೂ ಹಗಲೇ ಆಗುತ್ತದೆ. ಈ ಬ್ರಹ್ಮಲೋಕವು ಎಂದೆಂದಿಗೂ ಬೆಳಗುತ್ತಲೇ ಇರುವದು.

ಈ ಬ್ರಹ್ಮಲೋಕವನ್ನು ಬ್ರಹ್ಮಚರ್ಯದಿಂದ ಪಡೆದುಕೊಳ್ಳುವವರಿಗೇ ದಕ್ಕುವದು. ಅವರಿಗೆ ಸರ್ವಲೋಕಗಳಲ್ಲಿಯೂ ಕಾಮಚಾರವಿರುವದು.

ಐದನೆಯ ಖಂಡ

ಯಜ್ಞವೆಂಬುದು ಬ್ರಹ್ಮಚರ್ಯವೇ ; ಏಕೆಂದರೆ ಯಾವನು ಜ್ಞಾತೃವೋ ಆ ಲೋಕವನ್ನು ಮುಟ್ಟುತ್ತಾನೆ. ಇಷ್ಟವೆಂಬುದೂ ಬ್ರಹ್ಮಚರ್ಯವೇ ; ಏಕೆಂದರೆ

ಬ್ರಹ್ಮಚರ್ಯದಿಂದ ಯಜನಮಾಡಿಯೇ ಅದನ್ನು ಪಡೆಯುತ್ತಾರೆ. ಸತ್ಯಾಯಣ ವೆಂಬುದೂ ಬ್ರಹ್ಮಚರ್ಯವೇ ; ಏಕೆಂದರೆ ಸತ್ತೆಂದರೆ ಪರಮಾತ್ಮನು. ಆ ಪರಮಾತ್ಮ ನಿಂದ ತನ್ನನ್ನು ತ್ರಾಣಮಾಡಿಕೊಳ್ಳುವದು (ಕಾಪಾಡುವಿಕೆ) ಬ್ರಹ್ಮಚರ್ಯದಿಂದಲೇ. ಮೌನವೆಂಬುದೂ ಬ್ರಹ್ಮಚರ್ಯೆಯೇ ; ಏಕೆಂದರೆ ಆತ್ಮನನ್ನು ತಿಳಿದುಕೊಂಡು ಮನನಮಾಡುವದಕ್ಕೆ .ಬ್ರಹ್ಮಚರ್ಯವೇ ಸಾಧನ. ಅನಾಶಕಾಯನವೆಂಬುದೂ ಬ್ರಹ್ಮಚರ್ಯೆಯೇ ; ಏಕೆಂದರೆ ಬ್ರಹ್ಮಚರ್ಯದಿಂದ ಪಡೆದುಕೊಂಡ ಆತ್ಮಸ್ವರೂಪವು ನಾಶವಾಗುವದಿಲ್ಲ.

ಬ್ರಹ್ಮಲೋಕದಲ್ಲಿ ಅರ, ಣ್ಯ - ಎಂಬ ಸರೋವರಗಳು, ಊಟಮಾಡಿದ ವರಿಗೆ ಮದವನ್ನುಂಟುಮಾಡುವ ಐರಂಮದೀಯಸರೋವರ, ಸೋಮಾಮೃತ ವನ್ನು ಸುರಿಸುವ ಅಶ್ವತ್ಥವೃಕ್ಷ, ಬ್ರಹ್ಮಚರ್ಯೆಯಿಲ್ಲದವರಿಗೆ ದೊರಕದ ಅಪರಾಜಿತಪುರ, ಬ್ರಹ್ಮನು ನಿರ್ಮಿಸಿಕೊಂಡಿರುವ ಹಿರಣ್ಮಯಮಂಡಪ - ಇವೆಲ್ಲ ಇರುತ್ತವೆ. ಈ ಭೋಗಸಾಮಗ್ರಿಗಳಿಂದ ಕೂಡಿರುವ ಬ್ರಹ್ಮಲೋಕವು ಬ್ರಹ್ಮಚರ್ಯೆಯುಳ್ಳ ಉಪಾಸಕರಿಗೇ ದೊರಕುವದು ; ಅವರಿಗೆ ಸರ್ವಸ್ವಾತಂತ್ರ್ಯವೂ ಇರುವದು.

ಆರನೆಯ ಖಂಡ

ಹೃದಯದಿಂದ ಬಗೆಬಗೆಯ ಬಣ್ಣದ ರಸಗಳು ಹರಿಯುವ ನಾಡಿಗಳು ಹೊರಟಿವೆ. ಅವಕ್ಕೆ ಬಗೆಬಗೆಯ ಬಣ್ಣಗಳುಳ್ಳ ಸೂರ್ಯನ ಸಂಬಂಧವಿದೆ. ಊರಿಂದೂರಿಗೆ ಹೋಗುವ ದೊಡ್ಡ ರಸ್ತೆಯ ಹಾಗೆ ಸೂರ್ಯರಶ್ಮಿಗಳು ಹೃದಯವನ್ನೂ ಸೂರ್ಯನನ್ನೂ ಕೂಡಿಸುತ್ತವೆ. ಸುಷುಪ್ತನಾಗಿರುವಾಗ ಈ ನಾಡಿಗಳಲ್ಲಿ ಜೀವನು ಹೊಕ್ಕು ಅವುಗಳ ಮೂಲಕ ಪರಮಾತ್ಮನಲ್ಲಿ ಒಂದಾಗುತ್ತಾನೆ. ಆದ್ದರಿಂದ ಅಲ್ಲಿ ಅವನಿಗೆ ಯಾವ ಕರ್ಮವೂ ಅಂಟುವದಿಲ್ಲ.

ಶರೀರದೌರ್ಬಲ್ಯದಿಂದ ಮನುಷ್ಯನು ಸಾಯುವ ಕಾಲವು ಬರಲು ಆಗ ಈ ಉಪಾಸಕನು ಮೇಲೆ ಹೇಳಿದ ರಶ್ಮಿಗಳಿಂದ ಹೊರಟು ದಹರಾಕಾಶರೂಪಿಯಾದ ಪರಮೇಶ್ವರನನ್ನೇ ಧ್ಯಾನಿಸುತ್ತಾ ಅರ್ಚಿರಾದಿಮಾರ್ಗದಿಂದ ಹೊರಟು ಆದಿತ್ಯನ ಮೂಲಕ ಬ್ರಹ್ಮಲೋಕಕ್ಕೆ ಹೋಗುತ್ತಾನೆ. ಹೃದಯದಿಂದ ಅನೇಕನಾಡಿಗಳು ಹೊರಟಿವೆ. ಅವುಗಳಲ್ಲಿ ಸುಷುಮ್ನೆ ಎಂಬ ನಾಡಿಯು ನೆತ್ತಿಯನ್ನು ಒಡೆದುಕೊಂಡು

ಹೊರಕ್ಕೆ ಬಂದಿರುವದು. ಅದರ ಮೂಲಕ ಸಾಧಕನಾದ ದಹರಬ್ರಹ್ಮೋಪಾಸಕನು ಹೋಗಿ ಬ್ರಹ್ಮಲೋಕವನ್ನು ಸೇರುತ್ತಾನೆ. ಉಳಿದ ನಾಡಿಗಳಿಂದ ಉತ್ಕ್ರಾಂತರಾಗುವ ಮಿಕ್ಕವರೆಲ್ಲರಿಗೂ ಸಂಸಾರಗತಿಯೇ ಆಗುವದು.

ಎಂಟನೆಯ ಅಧ್ಯಾಯದ ಏಳನೆಯ ಖಂಡದಿಂದ ಹದಿನೈದರವರೆಗಿನ ಖಂಡಗಳ ಸಾರ

ಏಳನೆಯ ಖಂಡ

''ಯಾವ ಆತ್ಮನು ಅಪಹತಪಾಪ್ಮನಾಗಿರುವನೋ ವಿಜರನೂ ವಿಮೃತ್ಯುವೂ ವಿಶೋಕನೂ ಪಸಿವುಬಾಯಾರಿಕೆಗಳಿಲ್ಲದವನೂ ಸತ್ಯಕಾಮನೂ ಸತ್ಯಸಂಕಲ್ಪನೂ ಆಗಿರುವನೋ ಅವನನ್ನೇ ಅನ್ವೇಷಣಮಾಡಬೇಕು, ಅವನನ್ನೇ ವಿಜಿಜ್ಞಾಸೆಮಾಡ ಬೇಕು. ಯಾವನು ಅವನನ್ನು ತಿಳಿದುಕೊಂಡು ಅರಿತುಕೊಳ್ಳುವನೋ ಅವನು ಸರ್ವಲೋಕಗಳನ್ನೂ ಸರ್ವಕಾಮಗಳನ್ನೂ ಪಡೆದುಕೊಳ್ಳುತ್ತಾನೆ'' ಎಂದು ಒಮ್ಮೆ ಪ್ರಜಾಪತಿಯು ನುಡಿದನಂತೆ.

ಇದು ದೇವಾಸುರರಿಬ್ಬರ ಕಿವಿಗೂ ಬಿದ್ದಿತು. ಈ ಆತ್ಮನನ್ನು ಅರಿತುಕೊಳ್ಳ ಬೇಕೆಂದು ದೇವರಾಜನಾದ ಇಂದ್ರನೂ ಅಸುರರಾಜನಾದ ವಿರೋಚನನೂ ಹೊರಟು ಸಮಿತ್ಪಾಣಿಗಳಾಗಿ ಬಂದು ಮೂವತ್ತೆರಡು ವರ್ಷಗಳವರೆಗೆ ಪ್ರಜಾಪತಿಯಲ್ಲಿ ಬ್ರಹ್ಮಚರ್ಯೆಯಿಂದಿದ್ದರು. ಪ್ರಜಾಪತಿಯು ಅವರು ಏತಕ್ಕೆ ಬಂದರೆಂಬುದನ್ನು ಅವರಿಂದ ತಿಳಿದುಕೊಂಡನು.

''ಕಣ್ಣಿನಲ್ಲಿ ಈ ಪುರುಷನು ಕಾಣಿಸುತ್ತಿರುವನಲ್ಲ, ಇವನೇ ಆತ್ಮನು, ಅಮೃತವೂ ಅಭಯವೂ ಆದ ಬ್ರಹ್ಮವು'' ಎಂದು ಅವನು ಅವರಿಗೆ ಉಪದೇಶಿಸಿ ದನು. ಅವರು ಛಾಯಾಪುರುಷನಿರಬಹುದೆಂದುಕೊಂಡು ''ನೀರು, ಕನ್ನಡಿ - ಇವುಗಳಲ್ಲಿ ಕಾಣುವದಲ್ಲ, ಅದರಲ್ಲಿ ಈ ಆತ್ಮನು ಯಾರು ?'' ಎಂದು ಕೇಳಿದರು. ''ಅವನು ಎಲ್ಲಾ ಕಡೆಯಲ್ಲಿಯೂ ಕಾಣಿಸುತ್ತಾನೆ'' ಎಂದು ಪ್ರಜಾಪತಿಯು ಉತ್ತರವಿತನು.

ಎಂಟನೆಯ ಖಂಡ

ಪ್ರಜಾಪತಿಯು ''ನೀರಿನ ಶ್ರಾವೆಯಲ್ಲಿ ನಿಮ್ಮನ್ನು ನೋಡಿಕೊಂಡು ಬನ್ನಿರಿ ; ನಿಮಗೆ ತಿಳಿಯದೆ ಇದ್ದದ್ದನ್ನು ತಿಳಿಸಿರಿ'' ಎಂದನು. ಅವರನ್ನು ಏನು ಕಂಡಿರೆಂದು ಕೇಳಲು ''ನಮ್ಮ ಸ್ವರೂಪವೇ ಕಾಣಿಸುತ್ತಿದೆ'' ಎಂದರು.

ಆಗ ಪ್ರಜಾಪತಿಯು ''ಕ್ಷೌರವನ್ನು ಮಾಡಿಸಿಕೊಂಡು ಉತ್ತಮವೇಷ ಭೂಷಣಗಳಿಂದೊಡಗೂಡಿ ನೋಡಿರಿ !'' ಎಂದನು. ಆಗಲೂ ಅವರು ''ನಾವು ಹೇಗಿದ್ದೇವೋ ಹಾಗೆಯೇ ಈ ಛಾಯಾಪುರುಷರು ಕಾಣಿಸುತ್ತಿದಾರೆ'' ಎಂದರು.

ಪ್ರಜಾಪತಿಯು ''ಇವನೇ ಆತ್ಮನು'' ಎಂದು ದ್ರಷ್ಟೃಪುರುಷನನ್ನು ಹೇಳಿದನು. ಅವರು ತೃಪ್ತರಾಗಿ ಹೊರಟುಹೋದರು. ಪ್ರಜಾಪತಿಯು ''ಇವರಿಗೆ ಆತ್ಮಜ್ಞಾನವಾಗಿಲ್ಲ. ಈಗಿನ ತಿಳಿವಳಿಕೆಯನ್ನೇ ನಂಬಿಕೊಂಡವರು ಪರಾಭೂತರಾಗುವರು'' ಎಂದನು. ಅಸುರರಾಜನು ದೇಹವೇ ಆತ್ಮನೆಂದು ಪ್ರಜಾಪತಿಯು ಹೇಳಿದನೆಂದು ಭಾವಿಸಿ ಆ ತಿಳಿವಳಿಕೆಯನ್ನೇ ಅಸುರರಲ್ಲಿ ಹರಡಿದನು. ಅಸುರರಲ್ಲಿ ಈ ತಿಳಿವಳಿಕೆಯೇ ಇಂದಿಗೂ ಇದೆ.

ಒಂಬತ್ತನೆಯ ಖಂಡ

ಇಂದ್ರನು ದೇವತೆಗಳಲ್ಲಿಗೆ ಹೋಗದೆ ದಾರಿಯಲ್ಲಿ ''ಛಾಯಾಪುರುಷನು ಆತ್ಮನಾಗಲಾರನು, ಏಕೆಂದರೆ ಶರೀರವನ್ನೇ ಅನುಸರಿಸಿ ಅದು ಕಾಣುತ್ತಿದೆ ; ಅದು ಶರೀರದೊಡನೆ ನಾಶವಾಗುತ್ತದೆ. ಈ ಜ್ಞಾನದಿಂದೇನೂ ಫಲವು ಕಾಣಿಸುವದಿಲ್ಲ'' ಎಂದುಕೊಂಡು ಹಿಂತಿರುಗಿ ಮತ್ತೆ ಸಮಿತ್ಪಾಣಿಯಾಗಿ ಪ್ರಜಾಪತಿಯಲ್ಲಿಗೆ ಬಂದು ತನ್ನ ಅಭಿಪ್ರಾಯವನ್ನು ಹೇಳಿಕೊಂಡನು.

ಪ್ರಜಾಪತಿಯು ''ಇದು ನಿಜ, ಈ ಆತ್ಮನನ್ನೇ ನಿನಗೆ ಮತ್ತೆ ಹೇಳುವೆನು. ಇನ್ನೂ ಮೂವತ್ತೆರಡು ವರ್ಷಗಳವರೆಗೆ ಬ್ರಹ್ಮಚರ್ಯದಿಂದಿರು'' ಎಂದನು.

ಹತ್ತನೆಯ ಖಂಡ

ಪ್ರಜಾಪತಿಯು ''ಈ ಸ್ವಪ್ನದಲ್ಲಿ ಮಹಿತನಾಗಿ ಭೋಗಾನುಭವವನ್ನು ಮಾಡುತ್ತಿರುವನಲ್ಲ, ಇವನೇ ಆತ್ಮನು, ಅಮೃತಾಭಯವಾದ ಬ್ರಹ್ಮವು'' ಎಂದನು. ಇಂದ್ರನು ತೃಪ್ತನಾಗಿ ಹೊರಟು ಹೋದನು.

ಆದರೆ ದಾರಿಯಲ್ಲಿ ಅವನಿಗೆ ಹೀಗೆ ತೋಚಿತು : ''ಸ್ವಪ್ನಪುರುಷನು ಶರೀರವನ್ನನುಸರಿಸಿಲ್ಲವೆಂಬುದು ನಿಜ ; ಆದರೆ ಇವನನ್ನು ಯಾರೋ ಹೊಡೆಯುವಂತೆ, ಓಡಿಸಿಕೊಂಡು ಬರುವಂತೆ, ಇವನು ಅಪ್ರಿಯವನ್ನು ಅನುಭವಿಸುವಂತೆ ಕಾಣಿಸುತ್ತಿದೆಯಲ್ಲ! ಇವನು ಹೇಗೆ ಆತ್ಮನಾದಾನು ?'' ಹೀಗೆಂದುಕೊಂಡು ಮತ್ತೂ ಪ್ರಜಾಪತಿಯಲ್ಲಿಗೆ ಬಂದು ತನ್ನ ವಿಚಾರವನ್ನು ಹೇಳಿಕೊಂಡನು.

ಪ್ರಜಾಪತಿಯು ''ಇದು ನಿಜ. ಇದೇ ಆತ್ಮನನ್ನು ಮತ್ತೂ ಹೇಳಿಕೊಡುವೆನು. ಇನ್ನೂ ಮೂವತ್ತೆರಡು ವರ್ಷ ಬ್ರಹ್ಮಚರ್ಯದಿಂದಿರು'' ಎಂದನು.

ಹನ್ನೊಂದನೆಯ ಖಂಡ

'ಸಂಪೂರ್ಣವಾಗಿ ಸುಪ್ತನಾಗಿ ಸಂಪ್ರಸನ್ನನಾಗಿರುವನಲ್ಲ ಇವನೇ ಆತ್ಮನು, ಅಮೃತಾಭಯಬ್ರಹ್ಮವು' ಎಂದು ಪ್ರಜಾಪತಿಯು ಹೇಳಿದ್ದನ್ನು ಕೇಳಿ ಇಂದ್ರನು ತೃಪ್ತನಾಗಿ ಹೊರಟುಹೋದನು.

ಆದರೆ ದಾರಿಯಲ್ಲಿ ಅವನಿಗೆ ಹೀಗೆ ತೋಚಿತು : 'ಈ ಅವಸ್ಥೆಯಲ್ಲಿ ನಾನು ಇಂಥವನು, ಇವರು ಇಂಥವರು - ಎಂಬ ಜ್ಞಾನವೇ ಇರುವದಿಲ್ಲವಲ್ಲ! ಇವನು ಹೇಗೆ ಆತ್ಮನಾದ ನಾನು ? ಈ ತನ್ನ ಯೋಜನೆಯನ್ನು ಮತ್ತೆ ಪ್ರಜಾಪತಿಯ ಬಳಿಗೆ ಬಂದು ಅವನು ಹೇಳಿಕೊಂಡನು.

ಪ್ರಜಾಪತಿಯು 'ಇದು ನಿಜ. ಇದನ್ನೇ ಮತ್ತೂ ಒಮ್ಮೆ ನಿನಗೆ ಹೇಳಿ ಕೊಡುವೆನು; ಇನ್ನೂ ಐದು ವರ್ಷಗಳು ಬ್ರಹ್ಮಚರ್ಯದಿಂದಿರು' ಎಂದನು. ಇಂದ್ರನು ಹೀಗೆ ಒಟ್ಟು ನೂರೊಂದು ವರ್ಷಗಳವರೆಗೆ ಬ್ರಹ್ಮಚರ್ಯದಿಂದಿದ್ದನು.

ಹನ್ನೆರಡನೆಯ ಖಂಡ

''ಮಘವಂತನೆ, ಈ ಶರೀರವು ಮರ್ತ್ಯವು. ಇದು ಅಮೃತನೂ ಅಶರೀರನೂ ಆದ ಆತ್ಮನಿಗೆ ಅಧಿಷ್ಠಾನವು. ಸಶರೀರನಾದವನಿಗೆ ಮೃತ್ಯುವುಂಟು, ಪ್ರಿಯಾಪ್ರಿಯಗಳು ತಪ್ಪವು. ಆದರೆ ಅಶರೀರನಾದವನನ್ನು ಪ್ರಿಯಾಪ್ರಿಯಗಳು ಸೋಂಕವು. ಹೇಗೆ ವಾಯು, ಮೋಡ, ಮಿಂಚು, ಗುಡುಗು - ಇವುಗಳು ಸಾಮಾನ್ಯವಾಗಿ ಆಕಾಶದಲ್ಲಿ ಒಂದಾಗಿರುವಂತೆ ತೋರುತ್ತಿದ್ದು ಸೂರ್ಯತಾಪ

ದಿಂದ ಎದ್ದು ಮಳೆಗಾಲದಲ್ಲಿ ತಮ್ಮತಮ್ಮ ರೂಪಿನಿಂದ ತೋರಿಕೊಳ್ಳುವವೋ ಹಾಗೆ ಈ ಸಂಪ್ರಸಾದಾತ್ಮನು ವಿವೇಕದಿಂದ ಈ ಶರೀರವನ್ನು ಬಿಟ್ಟೆದ್ದು ಪರಂಜ್ಯೋತಿಯಾದ ತನ್ನ ಸ್ವರೂಪದಿಂದ ತೋರಿಕೊಳ್ಳುವನು. ಅವನೇ ಉತ್ತಮಪುರುಷನು. ಈ ಸ್ವರೂಪದಲ್ಲಿ ಆತ್ಮನು ಮುಕ್ತನಾಗಿರುತ್ತಾನೆ. ಎಲ್ಲಾ ಕಾಮಗಳೂ ಸರ್ವಾತ್ಮನಾದ ಅವನದೇ ಆಗಿರುತ್ತವೆ.

ವಿಶೇಷಜ್ಞಾನವು ಚಕ್ಷುರಾದಿಕರಣಗಳಿಂದ ತೋರುತ್ತಿದ್ದರೂ ಚೈತನ್ಯ ಸ್ವರೂಪವು ಆತ್ಮನದೇ. ಜೀವನ್ಮುಕ್ತನಾದವನು ವಿಶುದ್ಧವಾದ ದೈವಮನಸ್ಸಿನಿಂದ ಬ್ರಹ್ಮಲೋಕದಲ್ಲಿ ಮುಕ್ತರಿಗಾಗುವ ಮಾನಸವಾದ ಸರ್ವಕಾಮಗಳನ್ನೂ ಪಡೆದಿರುತ್ತಾನೆ. ಈ ಆತ್ಮನನ್ನು ದೇವತೆಗಳು ಅರಿತು ಉಪಾಸನೆಮಾಡುತ್ತಿರುವದರಿಂದ ಅವರಿಗೆ ಸರ್ವಲೋಕಕಾಮಗಳೂ ದೊರೆತಿರುವವು' ಎಂದು ನಿಜವಾದ

ಹದಿಮೂರನೆಯ ಖಂಡ

ಹಾರ್ದಬ್ರಹ್ಮರೂಪವು ಬ್ರಹ್ಮಲೋಕದ ಶಬಲಬ್ರಹ್ಮದಿಂದಲೇ ಆಗಿರುವದು. ನಾನು ಹಾರ್ದಬ್ರಹ್ಮದ ಉಪಾಸನೆಯಿಂದ ಧರ್ಮಾಧರ್ಮಗಳನ್ನು ಕೊಡಹಿಕೊಂಡು ಬ್ರಹ್ಮಲೋಕವನ್ನು ಪಡೆದುಕೊಳ್ಳುವೆನು - ಎಂದು ಉಪಾಸಕನು ಈ ಅರ್ಥದ ಮಂತ್ರವನ್ನು ಜಪಿಸುತ್ತಾ ಧ್ಯಾನಿಸುತ್ತಿರಬೇಕು.

ಹದಿನಾಲ್ಕನೆಯA

ಖಂಡ

ಆಕಾಶದಂತೆ ಅಶರೀರವೂ ಸೂಕ್ಷ್ಮವೂ ಆಗಿರುವ ಬ್ರಹ್ಮವೇ ನಾಮರೂಪಗಳನ್ನು ವ್ಯಾಕರಣಮಾಡಿರುತ್ತದೆ. ಆ ಬ್ರಹ್ಮವು ಅಮೃತವಾದ ಆತ್ಮತತ್ತ್ವವೇ ಆಗಿರುತ್ತದೆ -ಎಂಬೀ ಬ್ರಹ್ಮಲಕ್ಷಣವನ್ನು ಹೇಳುವ ಮಂತ್ರದರ್ಥವನ್ನು ಧ್ಯಾನಮಾಡಬೇಕು.

ಉಪಾಸಕನಾದವನು ಪ್ರಜಾಪತಿಯ ಸಭೆಯನ್ನು ನಾನು ಪ್ರವೇಶಿಸುವೆನು! ಬ್ರಾಹ್ಮಣರ, ಕ್ಷತ್ರಿಯರ, ಮತ್ತು ವೈಶ್ಯರ ಆತ್ಮನೇ ನಾನಾಗುವೆನು ! ಎಲ್ಲಾ ಆತ್ಮರುಗಳಿಗೂ ಆತ್ಮನು ನಾನು. ಇನ್ನು ಮುಂದೆ ನಾನು ಗರ್ಭವಾಸವನ್ನು ಅನುಭವಿಸದೆ

ಇರುವದಕ್ಕಾಗಿ ಈ ಆತ್ಮಸ್ವರೂಪವನ್ನು ಹೊಂದಬೇಕು ! ಎಂಬರ್ಥದ ಮಂತ್ರವನ್ನು ಜಪಿಸುತ್ತಿರಬೇಕು.

ಹದಿನೈದನೆಯ ಖಂಡ

ಈ ಉಪನಿಷದ್ವಿದ್ಯೆಯನ್ನು ಗರ್ಭೀಕರಿಸಿಕೊಂಡಿರುವ ಉಪನಿಷದ್ಗ್ರಂಥವನ್ನು ಹಿರಣ್ಯಗರ್ಭನ ಮೂಲಕ ಪರಮೇಶ್ವರನು ಪ್ರಜಾಪತಿಗೂ ಪ್ರಜಾಪತಿಯು ಮನುವಿಗೂ ಮನುವು ಪ್ರಜೆಗಳಿಗೂ ಹೇಳಿದನು. ಹೀಗೆ ವಿದ್ಯೆಯು ಜನರಲ್ಲಿ ಬಂದು ನಿಂತಿದೆ.

ಜ್ಞಾನದಿಂದಲೇ ಪರಮಪುರುಷಾರ್ಥವು ದೊರಕುವದಾದಲೂ ಬ್ರಹ್ಮಚಾರಿಯಾಗಿದ್ದು ಗುರುಕುಲವಾಸಮಾಡಿ ವೇದಾಧ್ಯಯನವನ್ನು ಮಾಡಿದ ಬಳಿಕ ಗೃಹಸ್ಥನಾಗಿ ಶಾಸ್ತ್ರೀಯಕರ್ಮಗಳನ್ನು ಅನುಷ್ಠಾನಮಾಡುತ್ತಾ ಇಂದ್ರಿಯಗಳನ್ನೆಲ್ಲ ಉಪಸಂಹಾರಮಾಡಿಕೊಂಡು ಹಾರ್ದಬ್ರಹ್ಮೋಪಾಸನೆಯನ್ನು ಮಾಡುತ್ತಾ ಶಾಸ್ತ್ರದಲ್ಲಿ ಅನುಜ್ಞೆಮಾಡಿರುವದು ಹೊರತು ಮತ್ತೆಯಾವ ಪ್ರಾಣಿಹಿಂಸೆಯನ್ನೂ ಮಾಡದೆ ಬದುಕಿರುವವರೆಗೂ ಸಾಧನವನ್ನು ಮಾಡುತ್ತಿರುವಾತನು ಬ್ರಹ್ಮಲೋಕವನ್ನು ಪಡೆದುಕೊಳ್ಳುತ್ತಾನೆ ; ಅವನು ಮತ್ತೆ ಈ ಕಲ್ಪದಲ್ಲಿ ಸಂಸಾರಕ್ಕೆ ಹಿಂತಿರುಗುವದಿಲ್ಲ. ಅಲ್ಲಿ ಜ್ಞಾನವಾದರೆ ಕ್ರಮಮುಕ್ತಿಯನ್ನು ಪಡೆದುಕೊಳ್ಳುತ್ತಾನೆ.

ಶಾಂಕರಭಾಷ್ಯಸಮೇತವಾದ
ಬೃಹದಾರಣ್ಯಕೋಪನಿಷತ್ತು

ಒಂದನೆಯ ಭಾಗ

(ಮಧುಕಾಂಡವನ್ನೊಳಗೊಂಡ ಮೊದಲನೆ ಎರಡು ಅಧ್ಯಾಯಗಳು)

ಪೀಠಿಕೆ

ಶುಕ್ಲಯಜುರ್ವೇದ

ಬೃಹದಾರಣ್ಯಕೋಪನಿಷತ್ತು ಶುಕ್ಲಯಜುರ್ವೇದಕ್ಕೆ ಸೇರಿದ್ದು. ಯಜುರ್ವೇದವು ಶುಕ್ಲ, ಕೃಷ್ಣ - ಎಂದು ಎರಡು ವಿಧವಾಗಿರುತ್ತದೆ. ಸೂರ್ಯನಿಂದ ಬಂದ ವೇದವು ಶುಕ್ಲಯಜುರ್ವೇದವೆಂದೂ ತಿತ್ತಿರಿಪಕ್ಷಿಯಿಂದ ಭಕ್ಷಿತವಾಗಿ ವಾಂತೋಚ್ಛಿಷ್ಟವಾದದ್ದರಿಂದ ಯಾತಯಾಮವೆನಿಸಿದ ವೇದವು ಕೃಷ್ಣಯಜುರ್ವೇದವೆಂದೂ ಕೆಲವರು ಪೌರಾಣಿಕಾಖ್ಯಾನವನ್ನವಲಂಬಿಸಿ ಹೇಳುತ್ತಿದ್ದಾರೆ. ಶುಕ್ಲಯಜುರ್ವೇದವು ಆದಿತ್ಯನಿಂದ ಯಾಜ್ಞವಲ್ಕ್ಯನಿಗೆ ದೊರೆತಿದ್ದೆಂಬುದಕ್ಕೆ ಉಪನಿಷತ್ತಿನಲ್ಲಿ (೬-೩-೪)[1] ಆಧಾರವೂ ಇದೆ. ಮಂತ್ರಬ್ರಾಹ್ಮಣಗಳು ಮಿಶ್ರವಾಗಿರುವುದರಿಂದ ಕೃಷ್ಣಯಜುರ್ವೇದವೆಂದೂ ಅವು ವಿಂಗಡವಾಗಿರುವದರಿಂದ ಶುಕ್ಲಯಜುರ್ವೇದವೆಂದೂ ಮತ್ತೆ ಕೆಲವರು ವಿವೇಚಿಸಿರುತ್ತಾರೆ. ಶ್ರೀಶಂಕರಾಚಾರ್ಯರವರ ಭಾಷ್ಯದಲ್ಲಿ ಈ ಎರಡನೆಯ ಪಕ್ಷವನ್ನೇ (೬-೩-೪) ಅಂಗೀಕರಿಸಿದೆ.

ಶುಕ್ಲಯಜುರ್ವೇದವು ಕಾಣ್ವ ಮಾಧ್ಯಂದಿನ - ಎಂಬ ಎರಡು ಮುಖ್ಯ ಶಾಖೆಗಳಾಗಿ ಒಡೆದುಕೊಂಡಿರುತ್ತದೆ. ಕಣ್ವರೆಂಬ ಋಷಿಗಳಿಂದ ಪ್ರವರ್ತಿತವಾಗಿರುವ ಶಾಖೆಯು ಕಾಣ್ವವು ; ಮಧ್ಯಂದಿನರೆಂಬ ಋಷಿಗಳಿಂದ ಪ್ರವರ್ತಿತವಾಗಿರುವದು ಮಾಧ್ಯಂದಿನವು. ನಮ್ಮ ದೇಶದಲ್ಲಿ ಕಾಣ್ವರೇ ಬಹಳವಾಗಿರುತ್ತಾರೆ ; ಉತ್ತರದೇಶದಲ್ಲಿ ಮಾಧ್ಯಂದಿನರು ಹೆಚ್ಚಾಗಿರುತ್ತಾರೆ. ಈ

1. ಪೀಠಿಕೆಯಲ್ಲಿ ಸಂಕೇತಾಕ್ಷರವಿಲ್ಲದೆ ಕೊಟ್ಟಿರುವ ಮೂರು ಸಂಖ್ಯೆಗಳು ಈ ಉಪನಿಷತ್ತಿನ ಅಧ್ಯಾಯ, ಬ್ರಾಹ್ಮಣ ಮತ್ತು ಕಂಡಿಕೆಯನ್ನು ಸೂಚಿಸುವುವು ; ಭಾ. ಭಾ. ಎಂದರೆ ಈ ಉಪನಿಷತ್ತಿನ ಭಾಷ್ಯಭಾಗಗಳು. ಸಂಕೇತಾಕ್ಷರವನ್ನು ಕೊಟ್ಟಿರುವ ಸಂಖ್ಯೆಗಳು ಆಯಾ ಉಪನಿಷತ್ತು ಸೂತ್ರ ಅಥವಾ ಗೀತೆ - ಇವಕ್ಕೆ ಸಂಬಂಧಿಸಿರುತ್ತವೆ.

ಎರಡು ಶಾಖೆಗಳಿಗೂ ಯಕಾರಕ್ಕೆ ಜಕಾರವನ್ನೂ ಷಕಾರಕ್ಕೆ ಖಕಾರವನ್ನೂ ಉಚ್ಚರಿಸಿ ಅಧ್ಯಯನಮಾಡುವದೇ ಮುಂತಾದ ಅಧ್ಯಯನಕ್ರಮದ ಭೇದವು ಕಂಡುಬರುತ್ತದೆ.

ಶುಕ್ಲಯಜುರ್ವೇದದ ಬ್ರಾಹ್ಮಣ

ಶುಕ್ಲಯಜುರ್ವೇದದಲ್ಲಿ ಸಂಹಿತೆ, ಬ್ರಾಹ್ಮಣ - ಎಂಬ ಅಸಂಕೀರ್ಣವಾದ ಎರಡು ವಿಭಾಗಗಳಿವೆ ಎಂದು ಮೇಲೆ ಹೇಳಿದೆಯಷ್ಟೆ, ಕಾಣ್ವ ಮಾಧ್ಯಂದಿನ - ಎಂಬ ಎರಡು ಶಾಖೆಗಳಿಗೂ ಇರುವ ಬ್ರಾಹ್ಮಣವನ್ನು **ಶತಪಥಬ್ರಾಹ್ಮಣ**ವೆಂದೇ ಕರೆಯುತ್ತಾರೆ. ಮಾಧ್ಯಂದಿನಶತಪಥಬ್ರಾಹ್ಮಣವನ್ನು ಪ್ರೊಫೆಸರ್ ವೀಬರ್ ಎಂಬಾತನು ಯೂರೋಪಿನಲ್ಲಿ ಬೆಳಕಿಗೆ ಹಿಡಿದನು ; ಪ್ರೊಫೆಸರ್ ಎಗ್ಲಿಂಗ್ ಎಂಬಾತನು ಇಂಗ್ಲಿಷಿನಲ್ಲಿ ಅನುವಾದಮಾಡಿದನು. ಈ ಎರಡು ಪ್ರಕಟನೆಗಳೂ ಈಗ ಸಾಮಾನ್ಯವಾಗಿ ಸಿಕ್ಕುವಂತಿಲ್ಲ. ಈಚೆಗೆ ನಮ್ಮ ದೇಶದಲ್ಲಿ ಕಾಣ್ವ ಬ್ರಾಹ್ಮಣದ ಕೆಲವು ಭಾಗಗಳು (೨-೨-೪-೧೬ರವರೆಗೆ) ಡಾಕ್ಟರ್ ವಿಲಿಯಮ್ ಕ್ಯಾಲಂಡ್ ಎಂಬಾತನಿಂದ ಶೋಧಿತವಾಗಿ ಅಚ್ಚಾಗಿವೆ ; ಮಾಧ್ಯಂದಿನಬ್ರಾಹ್ಮಣದ ನಾಲ್ಕು ಕಾಂಡಗಳು ವೇದಾಂತವಿಶಾರದ, ಮೀಮಾಂಸಾಕೇಸರಿ, ಪಂಡಿತ ಚಿನ್ನ-ಸ್ವಾಮಿಶಾಸ್ತ್ರಿಗಳವರಿಂದ ಶೋಧಿತವಾಗಿ ಅಚ್ಚಾಗಿವೆ. ಆದರೆ ಶತಪಥಬ್ರಾಹ್ಮಣವನ್ನು ಪೂರ್ಣರೂಪದಿಂದ ಪಡೆಯುವದು, ಬೃಹದಾರಣ್ಯಕೋಪನಿಷತ್ತಿನ ಒಂದನೆಯ ಭಾಗವು ಸ್ವಲ್ಪ ಹೆಚ್ಚುಕಡಿಮೆ ಪೂರ್ತಿಯಾಗಿ ಅಚ್ಚಾಗುವವರೆಗೂ, ನಮಗೆ ಸಾಧ್ಯವಾಗಲಿಲ್ಲ. ನಮ್ಮ ದೇಶದಲ್ಲಿ ಈ ಬ್ರಾಹ್ಮಣವನ್ನು ಪೂರ್ಣವಾಗಿ ಅಧ್ಯಯನಮಾಡಿರುವವರೂ ಬಹುವಿರಳ. ಆದ್ದರಿಂದ ಶತಪಥಬ್ರಾಹ್ಮಣದ ಪರಾಮರ್ಶಿಕೆಗಳ ಸಂಖ್ಯೆಗಳನ್ನು ಮತ್ತೊಬ್ಬರನ್ನವಲಂಬಿಸಿಯೇ ನಾವೂ ಕೊಡಬೇಕಾಗಿ ಬಂದಿತು. ಈಗ ನಮ್ಮ ಸುದೈವದಿಂದ ಬೊಂಬಾಯಿಯಲ್ಲಿರುವ ಲಕ್ಷ್ಮೀವೆಂಕಟೇಶ್ವರ ಸ್ಟೀಮ್‌ಪ್ರೆಸ್ಸಿನಲ್ಲಿ ಸಭಾಷ್ಯವಾಗಿ ಪೂರ್ಣವಾಗಿ ಪ್ರಕಟಿತವಾಗಿರುವ ಮಾಧ್ಯಂದಿನಶತಪಥಬ್ರಾಹ್ಮಣವು ದೊರೆತಿರುತ್ತದೆ. ಆದ್ದರಿಂದ ಈ ಬ್ರಾಹ್ಮಣದ ಪರಾಮರ್ಶಿಕೆಗಳನ್ನು ಸಾಧ್ಯವಾದಮಟ್ಟಿಗೂ ಪರಿಶೋಧಿಸಿರುತ್ತೇವೆ.

ಮಾಧ್ಯಂದಿನಶತಪಥಬ್ರಾಹ್ಮಣದ ಭೂಮಿಕೆಯನ್ನೂ ಕ್ಯಾಲೆಂಡ್ ಮಹಾಶಯನ ಕಾಣ್ವಪ್ರಕಟನೆಯ ಭೂಮಿಕೆಯನ್ನೂ ಆಲೋಕಿಸಿದ್ದರಿಂದ ತಿಳಿಯಬರುವದೇನೆಂದರೆ, ಕಾಣ್ವಬ್ರಾಹ್ಮಣದಲ್ಲಿ ೧೦೪ ಅಧ್ಯಾಯಗಳಿವೆ, ಮಾಧ್ಯಂದಿನ

ಬ್ರಾಹ್ಮಣದಲ್ಲಿ ೧೦೦ ಅಧ್ಯಾಯಗಳು ಸರಿಯಾಗಿವೆ. ಕಾಣ್ವಬ್ರಾಹ್ಮಣದಲ್ಲಿ ೧೬ ಕಾಂಡಗಳಿವೆ ; ಮಾಧ್ಯಂದಿನಬ್ರಾಹ್ಮಣದಲ್ಲಿ ೧೪ ಕಾಂಡಗಳಿವೆ. ಕಾಣ್ವದ ಮೊದಲನೆಯ ಏಳು ಕಾಂಡಗಳಲ್ಲಿರುವ ವಿಷಯಗಳು ಮಾಧ್ಯಂದಿನದ ಮೊದಲನೆಯ ಐದು ಕಾಂಡಗಳಲ್ಲಿ ಅಡಕವಾಗಿರುತ್ತವೆ. ಈ ಗ್ರಂಥಭಾಗವು ಕಾಣ್ವಮಾಧ್ಯಂದಿನಗಳಲ್ಲಿ ಭಿನ್ನಭಿನ್ನವಾಗಿದೆ ಎಂದೂ ಮಾಂಧ್ಯಂದಿನದ ಮುಂದಿನ ೯ ಕಾಂಡಗಳು ಬಲುಮಟ್ಟಿಗೆ ಕಾಣ್ವಕ್ಕೆ ಸಮಾನವಾಗಿರುತ್ತವೆ ಎಂದೂ ಕ್ಯಾಲೆಂಡ್ ಮಹಾಶಯನು ಹೇಳುತ್ತಾನೆ. ಅಗ್ನಿರಹಸ್ಯಕಾಂಡದ ಅನುಕ್ರಮಸ್ಥಾನವು ಮಾತ್ರ ಈ ಎರಡು ಬ್ರಾಹ್ಮಣಗಳಲ್ಲಿ ಭಿನ್ನಭಿನ್ನವಾಗಿರುತ್ತವೆಯಂತೆ. ಕಾಣ್ವಶತಪಥ ಬ್ರಾಹ್ಮಣವು ನಮಗೆ ಇನ್ನೂ ದೊರೆತಿಲ್ಲವಾದ್ದರಿಂದ[1] ಬೃಹದಾರಣ್ಯಕದಲ್ಲಿ ಪರಾಮೃಷ್ಟವಾದ ಕೆಲವು ವಚನಗಳು ಕಾಣ್ವಪಾಠವೊ, ಅಲ್ಲವೊ ? - ಎಂಬಿದನ್ನು ನಿಶ್ಚಯಿಸುವದು ಕಷ್ಟವಾಗಿದೆ. ಇಲ್ಲಿ ನಾವು ಮಾಧ್ಯಂದಿನಪಾಠದ ಸಂಖ್ಯೆಯನ್ನೇ ಕೊಟ್ಟು ಭಾಷ್ಯದ ಉದಾಹರಣೆಯಲ್ಲಿರಬಹುದಾದ ಪಾಠಭೇದವನ್ನು ಮಾತ್ರ ಸೂಚಿಸಿರುತ್ತೇವೆ. ಪ್ರಕೃತಭಾಷ್ಯವು ಉಪನಿಷತ್ತಿಗೆ ಮಾತ್ರವಾಗಿರುವದರಿಂದ ಈ ಎರಡು ಬ್ರಾಹ್ಮಣಗಳ ವಿಶೇಷವಿಚಾರಕ್ಕೆ ನಾವು ಇಲ್ಲಿ ಕೈಯಾಕಿರುವದಿಲ್ಲ.

ಬೃಹದಾರಣ್ಯಕೋಪನಿಷತ್ತು

ಈ ಉಪನಿಷತ್ತು ಶತಪಥಬ್ರಾಹ್ಮಣದ ಕೊನೆಯಲ್ಲಿರುವದರಿಂದ ಇದರಲ್ಲಿಯೂ ಕಾಣ್ವ ಮಾಧ್ಯಂದಿನ- ಎಂಬ ಸಮಾಮ್ನಾಯಭೇದವಿರುವದು ಸ್ವಾಭಾವಿಕವಷ್ಟೆ. ಶ್ರೀಶಂಕರಾಚಾರ್ಯರವರು ಕಾಣ್ವಶಾಖೆಗೆ ಸೇರಿದ ಉಪನಿಷದ್ಭಾಗಕ್ಕೆ ಭಾಷ್ಯವನ್ನು ಬರೆದಿರುತ್ತಾರೆ. ಶುಕ್ಲಯಜುರ್ವೇದದ ಸಂಹಿತೆಯ ೪೦ನೆಯ ಅಧ್ಯಾಯವಾಗಿರುವ ಈಶಾವಾಸ್ಯೋಪನಿಷತ್ತು (ಸಂಹಿತೋಪನಿಷತ್ತು) ಮತ್ತು ಆರಣ್ಯಕಕ್ಕೆ ಸೇರಿದ ಬೃಹದಾರಣ್ಯಕೋಪನಿಷತ್ತು - ಈ ಎರಡಕ್ಕೂ ಕಾಣ್ವ ಶಾಖೆಯನ್ನನುಸರಿಸಿಯೇ ಈ ಆಚಾರ್ಯರು ಭಾಷ್ಯವನ್ನು ರಚಿಸಿರುತ್ತಾರಾದರೂ ಸೂತ್ರಭಾಷ್ಯದಲ್ಲಿಯೂ ಮಿಕ್ಕ ಉಪನಿಷದ್ಭಾಷ್ಯಗಳಲ್ಲಿಯೂ ಪರಾಮರ್ಶಿಸಿರುವ ಬೃಹದಾರಣ್ಯಕವಚನಗಳಲ್ಲಿ ಬಲುಮಟ್ಟಿಗೆ ಮಾಧ್ಯಂದಿನಶಾಖೆಯನ್ನೇ ಅನುಸರಿಸಿರುವದು ಕಂಡುಬರುತ್ತದೆ. ಪ್ರಕೃತಭಾಷ್ಯದಲ್ಲಿಯೂ ಕೆಲವು ಕಡೆಗಳಲ್ಲಿ ಮಾತ್ರ

1. ತೆಲಗುಲಿಪಿಯಲ್ಲಿ ಕಾಣ್ವಬ್ರಾಹ್ಮಣವು ಪೂರ್ಣವಾಗಿ ಅಚ್ಚಾಗಿರುವದಾಗಿ ಈಗತಾನೆ ಒಬ್ಬ ಮಿತ್ರರಿಂದ ತಿಳಿಯಬಂದಿದೆ. ಅದು ನಮಗೆ ಸಿಕ್ಕಿದರೆ ಎರಡನೆಯ ಸಂಪುಟದಲ್ಲಿ ಈ ವಿಷಯವನ್ನು ಮೆತ್ತ ಪ್ರಸ್ತಾಪಿಸುವೆವು.

ಮಾಧ್ಯಂದಿನಪಾಠಭೇದಗಳನ್ನು ಪರಾಮರ್ಶಿಸಿರುವದು ಕಂಡುಬರುತ್ತದೆ. ಈ ಎರಡು ಶಾಖೆಗಳ ಉಪನಿಷತ್ತಿನ ಅಧ್ಯಾಯಾದಿಸಂಖ್ಯಾನುಕ್ರಮದಲ್ಲಿಯೂ ಹಲವು ಭೇದಗಳಿವೆ ; ವಾಚಕರ ಸೌಕರ್ಯಕ್ಕಾಗಿ ಈ ಪಾಠಭೇದಗಳನ್ನು ಆಯಾ ಸಂಪುಟದ ಪರಿಶಿಷ್ಟದಲ್ಲಿ ನಾವು ಕೊಟ್ಟಿರುತ್ತೇವೆ ; ಸಂಖ್ಯಾನುಕ್ರಮದ ಭೇದಗಳನ್ನು ಎರಡನೆಯ ಸಂಪುಟದ ಪರಿಶಿಷ್ಟದಲ್ಲಿ ಕೊಡಬೇಕೆಂದಿರುವೆವು. ಆಚಾರ್ಯರು ಕಾಣ್ವಶಾಖೆಯ ಉಪನಿಷತ್ತಿಗೆ ಭಾಷ್ಯವನ್ನು ಬರೆದು ಮಾಧ್ಯಂದಿನ ಪಾಠಗಳನ್ನೇ ಪ್ರಾಯಿಕವಾಗಿ ಏತಕ್ಕೆ ಪರಾಮರ್ಶಿಸಿರುವರೋ ನಿಶ್ಚಿತವಾಗಿ ಹೇಳುವದಕ್ಕೆ ಬರುವಂತಿಲ್ಲ.

ಕಾಣ್ವಪಾಠದ ಕೊನೆಯಲ್ಲಿರುವ ಪ್ರವರ್ಗ್ಯ, ಬೃಹದಾರಣ್ಯಕ - ಇವುಗಳನ್ನು ಎರಡು ಬೇರೆಬೇರೆಯ ಕಾಂಡಗಳಾಗಿ ಪರಿಗಣಿಸಿರುವದು ಕೆಲವು ಕೈಬರಹದ ಪುಸ್ತಕಗಳಲ್ಲಿರುವದಾಗಿಯೂ ಈ ಎರಡನ್ನೂ ಒಟ್ಟುಗೂಡಿಸಿ ಆರಣ್ಯಕವೆಂಬ ಒಂದೇ ಕಾಂಡವಾಗಿ ಪರಿಗಣಿಸಿರುವದು ಮತ್ತೆ ಕೆಲವು ಕೈಬರಹದ ಪುಸ್ತಕಗಳಲ್ಲಿರುವದಾಗಿಯೂ ತಿಳಿದುಬಂದಿದೆ. ಮಾಧ್ಯಂದಿನದಲ್ಲಿ ಇವೆರಡೂ ಸೇರಿ ಒಂದೇ ಕಾಂಡವಾಗಿರುತ್ತದೆ. ಶ್ರೀಶಂಕರಾಚಾರ್ಯರೂ ಇವೆರಡನ್ನೂ ಒಟ್ಟುಗೂಡಿಸಿ ನಾಲ್ಕು ಅಧ್ಯಾಯಗಳ ಮಧುಕಾಂಡವೆಂಬ ಒಂದೇ ಕಾಂಡವಾಗಿ ಎಣಿಸಿರುತ್ತಾರೆಂಬುದಕ್ಕೆ ಆಧಾರವಿದೆ. ಏಕೆಂದರೆ ಉಪನಿಷತ್ತಿನ ಎರಡನೆಯ ಅಧ್ಯಾಯವನ್ನು ಅವರು ನಾಲ್ಕನೆಯ ಅಧ್ಯಾಯವೆಂದೇ ಕರೆದಿರುತ್ತಾರೆ (ಭಾ. ಭಾ. ೨೫೯); ಮಧುಕಾಂಡದಲ್ಲಿ ನಾಲ್ಕನೆಯ ಅಧ್ಯಾಯಗಳಿವೆ ಎಂದೂ ಈ ಕಾಂಡದ ಸಮಾಪ್ತಿಯಲ್ಲಿ (ಭಾ.ಭಾ. ೯೦೯) ಬರೆದಿರುತ್ತಾರೆ. ಶತಪಥಬ್ರಾಹ್ಮಣವನ್ನು ಭಾಗಭಾಗವಾಗಿ ವಿಂಗಡಿಸಿಕೊಂಡು ಉಪನಿಷತ್ತನ್ನೇ ಬೇರೆಯಾಗಿ ಅಧ್ಯಯನಮಾಡುವ ಪದ್ಧತಿಯು ಬಹುಪ್ರಾಚೀನಕಾಲದಿಂದಲೂ ಇತ್ತೆಂಬುದಕ್ಕೆ ಕಾತ್ಯಾಯನಸೂತ್ರವಲ್ಲದೆ ಮಹಾಭಾರತದ ಒಂದು ಶ್ಲೋಕವೂ ಸಾಕ್ಷಿಯಾಗಿರುತ್ತದೆ ; ''ತತಃ ಷಷ್ಟಿಪಥಂ ಕೃತ್ಸ್ನಂ ಸರಹಸ್ಯಂ ಸಸಂಗ್ರಹಮ್ । ಚಕ್ರೇ ಸಪರಿಶೇಷಂ ಚ ಸೋತ್ತರಂ ಚ ಪ್ರಹರ್ಷತಃ ॥' (ಮೋ. ಧ. ೪೩-೧೬) . ಈ ಶ್ಲೋಕದಲ್ಲಿ ಬ್ರಾಹ್ಮಣದ ಮೊದಲನೆಯ ಒಂಬತ್ತು ಕಾಂಡಗಳನ್ನು 'ಷಷ್ಟಿಪಥ' ವೆಂದೂ ಹತ್ತನೆಯ ಕಾಂಡವಾದ ಅಗ್ನಿರಹಸ್ಯವನ್ನು 'ರಹಸ್ಯ'ವೆಂದೂ ಅವರೆಗೆ ಹೇಳದಿರುವ ಕರ್ಮಗಳನ್ನು ಸಂಗ್ರಹಿಸಿ ಹೇಳುವ ಹನ್ನೊಂದನೆಯ ಕಾಂಡವನ್ನು

'ಸಂಗ್ರಹ'ವೆಂದೂ ಪ್ರವರ್ಗ್ಯದವರೆಗಿನ ಉಳಿದ ಗ್ರಂಥವನ್ನು 'ಪರಿಶೇಷ'ವೆಂದೂ ಉಪನಿಷತ್ತನ್ನು 'ಉತ್ತರ' ವೆಂದೂ ಪರಾಮರ್ಶಿಸಿದೆ ಎಂದು ಮಾಧ್ಯಂದಿನಶತಪಥ ಬ್ರಾಹ್ಮಣದ ಭೂಮಿಕೆಯಲ್ಲಿ ಬರೆದಿದೆ. ಇದರ ನಿಜವನ್ನು ಪುರಾತತ್ತ್ವಶೋಧಕರು ನಿಶ್ಚಯಿಸಬೇಕಾಗಿದೆ.

ಈ ಉಪನಿಷತ್ತು ಶತಪಥಬ್ರಾಹ್ಮಣಕ್ಕೆ ಸೇರಿದ್ದಾದ್ದರಿಂದ ಇದರಲ್ಲಿಯೂ ಉದಾತ್ತ, ಅನುದಾತ್ತ - ಎಂಬ ಎರಡೇ ಸ್ವರಗಳಿರುವವೆಂದು ವಿರ್ಪಡುತ್ತದೆ. (ಪ್ರತಿಜ್ಞಾಸೂತ್ರ ೧೮, ಭಾಷಿತ ಸೂ. ೨- ಇವನ್ನು ನೋಡಿ) ಈ ಉಪನಿಷತ್ತನ್ನು ಸ್ವರಯುಕ್ತವಾಗಿ ಅಧ್ಯಯನಮಾಡಿರುವವರು ನಮ್ಮ ದೇಶದಲ್ಲಿ ಕಡಿಮೆಯಾದರೂ ಉತ್ತರದಲ್ಲಿ ಈಗಲೂ ಸಿಕ್ಕುತ್ತಾರೆ. ಸೂತ್ರಭಾಷ್ಯದಲ್ಲಿ (ಸೂ. ಭಾ. ೧-೪-೧೧, ಭಾ. ಭಾ. ೩೫೯) 'ಯಸ್ಮಿನ್ ಪಞ್ಚ ಪಞ್ಚಜನಾಃ' ಎಂಬ ಮಂತ್ರದ ಅರ್ಥವನ್ನು ವಿಚಾರಮಾಡುವಾಗಲೂ ಈ ಉಪನಿಷತ್ತಿನ ಭಾಷ್ಯದಲ್ಲಿ (೧-೩-೨೮, ಭಾ.ಭಾ. ೯೩) ಅಭ್ಯಾರೋಹಜಪದ ಮಂತ್ರಗಳ ಅರ್ಥವನ್ನು ವಿಚಾರಮಾಡುವಾಗಲೂ, ಸ್ವರದ ವಿಚಾರವನ್ನು ಪ್ರಸ್ತಾಪಿಸಿರುತ್ತದೆ. ಆದ್ದರಿಂದ ಬಲ್ಲವರಿಂದ ಸ್ವರವನ್ನು ತಿಳಿದುಕೊಳ್ಳುವದು ಈ ಭಾಷ್ಯಗಳ ಪೂರ್ಣಾಭಿಪ್ರಾಯವನ್ನು ತಿಳಿದುಕೊಳ್ಳುವದಕ್ಕೆ ಸಹಾಯಕವಾಗಿರುವದು.

ಬೃಹದಾರಣ್ಯಕಭಾಷ್ಯವು ಉಪನಿಷದ್ಭಾಷ್ಯಗಳಲ್ಲೆಲ್ಲ ಗ್ರಂಥಪರಿಮಾಣದಿಂದ ದೊಡ್ಡದು. ಮಿಕ್ಕ ಉಪನಿಷತ್ತುಗಳ ಭಾಷ್ಯಗಳಲ್ಲಿ ಸಂಕ್ಷೇಪವಾಗಿ ಹೇಳಿರುವ ಎಷ್ಟೋ ವಿಷಯಗಳನ್ನು ಇಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿರುತ್ತದೆ. ಆಚಾರ್ಯರಿಗೆ ಸಮ್ಮತವಾದ ಅದ್ವೈತವೇದಾಂತದ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ನಿಸ್ಸಂದಿಗ್ಧವಾಗಿ ತಿಳಿದುಕೊಳ್ಳುವದಕ್ಕೆ ಸೂತ್ರಭಾಷ್ಯದಷ್ಟೇ ಈ ಉಪನಿಷತ್ತಿನ ಭಾಷ್ಯವೂ ಅಮೂಲ್ಯಸಾಧನವಾಗಿರುತ್ತದೆ ಎಂದರೂ ಹೆಚ್ಚಾಗುವದಿಲ್ಲ. ಈ ಎರಡು ಭಾಷ್ಯಗಳೂ ಬೇರೆಬೇರೆಯ ದೃಷ್ಟಿಕೋಣಗಳಿಂದ ಬರೆದವುಗಳಾಗಿರುತ್ತವೆ; ಸೂತ್ರಭಾಷ್ಯವು ನ್ಯಾಯಪ್ರಧಾನವಾಗಿದೆ ; ಇಲ್ಲಿ ಉಪನಿಷತ್ತಿನ ಗ್ರಂಥಾನುಕ್ರಮದಲ್ಲಿಯೇ ವಿಮರ್ಶೆಯಿದೆ. ಇವೆರಡರಲ್ಲಿ ಒಂದರಲ್ಲಿ ಸಂಗ್ರಹವಾಗಿ ಉಕ್ತವಾಗಿರುವ ವಿಷಯಗಳು ಮತ್ತೊಂದರಲ್ಲಿ ವಿಸ್ತಾರವಾಗಿ ಪ್ರತಿಪಾದಿತವಾಗಿರುವದರಿಂದ ಇವು ಒಂದಕ್ಕೊಂದು ಪರಿಶಿಷ್ಟದಂತಿವೆ ಎಂದು ಹೇಳಬಹುದು. ಈ ಉಪನಿಷತ್ತಿನ ಭಾಷ್ಯಕ್ಕೆ ಆಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರಿಸುರೇಶ್ವರಾಚಾರ್ಯರವರ ವಾರ್ತಿಕವಿರುವದೊಂದು ವಿಶೇಷೋಪಕಾರಕವಾಗಿರುತ್ತದೆ. ಶ್ರೀಗೌಡಪಾದರವರ

ಮಾಂಡೂಕ್ಯಕಾರಿಕೆ, ಆಚಾರ್ಯರ ಭಾಷ್ಯ ಮತ್ತು ಸುರೇಶ್ವರರ ವಾರ್ತಿಕ - ಈ ಮೂರನ್ನೂ ವಿಮರ್ಶಕದೃಷ್ಟಿಯಿಂದ ಅಭ್ಯಾಸಮಾಡಿದವರಿಗೆ ಅದ್ವೈತವೇದಾಂತ ಸಿದ್ಧಾಂತದ ಕೆಚ್ಚು ಎಂಥದ್ದು ಎಂಬುದು ಸಂಪೂರ್ಣವಾಗಿ ಮನದಟ್ಟಾಗುವದರಲ್ಲಿ ಸಂಶಯವಿಲ್ಲ.

ಈ ಉಪನಿಷದ್ಭಾಷ್ಯವನ್ನು ಬರೆದವರು ಯಾರು ?

ಈ ಉಪನಿಷತ್ತಿನ ಭಾಷ್ಯವು ಸುಪ್ರಸಿದ್ಧರಾದ ಶ್ರೀಶಂಕರಾಚಾರ್ಯರವರ ಕೃತಿ ಎಂಬುದಕ್ಕೆ ಈಗಿನ ವಿದ್ವಾಂಸರೆಲ್ಲರ ಸಮ್ಮತಿಯಿದೆ. ವಾರ್ತಿಕಕಾರರಾದ ಸುರೇಶ್ವರಾಚಾರ್ಯರವರು

ಆಶೈಲಾದುದಯಾತ್ತಥಾಸ್ತಗಿರಿತೋ ಭಾಸದ್ಯಶೋರಶ್ಮಿಭಿ
ರ್ವ್ಯಾಪ್ತಂ ವಿಶ್ವಮನನ್ಧಕಾರಮಭವತ್ ಯಸ್ಯ ಸ್ಮ ಶಿಷ್ಯೈರಿದಮ್ ॥
ಆರಾಜ್ಞಾನಗಭಸ್ತಿಭಿಃ ಪ್ರತಿಹತಶ್ಚನ್ದ್ರಾಯತೇ ಭಾಸ್ಕರ-
ಸ್ತಸ್ಮೈ ಶಂಕರಭಾನವೇ ತನುಮನೋವಾಗ್ವಿರ್ಭವಸ್ತಾತ್ ಸದಾ ॥

ಎಂದು ಆಚಾರ್ಯರನ್ನು ಹೆಸರಿಟ್ಟು ಕರೆದಿರುತ್ತಾರೆ. ಅವರು ತಮ್ಮ ನೈಷ್ಕರ್ಮ್ಯಸಿದ್ಧಿಯ ಕೊನೆಯಲ್ಲಿ 'ಶ್ರೀಮಚ್ಛಂಕರಪಾದಪದ್ಮಯುಗಲವನ್ನು ಸಂಸೇವನೆಮಾಡಿ' ಪಡೆದುಕೊಂಡ ಜ್ಞಾನವನ್ನೇ ಆ ಗ್ರಂಥದಲ್ಲಿ ತಿಳಿಸಿರುವೆನೆಂದು ಹೇಳಿಕೊಂಡಿರುತ್ತಾರೆ. ಆದ್ದರಿಂದ ಈ ಉಪನಿಷದ್ಭಾಷ್ಯವು ಶಂಕರಾಚಾರ್ಯಕೃತವೆಂಬ ಬಗ್ಗೆ ಯಾವ ಸಂಶಯವೂ ಉಳಿಯುವಂತಿಲ್ಲ.

ಆದರೆ ಸೂತ್ರಭಾಷ್ಯಕ್ಕೂ ಈ ಭಾಷ್ಯಕ್ಕೂ ಕೆಲವು ಕಡೆಗಳಲ್ಲಿ ಮತಭೇದವು ಕಂಡುಬರುತ್ತದೆ. ಹೇಗೆಂದರೆ :

(೧) ತ ಏತೇ ವಾಙ್ಮನಃಪ್ರಾಣಾಃ ಸರ್ವಏವ ಸಮಾಃ ತುಲ್ಯವ್ಯಾಪ್ತಿಮನ್ತಃ । ಯಾವತ್ಪ್ರಾಣೋಗೋಚರಂ ಸಾಧ್ಯಾತ್ಮಾಧಿಭೂತಂ ವ್ಯಾಪ್ಯ ವ್ಯವಸ್ಥಿತಾಃ । ಅತ ಏವ ಅನನ್ತಾಃ ॥
ಬೃ ಭಾ. ೧-೫-೧೩ (ಭಾ. ಭಾ. ೨೨೪)

(೨) ಸರ್ವಗತಸ್ಯ ತು ಶರೀರೇಷು ಶರೀರಪರಿಮಾಣವೃತ್ತಿ ಲಾಭೋ ನ ವಿರುದ್ಧ್ಯತೇ ॥
ಬೃ ಭಾ. ೧-೩-೨೨ (ಭಾ. ಭಾ. ೮೫)

(೩) 'ತ ಏತೇ ಸರ್ವ ಏವ ಸಮಾಃ ಸರ್ವೇಽನನ್ತಾಃ' ಇತಿ ಶ್ರುತೇಃ ಸರ್ವಾತ್ಮಕಾನಿ ತಾವತ್ ಕರಣಾನಿ । ಸರ್ವಾತ್ಮಕಪ್ರಾಣಸಂಶ್ರಯಾಚ್ಚ । ತೇಷಾಮ್ ಆಧ್ಯಾತ್ಮಿಕಾಧಿಭೌತಿಕಪರಿಚ್ಛೇದಃ ಪ್ರಾಣಕರ್ಮಜ್ಞಾನಭಾವನಾನಿಮಿತ್ತಃ । ಅತಃ ತದ್ವಶಾತ್ ಸ್ವಭಾವತಃ ಸರ್ವಗತಾನಾಮನನ್ತಾ

ನಾಮಪಿ ಪ್ರಾಣಾನಾಂ ಕರ್ಮಜ್ಞಾನವಾಸನಾನುರೂಪೇಣೈವ ದೇಹಾನ್ತರಾರಮ್ಭವಶಾತ್ ಪ್ರಾಣಾನಾಂ ವೃತ್ತಿಃ ಸಂಕುಚತಿ ವಿಕಸತಿ ಚ ॥ ಬೃ ಬಾ. ೪-೪-೩

ಪ್ರಾಣಗಳು ಸರ್ವಗತವೆಂದೂ ಆಯಾ ಪ್ರಾಣಿಗಳಲ್ಲಿ ಕರ್ಮಾನುಗುಣವಾಗಿ ಅವಕ್ಕೆ ವೃತ್ತಿಲಾಭವಾಗಿರುವದೆಂದೂ ಉಪನಿಷತ್ತಿನಲ್ಲಿ ಹೇಳಿದೆ ಎಂಬುದು ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗಿರುತ್ತದೆ.

ಆದರೆ **ಸೂತ್ರಭಾಷ್ಯದಲ್ಲಿ** ಇದಕ್ಕೆ ವಿರುದ್ಧವಾಗಿ ಬರೆದಿರುವಂತೆ ಕಾಣಿಸುತ್ತದೆ. ಹೇಗೆಂದರೆ:

(೧) ಏವಂ ಶ್ರುತ್ಯುಕ್ತೇ ದೇಹಾನ್ತರಪ್ರತಿಪತ್ತಿಪ್ರಕಾರೇ ಸತಿ ಯಾಃ ಪುರುಷಮತಿಪ್ರಭವಾಃ ಕಲ್ಪನಾಃ ವ್ಯಾಪಿನಾಂ ಕರಣಾನಾಮ್ ಆತ್ಮನಶ್ಚ ದೇಹಾನ್ತರಪ್ರತಿಪತ್ತೌ ಕರ್ಮವಶಾತ್ ವೃತ್ತಿಲಾಭಸ್ತತ್ರ ಭವತಿ । ಕೇವಲಸ್ಯೈವಾತ್ಮನೋ ವೃತ್ತಿಲಾಭಸ್ತತ್ರ ಭವತಿ ।..... । ಇತ್ಯೇವಮಾದ್ಯಾಃ ಸರ್ವ ಏವಾನಾದರ್ತವ್ಯಾಃ । ಶ್ರುತಿವಿರೋಧಾತ್ ॥ ಸೂ. ಭಾ. ೩-೧-೧ (ಭಾ. ಭಾ. ೨೧೪)

ಬೃಹದಾರಣ್ಯಕದಲ್ಲಿ ಪ್ರತಿಪಾದಿಸಿರುವ ಪ್ರಾಣವೃತ್ತಿಲಾಭಪ್ರಕ್ರಿಯೆಯನ್ನು ಇಲ್ಲಿ 'ಪುರುಷಮತಿಪ್ರಭವ' ಎಂದು ನಿಂದಿಸಿ ತಿರಸ್ಕರಿಸಿದೆ.

(೨) ಸರ್ವಗತಾನಾಮಪಿ ವೃತ್ತಿಲಾಭಃ ಶರೀರದೇಶೇ ಸ್ಯಾತ್ ಇತಿ ಚೇತ್। ನ । ವೃತ್ತಿಮಾತ್ರಸ್ಯ ಕರಣತ್ವೋಪಪತ್ತೇಃ । ಯದೇವ ಹಿ ಉಪಲಬ್ಧಿಸಾಧನಮ್, ವೃತ್ತಿಃ, ಅನ್ಯದ್ವಾ ತಸ್ಯೈವ ನಃ ಕರಣತ್ವಮ್ । ಸಂಜ್ಞಾಮಾತ್ರೇ ವಿವಾದಃ ಇತಿ ಕರಣಾನಾಂ ವ್ಯಾಪಿತ್ವಕಲ್ಪನಾ ನಿರರ್ಥಿಕಾ ॥

ಸೂ. ಭಾ. ೨-೪-೭ (ಭಾ. ಭಾ. ೧೮೬)

ಇಲ್ಲಿಯೂ ವೃತ್ತಿಲಾಭಪಕ್ಷವನ್ನು ಖಂಡಿಸಿರುವದು ಸ್ಪಷ್ಟವಾಗಿರುತ್ತದೆ. ಸೂತ್ರಭಾಷ್ಯವೂ ಶಂಕರಾಚಾರ್ಯಕೃತವೆಂದೇ ಸುಪ್ರಸಿದ್ಧವಾಗಿರುವದರಿಂದ ಈ ಎರಡು ವಿರುದ್ಧ ಪಕ್ಷಗಳಿಗೆ ಏಕವಾಕ್ಯತೆ ಹೇಗೆಂಬುದನ್ನು ವಿಮರ್ಶನವಿಚಕ್ಷಣರಾದ ವಿದ್ವಾಂಸರು ನಿರ್ಣಯಿಸಿಕೊಡಬೇಕಾಗಿದೆ. ಇವೆರಡಕ್ಕೂ ವಿರೋಧವೇ ಸಿದ್ಧವಾದರೆ ಸೂತ್ರಭಾಷ್ಯಕಾರರಾದ ಶಂಕರರು ಬೃಹದಾರಣ್ಯಕಭಾಷ್ಯಕರ್ತೃಗಳಿಗಿಂತ ಭಿನ್ನರೆಂದು ವಾದಿಸುವವರಿಗೆ ಸ್ವಲ್ಪ ಅವಕಾಶವು ಸಿಕ್ಕಿದಂತೆ ಆಗುವದು.

ಇದರ ನಿಜವು ಹೇಗೇ ಇರಲಿ, ಈ ಎರಡು ಪಕ್ಷಗಳ ವಿರೋಧದಿಂದ ವೇದಾಂತದ ಪರಮಸಿದ್ಧಾಂತಕ್ಕೆ ಯಾವ ಧಕ್ಕೆಯೂ ತಗಲುವಂತಿಲ್ಲವೆಂಬುದನ್ನು ವಾಚಕರಲ್ಲಿ ನಾವು ಬಿನ್ನವಿಸಿಕೊಳ್ಳಲಿಚ್ಛಿಸುತ್ತೇವೆ. ಬೃಹದಾರಣ್ಯಕಭಾಷ್ಯದಲ್ಲಿ "ವೃತ್ತಿಲಾಭೋ ನ ವಿರುಧ್ಯತೇ" (ವೃತ್ತಿಲಾಭವು ವಿರುದ್ಧವಾಗುವದಿಲ್ಲ ೧-೩-೨೨,

ಭಾ. ಭಾ. ೮೫) ಎಂದು ಬರೆದಿರುವದರಲ್ಲಿ ಯಾರೋ ಪೂರ್ವಪಕ್ಷಿಗಳು ಇಲ್ಲಿ ವಿರೋಧವನ್ನು ಶಂಕಿಸಿದ್ದರೆಂಬ ಸೂಚನೆಯಿದೆ ; ಸೂತ್ರಭಾಷ್ಯದಲ್ಲಂತೂ ಇದು ವಿರುದ್ಧವೆಂದೇ ಸುಸ್ಪಷ್ಟವಾಗಿ ಹೇಳಿಬಿಟ್ಟಿದೆ. ಆದ್ದರಿಂದ ಆಚಾರ್ಯರಿಗಿಂತ ಮುಂಚೆಯೇ ವೇದಾಂತಿಗಳು ಈ ಎರಡು ಪಕ್ಷಗಳನ್ನೂ ಹಿಡಿದು ವಾದಿಸುತ್ತಿದ್ದರೆಂದು ಊಹಿಸುವದಕ್ಕೆಡೆಯಿದೆ. ಪ್ರಾಣಗಳು ಉತ್ಕ್ರಮಣವಾಗಬೇಕಾದರೆ ಅವು ಪರಿಚ್ಛಿನ್ನವೆಂಬುದನ್ನು ಒಪ್ಪಬೇಕು ; ಪ್ರಾಣಗಳೆಲ್ಲವೂ ಅನಂತ ಎಂಬ ಶ್ರುತಿಯ ಪ್ರಾಮಾಣ್ಯವನ್ನು ಒಪ್ಪುವವರು ವೃತ್ತಿಲಾಭಪಕ್ಷವನ್ನೂ ಒಪ್ಪಬೇಕು. ಆದ್ದರಿಂದ ಆಧಿದೈವಿಕದೃಷ್ಟಿಯಿಂದ ವಾಗಾದಿಗಳು ಅಪರಿಚ್ಛಿನ್ನವೆಂದೂ ಆಧ್ಯಾತ್ಮಿಕದೃಷ್ಟಿಯಿಂದ ಪರಿಚ್ಛಿನ್ನವೆಂದೂ ಹೇಳಬೇಕಾಗುತ್ತದೆ. ಪರಮಾರ್ಥವಾಗಿ ವ್ಯಾಪಿಗಳಾದ ವಾಗಾದಿಗಳಿಗೆ ಕರ್ಮವಶದಿಂದ ಪರಿಚ್ಛೇದವುಂಟಾಗಿರುವದರಿಂದ ವ್ಯಷ್ಟಿಜೀವರ ದೃಷ್ಟಿಯಿಂದ ಕರಣಗಳು ಪರಿಚ್ಛಿನ್ನವೆಂಬ ವ್ಯವಹಾರವೇ ಯುಕ್ತತರವು ; ಆದ್ದರಿಂದಲೇ ಶ್ರುತಿಯು ಜ್ಞಾನಿಗೆ ಪ್ರಾಣಗಳು ಉತ್ಕ್ರಾಂತವಾಗುವದಿಲ್ಲ. ಅಜ್ಞಾನಿಗಳಿಗೆ ಉತ್ಕ್ರಾಂತವಾಗುತ್ತವೆ (ಬೃ ೪-೪-೬) ಎಂಬ ಭೇದವನ್ನು ಅಂಗೀಕರಿಸಿದೆ ಎಂದು ಈ ಎರಡು ಪಕ್ಷಗಳಿಗೂ ಹೊಂದಿಕೆಯನ್ನು ಕಲ್ಪಿಸಬಹುದೆಂದು ತೋರುತ್ತದೆ.

ಈ ದೃಷ್ಟಿಯಿಂದ ನೋಡಿದರೆ ಸೂತ್ರಭಾಷ್ಯದ ಪ್ರಕ್ರಿಯೆಯೇ ಆಚಾರ್ಯರಿಗೆ ಹೆಚ್ಚು ಇಷ್ಟವೆಂದೂ ಬೃಹದಾರಣ್ಯಕದಲ್ಲಿ ಹೇಳಿರುವದು ಹಿಂದಿನ ಸಾಂಪ್ರದಾಯಿಕ ವ್ಯಾಖ್ಯಾನವೆಂದೂ ವಾದಿಸುವದಕ್ಕೆ ಬರುತ್ತದೆ. ಹೀಗೆ ಒಂದೊಂದು ಸಂದರ್ಭದಲ್ಲಿ ಪರಮತವನ್ನೇ ತಮ್ಮ ಸಿದ್ಧಾಂತವೆಂಬಂತೆ ಹೇಳಿ ಸ್ಥಳಾಂತರದಲ್ಲಿ ಅದನ್ನು ಖಂಡಿಸಿ ಪರಮಸಿದ್ಧಾಂತವನ್ನು ಸ್ಫುಟಗೊಳಿಸುವದು ಆಚಾರ್ಯರ ಶೈಲಿಯಾಗಿರುತ್ತದೆ. ಉದಾಹರಣೆಗೆ ಸೂತ್ರಭಾಷ್ಯದಲ್ಲಿ (೨-೨-೧೭ ; ಭಾ.ಭಾ. ೩೮) ಕಾರ್ಯವೆಂಬುದು ಕಾರಣದ ಸಂಸ್ಥಾನಮಾತ್ರವೆಂಬ ಸಾಂಖ್ಯರ ಪ್ರಕ್ರಿಯೆಯನ್ನು ವೈಶೇಷಿಕರ ಖಂಡನೆಗೆ ಉಪಯೋಗಿಸಿಕೊಂಡಿದ್ದರೂ ಗೀತಾಭಾಷ್ಯದಲ್ಲಿ (೧೮-೪೮, ಭಾ.ಭಾ. ; ೫೪೯ರಲ್ಲಿ) ಇದೂ ಅಸತ್ಕಾರ್ಯವಾದವೇ ಆಗುವದೆಂದು ಸ್ಪಷ್ಟವಾಗಿ ಖಂಡಿಸಿರುತ್ತದೆ. ಚಾರ್ವಾಕಬೌದ್ಧರ ವಾದಗಳನ್ನು ವೈಶೇಷಿಕರ ಅಥವಾ ನೈಯಾಯಿಕರ ಪಾದಗಳಿಂದಲೂ ವೈಶೇಷಿಕರ ವಾದಗಳನ್ನು ಸಾಂಖ್ಯರ ಅಥವಾ ಮೀಮಾಂಸಕರ ವಾದಗಳಿಂದಲೂ ಖಂಡಿಸಿ ಕೊನೆಗೆ ಆ ವಾದಗಳನ್ನೂ ಖಂಡಿಸುವದರ ಮೂಲಕ ವೇದಾಂತದ ಪರಮಸಿದ್ಧಾಂತವನ್ನು ಸ್ಫುಟಗೊಳಿಸಿರುವ ಉದಾಹರಣೆಗಳು ಭಾಷ್ಯದಲ್ಲಿ ಅಲ್ಲಲ್ಲಿ ಕಾಣಬರುತ್ತವೆ.

ಭಾಷ್ಯಗಳಿಗೆ ತೋರುವ ಪರಸ್ಪರವಿರೋಧಾಭಾಸಕ್ಕೆ ಮತ್ತೊಂದು ಉದಾಹರಣೆಯನ್ನು ಕೊಡಬಹುದು ; **ತೈತ್ತಿರೀಯಭಾಷ್ಯದಲ್ಲಿ** ಬ್ರಹ್ಮದಿಂದ ಆಕಾಶಾದಿಯಾಗಿ ಭೂತಗಳು ಸೃಷ್ಟವಾಗುವವೆಂದು (ತೈ. ಭಾ.ಭಾ. ೧೧೪) ಹೇಳಿದೆ ; **ಮುಂಡಕಭಾಷ್ಯದಲ್ಲಿ** ಬ್ರಹ್ಮದಿಂದ ಅವ್ಯಾಕೃತ, ಪ್ರಾಣ, ಮನಸ್ಸು, ಭೂತಪಂಚಕ, ಲೋಕಗಳು - ಈ ಕ್ರಮದಿಂದ ಸೃಷ್ಟಿಯಾಗಿರುವವೆಂದು ಒಂದು ಕಡೆಯಲ್ಲಿಯೂ (ಮುಂ. ಭಾ. ೧-೧-೮ ಭಾ. ಭಾ. ೨೩) ಪ್ರಾಣ, ಮನಸ್ಸು, ಇಂದ್ರಿಯಗಳು, ಪಂಚಭೂತಗಳು - ಹೀಗೆ ಉಂಟಾಗುವವೆಂದು ಇನ್ನೊಂದು ಕಡೆಯಲ್ಲಿಯೂ (ಮುಂ. ಭಾ. ೨-೧-೩, ಭಾ. ಭಾ. ೫೭) ಹೇಳಿದೆ. ಪ್ರಶ್ನ ಭಾಷ್ಯದಲ್ಲಿ ಪ್ರಾಣ, ಶ್ರದ್ಧೆ, ಭೂತಪಂಚಕ, ಇಂದ್ರಿಯಗಳು, ಮನಸ್ಸು - ಇವು ಸೃಷ್ಟಿಯಾಗುವವೆಂದು (ಪ್ರ.ಭಾ. ೧-೪, ಭಾ. ಭಾ. ೧೧೨) ಹೇಳಿದೆ. ಸೂತ್ರಭಾಷ್ಯದಲ್ಲಿ - ಕರಣಗಳು ಭೌತಿಕವಾದರೆ ಅವುಗಳ ಸೃಷ್ಟಿಯನ್ನು ಭೂತಗಳ ಸೃಷ್ಟಿಯಿಂದಲೇ ಹೇಳಿದಂತೆ ಆಗುತ್ತದೆ ; ಅಭೌತಿಕವಾದರೆ ಮೊದಲು ಕರಣಗಳೂ ಆಮೇಲೆ ಭೂತಗಳೂ ಉತ್ಪನ್ನವಾಗುವವೆಂದಾಗಲಿ, ಮೊದಲೇ ಭೂತಗಳೂ ಆಮೇಲೆ ಕರಣಗಳೂ ಉತ್ಪನ್ನವಾಗುವವೆಂದಾಗಲಿ ಹೇಳಬಹುದಾಗಿವೆ. ಅಥರ್ವಣ (ಮುಂಡಕ)ದಲ್ಲಿರುವದು ಕರಣಭೂತಗಳ ಪಾಠಕ್ರಮವೇ ಹೊರತು ಉತ್ಪತ್ತಿಕ್ರಮವಲ್ಲ ಎಂದು (ಸೂ.ಭಾ. ೨-೩-೧೫, ಭಾ.ಭಾ. ೧೧೭) ಬರೆದಿದೆ. ಪ್ರಕೃತಭಾಷ್ಯದಲ್ಲಿಯೋ ಎಂದರೆ ಮೃತ್ಯುಶಬ್ದವಾಚ್ಯನಾದ ಹಿರಣ್ಯಗರ್ಭನಿಂದ ಮನಸ್ಸುಂಟಾಯಿತು, ಬಳಿಕ ಆಕಾಶಾದಿಕ್ರಮದಿಂದ ಭೂತಪಂಚಕವಾಯಿತು. (೧-೨-೧, ಭಾ.ಭಾ. ೨೩-೨೭) ; ಆ ಬಳಿಕ ವಿರಾಟ್ಪುರುಷನೂ (೧-೨-೨, ಭಾ.ಭಾ. ೨೯ ; ೧-೨-೪, ಭಾ.ಭಾ. ೩೨), ವಿರಾಜನಿಂದ ಮನುವೂ ಮನುವಿನಿಂದ ಮನುಷ್ಯರೂ ಪ್ರಾಣಿಗಳೂ (೧-೪-೩, ಭಾ, ಭಾ. ೧೦೭, ೧-೪-೪, ಭಾ.ಭಾ. ೧೦೮) ಉಂಟಾದವೆಂದು ಹೇಳಿದೆ.

ಮೇಲೆ ಉದಾಹರಿಸಿರುವ ಭಾಷ್ಯಗಳಿಗೆ ವಿರೋಧವಿರುವಂತೆಯೇ ತೋರುತ್ತದೆ. ಮುಂಡಕಭಾಷ್ಯದಲ್ಲಿ ಉತ್ಪತ್ತಿಕ್ರಮವನ್ನು ಹೇಳಿದೆ ಎಂದು (೧-೧-೮, ಭಾ. ಭಾ. ೨೨) ಸ್ಪಷ್ಟವಾಗಿ ಹೇಳಿರುವಲ್ಲಿ ಅದು ಪಾಠಕ್ರಮಮಾತ್ರವೆಂದು ಸೂತ್ರಭಾಷ್ಯದಲ್ಲಿ ಇರುವ ಸ್ಪಷ್ಟೋಕ್ತಿಯನ್ನು ನೋಡಿದವರಿಗೆ ಆ ಎರಡು ಭಾಷ್ಯಗಳು ಏಕಕರ್ತೃಕವಲ್ಲವೆಂದೇ ತೋರುವ ಸಂಭವವಿದೆ.

ಇದರ ತತ್ತ್ವವು ಹೇಗೇ ಇರಲಿ, ಇಲ್ಲಿಯೂ ಭಾಷ್ಯಗಳ ಪರಸ್ಪರ ವಿರೋಧದಿಂದ ವೇದಾಂತದ ಪರಮಸಿದ್ಧಾಂತಕ್ಕೆ ಯಾವ ಧಕ್ಕೆಯೂ ತಗಲುವಂತಿಲ್ಲವೆಂಬುದನ್ನು ಜಿಜ್ಞಾಸುಗಳು ಲಕ್ಷ್ಯದಲ್ಲಿಡಬೇಕು. ಮೊದಲನೆಯದಾಗಿ ಸೃಷ್ಟಿವಾಕ್ಯಗಳು ಆತ್ಮೈಕ್ಯವನ್ನು ತಿಳಿಸುವದಕ್ಕೆ ಬಂದಿರುವದರಿಂದ ಸೃಷ್ಟಿಕ್ರಮದಲ್ಲಿ ಕಾಣಬರಬಹುದಾದ ತಾರತಮ್ಯದಿಂದ ಆ ಸಿದ್ಧಾಂತಕ್ಕೆ ಯಾವ ಅಡ್ಡಿಯನ್ನೂ ತಂದೊಡ್ಡುವಂತಿಲ್ಲ. ಎರಡನೆಯದಾಗಿ ಸೃಷ್ಟಿವಾಕ್ಯಗಳಿಗೆ ಯಾವದಾದರೊಂದು ರೀತಿಯಿಂದ ಏಕವಾಕ್ಯತೆಯನ್ನು ಕಲ್ಪಿಸುವದಕ್ಕೂ ಶಕ್ಯವಿದೆ. ಪ್ರಕೃತವಿರೋಧವು ಆಭಾಸಮಾತ್ರವೆಂಬುದನ್ನು ಮನಗಾಣುವದಕ್ಕೆ ಈ ಗ್ರಂಥಮಾಲೆಯ ಪ್ರಶ್ನೋಪನಿಷತ್ತಿನ ಭಾಷ್ಯಕ್ಕೆ ಬರೆದಿರುವ ಪೀಠಿಕೆಯನ್ನು ವಾಚಕರು ಅವಲೋಕಿಸಬೇಕು. ಆ ಪೀಠಿಕೆಯಲ್ಲಿ ಸೂಚಿತವಾಗಿರುವ ಅಭಿಪ್ರಾಯವನ್ನು ಒಪ್ಪಿಕೊಂಡರೆ ಎಲ್ಲಾ ಸೃಷ್ಟಿವಾಕ್ಯಗಳಿಗೂ ಅನುಕೂಲವಾಗಿ ಹೊಂದುಗಡೆಯಾಗುವದೆಂದು ನಮ್ಮ ಅಭಿಪ್ರಾಯವಾಗಿದೆ. ಪರಮಾತ್ಮನನ್ನಾಶ್ರಯಿಸಿರುವ ಅವ್ಯಾಕೃತವು ವ್ಯಾಕೃತಾವಸ್ಥೆಗೆ ತಿರುಗುತ್ತಿರುವಲ್ಲಿ ಹಿರಣ್ಯಗರ್ಭನು ತೋರಿಕೊಳ್ಳುವನು ; ಅವನಿಂದ ಸಮಷ್ಟಿಮನಸ್ಸು ಆವಿರ್ಭವಿಸುವದು ; ಬಳಿಕ ಸೂಕ್ಷ್ಮಪಂಚಭೂತಗಳೂ ಅವುಗಳಿಂದ ಸ್ಥೂಲಭೂತಗಳೂ ಅಂಡೋತ್ಪತ್ತಿಕ್ರಮದಿಂದ ವಿರಾಟ್ಪುರುಷನೂ ಉಂಟಾಗುವರು. ಆ ವಿರಾಟ್ಪುರುಷನಿಂದ ಮನುವೂ ಅವನಿಂದ ಮಾನವಾದಿಗಳೂ ಉಂಟಾಗುವರು. ಪ್ರಶ್ನದಲ್ಲಿ ಹೇಳಿರುವ ಮನಸ್ಸೂ ಇಂದ್ರಿಯಗಳೂ ಭೂತಗಳಿಂದಾಗುವ ವ್ಯಷ್ಟಿಗಳು - ಎಂಬ ಸೃಷ್ಟಿಕ್ರಮವನ್ನು ಆ ಪೀಠಿಕೆಯಲ್ಲಿ ಪ್ರತಿಪಾದಿಸಿರುತ್ತದೆ.

ಬೃಹದಾರಣ್ಯಕಭಾಷ್ಯದ ಕರ್ತೃವು ಯಾರೆಂಬುನ್ನು ನಿರ್ಣಯಿಸುವದಕ್ಕೆ ಬಯಸುವ ಪುರಾತತ್ತ್ವಪರಿಶೀಲಕರ ಉಪಯೋಗಕ್ಕೆಂದು ಇಲ್ಲಿ ಇನ್ನೊಂದು ವಿಚಾರವನ್ನು ತಿಳಿಸುವೆವು. ಭಾಷಾಶೈಲಿಯ ದೃಷ್ಟಿಯಿಂದ ನೋಡಿದರೆ ತೈತ್ತಿರಿಯೋಪನಿಷದ್ಭಾಷ್ಯಕ್ಕೂ ಬೃಹದಾರಣ್ಯಕಭಾಷ್ಯಕ್ಕೂ ಒಂದು ವಿಶೇಷವಾದ ಹೋಲಿಕೆಯಿರುವದು ಕಂಡುಬರುತ್ತದೆ. ಪ್ರಸ್ಥಾನತ್ರಯಭಾಷ್ಯಗಳಲ್ಲೆಲ್ಲ ಸೂತ್ರಪ್ರಾಯವಾದ ಸಂಗ್ರಹವಾಕ್ಯಗಳನ್ನು ಅಲ್ಲಲ್ಲಿ ಕೊಟ್ಟು ಅವುಗಳನ್ನು ಮುಂದೆಯೇ ವಿವರಿಸಿರುವ ಪರಿಪಾಟಿಯು ಪ್ರಚುರವಾಗಿರುವದೆಂಬುದು ಭಾಷ್ಯಚಿಂತಕರಿಗೆಲ್ಲ ಪ್ರಸಿದ್ಧವಾಗಿರುವ ವಿಷಯವಷ್ಟೆ ಆದರೆ ಪೂರ್ವಪಕ್ಷವಾಕ್ಯಗಳನ್ನು ಚೇತ್ ಎಂಬ ನಿಪಾತದಲಿ ಕೊನೆಗಾಣುವ ಸಂಗ್ರಹವಾಕ್ಯಗಳಾಗಿ ಕೊಟ್ಟು, ಅವುಗಳ

ವಿವರಣೆಯನ್ನು ಮತ್ತೆ ಚೇದಂತವಾಗಿ ನಿಲ್ಲಿಸಿರುವದು ತೈತ್ತಿರೀಯಬೃಹದಾರಣ್ಯಕ ಭಾಷ್ಯಗಳಲ್ಲಿ ಮಾತ್ರ ಪ್ರಚುರವಾಗಿರುತ್ತದೆ. ಉದಾಹರಣೆಗೆ ಈ ಕೆಳಗಿನ ಗ್ರಂಥ ಭಾಗವನ್ನು ಪರಿಶೀಲಿಸಿರಿ :

(೧) ಗತ್ಯೈಶ್ವರ್ಯಾದಿಶ್ರುತಿವಿರೋಧಃ ಇತಿ ಚೇತ್ । ಅಥಾಪಿ ಸ್ಯಾತ್ ಯದ್ಯಪ್ರಾಪ್ಯೋ ಮೋಕ್ಷಃ ತದಾ ಗತಿಶ್ರುತೀನಾಂ ''ಸ ಏಕಧಾ'' (ಛಾಂ. ೭-೨೬-೨), ''ಸ ಯದಿ ಪಿತೃಲೋಕಕಾಮಃ'' (ಛಾಂ. ೮-೨-೧) , ''ಸ್ತ್ರೀಭಿರ್ವಾ ಯಾನೈರ್ವಾ'' (ಛಾಂ. ೮-೧೨-೩) ಇತ್ಯಾದಿಶ್ರುತೀನಾಂ ಚ ಕೋಪಃ ಸ್ಯಾತ್ ಇತಿ ಚೇತ್..... ತೈ. ಭಾ. ೧-೧೧ (ಭಾ. ಭಾ. ೭೬)

(೨) ಕಾರ್ಯಾನ್ತರಮೇವ ಸ್ಯಾತ್ ಇತಿ ಚೇತ್ । ''ತದೇವಾನುಪ್ರಾವಿಶತ್'' ಇತಿ ಜೀವಾತ್ಮರೂಪಂ ಕಾರ್ಯಂ ನಾಮರೂಪಪರಿಣತಂ ಕಾರ್ಯಾನ್ತರಮೇವ ಆಪದ್ಯತೇ ಇತಿ ಚೇತ್ ।..... ತೈ.ಭಾ. ೨-೬ (ಭಾ.ಭಾ. ೧೭೨)

(೩) ಪಿಣ್ಡಾದಿವ್ಯತಿರೇಕೇಣ ಮೃದಾದೇರಸತ್ತ್ವಾತ್ ಅಯುಕ್ತಮಿತಿ ಚೇತ್ । ಪಿಣ್ಡಾದಿಪೂರ್ವಕಾರ್ಯೋಪಮರ್ದೇ ಮೃದಾದಿಕಾರಣಂ ನೋಪಮೃದ್ಯತೇ ಘಟಾದಿ ಕಾರ್ಯಾನ್ತರೇಽಪಿ ಅನುವರ್ತತೇ ಇತ್ಯೇತತ್ ಅಯುಕ್ತಮ್ । ಪಿಣ್ಡಘಟಾದಿವ್ಯತಿರೇಕೇಣ ಮೃದಾದಿಕಾರಣಸ್ಯ ಅನುಪಲಮ್ಭಾತ್ ಇತಿ ಚೇತ್ ।.... ಬೃ. ಭಾ. ೧-೨-೧, (ಭಾ. ಭಾ. ೧೭)

(೪) ಅಪ್ರಸಿದ್ಧನಾಮಭಿಃ ಸಂಬೋಧನಮ್ ಅಯುಕ್ತಮ್ ಇತಿ ಚೇತ್ । ಸನ್ತಿ ಹಿ ಪ್ರಾಣವಿಷಯಾಣಿ ಪ್ರಸಿದ್ಧಾನಿ ಪ್ರಾಣಾದಿನಾಮಾನಿ । ತಾನಿ ಅಪೋಹ್ಯ ಅಪ್ರಸಿದ್ಧೈಃ ಬೃಹತ್ತ್ವಾದಿನಾಮಭಿಃ ಸಂಬೋಧನಮ್ ಅಯುಕ್ತಮ್ । ಲೌಕಿಕನ್ಯಾಯಾಪೋಹಾತ್ । ತಸ್ಮಾತ್ ಭೋಕ್ತುರೇವ ಸತಃ ಪ್ರಾಣಸ್ಯ ಅಪ್ರತಿಪತ್ತಿಃ ಇತಿ ಚೇತ್ । ....

ಬೃಭಾ. ೨-೧-೧೫ (ಭಾ. ಭಾ. ೨೮೨)

ಇಂಥ ಚೇದಂತವಾದ ಸಂಗ್ರಹವಾಕ್ಯಗಳೂ ಚೇದಂತವಾದ ಅವುಗಳ ವಿವರಣೆಗಳೂ ಈ ಎರಡೂ ಉಪನಿಷದ್ಭಾಷ್ಯಗಳಲ್ಲಿ ಎಲ್ಲೆಲ್ಲಿಯೂ ಕಾಣಬರುತ್ತವೆ. ಈ ಎರಡು ಉಪನಿಷದ್ಭಾಷ್ಯಗಳಿಗೆ ಮಾತ್ರವೇ ಸುರೇಶ್ವರಾಚಾರ್ಯರ ವಾರ್ತಿಕಗಳಿವೆ ಎಂಬುದನ್ನೂ ತೈತ್ತಿರೀಯದಲ್ಲಿ ಸಂಗ್ರಹವಾಗಿ ಹೇಳಿರುವ ವಿಷಯವನ್ನೂ ಸೇರಿಸಿಕೊಂಡು ಬೃಹದಾರಣ್ಯಕವಾರ್ತಿಕದಲ್ಲಿ ವಿಸ್ತರಿಸಿದೆ ಎಂಬುದನ್ನೂ ನಾವು ಮನದಂದುಕೊಳ್ಳಬೇಕು. ಉಪದೇಶಸಾಹಸ್ರಿಯ ಪದ್ಯಭಾಗದಿಂದ ಕೆಲವು ಶ್ಲೋಕಗಳನ್ನು ವಾರ್ತಿಕಕಾರರು ನೈಷ್ಕರ್ಮ್ಯಸಿದ್ಧಿಯಲ್ಲಿಯೂ ಬೃಹದಾರಣ್ಯಕ ವಾರ್ತಿಕದಲ್ಲಿಯೂ ಅಲ್ಲಲ್ಲಿ ಉದಾಹರಿಸಿಕೊಂಡಿರುವದೂ ನೈಷ್ಕರ್ಮ್ಯಸಿದ್ಧಿಯ ಅನೇಕಶ್ಲೋಕಗಳು ಬೃಹದಾರಣ್ಯಕವಾರ್ತಿಕದಲ್ಲಿ ಅಡಕವಾಗಿವೆಯೆಂಬುದೂ

ಬೃಹದಾರಣ್ಯಕಕರ್ತೃನಿರ್ಧಾರಣೆಗೆ ಪ್ರಯತ್ನಿಸುವವರಿಗೆ ಸಹಾಯಕಸಾಮಗ್ರಿಯನ್ನು ಒದಗಿಸಿಕೊಡಬಹುದೆಂದು ನಮ್ಮ ಭಾವನೆ. ನಾವು ಪುರಾತತ್ತ್ವಶೋಧನೆಗೆ ಹೊರಟಿಲ್ಲವಾದ್ದರಿಂದ ಈ ವಿಚಾರವನ್ನು ಇಲ್ಲಿಗೆ ನಿಲ್ಲಿಸಬೇಕಾಗಿದೆ.

ಆಚಾರ್ಯರವರ ಹಿಂದಿನ ವೇದಾಂತಿಗಳು

ಬೃಹದಾರಣ್ಯಕಭಾಷ್ಯವನ್ನು ಪರೀಕ್ಷಿಸುವಲ್ಲಿ ಆಚಾರ್ಯರಿಗಿಂತ ಹಿಂದಿನ ವೇದಾಂತಿಗಳಲ್ಲಿ ಕೆಲವರ ಪ್ರಕ್ರಿಯೆಗಳು ಅವರಿಗೆ ಸಮ್ಮತವಾಗಿರುತ್ತವೆಯೆಂದೂ ಮತ್ತೆ ಕೆಲವರ ಪ್ರಕ್ರಿಯೆಗಳು ಅವರಿಗೆ ಅಸಮ್ಮತವಾಗಿರುತ್ತವೆಯೆಂದೂ ಕಂಡು ಬರುತ್ತದೆ. ಈ ಭಾಷ್ಯಕಾರರು ತಮ್ಮ ಸಮ್ಮತಿಯನ್ನು ಕೊಟ್ಟು ಉದಾಹರಿಸಿರುವ ಆಚಾರ್ಯರುಗಳಲ್ಲಿ **ದ್ರವಿಡಾಚಾರ್ಯ**ರೆಂಬುವರು ಪ್ರಧಾನರಾಗಿರುತ್ತಾರೆ. ದ್ರವಿಡಾಚಾರ್ಯರ ವ್ಯಾಧಸಂವರ್ಧಿತರಾಜಪುತ್ರಾಖ್ಯಾಯಿಕೆಯ ದೃಷ್ಟಾಂತವನ್ನು ಮಧುಕಾಂಡ (೨-೧-೨, ಭಾ. ಭಾ. ೩೧೬) ರಲ್ಲಿ ಆತ್ಮೈಕತ್ವವಾದವು ಸಂಪ್ರದಾಯವನ್ನು ಬಲ್ಲವರ ಮತವೆಂದು ತಿಳಿಸುವದಕ್ಕಾಗಿ ಉದಾಹರಿಸಿದೆ. ಆನಂದಗಿರಿಗಳು ತಮ್ಮ ಟೀಕೆಯಲ್ಲಿ (ಆನಂದಾಶ್ರಮಮುದ್ರಣ, ಪು. ೨೯೮ರಲ್ಲಿ) ದ್ರವಿಡಾಚಾರ್ಯರ ಹೆಸರನ್ನು ಉಲ್ಲೇಖಿಸಿರುತ್ತಾರೆ. ಇದೇ ಆಚಾರ್ಯರನ್ನು ಮಾಂಡೂಕ್ಯಭಾಷ್ಯದಲ್ಲಿಯೂ (ಮಾಂ. ಕಾ. ೨-೨, ಭಾ. ಭಾ. ೧೧೫) ಸಮ್ಮತಿಗಾಗಿ ಉದಾಹರಿಸಿರುವದು ಕಂಡುಬರುತ್ತದೆ.

ಭಾಷ್ಯಕಾರರು ಖಂಡನೆಗೆ ತೆಗೆದುಕೊಂಡಿರುವವರ ಮತಗಳನ್ನು ಶಬ್ದಾನುಕ್ರಮಣಿಕೆಯಲ್ಲಿ 'ಕೇಚಿತ್' ಎಂಬ ಶಬ್ದದ ವಿವರಣೆಯಲ್ಲಿ ಕಾಣಬಹುದು. ಇಂಥ ಮತಗಳಲ್ಲಿ ಕೆಲವನ್ನು ವಾಚಕರು ಮನದಂದುಕೊಳ್ಳಲೆಂದು ಇಲ್ಲಿ ಸಂಗ್ರಹಿಸುವೆವು :

(೧) ಬ್ರಹ್ಮವನ್ನು ಆರಾಧನೆಮಾಡಿ ಬ್ರಹ್ಮಸ್ವರೂಪವನ್ನು ಕಾಲಾಂತರದಲ್ಲಿ ಪಡೆದುಕೊಳ್ಳಬೇಕಾಗಿರುವದೆಂಬ ಭಾಗವತಮತವನ್ನು ಇಲ್ಲಿ (೨-೧-೨೦ ; ಭಾ ಭಾ. ೩೧೦ರಲ್ಲಿ) ಉದಾಹರಿಸಿದೆ. (೨) ಜೀವನು ಪರಮಾತ್ಮನ ಅವಸ್ಥೆ ಶಕ್ತಿ ವಿಕಾರ- ಎಂದು ವರ್ಣಿಸುತ್ತಿದ್ದ ಮೂರು ಬೇರೆಬೇರೆಯ ಮತಗಳನ್ನೂ ಇಲ್ಲಿ (೨-೧-೨೦, ಭಾ.ಭಾ. ೩೧೭ ; ೩-೮-೧೨ , ಭಾ. ಭಾ. ೯೩) ಖಂಡನೆಗಾಗಿ ಪರಾಮರ್ಶಿಸಿದೆ. (೩) 'ಆತ್ಮೇತ್ಯೇವೋಪಾಸೀತ' (ಆತ್ಮನೆಂದೇ ಉಪಾಸನೆಮಾಡ

ಬೇಕು) ಎಂಬ (೧-೪-೭)ವಾಕ್ಯವು ಉಪಾಸನೆಯನ್ನು ವಿಧಿಸುತ್ತದೆಯೆಂದೂ ಆತ್ಮಸ್ವರೂಪಬೋಧಕವಾಕ್ಯಗಳು ಉಪಾಸ್ಯಸ್ವರೂಪವನ್ನು ತಿಳಿಸುತ್ತವೆಯೆಂದೂ ಈ ಉಪಾಸನೆಯಿಂದ ಮೋಕ್ಷವು ಅಥವಾ ಅವಿದ್ಯಾನಿವೃತ್ತಿಯು ಫಲಿಸುತ್ತದೆ ಎಂದೂ ಹೇಳುವವರ ಮತವೊಂದನ್ನೂ (೧-೪-೭, ಭಾ. ಭಾ. ೧೩೫) (೪) ವೇದಾಂತವಾಕ್ಯಜನ್ಯಜ್ಞಾನವನ್ನು ಆವೃತ್ತಿಮಾಡಿದರೆ ವಿಶಿಷ್ಟವಾದ ಮತ್ತೊಂದು ಜ್ಞಾನವು ಹುಟ್ಟಿ ಅವಿದ್ಯೆಯನ್ನು ಕಳೆಯುತ್ತದೆ ಎಂಬವರ ಮತೊಂದು ಮತವನ್ನೂ (ಭಾ. ಭಾ. ೧೩೬) ಇಲ್ಲಿ ಉದಾಹರಿಸಿ ಖಂಡಿಸಿರುತ್ತದೆ.

ಮೇಲೆ ಸಂಕ್ಷೇಪವಾಗಿ ತಿಳಿಸಿರುವ ಮತಗಳಲ್ಲಿ ಯಾವಯಾವದನ್ನು ಯಾರು ಯಾರು ಅಂಗೀಕರಿಸಿದ್ದರೆಂಬುದು ನಮಗೆ ನಿಷ್ಕೃಷ್ಟವಾಗಿ ತಿಳಿದಿರುವದಿಲ್ಲ ವಾದರೂ ಆಚಾರ್ಯರ ಹಿಂದೆಯೇ ವೇದಾಂತಿಗಳಲ್ಲಿ ಮತಭೇದಗಳು ಉಂಟಾಗಿದ್ದವೆಂಬುದಕ್ಕೆ ಇವು ಸಾಕ್ಷಿಯಾಗಿವೆ. ಆದರೆ ಉಪಾಸನಾವಾದಿಗಳ - ಲ್ಲಾಗಲಿ ಜ್ಞಾನವಾದಿಗಳಲ್ಲಾಗಲಿ ಆತ್ಮೈಕತ್ವವನ್ನೇ ಉಪನಿಷತ್ತುಗಳಲ್ಲಿ ಉಪದೇಶಿಸಿದೆ ಎಂಬ ವಿಷಯಕ್ಕೆ ಆಚಾರ್ಯರ ಕಾಲದಲ್ಲಾಗಲಿ ಅವರ ಹಿಂದೆಯಾಗಲಿ ಯಾವ ಅಭಿಪ್ರಾಯಭೇದವೂ ಇರಲಿಲ್ಲವೆಂಬ ಬಗ್ಗೆ ಈ ಉಪನಿಷದ್ಭಾಷ್ಯದಲ್ಲಿ ಒಂದು ವಾಕ್ಯವಿದೆ. ಅದನ್ನು ಇಲ್ಲಿ ವಾಚಕರ ಮುಂದೆ ಇಡುವೆವು : "ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತೇ ಇತಿ ಅವಿಪ್ರತಿಪತ್ತಿಃ ಸರ್ವೇಷಾಮ್ ಉಪನಿಷದ್ವಾದಿನಾಮ್ ॥" (೨-೧-೨೦, ಭಾ.ಭಾ. ೩೧೬). **ಎಲ್ಲಾ ಉಪನಿಷತ್ತುಗಳಲ್ಲಿಯೂ ವಿಜ್ಞಾನಾತ್ಮನಿಗೂ ಪರಮಾತ್ಮನಿಗೂ ಏಕತ್ವಪ್ರತ್ಯಯವನ್ನೇ ಉಪದೇಶಿಸಿದೆ ಎಂಬ ವಿಷಯದಲ್ಲಿ ಉಪನಿಷದ್ವಾದಿಗಳಲ್ಲಿ ಯಾರಿಗೂ ವಿರುದ್ಧಾಭಿಪ್ರಾಯ ವಿರುವದಿಲ್ಲ** - ಎಂದು ಇಲ್ಲಿ ಹೇಳಿರುತ್ತದೆ. ಆಚಾರ್ಯರ ಕಾಲಕ್ಕೆ ದ್ವೈತಿವೇದಾಂತಿಗಳೇ ಇರಲಿಲ್ಲ ಎಂಬ ಉಪಸಿದ್ಧಾಂತವೊಂದು ಇದರಿಂದ ಹೊರಡುತ್ತದೆ.

ಭಾಷ್ಯಕಾರರು ಪೂರ್ವಪಕ್ಷವಾಗಿ ಪರಾಮರ್ಶಿಸಿರುವ ಮತಗಳಲ್ಲಿ ಬಹು ಮುಖ್ಯವಾದದ್ದು **ಭರ್ತೃಪ್ರಪಂಚರಮತವು.** ಭರ್ತೃಪ್ರಪಂಚರು ಮಾಧ್ಯಂದಿನ ಪಾಠದ ಬೃಹದಾರಣ್ಯಕದ ಮೇಲೆ ವಿಸ್ತಾರವಾದ ಭಾಷ್ಯವೊಂದನ್ನು ಬರೆದಿದ್ದ ರೆಂದೂ ತಮ್ಮ ಪ್ರಕ್ರಿಯೆಯ ಅಸಾಧಾರಣಸ್ವರೂಪವನ್ನು ತಿಳಿಸುವದಕ್ಕಾಗಿ ಆಚಾರ್ಯರು ಈ ಉಪನಿಷತ್ತಿನ ಕಾಣ್ವಪಾಠವನ್ನು ಅನುಸರಿಸಿ ಭಾಷ್ಯವನ್ನು

ಬರೆದರೆಂದೂ ಆನಂದಗಿರಿಯ ಟೀಕೆಯಿಂದ ತಿಳಿದುಬರುತ್ತದೆ. ಮಧುಕಾಂಡದಲ್ಲಿ ನಮ್ಮ ಭಾಷ್ಯಕಾರರು ಭರ್ತೃಪ್ರಪಂಚರ ಮತವನ್ನು ಖಂಡಿಸಿರುವ ಸ್ಥಲಗಳನ್ನು ಟೀಕಾನುಸಾರವಾಗಿ ನಾವು ನಿರ್ದೇಶಿಸಿರುತ್ತೇವೆ ; ಶಬ್ದಾನುಕ್ರಮಣಿಕೆಯಲ್ಲಿ 'ಭರ್ತೃಪ್ರಪಂಚ' ಎಂಬ ಶಬ್ದದ ವಿವರಣೆಯಲ್ಲಿ ಇವನ್ನು ಸಂಗ್ರಹಿಸಿರುತ್ತದೆ. ಈ ಉಪನಿಷದ್ಭಾಷ್ಯದ ಎರಡನೆಯ ಸಂಪುಟದ ಪೀಠಿಕೆಯಲ್ಲಿ ಭರ್ತೃಪ್ರಪಂಚರ ಪ್ರಕ್ರಿಯೆಗೂ ಭಾಷ್ಯಕಾರರ ಪ್ರಕ್ರಿಯೆಗೂ ಇರುವ ತಾರತಮ್ಯವನ್ನು ತಿಳಿಸಬೇಕೆಂದಿರುವೆವು.

ಉಪನಿಷತ್ತಿನ ಪ್ರತಿಪಾದ್ಯವಿಷಯ

ಈ ಉಪನಿಷತ್ತು ಮಧುಕಾಂಡ, ಯಾಜ್ಞವಲ್ಕೀಯಕಾಂಡ, (ಮುನಿ ಕಾಂಡ), ಖಿಲಕಾಂಡ - ಎಂಬ ಮೂರು ಕಾಂಡಗಳ ರೂಪದಲ್ಲಿರುತ್ತದೆ. ಈಗ ನಾವು ಹೊರಕ್ಕೆ ತಂದಿರುವ ಈ ಒಂದನೆಯ ಸಂಪುಟದಲ್ಲಿ ಮಧುಕಾಂಡವು ಪೂರ್ಣವಾಗಿರುತ್ತದೆ. ಮಧುಕಾಂಡವು ಆಗಮಪ್ರಧಾನವಾಗಿ (ಎಂದರೆ ಉಪದೇಶಪ್ರಧಾನವಾಗಿ)ಯೂ ಯಾಜ್ಞವಲ್ಕೀಯಕಾಂಡವು ಉಪಪತ್ತಿಪ್ರಧಾನವಾಗಿಯೂ ಅದ್ವೈತವನ್ನು ತಿಳಿಸುತ್ತದೆ. ಖಿಲಕಾಂಡದಲ್ಲಿ ಆತ್ಮನನ್ನು ಸೋಪಾಧಿಕ ದೃಷ್ಟಿಯಿಂದ ಉಪಾಸನೆಮಾಡ ಬೇಕಾದ ಕೆಲವು ಪ್ರಕಾರಗಳನ್ನು ತಿಳಿಸಿದೆ. ಕಾಂಡತ್ರಯವೂ ನೇರಾಗಿ ಅಥವಾ ಪರಂಪರೆಯಿಂದ ಅದ್ವೈತಜ್ಞಾನದಿಂದಲೇ ಮುಕ್ತಿಯಾಗುವದೆಂಬುದನ್ನು ಬೇರೆಬೇರೆಯ ಪ್ರಕಾರಗಳಿಂದ ತಿಳಿಸುತದೆ.

ಮಧುಕಾಂಡದಲ್ಲಿ ಒಟ್ಟು ನಾಲ್ಕು ಅಧ್ಯಾಯಗಳಿವೆಯಾದರೂ ಮೊದಲನೆಯ ಎರಡನೆಯ ಅಧ್ಯಾಯಗಳಲ್ಲಿ ಪ್ರವರ್ಗ್ಯಕರ್ಮಾಂಗವಾದ ಮಧುವನ್ನು ಮಾತ್ರ ತಿಳಿಸಿರುವದರಿಂದ (ಭಾ. ಭಾ. ೪೦೧) ಆಚಾರ್ಯರು ಅದಕ್ಕೆ ಭಾಷ್ಯವನ್ನು ಬರೆದಿಲ್ಲ. ಆತ್ಮಜ್ಞಾನವೆಂಬ ಕರ್ತವ್ಯವನ್ನು ತಿಳಿಸಿರುವ ಮೂರನೆಯ ನಾಲ್ಕನೆಯ ಅಧ್ಯಾಯಗಳಿಗೆ ಮಾತ್ರ ಭಾಷ್ಯವನ್ನು ರಚಿಸಿರುತ್ತಾರೆ. ಕಾಣ್ವಪಾಠದಂತೆ ಉಪನಿಷತ್ತಿನ ಮೊದಲನೆಯ ಎರಡು ಬ್ರಾಹ್ಮಣಗಳಲ್ಲಿ ಅಶ್ವಮೇಧೋಪಾಸನೆಯನ್ನು ತಿಳಿಸುವ ಭಾಗವಿದೆ ; ಈ ಬ್ರಾಹ್ಮಣಗಳು ಮಾಧ್ಯಂದಿನದ ಅಗ್ನಿರಹಸ್ಯವೆಂಬ ಹತ್ತನೆಯ ಕಾಂಡದಲ್ಲಿಯೇ ಸೇರುತ್ತವೆಯಾದರೂ ಈ ಉಪಾಸನೆಯನ್ನು ಇಲ್ಲಿ ಹೇಳಿರುವದು ಅಶ್ವಮೇಧಕರ್ಮದಲ್ಲಿ ಅಧಿಕಾರಿಗಳಲ್ಲದ ವೈದಿಕರು ಕೇವಲೋಪಾಸನೆಯಿಂದಲೇ ಅದರ ಫಲವನ್ನು ಪಡೆದುಕೊಳ್ಳಬಹುದೆಂದು ತಿಳಿಸುವದಕ್ಕೆ

ಎಂದು (ಭಾ. ಭಾ. ೬) ಆಚಾರ್ಯರು ಅಭಿಪ್ರಾಯಪಟ್ಟಿರುತ್ತಾರೆ. ಹೀಗೆ ಉಪಾಸನೆಗೇ ಕರ್ಮದ ಹಂಗಿಲ್ಲವೆಂದದ್ದರಿಂದ ಆತ್ಮಜ್ಞಾನವು ಸರ್ವಥಾ ನಿರಪೇಕ್ಷವಾಗಿಯೇ ಪುರುಷಾರ್ಥವನ್ನು ಕೊಡುವದೆಂಬ ಶಾಂಕರಪ್ರಕ್ರಿಯೆಗೆ ಬಲವು ಬಂದಂತೆ ಆಗಿರುತ್ತದೆ.

ಈ ಉಪನಿಷತ್ತಿನ ಒಂದನೆಯ ಅಧ್ಯಾಯದಲ್ಲಿ ಮೊದಲನೆಯ ನಾಲ್ಕು ಬ್ರಾಹ್ಮಣಗಳಲ್ಲಿ ಒಟ್ಟು ಉಪನಿಷತ್ತಿನ ಅರ್ಥವನ್ನು ಸಂಗ್ರಹವಾಗಿ ತಿಳಿಸಿರುತ್ತದೆ. ಕರ್ಮೋಪಾಸನೆಗಳ ಫಲವು ಸ್ಥೂಲವೂ ವ್ಯಕ್ತವೂ ಅನಿತ್ಯವೂ ಆಗಿರುವದರಿಂದ ಅದರಲ್ಲಿ ವಿರಕ್ತರಾದವರಿಗೆ ಜ್ಞಾನದಲ್ಲಿ ಅಧಿಕಾರವೆಂದು ತಿಳಿಸಿರುವದು ಈ ಸಂಗ್ರಹೋಕ್ತಿಯ ಒಂದು ಭಾಗವು (ಭಾ. ಭಾ. ೫, ೬, ೯೭, ೧೦೧), ಸಾಧ್ಯಸಾಧನರೂಪವಾದ ಜಗತ್ತೆಲ್ಲವೂ ವ್ಯಾಕೃತ, ಅವ್ಯಾಕೃತ - ಎಂಬ ಎರಡು ರೂಪಗಳಲ್ಲಿ ತೋರಿಕೊಳ್ಳುತ್ತಿರುವದು ; ಇದರಲ್ಲಿ ಈಶ್ವರ, ಕರ್ತೃಭೋಕ್ತೃಗಳಾದ ಜೀವರುಗಳು, ಕ್ರಿಯಾಕಾರಕಫಲಗಳು- ಎಲ್ಲವೂ ಸೇರಿರುತ್ತವೆ (ಭಾ. ಭಾ. ೧೧೭, ೧೧೯, ೧೨೦, ೧೨೧) ಇದು ವ್ಯಾಕೃತವಾದಾಗ ಈಶ್ವರನು ಪ್ರಾಣಿಗಳ ಕಾರ್ಯಕರಣಸಂಘಾತಗಳಲ್ಲಿ ಪ್ರವಿಷ್ಟನಾಗಿರುತ್ತಾನೆ. ಅವನ ಸಂಪೂರ್ಣಸ್ವರೂಪವನ್ನು ಅರಿಯಲಾರದೆ ನಾನು ಪ್ರಾಣಿಯು, ವಕ್ತೃ, ದ್ರಷ್ಟೃ, ಶ್ರೋತೃ ಮಂತೃ - ಎಂದು ಮುಂತಾಗಿ ಪರಿಚ್ಛಿನ್ನಭಾವನೆಮಾಡಿಕೊಳ್ಳುವದು ಅವಿದ್ಯೆ (ಭಾ. ಭಾ. ೧೩೧, ೧೩೨) ನಾನು ಈ ದ್ರಷ್ಟೃಶ್ರೋತ್ರಾದಿರೂಪಗಳಲ್ಲೆಲ್ಲ ವ್ಯಾಪಿಸಿರುವ ಚೈತನ್ಯಸ್ವರೂಪನಾದ ಆತ್ಮನೇ ಎಂದು ಪೂರ್ಣರೂಪದಿಂದ ಅರಿತುಕೊಳ್ಳುವದು ವಿದ್ಯೆ (ಭಾ.ಭಾ. ೧೩೩, ೧೪೫) ಮಿಗಿಲಿಲ್ಲದಷ್ಟು ಪ್ರಿಯವಾಗಿರುವ (ಭಾ. ಭಾ. ೧೪೭) ಈ ಬ್ರಹ್ಮವೇ ನನ್ನ ಆತ್ಮನು ಎಂಬ ತಿಳಿವಳಿಕೆಯ ರೂಪವಾದ ವಿದ್ಯೆಯು ಬಂದರೆ ಎಲ್ಲವನ್ನೂ ತಿಳಿದಂತೆ (ಭಾ.ಭಾ. ೧೪೪). ಬ್ರಹ್ಮವನ್ನರಿತವನು ದೇವಾದಿಗಳಿಗೂ ಆತ್ಮನಾಗಿರುವದರಿಂದ ಸ್ವತಂತ್ರನು (ಭಾ.ಭಾ. ೧೭೦) ; ಅದನ್ನರಿಯದವನು ದೇವಾದಿಗಳಿಗೆ ಪಶುವಿನಂತೆ ಉಪಕಾರಮಾಡಿಕೊಂಡಿರುವದರಿಂದ ಅಸ್ವತಂತ್ರನು (ಭಾ.ಭಾ. ೧೭೬) -ಎಂದು ವಿದ್ಯಾವಿದ್ಯೆಗಳನ್ನು ವಿಂಗಡಿಸಿ ತೋರಿಸಿರುವದು ಈ ಸಂಗ್ರಹಗ್ರಂಥದ ಎರಡನೆಯ ಭಾಗವು.

ಈ ವಿದ್ಯಾವಿದ್ಯೆಗಳನ್ನು ಉಪನಿಷತ್ತಿನಲ್ಲಿ ಮುಂದೆ ವಿವರಿಸಿದೆ (ಭಾ. ಭಾ. ೧೭೭) ಒಂದನೆಯ ಅಧ್ಯಾಯದ ಆರನೆಯ ಬ್ರಾಹ್ಮಣವು ಪೂರ್ಣವಾಗುವ

ವರೆಗೂ ಅವಿದ್ಯೆಯ ವಿಷಯವನ್ನೇ ವಿವರಿಸಿದೆ. ಎರಡನೆಯ ಅಧ್ಯಾಯದಲ್ಲಿ ವಿದ್ಯಾವಿಷಯವನ್ನು ವಿವರಿಸಿದೆ. ಅವಿದ್ಯಾವಿಷಯವು ಶರೀರವೆಂಬ ಕಾರ್ಯ, ಪ್ರಾಣನೆಂಬ ಕರಣ -ಎಂದು ಎರಡು ಬಗೆಯಾಗಿರುವದು. ಕರಣಾತ್ಮನಾದ ಪ್ರಾಣನು ಸಮಷ್ಟಿರೂಪನಾಗಿ ಒಬ್ಬನೇ ಆದರೂ ಸೂರ್ಯಾದಿಬಾಹ್ಯಾಧಾರಗಳಲ್ಲಿ ಬೇರೇಬೇರೆಯಾಗಿದ್ದುಕೊಂಡು ನಾನಾರೂಪನಾಗಿಯೂ ಇರುತ್ತಾನೆ. ಇವನಿಗಿಂತ ಬೇರೆಯಾದ ಆತ್ಮನೇ ಇಲ್ಲ -ಎಂಬ ಪೂರ್ವಪಕ್ಷವನ್ನು ತೆಗೆದು (ಭಾ.ಭಾ. ೨೬೦) ಒಂದನೆಯ ಬ್ರಾಹ್ಮಣದಲ್ಲಿ ಹೇಳಿರುವದೇನೆಂದರೆ : ಈ ಪ್ರಾಣನಿಗಿಂತಲೂ ಅಧಿಕನಾಗಿ ನಿರ್ವಿಶೇಷದಿಂದ ಅಸಂಸಾರಿಯಾದ ಪರಮಾತ್ಮನೊಬ್ಬನು ಇರುತ್ತಾನೆ. ಜಾಗ್ರತ್ತಿನಲ್ಲಿರುವ ನಮ್ಮ ಕಾರ್ಯಕರಣಗಳೂ ಕನಸಿನಲ್ಲಿ ತೋರುವ ವಾಸನೆಗಳೂ ಅವನಿಗೆ ದೃಶ್ಯವಾಗಿರುತ್ತವೆ (ಭಾ. ಬಾ. ೨೭೯). ಸುಷುಪ್ತಿಯಲ್ಲಿ ಅವನಲ್ಲಿಯೇ ಜೀವನು ಒಂದಾಗಿರುತ್ತಾನೆ; ಆಗ ಅವನು ಕ್ರಿಯಾಕಾರಕ ಫಲಗಳಿಗಿಂತ ವಿಲಕ್ಷಣನೂ (ಭಾ.ಭಾ. ೨೮೮) ಅಸಂಸಾರಿಯೂ (ಭಾ.ಬಾ. ೨೮೯, ೨೯೮, ೩೦೦) ಆಗಿರುತ್ತಾನೆ. ಸುಷುಪ್ತಿಯಲ್ಲಿ ಎಲ್ಲಾ ಪ್ರಾಣಗಳೂ ಲೋಕಗಳೂ ದೇವತೆಗಳೂ ಭೂತಗಳೂ ಈ ಆತ್ಮನಲ್ಲಿ ಲಯವಾಗಿದ್ದು ಬೆಂಕಿಯ ಕಿಡಿಗಳು ಸಿಡಿದುಬರುವಂತೆ ಎಚ್ಚರವಾಗುತ್ತಲೂ ಹೊರತೋರಿಕೊಳ್ಳುವವು (ಭಾ.ಭಾ. ೩೦೩). ಈ ಪರಮಾತ್ಮನು ಸತ್ಯಗಳ ಸತ್ಯವು ; ಏಕೆಂದರೆ ಪ್ರಾಣಗಳು ಸತ್ಯವು, ಇವನು ಅವುಗಳ ಸತ್ಯವಾಗಿರುತ್ತಾನೆ. (೩೦೪).

ಎರಡು ಮೂರನೆಯ ಬ್ರಾಹ್ಮಣಗಳಲ್ಲಿ ಪ್ರಾಣಗಳ ಸ್ವರೂಪವನ್ನೂ ಪ್ರಾಣಗಳು ಸತ್ಯವೆಂಬುದು ಹೇಗೆಂಬುದನ್ನೂ ತಿಳಿಸಿ ಪರಮಾತ್ಮನು ಸತ್ಯದ ಸತ್ಯವು ಹೇಗೆಂಬುದನ್ನು ತಿಳಿಸಿದೆ (ಭಾ.ಭಾ. ೩೪೫). ಪರಮಾತ್ಮನನ್ನು ನಿರ್ವಿಶೇಷ ರೂಪದಿಂದ 'ನೇತಿ ನೇತಿ' ಎಂದು ಮಾತ್ರ ತಿಳಿಸಬಹುದು. (ಭಾ.ಭಾ. ೩೩೪, ೩೩೫, ೩೪೭, ೩೪೮, ೩೫೦) ಎಂದು ಹೇಳಿದೆ. ನಾಲ್ಕನೆಯ ಬ್ರಾಹ್ಮಣದಲ್ಲಿ ಸರ್ವಕರ್ಮಸಂನ್ಯಾಸಸಹಿತವಾದ ಜ್ಞಾನವೇ ಮೋಕ್ಷಕ್ಕೆ ಸಾಧನವೆಂಬುದನ್ನು (ಭಾ.ಭಾ. ೩೫೩)ತಿಳಿಸಿದೆ. ಆತ್ಮನು ಎಲ್ಲಕ್ಕಿಂತಲೂ ಪ್ರಿಯನೆಂಬುದನ್ನೂ (ಭಾ.ಭಾ. ೩೫೮) ಅವನನ್ನು ಅರಿತರೆ ಎಲ್ಲವನ್ನೂ ಅರಿತಂತೆ ಎಂಬದನ್ನೂ (ಭಾ.ಭಾ. ೩೫೯) ಸದೃಷ್ಟಾಂತವಾಗಿ (ಭಾ.ಭಾ. ೩೬೧ರಿಂದ ೩೬೯) ತಿಳಿಸಿಕೊಟ್ಟಿದೆ. ಆತ್ಮನೇ ಎಲ್ಲವೂ ಎಂಬುದನ್ನು ಮನಗಂಡ ಜೀವನು ಲವಣಸಮುದ್ರದಲ್ಲಿ ಕರಗುವ

ಉಪ್ಪಿನಂತೆ ಪರಮಾತ್ಮನಲ್ಲಿ ಸೇರಿ ಜೀವನ್ಮುಕ್ತನಾಗಿರುವನು (ಭಾ.ಭಾ. ೩೭೧, ೩೭೨), ಅವನ ದೃಷ್ಟಿಯಿಂದ ಜ್ಞಾತೃಜ್ಞೇಯಗಳೆಂಬ ವಿಭಾಗವು ಇರುವದಿಲ್ಲ (ಭಾ. ಭಾ. ೩೭೬, ೩೭೭) - ಎಂದು ತಿಳಿಸಿದೆ. ಐದನೆಯ ಬ್ರಾಹ್ಮಣದಲ್ಲಿ ಪೃಥಿವ್ಯಾದಿ ಭೂತಗಳೂ ದೇವತಾಗಣಗಳೂ ಕಾರ್ಯಕರಣಸಂಘಾತರೂಪವನ್ನು ಧರಿಸಿ ಪರಸ್ಪರವಾಗಿ ಉಪಕಾರ್ಯೋಪಕಾರಕವಾಗಿರುತ್ತವೆಯಾದ್ದರಿಂದ ಮಧು ; ಆದ್ದರಿಂದ ಅವು ಏಕಕಾರಣಪೂರ್ವಕವಾಗಿರಬೇಕು (ಭಾ.ಭಾ. ೩೭೯, ೩೮೧)., ಕರ್ಮಕ್ಕೆ ಹೇತುವಾದ ಸತ್ಯಧರ್ಮಗಳೂ ಸಾಮಾನ್ಯವಿಶೇಷರೂಪದಿಂದ ಹೀಗೆಯೇ ಮಧು (ಭಾ.ಭಾ. ೩೯೩, ೩೯೪) ; ಮನುಷ್ಯಾದಿ ಜಾತಿಯೂ, ತದ್ವಿಶಿಷ್ಟವಾದ ಕಾರ್ಯಕರಣಸಂಘಾತಸಾಮಾನ್ಯವೂ, ಅದರೊಳಗಿನ ಲಿಂಗ ಶರೀರವೂ, ಅವುಗಳುಳ್ಳ ವಿಜ್ಞಾನಮಯನೂ ಹೀಗೆಯೇ ಪರಸ್ಪರವಾಗಿ ಮಧು (ಭಾ.ಭಾ. ೩೯೬). ಈ ವಿಜ್ಞಾನಮಯನು ಪರಮಾತ್ಮನಿಗಿಂತ ಭಿನ್ನನಲ್ಲ ವೆಂದು ಅರಿತುಕೊಂಡ ಜ್ಞಾನಿಯು ಪರಮಾತ್ಮಾಭಿನ್ನನಾಗಿರುವದರಿಂದ ಸರ್ವ ಭೂತಾಧಿಪತಿಯೂ ಸರ್ವರಿಗೂ ರಾಜನೂ ಆಗಿರುತ್ತಾನೆ ; ಅವನಲ್ಲಿಯೇ ಸರ್ವಪ್ರಾಣಗಳೂ, ಸರ್ವಾತ್ಮರುಗಳೂ, ಹೆಚ್ಚೇಕೆ ? ಸರ್ವಜಗತ್ತೂ ಹೊಂದಿಕೊಂಡಿರುತ್ತದೆ - ಎಂದು ಆತ್ಮವಿದ್ಯೆಯನ್ನೇ ಪ್ರಕಾರಾಂತರದಿಂದ ತಿಳಿಸಿದೆ.

ಆರನೆಯ ಬ್ರಾಹ್ಮಣದಲ್ಲಿ ಈ ವಿದ್ಯೆಯನ್ನು ಪ್ರಚಾರಕ್ಕೆ ತಂದಿರುವ ಗುರು ಶಿಷ್ಯಪರಂಪರೆಯ ಋಷಿಗಳ ವಂಶವನ್ನು ಕೊಟ್ಟಿರುತ್ತದೆ.

ಭಾಷ್ಯದ ಚರ್ಚೆಗಳು

ಮಧುಕಾಂಡವು ಆಗಮಪ್ರಧಾನವಾಗಿರುವದರಿಂದಲೇ ಇದರಲ್ಲಿ ಕೆಲವು ಯುಕ್ತಿಗಳೂ ಇರುವವೆಂದಾಗುವದಷ್ಟೆ ಈ ಯುಕ್ತಿಗಳನ್ನು ಭಾಷ್ಯಕಾರರು ವಿಸ್ತಾರವಾಗಿ ಚರ್ಚಿಸಿರುತ್ತಾರೆ. ಇಂಥ ಚರ್ಚೆಗಳನ್ನು ಮನನಮಾಡುವದರಿಂದ ಜಿಜ್ಞಾಸುಗಳಿಗೆ ವೇದಾಂತಾರ್ಥದ ವಿಷಯದಲ್ಲುಂಟಾಗಬಹುದಾದ ಸಂಶಯಗಳೆಲ್ಲ ನಿವಾರಣೆಯಾಗುವವು. ಈ ಚರ್ಚೆಗಳು ಮತ್ತಷ್ಟು ಸ್ಫುಟವಾಗುವದಕ್ಕೆಂದು ನಾವು ಅವನ್ನು ತಲೆಬರಹಗಳಿಂದ ವಿಂಗಡಿಸಿ ವಾರ್ತಿಕ ಮತ್ತು ಟೀಕೆ – ಇವುಗಳ ಸಹಾಯದಿಂದ ಟಿಪ್ಪಣಿಗಳನ್ನು ಜೋಡಿಸಿರುತ್ತೇವೆ.

ಮಧುಕಾಂಡದಲ್ಲಿ ಪರಾಮೃಷ್ಟವಾಗಿರುವ ಋಕ್ಕುಗಳು

ಈ ಕಾಂಡದಲ್ಲಿ ತತ್ತಾತ್ಪರ್ಯವನ್ನು ಸಂಗ್ರಹಿಸಿ ತಿಳಿಸಿರುವ ಕೆಲವು ಋಗ್ವೇದ ಮಂತ್ರಗಳ ಪರಾಮರ್ಶವಿರುತ್ತದೆ. ಅವುಗಳನ್ನು ವಾಚಕರು ಮನದಂದುಕೊಳ್ಳುವದರಿಂದ ಲಾಭವುಂಟು.

(೧) **ವಾಮದೇವಋಷಿ**ಯು ಕಂಡುಹಿಡಿದ (ಋ.ಸಂ.ಮಂ. ೪-೨೬-೧) ''ಅಹಂ ಮನುರಭವಮ್'' ಎಂಬ ಋಕ್ಕಿಗೆ ದೇವತೆಯು ಇಂದ್ರನು. ಈ ಋಕ್ಕಿರುವ ಸೂಕ್ತದಲ್ಲಿ ಇಂದ್ರನು ತನ್ನ ಪರಾಕ್ರಮವನ್ನು ಹೇಳಿಕೊಂಡಿರುತ್ತಾನೆ. ವಾಮದೇವನು ಈ ಮಂತ್ರವನ್ನು ಕಂಡುಹಿಡಿದಾಗ ನಾನು ಬ್ರಹ್ಮವೆಂಬ ಅರಿವು ಅವನಿಗಿತ್ತು ಎಂದು ಈ ಉಪನಿಷತ್ತಿನಲ್ಲಿ (೧-೪-೧೦) ಹೇಳಿದೆ.

(೨) **ಕಕ್ಷೀವಂತ**ನೆಂಬ ಋಷಿಯಿಂದ ದೃಷ್ಟವಾಗಿರುವ (ಋ. ಸಂ. ಮಂ. ೧-೧೧೬-೧೨) ''ತದ್ವಾಂ ನರಾ ಸನಯೇ'' ಎಂಬ ಋಕ್ಕೂ (ಋ.ಸಂ. ಮಂ. ೧-೧೧೭-೨೨) 'ಅಥರ್ವಣಾಯಾಶ್ವಿನಾ ದಧೀಚೇ'' ಎಂಬ ಋಕ್ಕೂ ಅಶ್ವಿನೀ ದೇವತೆಗಳ ಪರವಾಗಿರುತ್ತವೆ. ಇವನ್ನು ಈ ಉಪನಿಷತ್ತಿನಲ್ಲಿಯೂ ಆ ದೇವತೆಗಳನ್ನು ಸಂಬೋಧಿಸಿಯೇ ಹೇಳಿದೆಯಾದರೂ ಪ್ರವರ್ಗ್ಯಕರ್ಮದ ಮತ್ತು ಆತ್ಮಜ್ಞಾನವೆಂಬ ಕಕ್ಷ್ಯದ ಪರಾಮರ್ಶಕ್ಕೆ ಇವನ್ನು ಉಪಯೋಗಿಸಿಕೊಂಡಿರುತ್ತದೆ.

(೩) **ಗರ್ಗ**ನೆಂಬ ಋಷಿಯಿಂದ ದೃಷ್ಟವಾಗಿರುವ (ಋ.ಸಂ.ಮಂ. ೬-೪೭-೧೮) ''ರೂಪಂ ರೂಪಂ ಪ್ರತಿರೂಪೋ ಬಭೂವ'' ಎಂಬ ಮಂತ್ರವು ಋಗ್ವೇದದಲ್ಲಿ ಇಂದ್ರದೇವತಾಕವಾಗಿರುತ್ತದೆ. ಆದರೆ ಉಪನಿಷತ್ತಿನಲ್ಲಿ (೨-೫-೧೯) ಪರಮಾತ್ಮನು ಉಪಾಧಿಗಳಿಂದ ನಾನಾರೂಪವಾಗಿ ಕಾಣುವನೆಂದು ತಿಳಿಸುವದಕ್ಕೆ ಉಪಯೋಗಿಸಿಕೊಂಡಿದೆ.

ಹೀಗೆ ಸಂಹಿತೆಯ ಮಂತ್ರಗಳನ್ನು ತತ್ತಾತ್ಪರ್ಯಪರವಾಗಿ ಉಪಯೋಗಿಸುವದು ಉಪನಿಷತ್ತುಗಳ ಶೈಲಿಯಾಗಿರುತ್ತದೆ. ಈ ಪದ್ಧತಿಯು ಸರಿಯಲ್ಲವೆಂದೂ ಋಷಿಯ ಮನಸ್ಸಿನಲ್ಲಿ ಈ ಅಭಿಪ್ರಾಯಗಳು ಇದ್ದವೆಂಬುದಕ್ಕೆ ಪ್ರಮಾಣವಿಲ್ಲವೆಂದೂ ಐತಿಹಾಸಿಕದೃಷ್ಟಿಯ ವಿದ್ವಾಂಸರುಗಳು ಕೆಲವರು ವಾದಿಸುತ್ತಿರುವರು. ಆದರೂ ಕರ್ಮಪರವಾಕ್ಯಗಳಿಗೆ ಜ್ಞಾನೋಪಾಸನೆಗಳಲ್ಲಿಯೂ ಅವಾಂತರ ತಾತ್ಪರ್ಯವಿರಬಹುದೆಂಬ ಸಾಂಪ್ರದಾಯಿಕಾಭಿಪ್ರಾಯವನ್ನು ಇಲ್ಲಿ ಉದಾಹೃತ

ವಾಗಿರುವಂಥ ಮಂತ್ರಗಳ ಆಧಾರದಿಂದ ಜಿಜ್ಞಾಸುಗಳು ನಂಬುವದಕ್ಕೆ ಅವಕಾಶ ವಿರುತ್ತದೆ. ಇದು ಹೇಗೇ ಇರಲಿ, ಉಪನಿಷತ್ತುಗಳ ಅರ್ಥವು ಅನುಭವದಲ್ಲಿ ಪರ್ಯವಸಾನವಾಗುವದೆಂದು ಪ್ರತಿಜ್ಞೆ ಮಾಡಿರುವ ಶಾಂಕರವೇದಾಂತದಲ್ಲಿ ಈ ಬಗೆಯ ಸಂಶಯಗಳಿಗೇ ಎಡೆಯಿರುವದಿಲ್ಲವೆಂಬುದು ಸ್ಪಷ್ಟವಾಗಿದೆ.

ಉಪಸಂಹಾರ

ಈ ಪೀಠಿಕೆಯು ಈಗಾಗಲೇ ದೀರ್ಘವಾಗಿರುತ್ತದೆ. ಆದ್ದರಿಂದ ಇಲ್ಲಿ ವಿವೇಚನೆಮಾಡದೆ ಉಳಿದಿರಬಹುದಾದ ಬೃಹದಾರಣ್ಯಕಭಾಷ್ಯದ ವಿಷಯಗಳನ್ನು ಎರಡನೆಯ ಸಂಪುಟದ ಪೀಠಿಕೆಗೆ ಉಳಿಸಿಕೊಳ್ಳಬೇಕಾಗಿದೆ. ಶ್ರೀಶಂಕರ ಭಗವತ್ಪಾದರವರ ಉಪನಿಷದ್ಭಾಷ್ಯಗಳನ್ನು ಅವಗಾಹನೆ ಮಾಡಬೇಕೆಂದಿರುವ ಮುಮುಕ್ಷುಗಳಿಗೆ ಈ ಅನುವಾದದಿಂದ ಒಂದಿಷ್ಟಾದರೂ ಪ್ರಯೋಜನವಾದರೆ ನಾವು ಧನ್ಯರು.

ವಿಜಯ ಸಂ ॥ ಜ್ಯೇಷ್ಠ ಶುದ್ಧ ಪಂಚಮಿ
ತಾ ॥ ೧೬-೬-೧೯೫೩

ಗ್ರಂಥಕರ್ತ

ಉಪನಿಷತ್ತಿನ ಸಾರ

ಒಂದನೆಯ ಅಧ್ಯಾಯ

ಒಂದನೆಯ ಎರಡನೆಯ ಬ್ರಾಹ್ಮಣಗಳ ಸಾರ

ವಿ.ಸೂ. :- ಇಲ್ಲಿರುವ ಸಂಖ್ಯೆಗಳು ಆಯಾ ಬ್ರಾಹ್ಮಣದ ಕಂಡಿಕೆಗಳನ್ನು ಸೂಚಿಸುವವು.

ಒಂದನೆಯ ಬ್ರಾಹ್ಮಣ

೧-೨. ಅಶ್ವಮೇಧದಲ್ಲಿ ಉಪಯೋಗಿಸುವ ಅಶ್ವದ ಅವಯವಗಳಲ್ಲಿ ಉಷಃಕಾಲವೇ ಮುಂತಾದ ದೃಷ್ಟಿಗಳನ್ನು ಇಟ್ಟು ಉಪಾಸನೆಮಾಡಬೇಕು. ಆ

ಕುದುರೆಯ ಮುಂಗಡೆಯಲ್ಲಿಯೂ ಹಿಂಗಡೆಯಲ್ಲಿಯೂ ಇಟ್ಟಿರುವ ಚಿನ್ನದ ಮತ್ತು ಬೆಳ್ಳಿಯ ಬಟ್ಟಲುಗಳಲ್ಲಿ ಅಹಸ್ಸು ಮತ್ತು ರಾತ್ರಿ ಎಂಬ ದೃಷ್ಟಿಯನ್ನಿಡಬೇಕು. ಅವುಗಳಿಗೆ ಪೂರ್ವಪಶ್ಚಿಮಸಮುದ್ರಗಳೇ ಕಾರಣವೆಂದು ಕಲ್ಪಿಸಬೇಕು. ಅಶ್ವವು ಬೇರೆಬೇರೆಯ ಜಾತಿಯ ಕುದುರೆಯಾಗಿ ದೇವತೆಗಳನ್ನೂ ಗಂಧರ್ವರನ್ನೂ ಮನುಷ್ಯರನ್ನೂ ಹೊರುವ ಪ್ರಶಸ್ತಪ್ರಾಣಿ ಎಂದು ಭಾವಿಸಬೇಕು. ಹೀಗೆ ಕಲ್ಪಿಸಿಕೊಂಡು ಮಾಡುವ ಉಪಾಸನೆಯಿಂದ ಅಶ್ವಮೇಧದ ಅಶ್ವವು ಪ್ರಜಾಪತಿಯೇ ಎಂಬ ಭಾವನೆಯು ನಿಂತುಕೊಳ್ಳುವದು.

ಎರಡನೆಯ ಬ್ರಾಹ್ಮಣ

೧-೨. ಈ ಸ್ಥೂಲಜಗತ್ತು ಹೊರತೋರಿಕೊಂಡು ಉಂಟಾಗುವ ಮೊದಲು ಇದನ್ನು ಹಸಿವಿನ ಲಕ್ಷಣವುಳ್ಳ ಮೃತ್ಯುವೆಂಬ ಹಿರಣ್ಯಗರ್ಭನೇ ಆವರಿಸಿಕೊಂಡಿದ್ದನು. ಹಸಿವೇ ಮತ್ತೊಬ್ಬರ ಮರಣಕ್ಕೆ ಕಾರಣವಾಗುವದರಿಂದ ಹಸಿವು ಮೃತ್ಯುವೇ. ವಿಜ್ಞಾನಾತ್ಮನಿಗೆ ಹಸಿವು ಧರ್ಮವು, ಆದ್ದರಿಂದ ವಿಜ್ಞಾನಾವಸ್ಥೆಯಲ್ಲಿರುವ ಹಿರಣ್ಯಗರ್ಭನು ಮೃತ್ಯುವೇ. ಆ ಮೃತ್ಯುವು ತನಗೆ ಮನಸ್ಸಾಗಬೇಕೆಂಬ ಇಚ್ಛೆಯಿಂದ ಮನಸ್ಸನ್ನು ಹೊರಗೆಡವಿದನು. ಆ ಮನಸ್ಸಿನಿಂದೊಡಗೂಡಿ ತನ್ನನ್ನು ತಾನೇ ಅರ್ಚಿಸಿದನು, ಕೃತಾರ್ಥನಾದೆನು ಎಂದುಕೊಂಡನು ; ಆ ಸಂದರ್ಭದಲ್ಲಿ ನೀರು ಉತ್ಪನ್ನವಾಯಿತು. ಅರ್ಚನೆಯಿಂದಾದ ಅಪ್ಪಿಗೆ ಸಂಬಂಧಪಟ್ಟಿರುವದರಿಂದ ಅಶ್ವಮೇಧದಲ್ಲಿ ಉಪಯೋಗಿಸುವ ಅಗ್ನಿಗೆ ಅರ್ಕನೆಂದು ಹೆಸರು; ಅರ್ಕನಿಗೆ ಕಾರಣವಾಗಿರುವದರಿಂದ ಅಪ್ಪೂ ಅರ್ಕನೆನಿಸುತ್ತದೆ. ಅಪ್ಪಿನ ಗಟ್ಟಿಭಾಗವು ಹೆಪ್ಪಾಗಿ ಪೃಥ್ವಿಯಾಯಿತು. ಪೃಥ್ವಿಯನ್ನುಂಟುಮಾಡಿದ್ದರಿಂದ ಹಿರಣ್ಯಗರ್ಭನು ಶ್ರಾಂತನಾದನು. ಶ್ರಾಂತನಾಗಿ ತಪ್ತನಾದ ಹಿರಣ್ಯಗರ್ಭನಿಂದ ಹುಟ್ಟಿದ ತೇಜೋರಸವೇ ಮೇಲೆ ಹೇಳಿದ ಅರ್ಕನೆಂಬ ಅಗ್ನಿ. ಅವನೇ ವಿರಾಡ್ರೂಪಪ್ರಜಾಪತಿಯು.

೩. ಆ ವಿರಾಡ್ರೂಪನಾದ ಅಗ್ನಿಯು ತಾನು ಇದ್ದಂತೆಯೇ ಇದ್ದು ತನ್ನನ್ನು ಆದಿತ್ಯ, ವಾಯು, ಅಗ್ನಿ- ಎಂಬ ಮೂರು ಪ್ರಕಾರವಾಗಿ ವಿಂಗಡಿಸಿಕೊಂಡನು. ಈ ಅಗ್ನಿಯೇ ಅಶ್ವಮೇಧದಲ್ಲಿ ಉಪಯೋಗಿಸಲ್ಪಡುವ ಚಿತ್ಯಾಗ್ನಿಯು. ಈ ಅಗ್ನಿಯ ಅವಯವಗಳಲ್ಲಿ ಪ್ರಾಗ್ವಿಕ್ಕೇ ಮುಂತಾದ ದೃಷ್ಟಿಯನ್ನಿಟ್ಟುಕೊಂಡು ಭಾವನೆ ಮಾಡಬೇಕು.

ಮೃತ್ಯುವು ವಿರಾಡ್ರೂಪನಾಗಿ ಅದಿತ್ಯಾದಿರೂಪದಿಂದ ಮೂರು ಪ್ರಕಾರವಾಗಿ ವಿಂಗಡವಾದದ್ದು ಹೇಗೆಂದರೆ, ಅವನು ನನಗೆ ಶರೀರವಾಗಬೇಕು ಎಂದು ಬಯಸಿ ಅವ್ಯಕ್ತವಾಗಿದ್ದ ತ್ರಯಿಲಕ್ಷಣವಾದ ವಾಕ್ಕನ್ನು ಈ ಮೊದಲೇ ಹೊರತೋರಿಕೊಂಡಿದ್ದ ಮನಸ್ಸಿನಿಂದ ಅನ್ವಾಲೋಚನೆಮಾಡಿದನು ; ಎಂದರೆ ವೇದದಲ್ಲಿ ಹೇಳಿರುವ ಸೃಷ್ಟಿಕ್ರಮವನ್ನು ಆಲೋಚಿಸಿಕೊಂಡನು. ಬಳಿಕ ಅಪ್ಪನ್ನು ಸೃಷ್ಟಿಮಾಡಿ ಹಿಂದಿನ ಜನ್ಮದ ಜ್ಞಾನಕರ್ಮವೆಂಬ ಬೀಜರೂಪದಿಂದ ಅದರೊಳಗೆ ಪ್ರವೇಶಿಸಿ ಒಂದು ಸಂವತ್ಸರದಷ್ಟು ಕಾಲ ಗರ್ಭದಲ್ಲಿಟ್ಟುಕೊಂಡಿದ್ದು ಬಳಿಕ ಅಂಡವನ್ನು ಒಡೆದನು. ಅದರಿಂದ ಮೇಲೆ ಹೇಳಿದ ವಿರಾಡ್ರೂಪನಾದ ಪ್ರಜಾಪತಿಯು ಉದ್ಭವಿಸಿದನು.

ಆಗ ಹಸಿವಿನಿಂದ ಕೂಡಿದ್ದ ಮೃತ್ಯುವು ಹುಟ್ಟಿದ ವಿರಾಡ್ರೂಪ ಕುಮಾರನನ್ನು ತಿನ್ನುವದಕ್ಕೆ ಹೋದನು. ಆ ಮಗನು ಹೆದರಿಕೆಯಿಂದ ಭಾಣ್ ! ಎಂದು ಕೂಗಿಕೊಂಡನು. ಇದೇ ಶಬ್ದದ ಉತ್ಪತ್ತಿಯು. ಮೃತ್ಯುವು ''ಇವನನ್ನು ಈಗಲೇ ತಿನ್ನಬಾರದು ; ನನಗೆ ಅನ್ನವು ಬಹಳವಾಗಬೇಕು'' ಎಂದುಕೊಂಡು ವಾಙ್ಮನಸ್ಸುಗಳಿಂದ ಋಕ್ಕುಗಳು, ಯಜುಸ್ಸುಗಳು, ಸಾಮಗಳು, ಛಂದಸ್ಸುಗಳು, ಯಜ್ಞಗಳು, ಯಜ್ಞವನ್ನು ಮಾಡುವ ಪ್ರಜೆಗಳು, ಪಶುಗಳು- ಎಲ್ಲವನ್ನೂ ಸೃಜಿಸಿದನು. ಹೀಗೆ ತಾನು ಏನೇನು ಸೃಜಿಸಿದನೋ ಅದನ್ನೆಲ್ಲ ತಿನ್ನುವದಕ್ಕೆ ಹೋದದ್ದರಿಂದ ಅವನಿಗೆ ಅದಿತಿ ಎಂದು ಹೆಸರು ಬಂದಿದೆ.

೬-೭. ಆ ಪ್ರಜಾಪತಿಯು ''ಮತ್ತೊಮ್ಮೆ ದೊಡ್ಡ ಯಜ್ಞವನ್ನು ಮಾಡುವೆನು'' ಎಂದುಕೊಂಡನು. ಆ ಮಹಾಸಂಕಲ್ಪದಿಂದ ಅವನು ಶ್ರಾಂತನಾಗಿ ತಪ್ತನಾದನು. ಅದರಿಂದ ಅವನ ಶರೀರದಿಂದ ಪ್ರಾಣಗಳೆಂಬ ಯಶಸ್ಸೂ ವೀರ್ಯವೂ ಹೊರಕ್ಕೆ ಬಂದವು. ಹೀಗೆ ಪ್ರಾಣಗಳು ಹೊರಕ್ಕೆ ಬರುತ್ತಲೂ ಶರೀರವು ಊದಿಕೊಳ್ಳುವದಕ್ಕೆ ಮೊದಲಾಯಿತು, ಮೇಧ್ಯವಲ್ಲದೆಯೂ ಹೋಯಿತು. ಅವನಿಗೆ ಆ ಶರೀರದಲ್ಲಿಯೇ ಮನಸ್ಸಿತ್ತು. ಆಗ ಅವನು ''ಈ ಶರೀರವು ಮೇಧ್ಯವಾಗಲಿ, ನಾನು ಇದರಿಂದ ಶರೀರಿಯಾಗುವೆನು'' ಎಂದು ಬಯಸಿದನು. (ಅಶ್ವತ್) ಊದಿಕೊಂಡಿತು, ಆದ್ದರಿಂದ ಅಶ್ವವಾಯಿತು ; ಮತ್ತೆ ಪ್ರಾಣಪ್ರವೇಶದಿಂದ ಮೇಧ್ಯವಾಯಿತಾದ್ದರಿಂದ ಅಶ್ವಮೇಧ ಎನ್ನಿಸಿಕೊಂಡಿತು. ಹೀಗೆಂದು ತಿಳಿದವನೇ ಅಶ್ವಮೇಧವನ್ನು ಸರಿಯಾಗಿ ಉಪಾಸನೆಮಾಡಿದವನು.

ಆ ಪ್ರಜಾಪತಿಯು ತನ್ನ ಶರೀರವನ್ನು ಅಶ್ವವೆಂದು ಕಲ್ಪಿಸಿಕೊಂಡು ಅದನ್ನು ಕಟ್ಟಿಹಾಕದೆ ಒಂದು ವರ್ಷದವರೆಗೂ ಬಿಟ್ಟುಬಿಟ್ಟಂತೆ ಭಾವಿಸಿ ಆಮೇಲೆ ತನಗಾಗಿ ಯಜ್ಞದಲ್ಲಿ ಅರ್ಪಿಸಿಕೊಂಡನು. ಪಶುಗಳನ್ನು ಮಿಕ್ಕ ದೇವತೆಗಳಿಗೆ ಕೊಟ್ಟನು. ಅದರಿಂದಲೇ ಈಗಲೂ ಯಾಜ್ಞಿಕರು ಸರ್ವದೇವತ್ಯನೆಂದು ಪ್ರೋಕ್ಷಿಸಿದ ಪಶುವನ್ನು ಪ್ರಜಾಪತಿಗೂ ಮಿಕ್ಕ ಪಶುಗಳನ್ನು ಆಯಾ ದೇವತೆಗಳಿಗೂ ಅರ್ಪಿಸುತ್ತಾರೆ. ಅಶ್ವಮೇಧದಲ್ಲಿ ಅಧಿಕಾರವಿಲ್ಲದವರೂ ಹೀಗೆಯೇ ತಮ್ಮ ಶರೀರವನ್ನೇ ಅಶ್ವವೆಂದು ಉಪಾಸನೆಮಾಡಿ ಪ್ರಜಾಪತಿಗೆ ಅರ್ಪಣೆ ಮಾಡಬೇಕು.

ಹೊರಗೆ ತಪಿಸುತ್ತಿರುವ ಆದಿತ್ಯನಿದಾನಲ್ಲ ಇವನೇ ಅಶ್ವಮೇಧದ ಫಲವಾಗಿರುವದರಿಂದ 'ಅಶ್ವಮೇಧ'ವೆನಿಸುವನು. ಅವನಿಗೆ ಸಂವತ್ಸರವು ಶರೀರವು. ಇನ್ನು ಅಶ್ವಮೇಧಕ್ರತುವಿಗೆ ಸಾಧನವಾಗಿರುವ ಅಗ್ನಿಯಿದಾನಲ್ಲ ಅವೇ ಅರ್ಕನು ; ಅವನಿಗೆ ಈ ಲೋಕಗಳೆಲ್ಲವೂ ಶರೀರವು. ಹೀಗೆ ಅಗ್ನಿಯು ಅರ್ಕನಾಗಿಯೂ ಆದಿತ್ಯನು ಅಶ್ವಮೇಧವಾಗಿಯೂ ಕ್ರತುರೂಪರೂ ಪ್ರಜಾಪತಿರೂಪರೂ ಆಗಿರುತ್ತಾರೆ.

ಸರಿಯಾಗಿ ನೋಡಿದರೆ ಇವೆರಡೂ ಮೃತ್ಯುವೆಂಬ ಒಂದೇ ದೇವತೆಯಾಗುತ್ತವೆ. ಯಾವನು ಹೀಗೆಂದು - ಮೃತ್ಯುವೇ ತಾನೆಂದು - ಉಪಾಸನೆಮಾಡುತ್ತಾನೋ ಅವನು ಪುನರ್ಮೃತ್ಯುವನ್ನು ಜಯಿಸುತ್ತಾನೆ. ಅವನನ್ನು ಆಕ್ರಮಿಸುವದಿಲ್ಲ ; ಏಕೆಂದರೆ ಮೃತ್ಯು ಅವನಿಗೆ ಆತ್ಮನೇ ಆಗಿಬಿಟ್ಟಿರುತ್ತಾನೆ. ಅವನು ಮೃತ್ಯುವೇ ಆಗಿ ಈ ದೇವತೆಗಳಲ್ಲಿ ಒಂದಾಗಿಬಿಡುತ್ತಾನೆ.

ಮೂರನೆಯ ಬ್ರಾಹ್ಮಣದ ಸಾರ

೧. ವರ್ತಮಾನಕಲ್ಪದ ಪ್ರಜಾಪತಿಯ ಪೂರ್ವಜನ್ಮದಲ್ಲಿ ಅವನ ವಾಗಾದಿಪ್ರಾಣಗಳು ದೇವ, ಅಸುರ- ಎಂದು ಎರಡು ಬಗೆಯಾಗಿದ್ದವು. ಶಾಸ್ತ್ರೀಯಜ್ಞಾನಕರ್ಮಗಳಿಂದ ಭಾವಿತರಾದವರು ದೇವತೆಗಳು, ಸ್ವಾಭಾವಿಕ ಜ್ಞಾನದಿಂದ ದೃಷ್ಟಪ್ರಯೋಜನವುಳ್ಳ ಜ್ಞಾನಕರ್ಮಭಾವಿತರಾದವರು ಅಸುರರು. ಅವರಲ್ಲಿ ದೇವತೆಗಳು ಅಲ್ಪಸಂಖ್ಯೆಯವರು, ಅಸುರರು ಹೆಚ್ಚಿನ ಸಂಖ್ಯೆಯವರು. ಅವರಿಬ್ಬರಿಗೂ ಸ್ಪರ್ಧೆಯಾಯಿತು. ದೇವತೆಗಳು ಅಗ್ನಿಷ್ಟೋಮದಲ್ಲಿ ಮಾಡುವ ಉದ್ಗಾನಕರ್ಮದಿಂದ ಅಸುರರನ್ನು ಮೀರೋಣವೆಂದು ಆಲೋಚಿಸಿಕೊಂಡರು.

೨-೬. ಅವರು ವಾಕ್ಕನ್ನು 'ನೀನು ಉದ್ಗಾನಮಾಡು' ಎಂದರು. ವಾಕ್ಕು ಹಾಗೇ ಆಗಲೆಂದು ಉದ್ಗಾನಕ್ಕೆ ಆರಂಭಿಸಿ ವಾಙ್ಮಿಮಿತ್ತವಾದ ಸಾಧಾರಣ ಭೋಗವನ್ನು ಒಟ್ಟು ಸಂಘಕ್ಕೂ ಕಲ್ಯಾಣವಾಗಿ ನುಡಿಯುವದರ ಫಲವನ್ನು ತನಗೂ ಗಾನಮಾಡಿಕೊಂಡಿತು. ಅಸುರರು ಈ ಸಂಧಿಯನ್ನು ಕಂಡುಕೊಂಡು ನಮ್ಮನ್ನು ದೇವತೆಗಳು ಮಿರುವರು ಎಂಬ ಅಂಜಿಕೆಯಿಂದ ಬೇಗನೆ ವಾಕ್ಕಿನ ಬಳಿಗೆ ಬಂದು ಅದಕ್ಕೆ ಆಡಬಾರದ ಮಾತನ್ನು ಆಡುವದೆಂಬ ಪಾಪದ ಸಂಗವನ್ನು ತಗಲಿಸಿದರು. ಇದರಂತೆ ಮೂಗಿಗೆ ಮೂಸಬಾರದ್ದನ್ನು ಮೂಸುವ ಪಾಪದ ಸಂಗವನ್ನು, ಕಣ್ಣಿಗೆ ನೋಡಬಾರದ್ದನ್ನು ನೋಡುವದೆಂಬ ಪಾಪದ ಸಂಗವನ್ನು, ಕಿವಿಗೆ ಕೇಳಬಾರದ್ದನ್ನು ಕೇಳುವ ಪಾಪದ ಸಂಗವನ್ನು, ಮನಸ್ಸಿಗೆ ಸಂಕಲ್ಪಿಸಬಾರದ್ದನ್ನು ಸಂಕಲ್ಪಿಸುವ ಪಾಪದ ಸಂಗವನ್ನು - ಹೀಗೆಯೇ ಮಿಕ್ಕ ದೇವತೆಗಳಿಗೂ ಆಯಾ ಪಾಪಗಳ ಸಂಗವನ್ನು ತಗಲಿಸಿದರು. ಆದ್ದರಿಂದಲೇ ಪ್ರಜಾಪತಿಯ ವಂಶದವರಲ್ಲಿ ಈಗಲೂ ಈ ಪಾಪವಿದೆ. ಈ ರೀತಿಯಲ್ಲಿ ವಾಗಾದಿಗಳು ಉದ್ಗಾನಮಾಡಿದಾಗ ಕಲ್ಯಾಣವಿಷಯ ವಿಶೇಷವನ್ನು ತಮತಮಗೆ ಸಂಬಂಧಿಸಿ ಗಾನಮಾಡಿಕೊಂಡದ್ದರಿಂದ ಆಸುರಪಾಪ ಸಂಬಂಧದಿಂದ ಅವರ ಉಪಾಸನೆಯನ್ನು ಮಾಡುವವರಿಗೆ ಪಾಪಸಂಗರೂಪವಾದ ಮೃತ್ಯುವನ್ನು ದಾಟುವದು ಆಗಲಾರದು.

೭. ಆಗ ದೇವತೆಗಳು ಮುಖ್ಯಪ್ರಾಣನನ್ನು 'ನೀನು ಉದ್ಗಾನ ಮಾಡು' ಎಂದರು. ಅವನು ಉದ್ಗಾನಮಾಡಲಾರಂಭಿಸಲು ಮೊದಲಿನಂತೆ ಅಸುರರು ಅವನಿಗೆ ಪಾಪಸಂಸರ್ಗವನ್ನುಂಟುಮಾಡ್ದುವದಕ್ಕೆಳಸಿದರು. ಆದರೆ ಕಲ್ಲುಬಂಡೆಯ ಮೇಲೆ ಬಿದ್ದ ಮಣ್ಣುಹೆಂಟೆಯಂತೆ ಅವರೇ ಹುಡಿಹುಡಿಯಾಗಿ ದಿಕ್ಕಾಪಾಲಾಗಿ ಓಡಿಹೋಗಿ ನಾಶವಾದರು. ವಾಗಾದಿಗಳು ತಮ್ಮ ತಮ್ಮ ಅಗ್ನ್ಯಾದಿಸ್ವರೂಪವನ್ನು ಮುಖ್ಯಪ್ರಾಣನ ಆಶ್ರಯದಿಂದ ಪಡೆದುಕೊಂಡರು. ಯಾವನು ಈ ಮುಖ್ಯಪ್ರಾಣನೇ ಆತ್ಮನೆಂದು ಉಪಾಸನೆಮಾಡುವನೋ ಅವನು ತನ್ನ ಪ್ರಜಾಪತಿಸ್ವರೂಪವನ್ನು ಪಡೆದುಕೊಳ್ಳುವನು ; ಅವನನ್ನು ದ್ವೇಷಿಸುವ ದಾಯಾದಿಗಳೂ ನಾಶವಾಗುವರು.

೮. ಆ ದೇವತೆಗಳು ತಮಗೆ ದೇವತ್ವವನ್ನು ತಂದುಕೊಟ್ಟ ಪ್ರಾಣನನ್ನು ಕುರಿತು "ಇವನು ಎಲ್ಲಿದ್ದನು ?" ಎಂದು ಆಲೋಚನೆಮಾಡಿ "ಇವನು ಆಸ್ಯದ (ಮುಖದ) ಒಳಗಡೆ ಇರುತ್ತಾನೆ. ಅಂಗಗಳಿಗೆಲ್ಲ ರಸವಾಗಿರುತ್ತಾನೆ ; ಆದ್ದರಿಂದ ಇವನು

'ಅಯಾಸ್ಯ ಆಂಗಿರಸ'ನು ಎಂದು ನಿಶ್ಚಯಿಸಿಕೊಂಡರು. ಆದ್ದರಿಂದ ಪ್ರಾಣನೇ ಕಾರ್ಯಕರಣಗಳಿಗೆ ಆತ್ಮನೆಂದು ತಿಳಿಯಬೇಕು.

೯-೧೬. ಈ ಪ್ರಾಣದೇವತೆಯು ದೂರ್ ಎಂಬ ನಾಮವುಳ್ಳದ್ದು ; ಏಕೆಂದರೆ ಮೃತ್ಯುವು ಅದಕ್ಕೆ ದೂರವಾಗಿರುತ್ತದೆ. ಹಾಗೆಂದು ಉಪಾಸನೆಮಾಡುವವರಿಗೂ ಮೃತ್ಯುವು ದೂರವಾಗುತ್ತದೆ. ಇದು ಪಾಪದೂರವಾಗಿರುವದೆಂಬುದು ಹೇಗೆಂದರೆ, ಇದೇ ಈ ದೇವತೆಗಳ ಪಾಪವೆಂಬ ಮೃತ್ಯುವನ್ನು ಬಿಡಿಸಿ ದೂರಕ್ಕೆ, ಅಂತ್ಯಜರ ಪ್ರದೇಶಕ್ಕೆ, ಕಳುಹಿಸಿಬಿಟ್ಟಿರುತ್ತದೆ. ಇದರಿಂದಲೇ ವಾಕ್ಕಿಗೆ ಅಗ್ನಿಭಾವವೂ ಘ್ರಾಣಕ್ಕೆ ವಾಯುಭಾವವೂ ಚಕ್ಷುಸ್ಸಿಗೆ ಆದಿತ್ಯಭಾವವೂ ಶ್ರೋತ್ರಕ್ಕೆ ದಿಗ್ಭಾವವೂ ಮನಸ್ಸಿಗೆ ಚಂದ್ರಭಾವವೂ ಬಂದಿರುತ್ತದೆ.

೧೭-೧೯. ಮುಖ್ಯಪ್ರಾಣನು ಎಲ್ಲರಿಗೋಸ್ಕರವಾಗಿ ಪ್ರಾಜಾಪತ್ಯಫಲವನ್ನು ಕೊಡುವ ಗಾನವನ್ನು ಮಾಡಿದ ಬಳಿಕ ತನಗಾಗಿ ಅನ್ನವನ್ನು ಗಾನಮಾಡಿಕೊಂಡನು. ಅದರಿಂದಲೇ ಪ್ರಾಣವು ಶರೀರದಲ್ಲಿದ್ದುಕೊಂಡಿರುವದು. ಈ ಗಾನವು ಕೇವಲ ಇರವಿಗಾಗಿ ಮಾಡಿಕೊಂಡದ್ದಾದ್ದರಿಂದ ಪ್ರಾಣನಿಗೆ ಪಾಪದ ಆಸಂಗವಿಲ್ಲ. ಬಳಿಕ ದೇವತೆಗಳು 'ನಿನ್ನ ಅನ್ನದಲ್ಲಿ ನಮಗೂ ಭಾಗವನ್ನು ಕೊಡು' ಎಂದರು. ಹಾಗೇ ಆಗಲೆಂದು ಪ್ರಾಣನು ಅವರನ್ನು ಸುತ್ತಲೂ ಕುಳ್ಳಿರಿಸಿ ಅನ್ನವನ್ನು ಕೊಟ್ಟನು ; ಆದ್ದರಿಂದಲೇ ಈ ಪ್ರಾಣವು ತಿಂದ ಅನ್ನದಿಂದ ವಾಗಾದಿಗಳಿಗೂ ತೃಪ್ತಿಯಾಗುತ್ತದೆ. ಆದ್ದರಿಂದ ಹೀಗೆಂದು ಪ್ರಾಣನನ್ನು ಉಪಾಸನೆಮಾಡಿದವನು ಪ್ರಾಣನಂತೆಯೇ ತನ್ನವರಿಗೆ ಆಶ್ರಯವಾಗಿದ್ದುಕೊಂಡು ಅವರನ್ನು ಪೋಷಿಸುವವನಾಗುವನು. ಪ್ರಾಣನು ಎಲ್ಲಾ ಅಂಗಗಳಿಗೂ ರಸವಾಗಿರುವದರಿಂದ ಆಂಗಿರಸನು ; ಆದ್ದರಿಂದಲೇ ಯಾವ ಯಾವ ಅಂಗದಿಂದ ಪ್ರಾಣೋತ್ಕ್ರಮಣವಾಗುವದೋ ಆಯಾ ಅಂಗವು ಒಣಗಿಕೊಳ್ಳುತ್ತದೆ.

೨೦-೨೪. ಈ ಪ್ರಾಣನೇ ಬೃಹಸ್ಪತಿಯು. ಹೇಗೆಂದರೆ ವಾಕ್ಕೇ ಬೃಹತೀ ಛಂದಸ್ಸು, ಏಕೆಂದರೆ ವಾಕ್ಕೆಂಬ ಅನುಷ್ಟುಪ್ಪು ಬೃಹತಿಯಲ್ಲಿ ಅಡಗಿದೆ. ಆ ಬೃಹತಿಗೆ ಋಕ್ಕಿಗೆ ಪ್ರಾಣನು ಪತಿಯು ; ಆದ್ದರಿಂದ ಬೃಹಸ್ಪತಿಯು, ಎಂದರೆ ಋಕ್ಕುಗಳಿಗೆ ಆತ್ಮನು. ಇವನೇ ಬ್ರಹ್ಮಣಸ್ಪತಿಯು, ಹೇಗೆಂದರೆ ವಾಕ್ಕೇ ಬ್ರಹ್ಮವು, ಯಜುಸ್ಸು ; ಅದಕ್ಕೆ ಇವನು ಪತಿಯು. ಆದ್ದರಿಂದ ಇವನು ಬ್ರಹ್ಮಣಸ್ಪತಿಯು. ಈತನೇ ಸಾಮವು, ಹೇಗೆಂದರೆ ವಾಕ್ಕೇ ಸಾ (ಸರ್ವಸ್ಯೈ ವಾಚಕವು), ಪ್ರಾಣ ಎಂಬುದು ಅಮ

(ಸರ್ವಪುಂವಾಚಕ). ಹೀಗೆ ಸಾಮ ಎಂಬ ಶಬ್ದವು ವಾಕ್ಕನ್ನೂ ಪ್ರಾಣವನ್ನೂ ತಿಳಿಸುತ್ತದೆ. ಆದ್ದರಿಂದ ಪ್ರಾಣನೇ ಸಾಮವು, ಪ್ರಾಣನಿಗೆ ವ್ಯತಿರಿಕ್ತವಾಗಿ ಯಾವ ಸಾಮವೂ ಇಲ್ಲ. ಅಥವಾ ಪ್ರತಿಯೊಂದು ಶರೀರಕ್ಕೂ ಸಮವಾಗಿ ಅದರಲ್ಲೆಲ್ಲ ತುಂಬಿರುವದರಿಂದ ಪ್ರಾಣನು ಸಾಮವು. ಹೀಗೆ ಪ್ರಾಣನು ಸಾಮವಾಗಿರುವ ನೆಂದು ಅರಿತುಕೊಂಡ ಉಪಾಸಕನು ಸಾಮಸಾಯುಜ್ಯವನ್ನೋ ಸಾಲೋಕ್ಯವನ್ನೋ, ಉಪಾಸನೆಯ ಔತ್ಕಟ್ಯಕ್ಕೆ ಅನುಗುಣವಾಗಿ ಪಡೆದುಕೊಳ್ಳುತ್ತಾನೆ. ಈ ಪ್ರಾಣನೇ ಉದ್ಗೀಥವು. ಹೇಗೆಂದರೆ ಪ್ರಾಣನೇ ಉತ್ ; ವಾಕ್ಕೇ ಗೀಥಾ (ಶಬ್ದವು) ; ಆದ್ದರಿಂದ ಪ್ರಾಣನು ಉದ್ಗೀಥವು. ಆದ್ದರಿಂದಲೇ ಪೂರ್ವದಲ್ಲಿ ವಿಶ್ವಸೃಜರೆಂಬ ಋಷಿಗಳ ಸತ್ರದಲ್ಲಿ ಅಯಾಸ್ಯಆಂಗಿರಸನೆಂಬ ಉದ್ಗಾತೃವು ವಾಕ್ಸಂಯುಕ್ತ ಪ್ರಾಣದೇವತೆಯೇ ಉದ್ಗಾನದೇವತೆಯೆಂದೆಣಿಸಿ ಉದ್ಗಾನಮಾಡಿದನು- ಎಂದು ಬ್ರಹ್ಮದತ್ತಚೈಕಿತಾನನು ಸೋಮದ ಮೇಲೆ ಆಣೆಯಿಟ್ಟು ಹೇಳಿರುತ್ತಾನೆ.

೨೫-೨೭. ಸಾಮವೆಂಬ ಈ ಪ್ರಾಣನ ಸ್ವವು (ಸ್ವತ್ತು) ಸ್ವರವೇ ಎಂದು ಅರಿತು ಕೊಂಡ ಉಪಾಸಕನಿಗೆ ಸ್ವವು (ಧನವು) ಲಭಿಸುವದು. ಈ ಸಾಮವೆಂಬ ಪ್ರಾಣನಿಗೆ ಸ್ವರವೇ ಸುವರ್ಣ (ಉತ್ತಮವಾದ ವರ್ಣವು) ಎಂದು ಅರಿತುಕೊಂಡ ಉಪಾಸಕನಿಗೆ ಸುವರ್ಣವು (ಚಿನ್ನವು) ದೊರೆಯುವದು. ಈ ಸಾಮವೆಂಬ ಪ್ರಾಣನಿಗೆ ವಾಕ್ಕೇ ಪ್ರತಿಷ್ಠೆಯು, ನಿಲ್ಲುವ ಆಧಾರವು ; ಅಥವಾ ಅನ್ನವೇ ಪ್ರತಿಷ್ಠೆಯು ಎಂದು ಅರಿತುಕೊಂಡ ಉಪಾಸಕನಿಗೆ ಪ್ರತಿಷ್ಠೆಯು ದೊರಕುವದು.

೨೮. ಈ ರೀತಿಯಲ್ಲಿ ಪ್ರಾಣನನ್ನು ಉಪಾಸನೆಮಾಡುವವನಿಗೇ ಪವಮಾನ ಸ್ತೋತ್ರಗಳ ಆದಿಯಲ್ಲಿ ಜಪಿಸಬೇಕಾದ ದೇವತ್ವಕ್ಕೇರಿಸುವ ಅಭ್ಯಾರೋಹವೆಂಬ ಜಪವನ್ನು ವಿಧಿಸಿದೆ. ಪ್ರಸ್ತೋತೃವಾದ ಉಪಾಸಕನು ಯಾವಾಗ ಪವಮಾನದ ಮೊದಲನೆಯ ಸ್ತೋತ್ರರೂಪವಾದ ಸಾಮವನ್ನು ಪ್ರಾರಂಭಿಸುವನೋ ಆಗ 'ಅಸತೋ ಮಾ ಸದ್ಗಮಯ', 'ತಮಸೋ ಮಾ ಜ್ಯೋತಿರ್ಗಮಯ', 'ಮೃತ್ಯೋರ್ಮಾऽಮೃತಂ ಗಮಯ' ಎಂಬೀ ಮಂತ್ರಗಳನ್ನು ಜಪಿಸಬೇಕು. ಮೂರು ಪವಮಾನಗಳನ್ನು ಗಾನಮಾಡಿದ ಬಳಿಕ ಉಳಿದ ಸ್ತೋತ್ರಗಳನ್ನು ಗಾನ ಮಾಡುವಾಗ ತನಗಾಗಿ ಅನ್ನವನ್ನು ಗಾನಮಾಡಿಕೊಳ್ಳಬೇಕು. ಈ ಪ್ರಾಣೋಪಾಸಕನಾದ ಉದ್ಗಾತೃವು ಯಾವ ಕಾಮವನ್ನು ಬಯಸಿದರೂ ಅದನ್ನು ತನಗಾಗಿ ಅಥವಾ ಯಜಮಾನನಿಗಾಗಿ ಆಗಾನಮಾಡಬಲ್ಲವನಾಗಿರುತಾನೆ.

ಈ ಜಪಕರ್ಮಗಳಿಂದ ಪ್ರಾಣಸಾಯುಜ್ಯವು ದೊರಕುವದು. ಬರಿಯ ಪ್ರಾಣೋಪಾಸನೆಯಿಂದಲೂ ಪ್ರಾಣಸಾಯುಜ್ಯವು ತಪ್ಪದೆ ದೊರಕುವದು.

ನಾಲ್ಕನೆಯ ಬ್ರಾಹ್ಮಣದ ಸಾರ

೧-೬. ಮೊದಲು ಈ ಸಂಸಾರವೆಲ್ಲವೂ ಶರೀರಾದಿಗಳುಳ್ಳ ವಿರಾಟ್ಪುರುಷನಾಗಿತ್ತು. ಅವನು ತನ್ನನ್ನು 'ನಾನು' ಎಂದುಕೊಂಡನು ; ಅದರಿಂದ ಅವನಿಗೆ 'ನಾನು' ಎಂಬ ಹೆಸರಾಯಿತು. ಆದ್ದರಿಂದ ಈಗಿನವರೂ ತಮ್ಮ ಹೆಸರನ್ನು ಹೇಳಿಕೊಳ್ಳುವ ಮುಂಚೆ 'ನಾನು' ಎಂದುಕೊಳ್ಳುತ್ತಾರೆ. ವಿರಾಟ್ಪುರುಷನು ಮಿಕ್ಕವರೆಲ್ಲರಿಗಿಂತಲೂ ಮೊದಲು (ಪೂರ್ವಂ) ಪಾಪಗಳನ್ನು ಸುಟ್ಟುಕೊಂಡನು (ಔಷತ್) ; ಆದ್ದರಿಂದ ಅವನು ಪುರುಷನೆನಿಸಿದನು. ಹೀಗೆಂದು ಉಪಾಸನೆ ಮಾಡಿದವನು ಮಿಕ್ಕವರೆಲ್ಲರಿಗಿಂತಲೂ ಮೊದಲು ವಿರಾಟ್ಪುರುಷನಾಗುವನು.

ಆ ವಿರಾಟ್ಪುರುಷನು ಒಂಟಿಯಾಗಿದ್ದದ್ದರಿಂದ ಅವನಿಗೆ ಭಯವಾಯಿತು ; ಆದರೆ ತನಗೆ ಎರಡನೆಯ ವಸ್ತುವೇ ಇಲ್ಲವಲ್ಲ ಎಂಬ ಆತ್ಮೈಕ್ಯಜ್ಞಾನದಿಂದ ಭಯವೆಲ್ಲವೂ ಹೋಯಿತು. ಆದ್ದರಿಂದ ಈಗಿನವರಿಗೂ ಹೀಗೆಯೇ ಆಗುತ್ತದೆ ಆ ವಿರಾಜನು ಅರತಿಯಿಂದ ಜೊತೆಗಾತಿಯಾದ ಪತ್ನಿಯನ್ನು ಬಯಸಿದನು ; ಸಂಕಲ್ಪಮಾತ್ರದಿಂದ ಸ್ತ್ರೀಪುರುಷನಾದನು. ಆ ಪುರುಷನಿಗೆ ಮನುವೆಂದೂ ಸ್ತ್ರೀಗೆ ಶತರೂಪೆಯೆಂದೂ ಹೆಸರು. ಶತರೂಪೆಯು ಮನುಷ್ಯರಿಂದ ಇರುವೆಗಳವರೆಗೂ ಬೇರೆಬೇರೆಯ ಜಾತಿಯ ರೂಪವನ್ನು ಧರಿಸಲು ಮನುವೂ ಆಯಾ ಜಾತಿಯ ಪುಂವ್ಯಕ್ತಿಯಾದನು. ಅವರಿಬ್ಬರ ಕೂಟದಿಂದ ಆಯಾ ಜಾತಿಯ ಪ್ರಾಣಿಗಳು ಹುಟ್ಟಿದವು. ಬಳಿಕ ವಿರಾಟ್ಪುರುಷನು 'ನಾನೇ ಇದೆಲ್ಲವನ್ನೂ ಸೃಜಿಸಿರುವೆನು, ನಾನೇ ಸೃಷ್ಟಿಯು' ಎಂದು ಅರಿತುಕೊಂಡದ್ದರಿಂದ 'ಸೃಷ್ಟಿ' ಎನಿಸಿದನು. ಈ ಸೃಷ್ಟಜಗತ್ತಿನಲ್ಲಿ ಯಾವನು ಹೀಗೆಂದು ಉಪಾಸಿಸುವನೋ ಅವನೂ 'ಸೃಷ್ಟಿ'ಯಾಗುವನು.

ಆ ಪ್ರಜಾಪತಿಯು ಮುಖದಿಂದಲೂ ಕೈಗಳಿಂದಲೂ ಕಡೆದು ಅಗ್ನಿಯನ್ನು ಸೃಜಿಸಿದನು. ಆ ಪ್ರಜಾಪತಿಯೇ ಸಕಲದೇವತೆಗಳೂ ಆಗಿರುವನು. ಅಗ್ನಿ ಷೋಮಾತ್ಮಕವಾಗಿರುವ ಈ ಜಗತ್ತೆಲ್ಲವೂ ಅವನ ಸೃಷ್ಟಿಯೇ. ಪ್ರಜಾಪತಿಯು ಪೂರ್ವಜನ್ಮದಲ್ಲಿ ಮರ್ತ್ಯನೇ ಆಗಿದ್ದರೂ ಹೀಗೆ ತನಗಿಂತ ಹೆಚ್ಚಿನ ಅಮೃತರೂಪ

ರಾದ ದೇವತೆಗಳನ್ನು ಸೃಜಿಸಿದನಷ್ಟೆ ; ಹೀಗೆಂದು ಉಪಾಸನೆಮಾಡಿದವನೂ ಹೀಗೆಯೇ ಅತಿಸೃಷ್ಟಿಯನ್ನು ಮಾಡುವ ಶಕ್ತಿಯನ್ನು ಸಂಪಾದಿಸಿಕೊಳ್ಳುವನು.

೭-೧೦. ಈ ಜಗತ್ತೆಲ್ಲವೂ ಹುಟ್ಟುವ ಮುಂಚೆ ಅವ್ಯಾಕೃತವಾಗಿತ್ತು. ಅದು ನಾಮರೂಪಗಳಾಗಿ ವ್ಯಾಕೃತವಾಗಿರುತ್ತದೆ. ಅವ್ಯಾಕೃತರೂಪದಲ್ಲಿದ್ದ ಪರಮಾತ್ಮನು ಈ ಶರೀರದಲ್ಲಿ ಒಳಹೊಕ್ಕು ಸಾಮಾನ್ಯರೂಪದಿಂದಲೂ ವಿಶೇಷರೂಪದಿಂದಲೂ ಇರುತ್ತಾನೆ. ಯಾರು ಇಲ್ಲಿ ಉಸಿರಾಡುವವನು, ಮಾತಾಡುವವನು, ನೋಡುವವನೂ, ಕೇಳುವವನು, ಮನನಮಾಡುವವನು – ಎಂದು ಕರ್ಮವಿಶೇಷಗಳಿಂದಾಗಿರುವ ವಿಶೇಷರೂಪಗಳಲ್ಲಿ ಒಂದೊಂದನ್ನೇ ಆತ್ಮನೆಂದು ಅರಿತುಕೊಳ್ಳುವನೋ ಅವನು ನಿಜವನ್ನು ಅರಿಯನು ; ಏಕೆಂದರೆ ಹಾಗೆ ಅರಿತರೆ ಆ ಒಂದೊಂದು ರೂಪದಿಂದಲೂ ಅಸಂಪೂರ್ಣನಾಗಿರುತ್ತಾನೆ. ಆದ್ದರಿಂದ ಆತ್ಮನೆಂದೇ ಅರಿಯಬೇಕು. ಏಕೆಂದರೆ ಆ ರೂಪದಲ್ಲಿ ಈ ವಿಶೇಷರೂಪಗಳೆಲ್ಲ ಒಂದಾಗಿರುತ್ತವೆ. ಇವುಗಳಲ್ಲೆಲ್ಲ ಈ ಸ್ವರೂಪದ ಆತ್ಮನನ್ನೇ ಹುಡುಕಿ ಅರಿತುಕೊಳ್ಳತಕ್ಕದ್ದು; ಏಕೆಂದರೆ ಅದನ್ನು ಅರಿತುಕೊಂಡರೆ ಇದೆಲ್ಲವನ್ನೂ ಅರಿತಂತೆ ಆಗುವದು. ಹೀಗೆಂದು ಉಪಾಸನೆ ಮಾಡಿದವನಿಗೆ ಕೀರ್ತಿಯೂ ಇಷ್ಟಜನರ ಸಂಗತಿಯೂ ದೊರೆಯುವವು.

ಈ ಆತ್ಮನು ಎಲ್ಲಕ್ಕಿಂತಲೂ ಒಳಗಿರುವದರಿಂದ ಪುತ್ರವಿತಾದಿಗಳೆಲ್ಲಕ್ಕಿಂತಲೂ ಪ್ರಿಯನಾದವನು. ಆತ್ಮನಿಗಿಂತ ಬೇರೆಯಾದದ್ದನ್ನು ಪ್ರಿಯವೆಂದೆಣಿಸುವವನ ಪ್ರಿಯವು ನಾಶವಾಗತಕ್ಕದ್ದಾಗಿದೆ. ಆದ್ದರಿಂದ ಆತ್ಮನನ್ನೇ ಪ್ರಿಯನೆಂದು ಅರಿಯಬೇಕು. ಆತ್ಮನನ್ನೇ ಪ್ರಿಯವೆಂದು ಅರಿಯುವವನ ಪ್ರಿಯವು ನಾಶವಾಗುವದಿಲ್ಲ.

ಬ್ರಹ್ಮಜ್ಞಾನವಾಗುವ ಮುಂಚೆಯೂ ಎಲ್ಲರೂ ಬ್ರಹ್ಮವೇ ಆಗಿದ್ದರು. ಆದರೆ ಹಾಗೆಂಬ ಜ್ಞಾನವಿರಲಿಲ್ಲ. ಅಷ್ಟೆ. ಈ ಬ್ರಹ್ಮವು ತನ್ನನ್ನೇ 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಂಡದ್ದರಿಂದ ಇದೆಲ್ಲವೂ ಆಯಿತು. ದೇವತೆಗಳಲ್ಲಿ ಯಾರು ಯಾರು, ಋಷಿಗಳಲ್ಲಿ ಯಾರುಯಾರು, ಮನುಷ್ಯರಲ್ಲಿ ಯಾರುಯಾರು 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಂಡರೋ ಅವರವರು ಸರ್ವಾತ್ಮಭಾವವನ್ನು ಪಡೆದುಕೊಂಡರು. ವಾಮದೇವನೆಂಬ ಋಷಿಯು ಈ ಜ್ಞಾನವನ್ನು ಪಡೆದುಕೊಂಡೇ 'ಅಹಂ ಮನುರಭವಂ ಸೂರ್ಯಶ್ಚ' (ನಾನೇ ಮನು, ಸೂರ್ಯ) ಎಂದು ಮುಂತಾಗಿರುವ ಮಂತ್ರಗಳ ದ್ರಷ್ಟೃವಾದನು. ಈಗಲೂ ಯಾವನು 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಳ್ಳುವನೋ ಅವನು ಸರ್ವವೂ ಆಗುತ್ತಾನೆ.

ಆದರೆ ಯಾವನು 'ನಾನು ಬೇರೆ, ಈ ದೇವತೆ ಬೇರೆ' ಎಂಬ ಭೇದಬುದ್ಧಿಯಿಂದ ಯಾವದಾದರೂ ದೇವತೆಯನ್ನು ಉಪಾಸನೆಮಾಡುತ್ತಾನೋ ಅವನಿಗೆ ತತ್ತ್ವವು ತಿಳಿಯದು. ಅವನು ದೇವತೆಗಳಿಗೆ ಪಶುವಿನಂತೆ ಕರ್ಮಾದಿ ಗಳಿಂದ ಉಪಕಾರಮಾಡುತ್ತಿರುವನು ; ಆದ್ದರಿಂದಲೇ ದೇವತೆಗಳು ಸಾಮಾನ್ಯವಾಗಿ ಬ್ರಹ್ಮಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಮನುಷ್ಯನನ್ನು ಬಿಡುವದಿಲ್ಲ.

೧೧-೧೫. ಈ ಕ್ಷತ್ರಿಯಾದಿಭೇದಗಳೆಲ್ಲವೂ ಮೊದಲು ಬ್ರಹ್ಮವೇ, ಬ್ರಾಹ್ಮಣನೇ, ಅಗ್ನಿರೂಪನಾದ ಪ್ರಜಾಪತಿಯೇ ಆಗಿತ್ತು. ಆ ಬ್ರಹ್ಮವು ಒಂದೇ ಇದ್ದದ್ದರಿಂದ ಕರ್ಮಕ್ಕೆ ಸಮರ್ಥವಾಗಿರಲಿಲ್ಲ. ಆದ್ದರಿಂದ ಅದು ಕ್ಷತ್ರಿಯ, ವೈಶ್ಯ, ಶೂದ್ರ - ಎಂಬ ವರ್ಣಾಭಿಮಾನಿಗಳಾದ ಇಂದ್ರಾದಿದೇವತೆಗಳನ್ನೂ ಅವರಿಂದ ಅನುಗ್ರಾಹ್ಯವಾದ ಬೇರೆಬೇರೆಯ ವರ್ಣದ ಮನುಷ್ಯರನ್ನೂ ಸೃಜಿಸಿತು. ಅವರನ್ನೆಲ್ಲ ಆಳುವದಕ್ಕೆ ಬೇಕಾದ ಧರ್ಮವನ್ನೂ ಸೃಜಿಸಿತು. ಅದು ದೇವತೆಗಳಲ್ಲಿ ಅಗ್ನಿರೂಪದ ಬ್ರಾಹ್ಮಣನೂ ಮನುಷ್ಯರಲ್ಲಿ ಬ್ರಾಹ್ಮಣರೂಪದ ಬ್ರಾಹ್ಮಣನೂ ಆಗಿರುವದರಿಂದ ದೇವಾಧೀನಕರ್ಮವು ಅಗ್ನಿಯ ದ್ವಾರದಿಂದಲೂ ಮನುಷ್ಯಸಂಬದ್ಧಕರ್ಮವು ಬ್ರಾಹ್ಮಣನ ದ್ವಾರದಿಂದಲೂ ಫಲವನ್ನು ಕೊಡುತ್ತದೆ. ಶಾಸ್ತ್ರೋಕ್ತವಾದ ಕರ್ಮದ ತಿಳಿವಳಿಕೆಯು ಸತ್ಯವೆಂದೂ ಅದರ ಅನುಷ್ಠಾನವು ಧರ್ಮವೆಂದೂ ಪ್ರಸಿದ್ಧವಾಗಿದೆ ; ಆದರೆ ಇವೆರಡೂ ನಿಜವಾಗಿ ಧರ್ಮವೇ. ಅಂತೂ ವರ್ಣಾಶ್ರಮವಿಹಿತಕರ್ಮವು ಈ ಧರ್ಮದ ದ್ವಾರದಿಂದ ತನ್ನ ಫಲವಾದ ಲೋಕಗಳನ್ನು ಕೊಡುತ್ತದೆ.

ಆದರೆ ಕರ್ಮಫಲವಾದ ಲೋಕಗಳಿಗಿಂತಲೂ ನಮ್ಮ ಸ್ವರೂಪವೇ ಆಗಿರುವ ಲೋಕವೊಂದುಂಟು. ಇದೇ ಆತ್ಮಲೋಕವು. ಈ ಸ್ವಲೋಕವನ್ನು ಕರ್ಮಿಗಳು ಅರಿತುಕೊಳ್ಳದೆ ಇರುತ್ತಾರೆ. ಇದು ನಮ್ಮ ಸ್ವರೂಪವೇ ಆಗಿದ್ದರೂ ಇದನ್ನು ಅರಿತುಕೊಳ್ಳದೆ ಸಾಯುವವನಿಗೆ ಇದರಿಂದ ಆಗಬೇಕಾದ ಫಲವಾಗುವದಿಲ್ಲ. ಇದನ್ನು ಅರಿಯದವನು ಎಷ್ಟು ಹೆಚ್ಚಿನ ಪುಣ್ಯವನ್ನು ಮಾಡಿದ್ದರೂ ಅದು ಕ್ಷಯವಾಗಿಯೇತೀರುತ್ತದೆ. ಈ ಆತ್ಮಲೋಕವನ್ನು ಅರಿತುಕೊಂಡವನಿಗೆ ಅಕ್ಷಯ ವಾದ ಸರ್ವಾತ್ಮಭಾವವೆಂಬ ಫಲವಾಗುವದು.

೧೬-೧೭. ಅಜ್ಞನಾದವನು ಪಶುವಿನಂತೆ. ದೇವತೆಗಳು, ಋಷಿಗಳು, ಪಿತೃಗಳು, ಮನುಷ್ಯರು, ಪಶುಗಳು, ಮನೆಯಲ್ಲಿರುವ ಮೃಗಗಳು, ಹಕ್ಕಿಗಳು, ಕೊನೆಗೆ ಇರುವೆಗಳು ಸಹ - ಇವೆಲ್ಲಕ್ಕೂ ವರ್ಣಾಶ್ರಮಕರ್ಮವನ್ನು ಮಾಡುವ

ಮೂಲಕ ಉಪಭೋಗ್ಯನಾಗಿರುತ್ತಾನೆ. ತಾನು ಹೀಗೆ ದೇವಾದಿಗಳಿಗೆ ಉಪಕಾರಕನೆಂದು ಎಣಿಸಿಕೊಂಡಿರುವ ಅಜ್ಞನನ್ನು ಆ ದೇವಾದಿಗಳು - ಕುಟುಂಬಿಯು ತನ್ನ ಪಶುವಿಗೆ ಅಪಾಯವಾಗದಂತೆ ನೋಡಿಕೊಳ್ಳುವ ಹಾಗೆ - ಬ್ರಹ್ಮಜ್ಞಾನದ ಕಡೆಗೆ ಹೊರಳಿ ತಮ್ಮಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವರು. ಆದ್ದರಿಂದ ಅಜ್ಞರು ಋಣಿಗಳಂತೆ ಕರ್ತವ್ಯವನ್ನು ಮಾಡಿಕೊಂಡೇ ಹೋಗಬೇಕು - ಎಂಬುದನ್ನು ಪಂಚಮಹಾಯಜ್ಞಪ್ರಕರಣದಲ್ಲಿಯೂ ಅವದಾನಪ್ರಕರಣದಲ್ಲಿಯೂ ತಿಳಿಸಿಕೊಟ್ಟಿರುತ್ತದೆ.

ಅಜ್ಞನಾದವನಿಗೆ ಬ್ರಹ್ಮಚರ್ಯಾಶ್ರಮದಲ್ಲಿಯೇ ಅವಿದ್ಯಾವಾಸನೆಯಿಂದ ಹೆಂಡತಿಯನ್ನು ಮಾಡಿಕೊಂಡು ಮಕ್ಕಳನ್ನು ಹಡೆಯಬೇಕೆಂಬ, ಮತ್ತು ವಿತ್ತವನ್ನು ಸಂಪಾದಿಸಿಕೊಂಡು ಕರ್ಮವನ್ನು ಮಾಡಬೇಕೆಂಬ, ಕಾಮವು ಇದ್ದುಕೊಂಡಿರುವದು. ಇದು ಪ್ರಜಾಪತಿಯಿಂದ ಹಿಡಿದು ಈಗಿನವರವರೆಗೂ ನಡೆದುಕೊಂಡುಬಂದಿರುತ್ತದೆ. ಹೆಂಡತಿಯೇ ಮುಂತಾದದ್ದರಲ್ಲಿ ತನಗೆ ಯಾವದೊಂದು ದೊರೆಯದಿದ್ದರೂ ಮನುಷ್ಯನು ಪೂರ್ಣನಲ್ಲವೆಂದೇ ಭಾವಿಸಿಕೊಳ್ಳುತ್ತಾನೆ. ಯಾವ ಅಜ್ಞನಿಗೆ ಇಂಥ ಅಸಂಪೂರ್ಣತೆಯಿರುವದೋ ಅವನು ಮನಸ್ಸೇ ತನ್ನ ಆತ್ಮನು, ವಾಕ್ಕು ಹೆಂಡತಿ, ಪ್ರಾಣವು ಪ್ರಜೆ, ಚಕ್ಷುಸ್ಸು ಮಾನುಷವಿತ್ತವು, ಶ್ರೋತ್ರವು ದೈವವಿತ್ತವು, ಶರೀರವೇ ಕರ್ಮವು ಎಂದು ಉಪಾಸನೆಮಾಡಬೇಕು. ಇದು ಪಾಜ್ಯಯಜ್ಞವಾಗುವದು. ಹೊರಗಿನ ಯಜ್ಞಕ್ಕೆ ಬೇಕಾದ ಪಶುವೂ ಪುರುಷನೂ ಪಾಜ್ಯವೇ ಆಗಿರುತ್ತದೆ ; ಎಲ್ಲವೂ ಪಾಜ್ಯವೇ, ನಾನೂ ಪಾಜ್ಯವೇ - ಎಂದು ಉಪಾಸನೆಮಾಡುವವನಿಗೆ ಪಾಜ್ಯಾತ್ಮಕನಾದ ಪ್ರಜಾಪತಿಯ ಪ್ರಾಪ್ತಿಯಾಗುವದು.

ಐದನೆಯ - ಆರನೆಯ ಬ್ರಾಹ್ಮಣಗಳ ಸಾರ

೧-೨. ಈಗಿನ ಪ್ರಜಾಪತಿಯು ಹಿಂದಿನ ಕಲ್ಪದಲ್ಲಿ ಸಾಧಕಾವಸ್ಥೆಯಲ್ಲಿ ಮಾಡಿದ ಜ್ಞಾನಕರ್ಮಗಳಿಂದ ಏಳು ಅನ್ನಗಳನ್ನು ಸೃಷ್ಟಿಸಿರುತ್ತಾನೆ. ಎಲ್ಲಾ ಪ್ರಾಣಿಗಳೂ ತಿನ್ನುತ್ತಿರುವ ಸಾಧಾರಣಾನ್ನವೊಂದು ; ಹುತಪ್ರಹುತಗಳ ರೂಪದ ಅಥವಾ ದರ್ಶಪೂರ್ಣಮಾಸಗಳ ರೂಪದ ಕರ್ಮಗಳು ಎರಡು ದೇವತೆಗಳಿಗಾಗಿ ಹುಟ್ಟಿದ್ದು ; ಪಶುಗಳಿಗೆ ಕೊಟ್ಟ ಹಾಲೆಂಬುದು ಒಂದು ; ವಾಙ್ಮನಃಪ್ರಾಣಗಳೆಂಬ

ತನಗಾಗಿ ಸೃಷ್ಟಿಮಾಡಿಕೊಂಡ ಅನ್ನಗಳು ಮೂರು. ಈ ಏಳು ಬಗೆಯ ಅನ್ನಗಳನ್ನು ಪುರುಷನು ಮತ್ತೆಮತ್ತೆ ಜ್ಞಾನಕರ್ಮಗಳಿಂದ ಸೃಜಿಸುತ್ತಲೇ ಇರುವದರಿಂದ ಅವು ಕ್ಷಯವಾಗದೆ ಇವೆ. ಹೀಗೆಂದು ತಿಳಿದುಕೊಂಡವನು ಸ್ವಪ್ರಧಾನನಾದ ಭೋಕ್ತೃವಾಗಿ ಭೋಗವನ್ನು ಅನುಭವಿಸಿ ದೇವತೆಗಳಲ್ಲಿ ಒಂದಾಗಿ ಪ್ರಜಾಪತಿಯಾಗುವನು.

೩-೧೩. ಪ್ರಜಾಪತಿಯು ತನಗಾಗಿ ವಾಙ್ಮನಃಪ್ರಾಣಗಳೆಂಬ ಮೂರು ಅನ್ನಗಳನ್ನು ಮಾಡಿಕೊಂಡಿರುತ್ತಾನೆ. ಇವುಗಳೊಳಗೆ ಒಂದಾದ ಮನಸ್ಸಿನ ನೆರವಿನಿಂದ ಇಂದ್ರಿಯಗಳ ವ್ಯಾಪಾರವು ನಡೆಯುತ್ತಿದೆ ; ಕಾಮಸಂಕಲ್ಪಾದಿಗಳೆಲ್ಲ ಆ ಮನಸ್ಸಿನ ವೃತ್ತಿಗಳೇ. ಇನ್ನು ವಾಕ್ಕೆಂದರೆ ಶಬ್ದಸಾಮಾನ್ಯವು ; ಅದು ಎಲ್ಲವನ್ನೂ ವಿಷಯೀಕರಿಸುತ್ತದೆ, ಅದನ್ನು ಯಾವದೂ ವಿಷಯೀಕರಿಸುವದಿಲ್ಲ. ಪ್ರಾಣಾಪಾನಾದಿವ್ಯಾಪಾರಪಂಚಕವುಳ್ಳದ್ದೇ ಮೂರನೆಯದಾದ ಪ್ರಾಣವು. ಶರೀರವು ಈ ವಾಙ್ಮನಃಪ್ರಾಣಗಳಿಂದಾಗಿರುತ್ತದೆ. ಇದೇ ಅವಿವೇಕಿಗಳಿಗೆ ಆತ್ಮನು. ಭೂರ್ಭುವಃ ಸುವರ್ಲೋಕಗಳೂ ಋಗ್ಯಜುಸ್ಸಾಮವೇದಗಳೂ ದೇವಪಿತೃಮನುಷ್ಯರೂ ಮಾತಾಪಿತೃಪ್ರಜೆಗಳೂ ವಿಜ್ಞಾತಾ ವಿಜ್ಞಾನವಿಜಿಜ್ಞಾಸ್ಯಗಳೂ ವಾಙ್ಮನಃಪ್ರಾಣಗಳ ವಿಭೂತಿಗಳೇ. ಇವುಗಳ ಆಧಿದೈವಿಕವಿಭೂತಿಗಳು ಯಾವವೆಂದರೆ ವಾಕ್ಕಿಗೆ ಪೃಥ್ವಿಯು ಶರೀರವು, ಅಗ್ನಿಯು ಕರಣವು ; ಅಧ್ಯಾತ್ಮಾಧಿಭೂತವಾಗಿರುವ ವಾಕ್ಕೆಲ್ಲ ಈ ದೈವೀವಾಕ್ಕಿನಿಂದ ವ್ಯಾಪ್ತವಾಗಿರುತ್ತದೆ. ಇದರಂತೆ ಮನಸ್ಸಿಗೆ ದ್ಯುಲೋಕವು ಶರೀರವು, ಆದಿತ್ಯನು ಕರಣವು ; ಅಧ್ಯಾತ್ಮಾಧಿಭೂತವಾಗಿರುವ ಮನಸ್ಸೆಲ್ಲ ಈ ದೈವಮನಸ್ಸಿನಿಂದ ವ್ಯಾಪ್ತವಾಗಿರುತ್ತದೆ. ಇದರಂತೆ ಪ್ರಾಣಕ್ಕೆ ಅಪ್ಪು ಶರೀರವು, ಚಂದ್ರನು ಕರಣವು ; ಅಧ್ಯಾತ್ಮಾಧಿಭೂತವಾಗಿರುವ ಪ್ರಾಣವೆಲ್ಲ ಈ ದೈವಪ್ರಾಣದಿಂದ ವ್ಯಾಪ್ತವಾಗಿರುತ್ತದೆ.

೧೪-೧೫. ವಾಙ್ಮನಃಪ್ರಾಣಗಳೆಂಬ ಈ ಮೂರು ಅನ್ನಗಳೂ ಪಾಙ್ಕ್ತಕರ್ಮದ ಫಲವೇ ; ಏಕೆಂದರೆ ಅವು ಪಾಙ್ಕ್ತತ್ವಕವಾಗಿಯೇ ಇರುತ್ತವೆ. ಹೇಗೆಂದರೆ ತ್ರ್ಯಾತ್ಮನಾದ ಪ್ರಜಾಪತಿಯು ಸಂವತ್ಸರರೂಪದಿಂದ ಹದಿನಾರು ಕಲೆಗಳುಳ್ಳವನಾಗಿರುತ್ತಾನೆ ; ತಿಥಿಗಳೇ ಅವನಿಗೆ ಹದಿನೈದು ಕಲೆಗಳು ; ಅವನ ಧ್ರುವವಾದ ಒಂದು ಕಲೆಯು ಅಮಾವಾಸ್ಯೆಯಲ್ಲಿ ಹಾಗೆಯೇ ಇದ್ದು ಉಳಿದ ಹದಿನೈದು ಕಲೆಗಳಿಂದ ವೃದ್ಧಿಕ್ಷಯವನ್ನು ಹೊಂದುತ್ತಿರುವದರಿಂದ ಆ ಕಲೆಗಳೇ ವಿತ್ತವಾಗಿರುತ್ತವೆ. ಅಂತೂ ದ್ಯುಲೋಕ, ಆದಿತ್ಯ- ಎಂಬ ಮನಸ್ಸು ಗಂಡನಾದ

ತಂದೆ; ಪೃಥಿವ್ಯಗ್ನಿಗಳೆಂಬ ವಾಕ್ಕು ಹೆಂಡತಿಯಾದ ತಾಯಿ ; ಪ್ರಾಣವು ಅವುಗಳೆರಡರ ಪ್ರಜೆ ; ತಿಥಿಗಳೆಂಬ ಕಲೆಗಳು ವಿತ್ತ. ಕಲೆಗಳಿಂದ ಆಗುವ ಜಗತ್ಪರಿಣಾಮವೇ ಕರ್ಮ- ಹೀಗೆ ಈ ಪ್ರಜಾಪತಿಯು ಪಾಜ್ಯಾತ್ಮಕನಾಗಿರುತ್ತಾನೆ- ಹೀಗೆಂದು ಉಪಾಸನೆಮಾಡುವವನೇ ಮುಂದೆ ಪ್ರಜಾಪತಿಯಾಗುವನು. ಆ ಉಪಾಸಕನಿಗೆ ವಿತ್ತವು ಹದಿನೈದು ಕಲೆಗಳು ; ಶರೀರವೇ ಹದಿನಾರನೆಯ ಧ್ರುವಕಲೆಯು ; ಏಕೆಂದರೆ ಅದು ವಿತ್ತದಿಂದ ವೃದ್ಧಿಕ್ಷಯಗಳನ್ನು ಹೊಂದುತ್ತಿರುವದು. ಈ ಶರೀರವೇ ಗುಂಬವು, ವಿತ್ತವು ಹಾರೆಕೋಲು, ಹಳಿ- ಇವುಗಳಂತಿರುವ ಸುತ್ತುಗಟ್ಟು ಆದ್ದರಿಂದ ಶರೀರವೊಂದು ಬದುಕಿದ್ದರೆ ಎಲ್ಲವನ್ನೂ ಕಳೆದುಕೊಂಡಿದ್ದರೂ ಸುತ್ತುಗಟ್ಟು ಮಾತ್ರ ಹೋದಂತಾಯಿತು. ಅಷ್ಟೆ, ಈ ರೀತಿಯಲ್ಲಿ ಪುರುಷನು ದೈವ ವಿತ್ತರೂಪವಾದ ಉಪಾಸನೆಯಿಂದೊಡಗೂಡಿದ ಪಾಜ್ಯಕರ್ಮದಿಂದ ಪಾಜ್ಯರೂಪನಾದ ಪ್ರಜಾಪತಿಯ ಸಾಯುಜ್ಯವನ್ನು ಪಡೆದುಕೊಳ್ಳುತ್ತಾನೆ.

೧೬-೨೦. ಪುತ್ರ, ಕರ್ಮ, ಉಪಾಸನೆ - ಈ ಸಾಧನಗಳಿಂದ ಕ್ರಮವಾಗಿ ಮನುಷ್ಯಲೋಕ, ಪಿತೃಲೋಕ, ದೇವಲೋಕ - ಇವುಗಳನ್ನು ಗೆದ್ದುಕೊಳ್ಳುತ್ತಾರೆ. ಮನುಷ್ಯಲೋಕವು ಪುತ್ರನಿಂದಲೇ ಗೆದ್ದುಕೊಳ್ಳತಕ್ಕದ್ದು. ಈ ಲೋಕಗಳಲ್ಲಿ ದೇವಲೋಕವು ಶ್ರೇಷ್ಠವಾದದ್ದಾದ್ದರಿಂದ ಉಪಾಸನೆಯು ಉತ್ತಮಸಾಧನವು. ಪುತ್ರನಿಂದ ಈ ಲೋಕವನ್ನು ಗೆದ್ದುಕೊಳ್ಳುವದು ಹೇಗೆಂದರೆ, ಸಾಧಕನಾದವನು ತನ್ನ ಮಗನಿಗೆ ಮೊದಲೇ ಉಪದೇಶಮಾಡಿಕೊಂಡಿದ್ದು, ತನಗೆ ಸಾಯುವ ಕಾಲವು ಹತ್ತಿರವಾಗಲು ಅವನನ್ನು ಕರೆದು 'ನೀನೇ ಬ್ರಹ್ಮವು, ನೀನೇ ಯಜ್ಞವು, ನೀನೇ ಲೋಕವು' ಎಂದು ನುಡಿಯಬೇಕು. ಆ ಪುತ್ರನು ಇದರರ್ಥವನ್ನು ಅರಿತುಕೊಂಡು 'ನಾನೇ ಬ್ರಹ್ಮವು, ನಾನೇ ಯಜ್ಞವು, ನಾನೇ ಲೋಕವು' ಎಂದು ಉತ್ತರವನ್ನು ಕೊಡುತ್ತಾನೆ. ತಂದೆಯು ಇದುವರೆಗೆ ಅಧ್ಯಯನಮಾಡಿರುವದು, ಮಾಡದೆ ಇರುವದು - ಎಲ್ಲವೂ 'ಬ್ರಹ್ಮ'ವೆನಿಸುವದು. ಇದನ್ನು ಮುಂದೆ ಮಗನು ಮಾಡತಕ್ಕದ್ದು. ಇದರಂತೆ ತಂದೆಯು ಈವರೆಗೆ ಮಾಡಿರುವ ಅಥವಾ ಮಾಡದೆ ಉಳಿದಿರುವ ಕರ್ಮವೆಲ್ಲವೂ 'ಯಜ್ಞವು'. ಅದನ್ನು ಇನ್ನು ಮುಂದೆ ಮಗನು ಅನುಷ್ಠಾನಮಾಡತಕ್ಕದ್ದು. ಹೀಗೆಯೇ ತಂದೆಯು ಈವರೆಗೆ ಸಾಧನಗಳಿಂದ ಗೆದ್ದುಕೊಂಡಿರುವ, ಅಥವಾ ಗೆದ್ದುಕೊಳ್ಳದೆ ಉಳಿದಿರುವ ಲೋಕಗಳೆಲ್ಲವೂ 'ಲೋಕವು'. ಇನ್ನುಮುಂದೆ ಮಗನು ಅವುಗಳನ್ನು ಗೆದ್ದುಕೊಳ್ಳತಕ್ಕದ್ದು. ಹೀಗೆಂದು ತಂದೆಯು ತನ್ನ ಮೇಲಿದ್ದ ಸಾಧನಗಳ ಹೊರೆಯನ್ನು ಮಗನಿಗೆ ಒಪ್ಪಿಸುವ ಕರ್ಮಕ್ಕೆ

'ಸಂಪ್ರತ್ತಿ' ಎಂದು ಹೆಸರು. ಹೀಗೆ ಮಾಡಿದವನು ಇನ್ನುಮೇಲೆ ಪುತ್ರರೂಪ, ತನ್ನ ರೂಪ ಎಂದು ಎರಡು ರೂಪಗಳಿಂದ ಕೂಡಿರುತ್ತಾನೆ. ಪುತ್ರರೂಪದಿಂದ ಈ ಲೋಕದಲ್ಲಿಯೇ ಇದ್ದುಕೊಂಡಿರುತ್ತಾನೆ. ತನ್ನ ಸ್ವರೂಪದಲ್ಲಿರುವ ಅವನನ್ನು ಅಧಿದೈವಿಕವಾದ ಅಪರಿಚ್ಛಿನ್ನವಾದ ವಾಙ್ಮನಃಪ್ರಾಣಗಳು ತುಂಬಿಕೊಳ್ಳುತ್ತವೆ ಪೃಥಿವ್ಯಗ್ನಿಗಳಿಂದ ಹೊರಟ ದೈವವಾಕ್ಕು- ಏನು ಆಡಿದರೆ ಅದರಂತೆ ನಡೆಯುವ ವಾಕ್ಕು - ಅವನನ್ನು ತುಂಬಿಕೊಳ್ಳುತ್ತದೆ ದ್ಯುಲೋಕಾದಿತ್ಯರಿಂದ ಹೊರಟ ದೈವಮನಸ್ಸು- ಯಾವ ಶೋಕವೂ ಇಲ್ಲದೆ ಆನಂದಿಯೇ ಆಗಿರುವ ಮನಸ್ಸು - ಅವನನ್ನು ತುಂಬಿಕೊಳ್ಳುತ್ತದೆ ; ಆಪ್ಯ - ಚಂದ್ರರಿಂದ ಹೊರಟ ದೈವಪ್ರಾಣವು - ಸಂಚಾರಾಸಂಚಾರಗಳಿಂದ ವ್ಯಥೆಗೊಳ್ಳದೆ ಗಾಸಿಯಾಗದೆ ಇರುವ ಪ್ರಾಣವು- ಅವನನ್ನು ತುಂಬಿಕೊಳ್ಳುತ್ತದೆ. ಆಗ ಈ ಉಪಾಸಕನು ವಾಙ್ಮನಃಪ್ರಾಣಾತ್ಮನಾದ ಪ್ರಜಾಪತಿಯ ಸಾಯುಜ್ಯವನ್ನು ಪಡೆದು ಎಲ್ಲಾ ಪ್ರಾಣಿಗಳ ಆತ್ಮನಾಗಿಬಿಡುವನು. ಈ ರೂಪದಿಂದ ತನ್ನ ಪುತ್ರನನ್ನೂ ತುಂಬಿಕೊಂಡಿರುವನು. ಎಲ್ಲಾ ಪ್ರಾಣಿಗಳೂ, ಪ್ರಜಾಪತಿಯನ್ನು ಹೇಗೋ ಹಾಗೆ, ಅವನನ್ನು ಗೌರವಿಸುವವು.

೨೧-೨೩. ಆಧಿದೈವಿಕವಾಙ್ಮನಃಪ್ರಾಣಗಳೆಲ್ಲವೂ ಸರ್ವತ್ರ ವ್ಯಾಪಕವಾಗಿ ಸಮಾನವಾಗಿಯೇ ಅನಂತವಾಗಿರುವದಾದರೂ ಪ್ರಾಣದಲ್ಲಿ ಒಂದು ವಿಶೇಷವಿದೆ. ಅದೇನೆಂದರೆ ಆಧ್ಯಾತ್ಮವಾಗಿ ವಾಕ್ಕು, ಚಕ್ಷುಸ್ಸು ಶ್ರೋತ್ರ- ಮುಂತಾದ ಇಂದ್ರಿಯಗಳು ಸತತವಾಗಿ ತಮ್ಮ ತಮ್ಮ ವದನ, ದರ್ಶನ, ಶ್ರವಣ - ಮುಂತಾದ ವ್ಯಾಪಾರಗಳನ್ನು ಮಾಡುತ್ತಲೇ ಇರುವದಕ್ಕಾಗುವದಿಲ್ಲ. ಅವುಗಳನ್ನು ಶ್ರಮರೂಪಿಯಾದ ಮೃತ್ಯು ಹಿಡಿದುಕೊಂಡುಬಿಟ್ಟಿರುತ್ತದೆ. ಮುಖ್ಯಪ್ರಾಣವೊಂದೇ ವ್ಯಥೆಗೊಳ್ಳದೆ ಗಾಸಿಗೊಳ್ಳದೆ ಇರುತ್ತದೆ : ಆದ್ದರಿಂದ ಮಿಕ್ಕ ಕರಣಗಳೆಲ್ಲ ಪ್ರಾಣರೂಪದಿಂದಲೇ ಅಮೃತವಾಗಿರುತ್ತವೆ. ಇದರಂತೆ ಅಧಿದೈವತವಾಗಿ ಅಗ್ನಿ, ಆದಿತ್ಯ, ಚಂದ್ರ - ಮುಂತಾದ ದೇವತೆಗಳು ಜ್ವಲನ, ತಪನ, ಭಾನ- ಮುಂತಾದ ತಮ್ಮತಮ್ಮ ವ್ಯಾಪಾರಗಳನ್ನು ಸತತವಾಗಿ ಮಾಡುತ್ತಿರಲಾರರು. ಅವರು ಅಸ್ತವಾಗುವದೂ ಉಂಟು. ಆದರೆ ವಾಯುದೇವತೆಯು ಮಾತ್ರ ಅಸ್ತವಾಗುವದಿಲ್ಲ. ಆದ್ದರಿಂದ ಅಧ್ಯಾತ್ಮರೂಪವಾದ ಪ್ರಾಣನೂ ಅಧಿದೈವತರೂಪವಾದ ವಾಯುವೂ ಆಗಿರುವ ದೇವತೆಯೇ ತಾನೆಂದು ಉಪಾಸನೆಮಾಡಬೇಕು. ಈ ವ್ರತವನ್ನು ಸಾಯುವವರೆಗೂ ಹಿಡಿದಿರುವಾತನು ಉಪಾಸನೆಯ ಬಲಾಬಲತಾರತಮ್ಯಕ್ಕನುಗುಣವಾಗಿ ಆ ದೇವತೆಯ ಸಾಯುಜ್ಯವನ್ನೋ ಸಾಲೋಕ್ಯವನ್ನೋ ಪಡೆದುಕೊಳ್ಳುತ್ತಾನೆ.

ಆರನೆಯ ಬ್ರಾಹ್ಮಣ

೧. ಸಾಧ್ಯಸಾಧನರೂಪವಾದ ವ್ಯಾಕೃತಾವ್ಯಾಕೃತಜಗತ್ತೆಲ್ಲವೂ ನಾಮ, ರೂಪ, ಕರ್ಮ- ಎಂಬೀ ಮೂರರಲ್ಲಿ ಅಡಕವಾಗಿರುತ್ತದೆ. ಇವುಗಳೊಳಗೆ ನಾಮಗಳೆಲ್ಲ ವಾಕ್ಕು ಎಂಬ ಶಬ್ದಸಾಮಾನ್ಯದಲ್ಲಿ ಅಡಕವಾಗಿರುತ್ತವೆ. ನಾಮಗಳು ವಾಕ್ಕಿನ ಕಾರ್ಯವಿಶೇಷಗಳು ; ವಾಕ್ಕೆಂಬುದೇ ಅವುಗಳ ಆತ್ಮವು. ಆದ್ದರಿಂದ ಅವೆಲ್ಲ ವಾಕ್ಕೇ.

೨-೩. ಇದರಂತೆ ರೂಪಗಳೆಲ್ಲವೂ ಚಕ್ಷುವೆಂಬ ರೂಪಸಾಮಾನ್ಯದ ಕಾರ್ಯಗಳು, ವಿಶೇಷಗಳು ; ಅದೇ ಅವುಗಳ ಆತ್ಮವು. ಆದ್ದರಿಂದ ಅವೆಲ್ಲ ಚಕ್ಷುಸ್ಸೇ. ಹೀಗೆಯೇ ಮನನ, ದರ್ಶನ, ಚಲನ - ಎಂಬ ಕರ್ಮಗಳೆಲ್ಲವೂ ಶರೀರವೆಂಬ ಕರ್ಮಸಾಮಾನ್ಯದ ಕಾರ್ಯಗಳು. ಅದರಲ್ಲಿ ಅಭಿವ್ಯಕ್ತವಾಗುವ ವಿಶೇಷಗಳು ; ಅದೇ ಅವುಗಳ ಆತ್ಮವು. ಆದ್ದರಿಂದ ಕರ್ಮಗಳೆಲ್ಲ ಈ ಶರೀರವೇ.

೩. ನಾಮ, ರೂಪ, ಕರ್ಮ- ಎಂಬೀ ಮೂರೂ ''ಶರೀರ''ವೆಂಬ ರೂಪದಿಂದ ಒಂದು ; ಶರೀರವು ಒಂದೇ ಆದರೂ ನಾಮರೂಪಕರ್ಮಗಳೆಂಬ ಮೂರು ರೂಪದಿಂದಲೂ ತೋರಿಕೊಳ್ಳುತ್ತಿರುವದು.

೪. ಇದುವರೆಗೆ ಹೇಳಿದ್ದೆಲ್ಲ 'ಸತ್ಯ''ವೆಂಬ ನಾಮರೂಪಕಾರ್ಯಾತ್ಮಕ ಶರೀರ ; ಅಮೃತವೆಂಬ ಕರಣಾತ್ಮಕಪ್ರಾಣ- ಇವೆರಡರಲ್ಲಿ ಅಡಕವಾಗಿರುತ್ತದೆ. ಸತ್ಯವೆಂಬ ಶರೀರರೂಪವಾದ ನಾಮರೂಪಗಳು ಮರ್ತ್ಯವಾಗಿರುತ್ತವೆ, ಅವು ಗಳಿಂದ ಮರೆಯಾಗಿರುವ, ಶರೀರವನ್ನು ಹಿಡಿದೆತ್ತಿಕೊಂಡಿರುವ ಕರಣಾತ್ಮಕಪ್ರಾಣವು ಅಮೃತವಾಗಿರುತ್ತದೆ. ಇದಿಷ್ಟೂ ಅವಿದ್ಯಾವಿಷಯವು ; ಇನ್ನು ಮುಂದೆ ವಿದ್ಯಾವಿಷಯವನ್ನು ತಿಳಿಸಲಾಗುವದು.

ಎರಡನೆಯ ಅಧ್ಯಾಯ

ಒಂದನೆಯ ಬ್ರಾಹ್ಮಣದ ಸಾರ

೧. ದೃಪ್ತಬಾಲಾಕಿ ಗಾರ್ಗ್ಯ ಎಂಬ ಒಬ್ಬ ವಾಗ್ಮಿಯಿದ್ದನು. ಅವನು ಒಮ್ಮೆ ಕಾಶಿರಾಜನಾದ ಅಜಾತಶತ್ರುವಿನ ಬಳಿಗೆ ಬಂದು 'ನಿನಗೆ ಬ್ರಹ್ಮವನ್ನು ಹೇಳಿಕೊಡುವೆನು' ಎಂದನು. ರಾಜನು ಈ ಸೂಚನೆಯಿಂದ ಬ್ರಾಹ್ಮಣನು ತನಗೂ ಜನಕನ ಸ್ಥಾನವನ್ನು ಕೊಟ್ಟಂತಾಯಿತೆಂದು ಸಂತೋಷದಿಂದ ಆ ಬ್ರಾಹ್ಮಣನನ್ನು ಸ್ವಾಗತಿಸಿದನು.

೨-೧೩. ಗಾರ್ಗ್ಯನು ಅಧಿದೈವತವಾದ ಆದಿತ್ಯ, ಚಂದ್ರ, ಮಿಂಚು, ಆಕಾಶ, ವಾಯು, ಅಗ್ನಿ, ಅಪ್ಪು ಕನ್ನಡಿ, ನಡೆಯುತ್ತಿರುವವನ ಹಿಂದೆ ಕೇಳಿಬರುವ ಶಬ್ದ ದಿಕ್ಕುಗಳು, ಹೊರಗಿನ ಕತ್ತಲೆ - ಇವುಗಳಲ್ಲಿರುವ ಪುರುಷರು, ಅಧ್ಯಾತ್ಮವಾಗಿ ಚಕ್ಷುಸ್ಸು, ಮನಸ್ಸು, ತ್ವಕ್ಕು, ಪ್ರಾಣ, ವಾಕ್ಕು, ರೇತಸ್ಸು , ಸತ್ವಶುದ್ಧಿಯುಕ್ತವಾದ ಹೃದಯ, ಪ್ರಾಣ, ಕರ್ಣಗಳು, ಅಜ್ಞಾನ- ಇವುಗಳ ಮೂಲಕ ಹೃದಯದಲ್ಲಿ ಕರ್ತೃಭೋಕ್ತೃವಾಗಿರುವರೆಂದು ಉಪಾಸನೆಮಾಡಬೇಕು, ಅದೇ ಬ್ರಹ್ಮವು ಎಂದು ಹೇಳಿದನು. ಅಜಾತಶತ್ರುವು ಈ ಆದಿತ್ಯಪುರುಷಾದಿಗಳ ಉಪಾಸನೆಯನ್ನೂ ಅವರ ಗುಣವಿಶೇಷಗಳನ್ನೂ ಉಪಾಸನೆಯ ಫಲವನ್ನೂ ತಾನು ಸಂಪೂರ್ಣವಾಗಿ ಬಲ್ಲೆನೆಂದೂ ಗಾರ್ಗ್ಯನು ಹೊಸದಾಗಿ ಏನನ್ನೂ ಹೇಳಿದಂತಾಗಲಿಲ್ಲವೆಂದೂ ತಿಳಿಸುತ್ತಾಬಂದನು. ಕೊನೆಗೆ ಗಾರ್ಗ್ಯನು ಪ್ರಜಾಪತಿಯ ಬುದ್ಧಿಯಲ್ಲಿರುವ ಪುರುಷನೇ ಅಧ್ಯಾತ್ಮವಾಗಿ ಬುದ್ಧಿಯ ಮೂಲಕ ಹೃದಯದಲ್ಲಿರುವ ಕರ್ತೃಭೋಕ್ತೃವಾಗಿರುವ ಬ್ರಹ್ಮವೆಂದು ತನ್ನ ಬ್ರಹ್ಮವಿಜ್ಞಾನವನ್ನು ಉಪಸಂಹಾರಮಾಡಿದನು. ಸಮಷ್ಟಿವ್ಯಷ್ಟಿರೂಪನಾದ ಪ್ರಾಣನೇ ಬ್ರಹ್ಮವೆಂಬುದು ಅವನ ಮತ.

೧೪-೧೫. ಆಗ ಅಜಾತಶತ್ರುವು 'ಇಷ್ಟೇಯೆ, ನಿನಗೆ ತಿಳಿದಿರುವದು ?' ಎಂದು ಕೇಳಲು ಗಾರ್ಗ್ಯನು 'ಇಷ್ಟೇ' ಎಂದನು. ಅಜಾತಶತ್ರುವು 'ಇಷ್ಟರಿಂದಲೇ ಬ್ರಹ್ಮವನ್ನು ಅರಿತುಕೊಂಡಂತೆ ಆಗುವದಿಲ್ಲ' ಎಂದನು. ಗಾರ್ಗ್ಯನು 'ಹಾಗಾದರೆ ನನಗೆ ನಿಜವಾದ ಬ್ರಹ್ಮಜ್ಞಾನವನ್ನು ತಿಳಿಸಿಕೊಡು, ನಿನ್ನ ಶಿಷ್ಯನಾಗಿ ಬಂದಿದೇನೆ' ಎನ್ನಲು ಅವನು 'ಬ್ರಾಹ್ಮಣನು ಕ್ಷತ್ರಿಯನ ಬಳಿಗೆ ಶಿಷ್ಯವೃತ್ತಿಗಾಗಿ ಬರುವದು ತಕ್ಕದ್ದಲ್ಲ; ಆದ್ದರಿಂದ ನಿನಗೆ ವಿಜ್ಞಾಪನೆಯನ್ನೇ ಮಾಡಿಕೊಳ್ಳುವೆನು' ಎಂದು ಕೈಹಿಡಿದುಕೊಂಡು

ಒಬ್ಬ ಸುಪ್ತಪುರುಷನ ಬಳಿಗೆ ಬಂದನು. ಆಗ ಅಜಾತಶತ್ರುವು 'ಬೃಹನ್, ಪಾಂಡರ ವಾಸ, ಸೋಮರಾಜನ್' ಎಂದು ಮುಂತಾಗಿ ಪ್ರಾಣನಾಮಗಳಿಂದ ಕರೆದರೂ ಆ ಸುಪ್ತನು ಎಚ್ಚರಲಿಲ್ಲ ; ಆಗ ಅವನನ್ನು ಕೈಯಿಂದ ಹೊರಳಿಸಿ ಎಬ್ಬಿಸಲು ಅವನು ಎಚ್ಚತ್ತನು. ದೇವತಾತ್ಮನಾದ ಪ್ರಾಣನಿಗಿಂತ ವ್ಯತಿರಿಕ್ತನಾದವನೇ ಈ ಕಾರ್ಯಕರಣ ಸಂಘಾತದಲ್ಲಿ ಕರ್ತೃಭೋಕ್ತೃವಾಗಿರುವನೆಂದು ಇದರಿಂದ ಸ್ಪಷ್ಟವಾಯಿತು.

೧೬-೧೯. ಬಳಿಕ ಅಜಾತಶತ್ರುವು ಪರಬ್ರಹ್ಮವನ್ನೇ ಗಾರ್ಗ್ಯನಿಗೆ ತಿಳಿಸಿಕೊಡಬೇಕೆಂದು ' ಈ ಪುರುಷನು ಹೀಗೆ ನಿದ್ರಿಸುತ್ತಿದ್ದನಲ್ಲ, ಆಗ ಎಲ್ಲಿದ್ದನು ? ಈಗ ಎಲ್ಲಿಂದ ಬಂದನು ?' - ಎಂದು ಕೇಳಿದನು. ಗಾರ್ಗ್ಯನಿಗೆ ಇದು ತಿಳಿದಿರಲಿಲ್ಲ. ಅಜಾತಶತ್ರುವು ಈ ತತ್ತ್ವವನ್ನು ಹೀಗೆಂದು ತಿಳಿಸಿಕೊಟ್ಟನು : 'ಈ ವಿಜ್ಞಾನಮಯ ಪುರುಷನು ನಿದ್ರಿಸುತ್ತಿದ್ದನಲ್ಲ, ಆಗ ಅಂತಃಕರಣದಲ್ಲಿರುವ ವಿಶೇಷವಿಜ್ಞಾನದಿಂದ ವಾಗಾದಿಪ್ರಾಣಗಳ ವಿಷಯವಿಶೇಷಪ್ರಕಾಶನಸಾಮರ್ಥ್ಯವನ್ನು ಹಿಡಿದೆಳೆದು ಕೊಂಡು ಹೃದಯದೊಳಗೆ ಇರುವ ಆಕಾಶನೆಂಬ ಹೆಸರಿನ ಪರಮಾತ್ಮನ ರೂಪದಲ್ಲಿದ್ದುಕೊಂಡಿರುತ್ತಾನೆ. ಆಗ ಅವನಿಗೆ 'ಸ್ವಪಿತಿ' (ತನ್ನಲ್ಲಿ ಸೇರಿರುತ್ತಾನೆ) ಎಂಬ ಹೆಸರು ಸಲ್ಲುತ್ತದೆ. ಅವನು ಕನಸುಕಾಣುತ್ತಿರುವನಲ್ಲ, ಆಗ ಮಹಾರಾಜ ನೊಬ್ಬನು ತನ್ನ ದೇಶದಲ್ಲಿ ಸಪರಿವಾರನಾಗಿ ಸ್ವೇಚ್ಛೆಯಿಂದ ಸಂಚರಿಸುತ್ತಿರುವಂತೆ ಸಕಲಪ್ರಾಣಗಳೊಂದಿಗೆ ತನ್ನ ಶರೀರದಲ್ಲಿಯೇ ಸಂಚರಿಸುತ್ತಿರುತ್ತಾನೆ. ಅವನು ಯಾವಾಗ ಸುಷುಪ್ತಿಯನ್ನು ಹೊಂದುತ್ತಾನೋ ಆಗ ಏನೊಂದನ್ನೂ ಅರಿಯುವದಿಲ್ಲ. ಏನೂ ಅರಿಯದ ಬಾಲಕನೊಬ್ಬನು, ಸುತೃಪ್ತನಾದ ಮಹಾರಾಜ ನೊಬ್ಬನು, ಅಥವಾ ಸದಾಚಾರನಿಷ್ಠನಾದ ಬ್ರಾಹ್ಮಣನೊಬ್ಬನು- ಹೇಗೆ ಸ್ವಸ್ಥನಾಗಿರು ವನೋ ಅದರಂತೆ ಇವನು ಮಿಗಿಲಿಲ್ಲದ ಆನಂದದಲ್ಲಿದ್ದುಕೊಂಡಿರುತ್ತಾನೆ.

೨೦. ಹೇಗೆ ಜೇಡರಹುಳು ನೂಲಿನ ರೂಪದಿಂದ ಹೊರಕ್ಕೆ ಬರುವದೋ, ಹೇಗೆ ಬೆಂಕಿಯು ಸಣ್ಣ ಕಿಡಿಗಳಾಗಿ ಸಿಡಿದುಬರುವದೋ ಹಾಗೆಯೇ ಸುಷುಪ್ತಿಯಲ್ಲಿ ಈ ಆತ್ಮನಿಂದ ವಾಗಾದಿಸರ್ವಪ್ರಾಣಗಳೂ ಸರ್ವಲೋಕಗಳೂ ಪ್ರಾಣಲೋಕಗಳಿಗೆ ಅಧಿಷ್ಠಾತೃಗಳಾದ ಸರ್ವದೇವತೆಗಳೂ ಬ್ರಹ್ಮಾದಿಸ್ತಂಬ ಪರ್ಯಂತವಾದ ಸರ್ವಪ್ರಾಣಿಗಳೂ ಎಲ್ಲಾ ವಿಶೇಷಾತ್ಮರೂ ಹೊರಕ್ಕೆ ಬರುತ್ತಾರೆ. ಈ ಪರಮಾತ್ಮನಿಗೆ ಸತ್ಯದ ಸತ್ಯವು ಎಂಬುದು ಉಪನಿಷತ್ತು ಎಂದರೆ ರಹಸ್ಯಾಭಿಧಾನವು. ಪ್ರಾಣಗಳೇ ಸತ್ಯವು, ಈತನು ಅವುಗಳ ಸತ್ಯವು.

ಎರಡನೆಯ ಬ್ರಾಹ್ಮಣದ ಸಾರ

೧. ಪರಮಾತ್ಮನಿಗೆ ಸತ್ಯದ ಸತ್ಯವೆಂಬ ಅಭಿಧಾನವನ್ನು ಹೇಳಿ ಪ್ರಾಣಗಳೇ ಸತ್ಯವು, ಪರಮಾತ್ಮನು ಅವುಗಳ ಸತ್ಯವು ಎಂದು ಹಿಂದೆ ೨-೧-೨೦ರಲ್ಲಿ ತಿಳಿಸಿತ್ತಷ್ಟೆ ಈ ಬ್ರಾಹ್ಮಣದಲ್ಲಿ ಆ ಪ್ರಾಣಗಳು ಯಾವವು ಎಂಬುದನ್ನೂ ಅವುಗಳ ರಹಸ್ಯಾಭಿಧಾನಗಳನ್ನೂ ಉಪಾಸನೆಗಾಗಿ ತಿಳಿಸಿರುತ್ತದೆ. ಯಾವನು ಪ್ರಾಣವೆಂಬ ಕರು, ಅದರ ಕೊಟ್ಟಿಗೆ, ಗೊಂತು, ಗೂಟ, ಹಗ್ಗ - ಇವುಗಳನ್ನರಿತು ಕರುವನ್ನು ಉಪಾಸನೆಮಾಡುವನೋ ಅವನು ಏಳು ತಲೆಯ ವರೆಗಿನ ತನ್ನ ಹಗೆಗಳಾದ ದಾಯಾದರನ್ನು ಕೊಂದವನಾಗುತ್ತಾನೆ. ನಡುವಿನ ಪ್ರಾಣವೇ ಕರು, ಶರೀರವೇ ಅದರ ಕೊಟ್ಟಿಗೆ, ತಲೆಯೇ ಗೊಂತು, ಬಲವೇ ಗೂಟ, ಅನ್ನವೇ ಹಗ್ಗ.

೨. ಈ ಪ್ರಾಣವನ್ನು ಏಳು ಅಕ್ಷಿತಿಗಳು (ಅಕ್ಷಯಕಾರಣರಾದ ದೇವತೆಗಳು) ಸೇವಿಸುತ್ತಿರುವರೆಂದು ಉಪಾಸನೆಮಾಡಬೇಕು. ಕಣ್ಣಿನಲ್ಲಿರುವ ಕೆಂಪುಗೆರೆಗಳ ಮೂಲಕ ರುದ್ರನು, ಅದರಲ್ಲಿರುವ ಕಪ್ಪಿನ ಮೂಲಕವಾಗಿ ಅಗ್ನಿ, ಬಿಳುಪಿನ ಮೂಲಕವಾಗಿ ಇಂದ್ರ, ಕೆಳರೆಪ್ಪೆಯ ಮೂಲಕ ಪೃಥಿವಿ, ಮೇಲುರೆಪ್ಪೆಯ ಮೂಲಕ ದ್ಯುಲೋಕ- ಈ ದೇವತೆಗಳು ಪ್ರಾಣನನ್ನು ಸೇವಿಸುತ್ತಿರುವರು. ಹೀಗೆಂದು ಉಪಾಸನೆಮಾಡಿದವನ ಅನ್ನವು ಕ್ಷಯವಾಗುವದಿಲ್ಲ.

೩. ಕೆಳಗಡೆ ಬಿಲವುಳ್ಳ ಮೇಲೆ ಉಬ್ಬಿರುವ ಒಂದು ಚಮಸವುಂಟು ; ಇದೇ ಶಿರಸ್ಸು ಈ ಚಮಸದಲ್ಲಿ ಬಗೆಬಗೆಯ ರೂಪದ ಯಶಸ್ಸನ್ನು ಇಟ್ಟಿರುತ್ತದೆ. ಪ್ರಾಣಗಳು ಎಂದರೆ ಶ್ರೋತ್ರಾದಿಗಳೂ ಅವುಗಳಲ್ಲಿರುವ ಸಪ್ತವಾಯುಗಳೂ ಆ ಯಶಸ್ಸು. ಅದರ ಬಳಿಯಲ್ಲಿ ಏಳು ಜನ ಋಷಿಗಳು ಕುಳಿತಿರುವರು. ಪ್ರಾಣಗಳೇ ಆ ಋಷಿಗಳು ; ವೇದದೊಡನೆ ಸಂವಾದಮಾಡುತ್ತಿರುವ ವಾಕ್ಕು ಈ ಪ್ರಾಣಗಳಿಗೆ ಎಂಟನೆಯದು. ಋಷಿಗಳ ವಿವರವಿದು : ಕರ್ಣಗಳೇ ಗೌತಮಭಾರದ್ವಾಜರು, ಚಕ್ಷುಸ್ಸುಗಳೇ ವಿಶ್ವಾಮಿತ್ರಜಮದಗ್ನಿಗಳು, ನಾಸಿಕಗಳೇ ವಸಿಷ್ಠಕಶ್ಯಪರುಗಳು, ವಾಕ್ಕೇ ತಿನ್ನುವ ಅತ್ರಿಯು ; ಅತ್ರಿಯು ಅತ್ತಿ ತಿನ್ನುವದು ಎಂದು ಉಪಾಸನೆಮಾಡಿದವನು ಭೋಕ್ತೃವಾಗಿರುತ್ತಾನೆಯೇ ಹೊರತು ಯಾರಿಗೂ ಭೋಜ್ಯನಾಗುವದಿಲ್ಲ.

ಮೂರನೆಯ ಬ್ರಾಹ್ಮಣದ ಸಾರ

ಹಿಂದಿನ ಬ್ರಾಹ್ಮಣದಲ್ಲಿ ಪ್ರಾಣಗಳು ಯಾವವು ? ಎಂಬುದನ್ನು ತಿಳಿಸಿದ್ದಾಯಿತು. ಈ ಬ್ರಾಹ್ಮಣದಲ್ಲಿ ಪ್ರಾಣಗಳ ಸ್ವರೂಪವು ಯಾವದು ? ಅವುಗಳು ಸತ್ಯವೆಂಬುದು ಹೇಗೆ ? ಎಂಬುದನ್ನು ತಿಳಿಸಿ ಪರಮಾತ್ಮನು ಸತ್ಯದ ಸತ್ಯವು ಹೇಗೆಂಬುದನ್ನೂ ತಿಳಿಸಲಾಗುವದು.

೧-೨. ಬ್ರಹ್ಮವು ತಾನುತಾನು ನಿರ್ವಿಶೇಷವಾಗಿರುತ್ತಿದ್ದರೂ ಕಾರ್ಯಕರಣಗಳ ರೂಪವಾಗಿರುವ ಪಂಚಭೂತಗಳ ಸಂಬಂಧದಿಂದ ಸವಿಶೇಷವಾಗಿರುತ್ತದೆ. ಈ ಬ್ರಹ್ಮಕ್ಕೆ ಮೂರ್ತ, ಅಮೂರ್ತ- ಎಂಬ ಎರಡು ರೂಪಗಳುಂಟು. ಇವುಗಳಲ್ಲಿ ಮೂರ್ತದ ಸ್ವರೂಪವೇನೆಂದರೆ ಅದು ಮರ್ತ್ಯವು, ಸ್ಥಿತವು (ಪರಿಚ್ಛಿನ್ನವಾದದ್ದು), ಸತ್ತು (ಅಸಾಧಾರಣರೂಪವುಳ್ಳದ್ದು). ವಾಯು, ಆಕಾಶ - ಈ ಎರಡನ್ನು ಬಿಟ್ಟರೆ ಮಿಕ್ಕ ಮೂರು ಭೂತಗಳೂ **ಮೂರ್ತವು**. ಈ ಮೂರು ಭೂತಗಳ ಸಾರವೇ, ಆಧಿದೈವಿಕಕಾರ್ಯದ ರಸವೇ **ಸೂರ್ಯಮಂಡಲವು**.

೩. ಇನ್ನುಳಿದ ವಾಯ್ವಾಕಾಶಗಳೆಂಬ ಭೂತಗಳೆರಡೂ ಅಮೂರ್ತವು. ಅಮೂರ್ತದ ಸ್ವರೂಪವೇನೆಂದರೆ ಅದು ಅಮೃತವು, ಯತ್ತು (ವ್ಯಾಪಿ, ಪರಿಚ್ಛಿನ್ನವಲ್ಲ), ತ್ಯತ್ತು (ಪರೋಕ್ಷವಾಗಿ ಅದು ಎಂದು ಹೇಳಿಸಿಕೊಳ್ಳತಕ್ಕದ್ದು), ಈ ಎರಡುಭೂತಗಳ ಸಾರವೇ ಆಧಿದೈವಿಕಕರಣವಾದ, ಸೂರ್ಯಮಂಡಲದಲ್ಲಿರುವ, ಹಿರಣ್ಮಗರ್ಭನ ಲಿಂಗಶರೀರವೆಂಬ ಪುರುಷನು.

೪-೬. ಆಧಿದೈವಿಕವಾಗಿ ಮೂರ್ತಾಮೂರ್ತಗಳ ರಸಗಳನು ಅರಿತುಕೊಂಡಂತೆಯೇ ಆಧ್ಯಾತ್ಮಿಕರಸಗಳನ್ನೂ ಅರಿತುಕೊಳ್ಳಬೇಕು. ಹೇಗೆಂದರೆ ಶರೀರದಲ್ಲಿರುವ ಆಕಾಶ, ಪ್ರಾಣ- ಈ ಎರಡನ್ನುಳಿದು ಮಿಕ್ಕಭಾಗವೆಲ್ಲ ಮರ್ತ್ಯವೂ ಸ್ಥಿತವೂ ಸತ್ತೂ ಆದ ಮೂರ್ತವು ; ಚಕ್ಷುಸ್ಸೇ ಅದರ ರಸವು ಶರೀರಸ್ಥಾಕಾಶ ಮತ್ತು ಪ್ರಾಣ - ಈ ಎರಡೂ ಅಮೃತವೂ ತ್ಯತ್ತೂ ಆಗಿರುವ ಅಮೂರ್ತವು ; ಬಲಗಣ್ಣಿನಲ್ಲಿ ವಿಶೇಷವಾಗಿರುತ್ತದೆ ಎಂದು ಶಾಸ್ತ್ರಪ್ರಸಿದ್ಧವಾದ ಕರಣಾತ್ಮಕಲಿಂಗವು ಅದರ ರಸವು. ಮೂರ್ತಾಮೂರ್ತವಾಸನೆಗಳಿಗೂ ವಿಜ್ಞಾನಮಯನಿಗೂ ಆದ ಸಂಬಂಧದಿಂದ ಈ ಕರಣಾತ್ಮಕಲಿಂಗಕ್ಕೆ ಬಗೆಬಗೆಯ ವಾಸನಾಮಯರೂಪಗಳುಂಟಾಗುವವು. ಅರಿಶಿನವನ್ನು ಬಳಿದ ಬಟ್ಟೆಯಂತೆ ವಿಷಯಗಳಲ್ಲಿ ರಕ್ತವಾಗಿರುವ ರೂಪವೊಂದು, ಬಿಳಿಯ ಧಾವಳಿಯಂತೆ ಶುಭ್ರವಾದ ರೂಪವೊಂದು, ಕೆಂಜೇರುಂಬೆ (ಜೇರುಂಡೆ)ಯಂತೆ

ವಿಷಯರಾಗವು ಪ್ರಚುರವಾಗಿರುವ ರೂಪವೊಂದು, ಹರಡುಮಿಂಚಿನಂತೆ ಅತ್ಯಂತಪ್ರಕಾಶಮಯವಾಗಿರುವ ರೂಪವೊಂದು - ಹೀಗೆಲ್ಲ ಇರುವ ವಾಸನಾರೂಪಗಳು ಲೆಕ್ಕವಿಲ್ಲದಷ್ಟಿರುವವು.

೬. ಇದುವರೆಗೆ ವರ್ಣಿಸಿದ್ದು 'ಪ್ರಾಣಗಳು ಸತ್ಯವು' ಎಂದು (೨-೧-೨೦ರಲ್ಲಿ) ಹೇಳಿದ ಸತ್ಯದ ವರ್ಣನೆಯು. ಇನ್ನು ಸತ್ಯದ ಸತ್ಯವಾಗಿರುವ ಮೂರ್ತಾಮೂರ್ತತದ್ವಾಸನಾವಿವರ್ಜಿತನಾದ ಆತ್ಮನ ಶುದ್ಧಸ್ವರೂಪವನ್ನು ತಿಳಿಸಬೇಕಷ್ಟೆ ನೇತಿ ನೇತಿ (ಹೀಗಲ್ಲ ಹೀಗಲ್ಲ) ಎಂಬ ನಿಷೇಧದಿಂದಲೇ ಅದನ್ನು ತಿಳಿಸಬೇಕಾಗಿದೆ. ಇದಕ್ಕಿಂತ ಅದನ್ನು ತಿಳಿಸುವ ಬೇರೊಂದು ಉತ್ತಮ ಪ್ರಕಾರವಿಲ್ಲ. ಈ ರೀತಿಯಲ್ಲಿ ನಾಮರೂಪಾತ್ಮಕಪ್ರಾಣಗಳು ಸತ್ಯವಾಗಿರುತ್ತವೆ, ಅವುಗಳ ತಿರುಳಾದ ಸತ್ಯವೇ ಈ ಪರಮಾತ್ಮತತ್ತ್ವವು. ಆದ್ದರಿಂದ ಅದಕ್ಕೆ 'ಸತ್ಯದ ಸತ್ಯ' ಎಂಬ ರಹಸ್ಯವಾದ ಹೆಸರು ಒ

ನಾಲ್ಕನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ಅಮೃತತತ್ವಕ್ಕೆ ಬೇಕಾದ ಜ್ಞಾನಕ್ಕೆ ಅಂಗವಾಗಿರುವ ಸಂನ್ಯಾಸವನ್ನು ವಿಧಿಸಿರುತ್ತದೆ.

೧-೩. ಯಾಜ್ಞವಲ್ಕ್ಯನು ಗಾರ್ಹಸ್ಥ್ಯವನ್ನು ಬಿಟ್ಟು ಪಾರಿವ್ರಾಜ್ಯವನ್ನು ಪಡೆಯಲೆಳಸಿ ಮೈತ್ರೇಯಿ, ಕಾತ್ಯಾಯನಿ - ಎಂಬ ಇಬ್ಬರು ಹೆಂಡತಿಯರಿಗೂ ತನ್ನ ಧನವನ್ನು ಪಾಲುಮಾಡಿಕೊಡುವದಕ್ಕೆ ಉದ್ಯುಕ್ತನಾದನು. ಮೈತ್ರೇಯಿಯು 'ಧನದಿಂದ ಅಮೃತತತ್ವವು ಸಿಕ್ಕುವದೇನು ?-' ಎಂದು ಕೇಳಲು 'ಧನದಿಂದ ಅದರ ಆಶೆಯೂ ಇಲ್ಲ' ಎಂದು ಯಾಜ್ಞವಲ್ಕ್ಯನು ನುಡಿದನು. ಆಗ ಮೈತ್ರೇಯಿಯು 'ಹಾಗಾದರೆ ನನಗೆ ಆ ಧನವು ಬೇಡ, ತಮಗೆ ತಿಳಿದಿರುವ ಅಮೃತತ್ವಸಾಧನವನ್ನೇ ಹೇಳಿಕೊಡಿ' ಎಂದು ಕೇಳಿಕೊಂಡಳು.

೪-೫. ಯಾಜ್ಞವಲ್ಕ್ಯನು ಅವಳ ಮಾತಿನಿಂದ ಸಂತುಷ್ಟನಾಗಿ ಆಕೆಗೆ ಅತ್ಯಂತ ಪ್ರೀತಿಯಿಂದ ಆತ್ಮಜ್ಞಾನವನ್ನು ಉಪದೇಶಿಸುವದಕ್ಕೆ ಹೊರಟು ಮೊದಲು ಆತ್ಮನೇ ಎಲ್ಲಕ್ಕಿಂತಲೂ ಪ್ರಿಯನು ಎಂಬುದನ್ನು ತಿಳಿಸಿಕೊಟ್ಟನು. ಗಂಡ, ಹೆಂಡತಿ, ಮಕ್ಕಳು, ಹಣ, ಬ್ರಾಹ್ಮಣ, ಕ್ಷತ್ರಿಯತ್ವ ಲೋಕಗಳು, ದೇವತೆಗಳು, ಭೂತಗಳು ಅಥವಾ ಮತ್ತೆ ಯಾವದೇ ಪದಾರ್ಥವಾಗಲಿ, ಆಯಾ ಪದಾರ್ಥಕ್ಕಾಗಿ

ಪ್ರಿಯವಾಗಿರುವದಿಲ್ಲ. ತನ್ನ ಆತ್ಮನ ಪ್ರೀತಿಗಾಗಿಯೇ ಅವೆಲ್ಲವೂ ಪ್ರಿಯವಾಗಿರುತ್ತವೆ ಆದ್ದರಿಂದ ಆತ್ಮನೇ ಎಲ್ಲಕ್ಕಿಂತಲೂ ಪ್ರಿಯತಮನು. ಆದ್ದರಿಂದ ಆತ್ಮನನ್ನೇ ಶ್ರವಣಮನನನಿದಿಧ್ಯಾಸನಗಳಿಂದ ಕಂಡುಕೊಳ್ಳಬೇಕು. ಹೀಗೆ ಆತ್ಮನನ್ನು ಅರಿತುಕೊಂಡರೆ ಇದೆಲ್ಲವನ್ನೂ ಅರಿತುಕೊಂಡಂತೆ ಆಗುವದು.

೬. ಯಾವನು ಬ್ರಾಹ್ಮಣ್ಯವನ್ನು, ಕ್ಷತ್ರಿಯತ್ವವನ್ನು, ಲೋಕಗಳನ್ನು, ದೇವತೆಗಳನ್ನು, ಭೂತಗಳನ್ನು ಅಥವಾ ಮತ್ತೆ ಯಾವದೊಂದು ಪದಾರ್ಥವನ್ನು ಆತ್ಮನಿಗಿಂತ ಬೇರೆ ಎಂದು ತಿಳಿದುಕೊಳ್ಳುವನೋ ಆ ಅಜ್ಞನನ್ನು ಆ ಬ್ರಾಹ್ಮಣ್ಯವೇ ಮುಂತಾದವು ತಿರಸ್ಕರಿಸುವವು. ಏಕೆಂದರೆ ಪರಮಾರ್ಥವಾಗಿ ಈ ಬ್ರಾಹ್ಮಣ್ಯಾದಿಗಳೆಲ್ಲ ಈ ಆತ್ಮನೇ.

೭-೧೧. ನಗಾರಿಯನ್ನು ಹೊಡೆಯುತ್ತಿರುವಾಗ ಬರಿಯ ಶಬ್ದವಿಶೇಷಗಳನ್ನೇ ಗ್ರಹಿಸುವದಕ್ಕಾಗುವದಿಲ್ಲ ; ಇವು ನಗಾರಿಯ ಶಬ್ದಗಳು ಎಂದು ಆ ಶಬ್ದಸಾಮಾನ್ಯದಲ್ಲಿಯೇ ಅವುಗಳನ್ನು ಅಡಕಮಾಡಿಕೊಂಡು ಅರಿಯಬೇಕಾಗುವದು. ಹೀಗೆಯೇ ಶಂಖದ ಶಬ್ದವಿಶೇಷಗಳು, ವೀಣೆಯ ಶಬ್ದವಿಶೇಷಗಳು ಎಲ್ಲವನ್ನೂ ಆಯಾ ಸಾಮಾನ್ಯವಿಶೇಷಗಳಲ್ಲಿ ಅಡಕಮಾಡಿಯೇ ಅರಿಯಬಹುದಾಗುತ್ತದೆ. ಈ ಶಬ್ದಸಾಮಾನ್ಯವಿಶೇಷಗಳನ್ನೆಲ್ಲ, ಶಬ್ದತ್ವವೆಂಬ ಸಾಮಾನ್ಯದಲ್ಲಿಯೇ ಅಡಕಮಾಡಿ ತಿಳಿಯಬೇಕಾಗಿರುತ್ತದೆ. ಇಷ್ಟೇ ಹೊರತು ಈ ಯಾವ ವಿಶೇಷಗಳನ್ನೂ ಶಬ್ದತ್ವಸಾಮಾನ್ಯಕ್ಕಿಂತ ಬೇರೆಯಾಗಿ ಅರಿಯುವದಕ್ಕೆ ಆಗುವಂತಿರುವದಿಲ್ಲ ; ಏಕೆಂದರೆ ಅವು ಅದಕ್ಕಿಂತ ಬೇರೆಯಾಗಿ ಇಲ್ಲವೇ ಇಲ್ಲ. ಹೀಗೆಯೇ ಸ್ವಪ್ನಜಾಗರಿತಗಳಲ್ಲಿ ಆತ್ಮಪ್ರಜ್ಞಾವ್ಯತಿರಿಕ್ತವಾಗಿ ಯಾವ ಸಾಮಾನ್ಯವನ್ನೂ ಅರಿತುಕೊಳ್ಳುವದಕ್ಕೆ ಆಗದೆ ಇರುವದರಿಂದ ಶಬ್ದತ್ವ, ಸ್ಪರ್ಶತ್ವಮುಂತಾದ ಆ ಸಾಮಾನ್ಯಗಳು ಯಾವವೂ ಪ್ರಜ್ಞಾನರೂಪವಾಗಿರುವ ಬ್ರಹ್ಮವನ್ನು ಬಿಟ್ಟು ಬೇರೆಯಿರುವದಿಲ್ಲ. ಆದ್ದರಿಂದ ಸ್ಥಿತಿಕಾಲದಲ್ಲಿ ಎಲ್ಲವೂ ಬ್ರಹ್ಮಾತ್ಮನೇ ಎಂದು ತಿಳಿದುಕೊಳ್ಳಬಹುದಾಗಿದೆ.

ಹೀಗೆಯೇ ಉತ್ಪತ್ತಿಕಾಲದಲ್ಲಿಯೂ ಬ್ರಹ್ಮಾವ್ಯತಿರಿಕ್ತವಾಗಿಯೇ ಇದೆಲ್ಲವೂ ಇರುತ್ತದೆ. ಹೇಗೆ ಒಂದು ಬೆಂಕಿಯಿಂದ ಹೊಗೆ, ಕಿಡಿ - ಮುಂತಾದವು ಹೊರಕ್ಕೆ ಬರುವವೋ ಹಾಗೆ ಈ ಪರಮಾರ್ಥವಸ್ತುವಾದ ಪರಮಾತ್ಮನಿಂದಲೇ ಋಗ್ವೇದಾದಿರೂಪದಲ್ಲಿರುವ ಮಂತ್ರಬ್ರಾಹ್ಮಣಗಳೆಲ್ಲವೂ ಹೊರಕ್ಕೆ ಬಂದಿರುವವು. ನಾಮಕ್ಕೆ ರೂಪವು ವಶವಾಗಿರುವದರಿಂದ ನಾಮರೂಪಾತ್ಮಕವಾದ ಜಗತ್ತು ಪರಮಾತ್ಮನಿಗಿಂತ ಭಿನ್ನವಲ್ಲವೆಂದಾಯಿತು.

ಪ್ರಲಯಕಾಲದಲ್ಲಿಯೂ ಹೀಗೆಯೇ ಎಲ್ಲವೂ ಬ್ರಹ್ಮಾವ್ಯತಿರಿಕ್ತವಾಗಿರುವದು. ಹೇಗೆಂದರೆ ಸ್ಪರ್ಶಾದಿಗಳು ಸ್ಪರ್ಶಾದಿಸಾಮಾನ್ಯದಲ್ಲಿಯೂ ಆ ಸ್ಪರ್ಶಾದಿ ಸಾಮಾನ್ಯವು ಮನೋವಿಷಯಸಾಮಾನ್ಯದಲ್ಲಿಯೂ ಅದು ಬುದ್ಧಿವಿಷಯಸಾಮಾನ್ಯ ದಲ್ಲಿಯೂ ಅದು ವಿಜ್ಞಾನಮಾತ್ರವೇ ಆಗಿ ಪ್ರಜ್ಞಾನಘನವಾಗಿರುವ ಬ್ರಹ್ಮದಲ್ಲಿಯೂ ನದೀನದಗಳು ಸಮುದ್ರದಲ್ಲಿ ಲಯವಾದಂತೆ ಲಯವಾಗುತ್ತಿರುವವು. ಹೀಗೆ ವಿಷಯಗಳೆಲ್ಲ ತಮ್ಮ ತಮ್ಮ ಗ್ರಾಪಕವಾದ ಕರಣಗಳೊಡನೆ ಪ್ರಜ್ಞಾನಘನವಾದ ಬ್ರಹ್ಮದಲ್ಲೇ ಲಯವಾಗುತ್ತಿರುವದರಿಂದ ಎಲ್ಲವೂ ಪ್ರಜ್ಞಾನಘನವಾದ ಬ್ರಹ್ಮವೇ ಎಂದರಿಯಬಹುದು.

೧೨-೧೩. ಇದುವರೆಗೆ ಹೇಳಿದ್ದು ತಾನೇ ಆಗುವ ಪ್ರಾಕೃತಪ್ರಲಯವು. ಇಲ್ಲಿ ಪ್ರಲಯವಾದಮೇಲೂ ಕಾಲಾಂತರದಲಿ ಮತ್ತೆ ಗತ್ತು ಉತ್ಪನ್ನವಾಗುವದಕ್ಕೆ ಅವಕಾಶವಿರುತ್ತದೆ. ಆದರೆ ಜ್ಞಾನದಿಂದ ಇದಕ್ಕೆ ಆತ್ಯಂತಿಕಪ್ರಲಯವಾಗುವದು. ಹೇಗೆ ಸಮುದ್ರದಿಂದ ಹುಟ್ಟಿದ ಉಪ್ಪಿನಪರಳು ಸಮುದ್ರದ ನೀರಿನಲ್ಲಿ ಸೇರಿಕೊಂಡು ಕರಗಿಹೋದರೆ ಅದನ್ನು ಬೇರೆಯಾಗಿ ಎತ್ತಿ ತೆಗೆದುಕೊಳ್ಳುವದಕ್ಕಾಗುವದಿಲ್ಲ ವಾದರೂ ನೀರು ಎಲ್ಲೆಲ್ಲಿ ಸವಿದರೂ ಉಪ್ಪೇ ಆಗಿರುವದರಿಂದ ಅಲ್ಲಿದೆ ಎಂದು ಗೊತ್ತಾಗುವದೋ ಇದರಂತೆ ಈ ವಿಶೇಷವಿಜ್ಞಾನಮಯನಾಗಿರುವ ಆತ್ಮನು ಅವಿದ್ಯಾ ಕೃತವಾದ ಪಂಚಭೂತಗಳಿಂದಾದ ಕಾರ್ಯಕರಣಗಳಿಂದ ತಾನೇ ಬೇರೆಯಾಗಿ ಪರಿಚ್ಛಿನ್ನನಾಗಿ ಕಾಣುತ್ತಿರುತ್ತಾನೆ. ಆದರೆ ವಿದ್ಯೆಯಿಂದ ಈ ಉಪಾಧಿಗಳನ್ನು ಪ್ರವಿ ಲಯಮಾಡಿಕೊಂಡರೆ ಆಗ ಅವನಲ್ಲಿ ಯಾವ ವಿಶೇಷವಿಜ್ಞಾನವೂ ಇರುವದಿಲ್ಲ; ಅನಂತವೂ ಅಪಾರವೂ ಆಗಿ ವಿಜ್ಞಾನಘನನೇ ಆಗಿರುವ ಪರಮಾರ್ಥಾತ್ಮನೇ ಆಗಿರುತ್ತಾನೆ. ಹೀಗೆ ವಿಶೇಷವಿಜ್ಞಾನವು ಹೋದಮಾತ್ರದಿಂದ ಆತ್ಮನೇ ನಾಶವಾಗು ವನೆಂದು ತಿಳಿಯಬಾರದು. ಏಕೆಂದರೆ ಸ್ವರೂಪಚೈತನ್ಯವು ಎಲ್ಲಾ ಜ್ಞಾನದ ತಿರುಳೂ ಆಗಿರುತ್ತದೆ; ಆ ಸ್ವರೂಪವು ಎಂದೆಂದಿಗೂ ಇದ್ದೇ ಇರುತ್ತದೆ.

೧೪. ಅವಿದ್ಯೆಯಿಂದ ಎಲ್ಲಿ ದ್ವೈತವಿರುವಂತೆ ತೋರುತ್ತಿರುವದೋ ಅಲ್ಲಿ ಒಬ್ಬನು ತನಗಿಂತ ಬೇರೆಯಾದ ಕರಣದಿಂದ ತನಗಿಂತ ಬೇರೆಯಾದ ವಿಷಯವನ್ನು ನೋಡುವದು, ಕೇಳುವದು, ಮಾತನಾಡುವದು, ಮೂಸುವದು, ಮುಟ್ಟುವದು, ಯೋಚಿಸುವದು, ಅರಿತುಕೊಳ್ಳುವದು - ಮುಂತಾದ ವ್ಯವಹಾರವನ್ನು ಮಾಡುತ್ತಿರುವನು. ಆದರೆ ವಿದ್ಯೆಯಿಂದ ಎಲ್ಲವೂ ಆತ್ಮನೇ

ಆಗಿರುವಾಗ ಇಂಥವನು ಇಂಥ ಕರಣದಿಂದ ಇಂಥದ್ದನ್ನು ಅರಿಯುವನು ಎಂಬ ಭೇದವ್ಯವಹಾರವಿರುವದಿಲ್ಲ. ಇದಲ್ಲದೆ ಚೈತನ್ಯಸ್ವರೂಪನಾದ ಆತ್ಮನೇ ಎಲ್ಲವನ್ನೂ ಅರಿಯುವ ಪ್ರಮಾತೃವಾಗಿರುತ್ತಾನೆ. ಆದ್ದರಿಂದ ಜ್ಞಾನಿಯು ಬದುಕಿರುವಾಗಲೇ, ಪ್ರತ್ಯಕ್ಷಾದಿವ್ಯವಹಾರಗಳನ್ನು ಮಾಡುವಂತಿದ್ದರೂ, ತನ್ನ ದೃಷ್ಟಿಯಿಂದ ಎಲ್ಲವೂ ಅದ್ವಿತೀಯಪರಮಾತ್ಮನೇ ಆಗಿರುವದರಿಂದಲೂ ವಿಜ್ಞಾತೃವಿನ ಅರಿವಿಗೆ ವಿಜ್ಞೇಯವೆಲ್ಲ ವಿಷಯವಾಗಿದ್ದು ವಿಜ್ಞಾತೃವು ಯಾವಾಗಲೂ ಅವಿಷಯನೇ ಆಗಿರುವದರಿಂದಲೂ ಆ ವಿಜ್ಞಾತೃವಿನ ಸ್ವರೂಪನಾದ ಆತ್ಮನನ್ನು ವಿಷಯೀಕರಿಸಿ ಕೊಂಡು ಅರಿಯುವದು ಆಗಲಾರದು. ಇನ್ನು ವಿದೇಹಕೈವಲ್ಯದಲ್ಲಿ ಚೈತನ್ಯಮಾತ್ರ ಸ್ವರೂಪನಾಗಿರುವದರಿಂದ ಆ ಕೇವಲವಿಜ್ಞಾತೃವನ್ನು ಅವನನ್ನು ಅರಿಯುವ ಕರಣಾದಿಗಳೇ ಇಲ್ಲವಾಗಿ ಏತರಿಂದ ಅರಿಯುವದಕ್ಕೆ ಆದೀತು ? ಆದ್ದರಿಂದ ಎಲ್ಲವೂ ವಿಜ್ಞಾನಘನಸ್ವರೂಪನಾದ ಆತ್ಮನೇ ಎಂಬುದೇ ಸಿದ್ಧಾಂತವು. ಇದನ್ನು ಅರಿತವನಿಗೇ ಅಮೃತತ್ವವು ದೊರಕುವದು.

ಐದನೆಯ ಬ್ರಾಹ್ಮಣದ ಸಾರ

ಜಗತ್ತೆಲ್ಲವೂ ಪರಸ್ಪರೋಪಕಾರ್ಯೋಪಕಾರಕವಾಗಿರುವದರಿಂದ ಬ್ರಹ್ಮಾತ್ಮ ನೆಂಬ ಒಂದೇ ಕಾರಣದಿಂದ ಆಗಿದ್ದು ಅದಕ್ಕಿಂತ ಅವ್ಯತಿರಿಕ್ತವಾಗಿರುತ್ತದೆ ಎಂದು ಇಲ್ಲಿ ಹೇಳಿರುತ್ತದೆ.

೧. ಈ ಪೃಥ್ವಿಯು ಎಲ್ಲಾ ಪ್ರಾಣಿಗಳಿಗೂ ಕಾರ್ಯವು ; ಈ ಪೃಥ್ವಿಗೆ ಸರ್ವಭೂತಗಳೂ ಕಾರ್ಯವು. ಅಧಿದೈವಿಕವಾಗಿ ಪೃಥ್ವಿಯೊಳಗೂ ಆಧ್ಯಾತ್ಮಿಕವಾಗಿ ಶರೀರದೊಳಗೂ ಇರುವ ತೇಜೋಮಯನೂ ಅಮೃತಮಯನೂ ಆಗಿರುವ ಲಿಂಗಾತ್ಮನು ಎಲ್ಲಾ ಭೂತಗಳ ಕಾರ್ಯವು ; ಎಲ್ಲಾ ಭೂತಗಳೂ ಈ ಲಿಂಗಾತ್ಮನ ಕಾರ್ಯವು. ಹೀಗೆ ಉಪಕಾರ್ಯೋಪಕಾರಕಭಾವದಿಂದ ಸಂಬದ್ಧವಾಗಿರುವ ಈ ನಾಲ್ಕೂ ಒಂದಕ್ಕೊಂದು ಮಧುವೆನಿಸಿವೆ. ಇವಕ್ಕೆ ಕಾರಣವಾಗಿರುವದೇ ಪರಮಾರ್ಥವು, ಈ ಕಾರ್ಯವು ಅದಕ್ಕಿಂತ ಬೇರೆಯಲ್ಲ. ಇದನ್ನೇ ಹಿಂದೆ (೨-೪-೬ರಲ್ಲಿ) 'ಇದೆಲ್ಲವೂ ಈ ಆತ್ಮನೇ' ಎಂದು ಹೇಳಿದೆ ; ಇದರ ಜ್ಞಾನವನ್ನೇ ಅಮೃತತ್ವಕ್ಕೆ ಸಾಧನವೆಂದು ಮೈತ್ರೇಯಿಗೆ ಯಾಜ್ಞವಲ್ಕ್ಯನು ಹೇಳಿರುತ್ತಾನೆ ; ಇದನ್ನೇ 'ಬ್ರಹ್ಮವನ್ನು ನಿನಗೆ ಹೇಳಿಕೊಡುವೆನು' (೨-೧-೧) ಎಂದು ಬಾಲಾಕಿಯೂ 'ನಿನಗೆ

ಅರಿಕೆಮಾಡಿಕೊಳ್ಳುವೆನು' (೨-೧-೧೫) ಎಂದು ಅಜಾತಶತ್ರುವೂ ಹೇಳಿರುತ್ತಾರೆ. ಇದನ್ನು ಅರಿಯುವದೇ ಬ್ರಹ್ಮವಿದ್ಯೆ, ಇದನ್ನು ಅರಿತದ್ದರಿಂದಲೇ ಸರ್ವಾತ್ಮಭಾವವೆಂಬ ಫಲವು ಬರುತ್ತದೆ.

೨-೧೩. ಮೇಲೆ ಹೇಳಿದಂತೆಯೇ ಅಪ್ಪಿನಿಂದ ಹಿಡಿದು ಮಾನುಷಜಾತಿಯವರೆಗಿನ ಮಧುಪರ್ಯಾಯಗಳ ಅರ್ಥವನ್ನೂ ತಿಳಿಯಬೇಕು. ಈ ಮಧುವೆಲ್ಲವೂ ಈ ಬ್ರಹ್ಮಾತ್ಮನ ಕಾರ್ಯವೇ, ಅದಕ್ಕಿಂತ ವ್ಯತಿರಿಕ್ತವಾಗಿರುವದಿಲ್ಲ.

೧೪. ಸಮಷ್ಟಿಕಾರ್ಯಕರಣಸಂಘಾತವೆಲ್ಲವೂ ಎಲ್ಲಾ ಭೂತಗಳ ಮಧು, ಎಲ್ಲಾ ಭೂತಗಳೂ ಇದರ ಮಧು. ಈ ಸಂಘಾತದಲ್ಲಿರುವ ತೇಜೋಮಯನೂ ಅಮೃತಮಯನೂ ಆದ ಲಿಂಗಾತ್ಮನೇ ಬ್ರಹ್ಮದ ಅಮೂರ್ತರಸವು ಇವೆರಡರೊಳಗಿರುವ ಸ್ವಾಮಿಯಾದ ವಿಜ್ಞಾನಮಯನು ನಿಜವಾಗಿ ಸರ್ವಾತ್ಮನು, ಅಮೃತವಾದ ಬ್ರಹ್ಮವು. ಅದನನ್ನರಿತುಕೊಂಡರೇ ಸರ್ವಾತ್ಮಭಾವವು.

೧೫. ಬ್ರಹ್ಮವಿದ್ಯೆಯಿಂದ ಹೀಗೆ ವಿಜ್ಞಾನಮಯನನ್ನು ಪರಮಾತ್ಮನಲ್ಲಿ ಲಯಿಸಿಕೊಂಡಾಗ ಸರ್ವಕ್ಕೂ ಆಧಾರವಾಗಿ ಉಳಿದುಕೊಳ್ಳುವ ಪರಮಾತ್ಮನು ಸರ್ವಭೂತಗಳಿಗೂ ಅಧಿಪತಿಯಾದ ರಾಜನು, ಚಕ್ರದ ಗುಂಬಹಳಿಗಳಲ್ಲಿ ಹಾರೆಕೋಲುಗಳು ಸೇರಿಕೊಂಡಿರುವಂತೆ ಈ ಪರಮಾತ್ಮನಲ್ಲಿ ಎಲ್ಲಾ ಪ್ರಾಣಿಗಳೂ, ಎಲ್ಲಾ ದೇವತೆಗಳೂ ಎಲ್ಲಾ ಇಂದ್ರಿಯಗಳೂ, ಎಲ್ಲಾ ಜೀವರೂ ಸೇರಿ ಒಂದಾಗಿರುವರು.

೧೬-೧೭. ದಧ್ಯಙ್ಙಾಥರ್ವಣನೆಂಬ ಋಷಿಯು ಅಶ್ವಿನೀದೇವತೆಗಳಿಗೆ ಹೇಳಿಕೊಟ್ಟ ಮಧುವಿದ್ಯೆಯಲ್ಲಿ ಈ ಬ್ರಾಹ್ಮಣದರ್ಥವು ಸೇರಿದೆ. ಯಜ್ಞಪುರುಷನ ತಲೆಯು ಕತ್ತರಿಸಿ ಹೋಗಿ ಆದಿತ್ಯನಾಯಿತು ಅದನ್ನು ಕೂಡಿಸುವದಕ್ಕಾಗಿ ಮಾಡುವ ಪ್ರವರ್ಗ್ಯಕರ್ಮಕ್ಕೆ ಅಂಗವಾಗಿರುವ ಮಧುವಿದ್ಯೆಯ ಭಾಗಕ್ಕೆ ತ್ವಾಷ್ಟ್ರ (ಆದಿತ್ಯನ ಸಂಬಂಧವಾದ ವಿದ್ಯೆ) ಎಂದು ಹೆಸರು ; ಬ್ರಹ್ಮವಿದ್ಯೆಯ ರೂಪದ ಇನ್ನೊಂದು ಭಾಗಕ್ಕೆ ಕಕ್ಷ್ಯ (ರಹಸ್ಯ) ಎಂದು ಹೆಸರು. ಈ ವಿದ್ಯೆಯನ್ನು ಮತ್ತೊಬ್ಬರಿಗೆ ಹೇಳಿಕೊಟ್ಟರೆ ನಿನ್ನ ತಲೆಯನ್ನು ಕಡಿಯುವೆನು ಎಂದು ಇಂದ್ರನು ಋಷಿಗೆ ಹೇಳಿದ್ದನು. ಆದರೆ ಅಶ್ವಿನೀದೇವತೆಗಳು ಆ ಋಷಿಯ ತಲೆಯನ್ನು ತೆಗೆದಿಟ್ಟು ಕುದುರೆಯ ತಲೆಯನ್ನು ಜೋಡಿಸಿ ಅದರ ಮೂಲಕ ಈ ವಿದ್ಯೆಯ ಉಪದೇಶವನ್ನು

ಪಡೆದುಕೊಂಡರು. ಇಂದ್ರನು ತನ್ನ ಪ್ರತಿಜ್ಞೆಯ ಪ್ರಕಾರ ಆ ಕುದುರೆಯ ತಲೆಯನ್ನು ಕಡಿದುಹಾಕಲು ಮತ್ತೆ ಋಷಿಯ ಹಳೆಯ ತಲೆಯನ್ನು ಅಶ್ವಿನೀದೇವತೆಗಳು ಅವನ ಶರೀರಕ್ಕೆ ಜೋಡಿಸಿದರು.

ಮಧುವಿದ್ಯೆಯ ತ್ವಾಷ್ಟ್ರಭಾಗವು ಪ್ರವರ್ಗ್ಯಪ್ರಕರಣದ ಎರಡು ಅಧ್ಯಾಯಗಳ ಅರ್ಥವು. ಕಕ್ಷ್ಯಭಾಗವು ಬೃಹದಾರಣ್ಯಕ ಒಂದು ಎರಡನೆಯ ಅಧ್ಯಾಯಗಳ ಅರ್ಥವು. ಕಕ್ಷ್ಯಭಾಗದ ಸಾರವೇನೆಂದರೆ ಪರಮಾತ್ಮನು ಬಗೆಬಗೆಯ ಶರೀರಗಳೆಂಬ ಪುರಗಳನ್ನು ಮಾಡಿಕೊಂಡು ಅವುಗಳೊಡನೆ ಲಿಂಗಶರೀರವಾಗಿ ಪ್ರವೇಶಿಸಿರುತ್ತಾನೆ. ಎಲ್ಲಾ ಪುರಗಳಲ್ಲಿಯೂ ಇರುವದರಿಂದಲೇ ಅವನಿಗೆ ಪುರುಷನೆಂದು ಹೆಸರು. ಅವನು ಎಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡಿರುತ್ತಾನೆ. ಅವನು ಅನೇಕರೂಪಗಳಿಂದ ತೋರುವದು ಬೇರೆ ಬೇರೆಯ ಕಾರ್ಯಕರಣಸಂಘಾತಗಳ ಉಪಾಧಿಯಿಂದ, ಹಲವು ವಿಷಯಗಳನ್ನು ಕಾಣುವ ಹಲವು ಇಂದ್ರಿಯಗಳ ಪ್ರಜ್ಞೆಗಳಿಂದ. ಆದರೆ ಪರಮಾತ್ಮನು ಬೇರೆ, ಇಂದ್ರಿಯಗಳು ಬೇರೆ ಎಂದು ಬಗೆಯಬಾರದು. ಲೆಕ್ಕವಿಲ್ಲದಷ್ಟು ಇಂದ್ರಿಯಗಳೂ ಅವನೇ, ಕಾರ್ಯಕರಣಸಂಘಾತಗಳೂ ಅವನೇ. ಇದೆಲ್ಲವೂ ಒಳಗಿಲ್ಲದ, ಹೊರಗಿಲ್ಲದ ಕಾರ್ಯಕಾರಣರಹಿತವಾದ ಏಕರಸವಾದ ಬ್ರಹ್ಮವೇ ; ಅದೇ ಎಲ್ಲವನ್ನೂ ಎಲ್ಲವೂ ಆಗಿ ಅನುಭವಿಸುತ್ತಿರುವದು.

ಬೃಹದಾರಣ್ಯಕೋಪನಿಷತ್ತು

ಎರಡನೆಯ ಭಾಗ

ಪೀಠಿಕೆ

ಈ ಸಂಪುಟದ ಪೀಠಿಕೆಯಲ್ಲಿ ನಿರೂಪಿಸಲಾಗುವ ವಿಷಯಗಳು

ಒಂದನೆಯ ಸಂಪುಟದಲ್ಲಿ ಭಾಷ್ಯದ ಹೊರಮೈಯನ್ನು ಪರೀಕ್ಷಿಸಿ, ಗ್ರಂಥದ ಸ್ಥಾನ, ಕರ್ತೃ, ಅಲಿ ಪರಾಮೃಷ್ಟರಾಗಿರುವ ಹಿಂದಿನ ಆಚಾರ್ಯರುಗಳು- ಮುಂತಾದ ವಿಷಯಗಳನ್ನು ಮಾತ್ರ ಚರ್ಚಿಸಲಾಗಿತ್ತು. ಈಗ ಭಾಷ್ಯದ ಅಂತ ರಂಗದ ಪರೀಕ್ಷೆಯನ್ನು ಮಾಡುವದಕ್ಕೆ ಸಮಯವಾಗಿದೆ. ಉಪನಿಷದ್ಭಾಷ್ಯಗಳ ಲ್ಲೆಲ್ಲ ಅಗ್ರಸ್ಥಾನವನ್ನು ಪಡೆದಿರುವ ಈ ಗ್ರಂಥವನ್ನು ಎಷ್ಟು ಒಳಹೊಕ್ಕು ಪರೀಕ್ಷಿಸಿದರೆ ಅಷ್ಟು ಪ್ರಯೋಜನವುಂಟು. ನಮಗಿರುವ ಸ್ಥಳಸಂಕೋಚ ಶಕ್ತಿ ಸಂಕೋಚಗಳಿಂದ ಅತ್ಯಂತಮುಖ್ಯವೆಂದು ತೋರುವ ವಿಷಯಗಳನ್ನು ಮಾತ್ರ ಇಲ್ಲಿ ನಿರೂಪಿಸುವೆವು.

ಕರ್ಮಕಾಂಡ- ಜ್ಞಾನಕಾಂಡಗಳ ಸಂಬಂಧ

ವೇದವು ವರ್ಣಾಶ್ರಮಗಳಿಗೆ ವಿಹಿತವಾಗಿರುವ ಕರ್ಮಗಳನ್ನು ಪ್ರಧಾನ ವಾಗಿ ತಿಳಿಸುವ ಕರ್ಮಕಾಂಡವೆಂದೂ ಉಪಾಸನೆಯನ್ನೂ, ವಸ್ತುತಂತ್ರವಾದ ಜ್ಞಾನವನ್ನೂ ಪ್ರಧಾನವಾಗಿ ತಿಳಿಸುವ ಜ್ಞಾನಕಾಂಡವೆಂದೂ ಎರಡು ಮುಖ್ಯವಿಭಾಗ ಗಳಾಗಿ ಒಡೆದುಕೊಂಡಿರುತ್ತದೆಯಷ್ಟೆ. ಇವೆರಡಕ್ಕೂ ಇರುವ ಸಂಬಂಧವನ್ನು ಈ ಭಾಷ್ಯದಲ್ಲಿ ಹೀಗೆಂದು ವರ್ಣಿಸಿರುತ್ತದೆ : ದೇಹಾಂತರಸಂಬಂಧಿಯಾದ ಆತ್ಮನೊಬ್ಬನು ಇದಾನೆಂದೂ ಅವನಿಗೆ ಪ್ರತ್ಯಕ್ಷಾನುಮಾನಗಳಿಂದ ಅರಿಯಲಾಗ ದಿರುವ ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳಿಗೆ ಉಪಾಯವು ಇಂಥದ್ದೆಂದೂ ತಿಳಿಸಿ ಕೊಡುವದೇ ಕರ್ಮಕಾಂಡದ ಉದ್ದೇಶವು (೧-೩).[1] ಸಂಸಾರದಲ್ಲಿ

---

1. ೧-೩ ಎಂದರೆ ಒಂದನೆಯ ಸಂಪುಟದ ಭಾಷ್ಯಭಾಗ ; ಭಾ. ಭಾ. ಎಂದಿಷ್ಟೇ ಇದ್ದರೆ ಎರಡನೆಯ ಸಂಪುಟದ ಭಾಷ್ಯಭಾಗವೆಂದು ತಿಳಿಯಬೇಕು. ಈ ಪೀಠಿಕೆಯಲ್ಲಿ ಸಂಕ್ಷೇಪಾಕ್ಷರವಿಲ್ಲದೆ ಮೂರು ಸಂಖ್ಯೆಗಳನ್ನು ಕೊಟ್ಟಿದ್ದರೆ ಅವು ಈ ಉಪನಿಷತ್ತಿನ ಅಧ್ಯಾಯ, ಬ್ರಾಹ್ಮಣ ಮತ್ತು ಕಂಡಿಕೆಯನ್ನು ಸೂಚಿಸುವವು.

ವಿರಕ್ತರಾದವರಿಗೆ ಬ್ರಹ್ಮಾತ್ಮವಿದ್ಯೆಯನ್ನು ತಿಳಿಸಿಕೊಡುವ ಮೂಲಕ ಇಷ್ಟಾನಿಷ್ಟಪ್ರಾಪ್ತಿ ಪರಿಹಾರಕ್ಕೆ ಕಾರಣವಾಗಿರುವ ಅಜ್ಞಾನವನ್ನು ತೊಲಗಿಸಿ ಕೃತಕೃತ್ಯನನ್ನಾಗಿ ಮಾಡಿಸುವದು ಜ್ಞಾನಕಾಂಡದ ಉದ್ದೇಶವು (೧-೫).

ದೇಹಾಂತರಸಂಬಂಧಿಯಾದ ಆತ್ಮನು ಪ್ರತ್ಯಕ್ಷಾನುಮಾನಗಳಿಗೆ ಗೋಚರನಲ್ಲ ; ಅವನಿಗೆ ಧರ್ಮಾಧರ್ಮಗಳಿಂದಾಗುವ ದೇಹಪರಂಪರೆಯ ಪ್ರಾಪ್ತಿಯಾಗಲಿ ಕರ್ಮಗಳಿಂದ ಅವನಿಗೆ ಆಗುವ ಗತ್ಯಾಗತಿಗಳಾಗಲಿ ಲೌಕಿಕ ಪ್ರಮಾಣಗಳಿಗೆ ಗೋಚರವಲ್ಲ. ಶಾಸ್ತ್ರವು ದೇಹವ್ಯತಿರಿಕ್ತನಾದ ಆತ್ಮನು ಇದಾನೆಂಬುದನ್ನು ಲೌಕಿಕಕರ್ಮಜ್ಞಾನಗಳಿಂದಲೂ ಕರ್ಮೋಪಾಸನೆಗಳಿಂದಲೂ ಅವನು ಬ್ರಹ್ಮಾದಿಸ್ಥಾವರಾಂತಗತಿಯನ್ನು ಪಡೆದು ಸಂಸಾರದಲ್ಲಿ ತೊಳಲುತ್ತಿರುವ ಪರಿಯನ್ನೂ ತಿಳಿಸಿಕೊಡುತ್ತದೆ ; ಬ್ರಹ್ಮವಿದ್ಯೆಯಿಂದ ಕ್ರಿಯಾಕಾರಕಫಲಾತ್ಮಕವಾಗಿರುವ ವ್ಯಾಕೃತಾವ್ಯಾಕೃತರೂಪವಾದ ಸಂಸಾರವನ್ನು ಮೀರುವ ಪರಿಯನ್ನೂ ತಿಳಿಸಿಕೊಡುತ್ತದೆ (೧-೩ ರಿಂದ ೭).

ಆತ್ಮಸ್ವರೂಪವು ಪ್ರತ್ಯಕ್ಷಾದಿಗಮ್ಯವೇ ಎಂದು ಲೋಕಾಯತಿಕರು, ಬೌದ್ಧರು, ಮೀಮಾಂಸಕರು, ತಾರ್ಕಿಕರು - ಮುಂತಾದವರು ಅಭಿಪ್ರಾಯಪಟ್ಟಿದ್ದರೂ ಶಾಸ್ತ್ರದಿಂದ ಮಾತ್ರವೇ ಆತ್ಮಸಿದ್ಧಿಯಾಗಬೇಕಾಗಿರುತ್ತದೆ (೧-೪). ದೇಹವನ್ನು ಬಿಟ್ಟ ಬಳಿಕ ಪಡೆಯುವ ಫಲಕ್ಕಾಗಿ ಇಂಥಿಂಥ ಕರ್ಮವನ್ನು ಮಾಡಬೇಕೆಂದು ವಿಧಿಸಿರುವದರ ಬಲದಿಂದ ಕರ್ಮಕಾಂಡದ ಪ್ರಾಮಾಣ್ಯದಿಂದ ಸಾಮಾನ್ಯವಾಗಿ ಆತ್ಮಸಿದ್ಧಿಯಾದರೂ ಆತ್ಮನು ಸ್ವಯಂಪ್ರಕಾಶನಾಗಿ ಸರ್ವವ್ಯವಹಾರಗಳಿಗೂ ಆಧಾರವಾಗಿರುತ್ತಾನೆಂಬುದನ್ನು ಅನುಭವಕ್ಕೆ ಬರುವಂತೆ ತಿಳಿಸಿರುವದು ಜ್ಞಾನಕಾಂಡದಲ್ಲಿಯೇ. ಈ ಉಪನಿಷತ್ತಿನಲ್ಲಿ ಜನಕಯಾಜ್ಞವಲ್ಕ್ಯಸಂವಾದದಲ್ಲಿ ಆತ್ಮಸ್ವರೂಪವನ್ನು ನಿರ್ಧರಿಸುವದಕ್ಕೆ ಹೊರಟಿರುವ ಪ್ರಕರಣದಲ್ಲಿ ಆತ್ಮನು ಸ್ವಯಂಜ್ಯೋತಿಯೆಂಬುದನ್ನು ತಿಳಿಸಿದೆ. ಪ್ರತ್ಯಕ್ಷಾದಿಪ್ರಮಾಣಗಳ ಬಲದಿಂದ ಇಂಥ ಆತ್ಮನು ಇಲ್ಲವೆಂದು ವಾದಿಸುವ ಚಾರ್ವಾಕಬೌದ್ಧಾದಿಗಳ ಮತವನ್ನು ಆಚಾರ್ಯರು ವಿಸ್ತಾರವಾಗಿ ಖಂಡಿಸಿ ಸ್ವಯಂಸಿದ್ಧವಾದ ಆತ್ಮಸ್ವರೂಪವನ್ನು ತಿಳಿಸಿಕೊಟ್ಟಿರುವ ಭಾಷ್ಯಭಾಗವು (ಭಾ. ಭಾ. ೧೬೬ ರಿಂದ ೧೮೨ ಪೂರ) ಆತ್ಮಸಿದ್ಧಿಗೇ ಅಲ್ಲದೆ ಆತ್ಮನ ಪರಮಾರ್ಥಸ್ವರೂಪನಿರ್ಧಾರಣೆಗೂ ಸಾಧಕವಾಗಿರುತ್ತದೆ.

ಕರ್ಮೋಪಾಸನಾಜ್ಞಾನಗಳ ಫಲ

ವೇದೋಕ್ತವಾದ ಕರ್ಮವನ್ನು ಮಾಡಿದವರಿಗೆ ಪಿತೃಲೋಕಾದಿ ಪ್ರಾಪ್ತಿಯಾಗುವದು ; ಉಪಾಸನಾಯುಕ್ತವಾಗಿ ಕರ್ಮವನ್ನು ಮಾಡಿದವರಿಗೆ ಬ್ರಹ್ಮ ಲೋಕಾಂತವಾದ ದೇವಲೋಕಪ್ರಾಪ್ತಿಯಾಗುತ್ತದೆ- ಎಂಬುದು ಸಾಮಾನ್ಯ ನಿಯಮವು (೧-೫, ೧-೨೩೧). ಫಲಾಭಿಸಂಧಿಯಿಂದ ಅಶ್ವಮೇಧಾದಿ ನಿತ್ಯಕರ್ಮವನ್ನು ಮಾಡುವವರು (ಭಾ.ಭಾ.೩೭, ೪೨, ೪೩), ಪಂಚಾಗ್ನಿವಿದ್ಯೆಯನ್ನು ಬಲ್ಲ ಗೃಹಸ್ಥರು (ಭಾ. ಭಾ. ೪೪೭), ಪ್ರಾಣೋಪಾಸನಾಸಹಿತವಾದ ಜ್ಯೋತಿಷ್ಟೋಮವನ್ನು ಮಾಡುವವರು (೧-೯೫, ೯೬), ಅಶ್ವಮೇಧಸಂಪಾದನಾ ರೂಪವಾದ ಕೇವಲೋಪಾಸನೆಮಾಡುವವರು (೧-೬), ನೈಷ್ಠಿಕಬ್ರಹ್ಮಚಾರಿಗಳು, ಅರಣ್ಯದಲ್ಲಿದ್ದುಕೊಂಡು ಓರಣ್ಯಗರ್ಭೋಪಾಸನೆಯನ್ನು ಮಾಡುವ ವಾನಪ್ರಸ್ಥರು ಮತ್ತು ತ್ರಿದಂಡಿಪರಿವ್ರಾಜಕರು (ಭಾ.ಭಾ.೪೪೭), ಈ ಉಪನಿಷತ್ತಿನಲ್ಲಿ ಹೇಳಿರುವ ಹಲವು ಸೋಪಾಧಿಕಬ್ರಹ್ಮೋಪಾಸನೆಗಳನ್ನು ಮಾಡಿದವರು (ಭಾ.ಭಾ.೩೮೧) - ಇವರಿಗೆಲ್ಲ ಬ್ರಹ್ಮಲೋಕಪ್ರಾಪ್ತಿಯಾಗುತ್ತದೆ. ಶಾಸ್ತ್ರವನ್ನು ಲೆಕ್ಕಿಸದೆ ಸ್ವಾಭಾವಿಕಜ್ಞಾನ ಕರ್ಮಗಳನ್ನು ಅವಲಂಬಿಸುವವರಿಗೆ ದುಷ್ಕೃತತಾರತಮ್ಯದಿಂದ ಸ್ಥಾವರಜಂಗಮ ಜನ್ಮಗಳು ಆಗುವವು (೧-೫, ಭಾ. ಭಾ. ೩೦, ೩೭, ೪೫೩). ಆದರೆ ಈ ಯಾವ ಫಲಗಳೂ ನಿತ್ಯವಲ್ಲ. ಏಕೆಂದರೆ ಕಾಯಿಕವಾಚಿಕಮಾನಸಿಕರೂಪವಾದ ಯಾವ ಕರ್ಮಕ್ಕೂ ನಿತ್ಯಫಲವನ್ನು ಕೊಡುವ ಸಾಮರ್ಥ್ಯವಿರುವದಿಲ್ಲ. ಉತ್ಪಾದ್ಯ, ವಿಕಾರ್ಯ, ಸಂಸ್ಕಾರ್ಯ, ಆಪ್ಯ - ಎಂಬೀ ನಾಲ್ಕೇ ಕರ್ಮದ ಕಾರ್ಯಗಳು (ಭಾ. ಭಾ. ೩೧) ; ಈ ನಾಲ್ಕೂ ಅನಿತ್ಯವಾಗಿರುವವೇ ಹೊರತು ನಿತ್ಯವಾಗಿರುವದಿಲ್ಲ. ನಿತ್ಯಕರ್ಮಗಳಿಂದ ಅಥವಾ ಉಪಾಸನಾಸಹಿತವಾದ ನಿತ್ಯಕರ್ಮದಿಂದ ನಿತ್ಯ ಫಲವೂ ದೊರಕಬಹುದೆಂದು ಕೆಲವರು ಶಂಕಿಸಿರುತ್ತಾರೆ ; ಆದರೆ ಕಾರ್ಯವಾದದ್ದು ಅನಿತ್ಯವೆಂಬ ಅನುಭವಸಮ್ಮತವಾದ ಯುಕ್ತಿಗೆ ಇದು ವಿರುದ್ಧ (ಭಾ. ಭಾ. ೩೧-೩೫) ವಾಗಿದೆ. ಶಾಸ್ತ್ರೋಕ್ತಕರ್ಮಗಳನ್ನು ಮಾಡಿದವರು ಧೂಮಾದಿಕ್ರಮದಿಂದ, ದಕ್ಷಿಣ (ಅಥವಾ ಪಿತೃಯಾಣ) ಮಾರ್ಗದಿಂದ ಪಿತೃಲೋಕಕ್ಕೆ ಹೋದವರು ಕರ್ಮತಾರತಮ್ಯದಿಂದ ಆಯಾ ಫಲಗಳನ್ನು ಪಡೆದುಕೊಳ್ಳುತ್ತಾ ದೇವತೆಗಳಿಗೆ ಉಪಭೋಗ್ಯರಾಗಿದ್ದುಕೊಂಡು (ಭಾ. ಭಾ. ೪೫೧) ಕರ್ಮವು ಕ್ಷಯವಾಗಲು ಮತ್ತೆ ಈ ಲೋಕಕ್ಕೆ ಬಂದು (ಭಾ.ಭಾ.೪೫೨) ಮತ್ತೂ ಕರ್ಮಗಳನ್ನು ಮಾಡಿ

ಫಲಭೋಗಕ್ಕಾಗಿ ಪಿತೃಲೋಕಕ್ಕೆ ಹೋಗುತ್ತಾ (ಭಾ. ಭಾ. ೪೪೮) ಸಂಸಾರದಲ್ಲಿ ತೊಳಲುತ್ತಿರುವರು. ಉಪಾಸಕರು ಅರ್ಚಿರಾದಿಕ್ರಮದಿಂದ ಉತ್ತರ (ಅಥವಾ ದೇವಯಾನ) ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋದಮೇಲೂ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳದಿದ್ದರೆ ಬ್ರಹ್ಮನ ಆಯಾ ಕಲ್ಪವಾದ ಬಳಿಕ ಮತ್ತೆ ಸಂಸಾರಕ್ಕೆ ಹಿಂತೆರಳುವರು. (ಭಾ. ಭಾ. ೪೫೦) ಅಶಾಸ್ತ್ರೀಯವಾದ ಸ್ವಾಭಾವಿಕಜ್ಞಾನಕರ್ಮಗಳನ್ನನುಸರಿಸುವವರಂತೂ ಕ್ಷುದ್ರಯೋನಿಗಳಲ್ಲಿ ಮತ್ತೆ ಮತ್ತೆ ಹುಟ್ಟಸಾಯುತ್ತಿರುವರು (ಭಾ. ಭಾ. ೪೫೩).

ಹೀಗೆ ಕರ್ಮಗಳು ಅನಿತ್ಯಫಲವನ್ನೇ ಕೊಡುವವಾದರೂ ಅವನ್ನೇ ಪ್ರಕಾರಾಂತರದಿಂದ ಮಾಡಿದರೆ, ಎಂದರೆ ಫಲಾಭಿಸಂಧಿಯಿಲ್ಲದೆ ಆತ್ಮಸಂಸ್ಕಾರಾರ್ಥವಾಗಿ ಮಾಡಿದರೆ, ಜ್ಞಾನೋತ್ಪತ್ತಿಯ ಮೂಲಕವಾಗಿ ಮೋಕ್ಷಕ್ಕೆ ಕಾರಣವಾಗುವವು (ಭಾ. ಭಾ. ೩೬, ೩೭, ೩೦೭). ಆದ್ದರಿಂದಲೇ ಶ್ರುತಿಯಲ್ಲಿ ವೇದಾಧ್ಯಯನ, ಯಜ್ಞ, ದಾನ, ತಪಸ್ಸುಗಳು ಚಿತ್ತಶುದ್ಧಿಯ ಮೂಲಕವಾಗಿ ಆತ್ಮಜ್ಞಾನಕ್ಕೆ ಕಾರಣವಾಗಿರುವವೆಂದು (೪-೪-೨೨, ಭಾ. ಭಾ. ೩೦೬) ಶ್ರುತಿಯಲ್ಲಿ ಹೇಳಿರುತ್ತದೆ. ಮೋಕ್ಷವು ಜ್ಞಾನದ ಕಾರ್ಯವೆಂದು ಹೇಳುವದೂ ಉಪಚಾರಕ್ಕೆಂದು ತಿಳಿಯಬೇಕು. ಏಕೆಂದರೆ ಮೋಕ್ಷವು ನಿತ್ಯವಾಗಿರುತ್ತದೆ ; ಸಾಧಕನಾದವನ ಸ್ವರೂಪವೇ ಆಗಿರುತ್ತದೆ (ಭಾ. ಭಾ. ೩೨). ಜ್ಞಾನವು ಅಜ್ಞಾನವೆಂಬ ವ್ಯವಧಾನವನ್ನು ಬಾಧಿಸುತ್ತದೆಯೇ ಹೊರತು ಇದ್ದದ್ದನ್ನು ಕಳೆಯುವದಿಲ್ಲ. ಇಲ್ಲದ್ದನ್ನುಂಟುಮಾಡುವದೂ ಇಲ್ಲ (೧-೧೫೦, ೧೫೬).

ಹೀಗೆ ಕರ್ಮಕಾಂಡದಲ್ಲಿ ಹೇಳಿರುವ ಕರ್ಮಗಳ ಫಲವೆಲ್ಲ ನಾಮರೂಪಕರ್ಮಾಶ್ರಯವಾಗಿದ್ದುಕೊಂಡು ಅನಿತ್ಯವಾಗಿರುತ್ತದೆ, ಸಾಧ್ಯಸಾಧನರೂಪವಾಗಿರುತ್ತದೆ. ವ್ಯಾಕೃತಾವ್ಯಾಕೃತರೂಪವಾಗಿರುವ ಈ ಸಂಸಾರವು ಅವಿದ್ಯಾಕೃತವೆಂದು ವರ್ಣಿಸಿ ಇದರಲ್ಲಿ ವಿರಕ್ತರಾದವರಿಗಾಗಿಯೇ ಬ್ರಹ್ಮವಿದ್ಯೆಯನ್ನು ಈ ಉಪನಿಷತ್ತಿನಲ್ಲಿ ಉಪದೇಶಿಸಿದೆ (ಭಾ. ಭಾ. ೧-೭). ವೇದಕ್ಕೆಲ್ಲ ಇದರಲ್ಲಿಯೇ ಪರಮತಾತ್ಪರ್ಯವಿದೆ (ಭಾ. ಭಾ. ೩೦೪) - ಎಂಬುದು ಆಚಾರ್ಯರ ಮತವು (೧-೫, ೧-೭, ೧-೯೭, ೧-೧೧೭).

ಆತ್ಮಜ್ಞಾನಕ್ಕೆ ಆಗಮೋಪಪತ್ತಿಗಳು

ಈ ಉಪನಿಷತ್ತು ಆಗಮಪ್ರಧಾನವಾದ ಮಧುಕಾಂಡವೆಂದೂ ಉಪಪತ್ತಿ ಪ್ರಧಾನವಾದ ಯಾಜ್ಞವಲ್ಕ್ಯೀಯ ಅಥವಾ ಮುನಿಕಾಂಡವೆಂದೂ ಮುಖ್ಯವಾಗಿ ಎರಡು ವಿಭಾಗಗಳಾಗಿ ವಿಂಗಡವಾಗಿದೆ. ಈ ಎರಡು ಕಾಂಡಗಳಲ್ಲಿ ಅನುಕ್ತವಾಗಿರುವ ವಿಷಯಗಳನ್ನು ಸಂಗ್ರಹಿಸಿರುವ ಖಿಲಕಾಂಡದಲ್ಲಿ ಆಗಮೋಪಪತ್ತಿಗಳೆರಡೂ ಇರುತ್ತವೆ. ಆಚಾರ್ಯರು ಆಗಮೋಪಪತ್ತಿಗಳೆಂಬ ಶಬ್ದಗಳನ್ನು ತಮ್ಮ ಭಾಷ್ಯಗಳಲ್ಲೆಲ್ಲ ಮತ್ತಮತ್ತೆ ಪ್ರಯೋಗಿಸಿರುವದರಿಂದ ಇವುಗಳ ಅರ್ಥವನ್ನು ವಿಚಾರಿಸುವದರಿಂದ ಲಾಭವುಂಟು.

ಪ್ರತ್ಯಕ್ಷಾನುಮಾನಗಳಿಂದ ತಿಳಿಯುವದಕ್ಕಾಗದೆ ಇರುವ ವಿಷಯವನ್ನು ಶಾಸ್ತ್ರದಿಂದಲೇ ತಿಳಿಯಬೇಕಾಗಿರುವದರಿಂದ ಶಾಸ್ತ್ರ ಆಗಮ - ಎಂಬ ಶಬ್ದಗಳನ್ನು ಪರ್ಯಾಯಗಳೆಂದು ಗ್ರಹಿಸಿದರೆ ತಪ್ಪಾಗುವದಿಲ್ಲ. ಕರ್ಮೋಪಾಸನಾದಿ ಸಾಧನಗಳು ಮತ್ತು ಅವುಗಳಿಂದಾಗುವ ಅದೃಷ್ಟಫಲಗಳು - ಇವುಗಳ ವಿಷಯದಲ್ಲಿ ಈ ಅರ್ಥವಿವರಣೆಯೇ ಸಾಕಾಗಿರುತ್ತದೆ. ಏಕೆಂದರೆ ಶ್ರುತಿಯಲ್ಲಿ ಇಂಥ ಸಂದರ್ಭಗಳಲ್ಲಿ 'ಆಹುಃ', 'ವ್ಯಾಚಚಕ್ಷಿರೇ', 'ಶುಶ್ರುಮ' ಎಂದು ಮುಂತಾಗಿರುವ ರೂಪದ ಶಬ್ದಗಳನ್ನು ಸೂಚಿಸಿರುವಾಗ ಆಚಾರ್ಯರು ಆಗಮವೆಂಬ ಮಾತನ್ನು ಪ್ರಯೋಗಿಸಿರುತ್ತಾರೆ. ಆದರೆ ಶ್ರದ್ಧಾಮಾತ್ರಗಮ್ಯವಾಗಿರುವ ಕರ್ಮೋಪಾಸನಾದಿಗಳ ವಿಷಯವನ್ನೇ ಅಲ್ಲದೆ ನಮ್ಮ ಸ್ವರೂಪವೇ ಆಗಿರುವ ಸ್ವಯಂಸಿದ್ಧನಾದ ಪರಮಾತ್ಮನ ವಿಷಯದಲ್ಲಿಯೂ ಆಚಾರ್ಯರು ಆಗಮಶಬ್ದವನ್ನು ಉಪಯೋಗಿಸಿರುತ್ತಾರೆ. ಆದ್ದರಿಂದ ಆತ್ಮನದಲ್ಲದ ಸ್ವರೂಪವನ್ನು ಅಲ್ಲಗಳೆದು ಸಾರ್ವತ್ರಿಕಾನುಭವದ ಆಧಾರವನ್ನಿಟ್ಟುಕೊಂಡು ಮಾಡಿರುವ ಉಪದೇಶವೇ ಆಗಮವೆಂದು ಹಿಡಿಯುವದು ಈ ಸಂದರ್ಭಕ್ಕೆ ಹೆಚ್ಚು ಒಪ್ಪುತ್ತದೆ. ಕೇನೋಪನಿಷದ್ಭಾಷ್ಯ (ಭಾ. ಭಾ. ೨೬, ೪೪, ೪೬), ಕಠೋಪನಿಷದ್ಭಾಷ್ಯ (ಭಾ. ಭಾ. ೫೭, ೫೯), ಐತರೇಯಭಾಷ್ಯ (ಭಾ. ಭಾ. ೭೧) - ಮುಂತಾದವುಗಳನ್ನು ಸಮಾಲೋಚನೆ ಮಾಡುವವರಿಗೆ ಅಲ್ಲಿ ಆಗಮಶಬ್ದಕ್ಕೆ ಈ ವಿಶೇಷಾರ್ಥವಿದೆ ಎಂಬುದು ಮನದಟ್ಟಾಗುವದು. ಶಾಸ್ತ್ರಾಚಾರ್ಯರ ಉಪದೇಶದಿಂದ ಮಾತ್ರವೇ ತಿಳಿಯಬರುವ ಆತ್ಮಸ್ವರೂಪವೂ ಪ್ರತ್ಯಕ್ಷಾನುಮಾನಗಳಿಗೆ ಅವಿಷಯವೇ ಆಗಿರುವದರಿಂದ ಕರ್ಮಕಾಂಡದಲ್ಲಿರುವ ಆಗಮಗಮ್ಯಪದಾರ್ಥಗಳ ಜೊತೆಗೆ ಇದನ್ನೂ

ಸೇರಿಸುವದರಲ್ಲಿ ಯಾವ ವಿರೋಧವೂ ಇರುವದಿಲ್ಲ. ಆಗಮಶಬ್ದಕ್ಕೆ ಈ ಅರ್ಥವನ್ನು ಅಂಗೀಕರಿಸಿದರೇ ಮಧುಕಾಂಡದಲ್ಲಿ ಉಪಾಸನಾವಿಚಾರಗಳ ಜೊತೆಗೆ ಅನುಭವಗಮ್ಯವಾದ ಆತ್ಮಾದಿವಿಚಾರಗಳನ್ನೂ ಸೇರಿಸಿರುವದೂ ಉಪಪತ್ತಿಪ್ರಧಾನವಾದ ಮುನಿಕಾಂಡದಲ್ಲಿ ಲಿಂಗಾತ್ಮಕನಾದ ಸೂತ್ರಾತ್ಮನನ್ನೂ ಸಾಕ್ಷಿರೂಪನಾಗಿರುವ ಅಂತರ್ಯಾಮಿಯನ್ನೂ ಆಗಮಗಮ್ಯನೆಂದಿರುವದೂ (ಭಾ. ಭಾ. ೬೭, ೬೮) ಸಮಂಜಸವಾಗುತ್ತದೆ. ಹೀಗಾದರೇ ಆತ್ಮಸ್ವರೂಪವನ್ನು ಯಥಾರ್ಥವಾಗಿ ತಿಳಿಸಿಕೊಡುವದಕ್ಕೆ ನೇತಿನೇತಿರೂಪವಾದ ಉಪದೇಶಕ್ರಮಕ್ಕಿಂತ ಮತ್ತೊಂದು ಬಗೆಯಿಲ್ಲ ಎಂದು ಶ್ರುತಿಯಲ್ಲಿಯೂ ಭಾಷ್ಯಗಳಲ್ಲಿಯೂ ಹೇಳಿರುವದಕ್ಕೆ (೨-೩-೬, ಭಾ. ಭಾ. ೩೪೮, ೩೫೦) ಕಾರಣವು ಸಿಕ್ಕುತ್ತದೆ.

ಆತ್ಮತತ್ತ್ವವು ಸ್ವಯಂಸಿದ್ಧವಾಗಿದ್ದು ಹೀಗೆ ಆಗಮಮಾತ್ರಸಮಧಿಗಮ್ಯವಾಗಿರುವಲ್ಲಿ ಅದನ್ನು ಉಪಪತ್ತಿಯಿಂದ ತಿಳಿಯಿಸಬೇಕಾದದ್ದೇನು ?- ಎಂಬ ಪ್ರಶ್ನೆಗೂ ಈಗ ಉತ್ತರವು ಸುಲಭವಾಗುತ್ತದೆ. ಏಕೆಂದರೆ **ಉಪಪತ್ತಿ** ಎಂದರೆ ಸಾಂಖ್ಯಾದಿಗಳು ಒಪ್ಪಿರುವಂತೆ ದೃಷ್ಟಾಂತಬಲದಿಂದ ಮಾಡುವ ಅನುಮಾನರೂಪವಾದ ತರ್ಕಮಾತ್ರವಲ್ಲ ; ಮತ್ತೇನೆಂದರೆ ಯಾರು ಆಗಮಮಾತ್ರದಿಂದ ನೇರಾಗಿ ಅನುಭವವನ್ನು ಪಡೆದುಕೊಳ್ಳುವಷ್ಟು ಸಂಸ್ಕೃತವಾದ ಬುದ್ಧಿಯಿಲ್ಲದವರೋ ಅವರಿಗಾಗಿ ಅದೇ ಅನುಭವವನ್ನು ತಂದುಕೊಡುವದಕ್ಕಾಗಿ ಉಪಯೋಗಿಸುವ ಅವಾಂತರಾನುಭವಗಳ ಯೋಜನೆಯೇ ಈ ಉಪಪತ್ತಿಯು. ಆದ್ದರಿಂದಲೇ ಆಚಾರ್ಯರು ಕುತಾರ್ಕಿಕರನ್ನೂ ಆಗಮವನ್ನರಿಯದ ವೇದಾಂತಿಗಳನ್ನೂ 'ಆಗಮಾರ್ಥವಿಚ್ಛಿನ್ನಸಂಪ್ರದಾಯಬುದ್ಧಯಃ' (೧-೩-೨೫), 'ಶಾಸ್ತ್ರಗುರುಪ್ರಸಾದರಹಿತಾಃ' (೧-೩-೨೭), ''ತಮೇತಮರ್ಥಮಜಾನನ್ತಸ್ತಾರ್ಕಿಕಾಃ ಕೇಚಿತ್ಪಣ್ಡಿತಂ ಮನ್ಯಾಶ್ಚಾಗಮವಿದಃ'' (೧-೩-೯) - ಎಂದು ಹಳಿದಿದ್ದರೂ ಈ ಭಾಷ್ಯದಲ್ಲಿ ಉಪಪತ್ತಿರೂಪವಾದ ಆಗಮಸಮ್ಮತತರ್ಕವನ್ನು ಧಾರಾಳವಾಗಿ ಉಪಯೋಗಿಸಿರುತ್ತಾರೆ. ''ಆಗಮೋಪಪತ್ತಿಗಳು ಆತ್ಮೈಕತ್ವವನ್ನು ತಿಳಿಸಿಕೊಡುವದಕ್ಕೆ ಹೊರಟಾಗ ಅದನ್ನು ಅಂಗೈಯಲ್ಲಿರುವ ಬಿಲ್ವದಂತೆ ತಿಳಿಸಿಕೊಡಬಲ್ಲವು'' (ಭಾ. ಭಾ.೧) ಎಂಬ ಭಾಷ್ಯವಚನವೂ ಅವಸ್ಥಾತ್ರಯಪರೀಕ್ಷಾಪ್ರಕ್ರಿಯೆಯನ್ನು ಆಗಮಗಮ್ಯವೆಂದೂ ಮಹಾತರ್ಕಗಮ್ಯವೆಂದೂ (ಭಾ. ಭಾ. ೧೫೭) ಕರೆದಿರುವ ಭಾಷ್ಯವಚನವೂ ಆಗಮೋಪಪತ್ತಿಶಬ್ದಗಳಿಗೆ ಮೇಲೆ ನಾವು ಹೇಳಿರುವ ಅರ್ಥವನ್ನು ಇಟ್ಟುಕೊಂಡರೇ ಅವಿರುದ್ಧವಾಗುತ್ತವೆ.

ಪರಮಾರ್ಥತತ್ತ್ವದ ಉಪದೇಶ

ಈ ಉಪನಿಷತ್ತಿನಲ್ಲಿ 'ನೇತಿ ನೇತ್ಯಾತ್ಮಾ' ಎಂಬ ವಾಕ್ಯದಿಂದ ಯಾವ ವಿಶೇಷಗಳೂ ಇಲ್ಲದ್ದೇ ಆತ್ಮನು ಎಂದೇ ವರ್ಣಿಸಿದೆ. ಆದರೂ ಹಾಗೆ ವಿಶೇಷಗಳನ್ನು ಅಲ್ಲಗಳೆಯುವ ಮುಂಚೆ ಆತ್ಮನಲ್ಲಿ ಕಲ್ಪಿತವಾಗಿರುವ ವಿಶೇಷಗಳನ್ನು ಅಧ್ಯಾರೋಪ ದೃಷ್ಟಿಯಿಂದ ಇಟ್ಟುಕೊಂಡೇ ಪ್ರತಿಪಾದಿಸಿರುತ್ತದೆ. ಉದಾಹರಣೆಗೆ ಜಗತ್ತು ಮೊದಲು ಅವ್ಯಾಕೃತವಾಗಿದ್ದು ನಾಮರೂಪಗಳಾಗಿ ವ್ಯಾಕೃತವಾಯಿತು ; ಅವ್ಯಾಕೃತಾವಸ್ಥೆಯಲ್ಲಿದ್ದ ಆತ್ಮನು ಇದರಲ್ಲಿ ಒಳಹೊಕ್ಕು ಪ್ರಾಣನು, ದ್ರಷ್ಟೃ, ಶ್ರೋತೃ ಮುಂತಾದ ಕರ್ಮನಾಮಗಳನ್ನು ಪಡೆದಿರುತ್ತಾನೆ ; ಈ ಅಕೃತ್ಸ್ನರೂಪಗಳನ್ನೆಲ್ಲ ವ್ಯಾಪಿಸಿಕೊಂಡಿರುವ ಆತ್ಮರೂಪವೇ ಕೃತ್ಸ್ನವು (೧-೪-೭, ಭಾ. ಭಾ. ೧೩೨, ೫೭) ಎಂದು ಒಂದು ಕಡೆಯಲ್ಲಿ ಉಪದೇಶಿಸಿದೆ. ಮೊದಲು ಬ್ರಹ್ಮವೊಂದೇ ಇತ್ತು; ಅದು 'ನಾನು ಬ್ರಹ್ಮವಾಗಿರುವೆನು' ಎಂದು ತನ್ನನ್ನೇ ಅರಿತುಕೊಂಡಿತು, ಅದರಿಂದ ಸರ್ವವಾಯಿತು (೧-೪-೧೦, ಭಾ. ಭಾ. ೧೬೩, ೨-೫-೧೫, ಭಾ. ಭಾ. ೯೭) ಎಂದು ಇನ್ನೊಂದು ಕಡೆಯಲ್ಲಿ ಉಪದೇಶಿಸಿದೆ. ಸುಷುಪ್ತಿಯಲ್ಲಿ ಕ್ರಿಯಾಕಾರಕಫಲಭೇದಗಳಿಲ್ಲದೆ ಇರುವ ಆತ್ಮನೊಬ್ಬನೇ ಇರುತ್ತಾನೆ; ಅವನಿಂದಲೇ ಜೇಡರಹುಳುವಿನಿಂದ ನೂಲುಂಟಾಗುವಂತೆಯೂ ಬೆಂಕಿಯಿಂದ ಕಿಡಿಗಳು ಸಿಡಿದು ಬರುವಂತೆಯೂ ಎಲ್ಲಾ ಪ್ರಾಣಗಳೂ ಎಲ್ಲಾ ಲೋಕಗಳೂ ಎಲ್ಲಾ ದೇವತೆಗಳೂ ಎಲ್ಲಾ ಭೂತಗಳೂ ಹೊರಟುಬರುತ್ತವೆ (೨-೧-೨೦, ಭಾ. ಭಾ. ೩೦೩). ಬ್ರಹ್ಮಕ್ಕೆ ಮೂರ್ತ, ಅಮೂರ್ತ - ಎಂಬ ಎರಡು ರೂಪಗಳಿವೆ ; ಇವು ಸತ್ (ಇರುವದು), ತ್ಯತ್ (ಪರೋಕ್ಷವಾದದ್ದು- ಎಂದು ಕರೆಯಿಸಿಕೊಳ್ಳುವ ಪಂಚಭೂತಗಳಿಂದಾಗಿವೆ. ಈ ರೂಪಗಳೂ ಇವುಗಳ ವಾಸನೆಗಳೂ ಅಧಿದೈವತರೂಪದಿಂದಲೂ ಅಧ್ಯಾತ್ಮರೂಪದಿಂದಲೂ ತೋರಿಕೊಳ್ಳುತ್ತಿರುವವು. ಈ ರೂಪಗಳನ್ನು 'ಸತ್ಯ' ಎಂದು ಕರೆದರೆ ಬ್ರಹ್ಮವು 'ಸತ್ಯದ ಸತ್ಯವು' ಎನಿಸುವದು. (೨-೩-೫ ರಿಂದ ೬), ಈ ಬ್ರಹ್ಮದ ಪರಮಾರ್ಥಸ್ವರೂಪವೇ 'ನೇತಿ ನೇತಿ' (೨-೩-೬, ಭಾ. ಭಾ. ೩೪೮). ಇದಿಷ್ಟೂ ಮಧುಕಾಂಡದಲ್ಲಿ ಪ್ರತಿಪಾದಿಸಿರುವದು. ಇದನ್ನೇ ಮುಂದೆ ಮುನಿಕಾಂಡದಲ್ಲಿ ತರ್ಕದಿಂದ ಉಪಪಾದನೆ ಮಾಡಿದೆ. ಖಿಲಕಾಂಡದ ಆದಿಯಲ್ಲಿ ಇದನ್ನೆಲ್ಲ ಹೀಗೆಂದು ಉಪಸಂಹಾರಮಾಡಿದೆ : ಬ್ರಹ್ಮವು ತನ್ನ ಸ್ವರೂಪದಿಂದ ಪೂರ್ಣವೇ ; ಅದು ಸೋಪಾಧಿಕರೂಪದಿಂದ

ತೋರುವಾಗಲೂ ಪೂರ್ಣವೇ. ಅದರ ನಿಜವಾದ ಪೂರ್ಣಸ್ವರೂಪವನ್ನು ಗ್ರಹಿಸಿದಾಗ ಅದು ಸರ್ವದಾ ಪೂರ್ಣವೇ ಎಂಬುದು ಮನದಟ್ಟಾಗುವದು. ಹೀಗೆ **ಆತ್ಮ, ಕೃತ್ಸ್ನ, ಬ್ರಹ್ಮ, ಸರ್ವ, ಪೂರ್ಣ** - ಎಂಬ ಬೇರೆ ಬೇರೆಯ ಹೆಸರುಗಳಿಂದ ನೇತಿ ನೇತಿ ಎಂದು ವರ್ಣಿಸಿರುವ ಅನಂತವಾದ ಪರಮಾರ್ಥತತ್ತ್ವವನ್ನೇ ಇಲ್ಲಿ ಉಪದೇಶಿಸಿರುತ್ತದೆ.

ನೇತಿ ನೇತ್ಯಾತ್ಮಾ

ಸ್ವತಃ ನಿರ್ವಿಶೇಷವಾಗಿರುವ ಪರಮಾತ್ಮನಲ್ಲಿ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ - ಎಂದು ವಿಂಗಡಿಸಿಕೊಂಡಿರುವ ವ್ಯಾಕೃತಾವ್ಯಾಕೃತರೂಪವಾದ ಜಗತ್ತು ಸರ್ವಥಾ ಇಲ್ಲದಿದ್ದರೂ ವ್ಯವಹಾರದಲ್ಲಿ ಅವಿದ್ಯಾಕಲ್ಪಿತವಾಗಿ ತೋರುತ್ತಿರುವದರಿಂದ ಅದನ್ನು ಅಲ್ಲಗಳೆದೇ ತತ್ತ್ವವನ್ನು ತಿಳಿಸುವದು ಈ ಉಪನಿಷತ್ತಿನಲ್ಲಿ ಒಂದು ಮುಖ್ಯವಾದ ಉಪದೇಶಪ್ರಕಾರವಾಗಿರುತ್ತದೆ. ಮೂರ್ತಾಮೂರ್ತಬ್ರಾಹ್ಮಣದಲ್ಲಿ **'ಅಥಾತ ಆದೇಶೋ ನೇತಿನೇತಿ'** ಎಂದು ನಾಮರೂಪಾತ್ಮಕವಾದ ಸತ್ಯಶಬ್ದವಾಚ್ಯವಾದ ಪಂಚಭೂತಗಳೂ ಅವುಗಳ ವಾಸನೆಯೂ ಇಲ್ಲವೆಂದು ತಿಳಿಸಿದೆಯೆಂದು ಆಗಲೇ ಹೇಳಿದ್ದಾಗಿದೆ. ಶಾಕಲ್ಯಬ್ರಾಹ್ಮಣದಲ್ಲಿ ನಾಮರೂಪಕರ್ಮಾತ್ಮಕವಾದ ಸರ್ವವನ್ನೂ ಹೃದಯದಲ್ಲಿ ಉಪಸಂಹಾರಮಾಡಿ (೩-೯-೨೪, ಭಾ. ಭಾ. ೧೨೦) ಕಾರ್ಯಕರಣಗಳಿಗೆ ಆಶ್ರಯವಾಗಿರುವ (ಭಾ. ಭಾ. ೧೨೨) ನಿರುಪಾಧಿಕಾತ್ಮನನ್ನು 'ಸ ಏಷ ನೇತಿ ನೇತ್ಯಾತ್ಮಾ' (೩-೯-೨೬, ಭಾ. ಭಾ. ೧೨೩) ಎಂದು ತಿಳಿಸಿದೆ. ಜನಕಯಾಜ್ಞವಲ್ಕ್ಯಸಂವಾದದಲ್ಲಿ ಅವಸ್ಥಾತ್ರಯಪರೀಕ್ಷೆಯನ್ನು ಮಾಡಿ ಆತ್ಮನಲ್ಲಿ ಯಾವ ಅವಸ್ಥಾಸಂಬಂಧವೂ ಇಲ್ಲವೆಂದು **'ಸ ಏಷ ನೇತಿ ನೇತ್ಯಾತ್ಮಾ'** (೪-೨-೪, ಭಾ. ಭಾ. ೧೫೬) ಎಂದೇ ತಿಳಿಸಿದೆ. ಅವಸ್ಥಾತ್ರಯಸಂಚಾರಕ್ಕೆ ದಾರ್ಷ್ಟಾಂತಿಕವಾದ ಸಂಸಾರವರ್ಣನೆಯನ್ನೂ ಮೋಕ್ಷವರ್ಣನೆಯನ್ನೂ ಮಾಡಿದಬಳಿಕ ಈ ನಿರ್ವಿಶೇಷಾತ್ಮನನ್ನು ಪಡೆದುಕೊಂಡವನಿಗೆ ಪುಣ್ಯಪಾಪಗಳಿಲ್ಲ ಎಂದು ತಿಳಿಸುವಾಗ **'ಸ ಏಷ ನೇತಿ ನೇತ್ಯಾತ್ಮಾ'** (೪-೪-೨೨, ಭಾ. ಭಾ. ೩೧೨) ಎಂದೇ ತಿಳಿಸಿದೆ. ಕಟ್ಟಕಡೆಗೆ ಸರ್ವಕರ್ಮಸಂನ್ಯಾಸವೇ ಅಮೃತತ್ವಕ್ಕೆ ಸಾಧನವು ಎಂದು ತಿಳಿಸುವದಕ್ಕಾಗಿ **'ಸ ಏಷ ನೇತಿ ನೇತ್ಯಾತ್ಮಾ'** (೪-೫-೧೫) ಎಂದೇ ಉಪಸಂಹಾರಮಾಡಿರುತ್ತದೆ. ಹೀಗೆ ನಾಲ್ಕು ಪ್ರಪಾತಕಗಳಲ್ಲಿಯೂ ಆತ್ಮನು ನಿರ್ವಿಶೇಷನೇ ಎಂಬುದನ್ನು ಬೇರೆ ಬೇರೆಯ ಉಪಾಯಗಳಿಂದ ತಿಳಿಸಿ

ಕೊನೆಯಲ್ಲಿ **'ನೇತಿ ನೇತಿ'** ಎಂದು ವಿಶೇಷವನ್ನು ಅಲ್ಲಗಳೆದೇ ತಿಳಿಸಿದೆ ಯಾದ್ದರಿಂದ ಇದರಲ್ಲಿಯೇ ಉಪನಿಷತ್ತಿಗೆ ಪರಮತಾತ್ಪರ್ಯವೆಂದು (ಭಾ. ಭಾ. ೩೩೨, ೩೩೩) ಆಚಾರ್ಯರು ಭಾಷ್ಯಾರ್ಥವನ್ನು ಉಪಸಂಹಾರಮಾಡಿರುತ್ತಾರೆ. ಆತ್ಮ ಸ್ವರೂಪದಲ್ಲಿ ಜಾತಿಗುಣಾದಿಗಳು ಯಾವವೂ ಇಲ್ಲದ್ದರಿಂದ ಅದನ್ನು ಯಾವ ಶಬ್ದದಿಂದಲೂ ಹೇಳುವದಕ್ಕೆ ಬರುವದಿಲ್ಲವೆಂಬುದೇ (೧-೩.೪೮) ಯುಕ್ತವಾಗಿದೆ.

ಮೇಲಿನ ವಿಚಾರಸರಣಿಯನ್ನು ಮನದಂದುಕೊಂಡವರಿಗೆ ಅನಂತಗುಣ ಗಳಿರುವ ಬ್ರಹ್ಮವನ್ನು ಎಷ್ಟು ವರ್ಣಿಸಿದರೂ ಪೂರ್ಣವಾಗುವದಿಲ್ಲ ಎಂಬ ಅಭಿಪ್ರಾಯದಿಂದ 'ನೇತಿ ನೇತಿ' ಎಂದು ಶ್ರುತಿ ಹೇಳುತ್ತದೆ ಎಂಬವರ ಮತವು ನಿರಾಧಾರವೆಂಬುದು ಸ್ಪಷ್ಟವಾಗುತ್ತದೆ. ಆಚಾರ್ಯರು ತಿಳಿಸಿರುವ ಅಧ್ಯಾರೋಪಾಪವಾದನ್ಯಾಯವನ್ನೇ (ಭಾ. ಭಾ. ೩೨೦, ೩೨೧) ಇಲ್ಲಿ ಸ್ವೀಕರಿಸಿದೆಯೆಂಬುದೂ ಮನವರಿಕೆಯಾಗುತ್ತದೆ.

ಅವಸ್ಥಾತ್ರಯವಿಚಾರ

ಭಾಷ್ಯಕಾರರ ಮತದಲ್ಲಿ ಬೃಹದಾರಣ್ಯಕದಲ್ಲಿ ಅವಸ್ಥಾತ್ರಯವಿಚಾರಕ್ಕೆ ಬಹಳ ಹೆಚ್ಚಿನ ಸ್ಥಾನವಿರುತ್ತದೆ. ಆಗಮಪ್ರಧಾನವಾದ ಮಧುಕಾಂಡದಲ್ಲಿ ಕಾರ್ಯ ಕರಣದೇವತಾವ್ಯತಿರಿಕ್ತನೂ ಅದ್ವಿತೀಯನೂ ಆದ ನಿರ್ವಿಶೇಷಾತ್ಮನೊಬ್ಬನಿದಾ ನೆಂಬುದನ್ನು (೨-೧-೧೫ ರಿಂದ ೨೦ರವರೆಗೆ) ಅವಸ್ಥಾತ್ರಯಪರೀಕ್ಷೆಯಿಂದಲೇ ತಿಳಿಸಿಕೊಟ್ಟಿರುತ್ತದೆ. ಉಪಪತ್ತಿಪ್ರಧಾನವಾದ ಯಾಜ್ಞವಲ್ಕೀಯಕಾಂಡದಲ್ಲಿಯೂ ಸರ್ವೋಪಾಸನೆಗಳಿಗೂ ಪರಮಲಕ್ಷ್ಯವು ಪರಮಾತ್ಮನೇ ಎಂಬಿದನ್ನು (೪-೨) ಅವಸ್ಥಾತ್ರಯಪರಾಮರ್ಶದಿಂದಲೇ ಉಪದೇಶಿಸಿದೆ. ಆತ್ಮನು ಕಾರ್ಯಕರಣ ವ್ಯತಿರಿಕ್ತನು, ಶುದ್ಧನು, ಸ್ವಯಂಜ್ಯೋತಿಯು, ಅಲುಪ್ತಶಕ್ತಿಗಳುಳ್ಳವನು, ನಿರತಿ ಶಯಾನಂದಸ್ವಭಾವನು, ಅದ್ವೈತನು- ಎಂಬುದನ್ನೆಲ್ಲ (೪-೩-೧ ರಿಂದ ೩೩ ರವರೆಗೆ) ವಿಸ್ತಾರವಾಗಿ ಅವಸ್ಥಾತ್ರಯನಿರೂಪಣದಿಂದಲೇ ತೋರಿಸಿಕೊಟ್ಟಿದೆ. ಇದನ್ನು **ಮಹಾತರ್ಕ**ವೆಂದು ಆಚಾರ್ಯರು (ಭಾ. ಭಾ. ೧೫೭) ಕರೆದಿರುವದನ್ನು ವಾಚಕರು ಲಕ್ಷ್ಯದಲ್ಲಿಡಬೇಕು.

ಆಚಾರ್ಯರು ಈ ಉಪನಿಷತ್ತಿನ ಭಾಷ್ಯದಲ್ಲಿ ಮುಖ್ಯವಾಗಿ ಸುಷುಪ್ತಿಯ ಆಧಾರದಿಂದಲೇ ತಮ್ಮ ಸಿದ್ಧಾಂತದ ಮುಖ್ಯಾಂಶಗಳನ್ನು ಜಿಜ್ಞಾಸುಗಳಿಗೆ ತಿಳಿಯ

ಹೇಳಲು ಪ್ರಯತ್ನಿಸಿರುತ್ತಾರೆಂಬುದನ್ನು ಈ ಸಂದರ್ಭದಲ್ಲಿ ಓದುಗರು ಮನದಂದು ಕೊಳ್ಳಬೇಕು. ಸುಷುಪ್ತ್ಯವಸ್ಥೆಯಲ್ಲಿ ಆತ್ಮನು ಅವಿದ್ಯಾಕಾಮಕರ್ಮಗಳಿಲ್ಲದ, ಸರ್ವ ಸಂಸಾರಧರ್ಮಸಂಬಂಧರಹಿತವಾದ, ಅದ್ವಿತೀಯಪರಮಾತ್ಮರೂಪದಿಂದ ಇದ್ದು ಕೊಂಡಿರುತ್ತಾನೆ ಎಂದು (೧-೨೮೯, ೧-೨೯೯, ೧-೩೦೦, ೧-೩೦೧, ೧-೩೦೨, ೧-೩೦೩ ; ಭಾ. ಭಾ. ೨೧೩, ೨೧೫, ೨೧೬, ೨೧೭, ೨೧೮, ೨೩೩, ೨೪೨) ಸ್ಪಷ್ಟವಾಗಿ ಹೇಳಿರುತ್ತಾರೆ. ಅವಿದ್ಯೆ ಎಂದರೆ ಮಿಥ್ಯಾವಸ್ತುವನ್ನು ಆತ್ಮನಿಗೆ ಎರಡನೆಯದಾಗಿರುವಂತೆ ತೋರಿಸಿ, ಆತ್ಮನಲ್ಲಿ ಪರಿಚ್ಛಿನ್ನತ್ವಭ್ರಾಂತಿಯನ್ನುಂಟುಮಾಡಿ, ಮಿಥ್ಯಾವಿಷಯದ ಕಾಮವನ್ನುಂಟು ಮಾಡುವ ಮೂಲಕ ಸಂಸಾರಕ್ಕೆ ಕಾರಣವಾಗುವ ತಪ್ಪುತಿಳಿವಳಿಕೆ- ಎಂದೂ (ಭಾ. ಭಾ. ೨೧೧) ವಿಶದೀಕರಿಸಿರುತ್ತಾರೆ. ಸುಷುಪ್ತಿಯಲ್ಲಿ ವಿಶೇಷವಿಜ್ಞಾನವು ಆಗದೆ ಇರುವದಕ್ಕೆ ಜೀವನು ಪರಮಾತ್ಮನಲ್ಲಿ ಒಂದಾಗಿರುವದೂ, ಅವಿದ್ಯೆಯಿಂದ ಬೇರೆಯಾಗಿ ಕರಣಗಳೂ ವಿಷಯಗಳೂ ಆಗ ವಿಂಗಡವಾಗಿದ್ದುಕೊಂಡಿಲ್ಲದೆ ಇರುವದೂ ಕಾರಣವೇ ಹೊರತು (ಭಾ. ಭಾ. ೨೧೪, ೨೨೬) ಆತ್ಮನ ಅರಿವು ನಾಶವಾಗಿರುವದಲ್ಲ (ಭಾ. ಭಾ. ೨೨೪) ಎಂದೂ ಸ್ಫುಟಗೊಳಿಸಿರುತ್ತಾರೆ.

ಹೀಗಿದ್ದರೂ ವ್ಯಾಖ್ಯಾನಪ್ರಸ್ಥಾನದಲ್ಲಿ ಆತ್ಮಾಶ್ರಯವೂ ಆತ್ಮವಿಷಯಕವೂ ಸದ ಭಾವರೂಪಾವಿದ್ಯೆಯೊಂದು ಸುಷುಪ್ತಿಯಲ್ಲಿರುತ್ತದೆಯೆಂದೂ ಕಾರ್ಯರೂಪವಾದ ಅಧ್ಯಾಸಾವಿದ್ಯೆಯು ಮಾತ್ರ ಅಲ್ಲಿಲ್ಲವೆಂದೂ ಈ ಮೂಲಾವಿದ್ಯೆಯ ಆವರಣವೇ ಅಲ್ಲಿ ವಿಶೇಷಾನುಭವಾಭಾವಕ್ಕೆ ಕಾರಣವೆಂದೂ ಶ್ರುತ್ಯನುಭವ ವಿರುದ್ಧವಾದ ವಾದೊಂದನ್ನು ಅಂಗೀಕರಿಸಿದೆ. ವೇದಾಂತಸಿದ್ಧಾಂತಕ್ಕೇ ಕುಠಾರ ಪ್ರಾಯವಾಗಿರುವ ಈ ಮೂಲಾವಿದ್ಯಾವಾದಕ್ಕೆ ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ ಆಧಾರವಿರುವದಿಲ್ಲ. ಆದ್ದರಿಂದ ಈ ಉಪನಿಷತ್ತಿನ ಭಾಷ್ಯಕ್ಕೆ ನಾವು ಬರೆದಿರುವ ಟಿಪ್ಪಣಿಗಳಲ್ಲಿ ಅಲ್ಲಲ್ಲಿ ಈ ವಾದವು ಭಾಷ್ಯವಿರುದ್ಧವೆಂಬದನ್ನು ಓದುಗರ ಲಕ್ಷ್ಯಕ್ಕೆ ತಂದಿರುತ್ತೇವೆ.

ಸುಷುಪ್ತಿಸಮಾಧಿವೋಕ್ಷಗಳು

ಸುಷುಪ್ತಿಯಲ್ಲಿ ಅವಿದ್ಯೆಯಿರುತ್ತದೆ ; ಆದರೆ ನಿರ್ವಿಕಲ್ಪಕಸಮಾಧಿಯಲ್ಲಿ ಅದು ಪೂರ್ಣವಾಗಿ ತೊಲಗುತ್ತದೆ. ಆದ್ದರಿಂದ ವೇದಾಂತಾಭ್ಯಾಸವನ್ನು ಮಾಡಿ

ಪರೋಕ್ಷಜ್ಞಾನವನ್ನು ಸಂಪಾದಿಸಿಕೊಂಡ ಬಳಿಕ ಪಾತಂಜಲಯೋಗವನ್ನು ಅಭ್ಯಾಸಮಾಡಿ ನಿರ್ವಿಕಲ್ಪಸಮಾಧಿಯಿಂದ ಅವಿದ್ಯೆಯನ್ನು ಕಳೆದುಕೊಂಡು ಅಪರೋಕ್ಷಾನುಭವವನ್ನು ಪಡೆದುಕೊಳ್ಳಬೇಕು - ಎಂಬುದು ಕೆಲವರು ಮೂಲಾವಿದ್ಯಾವಾದಿಗಳ ವಾದವು. ಅವಸ್ಥಾತ್ರಯವಿಚಾರವು ಬಂಧಮೋಕ್ಷಗಳಿಗೆ ದೃಷ್ಟಾಂತಮಾತ್ರವಾಗಿರುತ್ತದೆ - ಎಂದು ಭಾಷ್ಯಕಾರರು (ಭಾ. ಭಾ. ೨೪೨) ಹೇಳಿರುತ್ತಾರಾದ್ದರಿಂದ ಸುಷುಪ್ತಿಯಲ್ಲಿಯೂ ಅವಿದ್ಯೆಯಿದೆ ಎಂದಾಯಿತು ಎಂಬುದೂ ಅವರ ವಾದವು.

ಆದರೆ ನಿರ್ವಿಕಲ್ಪಸಮಾಧಿಯು ಅವಿದ್ಯೆಯ ನಾಶಕ್ಕೆ ಬೇಕೆಂದಾಗಲಿ ಪಾತಂಜಲಯೋಗದಲ್ಲಿ ಹೇಳಿರುವ ಚಿತ್ತವೃತ್ತಿನಿರೋಧವು ಅದಕ್ಕೆ ಸಾಧನವೆಂದಾಗಲಿ ಭಾಷ್ಯದಲ್ಲಿ ಎಲ್ಲಿಯೂ ಕಂಡುಬಂದಿರುವದಿಲ್ಲ. ಚಿತ್ತವೃತ್ತಿನಿರೋಧವನ್ನು ಮಾಡಿಯೇ ಪರಮಪುರುಷಾರ್ಥವನ್ನು ಪಡೆದುಕೊಳ್ಳಬೇಕಾಗಿದೆ ಎಂಬವರ ಮತವನ್ನು ಈ ಉಪನಿಷತ್ತಿನ ಭಾಷ್ಯದಲ್ಲಿ (೧-೧೩೯) ಕಂಠರವದಿಂದ ಖಂಡಿಸಿಯೂ ಇದೆ. ಅನುಭವಾನುಸಾರವಾಗಿ ನೋಡಿದರೆ ಸುಷುಪ್ತಿಸಮಾಧಿಗಳೆರಡರಲ್ಲಿಯೂ ದ್ವಿತೀಯವಸ್ತುವಿನ ಜ್ಞಾನವಿರುವದಿಲ್ಲ ; ಈ ಎರಡು ಅವಸ್ಥೆಗಳನ್ನೂ ಸಮಾನವಾಗಿಯೇ ಎಣಿಸಿರುವದೂ ಸೂತ್ರಭಾಷ್ಯಾದಿಗಳಲ್ಲಿ (ಸೂ. ಭಾ. ೨-೧-೯, ಭಾ. ಭಾ. ೪೨೫) ಕಂಡುಬರುತ್ತದೆ. ಆದ್ದರಿಂದ ಶ್ರುತಿಭಾಷ್ಯವಿರುದ್ಧವಾಗಿ ಸುಷುಪ್ತಿ ಸಮಾಧಿಗಳಿಗೆ ಅವಿದ್ಯೆಯ ವಿಷಯದಲ್ಲಿ ತಾರತಮ್ಯವನ್ನು ಕಲ್ಪಿಸುವದಕ್ಕೆ ಯಾವ ನ್ಯಾಯವೂ ಇರುವದಿಲ್ಲ.

ಇನ್ನು ಬಂಧಮೋಕ್ಷಗಳಿಗೆ ಅವಸ್ಥಾತ್ರಯವನ್ನು ದೃಷ್ಟಾಂತವಾಗಿ ಕೊಟ್ಟಿರುವದನ್ನು ವಿಚಾರಮಾಡೋಣ. ಈ ಸಂದರ್ಭದಲ್ಲಿ ಆಚಾರ್ಯರು ಬರೆದಿರುವ ಅವತರಣಿಕೆಯು (ಭಾ. ಭಾ. ೨೪೨) ಮನನೀಯವಾಗಿರುತ್ತದೆ. ಏಕೆಂದರೆ ಅಲ್ಲಿ ಅವಿದ್ಯೆ ಎಂದರೆ ಅತದ್ಧರ್ಮಾರೋಪಣರೂಪವು, ಆತ್ಮನದಲ್ಲದ ಧರ್ಮವನ್ನು ಅವನಲ್ಲಿ ಆರೋಪಿಸುವ ರೂಪದ್ದು - ಎಂದೂ ಅದು ಆತ್ಮಧರ್ಮವಲ್ಲ ಎಂದೂ ಬರೆದಿದೆ. ಅಧ್ಯಾರೋಪರೂಪಾವಿದ್ಯೆಗಿಂತ ಬೇರೆಯಾದ ಮೂಲಾವಿದ್ಯೆಯೊಂದಿದೆ, ಅದು ಆತ್ಮಾಶ್ರಯವಾಗಿದೆ ಎಂಬ ವಾದಕ್ಕೆ ಇದು ಅತ್ಯಂತ ವಿರುದ್ಧವಾಗಿರುತ್ತದೆ. ಆತ್ಮನಿಗೆ ಸರ್ವಾತ್ಮಭಾವವು ಸ್ವಭಾವವು ; ಅವಿದ್ಯಾಕಾಮಕರ್ಮಾದಿಸರ್ವಸಂಸಾರಧರ್ಮಾತೀತವಾದ ಇವನ ರೂಪವು ನೇರಾಗಿ

ಸುಷುಪ್ತಿಯಲ್ಲಿ ತಿಳಿಯಬರುತ್ತದೆಯೆಂದೂ ಆತ್ಮನು ಸ್ವಯಂಜ್ಯೋತಿಯು, ಪರಮಾನಂದನು, ಈ ಸುಷುಪ್ತಸುಖವೇ ಸುಖದ ಕೊನೆಯ ಹಂತವು - ಎಂದೂ ಅಲ್ಲಿ ಅನುವಾದಮಾಡಿಕೊಂಡಿದೆ. ಇದೂ ಮೂಲಾವಿದ್ಯಾವಾದಕ್ಕೆ ಹೊಂದುವ ದಿಲ್ಲ. ಏಕೆಂದರೆ ಸುಷುಪ್ತಿಯಲ್ಲಿ ಆತ್ಮನು ಜೀವಭಾವದಿಂದ ಇರುತ್ತಾನೆಂದೂ ಇಲ್ಲಿ ಸುಖಾಕಾರವಾದ ಅವಿದ್ಯಾವೃತ್ತಿಯಿರುವದೆಂದೂ ಆ ವಾದಿಗಳು ಹೇಳುತ್ತಿದ್ದಾರೆ. ಸುಷುಪ್ತಿಯಲ್ಲಿ ವಿಶೇಷಜ್ಞಾನವಿಲ್ಲದಿರುವದಕ್ಕೆ ಏಕತ್ವವೇ ಹೇತುವೆಂದೇ (ಭಾ. ಭಾ. ೨೪೧) ಆಚಾರ್ಯರು ಬರೆದಿರುತ್ತಾರೆಯೇ ಹೊರತು ಮೂಲಾವಿದ್ಯೆಯ ನಿಮಿತ್ತದಿಂದ ಜ್ಞಾನವಿಲ್ಲವೆಂದೇನೂ ಬರೆದಿಲ್ಲವೆಂಬುದನ್ನು ಆಗಲೇ ತಿಳಿಸಿದ್ದಾಗಿದೆ. ಅವಿದ್ಯೆಯಿಂದ ಬಂಧವೂ ವಿದ್ಯೆಯಿಂದ ಮೋಕ್ಷವೂ ಆಗುವವೆಂಬುದಕ್ಕೆ ಸುಷುಪ್ತಿಯಲ್ಲಿ ಅವಿದ್ಯಾಕಾಮಕರ್ಮಗಳಿಲ್ಲದಿರುವದನ್ನೇ ಹೇತುವಾಗಿ ಭಾಷ್ಯದಲ್ಲಿ ಬರೆದುಕೊಂಡಿದೆ (ಭಾ. ಭಾ. ೨೧೨, ೨೧೩). ವಿದ್ಯೆಯು ಇಲ್ಲದ್ದನ್ನುಂಟು ಮಾಡಲಾರದು, ಇದ್ದದ್ದನ್ನು ಕಳೆಯಲಾರದು - ಎಂದು (೧-೧೫೧, ೧-೩೧೫ ; ಭಾ. ಭಾ. ೧೩೭, ೨೨೫) ಮತ್ತೆಮತ್ತೆ ಅನುಭವಾನುಸಾರಿಯಾದ ಯುಕ್ತಿಯನ್ನು ಅನುಸರಿಸಿರುವ ಆಚಾರ್ಯರು, ಎಲ್ಲಾ ಅವಸ್ಥೆಗಳಲ್ಲಿಯೂ ಇರುವ ಅವಿದ್ಯೆಯು ವಿದ್ಯೆಯಿಂದ ನಿವೃತ್ತವಾಗುವದೆಂದು ಹೇಳಿಯಾರೆಂದು ಯಾರೂ ನಿರೀಕ್ಷಿಸುವದಕ್ಕೆ ಬರುವದಿಲ್ಲ. ಅವಿದ್ಯೆಯು ಆತ್ಮನ ಸ್ವಭಾವವೇ ಅಲ್ಲವೆಂಬುದನ್ನು ತಿಳಿಸುವದಕ್ಕೆ ಸುಷುಪ್ತಿಯನ್ನು ಉದಾಹರಿಸಿರುವ (ಭಾ. ೨೧೨, ೨೧೩) ಭಾಷ್ಯದಲ್ಲಿಯೇ ಸುಷುಪ್ತಿಯಲ್ಲಿ ಅವಿದ್ಯೆಯಿದೆ ಎಂಬ ವ್ಯಾಪತಾಭಿಪ್ರಾಯವನ್ನು ಕಲ್ಪಿಸುವದು ಹೇಗೆತಾನೆ ಸಮಂಜಸವಾದೀತು ?

ಇನ್ನು ದೃಷ್ಟಾಂತದಾರ್ಷ್ಟಾಂತಿಕಗಳ ವಿಚಾರಕ್ಕೆ ದೃಷ್ಟಿಯನ್ನು ಹೊರಳಿಸೋಣ. ಜೀವನು ಎಚ್ಚರಕನಸುಗಳನ್ನು ಮತ್ತೆಮತ್ತೆ ಹೊಂದುತ್ತಿರುವಂತೆಯೇ ದೇಹಾಂತರಕ್ಕೆ ಹೋಗುತ್ತಿರುವನು (ಭಾ. ಭಾ. ೨೪೮). ಕನಸಿನಲ್ಲಿ ಹೇಗೆ ದೇಹಾಂತರವನ್ನು ನಿರ್ಮಿಸಿಕೊಳ್ಳುವನೋ ಹಾಗೆಯೇ ಸಂಸಾರದಲ್ಲಿಯೂ ನಿರ್ಮಿಸಿಕೊಳ್ಳುತ್ತಿರುವನು (ಭಾ. ಭಾ. ೨೬೨) ; ಸುಷುಪ್ತಾವಸ್ಥೆಯಲ್ಲಿರುವಂತೆ ನಿರ್ವಿಶೇಷನೂ ಅದ್ವೈತನೂ ಅಲುಪ್ತಚಿದ್ರೂಪಜ್ಯೋತಿಃಸ್ವಭಾವನೂ ಆಗಿರುವೆನೆಂದು ಯಾವನು ಅರಿತುಕೊಳ್ಳುವನೋ ಅವನಿಗೆ ಕಾಮವಿಲ್ಲದ್ದರಿಂದ ವಾಗಾದಿ ಪ್ರಾಣಗಳು ಉತ್ಕ್ರಾಂತವಾಗುವದಿಲ್ಲ, ಇಲ್ಲಿಯೇ ಬ್ರಹ್ಮವಾಗಿದ್ದುಕೊಂಡು ಬ್ರಹ್ಮದಲ್ಲಿ ಸೇರಿಹೋಗುತ್ತಾನೆ (ಭಾ. ಭಾ. ೨೭೦) ಎಂದು ಆಚಾರ್ಯರು ದೃಷ್ಟಾಂತ

ದಾರ್ಷ್ಟಾಂತಿಕಗಳನ್ನು ಜೋಡಿಸಿ ತೀಸಿರುತ್ತಾರೆ. ಆತ್ಮನು ಜಾಗ್ರತ್ಸ್ವಪ್ನಗಳಲ್ಲಿ ಕಾರ್ಯಕರಣಗಳೊಡನೆ ಇದ್ದು ಅವಿದ್ಯಾಕಾಮಕರ್ಮಸಮೇತನಾಗಿಯೂ ಸುಷುಪ್ತಿಯಲ್ಲಿ ತದ್ರಹಿತನಾಗಿಯೂ ತೀಯಬರುವಂತೆಯೇ ಬಂಧದೆಶೆಯಲ್ಲಿ ಕಾರ್ಯಕರಣಾದಿಸಹಿತನಾಗಿಯೂ ಮೋಕ್ಷದಶೆಯಲ್ಲಿ ತದ್ರಹಿತನಾಗಿಯೂ ತೋರಿಬರುತ್ತಾನೆ. ಸರಿಯಾಗಿ ನೋಡಿದರೆ ಸುಷುಪ್ತಿಯಲ್ಲಿ ಕಾಣಬರುವ ನಿತ್ಯ ಶುದ್ಧಬುದ್ಧಮುಕ್ತಸ್ವರೂಪವೇ ಅವನ ಸ್ವಭಾವವಾಗಿದೆಯೆಂದು ಮನದಟ್ಟಾಗುವದು- ಎಂದು ತೀಸುವದೇ ಈ ಗ್ರಂಥಭಾಗದ ಉದ್ದೇಶವೆಂಬುದು ಯಾರಿಗಾದರೂ ಇಲ್ಲಿ ಸ್ಫುಟವಾಗಿ ತೋರುತ್ತದೆ. ಹೀಗಿರುವಲ್ಲಿ ಸುಷುಪ್ತಿಯಲ್ಲಿ ಅವಿದ್ಯೆಯಿದೆ ಎಂಬವರಿಗೆ ಇಲ್ಲಿ ಯಾವ ಬೆಂಬಲವು ಸಿಕ್ಕೀತು ?

ಇನ್ನೂ ಒಂದು ಮಾತು. ಅವಸ್ಥಾತ್ರಯರೂಪವಾದ ಅನಾತ್ಮವು ಆತ್ಮನನ್ನು ಬಿಟ್ಟು ಸ್ವತಂತ್ರವಾಗಿರುವದೆಂದು ತೀಸುವದೇನೂ ಶ್ರುತಿಯ ಉದ್ದೇಶವಲ್ಲ. ಅವಸ್ಥೆಗಳು ಆತ್ಮನಿಗಿಂತ ಬೇರೆಯಾಗಿರುವದೇ ಇಲ್ಲ ; ಆದ್ದರಿಂದ ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿರುತ್ತಾನೆ ಎಂದು ತೀಸುವದೇ ಅವಸ್ಥಾತ್ರಯಪರೀಕ್ಷೆಗೆ ಗುರಿಯು. ಅವಸ್ಥಾತ್ರಯವನ್ನು ಅಧ್ಯಾರೋಪದೃಷ್ಟಿಯಿಂದ ಮಾತ್ರವೇ ಇಟ್ಟು ಕೊಂಡು ಈ ವಿಚಾರವನ್ನು ಮಾಡಿರುತ್ತದೆ ಎಂದು ನಾವು ಆಗಲೆ ಹೇಳಿರುತ್ತೇವೆ. ಆದ್ದರಿಂದಲೇ ಆಚಾರ್ಯರು **'ಶಬ್ದಸಾಮಾನ್ಯವನ್ನು ಬಿಟ್ಟು ಅದರ ವಿಶೇಷಗಳನ್ನೇ ಹೇಗೆ ಬೇರ್ಪಡಿಸಿಕೊಂಡು ಅರಿಯುವದಕ್ಕಾಗುವದಿಲ್ಲವೋ ಹಾಗೆಯೇ ಪ್ರಜ್ಞಾನವನ್ನೂ ಬಿಟ್ಟು ಸ್ವಪ್ನಜಾಗರಿತಗಳಲ್ಲಿ ಯಾವದೊಂದು ವಿಶೇಷವನ್ನೂ ಗ್ರಹಿಸುವದಕ್ಕಾಗುವದಿಲ್ಲ'** (೧-೩೬೧) ಎಂದು ಬರೆದಿರುತ್ತಾರೆ. **ಜಾಗ್ರತ್ಸ್ವಪ್ನಗಳೆರಡೂ ಸ್ವಪ್ನಗಳೇ** ಎಂದು ಅವರು ಅಲ್ಲಲ್ಲಿ ಹೇಳಿರುತ್ತಾರೆ. 'ಆದ್ದರಿಂದ ಸ್ವಪ್ನದಲ್ಲಿ ಕಾರ್ಯಕರಣಾದಿಲೋಕಗಳು ಇಲ್ಲದಿದ್ದರೂ ಅವೇ ತಾನೆಂದು ಸುಳ್ಳುಸುಳ್ಳಾಗಿಯೇ ಅಧ್ಯಾರೋಪಿಸಿಕೊಂಡಿರುತ್ತಾನೆ ; ಎಚ್ಚರದಲ್ಲಿಯೂ ಹಾಗೆಯೇ ಎಂದು ತಿಳಿಯಬೇಕು' (೧-೨೯೫). 'ಎಚ್ಚರದಲ್ಲಿ ಏನೇನೋ ಕಾಣುತ್ತಾನಷ್ಟೆ ಅದು ಸ್ವಪ್ನವೆಂದೇ ಶ್ರುತಿಯ ಮತವಾಗಿದೆ; ಆದ್ದರಿಂದ ಎಲ್ಲಿಯಾವದನ್ನೂ ಕಾಣುವದಿಲ್ಲವೋ ಅದು ಸುಷುಪ್ತವು ಎಂದಿರುತ್ತದೆ. ಆದ್ದರಿಂದಲೇ ಶ್ರುತ್ಯಂತರದಲ್ಲಿ ಅವನಿಗೆ ಮೂರು ಅವಸ್ಥೆಗಳು, ಮೂರು ಸ್ವಪ್ನಗಳು- ಎಂದಿರುತ್ತದೆ' (ಭಾ. ಭಾ. ೨೦೪). ಈ ದೃಷ್ಟಿಯಿಂದ ನೋಡಿದಾಗ

ಅವಸ್ಥಾತ್ರಯವೆಂಬುದೇ ಅವಿದ್ಯೆಯಿಂದ ಕಾಣುತ್ತಿರುವ ಹುಸಿತೋರಿಕೆಯಾಗಿರುವದರಿಂದ ಸುಷುಪ್ತಿಯಲ್ಲಿ ಅವಿದ್ಯೆಯಿದೆ ಎಂಬ ವಾದವು ತೀರ ಹಾಸ್ಯಾಸ್ಪದವಾಗುವದು. ಅವಸ್ಥಾತ್ರಯಪ್ರಕ್ರಿಯೆ ಎಂಬುದು 'ನೇತಿ ನೇತಿ' ಎಂದು ತಿಳಿಸಿಕೊಟ್ಟಿರುವ ಆತ್ಮಸ್ವರೂಪವನ್ನು ಮನಗಾಣಿಸಿಕೊಡುವದಕ್ಕೆಂದು ಶ್ರುತಿಯು ಅಧ್ಯಾರೋಪದೃಷ್ಟಿಯಿಂದ ಕಲ್ಪಿಸಿರುವ ಉಪಾಯಮಾತ್ರವೆಂಬುದೂ ಸ್ಫುಟವಾಗುವದು.

ವಿದ್ವತ್ಸಂನ್ಯಾಸವಿಚಾರ

ಕ್ರಿಯಾಕಾರಕಫಲರಹಿತವಾದ ಅದ್ವೈತಾತ್ಮತತ್ತ್ವವನ್ನು ಕಂಡುಕೊಳ್ಳುವವನಿಗೆ ಕರ್ತೃತ್ವಬುದ್ಧಿಯು ಇರುವದೇ ಇಲ್ಲವಾದ್ದರಿಂದ ಯಾವ ಕರ್ತವ್ಯವೂ ಇಲ್ಲವೆಂಬುದು ತಾನೇ ಸಿದ್ಧವಾಗುತ್ತದೆ. ಆದ್ದರಿಂದಲೇ ಆಚಾರ್ಯರು ವೇದಾಂತವಾಕ್ಯದಿಂದ ಆತ್ಮಜ್ಞಾನವುಂಟಾದಮೇಲೆ ಕೃತಕೃತ್ಯತೆಗಾಗಿ ಮಾಡಬೇಕಾದ ಉಪಾಸನೆಯಿದೆಯೆಂದು, ಸಂಪಾದಿಸಿಕೊಳ್ಳತಕ್ಕ ಸಾಕ್ಷಾತ್ಕಾರವೊಂದಿದೆಯೆಂದು, ಅಥವಾ ಜ್ಞಾನಸ್ಮೃತಿಸಂತಾನದ ಅಭ್ಯಾಸವನ್ನು ಮಾಡುತ್ತಿರಬೇಕೆಂದು ಹೇಳುತ್ತಿದ್ದವರ ಮತಗಳನ್ನು ಖಂಡಿಸಿರುವದಲ್ಲದೆ ಪಾತಂಜಲಯೋಗದ ಅಭ್ಯಾಸದಿಂದ ಚಿತ್ತವೃತ್ತಿನಿರೋಧವನ್ನು ಮಾಡಿಕೊಂಡರೇ ಪರಮಪುರುಷಾರ್ಥವು ದೊರಕುವದೆಂಬವರ ಪಕ್ಷವನ್ನೂ ತಳ್ಳಿಹಾಕಿರುತ್ತಾರೆ (೧-೧೩೭ ರಿಂದ ೧೩೯). ಆತ್ಮಜ್ಞಾನಿಯು ಕೇವಲ ಮುನಿಯು, ಕರ್ಮಿಯಲ್ಲ (ಭಾ. ಭಾ. ೩೦೮), ಆತ್ಮನು ಕರ್ಮಫಲಸಾಧನಗಳಿಗೆ ಸಂಬದ್ಧನಲ್ಲವೆಂದೂ ಸರ್ವಸಂಸಾರಧರ್ಮವಿಲಕ್ಷಣನೆಂದೂ ಅರಿತುಕೊಂಡಿರುವವನಿಗೆ ಮಾಡತಕ್ಕ ಯಾವ ಕರ್ಮವೂ ಇರುವದಿಲ್ಲ (ಭಾ. ಭಾ. ೩೧೨), ಜ್ಞಾನದಿಂದ ಕರ್ಮಗಳಿಗೆ ಕಾರಣವಾಗಿರುವ ಭೇದಬುದ್ಧಿಯು ಉಪಮರ್ದವಾಗುತ್ತದೆ (ಭಾ. ಭಾ. ೩೩೮), ವಾಕ್ಯಜ್ಞಾನದಿಂದ ಅವಿದ್ಯಾಶೋಕಮೋಹಭಯಾದಿದೋಷಗಳು ತೊಲಗುವದು ಅನುಭವಸಿದ್ಧ (೧-೧೪೧, ೧೭೨) - ಎಂದೂ ಆತ್ಮಜ್ಞಾನದೊಡನೆ ಕರ್ಮವು ಇರುವಂತಿಲ್ಲವಾದ್ದರಿಂದ ಜ್ಞಾನಿಗಂತೂ ವಿಧಿವಚನದ ಅಪೇಕ್ಷೆಯಿಲ್ಲದೆಯೇ ಪಾರಿವ್ರಾಜ್ಯವು ಬಂದೊದಗುತ್ತದೆ (ಭಾ. ಭಾ. ೩೪೧), ಜ್ಞಾನವುಂಟಾದ ಬಳಿಕ ಪ್ರತಿಪತ್ತಿಕರ್ಮದಂತೆ ಅದು ತನಗೆತಾನೇ ಬಂದೊದಗುತ್ತದೆ (ಭಾ. ಭಾ. ೨೮೧) ಎಂದೂ ಆತ್ಮಜ್ಞಾನಿಗೆ **ಏಷಣಾತ್ರಯತ್ಯಾಗರೂಪವಾದ**

ಪರಮಹಂಸಪಾರಿವ್ರಾಜ್ಯವು ತಾನೇ ಬಂದೊದಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿರುತ್ತಾರೆ.

ಆದರೆ ಭಾಷ್ಯಕಾರರಿಂದೀಚಿನ ಅದ್ವೈತವೇದಾಂತಿಗಳಲ್ಲಿ ಜ್ಞಾನಿಗೂ ಕರ್ತವ್ಯವುಂಟೆಂಬ ಅಭಿಪ್ರಾಯವು ಹೇಗೋ ಬಂದು ನೆಲೆಸಿಬಿಟ್ಟಿರುತ್ತದೆ. ವಾಕ್ಯಜ್ಞಾನದ ದೃಢಪ್ರತಿಪತ್ತಿಗಾಗಿಯೋ ಅಥವಾ ತತ್ತ್ವಸಾಕ್ಷಾತ್ಕಾರಕ್ಕಾಗಿಯೋ ಮಾಡತಕ್ಕ ಸಾಧನವೊಂದು ಉಳಿದುಕೊಂಡಿರುತ್ತದೆ ಎಂದು ಹಲವರು ಅಭಿಪ್ರಾಯಪಡುತ್ತಿದ್ದಾರೆ. ವಾಕ್ಯದಿಂದ ಅಪರೋಕ್ಷಜ್ಞಾನವಾಗುವದೆಂದು ಒಪ್ಪುವವರುಕೂಡ ಲೋಕವ್ಯವಹಾರದಿಂದ ವಿಕ್ಷಿಪ್ತಚಿತ್ತನಾಗಿರುವ ಜ್ಞಾನಿಯು ವಿಧ್ಯುಕ್ತರೀತಿಯಿಂದ ವಿದ್ವತ್ಸಂನ್ಯಾಸವನ್ನು ಮಾಡಿ ಮನೋನಾಶವಾಸನಾಕ್ಷಯಗಳ ಮೂಲಕ ಮನೋವಿಶ್ರಾಂತಿಯನ್ನು ಪಡೆಯುವದು ಅವಶ್ಯವಾಗಬಹುದು. ಪಾತಂಜಲಯೋಗದ ಅಭ್ಯಾಸದಿಂದ ಈ ವಿಶ್ರಾಂತಿಯನ್ನು ಪಡೆದುಕೊಂಡವನೇ ಜೀವನ್ಮುಕ್ತನೆನಿಸುತ್ತಾನೆ ಎಂದು ಅವರು ಹೇಳುತ್ತಿದ್ದಾರೆ. ಆತ್ಮನಲ್ಲಿ ಅಧ್ಯಾರೋಪಿತವಾಗಿದ್ದ ಕರ್ತೃತ್ವವು ವಾಕ್ಯಜ್ಞಾನದಿಂದಲೇ ಹೋಗಿರುವದಾದರೂ ಅಂತಃಕರಣೋಪಾಧಿಯಲ್ಲಿ ಸ್ವತಃಸಿದ್ಧವಾಗಿರುವ ಕರ್ತೃತ್ವವು ಉಳಿದುಕೊಂಡಿರುತ್ತದೆಯಾದ್ದರಿಂದ ಶ್ರುತಿಯು ಜ್ಞಾನಿಗೆ ಸಂನ್ಯಾಸವನ್ನು ವಿಧಿಸಿದೆ ಎಂಬುದು ವ್ಯಾಪತೋಕ್ತಿಯಾಗುವದಿಲ್ಲ; ಜ್ಞಾನಿಯು ಮಾಡುವ ಈ ಸಂನ್ಯಾಸವೂ ಯೋಗವೂ ಚಿತ್ತವಿಶ್ರಾಂತಿಗೆ ಇರುವ ಪ್ರತಿಬಂಧವನ್ನು ಕಳೆಯುವದರಲ್ಲಿಯೇ ಪರ್ಯವಸಾನವಾಗುವದರಿಂದ ವಿಧಿಪದದಿಂದ ಮಾಡಿದ ಕ್ರಿಯೆಯ ಅಪೂರ್ವವು ದೇಹಾಂತರವನ್ನು ಕೊಡಬಹುದೆಂದು ಶಂಕಿಸುವದಕ್ಕೂ ಬರುವದಿಲ್ಲ. ಮನೋನಾಶಾದಿಗಳಿಲ್ಲದ ಜ್ಞಾನಿಗೆ ಕರ್ತೃತ್ವ ಭೋಕ್ತೃತ್ವ ಸುಖದುಃಖಾದಿರೂಪವಾದ ಚಿತ್ತಧರ್ಮದಿಂದ ಬಿಡುಗಡೆಯನ್ನು ಹೊಂದುವದೇ ಜೀವನ್ಮುಕ್ತಿಯು ದಕ್ಕಲಾರದು. ಜೀವನ್ಮುಕ್ತಿಯಿಂದ ಜ್ಞಾನರಕ್ಷಣೆಯೇ ಮುಂತಾದ ಫಲವುಂಟಾಗುವದು. ಹೀಗೆಂದು ಜೀವನ್ಮುಕ್ತಿವಿವೇಕವೇ ಮುಂತಾದ ಗ್ರಂಥಗಳಲ್ಲಿ ಬರೆದಿರುತ್ತದೆ.

ಜೀವನ್ಮುಕ್ತಿವಿವೇಕವು ವಿದ್ಯಾರಣ್ಯಕೃತವೆಂದು ಪ್ರಸಿದ್ಧವಾಗಿರುತ್ತದೆ. ಇದು ಎಷ್ಟರಮಟ್ಟಿಗೆ ನಿಜವೆಂಬುದನ್ನು ಐತಿಹಾಸಕರೇ ನಿರ್ಣಯಿಸಬೇಕಾಗಿದೆ. ಇದು ಹೇಗೇ ಇರಲಿ, ಅಪರೋಕ್ಷಜ್ಞಾನಿಯ ಸ್ವರೂಪಕ್ಕೆ ವ್ಯತಿರಿಕ್ತವಾಗಿ ಅಂತಃಕರಣವೊಂದು ಇದೆ ಎಂದೂ ಅದರಲ್ಲಿ ನಿಸರ್ಗಸಿದ್ಧವಾದ ಕರ್ತೃತ್ವಾದಿಗಳಿರುವವೆಂದೂ

ಹೇಳುವದು ಸಾಂಖ್ಯಸಿದ್ಧಾಂತವಾದೀತೇ ಹೊರತು ಆಚಾರ್ಯರಿಗೆ ಸಮ್ಮತವಾದ ವೇದಾಂತಸಿದ್ಧಾಂತವಾಗಲಾರದೆಂಬುದು ನಿರ್ವಿವಾದವು. ಶ್ರುತಿಯುಕ್ತಿಭಾಷ್ಯ ವಿರುದ್ಧವಾಗಿ ಜ್ಞಾನಕ್ಕೆ ಅನಿಶ್ಚಿತವಾದ ಫಲವನ್ನು ಹೇಳುವದೂ ಯಾಜ್ಞವಲ್ಕ್ಯರಂಥ ಅಪರೋಕ್ಷಜ್ಞಾನಿಗಳಿಗೂ ಯೋಗಾಭ್ಯಾಸಾದಿಕರ್ತವ್ಯವು ಉಳಿದಿರುವದೆಂದು ಕಲ್ಪಿಸುವದೂ ಸಾಹಸವೇ ಸರಿ. ಜೀವನ್ಮುಕ್ತಿ ವಿದೇಹಮುಕ್ತಿ - ಎಂಬ ವಿಭಾಗವನ್ನು ಮುಕ್ತಿಯಲ್ಲಿ ಈಗಿನವರು ಮಾಡಿಕೊಂಡಿರುವದಕ್ಕೆ ಭಾಷ್ಯದಲ್ಲಿಯೂ ಒಂದಿಷ್ಟು ಆಧಾರವಿದೆ (ಭಾ. ಭಾ. ೨೭೭, ೨೮೧) ಎಂದು ಒಪ್ಪಬಹುದು. ಆದರೆ ಜೀವನ್ಮುಕ್ತಿಯು ಗೌಣವೆಂದೂ ವಿದೇಹಮುಕ್ತಿಯೇ ಮುಖ್ಯವೆಂದೂ ಹೇಳುವದೂ ಜೀವನ್ಮುಕ್ತನಲ್ಲಿ ಅವಿದ್ಯೆಯ ಸಂಸ್ಕಾರರೂಪವಾದ, ಅಥವಾ ಆಕಾರವಿಶೇಷವಾದ, ಅಥವಾ ಅದರ ಸೂಕ್ಷ್ಮಾವಸ್ಥೆಯ ರೂಪದ ಅವಿದ್ಯಾಲೇಶವು ಇದ್ದುಕೊಂಡಿರುವದೆಂದೂ ದೇಹಪಾತವಾಗುವಕಾಲಕ್ಕೆ ಇರುವ ಚರಮವೃತ್ತಿಯಿಂದಲೇ ಅದು ಸಂಪೂರ್ಣವಾಗಿ ನಾಶವಾಗುವದೆಂದೂ ಕಲ್ಪಿಸಿರುವದೂ ಸರ್ವಥಾ ಭಾಷ್ಯ ಬಹಿರ್ಭೂತವಾಗಿದೆ ಎಂದು ಹೇಳದೆ ಗತ್ಯಂತರವಿಲ್ಲ. ಏಕೆಂದರೆ ಪ್ರಕೃತವಾದ ಬೃಹದಾರಣ್ಯಕೋಪನಿಷತ್ತಿನ ಭಾಷ್ಯದಲ್ಲಿಯೇ ಜ್ಞಾನಮಾತ್ರದಿಂದ ಸರ್ವಭಾವಾಪತ್ತಿ (೧-೧೬೩, ೧೬೭) ಯಾಗುವದೆಂದು ಬಾಯಿಬಿಟ್ಟು ಹೇಳಿದೆ. ವಿಪರೀತಜ್ಞಾನವನ್ನು ಕಳೆಯುವದಕ್ಕೇ ಜ್ಞಾನವು ಬೇಕಾಗಿದೆ (೧-೧೪೫), ಜ್ಞಾನಸಮಕಾಲದಲ್ಲಿಯೆ ಅಜ್ಞಾನವು ತೊಲಗುತ್ತದೆ (೧-೧೭೦), ಜ್ಞಾನದಿಂದ ಅವಿದ್ಯಾದಿಗಳು ಹೋಗುವದು ಪ್ರತ್ಯಕ್ಷವಾಗಿದೆ (೧-೧೪೦, ೧೪೧), ಪ್ರಾರಬ್ಧಕರ್ಮವು ಉಳಿದಿರುವಷ್ಟು ಮಟ್ಟಿಗೆ ವಿಪರೀತಪ್ರತ್ಯಯರೂಪವಾದ ಅವಿದ್ಯಾಲೇಶವು ಇರುತ್ತದೆಯೆಂದು ಒಪ್ಪಿದರೂ ಅದು ವಿಪರೀತ ಪ್ರತ್ಯಯಾಭಾಸವೇ ಹೊರತು ನಿಜವಾದ ವಿಪರೀತಪ್ರತ್ಯಯವಲ್ಲ (೧೭೩), ಜ್ಞಾನಿಗೆ ತಾನು ಕೃತಕೃತ್ಯನೆಂಬ ಅನುಭವವು ಇಲ್ಲಿಯೇ ಆಗುತ್ತದೆ (ಭಾ. ಭಾ. ೨೮೨) - ಎಂದು ಆಚಾರ್ಯರು ಮತ್ತೆಮತ್ತೆ ಸಾರಿರುತ್ತಾರೆ. ಹೀಗಿರುವದರಿಂದ ಭಾಷ್ಯಕಾರರು ತಳ್ಳಿಹಾಕಿರುವ ಚಿತ್ತವೃತ್ತಿನಿರೋಧರೂಪವಾದ ಪಾತಂಜಲ ಯೋಗವು ಜ್ಞಾನಿಗೂ ಜೀವನ್ಮುಕ್ತತ್ವಕ್ಕೆ ಬೇಕೆಂದೂ ಆ ಜೀವನ್ಮುಕ್ತಿಯಿಂದ ಜ್ಞಾನರಕ್ಷೆಯೇ ಮುಂತಾದ ಫಲವು ದೊರಕುವದೆಂದೂ ಕಲ್ಪಿಸಿರುವದು ಅತ್ಯಂತ ಹಾಸ್ಯಾಸ್ಪದವಾಗಿರುತ್ತದೆ. ಜ್ಞಾನಿಯು ಸತ್ತಮೇಲೆ ಭಾವಾಂತರವನ್ನು ಹೊಂದುತ್ತಾನೆಂಬುದು ಸರಿಯಲ್ಲವೆಂದೂ (ಭಾ. ಭಾ. ೨೭೧), ಈ ದೇಹವು ಹೋದಬಳಿಕ

ದೇಹಾಂತರಪ್ರಾಪ್ತಿಯಿಲ್ಲವೆಂದು ತಿಳಿಸುವವಕ್ಕೆ ಮಾತ್ರವೇ ಉಪಚಾರಕ್ಕಾಗಿ ಅವನು 'ಬ್ರಹ್ಮದಲ್ಲಿ ಸೇರಿಹೋಗುತ್ತಾನೆ' ಎಂದು ಶ್ರುತಿಯಲ್ಲಿ ಹೇಳಿದೆ ಎಂದೂ (ಭಾ ಭಾ. ೨೭೫) ಭಾಷ್ಯಕಾರರು ಕಂಠೋಕ್ತವಾಗಿ ಬರೆದಿರುವದಕ್ಕೆ ವಿದೇಹಮುಕ್ತಿಯೇ ಮುಖ್ಯಮುಕ್ತಿ ಎಂಬ ವಾದವು ತೀರವಿರುದ್ಧವಾಗಿದೆ ಎಂದು ಯಾರಾದರೂ ಒಪ್ಪಬೇಕಾಗುತ್ತದೆ.

ಈ ಎಲ್ಲಾ ಕಾರಣಗಳಿಂದ ವಿದ್ವತ್ಸಂನ್ಯಾಸವೆಂಬುದು ಒಂದಾನೊಂದು ವಿಹಿತಕರ್ಮವಲ್ಲವೆಂದೂ ಜ್ಞಾನದಿಂದ ಅರ್ಥಪ್ರಾಪ್ತವಾಗಿರುವ ಏಷಣಾತ್ಯಾಗವೆಂದೂ ನಾವು ಅಭಿಪ್ರಾಯಪಡುತ್ತೇವೆ.

ವಿವಿದಿಷಾಸಂನ್ಯಾಸವೂ ಜ್ಞಾನಸಾಧನಗಳೂ

'ಆತ್ಮಲೋಕವನ್ನು ಇಚ್ಛಿಸುವವರು ಪ್ರವ್ರಜನಮಾಡಬೇಕು' (೪-೪-೨೨) ಎಂದು ವಿವಿದಿಷುಗಳಿಗೂ ಪಾರಿವ್ರಾಜ್ಯವನ್ನು ಶ್ರುತಿಯಲ್ಲಿ ವಿಧಿಸಿರುತ್ತದೆ (ಭಾ. ಭಾ. ೩೪೧). ಯಾವಜ್ಜೀವವೂ ಅಗ್ನಿಹೋತ್ರವನ್ನು ಮಾಡಬೇಕು ಎಂದು ಮುಂತಾಗಿ ಯಜ್ಞದಾನತಪಸ್ಸುಗಳು ಕಾಮಿಗಳಾದ ಅಜ್ಞಾನಿಗಳಿಗೇ ವಿಹಿತವಾಗಿರುತ್ತವೆ (ಭಾ. ಭಾ. ೩೩೯) ಯಾದರೂ ಆತ್ಮಸಂಸ್ಕಾರದ್ವಾರದಿಂದ ಅವು ಆತ್ಮಜ್ಞಾನಕ್ಕೂ ಸಾಧನವಾಗಿರುತ್ತವೆ (ಭಾ. ಭಾ. ೩೪೨). ಹಿಂಸಾದಿ ಬಹುಲವಾಗಿರುವ ಆ ಕರ್ಮಗಳಿಗಿಂತಲೂ ಪಾರಿವ್ರಾಜ್ಯವನ್ನು ಸ್ವೀಕರಿಸಿ ಯಮಪ್ರಧಾನವಾಗಿರುವ ಅಮಾನಿತ್ವಾದಿಗಳನ್ನೂ ಧ್ಯಾನಜ್ಞಾನವೈರಾಗ್ಯಗಳನ್ನೂ ಅಭ್ಯಾಸಮಾಡುವದೇ ಮುಮುಕ್ಷುಗಳಿಗೆ ಜ್ಞಾನಕ್ಕೆ ಅಂತರಂಗಸಾಧನವು (ಭಾ ಭಾ. ೩೪೩) ಎಂದು ತೀರ್ಮಾನಿಸಿ ವಿರಕ್ತನಾದ ಮುಮುಕ್ಷುವಿಗೆ ಜ್ಞಾನವುಂಟಾಗದಿದ್ದರೂ ಬ್ರಹ್ಮಚರ್ಯದಿಂದಲೇ ಪಾರಿವ್ರಾಜ್ಯವನ್ನು ಪಡೆಯುವದೇ ಶ್ರೇಯಸ್ಕರವು (ಭಾ. ಭಾ. ೩೪೩) ಎಂದು ಭಾಷ್ಯಕಾರರು ಹೇಳಿರುತ್ತಾರೆ ಕುಂಟರು, ಕುರುಡರು - ಮುಂತಾದ ಅನಧಿಕಾರಿಗಳಿಗೆ ಹೇಳಿರುವ ಪಾರಿವ್ರಾಜ್ಯವೂ ಬೇರೆಯಾಗಿ ಇದೆಯಾದ್ದರಿಂದ ಮುಮುಕ್ಷುಗಳಿಗೆ ಪರಮಹಂಸಪಾರಿವ್ರಾಜ್ಯವು ವಿಹಿತವೆಂಬ ಪಕ್ಷಕ್ಕೆ ಅದರಿಂದ ಅಡ್ಡಿಯಾಗುವದಿಲ್ಲ ; ಗಾರ್ಹಸ್ಥ್ಯವೊಂದೇ ಮುಖ್ಯವಾದ ಆಶ್ರಮವು ಎಂಬಿದು ಕ್ಷತ್ರಿಯವೈಶ್ಯರಿಗಾದ್ದರಿಂದ ಮಿಕ್ಕ ಆಶ್ರಮಗಳು ಅಧಿಕಾರಿಗಳಿಗೂ ಉಂಟು (ಭಾ. ಭಾ. ೩೪೪) ಎಂದು ಆಚಾರ್ಯರು ವ್ಯವಸ್ಥೆಯನ್ನು ಮಾಡಿರುತ್ತಾರೆ.

ವಿದ್ವತ್ಸನ್ಯಾಸದಂತೆ ವಿವಿದಿಷಾಸಂನ್ಯಾಸದ ವಿಷಯಕ್ಕೂ ಈಗ್ಗೆ ಕೆಲವು ವಿಚಿತ್ರವಾದ ಅಭಿಪ್ರಾಯಗಳು ಈಚಿನ ವೇದಾಂತಿಗಳ ಅಂತಃಕರಣದಲ್ಲಿ ತೂರಿಕೊಂಡಿರುತ್ತವೆ. ಶ್ರವಣಾದ್ಯನುಷ್ಠಾನಕ್ಕಾಗಿ ವಿವಿದಿಷಾಸಂನ್ಯಾಸವನ್ನು ಗ್ರಹಿಸಿದವರು ಶಿಖಾಯಜ್ಞೋಪವೀತಾದಿಗಳನ್ನು ತ್ಯಜಿಸಿದರೂ ದಂಡಕಮಂಡಲಾದಿಪರಿಗ್ರಹ ಭಿಕ್ಷಾಶನ ಋತುಕ್ಷೌರ ತ್ರಿಕಾಲಸ್ನಾನ ಭಸ್ಮತ್ರಿಪುಂಡ್ರ ಚಾತುರ್ಮಾಸ್ಯಾನುಷ್ಠಾನಾದಿಗಳನ್ನು ಕಡ್ಡಾಯವಾಗಿ ಮಾಡಬೇಕು ; ಏಕೆಂದರೆ ಇವು ಜ್ಞಾನಕ್ಕೆ ಉಪಕಾರಕವಾಗಿರುತ್ತವೆ. ಈ ಸಹಕಾರಿಸಾಧನಗಳನ್ನು ಬಿಟ್ಟವರು ಪತಿತರು. ಪಾತಂಜಲಯೋಗವನ್ನು ಅಭ್ಯಾಸಮಾಡುವದಕ್ಕೆ ವಿದ್ವತ್ಸಂನ್ಯಾಸವನ್ನು ಸ್ವೀಕರಿಸುವವರಿಗೆ ಮಾತ್ರ ಅನುಜ್ಞಾತವಾಗಿರುವ ದಂಡತ್ಯಾಗಾದಿಗಳನ್ನು ಇವರು ಅನುಷ್ಠಿಸಬಾರದು - ಎಂದು ಈ ವಾದಿಗಳು ಹೇಳುತ್ತಿದ್ದಾರೆ.

ಈ ವಿಲಕ್ಷಣಾಭಿಪ್ರಾಯಕ್ಕೆ ಯಾವ ಆಧಾರವಿದೆಯೋ ನಮಗೆ ತಿಳಿಯದು. ಏಕೆಂದರೆ ಜ್ಞಾನಿಗಳಿಗೆ ಸ್ವತಃ ಪ್ರಾಪ್ತವಾಗುವ ಏಷಣಾತ್ರಯತ್ಯಾಗರೂಪವಾದ ಪಾರಿವ್ರಾಜ್ಯವನ್ನೇ ವಿವಿದಿಷಾಸಂನ್ಯಾಸಿಗಳಿಗೂ ಶ್ರುತಿಯಲ್ಲಿ ವಿಧಿಸಿರುತ್ತದೆ (೩-೫-೧, ೪-೪-೨೨) ; ಲೋಕತ್ರಯಕ್ಕೆ ಸಾಧನವಾಗಿರುವ ಗೃಹಸ್ಥಾಶ್ರಮಿಗೆ ವಿಧಿಸಿರುವ ರೂಪದ ಕರ್ಮಗಳು ಆತ್ಮಪ್ರಾಪ್ತಿಗೆ ಸಾಧನವಾಗಲಾರವು ; ಏಕೆಂದರೆ ಒಂದಕ್ಕೆ ಸಾಧನವಾಗಿರುವದನ್ನು ಮತ್ತೊಂದು ಫಲಕ್ಕೆ ಉಪಯೋಗಿಸಿದರೆ ಪ್ರತಿಕೂಲವೇ ಆಗುತ್ತದೆ (೧-೩೫೧) - ಎಂದು ಆಚಾರ್ಯರು ವಿವಿದಿಷಾಸಂನ್ಯಾಸವನ್ನು ಮಾಡಿದವರಿಗೆ ಗೃಹಸ್ಥರಿಗೆ ವಿಹಿತವಾಗಿರುವಂಥ ಕರ್ಮಗಳು ಬೇಕಿಲ್ಲವೆಂದು ಸೂಚಿಸಿಯೂ ಇರುತ್ತಾರೆ. ಹೀಗಿರುವಲ್ಲಿ ನಿಯತವಾಗಿ ದಂಡಧಾರಣ, ದಂಡದಲ್ಲಿ ನಾಗಮುದ್ರಾದಿಸ್ಥಾಪನ, ದಂಡಸ್ನಾನ, ದಂಡತರ್ಪಣ, ಮಹಾವಾಕ್ಯಜಪ- ಮುಂತಾದ ಯಾವ ಶ್ರುತಿಸ್ಮೃತಿಗಳಲ್ಲಿಯೂ ಕಾಣಬರದ ಕರ್ಮಗಳ ಆಚರಣೆಯನ್ನು ಈ ವಾದಿಗಳು ಏತಕ್ಕೆ ಪರಮಹಂಸರಮೇಲೂ ಒತ್ತಾಯದಿಂದ ಹೇರುತ್ತಿದ್ದಾರೋ ತಿಳಿಯದು. ಕೃತಾರ್ಥರಾದ ಜ್ಞಾನಿಗಳಿಗೆ ಲಕ್ಷಣವೆಂದು ಹೇಳಿರುವದನ್ನೇ ಮುಮುಕ್ಷುಗಳಾದ ಜಿಜ್ಞಾಸುಗಳಿಗೆ ಸಾಧನವೆಂದು ಅಧ್ಯಾತ್ಮಶಾಸ್ತ್ರದಲ್ಲಿ ಉಪದೇಶಮಾಡಿರುತ್ತದೆ ಎಂದು ಗೀತಾಭಾಷ್ಯದಲ್ಲಿ (ಗೀ.೨-೫೫ ಭಾ. ಭಾ. ೧೦೨) ಆಚಾರ್ಯರು ಹೇಳಿರುತ್ತಾರೆ. ವಿದ್ವತ್ಸಂನ್ಯಾಸಿಗಳಿಗೆ ಇಲ್ಲದ ಆಶ್ರಮಚಿಹ್ನೆಗಳು ವಿವಿದಿಷುಗಳಿಗೆ ನಿರ್ಬಂಧದಿಂದ ಇರಬೇಕೆನ್ನುವದಕ್ಕೆ ಕಾರಣವಾದರೂ ಏನಿದ್ದೀತು ? ಪರಮಹಂಸಪಾರಿವ್ರಾಜ್ಯಕ್ಕೆ ಯಾವ ಲಿಂಗ

(ಆಶ್ರಮಚಿಹ್ನ)ವೂ ಇಲ್ಲವೆಂದೂ ಯಜ್ಞೋಪವೀತಾದಿಸಾಧನಗಳನ್ನೂ ಆಶ್ರಮಚಿಹ್ನವನ್ನೂ ವಿಧಿಸುವದು ಬ್ರಹ್ಮಲೋಕಪ್ರಾಪ್ತಿಗೆ ಸಾಧನವಾಗಿರುವ, ಸ್ಮೃತಿವಿಹಿತವಾದ, ಆಶ್ರಮರೂಪವಾದ, ಅವಿದ್ವತ್ಸಾರಿವ್ರಾಜ್ಯಕ್ಕೆ ಸಂಬಂಧಪಟ್ಟದ್ದೆಂದೂ (ಭಾ. ಭಾ. ೫೬, ೫೮, ೬೦, ೬೧) ಈ ಉಪನಿಷತ್ತಿನ ಭಾಷ್ಯದಲ್ಲಿದೆ. ವಿವಿದಿಷಾಸಂನ್ಯಾಸಕ್ಕೂ ಆಶ್ರಮಚಿಹ್ನೆಗಳು ಅತ್ಯಪಶ್ಯವಾಗಿದ್ದರೆ ಭಾಷ್ಯಕಾರರು ಅವನ್ನು ಅಜ್ಞರಾದ ಸ್ಮಾರ್ತಸಂನ್ಯಾಸಿಗಳ ವಿಷಯವೆಂದು (ಭಾ. ಭಾ. ೫೬,೬೧) ಹೇಳುತ್ತಿರಲಿಲ್ಲ.

ಇದಲ್ಲದೆ ಈ ಚಿಹ್ನಗಳು ಜ್ಞಾನಕ್ಕೆ ಸಹಕಾರಿಗಳಾಗಿದ್ದರೆ ಯಾವದಾದರೂ ಶ್ರುತಿಯಲ್ಲಿ ಅಥವಾ ಸ್ಮೃತಿಯಲ್ಲಿ ಹಾಗೆಂದು ಹೇಳಬೇಕಾಗಿತ್ತು ; ಭಾಷ್ಯಕಾರರೂ ಅವಶ್ಯವಾಗಿ ಹಾಗೆಂದು ತಿಳಿಸಬೇಕಾಗಿತ್ತು. ಆದರೆ ಹಾಗೆಂದು ಎಲ್ಲಿಯೂ ಹೇಳಿರುವದಿಲ್ಲ. ಒಂದು ವೇಳೆ ಹಾಗೆಂದು ಅವರು ಹೇಳಿದ್ದರೆ, 'ಪಾರಿವ್ರಾಜ್ಯವನ್ನು ಶ್ರುತಿಯಲ್ಲಿ ವಿಧಿಸಿರುವದರಿಂದ ಆತ್ಮಲೋಕಕ್ಕೆ ಕರ್ಮಸಂಬಂಧವಿಲ್ಲ' (೧-೧೮೬), 'ಕರ್ಮದಿಂದ ಅಮೃತತ್ವವು ಸಿಕ್ಕುವದಿಲ್ಲವೆಂದಿರುವದರಿಂದ ಪಾರಿವ್ರಾಜ್ಯವು ಜ್ಞಾನಾಂಗವೆಂದು ವಿಧಿಸುವದಕ್ಕೇ ಮೈತ್ರೇಯೀಬ್ರಾಹ್ಮಣವು ಬಂದಿದೆ' (೧-೫೫೩) ಎಂದು ಅವರು ಬರೆದಿರುವದು ಹೊಂದುಗಡೆಯಾಗುತ್ತಿರಲಿಲ್ಲ ; ಎಲ್ಲಾ ಆಶ್ರಮದವರಿಗೂ ಜ್ಞಾನಕರ್ಮಸಮುಚ್ಚಯಾನುಷ್ಠಾನದಿಂದಲೇ ಮೋಕ್ಷವಾಗುವದು ಎಂದು ವಾದಿಸುವ ಸಮುಚ್ಚಯವಾದಿಗಳ ಪೂರ್ವಪಕ್ಷಕ್ಕೆ ಯಾವ ಸದುತ್ತರವೂ ಆಚಾರ್ಯರ ಸಿದ್ಧಾಂತದಲ್ಲಿ ಉಳಿಯುತ್ತಿರಲಿಲ್ಲ. ಹೀಗಿರುವದರಿಂದಲೇ 'ಪರಮಾತ್ಮನ ಯಾಥಾತ್ಮ್ಯದ ವಿಜ್ಞಾನವುಳ್ಳವನಿಗೆ ಶಮೋಪಾಯವೊಂದು ಹೊರತಾಗಿ ಮತ್ತೆ ಯಾವ ಕರ್ಮವೂ ವಿಹಿತವಾಗಿರುವದು ಕಂಡುಬರುವದಿಲ್ಲ' (೧-೫೬) ಎಂದು ಈ ಉಪನಿಷದ್ಭಾಷ್ಯದಲ್ಲಿ ಹೇಳಿರುವದೂ 'ಪರಿವ್ರಾಜಕನಿಗೆ ಶಮದಮಾದಿಗಳ ಸಹಿತವಾಗಿ ಬ್ರಹ್ಮನಿಷ್ಠನಾಗಿರುವದೇ ಆಶ್ರಮವಿಹಿತಕರ್ಮವು, ಅದನ್ನು ಮೀರಿದರೆ ಮಾತ್ರ ಅವನಿಗೆ ಪ್ರತ್ಯವಾಯವು' (ಸೂ. ಭಾ. ೩-೪-೨೦, ಭಾ. ಭಾ. ೪೬೦) ಎಂದು ಸೂತ್ರಭಾಷ್ಯದಲ್ಲಿ ಬರೆದಿರುವದೂ 'ಧ್ಯಾನಯೋಗಾರೂಢನಾಗಿರುವ ಅವನಿಗೇ ಶಮವು ಎಂದರೆ ಶಾಂತಿಯು, ಸರ್ವಕರ್ಮಗಳನ್ನೂ ಬಿಡುವದು, ಕಾರಣವು, ಎಂದರೆ ಸಾಧನವು (ಗೀ. ಭಾ. ೬-೩, ಭಾ ಭಾ. ೩೭೮) - ಎಂದು ಗೀತಾಭಾಷ್ಯದಲ್ಲಿ ಬರೆದಿರುವದೂ ಸಮಂಜಸವಾಗುತದೆ.

ವಿದ್ವತ್ಸಂನ್ಯಾಸಿಗಳಿಗೆ ಪಾತಂಜಲಯೋಗವು ವಿಹಿತವೆಂಬುದು ಭಾಷ್ಯ ವಿರುದ್ಧವೆಂಬುದನ್ನು ಆಗಲೆ ತಿಳಿಸಿದ್ದಾಗಿದೆ. ಜ್ಞಾನಕ್ಕೆ ಅಂತರಂಗವಾಗಿರುವ ಯೋಗವೆಂದು ಶ್ರುತಿಯಲ್ಲಿಯೂ ಗೀತೆಯಲ್ಲಿಯೂ ವಿಹಿತವಾಗಿರುವದು ಧ್ಯಾನ ಯೋಗವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ನಿದಿಧ್ಯಾಸನವೇ ಆಗಿದೆ. ಅದು ವಿವಿದಿಷುಗಳಿಗೇ ವಿಹಿತವಾಗಿದೆ ಎಂಬುದು ನಿಃಸಂಶಯವಾಗಿದೆ. ಹೀಗಿದ್ದರೂ ಯೋಗಿಗಳಾದ ಪರಮಹಂಸರಿಗೆ ದಂಡಗ್ರಹಣಾದಿಗಳು ವಿಕಲ್ಪಿತವೆಂದು ಹೇಳುವ ಕೆಲವು ಬಿಡಿಉಪನಿಷದ್ವಚನಗಳ ಬಲದಿಂದ ಈಗಿನವರು ಯೋಗಿಗಳೆಂದರೆ ಪಾತಂಜಲಯೋಗವನ್ನು ಅಭ್ಯಾಸಮಾಡುವ ವಿದ್ವತ್ಸಂನ್ಯಾಸಿಗಳು ಎಂದೇ ಹಠದಿಂದ ಅರ್ಥಮಾಡುತ್ತಿರುತ್ತಾರೆ. ಇದಕ್ಕೆ ಕಾರಣವನ್ನು ಅವರೇ ಹೇಳಬೇಕು.

ಧ್ಯಾನಯೋಗದಲ್ಲಿ ನಿರತನಾದ ಮುಮುಕ್ಷುವಿಗೆ ಧ್ಯಾನಕ್ಕಿಂತ ಬೇರೆಯಾದ ಮಂತ್ರಜಪಾದಿಕರ್ತವ್ಯವುಕೂಡ ಇಲ್ಲವೆಂದು ಗೀತಾಭಾಷ್ಯದಲ್ಲಿ (ಗೀ. ಭಾ. ೧೮-೫೩, ಭಾ. ಭಾ. ೫೬೧) ಹೇಳಿರುವ ಆಚಾರ್ಯರು ದಂಡಸ್ನಾನಾದಿಗಳನ್ನೂ ಮಹಾವಾಕ್ಯಜಪಾದಿಗಳನ್ನೂ ಜ್ಞಾನೋಪಕಾರಕವೆಂದು ಒಪ್ಪಿರುತ್ತಾರೆಂಬುದು ಹಾಸ್ಯಾಸ್ಪದವಾದ ಮಾತೆಂದು ನಮಗೆ ತೋರುತ್ತದೆ. ಜ್ಞಾನಕ್ಕೆ ಅಂಗವೆಂದೂ (೧-೫೫೧, ೩೫೩), ಜ್ಞಾನಪರಿಪಾಕಕ್ಕೆ ಹೇತುವೆಂದೂ (ಭಾ. ಭಾ. ೨೮೧) ವಿಧಿಸಿರುವ ಈ ವಿವಿದಿಷಾಸಂನ್ಯಾಸಕ್ಕೆ ಶ್ರುತಿಸ್ಮೃತಿಗಳಲ್ಲಿ ವಿಧಿಸಿರುವ ಶಾಂತಿದಾಂತ್ಯಾದಿಗಳು, ಅಮಾನಿತ್ವಾದಿಗಳು, ಪಾಂಡಿತ್ಯಬಾಲ್ಯಾದಿಗಳು (ಭಾ. ಭಾ. ೬೨) - ಇಂಥ ಯಮಪ್ರಧಾನವಾದ (ಭಾ. ಭಾ. ೩೪೩) ಸಾಧನಗಳಲ್ಲದೆ ಚಿತ್ತ ವಿಕ್ಷೇಪಕರವಾದ ಯಾವ ನಿಯಮಗಳಾದರೂ ವಿಹಿತವಾಗಿದ್ದಾವೆ ? ಇದನ್ನು ವೇದಾಂತದಲ್ಲಿಯೂ ಜ್ಞಾನಸಾಧನಗಳಲ್ಲಿಯೂ ಪೂಜ್ಯಬುದ್ಧಿಯಿರುವ ವಿದ್ವಾಂಸರು ಆಲೋಚಿಸಿ ನಮ್ಮ ಹೇಳಿಕೆಯ ಯುಕ್ತಾಯುಕ್ತತೆಯನ್ನು ಪರೀಕ್ಷಿಸಬೇಕೆಂದು ಪ್ರಾರ್ಥಿಸುತ್ತೇವೆ.

ಭರ್ತೃಪ್ರಪಂಚರ ಅಭಿಪ್ರಾಯಗಳ ಪರಾಮರ್ಶ

ಈ ಭಾಷ್ಯದಲ್ಲಿ ಪೂರ್ವಪಕ್ಷವಾಗಿ ಆಚಾರ್ಯರು ಪರಾಮರ್ಶಿಸಿರುವ ಮತಗಳಲ್ಲಿ ಭರ್ತೃಪ್ರಪಂಚರ ಮತವು ಮುಖ್ಯವೆಂದು ಈ ಉಪನಿಷದ್ಭಾಷ್ಯದ ಒಂದನೆಯ ಸಂಪುಟದಲ್ಲಿ ಹೇಳಿಬಿಟ್ಟಿರುತ್ತೇವಷ್ಟೆ. ಈ ಭರ್ತೃಪ್ರಪಂಚರ ಅಭಿಪ್ರಾಯಗಳನ್ನು ಭಾಷ್ಯಕಾರರು ಮತ್ತೆಮತ್ತೆ ಖಂಡನೆಗೆ ತೆಗೆದುಕೊಂಡಿರುವದು

ಕಾಣಬರುತ್ತದೆ. ಭಾಷ್ಯದಲ್ಲಿ ಭರ್ತೃಪ್ರಪಂಚರೆಂಬ ಹೆಸರು ಎಲ್ಲಿಯೂ ಇರುವದಿಲ್ಲವಾದರೂ ವಾರ್ತಿಕಕಾರರೂ ಟೀಕಾಕಾರರೂ ಅಲ್ಲಲ್ಲಿ ಅವರ ಹೆಸರನ್ನು ಉಲ್ಲೇಖಿಸಿ ಅವರ ಭಾಷ್ಯವಾಕ್ಯಗಳನ್ನೂ ಉದಾಹರಿಸಿಕೊಂಡಿರುತ್ತಾರೆ. ಇಷ್ಟೊಂದು ಸಲ ಪರಾಮರ್ಶಿಸಿರುವ ಈ ಭಾಷ್ಯದ ಪ್ರಭಾವವು ಆಗ್ಗೆ ಹೆಚ್ಚಿನ ಪ್ರಮಾಣದಲ್ಲಿತ್ತೆಂದು ನಾವು ನಂಬಬಹುದಾಗಿದೆ. ವಾರ್ತಿಕಕಾರರಂತೂ ಭಾಷ್ಯದಲ್ಲಿ ನಿರ್ದೇಶಿಸದೆ ಇರುವ ಅನೇಕ ಅಭಿಪ್ರಾಯಗಳನ್ನು 'ಶ್ರೀಮದ್ಭರ್ತೃಪ್ರಪಂಚರ' ಮತವೆಂದು ಪರಾಮರ್ಶಿಸಿ ಅವುಗಳಲ್ಲಿ ಕೆಲವನ್ನು ಅಂಗೀಕರಿಸಿಯೂ ಇರುತ್ತಾರೆ ; ಹಲವನ್ನು ಖಂಡಿಸಿರುತ್ತಾರೆ. ಹೀಗೆ ವಾರ್ತಿಕಕಾರರ ಕಾಲದಲ್ಲಿಯೇ ಅಲ್ಲಗೆ ಟೀಕಾಕಾರರಾದ ಆನಂದಗಿರಿಗಳ ಕಾಲದಲ್ಲಿಯೂ ಭರ್ತೃಪ್ರಪಂಚಪ್ರವೃತ್ತಿಯು ಉಪಲಬ್ಧವಾಗಿತ್ತೆಂದು ಗೊತ್ತಾಗಿರುವದರಿಂದ ಈಗಲೂ ಪ್ರಾಚೀನಪುಸ್ತಕಸಂಗ್ರಹಾಲಯಗಳಲ್ಲಿ ಶೋಧಿಸಿದರೆ ಆ ಗ್ರಂಥವು ಸಿಕ್ಕುವ ಸಂಭಾವ್ಯತೆಯನ್ನು ಮಾಡಬಹುದಾಗಿದೆ. ಅದು ಪೂರ್ಣವಾಗಿ ದೊರೆಯದಿರುವ ಈ ಕಾಲಕ್ಕೆ ಉಪಲಬ್ಧವಾಗಿರುವಷ್ಟು ವಾಕ್ಯಗಳಿಂದಾದರೂ ಭರ್ತೃಪ್ರಪಂಚರ ಪ್ರಕ್ರಿಯೆಯ ರೂಪರೇಖೆಯನ್ನು ನಿರ್ಧರಿಸುವದು ಆಚಾರ್ಯರ ಹಿಂದಿನ ವೇದಾಂತವಿಚಾರದ ಇತಿಹಾಸರಚನೆಗೆ ಹೆಚ್ಚಿನ ಸಹಾಯವನ್ನು ಮಾಡುವದರಲ್ಲಿ ಸಂಶಯವಿಲ್ಲ. ಅಂಥ ರೂಪರೇಖೆಯೊಂದನ್ನು ಈ ಭಾಷ್ಯ ಸಂಪುಟಕ್ಕೆ ಪರಿಶಿಷ್ಟವಾಗಿ ಜೋಡಿಸಬೇಕೆಂಬ ಆಶೆಯು ನಮಗೆ ಬಲವಾಗಿದ್ದಿತು. ಆದರೆ ಸ್ಥಲಸಂಕೋಚದಿಂದಲೂ ಕಾಲಸಂಕೋಚದಿಂದಲೂ ಅದು ಆಗಲಿಲ್ಲ.[1] ಆದ್ದರಿಂದ ಸದ್ಯಕ್ಕೆ ಭಾಷ್ಯದಲ್ಲಿ ಪರಾಮೃಷ್ಟವಾಗಿರುವ ಮುಖ್ಯಪ್ರಕ್ರಿಯಾಂಶಗಳನ್ನು ಮಾತ್ರ ಇಲ್ಲಿ ಉದಾಹರಿಸಿ ಆಚಾರ್ಯರು ತಮ್ಮ ಸಿದ್ಧಾಂತದ ಯಾವ ಭಾಗವನ್ನು

---

೧. ವಾರ್ತಿಕಟೀಕಾಕಾರರೂ ಭಾಷ್ಯಟೀಕಾಕಾರರೂ ಒಬ್ಬರೊ, ಬೇರೆಬೇರೆ ಇಬ್ಬರೊ?- ಎಂಬ ಪ್ರಶ್ನೆಯೊಂದು ಉತ್ತರವನ್ನು ಕಾದುಕೊಂಡಿತ್ತು. ಅವರು ಇಬ್ಬರಾದರೆ ಭರ್ತೃಪ್ರಪಂಚರ ವಾಕ್ಯಗಳನ್ನು ಇಬ್ಬರು ಸಂಗ್ರಹಿಸಿದ್ದರೆಂದು ಸಿದ್ಧವಾಗುತ್ತದೆ. ಆದರೆ ಈ ಪ್ರಶ್ನೆಯನ್ನು ಬಿಚ್ಚುವದೂ ನಮಗೆ ಇಲ್ಲಿ ಆಗಿರುವದಿಲ್ಲ. ವಾರ್ತಿಕಕಾರರ ಮತಭೇದಗಳನ್ನು ಅಲ್ಲಲ್ಲಿ ಟಿಪ್ಪಣಿಯಲ್ಲಿ ಸೂಚಿಸಿರುತ್ತೇವಾದರೂ ಭಾಷ್ಯಕಾರರ ಮತವನ್ನೂ ವಾರ್ತಿಕಕಾರರ ಪ್ರಕ್ರಿಯೆಯನ್ನೂ ಇಲ್ಲಿಯೇ ಹೋಲಿಸಿ ತಾರತಮ್ಯವನ್ನು ನಿರ್ಧರಿಸುವದು ಸರಿಯೆಂತ ನಮಗೆ ತೋರಲಿಲ್ಲ. ವಾರ್ತಿಕವನ್ನು ಯಾರಾದರೂ ಅನುವಾದಿಸುವ ಕಾರ್ಯವನ್ನು ಕೈಗೊಂಡಲ್ಲಿ ಈ ಕೆಲಸವನ್ನು ಮಾಡಬಹುದು. ಭರ್ತೃಪ್ರಪಂಚರ ಪ್ರಕ್ರಿಯೆಯ ರೂಪರೇಖೆಯು ಆ ಸಂದರ್ಭದಲ್ಲಿ ಅಥವಾ ಸ್ವತಂತ್ರವಾಗಿಯೇ ಒಂದು ಹೊತ್ತಗೆಯ ರೂಪದಲ್ಲಿ ಬೆಳಕನ್ನು ಕಾಣಬೇಕಾಗಿದೆ.

ಸ್ಫುಟಗೊಳಿಸುವದಕ್ಕಾಗಿ ಅದನ್ನು ನಿಮಿತ್ತವಾಗಿ ಮಾಡಿಕೊಂಡಿರುತ್ತಾರೆಂಬುದನ್ನು ದಿಗ್ದರ್ಶನಮಾಡುವದರಿಂದಲೇ ತೃಪ್ತರಾಗಬೇಕಾಗಿದೆ.★

(೧) ದ್ವೈತಾದ್ವೈತಬ್ರಹ್ಮವಾದ

ಭರ್ತೃಪ್ರಪಂಚರು **ಭೇದಾಭೇದವಾದಿ**ಗಳು. ದ್ವೈತವೂ ಅದ್ವೈತವೂ ಎರಡೂ ಪರಮಾರ್ಥವೇ. ಸಮುದ್ರವೂ ಅದರ ತೆರೆನೊರೆಗುಳ್ಳೆ ಮುಂತಾದವುಗಳೂ ಸತ್ಯವಾಗಿರುವಂತೆಯೇ ಇದು. ದ್ವೈತವು ತೆರೆನೊರೆ ಮುಂತಾದವುಗಳಂತೆ; ಪರಬ್ರಹ್ಮವು ಸಮುದ್ರದ ನೀರಿನಂತೆ. ಕಾರ್ಯಕಾರಣಗಳೆರಡೂ ಸತ್ಯವೆಂದು ಹೇಳದಿದ್ದರೆ ದ್ವೈತವು ಅವಿದ್ಯಾಕೃತವೆಂದಾಗಿ ಕರ್ಮಕಾಂಡವು ಅಪ್ರಮಾಣವಾದೀತು; ಅದ್ವೈತವನ್ನು ಪ್ರತಿಪಾದಿಸುವ ಉಪನಿಷತ್ತೊಂದೇ ಪ್ರಮಾಣವೆನಿಸೀತು. ಆದ್ದರಿಂದ ಈ ವಿರೋಧಪರಿಹಾರಕ್ಕಾಗಿ 'ಪೂರ್ಣಮದಃ ಪೂರ್ಣಮಿದಮ್' ಎಂಬ ಶ್ರುತಿಯು ಕಾರ್ಯಕಾರಣಗಳೆರಡೂ ಸತ್ಯವೆಂದು ಹೇಳಿದೆ ಎಂಬುದು ಭರ್ತೃಪ್ರಪಂಚರ ಮುಖ್ಯಪ್ರಕ್ರಿಯೆ (ಭಾ. ಭಾ. ೩೪೯). ಬ್ರಹ್ಮವು ಏಕವೂ ಅನೇಕವೂ ಆಗಿದೆ ಎಂಬ ಈ ಮತವನ್ನು ಸೂತ್ರಭಾಷ್ಯದಲ್ಲಿಯೂ (೨-೧-೧೪, ಭಾ. ಭಾ. ೪೩೫) ವೃಕ್ಷಸಮುದ್ರಾದಿಗಳ ದೃಷ್ಟಾಂತದಿಂದ ವರ್ಣಿಸಿ ಖಂಡಿಸಿದೆ.

ಮೇಲೆ ವೇದೈಕದೇಶಾಪ್ರಾಮಾಣ್ಯವೆಂಬ ದೋಷವನ್ನು ಅದ್ವೈತದ ಮೇಲೆ ಆರೋಪಿಸಿದೆಯಷ್ಟೆ ? ಇದರಿಂದ ಭರ್ತೃಪ್ರಪಂಚರಿಗಿಂತ ಮೊದಲೇ ಶಂಕರಾಚಾರ್ಯಸಮ್ಮತವಾದ ಅದ್ವೈತವೇದಾಂತಸಂಪ್ರದಾಯವೂ ಇದ್ದಿತೆಂದೂ[1] ಅದನ್ನು ಅವರು ಖಂಡಿಸಿದ್ದಕ್ಕೆ ಪ್ರತ್ಯುತ್ತರವಾಗಿ ಆಚಾರ್ಯರು ಬೃಹದಾರಣ್ಯಕಭಾಷ್ಯವನ್ನು

---

1. ಅರವಿಂದರು ಭಾಗವತಜೀವನ (Life Divine) ಎಂಬ ತಮ್ಮ ಗ್ರಂಥದಲ್ಲಿ ಭೇದಾಭೇದವೇ ಪ್ರಾಚೀನವೇದಾಂತವೆಂದು ಬರೆದುಕೊಂಡಿರುತ್ತಾರೆ. ಅದಕ್ಕೆ ಭರ್ತೃಪ್ರಪಂಚರ ಮತವೇ ಆಧಾರವಾಗಿರಬಹುದು. ಆದರೆ ಅದ್ವೈತವು ಅದಕ್ಕಿಂತಲೂ ಪ್ರಾಚೀನವಾಗಿದ್ದಿತೆಂದೂ ದ್ರವಿಡಾಚಾರ್ಯರೇ ಮುಂತಾದ ಸಂಪ್ರದಾಯಜ್ಞರು ಆ ಸಿದ್ಧಾಂತಕ್ಕನುಗುಣವಾಗಿ ಗ್ರಂಥರಚನೆಯನ್ನು ಮಾಡಿದ್ದರೆಂದೂ ನಾವು ಈ ಉಪನಿಷದ್ಭಾಷ್ಯದ ಒಂದನೆಯ ಭಾಗದ ಪೀಠಿಕೆಯಲ್ಲಿ ಆಗಲೆ ತಿಳಿಸಿರುತ್ತೇವೆ. ಆದ್ದರಿಂದ ಅದ್ವೈತ, ದ್ವೈತಾದ್ವೈತ- ಈ ಸಂಪ್ರದಾಯಗಳಲ್ಲಿ ಯಾವದು ಪ್ರಾಚೀನತರವೆಂಬುದು ಸದ್ಯಕ್ಕೆ ಇತ್ಯರ್ಥವಾಗಿಲ್ಲವೆಂದೇ ಇಟ್ಟುಕೊಳ್ಳಬೇಕಾಗಿದೆ.

ಬರೆದರೆಂದೂ ವ್ಯಕ್ತವಾಗುತ್ತದೆ. ಆಚಾರ್ಯರು ಭ. ಪ್ರ. ರ[1] ಆಕ್ಷೇಪಕ್ಕೆ ಹೇಳಿರುವ ಪರಿಹಾರದ ಸಾರವಿದು : ವಸ್ತುನಿಷ್ಠ ಕಾರ್ಯಯಲ್ಲಿರುವಂತೆ ಉತರ್ಗಾಪವಾದ ಗಳಾಗಲಿ ವಿಕಲ್ಪವಾಗಲಿ ಇರುವುದು ಸಾಧ್ಯವಿಲ್ಲ. ಆದ್ದರಿಂದ ಬ್ರಹ್ಮವು ಆದ್ವೈತವು ಎಂದು ಸಾಮಾನ್ಯವಾಗಿ ಒಪ್ಪಿ ಆದರ ಒಂದು ಭಾಗದಲ್ಲಿ ಅದ್ವೈತತತ್ವವಿಲ್ಲ ವೆಂಬುದಾಗಲಿ, ತತ್ತ್ವವು ದ್ವೈತವೂ ಆದ್ವೈತವೂ ಆಗಿರಬೇಕೆಂದು ವಿಕಲ್ಪಿಸುವದಾಗಲಿ, ಅಥವಾ ಒಂದೇ ತತ್ತ್ವವು ದ್ವೈತವೂ ಆದ್ವೈತವೂ ಆಗಿದೆ ಎಂದು ವಿರುದ್ಧವಾಗಿ ಹೇಳುವದಾಗಲಿ, ಆಗಲಾರದು. ಶ್ರುತಿಯಲ್ಲಿ ಬ್ರಹ್ಮವು ಉಪ್ಪಿನಹರಳಿನಂತೆ ಚೈತನ್ಯೈಕರಸವಾಗಿರುವದೆಂದು ಹೇಳಿದೆ ; ದ್ವೈತವನ್ನು ನಿಂದಿಸಿಯೂ ಇದೆ ; ಅನೇಕಾತ್ಮಕವಾದದ್ದು ಅನಿತ್ಯವಾಗಿರುವದೆಂಬ ಯುಕ್ತಿಯೂ ಇದೆ. ಆದ್ದರಿಂದ ಈ ಸಿದ್ಧಾಂತವು ಶ್ರುತಿಯುಕ್ತಿವಿರುದ್ಧ (ಭಾ. ಭಾ. ೩೫೧, ೩೫೨) ಎಂಬುದು ಆಚಾರ್ಯರ ಮತವು.

ಅದ್ವೈತಪ್ರಕ್ರಿಯೆಯಲ್ಲಿ ಶಾಸ್ತ್ರಕ್ಕೆ ಅಪ್ರಾಮಾಣ್ಯವಿಲ್ಲ. ಏಕೆಂದರೆ ಕರ್ಮಕಾಂಡವು ಅಜ್ಞರುಗೆ ಆಯಾ ಫಲಕ್ಕಾಗಿ ಕರ್ಮವನ್ನು ವಿಧಿಸುತ್ತದೆ. ಜ್ಞಾನಕಾಂಡವು ಮೋಕ್ಷಾರ್ಥಿಗಳಿಗೆ ಆತ್ಮೈಕತ್ವವನ್ನು ಉಪದೇಶಿಸುತ್ತದೆ. ಹೀಗೆ ಇಲ್ಲಿ ಶಾಸ್ತ್ರಾಪ್ರಾಮಾಣ್ಯದೋಷವಿಲ್ಲ. ಬ್ರಹ್ಮವು ದ್ವೈತಾದ್ವೈತರೂಪವೆಂದು ಒಪ್ಪಿದರೆ ಆ ಬ್ರಹ್ಮಕ್ಕೆ ವ್ಯತಿರಿಕ್ತವಾಗಿ ಉಪದೇಶವಾಗಲಿ ಉಪದೇಶಕನಾಗಲಿ ಇರುವಂತಿಲ್ಲವಾದ್ದರಿಂದ ದ್ವೈತಾದ್ವೈತಪ್ರಕ್ರಿಯೆಯಲ್ಲಿಯೇ ಶಾಸ್ತ್ರಾಪ್ರಾಮಾಣ್ಯವು ಬಂದೊದಗುತ್ತದೆ- ಎಂದು (ಭಾ. ಭಾ. ೩೫೩, ೩೫೪) ಆಚಾರ್ಯರು ತಿಳಿಸಿರುತ್ತಾರೆ. ಶಾಸ್ತ್ರವು ಅದ್ವೈತಪರವಾದರೆ ಪ್ರತ್ಯಕ್ಷಾದಿಗಳಿಗೂ ಕರ್ಮಕಾಂಡಕ್ಕೂ ಪ್ರಾಮಾಣ್ಯವು ತಪ್ಪುವದಲ್ಲದೆ ಉಪನಿಷತ್ತು ಸ್ವಾರ್ಥವಿಘಾತಕವಾಗುವದು ; ಆತ್ಮೈಕತ್ವವು ಪರಮಾರ್ಥವಾದರೆ ಉಪದೇಶಾನರ್ಥಕ್ಯವೂ ಬರುವದು - ಎಂದು ಆಕ್ಷೇಪಿಸಿಕೊಂಡು ಆಚಾರ್ಯರು ಪ್ರಮಾಣಗಳಿಗೆ ಪರಸ್ಪರ ವಿರೋಧವಿಲ್ಲವೆಂದೂ ಅದ್ವೈತ ಸಿದ್ಧಾಂತವು ನಿರ್ದುಷ್ಟವೆಂದೂ (೧-೩-೨೧ ರಿಂದ ೩೨೭ರವರೆಗೆ) ವಿಸ್ತಾರವಾಗಿ ಪ್ರತಿಪಾದಿಸಿರುವದೂ ಭ.ಪ್ರ.ರಿಗೆ ಉತ್ತರ.

1. ಭ. ಪ್ರ. ಎಂಬ ಸಂಕ್ಷೇಪವನ್ನು ಭರ್ತೃಪ್ರಪಂಚರ ಎಂಬ ಹೆಸರಿನ ಬದಲು ಈ ಪೀಠಿಕೆಯಲ್ಲಿ ಉಪಯೋಗಿಸಲಾಗಿದೆ.

(೨) ಬ್ರಹ್ಮದ ಅವಸ್ಥೆಗಳು

ಮಹಾಸಮುದ್ರದಂತೆ ಅಲುಗಾಡದ ಅವಸ್ಥೆಯು ಅಕ್ಷರವು, ಸ್ವಲ್ಪಮಟ್ಟಿಗೆ ಅಲುಗಾಡಿದ "ಅವಸ್ಥೆಯು ಅಂತರ್ಯಾಮಿ, ತೀರ ಅಲುಗಾಡಿದ ಅವಸ್ಥೆಯು ಕ್ಷೇತ್ರಜ್ಞನು - ಎಂದು ಮುಂತಾಗಿ ಬ್ರಹ್ಮಕ್ಕೆ ಎಂಟು ಅವಸ್ಥೆಗಳುಂಟೆಂಬುದನ್ನು ಸಮುದ್ರ ಮತ್ತು ತೆರೆನೊರೆಗುಳ್ಳೆಗಳ ದೃಷ್ಟಾಂತದಿಂದ ಭರ್ತೃಪ್ರಪಂಚರು (ಭಾ. ಭಾ. ೯೩) ಪ್ರತಿಪಾದಿಸಿರುತ್ತಾರೆ.

ಇಲ್ಲಿಯೂ ಆಚಾರ್ಯರು ಒಂದೇ ವಸ್ತುವಿಗೆ ವಿರುದ್ಧವಾದ ಅನೇಕಾವಸ್ಥೆಗಳಿರಲಾರವು ಎಂಬ ದೋಷವನ್ನು ಈ ಮತದಲ್ಲಿ ಹೇಳಿದ್ದಾರೆ. ಅಂತರ್ಯಾಮ್ಯಾದಿಗಳಿಗೆ ಉಪಾಧಿಕೃತವಾದ ಭೇದವಲ್ಲದೆ ಮತ್ತೆ ಯಾವ ಭೇದವೂ ಇಲ್ಲ (ಭಾ. ಭಾ. ೯೩, ೯೪) ಎಂಬ ತಮ್ಮ ಸಿದ್ಧಾಂತವನ್ನು ವಿವರಿಸಿದ್ದಾರೆ. ಈ ಸಿದ್ಧಾಂತವನ್ನು ಅವಲಂಬಿಸಿದರೆ ಹಿರಣ್ಯಗರ್ಭಾದಿಗಳನ್ನು ಈಶ್ವರನೆಂದು ಕೆಲವು ಶ್ರುತಿಗಳೂ, ಜೀವರೆಂದು ಮತ್ತೆ ಬೇರೆಯ ಶ್ರುತಿಗಳೂ ಹೇಳಿರುವದೂ ಜೀವರುಗಳನ್ನು ಬ್ರಹ್ಮಸ್ವರೂಪರೆಂದು ಉಪದೇಶಿಸಿರುವದೂ (೧-೧೧೩) ಪರಮಾತ್ಮನಿಗೆ ವಿರುದ್ಧಧರ್ಮಗಳನ್ನು ಹೇಳಿರುವದೂ (೧-೩೯೮) ಅವಿರುದ್ಧವಾಗುತ್ತದೆ ಎಂಬುದು ಆಚಾರ್ಯರ ಅಭಿಪ್ರಾಯವು.

(೩) ಜೀವಸ್ವರೂಪದ ವರ್ಣನೆ

ಪರಮಾತ್ಮನು ಜಗತ್ತನ್ನು ಸೃಷ್ಟಿಸಿ ಅದರೊಳಗೆ ಹೊಕ್ಕಿರುತ್ತಾನೆ ಎಂಬಲ್ಲಿ ಪರಮಾತ್ಮನಿಗೇ ಸಂಸಾರಿತ್ವವು ಬಂದೊದಗದೆ ಇರುವದಕ್ಕಾಗಿ ಅವನು **ವಿಜ್ಞಾನಾತ್ಮನೆಂಬ ವಿಕಾರ**ರೂಪವನ್ನು ಪಡೆದು ಒಳಹೊಕ್ಕಿರುತ್ತಾನೆಂದೂ ಅವನು ಪರಮಾತ್ಮನಿಗಿಂತ ಭಿನ್ನಾಭಿನ್ನನೆಂದೂ (೧-೧೨೨, ೧-೩೧೩) ಭರ್ತೃಪ್ರಪಂಚರು ವರ್ಣಿಸಿರುತ್ತಾರೆ. ಕ್ಷೇತ್ರಜ್ಞಸ್ವರೂಪವು ಪರಮಾತ್ಮನ ಅತ್ಯಂತ ಪ್ರಚಲಿತಾವಸ್ಥೆ ಎಂಬ (ಬಾ. ಭಾ. ೯೩) ಅವರ ಮತವನ್ನು ಆಗಲೆ ತಿಳಿಸಿದ್ದಾಗಿದೆ. ಅಲ್ಲಿ ವಿಜ್ಞಾನಾತ್ಮ ದ್ವಾರದಿಂದ ಪರಮಾತ್ಮನು ವಿಕಾರವಾಗುತ್ತಾನೆಂದೂ ಅವರು ಹೇಳಿರುತ್ತಾರೆ (ಭಾ. ಭಾ. ೩೪೫). ಜೀವ, ವಿಜ್ಞಾನಮಯಾತ್ಮ, ವಿಜ್ಞಾನಾತ್ಮ, ಕ್ಷೇತ್ರಜ್ಞ- ಇವೆಲ್ಲ ಅವರ ಮತದಲ್ಲಿಯೂ ಪರ್ಯಾಯಗಳೇ ಆಗಿವೆ. ವಿಜ್ಞಾನಮಯನು ಎಂದರೆ ಪರಮಾತ್ಮವಿಜ್ಞಪ್ತಿವಿಕಾರವು ಎಂಬುದು (ಭಾ. ಭಾ. ೧೭೧) ಅವರ ಮತ.

ಪ್ರವೇಶಶ್ರುತಿಯು ಪ್ರವೇಶಪರವಲ್ಲ ; ಸೃಷ್ಟಿಗೆ ಮೊದಲು ತಿಳಿಯಬರದೆ ಇರುವ ಆತ್ಮನು ಸೃಷ್ಟಿಯಾದ ಬಳಿಕ ವ್ಯಾಕೃತಬುದ್ಧಿಯೊಳಗೆ ಕಾಣಬರುತ್ತಾನೆಂಬುದರಮೇಲೆ ಪ್ರವಿಷ್ಟನಾದಂತೆ ತೋರುತ್ತಾನೆ ಎಂಬರ್ಥದಲ್ಲಿ ಈ ಶ್ರುತಿಯನ್ನು ತಿಳಿದುಕೊಳ್ಳ ಬೇಕು. ಸೃಷ್ಟ್ಯಾದಿಶ್ರುತಿಗಳು ಸೃಷ್ಟ್ಯಾದಿಪರವಲ್ಲ ; ಆತ್ಮೈಕತ್ವವನ್ನು ತಿಳಿಸುವದಕ್ಕಾ ಗಿಯೇ ಈ ಸೃಷ್ಟಿಪ್ರವೇಶಗಳನ್ನು ಹೇಳಿದೆ (೧-೧೨೭, ೧-೧೨೮). ಆದ್ದರಿಂದ ವಿಜ್ಞಾನಮಯನು ಪರಮಾತ್ಮಸ್ವರೂಪನೇ, ಏಕೆಂದರೆ ಪರಮಾತ್ಮನ ವಿಜ್ಞಾನದ ವಿಕಾರವೆಂಬುದು ಅಪ್ರಸಿದ್ಧವಾಗಿದೆ (೧-೨೮೭) ಎಂಬುದು ಆಚಾರ್ಯರ ಸಿದ್ಧಾಂತ.

ಮೂರ್ತಾಮೂರ್ತಬ್ರಾಹ್ಮಣದಲ್ಲಿ ಅಮೂರ್ತವೆಂದರೆ ವಾಯ್ವಂತರಿಕ್ಷ ಗಳು, ಮೂರ್ತವೆಂದರೆ ಮಿಕ್ಕ ಮೂರು ಭೂತಗಳು ; ಈ ಎರಡು ರೂಪಗಳಿಗೆ ಕಾರಣವಾದದ್ದು ಇವುಗಳ ರಸವೆನಿಸುವದು. ಬ್ರಹ್ಮಸ್ವರೂಪದಲ್ಲಿ ಮೂರ್ತಾ ಮೂರ್ತಗಳಾಗಲಿ ಇವುಗಳ ರಸವಾಗಲಿ ಇರುವದಿಲ್ಲ ಎಂದು ಹೇಳಿರುತ್ತದೆ ಯಷ್ಟೆ? ಆ ಸಂದರ್ಭದಲ್ಲಿ ಅಮೂರ್ತಕ್ಕೆ ಕಾರಣವಾಗಿರುವ **ಹಿರಣ್ಯಗರ್ಭ ನೆಂಬ ಚೇತನರೂಪನಾದ ವಿಜ್ಞಾನಾತ್ಮನನ್ನೇ ಅಮೂರ್ತರಸವೆಂದಿದೆ - ಎಂಬುದು (೧-೩೩೯) ಭ. ಪ್ರ. ರ. ಮತ.** ಈ ಭೂತದ್ವಯವು ಅವ್ಯಾಕೃತದಿಂದ ಹುಟ್ಟಿ ಹಿರಣ್ಯಗರ್ಭನ ಲಿಂಗಶರೀರಕ್ಕೆ ಕಾರಣವಾಗಿದೆ (೧-೩೩೮)ಯಾದ್ದರಿಂದ ಅದು ಅಮೂರ್ತರಸವು ಎಂಬುದು ಭಾಷ್ಯಕಾರರ ಮತವು. ಇದೇ ಸಂದರ್ಭದಲ್ಲಿ ಆಧಿದೈವಿಕಾಧ್ಯಾತ್ಮಿಕವಾಗಿ ಮೂರ್ತಾಮೂರ್ತ ತದ್ರಸಗಳನ್ನು ತಿಳಿಸಿಕೊಟ್ಟು ಬಳಿಕ 'ಈ ಪುರುಷನ ರೂಪವನ್ನು ತಿಳಿಸಲಾಗುವದು' ಎಂದು ಶ್ರುತಿಯು (೨-೩-೬) 'ಯಥಾ ಮಾಹಾರಜನಂ ವಾಸಃ' ಎಂದು ಮುಂತಾಗಿ ವರ್ಣಿಸಿದೆ. ಇಲ್ಲಿ ಮೂರ್ತಾಮೂರ್ತಗಳಿಗಿಂತ ವಿವಿಕ್ತವಾದ ವಿಜ್ಞಾನಾತ್ಮನ ರೂಪವನ್ನೇ ಹೇಳಿದೆ ಎಂಬುದು ಭ. ಪ್ರ. ರ. ಮತವು. ಮೂರ್ತಾ ಮೂರ್ತರಾಶಿಯು ಪ್ರಯೋಜ್ಯ (ಕಾರ್ಯ) ; ವಿಜ್ಞಾನಮಯಸಹಿತವಿದ್ಯಾ ಕರ್ಮಪೂರ್ವಪ್ರಜ್ಞಾ ಸಮುದಾಯರಾಶಿಯು ಪ್ರಯೋಜಕವು (ಕಾರಣವು) ; ಪರಮಾತ್ಮರಾಶಿಯು ಉತ್ತಮವಾದದ್ದು. ಪ್ರಯೋಜಕವಾದ ಕರ್ಮರಾಶಿಯು ನಿಜವಾಗಿ ಲಿಂಗಾಶ್ರಯವಾದರೂ ಹೂವನ್ನು ಬಿಟ್ಟು ಹೂವಿನ ವಾಸನೆಯು ಪುಟ ತೈಲಾಶ್ರಿತವಾಗಿರುವಂತೆ - ಲಿಂಗವನ್ನು ಬಿಟ್ಟು **ಪರಮಾತ್ಮನ ಏಕದೇಶವಾದ ವಿಜ್ಞಾನಾತ್ಮನನ್ನು** ಆಶ್ರಯಿಸಿಕೊಂಡಿರುತ್ತದೆ. ಹೀಗೆ ಲಿಂಗದಿಂದ ಬಂದ ಈ

ಗುಣದಿಂದ ನಿಜವಾಗಿ ನಿರ್ಗುಣನೇ ಆಗಿರುವ ವಿಜ್ಞಾನಾತ್ಮನು ಸಗುಣನೂ ಕರ್ತೃಭೋಕ್ತೃವೂ ಆಗಿರುತ್ತಾನೆ (೧-೩೪೩) ಎಂದು ಭ್ರ.ಪ್ರ.ರು. ವರ್ಣಿಸಿರುತ್ತಾರೆ. ವಿಜ್ಞಾನಮಯಶಬ್ದಕ್ಕೆ ಪರಮಾತ್ಮವಿಜ್ಞಪ್ತಿವಿಕಾರವು (ಭಾ. ಭಾ. ೧೭೧) ಎಂದೂ ಅವರು ನಿರ್ವಚನಮಾಡಿರುವದರಿಂದ ಪರಮಾತ್ಮನ ವಿಜ್ಞಾನವು ವಿಜ್ಞಾನಮಯನೆಂಬ ರೂಪಾಂತರವನ್ನು ತಾಳಿರುತ್ತದಾದರೂ ಪರಮಾತ್ಮನು ತನ್ನ ರೂಪದಿಂದ ಶುದ್ಧನೂ ನಿರ್ಗುಣನೂ ಆಗಿದ್ದು ವಿಜ್ಞಾನಾತ್ಮನೆಂಬ ಏಕದೇಶದಲ್ಲಿ ಅಶುದ್ಧನೂ ಸಗುಣನೂ ಆಗಿರುತ್ತಾನೆ ಎಂಬ **ಪರಿಣಾಮವಾದವು** ಅವರದೇ ಎನ್ನಬೇಕಾಗುತ್ತದೆ. ಹೀಗೆ ವಿಜ್ಞಾನಾತ್ಮಪರಮಾತ್ಮರುಗಳಿಗೆ ಭೇದಾಭೇದವನ್ನು ಒಪ್ಪಿರುವದರಿಂದಲೇ ಭ. ಪ್ರ. ರು. ಉಷಸ್ತಪ್ರಶ್ನೆಯಲ್ಲಿ ಪ್ರಾಣನಾದಿಲಿಂಗಗಳುಳ್ಳ ವಿಜ್ಞಾನಾತ್ಮನ ವಿಚಾರವಿದೆ, ಅವನನ್ನು ಪರಮಾತ್ಮನಲ್ಲಿ ಲಯಗೊಳಿಸುವದಕ್ಕಾಗಿ ಕಹೋಲಪ್ರಶ್ನೆಯಲ್ಲಿ ಪರಮಾತ್ಮಸ್ವರೂಪವನ್ನು ಕುರಿತ ವಿಚಾರವನ್ನು ತಂದಿದೆ (ಭಾ. ಭಾ.೫೨)- ಎಂದು **ಕ್ಷೇತ್ರಜ್ಞಪರಮಾತ್ಮಭೇದ**ವನ್ನು ಹೇಳಿರುವದು ಹೊಂದುತ್ತದೆ.

ಆಚಾರ್ಯರ ಮತದಲ್ಲಿ ಪರಮಾತ್ಮನಿಗೂ ವಿಜ್ಞಾನಾತ್ಮನಿಗೂ ಯಾವ ಭೇದವೂ ಇರುವದಿಲ್ಲ. ಪರಮಾತ್ಮನೇ ಅವಿದ್ಯೆಯಿಂದ ವಿಜ್ಞಾನಾತ್ಮನೆಂದು ತೋರುತ್ತಾನೆಂಬುದೇ ಅವರ ಮತ. ಆತ್ಮನು ಪರಬ್ರಹ್ಮವೇ ಎಂದು ತಿಳಿಸುವದೇ ಶ್ರುತಿಯ ಉದ್ದೇಶವಾದ್ದರಿಂದ ಭ.ಪ್ರ.ರ ಮತವು ಶ್ರುತಿಯುಕ್ತಿಬಾಹ್ಯವು ಎಂದು (ಭಾ.೧-೩೪೪, ೩೪೫) ತೋರಿಸಿಕೊಟ್ಟಿರುತ್ತಾರೆ. ಉಷಸ್ತಪ್ರಶ್ನೆಯಲ್ಲಿ ಬದ್ಧನಾದ ಆತ್ಮನ ಅಸ್ತಿತ್ವವನ್ನು ಹೇಳಿ ಅವನೇ ಪರಮಾರ್ಥವಾಗಿ ಅಸಂಸಾರಿಯಾದ ಪರಮಾತ್ಮನು ಎಂಬುದನ್ನು ಕಹೋಲಪ್ರಶ್ನದಲ್ಲಿ ವಿವರಿಸಿದೆ- ಎಂಬುದು ಅವರ ಮತವು (ಭಾ. ಭಾ. ೫೩-೫೪).

ಸುಷುಪ್ತಾತ್ಮನಿಗೆ ದೃಷ್ಟಿಶ್ರುತಿಮತ್ಯಾದಿಗಳು ಅಲುಪ್ತಸ್ವಭಾವದವಾಗಿರುತ್ತವೆ ಎಂದು ಶ್ರುತಿಯಲ್ಲಿ ಹೇಳಿದೆ. ಅವು ಆತ್ಮನ ಬೇರೆಬೇರೆಯ ಧರ್ಮಗಳೊ, ಅಥವಾ ಒಂದೇ ಧರ್ಮವು ಔಪಾಧಿಕವಾಗಿ ಬೇರೆಬೇರೆಯಾಗಿ ಕಾಣುತ್ತಿರುವ ರೂಪಭೇದಗಳೊ ?- ಎಂಬ ಸಂಶಯವನ್ನು ಆಚಾರ್ಯರು ತೆಗೆದು ಆತ್ಮನಲ್ಲಿ **ಏಕತ್ವವೂ ನಾನಾತ್ವವೂ** ಇರುವದರಿಂದ ಆ ಧರ್ಮಗಳು ಪರಸ್ಪರ ಭಿನ್ನವಾಗಿಯೂ ಆತ್ಮ ರೂಪದಿಂದ ಏಕವಾಗಿಯೂ ಇರುತ್ತವೆ (ಭಾ. ಭಾ. ೨೨೮)

ಎಂಬ ಭ.ಪ್ರ.ರ ಪೂರ್ವಪಕ್ಷವನ್ನು ಒಪ್ಪಿರುತ್ತಾರೆ. ಭೇದಾಭೇದವಾದಪ್ರಕ್ರಿಯೆಗೆ ಇದು ಅನುಗುಣವಾದರೂ ವಸ್ತುವು ದ್ವೈತಾದ್ವೈತವಾಗಿರುವದು ಯುಕ್ತಿ ಸಮ್ಮತವಲ್ಲ. ಶ್ರುತಿಯು ಇವುಗಳ ಭೇದವನ್ನು ಪ್ರತಿಪಾದಿಸುವದಕ್ಕೆ ಬಂದಿಲ್ಲ. ಶ್ರುತಿಯಲ್ಲಿ ಆತ್ಮನು ಪ್ರಜ್ಞಾನೈಕರಸರೂಪನೆಂದು ಹೇಳಿಯೂ ಇದೆ ; ಆತ್ಮನು ಚಿನ್ಮಾತ್ರನೆಂಬುದಕ್ಕೆ ಯುಕ್ತಿಯೂ ಇದೆ - ಎಂದು ವಿಸ್ತಾರವಾಗಿ ಪರಮತನಿರಸನ ಪೂರ್ವಕವಾಗಿ (ಭಾ. ಭಾ. ೨೨೯ ರಿಂದ ೨೩೧) ಆತ್ಮನು ಅಖಂಡ ಚಿದೈಕರಸನೆಂಬ ಸ್ವಮತವನ್ನು ಉಪಪಾದನಮಾಡಿರುತ್ತಾರೆ. ನಿರ್ವಿಕಾರನೂ ಚಿನ್ಮಾತ್ರನೂ ಆದ ಆತ್ಮನಲ್ಲಿ ದೃಷ್ಟ್ಯಾದಿಕರ್ತೃತ್ವವಾಗಲಿ (ಭಾ. ಭಾ. ೪೭, ೪೮) ಚಕ್ಷೂರೂಪಾದಿಗಳಾಗಿ ಪರಿಣಮಿಸುವ ಸ್ವಭಾವವಾಗಲಿ ಇರುವದಿಲ್ಲ (ಭಾ. ಭಾ. ೨೩೧) ಎಂದು ತೋರಿಸಿಕೊಟ್ಟಿರುತ್ತಾರೆ.

ಅವಿದ್ಯಾಕಾಮಕರ್ಮಗಳು ಲಿಂಗದ ಧರ್ಮಗಳಾದರೂ ಆತ್ಮನಿಗೆ ನಿಜವಾಗಿ ಅಂಟಿಕೊಂಡಿರುತ್ತವೆ ಎಂದು ತಿಳಿಸುವದು ಭ.ಪ್ರ.ರ. ಪ್ರಕ್ರಿಯೆಯ ಅಸಾಧಾರಣರೂಪವು. ಹೊಲದ ಒಂದು ಭಾಗದಲ್ಲಿ ಎದ್ದುತೋರಿಕೊಳ್ಳುವ ಚೌಳುಭಾಗದಂತೆ **ಅವಿದ್ಯೆ**ಯು ಪರಮಾತ್ಮನಿಂದಲೇ ಉಂಟಾಗಿ ಅವನ ಒಂದು ಭಾಗವಾದ ಆತ್ಮನಲ್ಲಿ ತೋರಿಕೊಳ್ಳುತ್ತದೆ (೧-೩೪೩), ಕಾಮವು ಪುಷ್ಪಪುಟತೈಲ ನ್ಯಾಯದಿಂದ ಆತ್ಮನನ್ನು ಆಶ್ರಯಿಸಿಕೊಂಡಿರುತ್ತದೆ (ಭಾ. ಭಾ. ೨೨೦), ವಿದ್ಯಾಕರ್ಮಪೂರ್ವಪ್ರಜ್ಞೆಗಳು ಹೀಗೆಯೇ ಆತ್ಮನನ್ನು ಆಶ್ರಯಿಸಿಕೊಂಡಿವೆ (೧-೩೪೩) - ಎಂಬಿದು ಆ ವೃತ್ತಿಕಾರರ ಪ್ರಕ್ರಿಯೆಯು. ಆದರೆ ಕರ್ತೃತ್ವಭೋಕ್ತೃತ್ವ ವಾಗಲಿ, ಕಾಮವಾಗಲಿ, ಅವಿದ್ಯೆಯಾಗಲಿ ಆತ್ಮನಿಗೆ ಅಂಟಿಕೊಂಡಿಲ್ಲ ; ಆತ್ಮನು ಕಾರ್ಯಕರಣವ್ಯತಿರಿಕ್ತನೆಂಬುದು ಜಾಗ್ರತ್ಸ್ವಪ್ನೆಗಳ ಸಂಚಾರದಿಂದ ಸಿದ್ಧವಾಗುತ್ತದೆ; ಅವಿದ್ಯಾಕಾಮಕರ್ಮಗಳ ಸಂಬಂಧವನ್ನು ಮೀರಿರುವ ಸ್ವರೂಪವು ಅವನದೆಂಬುದು ಸುಷುಪ್ತಿಯಲ್ಲಿ ನೇರಾಗಿ ಕಾಣಬರುತ್ತದೆ- ಎಂಬುದನ್ನು ತಿಳಿಸುವದಕ್ಕಾಗಿಯೇ ಶ್ರುತಿಯಲ್ಲಿ **ಅವಸ್ಥಾತ್ರಯಪರೀಕ್ಷೆಯು** ಬಂದಿದೆ. (ಭಾ. ಭಾ. ೨೪೨) ಎಂದು ಆಚಾರ್ಯರು ತಮ್ಮ ಭಾಷ್ಯದಲ್ಲಿ ಮತ್ತೆ ಮತ್ತೆ ಸ್ಪಷ್ಟಗೊಳಿಸಿರುವದು ಭ.ಪ್ರ.ರ. ಮತದ ಅಸಾರತೆಯನ್ನು ಹೊರಗೆಡಹುವದಕ್ಕೇ ಅಲ್ಲ, ಶ್ರೌತಪ್ರಕ್ರಿಯೆಯು ಅನುಭವಾರೂಢವೆಂಬುದನ್ನು ತಿಳಿಸುವದಕ್ಕೂ ಉಪಯುಕ್ತವಾಗಿದೆ. ಕಾಮಾದಿ ಗಳು ಹೃದಯಾಶ್ರಿತವೇ, ಆತ್ಮಾಶ್ರಿತವಲ್ಲ - ಎಂಬ ಸ್ವಪಕ್ಷವನ್ನು ಅವರು ಭ.ಪ್ರ.ರ.

ಪಕ್ಷವನ್ನು ಖಂಡಿಸಿ (ಭಾ. ೨೨೦, ೨೨೧, ೨೨೨) ಸುಷುಪ್ತಾತ್ಮನು ಹೃದಯದ ಕಾಮಗಳೆಲ್ಲವನ್ನೂ ಮೀರಿರುತ್ತಾನೆ ಎಂಬ ಶ್ರುತಿಯ ಆಧಾರದಿಂದ (ಭಾ. ಭಾ. ೨೧೮) ಸ್ಥಾಪಿಸಿರುತ್ತಾರೆ.

(೪) ಮೋಕ್ಷಸಾಧನಗಳ ವಿಚಾರ

ಭ.ಪ್ರ.ರು. ಸಿದ್ಧಾಂತದಲ್ಲಿ ದ್ವೈತಾದ್ವೈತಿಗಳಾಗಿರುವಂತೆ ಸಾಧನವಿಚಾರದಲ್ಲಿ **ಜ್ಞಾನಕರ್ಮಸಮುಚ್ಚಯವಾದಿ**ಗಳಾಗಿದ್ದರು. ಆದ್ದರಿಂದ ಜ್ಞಾನಮಾತ್ರದಿಂದ ಮೋಕ್ಷವೆಂಬ ಆಚಾರ್ಯರ ಸಂಪ್ರದಾಯದ ಸಿದ್ಧಾಂತಕ್ಕೆ ಅವರ ಮತವು ವಿರುದ್ಧವಾಗಿದ್ದಿತು. ಹೀಗಿರುವದರಿಂದ ಕರ್ಮವು ನೇರಾಗಿ ಮೋಕ್ಷಸಾಧನವೆಂಬ ಅಭಿಪ್ರಾಯವನ್ನು ಭ.ಪ್ರ.ರು. ಕೊಟ್ಟಿರುವ ಕಡೆಯಲ್ಲೆಲ್ಲ ಅದು ಅವಿದ್ಯಾತ್ಮಕವೆಂಬುದನ್ನು ಆಚಾರ್ಯರು ಮತ್ತೆಮತ್ತೆ ನೆನಪಿಗೆ ಕೊಟ್ಟಿರುತ್ತಾರೆ. ಹೇಗೆಂದರೆ:

(೧) ಅಗ್ನಿಬ್ರಾಹ್ಮಣದ್ವಾರದಿಂದ ಪರಮಾತ್ಮಲೋಕಪ್ರಾಪ್ತಿಯಾಗುವದು (೧-೧೮೭) ಎಂದು 'ಅಗ್ನಾವೇವ ದೇವೇಷು ಲೋಕಮಿಚ್ಛನ್ತೇ ಬ್ರಾಹ್ಮಣೇ ಮನುಷ್ಯೇಷು' (೧-೪-೧೫) ಎಂಬ ಶ್ರುತಿಗೆ ಭ. ಪ್ರ. ರು. ಮಾಡಿರುವ ಅರ್ಥವು ಕರ್ಮಕ್ಕೆ ಅಧಿಕಾರವನ್ನು ತಿಳಿಸುವ ವರ್ಣವಿಭಾಗವನ್ನು ಹೇಳಿರುವ ಅವಿದ್ಯಾ ಪ್ರಕರಣಕ್ಕೆ ಹೊಂದುವದಿಲ್ಲವೆಂದೂ ಮುಂದೆ 'ಸ್ವಂ ಲೋಕಮ್' ಎಂದು ವಾಕ್ಯಶೇಷದಲ್ಲಿ ಹೇಳಿರುವದರಿಂದ ಇದು ಆತ್ಮಲೋಕವಾಗಲಾರದೆಂದೂ ಆಚಾರ್ಯರು ತಿಳಿಸಿರುತ್ತಾರೆ.

(೨) ಕರ್ಮದಿಂದ ಪಿತೃಲೋಕವನ್ನೂ ವಿದ್ಯೆಯಿಂದ ದೇವಲೋಕವನ್ನೂ ಗೆದ್ದುಕೊಳ್ಳಬಹುದೆಂಬ ಶ್ರುತಿಗೆ (೧-೫-೧೬) ಪುತ್ರಕರ್ಮಾಪರವಿದ್ಯೆಗಳ ಸಮುಚ್ಚಯವನ್ನು ಅನುಷ್ಠಾನಮಾಡಿದವನು ಮನುಷ್ಯಪಿತೃದೇವಲೋಕಗಳನ್ನು ಬಿಟ್ಟು ವಿರಕ್ತನಾಗಿ ಪರಮಾತ್ಮವಿಜ್ಞಾನದಿಂದ ಮೋಕ್ಷವನ್ನು ಪಡೆಯುತ್ತಾನೆ ಎಂಬರ್ಥವನ್ನು ಭ.ಪ್ರ.ರು. ಮಾಡಿದ್ದರು. ಇದಕ್ಕೆ ನಾಮರೂಪಕರ್ಮಾತ್ಮಕವಾದ ತ್ರ್ಯನ್ನಾತ್ಮಕಫಲವನ್ನು ಹೇಳಿರುವದರಿಂದಲೂ ಅದು ಕ್ಷಯವಾಗುವ ಸಂಭವವುಂಟೆಂದು ಹೇಳಿರುವದರಿಂದಲೂ ಇದು ಮೋಕ್ಷಾರ್ಥಸಾಧನವೆಂಬುದು ಸರಿಯಲ್ಲ (೧-೨-೩೮) ಎಂದು ಆಚಾರ್ಯರು ಹೇಳಿದ್ದಾರೆ. ಕರ್ಮಸಂಬದ್ಧವಾದ ಲೋಕವನ್ನು ಅವ್ಯಾಕೃತಾವಸ್ಥೆಯ ಕಾರಣರೂಪವನ್ನಾಗಿ ಮಾಡಿಕೊಂಡು

ಉಪಾಸನೆಮಾಡುವ **ಅಪರಿಚ್ಛಿನ್ನಕರ್ಮಾತ್ಮದರ್ಶಿಯ ಕರ್ಮವು ಕ್ಷಯವಾಗುವದಿಲ್ಲ** (೧-೧೯೦) - ಎಂಬ ಭ.ಪ್ರ.ರ. ಪಕ್ಷಕ್ಕೆ ಶ್ರುತಿಯ ಆಧಾರವಿಲ್ಲ; ಅವರು ನಂಬಿರುವ ಶ್ರುತಿಯು ಆತ್ಮಜ್ಞಾನದ ಫಲವು ನಿತ್ಯವೆಂದು ಹೇಳುತ್ತಿದೆ (೧-೧೯೧) ಎಂದು ವಿವೇಚಿಸಿರುತ್ತಾರೆ. ಜ್ಞಾನಕರ್ಮಸಮುಚ್ಚಯವನ್ನು ನಿರಭಿಸಂಧಿಯಾಗಿ ಮಾಡಿದರೂ ಮೋಕ್ಷವು ಲಭಿಸಲಾರದು, ಏಕೆಂದರೆ ಮೋಕ್ಷವು ಕಾರ್ಯವಲ್ಲ (ಭಾ. ಭಾ. ೩೧). ಆತ್ಮಯಾಜಿಗೆ, ಎಂದರೆ ನಿಷ್ಕಾಮನಾದ ಸಮುಚ್ಚಯಾನುಷ್ಠಾನವಂತನಿಗೆ, ಕಾರ್ಯಕರಣಸಂಸ್ಕಾರವಾಗಿ ಕ್ರಮಕ್ರಮವಾಗಿ ಆತ್ಮಜ್ಞಾನವು ಉತ್ಪತ್ತಿಯಾಗುವದೆಂಬ ಫಲಾಂತರವುಂಟೆಂಬುದು (ಭಾ. ಭಾ. ೩೬) ಅವರ ಆಶಯ. ಸರ್ವಥಾ ಈ ಉಪನಿಷತ್ತಿನಲ್ಲಿ ಹೇಳಿರುವ ಆತ್ಮಸ್ವರೂಪವು ಕರ್ಮಕ್ಕೆ ಸಂಬಂಧಿಸುವ ಹಾಗಿಲ್ಲವಾದ್ದರಿಂದ ಅದರ ಪ್ರಾಪ್ತಿಗೆಂದು ಯಾರೂ ಯಾವ ಕರ್ಮವನ್ನೂ ಕೈಗೊಳ್ಳುವ ಸಂಭವವೇ ಇಲ್ಲ ಸರ್ವಕರ್ಮಫಲಗಳೂ ಜ್ಞಾನಫಲದಲ್ಲಿಯೇ ಅಡಕವಾಗಿಯೂ ಇವೆ (ಭಾ. ಭಾ. ೩೧೨) ಎಂಬಿದು ಆಚಾರ್ಯರ ಮತವು.

(೩) ಬ್ರಹ್ಮಜ್ಞಾನಿಗೂ ಏಷಣಾಸಂಬಂಧವಿರಬಹುದು (೧-೩೫೨), ಮಿಕ್ಕ ಏಷಣೆಗಳನ್ನು ಬಿಟ್ಟರೂ ಅಪರಬ್ರಹ್ಮೋಪಾಸನೆಯ ಬಲದಿಂದಲೇ ಬಿಡಬೇಕಾಗಿರುವದರಿಂದ ದೈವವಿತ್ತವನ್ನು ಬಿಟ್ಟುಮಾಡುವ ಸಂನ್ಯಾಸವೇ ಇಲ್ಲ (ಭಾ ಭಾ.೫೬), ಪುತ್ರಾದ್ಯೈಷಣೆಗಳನ್ನು ಬಿಟ್ಟರೂ ಎಲ್ಲಾ ಕರ್ಮಗಳನ್ನೂ ಬಿಡತಕ್ಕದ್ದಲ್ಲ (ಭಾ. ಭಾ. ೫೭), ಪಾರಿವ್ರಾಜ್ಯದಲ್ಲಿಯೂ ಅಧ್ಯಯನಾದಿಕರ್ಮಗಳಿರುವದರಿಂದ ಯಜ್ಞೋಪವೀತಾದಿಗಳನ್ನು ತ್ಯಜಿಸಬಾರದು (ಭಾ ಭಾ. ೫೭), ಆತ್ಮಜ್ಞಾನಿಯು ಕರ್ಮಗಳನ್ನು ಬಿಟ್ಟರೆ ಅವನಿಗೂ ಪ್ರತ್ಯವಾಯವುಂಟು (ಭಾ. ಭಾ. ೨೬೯) - ಎಂಬ ಭ.ಪ್ರ.ರ ಅಭಿಪ್ರಾಯವನ್ನು ತಿರಸ್ಕರಿಸಿ ಜ್ಞಾನಿಗೆ ಏಷಣಾಸಂಬಂಧವಿದೆ ಎಂಬುದು ಏಷಣಾಸಂಬಂಧವನ್ನು ಅವಿದ್ವಾಂಸರಿಗೂ ಅವುಗಳ ಅಸಂಬಂಧವನ್ನು ಜ್ಞಾನಿಗಳಿಗೂ ಹೇಳುವ ಶ್ರುತಿಗೂ ಕ್ರಿಯಾಕಾರಕಫಲಗಳನ್ನು ಬಾಧಿಸುವ ಆ ಜ್ಞಾನದೊಡನೆ ಅಜ್ಞಾನವು ಇರಲಾರದೆಂಬ ನ್ಯಾಯಕ್ಕೂ ವಿರುದ್ಧವು (೧-೩೫೨)- ಅಪರಬ್ರಹ್ಮವು ಈ ಪರಬ್ರಹ್ಮಾತ್ಮನಿಗಿಂತ ವ್ಯತಿರಿಕ್ತವಾದದ್ದೆಂದು ತಿಳಿಯುವದು ಸರಿಯಲ್ಲವೆಂದು ಶ್ರುತಿಯಲ್ಲಿರುವದರಿಂದ ಆತ್ಮದರ್ಶನವೇ ಏಷಣಾತ್ಯಾಗಕ್ಕೆ ಪ್ರಯೋಜಕವು (ಭಾ. ಭಾ. ೩೧೦). ಸಂನ್ಯಾಸಿಯು ಯಜ್ಞೋಪವೀತವೇ ಮುಂತಾದದ್ದೆಲ್ಲವನ್ನೂ ತ್ಯಾಗಮಾಡಬೇಕೆಂದು ಶ್ರುತಿಯಲ್ಲಿದೆ.

ಸಾಧನಫಲರೂಪನಲ್ಲದ ಆತ್ಮನಿಗಿಂತ ಬೇರೆಯ ವಿಷಯವಾದದ್ದು ಅಜ್ಞಾನದ ವಿಷಯವಾದ ಏಷಣೆಯೇ ; ಆದ್ದರಿಂದಲೂ ಯಜ್ಞೋಪವೀತಾದಿಗಳನ್ನು ಸಂನ್ಯಾಸಿಯು ಬಿಟ್ಟುಬಿಡಬೇಕು (ಭಾ. ಭಾ. ೫೮, ೫೯) ; ಯಜ್ಞೋಪವೀತಾದಿಗಳನ್ನೂ ಆಶ್ರಮಚಿಹ್ನವನ್ನೂ ಧರಿಸಿರಬೇಕೆಂಬುದು ಅಜ್ಞಪರಿವ್ರಾಜಕರಾದ ತ್ರಿದಂಡಿಸಂನ್ಯಾಸಿಗಳ ವಿಷಯವಾದ್ದರಿಂದ ಜ್ಞಾನಿಯು ಸರ್ವಸಾಧನಗಳನ್ನೂ ಆಶ್ರಮಲಿಂಗವನ್ನೂ ಬಿಟ್ಟು ಪಾರಮಹಂಸ್ಯವನ್ನೇ ಸ್ವೀಕರಿಸಬೇಕು (ಭಾ. ಭಾ. ೬೦). ಸರ್ವಾತ್ಮದರ್ಶಿಯಾದವನಿಗೆ ಅನ್ಯವಾದ ಕರ್ಮವಾಗಲಿ ಪ್ರತ್ಯವಾಯವಾಗಲಿ ಇರುವ ಸಂಭವವೇ ಇಲ್ಲ (ಭಾ. ಭಾ. ೨೬೯) - ಎಂದು ಆಚಾರ್ಯರು ತಮ್ಮ ಸಿದ್ಧಾಂತವನ್ನು ಸ್ಪಷ್ಟಪಡಿಸಿರುತ್ತಾರೆ.

ಮುಖ್ಯವಾಗಿ ಅನುಷ್ಠೇಯರೂಪವಾದ ಉಪಾಸನೆಯೇ ಭ.ಪ್ರ.ರಿಗೆ ಜ್ಞಾನಶಬ್ದವಾಚ್ಯವಾದದ್ದು. ಶಸ್ತ್ರದಿಂದ ಪರೋಕ್ಷಜ್ಞಾನವಾಗಬೇಕು. ಭಾವನಾಜ್ಞಾನಸಂತಾನದಿಂದ ಸಾಕ್ಷಾತ್ಕಾರವಾಗಬೇಕು (ಭಾ. ಭಾ. ೩೦೦ ಟಿಪ್ಪಣಿ) ಎಂಬಿದು ಅವರ ಮತ. ಆಚಾರ್ಯರು ಉಪಾಸನಾರೂಪವಾದ ಜ್ಞಾನವನ್ನೂ ಅಂಗೀಕರಿಸಿದ್ದರೂ ಅದು ಮೋಕ್ಷಕ್ಕೆ ಕಾರಣವೆಂದು ಒಪ್ಪಿಲ್ಲ. ಜ್ಞಾನಕರ್ಮ ಸಮುಚ್ಚಯದಿಂದ ಏಕಾನೇಕಾತ್ಮಕನಾದ (೧-೨೬೦) ಪ್ರಾಣ (ಅಥವಾ ಹಿರಣ್ಯಗರ್ಭ)ನ ಸಾಯುಜ್ಯವು ಮಾತ್ರ ದೊರೆಯುತ್ತದೆ (೧-೯೫, ೧-೯೭, ಭಾ. ಭಾ. ೩೭, ೩೯). ಅವಿದ್ಯಾನಾಶಕವಾದ ವಸ್ತುತಂತ್ರಜ್ಞಾನವು ಬೇರೆಯಿದೆ. (೧-೯೭), ವಸ್ತುಬೋಧಕವಾಕ್ಯಗಳಿಗೂ ಪ್ರಾಮಾಣ್ಯವುಂಟು (೧-೫೨, ೫೪), ಬ್ರಹ್ಮಜ್ಞಾನದಿಂದ ಅವಿದ್ಯಾದಿಗಳು ತೊಲಗುವದು ಅನುಭವದಲ್ಲಿಯೂ ಇದೆ (೧-೫೩) ಎಂಬುದೇ ಅವರ ವೇದಾಂತದ ಅಸಾಧಾರಣೋಪದೇಶವು.

(೫) ಮೋಕ್ಷವಿಚಾರ

(೧) 'ಇದು ಮೊದಲು ಬ್ರಹ್ಮವೇ ಆಗಿತ್ತು ; ಅದು ತನ್ನನ್ನೇ ಬ್ರಹ್ಮವಾಗಿರುವೆನೆಂದು ಅರಿತುಕೊಂಡಿತು ;ಅದರಿಂದ ಸರ್ವವೂ ಆಯಿತು' ಎಂಬ (೧-೪-೧೦) ಶ್ರುತಿಯಲ್ಲಿ ಬ್ರಹ್ಮವು ಎಂದರೆ ಬ್ರಹ್ಮವಾಗಿರುವ ಪುರುಷನು ; ಕರ್ಮಸಮುಚ್ಚಿತವಾದ ಅಪರಬ್ರಹ್ಮವಿದ್ಯೆಯಿಂದ ಅಪರಬ್ರಹ್ಮವಾಗಿರುವವನು, ಭೋಜ್ಯಕ್ಕಿಂತ ಬೇರೆಯಾಗಿ ಕಾಮಕರ್ಮಗಳಿಂದ ಮುಕ್ತನಾಗಿರುವವನು. ಅವನಿಗೆ ಬ್ರಹ್ಮವಿದ್ಯೆಯಿಂದ ಸರ್ವಭಾವವುಂಟಾಗುತ್ತದೆ ಎಂಬುದು ಭ.ಪ್ರ.ರ. ಶ್ರುತಿವ್ಯಾಖ್ಯಾನ (೧-೧೫೦).

ಸರ್ವಭಾವಾಪತ್ತಿಯು ಸಾಧನಕೃತವೆಂದಾದರೆ ಅನಿತ್ಯವಾಗುತ್ತದೆ. ಆದ್ದರಿಂದ ಇದು ಬ್ರಹ್ಮವೇ ಆಗಿತ್ತು ಎಂದರೆ ಈ ಶರೀರಸ್ಥನಾದ ಆತ್ಮನು ಜ್ಞಾನಪ್ರಾಪ್ತಿಗಿಂತ ಮೊದಲು ಬ್ರಹ್ಮವೇ ಆಗಿದ್ದನು, **ಅವನು ತಾನು ಅಬ್ರಹ್ಮವೆಂದು ಅವಿದ್ಯೆಯಿಂದ ಭಾವಿಸಿಕೊಂಡಿದ್ದನು.** ಅವನಿಗೆ ವಿದ್ಯೆಯಿಂದ ಅವಿದ್ಯೆಯು ತೊಲಗಲು ಸರ್ವಾತ್ಮತ್ವವುಂಟಾಯಿತು. ಎಂದೇ ಅರ್ಥ (೧-೧೫೦) ಎಂದು ಆಚಾರ್ಯರು ಪ್ರತಿಪಾದಿಸಿರುತ್ತಾರೆ.

೨) ಗ್ರಹಾತಿಗ್ರಹಗಳಿಂದ ಮುಕ್ತನಾದರೂ ಆತ್ಯಂತಿಕವಾಗಿ ಮುಕ್ತನಾಗುವದಿಲ್ಲ. ಪರಮಾತ್ಮನಿಂದಲೇ ಹುಟ್ಟಿರುವ - ಹೊಲದಲ್ಲಿರುವ ಚೌಳುಭಾಗದಂತಿರುವ - ಅವಿದ್ಯೆಯಿಂದ ಪರಮಾತ್ಮನಿಗಿಂತ ಬೇರೆಯಾಗಿರುತ್ತಾನೆ ; ಭೋಜ್ಯವಾದ ಜಗತ್ತಿಗಿಂತಲೂ ಬೇರೆಯಾಗಿರುತ್ತಾನೆ, ಕಾಮಕರ್ಮಗಳು ಹೋಗಿ ಜಗತ್ತಿಗೂ ಪರಮಾತ್ಮನಿಗೂ ನಡುವೆ ಇರುವ ಅಪವರ್ಗವೆಂಬ ಅವಸ್ಥೆಯಲ್ಲಿರುತ್ತಾನೆ. ಅವನಿಗೆ ಪರಮಾತ್ಮೈಕತ್ವದರ್ಶನದಿಂದ ದ್ವೈತದರ್ಶನವು ತೊಲಗಬೇಕಾಗಿರುತ್ತದೆ (ಭಾ. ಭಾ. ೨೫) ಎಂಬುದು ಭ. ಪ್ರ. ರ ಅಂತರಾಲ ಮುಕ್ತಿವಾದ.

ಅಪವರ್ಗವು ಸತ್ತಮೇಲೆ ಸಿಕ್ಕುವ ಸ್ಥಿತಿಯಾದರೆ ಹಿರಣ್ಯಗರ್ಭನಿಗೇ ಪರಮಾತ್ಮೈಕ್ಯೋಪದೇಶವೇ ಹೊರತು ನಮ್ಮಗಳಿಗಿಲ್ಲವೆಂದಾಗುತ್ತದೆ. ಇದಲ್ಲದೆ ಹಿರಣ್ಯಗರ್ಭಪ್ರಾಪ್ತಿಗೆ ಸಾಧನವಾದದ್ದು ಅದರಿಂದ ವಿರಕ್ತನಾಗುವದಕ್ಕೂ ಸಾಧನವಾಗಲಾರದು. ಭೋಜ್ಯದಿಂದ ವಿರಕ್ತನಾಗುವದಕ್ಕೆ ಸಾಧನವಾದದ್ದು ಹಿರಣ್ಯಗರ್ಭಪ್ರಾಪ್ತಿಗೂ ಸಾಧನವಾಗಲಾರದು ; ಪ್ರವೃತ್ತಿಗೆ ಸಾಧನವಾದದ್ದು ನಿವೃತ್ತಿಗೆ ಹೇಗೆ ಸಾಧನವಾದೀತು ? (ಭಾ. ೨೬) ಅಪವರ್ಗರೂಪವಾದ ಅಂತರಾಲಾವಸ್ಥೆಯಿರುವದಕ್ಕೆ ಪ್ರಮಾಣವೂ ಇಲ್ಲ (ಭಾ. ಭಾ. ೧೭) - ಎಂದು ಈ ಮತವನ್ನು ಆಚಾರ್ಯರು ಖಂಡಿಸಿರುತ್ತಾರೆ. ಸುಷುಪ್ತಾವಸ್ಥೆಯಲ್ಲಿರುವಂತೆ ಅವಿದ್ಯಾಕಾಮಕರ್ಮರಹಿತನಾದ ನಿರ್ವಿಶೇಷನೆಂದು ಆತ್ಮನನ್ನು ವಿದ್ಯೆಯಿಂದ ಅರಿತುಕೊಳ್ಳಲು ಅವಿದ್ಯೆಯು ಅತ್ಯಂತವಾಗಿ ಹೋಗಿ ಕೂಡಲೆ ಮುಕ್ತಿಯಾಗುವದು ಎಂಬುದೇ ಅವರ ಮತವು (ಭಾ. ಭಾ. ೨೬೮, ೨೭೦, ೨೭೭). ಬ್ರಹ್ಮವು ನಿತ್ಯದೃಗ್ರೂಪವಾದ ಆತ್ಮನೇ ಆಗಿರುವದರಿಂದ ಬ್ರಹ್ಮವಿದ್ಯೆಯಿಂದ ಅದನ್ನು ವಿಷಯೀಕರಿಸಿ ತಿಳಿದುಕೊಳ್ಳಬೇಕಾದದ್ದೇನೂ ಇರುವದಿಲ್ಲ ; ಅವಿದ್ಯಾಧ್ಯಾರೋಪಣೆಯ ನಿವೃತ್ತಿಯನ್ನೇ ಬ್ರಹ್ಮವಿದ್ಯೆ ಎಂದು ಕರೆಯುತ್ತೇವೆ (೧-೧೬೨) ಎಂದು

ಅವರು ವಿದ್ಯಾಸ್ವರೂಪವನ್ನು ವಿಶದೀಕರಿಸಿರುತ್ತಾರೆ. ಮುಕ್ತಿಯ ಸ್ವರೂಪವನ್ನೂ ಅದು ಅವಿದ್ಯಾನಿವೃತ್ತಿಯಿಂದಮಾತ್ರವೇ ದೊರಕುವದೆಂಬುದನ್ನೂ (ಭಾ. ಭಾ. ೨೭೧ ರಿಂದ ೨೯೯) ಅವರು ವಿಸ್ತಾರವಾಗಿ ಪ್ರತಿಪಾದಿಸಿರುತ್ತಾರೆ. ಅವಿದ್ಯೆಯೆಂಬುದು ಅತದ್ಧರ್ಮಾರೋಪಣರೂಪವಾದ ತಪ್ಪುತಿಳಿವಳಿಕೆ, ಅದು ಆತ್ಮನಿಂದ ಉಂಟಾಗಿರುವದಿಲ್ಲ, ಆತ್ಮನಲ್ಲಿರುವದೂ ಇಲ್ಲ. ಆದ್ದರಿಂದ ಅವಿದ್ಯಾದೃಷ್ಟಿಯಿಂದಲೇ ಅದು ಬ್ರಹ್ಮವನ್ನು ಆಶ್ರಯಿಸಿಕೊಂಡಿರುತ್ತದೆ, ಬ್ರಹ್ಮವನ್ನು ವಿಷಯೀಕರಿಸಿಕೊಂಡಿರುತ್ತದೆ (೧-೧೫೨, ೧೫೩) ಎಂದು ವ್ಯವಹರಿಸುವೆವು ; ನಿಜವಾಗಿ ಅವಿದ್ಯೆಯು ಆತ್ಮನಲ್ಲಿಲ್ಲವೇ ಇಲ್ಲವಾದ್ದರಿಂದ ಅವಿದ್ಯಾಕೃತವಿಶೇಷವೂ ಆತ್ಮನಲ್ಲಿಲ್ಲ (ಭಾ. ಭಾ. ೨೭೪). ಅವಿದ್ಯಾನಿವೃತ್ತಿಗಾಗಿಯೇ ಶಾಸ್ತ್ರೋಪದೇಶವು ಬೇಕಾಗಿರುವದರಿಂದ ಈ ಪಕ್ಷದಲ್ಲಿ ಉಪದೇಶವು ವ್ಯರ್ಥವೆಂಬುದೂ ಹೊಂದುವದಿಲ್ಲ (೧-೧೫೪ ; ಭಾ. ಭಾ. ೨೭೪) ಎಂಬುದು ಆಚಾರ್ಯರ ನಿರ್ವಿಶೇಷಾತ್ಮವಾದವು.

(೩) ಮೋಕ್ಷದಲ್ಲಿ ಜೀವನ್ಮುಕ್ತಿ, ವಿದೇಹಮುಕ್ತಿ - ಎಂಬ ವಿಭಾಗವನ್ನು ಒಪ್ಪಿರುವ ಪಕ್ಷವೂ ಮೋಕ್ಷಾವಸ್ಥೆಯಲ್ಲಿ ಹೊಸ ವಿಜ್ಞಾನಾನಂದಗಳು ಅಭಿವ್ಯಕ್ತವಾಗುವವೆಂದೂ (ಭಾ. ಭಾ. ೨೭೩) ಆಗ ಬ್ರಹ್ಮದಲ್ಲಿರುವ ಆನಂದವು ಸಂವೇದ್ಯವಾಗಿರುತ್ತದೆಯೆಂದೂ (ಭಾ. ಭಾ. ೧೩೮) ಕೆಲವರು ಹೇಳುತ್ತಾರೆಂದು ಆಚಾರ್ಯರು ಅನುವಾದಮಾಡಿಕೊಂಡಿರುವ ಪೂರ್ವಪಕ್ಷಗಳು, ಭ.ಪ್ರ.ರವೇ ಎಂದು ಊಹಿಸುವದಕ್ಕೆಡೆಯಿದೆ. ಈ ವಾದಗಳನ್ನು ತಳ್ಳಿಹಾಕಿ ಜ್ಞಾನಿಗೆ ಬದುಕಿದ್ದಾಗಿನ ಸ್ವರೂಪಕ್ಕಿಂತ ಸತ್ತಬಳಿಕ ಬೇರೊಂದಾಗುತ್ತದೆ ಎಂದು ಕಲ್ಪಿಸುವದು ಅನ್ಯಾಯವಾದದ್ದು : ಬ್ರಹ್ಮದಲ್ಲಿ ವಿಜ್ಞಾನಾನಂದಗಳು ನಿತ್ಯಾಭಿವ್ಯಕ್ತವಾಗಿರುವವಾದ್ದರಿಂದ ಮುಕ್ತಾಮುಕ್ತಾವಸ್ಥೆಯನ್ನು ಪಡೆಯುವ ಆತ್ಮನು ಅದಕ್ಕಿಂತ ವ್ಯತಿರಿಕ್ತನೆಂದಾಗುವನೆಂಬ ಅನಿಷ್ಟಾಪತ್ತಿಯನ್ನು ಪೂರ್ವಪಕ್ಷಿಗಳಿಗೆ ತೋರಿಸಿ ಅವಿದ್ಯಾನಿವೃತ್ತಿಯೇ ಮುಕ್ತಿಯು (ಭಾ. ಭಾ. ೨೭೨), ಮುಕ್ತಿಯೆಂಬುದು ಒಂದು ವಿಶೇಷಾವಸ್ಥೆಯಲ್ಲ - ಎಂದು ಸಿದ್ಧಾಂತವನ್ನು ಹೇಳಿರುತ್ತಾರೆ. ವಿಜ್ಞಾನಕ್ಕೆ ಆನಂದವು ವಿಷಯವಾದರೆ ಬ್ರಹ್ಮಾದ್ವೈತವಾದಕ್ಕೆ ವಿರೋಧವಾಗುತ್ತದೆಯಾದ್ದರಿಂದ ಬ್ರಹ್ಮದ ವಿಜ್ಞಾನಾನಂದಗಳು ಬೇರೆಬೇರೆಯಲ್ಲ ; ಬ್ರಹ್ಮವು ವಿಜ್ಞಾನಾನಂದಸ್ವರೂಪವೇ ಆಗಿದೆ (ಭಾ. ಭಾ. ೧೩೮) ಎಂದು ಎಲ್ಲರೂ ಒಪ್ಪಬೇಕೆಂದು ಆಚಾರ್ಯರು ತೀರ್ಮಾನಿಸಿರುತ್ತಾರೆ.

ಉಪಸಂಹಾರ

ಈ ಪೀಠಿಕೆಯಲ್ಲಿ ನಾವು ಚರ್ಚಿಸುವದಕ್ಕೆ ಅವಕಾಶವಿಲ್ಲದ್ದರಿಂದ ಬಿಟ್ಟಿರುವ ವಿಷಯಗಳು ಹಲವು ಇವೆ. ಆಚಾರ್ಯರ ಕಾಲಕ್ಕೆ ಇದ್ದ ಅದ್ವೈತಿಗಳ ವಾದಗಳ ಒಳಪಂಗಡಗಳ ವಿವೇಚನೆಯನ್ನು ಇಲ್ಲಿ ಮಾಡಿಲ್ಲ; ಆಚಾರ್ಯರು ಉಪಾಸನೆಗಳ ವಿಷಯದಲ್ಲಿ ಖಿಲಕಾಂಡದಲ್ಲಿ ಪ್ರಕಟಿಸಿರುವ ಅಭಿಪ್ರಾಯಗಳನ್ನಾಗಲಿ ಉಪಾಸ್ಯ ಜ್ಞೇಯಬ್ರಹ್ಮವಿವೇಚನೆಯನ್ನಾಗಲಿ ಸಮಾಲೋಚನೆ ಮಾಡಿಲ್ಲ. ಈಗಿನ ಹೊಸ ವೇದಾಂತಪ್ರಕ್ರಿಯೆಗಳ ವಿಷಯದಲ್ಲಿ ಈ ಭಾಷ್ಯದೃಷ್ಟಿಯಿಂದ ಜಿಜ್ಞಾಸುಗಳಲ್ಲಿ ಯಾವ ಪ್ರತಿಕ್ರಿಯೆಯುಂಟಾಗಬಹುದೆಂಬುದನ್ನು ತಿಳಿಸುವದೂ ಆಗಿಲ್ಲ. ಆದರೂ ಇಲ್ಲಿ ನಾವು ಮಾಡಿರುವ ಭರ್ತೃಪ್ರಪಂಚರ ಮತದ ಸಂಕ್ಷಿಪ್ತವಾದ ತುಲನಾತ್ಮಕ ವಿಮರ್ಶೆಯಿಂದ ವಿಚಕ್ಷಣರಾದ ಓದುಗರಿಗೆ ಈ ವಿಷಯದಲ್ಲಿ ಹಲವು ಸೂಚನೆಗಳು ಹೊಳೆಯಬಹುದೆಂದು ನಮ್ಮ ನಂಬಿಕೆ. ಆಚಾರ್ಯರ ವೇದಾಂತ ಪ್ರಕ್ರಿಯೆಯ ಅಸಾಧರಣಸ್ವರೂಪದ ಕಲ್ಪನೆಯು ಈ ಭಾಷ್ಯಾನುವಾದದಿಂದ ತಕ್ಕಮಟ್ಟಿಗಾದರೂ ಪಾಚಕರಿಗೆ ದೊರೆತರೆ ನಾವು ಧನ್ಯರು.

ಜಯ ಸಂ॥ ಜ್ಯೇಷ್ಠ ಬಹುಳ **ಅನುವಾದಕರು.**
ತೃತೀಯಾ (೧೯೫೪)

ಉಪನಿಷತ್ತಿನ ಸಾರ

ಮೂರನೆಯ ಅಧ್ಯಾಯ

ಒಂದನೆಯ ಬ್ರಾಹ್ಮಣದ ಸಾರ

ವಿ. ಸೂ. - ಇಲ್ಲಿರುವ ಸಂಖ್ಯೆಗಳು ಬ್ರಾಹ್ಮಣದ ಕಂಡಿಕೆಗಳನ್ನು ಸೂಚಿಸುವವು.

೧-೨. ಜನಕವೈದೇಹನು ಬಹುದಕ್ಷಿಣಾಕವಾದ ಯಜ್ಞವನ್ನು ಮಾಡಿದನು. ಅಲ್ಲಿ ಕುರುಪಾಂಚಾಲದೇಶಗಳ ಬ್ರಾಹ್ಮಣರು ಒಟ್ಟುಗೂಡಿದ್ದರು. ಆ

ಜನಕನಿಗೆ ಅವರಲ್ಲೆಲ್ಲ ಬ್ರಹ್ಮಿಷ್ಠನು ಯಾವನೋ ತಿಳಿಯಬೇಕೆಂಬ ಕುತೂಹಲ ವುಂಟಾಯಿತು. ಅವನು ಒಂದೊಂದು ಗೋವಿನ ಕೋಡಿಗೆ ಹತ್ತುಹತ್ತು ಪಾದ ಗಳಂತೆ ಚಿನ್ನವನ್ನು ಕಟ್ಟಿಸಿ ಸಾವಿರಗೋವುಗಳನ್ನು ಗೋಷ್ಠದಲ್ಲಿ ನಿಲ್ಲಿಸಿ "ಪೂಜ್ಯರೆ, ತಮ್ಮಲ್ಲಿ ಬ್ರಹ್ಮಿಷ್ಠರಾದವರು ಈ ಗೋಗಳನ್ನು ಹೊಡೆದುಕೊಂಡು ಹೋಗ ಬಹುದು !" ಎಂದನು. ಯಾವ ಬ್ರಾಹ್ಮಣರೂ ಅವನ್ನು ಮುಟ್ಟುವಷ್ಟು ಎದೆಗಾರ ರಾಗಲಿಲ್ಲ. ಯಾಜ್ಞವಲ್ಕ್ಯನು ಮಾತ್ರ ತನ್ನ ಶಿಷ್ಯನ ಮೂಲಕ ಅವುಗಳನ್ನು ಮನೆಗೆ ಅಟ್ಟಿಸಿದನು. ಆಗ ಬ್ರಾಹ್ಮಣರು ಅವನನ್ನು ಒಬ್ಬೊಬ್ಬರಾಗಿ ವಾದದಲ್ಲಿ ಜಯಿಸುವದ ಕ್ಕೆಂದು ಪ್ರಶ್ನಿಸಿದರು. ಮೊದಲು ಹೋತೃವಾದ ಅಶ್ವಲನು ಕೇಳಿದ ಪ್ರಶ್ನೆಗೆ ಕೊಟ್ಟ ಉತ್ತರಗಳು ಈ ಬ್ರಾಹ್ಮಣದಲ್ಲಿವೆ.

೩. ಕರ್ಮದ ಸಾಧನಜಾತವೆಲ್ಲ ಮೃತ್ಯುವಿನಿಂದ ಸ್ವಾಭಾವಿಕವಾದ ಆಸಂಗಸಹಿತವಾದ ಕರ್ಮಲಕ್ಷಣವಾದ ಮೃತ್ಯುವಿನಿಂದ - ವ್ಯಾಪ್ತವಾಗಿ ವಶೀಕೃತವಾಗಿದೆಯಲ್ಲ, ಇದನ್ನು ಯಾವ ಉಪಾಸನೆಯಿಂದ ಯಜಮಾನನು ಗೆದ್ದುಕೊಳ್ಳಬಹುದು ? - ಎಂಬುದು ಒಂದು ಪ್ರಶ್ನೆ. ಅದಕ್ಕೆ ಉತ್ತರವೇನೆಂದರೆ, ಯಜಮಾನನ ವಾಕ್ಕೇ, ಹೋತೃವೇ, ಅಧಿದೈವವಾಗಿ ಅಗ್ನಿಯು. ಆದ್ದರಿಂದ ಅವನು ಅಗ್ನಿಸ್ವರೂಪದಿಂದ ಉಪಾಸನೆ ಮಾಡುವದೇ ಪರಿಚ್ಛಿನ್ನರೂಪವನ್ನು ಬಿಟ್ಟು ಆಗುವ ಮುಕ್ತಿಗೆ ಸಾಧನವು. ಈ ಅಧಿದೈವಿಕದೃಷ್ಟಿರೂಪವಾದ ಮುಕ್ತಿಸಾಧನವೇ ಅತಿಮುಕ್ತಿಗೆ ಎಂದರೆ ಅಗ್ನಿಭಾವವನ್ನು ಪಡೆಯುವದಕ್ಕೆ ಸಾಧನವು.

೪. ಅಹೋರಾತ್ರರೂಪವಾದ ಕಾಲಲಕ್ಷಣಮೃತ್ಯುವಿನಿಂದಲೂ ಕರ್ಮ ಸಾಧನವು ವ್ಯಾಪ್ತವಾಗಿ ವಶೀಕೃತವಾಗಿರುತ್ತದೆ. ಅದನ್ನು ಮೀರಿ ಮುಕ್ತನಾಗುವದು ಹೇಗೆ ? - ಎಂಬುದು ಎರಡನೆಯ ಪ್ರಶ್ನೆ. ಅದಕ್ಕೆ ಉತ್ತರವಿದು : ಯಜಮಾನನ ಚಕ್ಷುಸ್ಸೇ, ಅಧ್ವರ್ಯುವೇ, ಅಧಿದೈವವಾಗಿ ಆದಿತ್ಯನು. ಅವೆರಡು ಸಾಧನಗಳನ್ನೂ ಅಧಿದೈವತವಾದ ಆದಿತ್ಯರೂಪದಿಂದ ಉಪಾಸನೆಮಾಡುವದೇ ಮುಕ್ತಿಗೂ ಅತಿಮುಕ್ತಿಗೂ ಸಾಧನವು.

೫. ಇನ್ನು ತಿಥ್ಯಾದಿರೂಪವಾದ ಕಾಲಲಕ್ಷಣಮೃತ್ಯುವಿನಿಂದ ಅತಿಮುಕ್ತಿ ಹೇಗೆ? ಎಂಬುದು ಮೂರನೆಯ ಪ್ರಶ್ನೆ. ಯಜಮಾನನ ಪ್ರಾಣವೂ ಉದ್ಗಾತೃವೂ ನಿಜವಾಗಿ ಅಧಿದೈವತವಾಗಿ ವಾಯುವೇ. ಅವೆರಡನ್ನೂ ವಾಯುದೃಷ್ಟಿಯಿಂದ ಉಪಾಸನೆಮಾಡುವದೇ ಮುಕ್ತಿಗೂ ಅತಿಮುಕ್ತಿಗೂ ಸಾಧನವು ಎಂಬುದು ಉತ್ತರ.

೬. ಹಿಂದೆ ಹೇಳಿದಂತೆ ಅತಿಮುಕ್ತಿಯಾಗುವದಕ್ಕೆ ಆಶ್ರಯವೇನು ? ಎಂಬುದು ನಾಲ್ಕನೆಯ ಪ್ರಶ್ನೆ. ಯಜಮಾನನ ಮನಸ್ಸೂ ಬ್ರಹ್ಮವೆಂಬ ಋತ್ವಿಜನೂ ಅಧಿದೈವತವಾಗಿ ಅಪರಿಚ್ಛಿನ್ನವಾದ ಚಂದ್ರನೇ. ಆ ಚಂದ್ರನೆಂಬ ದೃಷ್ಟಿಯಿಂದ ಎರಡನ್ನೂ ಉಪಾಸನೆಮಾಡುವದೇ ಅವುಗಳಿಂದ ಮುಕ್ತಿಯಾಗುವದಕ್ಕೂ ಅವುಗಳನ್ನು ಮೀರುವ ಅತಿಮುಕ್ತಿಗೂ ಸಾಧನವು ಎಂಬುದು ಉತ್ತರವು.

೭. ಇಲ್ಲಿಂದ ಮುಂದಕ್ಕೆ ಸಂಪತ್ತುಗಳು. ಇವುಗಳಲ್ಲಿ ಫಲವನ್ನೇ ಸಾಧನಗಳಲ್ಲಿ ಉಪಾಸನೆಯಿಂದ ಸಂಪಾದಿಸಬೇಕಾಗುತ್ತದೆ. ಹೋತೃವು ಶಸ್ತ್ರಗಳನ್ನು ಶಂಸನಮಾಡುವ ಋಗ್ಜಾತಿಗಳೆಷ್ಟು ? ಎಂದರೆ ಪುರೋನುವಾಕ್ಯಾ, ಯಾಜ್ಯಾ, ಶಸ್ಯಾ- ಎಂದು ಮೂರು ಜಾತಿಗಳು. ಅವುಗಳಿಂದ ಗೆದ್ದುಕೊಳ್ಳಬೇಕಾದದ್ದೇನು ? ಎಲ್ಲಾ ಪ್ರಾಣಿಗಳನ್ನೂ ಗೆದ್ದುಕೊಳ್ಳುತ್ತಾನೆ ; ಆದ್ದರಿಂದ ಹಾಗೆ ಈ ಫಲವನ್ನು ನಾನು ಹೊಂದುತ್ತಿದ್ದೇನೆ - ಎಂದು ಹೋತೃವು ಸಂಪಾದನೆಮಾಡಬೇಕು.

೮. ಅಧ್ವರ್ಯುವು ಎಷ್ಟು ಆಹುತಿಗಳನ್ನು ಕೊಡುತ್ತಾನೆ ? ಅವನು ಅವು ಗಳಿಂದ ಗೆದ್ದುಕೊಳ್ಳಬೇಕಾದದ್ದೇನು ? ಎಂಬುದು ಆರನೆಯ ಪ್ರಶ್ನೆ. ಹುತವಾದಾಗ ಎದ್ದುರಿಯುವವು ಒಂದು ಜಾತಿ ; ಅವುಗಳಿಂದ ಉಜ್ಜ್ವಲವಾದ ದೇವಲೋಕವನ್ನೇ ಗೆದ್ದುಕೊಳ್ಳುವನು. ಹುತವಾದಾಗ ಅತಿಯಾಗಿ ಶಬ್ದಮಾಡುವವು ಎರಡನೆಯ ಜಾತಿ ; ಅವುಗಳಿಂದ ಪಿತೃಲೋಕವನ್ನೇ ಗೆದ್ದುಕೊಳ್ಳುವನು. ಹುತವಾದಾಗ ಕೆಳಕ್ಕೆ ಇಳಿಯುವವು ಮೂರನೆಯ ಜಾತಿ ; ಅವುಗಳಿಂದ ಮನುಷ್ಯಲೋಕವನ್ನೇ ಗೆದ್ದುಕೊಳ್ಳುವನು. ಉಜ್ಜ್ವಲವಾಗಿರುವದೆಂಬ ಹೋಲಿಕೆ, ಶಬ್ದವಾಗುವದೆಂಬ

ಇರುವದರಿಂದ ಆಯಾ ಆಹುತಿಗಳಿಂದ ಆಯಾ ಲೋಕವನ್ನು ಗೆದ್ದುಕೊಳ್ಳು ತಿದೇನೆಂದು ಸಂಪಾದನೆಮಾಡಬೇಕು ಎಂಬುದು ಉತರ.

೯. ಬ್ರಹ್ಮನೆಂಬ ಋತ್ವಿಜನು ಯಾವ ದೇವತೆಯಿಂದ ಯಜ್ಞವನ್ನು ಕಾಪಾಡು ತ್ತಾನೆ? ಅದರಿಂದ ಗೆದ್ದುಕೊಳ್ಳಬೇಕಾದದ್ದೇನು ? ಎಂಬುದು ಏಳನೆಯ ಪ್ರಶ್ನೆ. ಬ್ರಹ್ಮನು ಮನಸ್ಸೆಂಬ ಒಂದೇ ದೇವತೆಯಿಂದ ಯಜ್ಞವನ್ನು ಕಾಪಾಡುತ್ತಾನೆ. ಮನಸ್ಸೂ ವೃತ್ತಿವಿಶೇಷಗಳಿಂದ ಅನಂತವಾಗಿದೆ, ಅಭಿಮಾನಿದೇವತೆಗಳಿಂದ ವಿಶ್ವೇದೇವರೂ ಅನಂತವಾಗಿರುತ್ತಾರೆ. ಆದ್ದರಿಂದ ವಿಶ್ವೇದೇವತೆಗಳೆಂಬ ದೃಷ್ಟಿಯಿಂದ

ಉಪಾಸನೆಮಾಡಿದರೆ ಅನಂತವಾದ ಲೋಕವನ್ನೇ ಗೆದ್ದುಕೊಳ್ಳುತ್ತಾನೆ. ಆದ್ದರಿಂದ ಹಾಗೆಂದು ಸಂಪಾದನೆಮಾಡಬೇಕು ಎಂಬುದು ಉತ್ತರ.

೧೦. ಉದ್ಗಾತೃವು ಎಷ್ಟು ಸ್ತೋತ್ರಿಯಗಳಿಂದ ಸ್ತುತಿಮಾಡುವನು ? ಅಧ್ಯಾತ್ಮವಾಗಿ ಅವುಗಳು ಯಾವವು ? ಹಾಗೆಂದು ಉಪಾಸನೆಮಾಡಿದರೆ ದೊರಕುವ ಫಲವೇನು ? ಎಂಬುದು ಕೊನೆಯ ಪ್ರಶ್ನೆ. ಋಗ್ವಾಜಿಗಳಿಗೆ ಅನುಗುಣವಾಗಿ ಪುರೋನುವಾಕ್ಯಾ, ಯಾಜ್ಯಾ, ಶಸ್ಯಾ – ಎಂದು ಮೂರು ಸ್ತೋತ್ರಿಯಗಳಿರುವವು. ಅಧ್ಯಾತ್ಮವಾಗಿ ಪ್ರಾಣವೇ ಪುರೋನುವಾಕ್ಯವೆಂದು ಸಂಪಾದನೆಮಾಡಿದರೆ ಪೃಥಿವೀಲೋಕವನ್ನೂ, ಅಪಾನವೇ ಯಾಜ್ಯಾ ಎಂದು ಸಂಪಾದನೆಮಾಡಿದರೆ ಅಂತರಿಕ್ಷಲೋಕವನ್ನೂ, ವ್ಯಾನವೇ ಶಸ್ಯವೆಂದು ಸಂಪಾದನೆಮಾಡಿದರೆ ದ್ಯುಲೋಕವನ್ನೂ ಗೆದ್ದುಕೊಳ್ಳುವನು – ಎಂಬುದು ಉತ್ತರ.

ಹೀಗೆ ತನ್ನ ಎಲ್ಲಾ ಪ್ರಶ್ನೆಗಳಿಗೂ ಉತ್ತರವು ಬಂದದ್ದರಿಂದ ಅಶ್ವಲನು ಸುಮ್ಮನಾದನು.

ಎರಡನೆಯ ಬ್ರಾಹ್ಮಣದ ಸಾರ

೧-೯. ಆಗ ಈ ಯಾಜ್ಞವಲ್ಕ್ಯನನ್ನು ಜಾರತ್ಕಾರವಆರ್ತಭಾಗನು ಹೀಗೆಂದು ಕೇಳಿದನು : 'ಯಾಜ್ಞವಲ್ಕ್ಯನೆ, ಗ್ರಹಗಳು ಎಷ್ಟು ? ಅತಿಗ್ರಹಗಳು ಎಷ್ಟು?' ಗ್ರಹಗಳು ಎಂಟು, ಅತಿಗ್ರಹಗಳು ಎಂಟು– ಎಂದು ಯಾಜ್ಞವಲ್ಕ್ಯನು ಹೇಳಿದ್ದಕ್ಕೆ ಅವು ಯಾವವು ? ಎಂದು ಕೇಳಿದನು. ಯಾಜ್ಞವಲ್ಕ್ಯನು : ಘ್ರಾಣವೇ ಗ್ರಹವು, ಅದು ಗಂಧವೆಂಬ ಅತಿಗ್ರಹದಿಂದ ಹಿಡಿಯಲ್ಪಟ್ಟಿದೆ ; ವಾಕ್ಕೇ ಗ್ರಹವು, ಅದು ನಾಮವೆಂಬ ಅತಿಗ್ರಹದಿಂದ ಹಿಡಿಯಲ್ಪಟ್ಟಿದೆ ; ಜಿಹ್ವೆಯೇ ಗ್ರಹವು, ಅದು ರಸವೆಂಬ ಅತಿಗ್ರಹದಿಂದ ಹಿಡಿಯಲ್ಪಟ್ಟಿದೆ ; ಚಕ್ಷುಸ್ಸೇ ಗ್ರಹವು, ಅದು ರೂಪವೆಂಬ ಅತಿಗ್ರಹದಿಂದ ಹಿಡಿಯಲ್ಪಟ್ಟಿದೆ ; ಶ್ರೋತೃವೇ ಗ್ರಹವು, ಅದು ಶಬ್ದವೆಂಬ ಅತಿಗ್ರಹದಿಂದ ಹಿಡಿಯಲ್ಪಟ್ಟಿದೆ ; ಮನಸ್ಸೇ ಗ್ರಹವು, ಅದು ಕಾಮವೆಂಬ ಅತಿಗ್ರಹದಿಂದ ಹಿಡಿಯಲ್ಪಟ್ಟಿದೆ ; ತ್ವಕ್ಕೇ ಗ್ರಹವು, ಅದು ಸ್ಪರ್ಶವೆಂಬ ಅತಿಗ್ರಹದಿಂದ ಹಿಡಿಯಲ್ಪಟ್ಟಿದೆ. ಹಸ್ತವೇ ಗ್ರಹವು ಅದು ಕರ್ಮವೆಂಬ ಅತಿಗ್ರಹದಿಂದ ಗೃಹೀತವಾಗಿದೆ. ಹೀಗೆ ಎಂಟು ಗ್ರಹಗಳು, ಎಂಟು ಅತಿಗ್ರಹಗಳು – ಎಂದು.

೧೦. ಆರ್ತಭಾಗನು 'ಯಾಜ್ಞವಲ್ಕ್ಯನೆ, ಎಲ್ಲವೂ ಮೃತ್ಯುವಿಗೆ ಅನ್ನವಾಗಿದೆಯಷ್ಟೆ ; ಈ ಮೃತ್ಯುವಿಗೂ ಮೃತ್ಯುವಾಗಿರುವದು ಇದೆಯೊ ?' ಎಂದನು. ಮೃತ್ಯುವಿಗೂ ಮೃತ್ಯುವಾದ ಸರ್ವಮೃತ್ಯುವುಂಟು ; ಏಕೆಂದರೆ ಅಗ್ನಿ ಎಂಬ ಮೃತ್ಯುವಿಗೆ ಅಪ್ಪೆಂಬ ಮೃತ್ಯುವಿರುವದು ಲೋಕದಲ್ಲಿ ಕಂಡಿದೆ. ಇದರಂತೆ ಗ್ರಹಾತಿಗ್ರಹಗಳೆಂಬ ಮೃತ್ಯುವನ್ನು ಆತ್ಮಜ್ಞಾನವೆಂಬ ಮೃತ್ಯು ತಿಂದುಹಾಕುವದು- ಎಂದು ಯಾಜ್ಞವಲ್ಕ್ಯನು ಉತ್ತರವನ್ನು ಕೊಟ್ಟನು.

೧೧-೧೨. ಆರ್ತಭಾಗನು 'ಯಾಜ್ಞವಲ್ಕ್ಯನೆ, ಜ್ಞಾನಿಯು ಮೃತನಾದಾಗ ಇವನ ಶರೀರವನ್ನು ಬಿಟ್ಟು ಪ್ರಾಣಗಳು ಉತ್ಕ್ರಾಂತವಾಗುವವೊ, ಇಲ್ಲವೊ ?' - ಎಂದು ಕೇಳಿದನು. ಯಾಜ್ಞವಲ್ಕ್ಯನು ''ಇಲ್ಲ. ಅವನ ಪ್ರಾಣಗಳು ಈ ಪರಮಾತ್ಮನಲ್ಲಿಯೇ ಸೇರಿ ಒಂದಾಗಿಬಿಡುವವು'' ಎಂದನು. ಜ್ಞಾನಿಯು ಸತ್ತಾಗ ಏನು ಉಳಿದುಕೊಂಡಿರುತ್ತದೆ ?'' ಎಂದು ಆರ್ತಭಾಗನು ಕೇಳಲು ''ನಾಮವೊಂದು ವ್ಯವಹಾರದೃಷ್ಟಿಯಿಂದ ಉಳಿದುಕೊಂಡಿರುತ್ತದೆ ; ಪರಮಾರ್ಥವಾಗಿ ಏನೇನೂ ಉಳಿಯುವದೇ ಇಲ್ಲ'' ಎಂದು ಯಾಜ್ಞವಲ್ಕ್ಯನು ಉತ್ತರವನ್ನು ಕೊಟ್ಟನು.

೧೩. ಆರ್ತಭಾಗನು ''ಯಾಜ್ಞವಲ್ಕ್ಯನೆ, **ಅಜ್ಞಾನದ ಪುರುಷನ ವಾಕ್ಕು ಅಗ್ನಿಯಲ್ಲಿ, ಪ್ರಾಣವು** ವಾಯುವಿನಲ್ಲಿ ಚಕ್ಷುಸ್ಸು ಆದಿತ್ಯನಲ್ಲಿ ಮನಸ್ಸು ಚಂದ್ರನಲ್ಲಿ ಶ್ರೋತ್ರವು ದಿಕ್ಕುಗಳಲ್ಲಿ, ಶರೀರವು ಪೃಥಿವಿಯಲ್ಲಿ, ಹೃದಯಾಕಾಶವು ಆಕಾಶದಲ್ಲಿ, ಮೈಗೂದಲು ಗಿಡಗಳಲ್ಲಿ, ತಲೆಗೂದಲು ಮರಗಳಲ್ಲಿ, ರಕ್ತವೂ ರೇತಸ್ಸೂ ಅಪ್ಪಿನಲ್ಲಿ ಸೇರುತ್ತವೆಯಲ್ಲವೆ ? ಆಗ ಇವನು ಏನನ್ನು ಆಶ್ರಯಿಸಿಕೊಂಡಿರುವನು ? ಪುನರಿಂದ ಮತ್ತೆ ಇವನು ಶರೀರಗ್ರಹಣವನ್ನು ಮಾಡುವನು ?'' ಎಂದು ಕೇಳಿದನು. ಯಾಜ್ಞವಲ್ಕ್ಯನು ''ಇದು ಜನರ ಗುಂಪಿನಲ್ಲಿ ಜಲ್ಪದಿಂದ ನಿರ್ಣಯಿಸಬಹುದಾದ ಪ್ರಶ್ನೆಯಲ್ಲ, ಏಕಾಂತದಲ್ಲಿ ಚರ್ಚಿಸೋಣ ಬಾ '' ಎಂದು ಆರ್ತಭಾಗನನ್ನು ಕೈಹಿಡಿದು ಕರೆದುಕೊಂಡುಹೋದನು. ಅವರು ಏಕಾಂತದಲ್ಲಿ ಕರ್ಮವೊಂದೇ ಪುನರ್ಜನ್ಮಕ್ಕೆ ಮುಖ್ಯಹೇತುವೆಂದು ಹೇಳಿದರು ; ಇತರ ಕಾರಣಗಳಿದ್ದರೂ ಕರ್ಮವೇ ಮುಖ್ಯಹೇತುವೆಂದು ಅದನ್ನೇ ಹೊಗಳಿದರು. ಈ ರೀತಿಯಲ್ಲಿ ತನ್ನ ಎಲ್ಲಾ ಪ್ರಶ್ನೆಗಳಿಗೂ ಯಾಜ್ಞವಲ್ಕ್ಯನು ಉತ್ತರವನ್ನು ಕೊಟ್ಟಿದ್ದರಿಂದ ಆರ್ತಭಾಗನು ಸುಮ್ಮನಾದನು.

ಮೂರನೆಯ ಬ್ರಾಹ್ಮಣದ ಸಾರ

೧. ಈ ಬ್ರಾಹ್ಮಣದಲ್ಲಿ ಕರ್ಮಗಳ ಪರಮಫಲವನ್ನು ಹೇಳಿರುತ್ತದೆ. ಆರ್ತಭಾಗನು ಸುಮ್ಯನಾಗಲು ಭುಜ್ಯುಲಾಹ್ಯಾಯನಿಯು ಯಾಜ್ಞವಲ್ಕ್ಯನನ್ನು ಹೀಗೆಂದು ಪ್ರಶ್ನೆಮಾಡಿದನು. ''ನಾವು ಹಿಂದೆ ಮದ್ರದೇಶದಲ್ಲಿ ಸಂಚರಿಸುತ್ತಿದ್ದಾಗ ಪತಂಜಲಕಾಪ್ಯನ ಮನೆಯಲ್ಲಿ ಒಮ್ಮೆ ಇಳಿದಿದ್ದೆವು. ಅತನ ಮಗಳನ್ನು ಸುಧನ್ವ - ಆಂಗಿರಸನೆಂಬ ಗಂಧರ್ವನು ಹಿಡಿದಿದ್ದನು. ಅವನನ್ನು ಲೋಕಗಳ ಎಲ್ಲೆಯನ್ನು ಕುರಿತು ಪ್ರಶ್ನೆಮಾಡಿದೆವು. ಪಾರಿಕ್ಷಿತರೆಂಬ ಅಶ್ವಮೇಧಯಾಜಿಗಳು ಯಾವ ಗತಿಯನ್ನು ಹೊಂದಿದರು ? ಎಂದು ನಾವು ಕೇಳಿದ್ದಕ್ಕೆ ಅವನು ನಮಗೆ ಉತ್ತರವನ್ನು ಹೇಳಿರುತ್ತಾನೆ. ನಿನಗೆ ಈ ವಿಷಯದ ತಿಳಿವಳಿಕೆಯಿದೆಯೆ ? ಇಲ್ಲದಿದ್ದರೆ ನೀನು ವಾದದಲ್ಲಿ ಸೋತಂತೆ ಆಯಿತಲ್ಲವೆ ?''

೨. ಇದಕ್ಕೆ ಯಾಜ್ಞವಲ್ಕ್ಯನು ಉತ್ತರಕೊಟ್ಟದ್ದೇನೆಂದರೆ ''ಗಂಧರ್ವನು ನಿಮಗೆ ಇದೇ ಉತ್ತರವನ್ನು ಕೊಟ್ಟಿರಬೇಕು. ಪಾರಿಕ್ಷಿತರು ಹಿಂದಿನ ಅಶ್ವಮೇಧಯಾಜಿಗಳು ಹೋದಲ್ಲಿಗೇ ಹೋದರು. ಅಶ್ವಮೇಧಯಾಜಿಗಳಿಗೆ ಗತಿ ಯಾವದೆಂದರೆ, ಸೂರ್ಯರಥವು ಒಂದು ದಿನಕ್ಕೆ ಸಂಚರಿಸುವಷ್ಟರ ಮೂವತ್ತೆರಡರಷ್ಟನ್ನು ಆಕ್ರಮಿಸಿರುವ ಭಾಗವು ಲೋಕವೆನಿಸುವದು. ಅದರ ಸುತ್ತಲೂ ಅದರ ಎರಡರಷ್ಟು ಸ್ಥಲವನ್ನು ಪೃಥಿವಿಯು ಆಕ್ರಮಿಸಿರುವದು ; ಅದರ ಸುತ್ತಲೂ ಅದರ ಎರಡರಷ್ಟು ಸ್ಥಲವನ್ನು ಘನೋದವೆಂಬ ಸಮುದ್ರವು ಆಕ್ರಮಿಸಿರುವದು. ಇನ್ನೂ ಮುಂದಕ್ಕೆ ಅಂಡಕಪಾಲಗಳ ನಂದು ಇರುತ್ತದೆ. ಅದು ಕ್ಷೌರಕತ್ತಿಯ ಅಲುಗಿನಷ್ಟು ಅಥವಾ ನೊಣದ ರೆಕ್ಕೆಯಷ್ಟು ಸೂಕ್ಷ್ಮವಾಗಿರುತ್ತದೆ. ಅದರ ಮೂಲಕವಾಗಿ ಅಶ್ವಮೇಧಾಗ್ನಿಯು ವಾಯುವಿಗೆ ಪಾರಿಕ್ಷಿತರನ್ನು ಸಮರ್ಪಿಸಿದನು. ಆ ವಾಯುವು ಅವರನ್ನು ತನ್ನ ಸ್ವರೂಪವನ್ನು ಹೊಂದಿಸಿದವನಾಗಿ ಹಿಂದಿನ ಅಶ್ವಮೇಧಯಾಜಿಗಳಿದ್ದ ಸ್ಥಾನಕ್ಕೆ ಒಪ್ಪಿಸಿದನು. ಹೀಗೆಂದು ಆ ಗಂಧರ್ವನು ವಾಯುವನ್ನೇ ಅವರಿಗೆ ಗತಿ - ಎಂದು ಹೊಗಳಿದನು.''

೩. ಹೀಗಿರುವದರಿಂದ ವಾಯುವೇ ವ್ಯಷ್ಟಿದೇವತೆಗಳು, ವಾಯುವೇ ಸಮಷ್ಟಿಯು. ಯಾವನು ಹೀಗೆಂದು ವಾಯ್ವಾತ್ಮನನ್ನು ಉಪಾಸನೆಮಾಡಿ ಸಾಕ್ಷಾತ್ಕರಿಸಿಕೊಳ್ಳುವನೋ ಅವನು ಪುನರ್ಮೃತ್ಯುವನ್ನು ಗೆದ್ದುಕೊಳ್ಳುತ್ತಾನೆ. ತನ್ನ ಪ್ರಶ್ನೆಗೆ ಈ ಉತ್ತರವು ಬಂದ ಬಳಿಕ ಭುಜ್ಯುಲಾಹ್ಯಾಯನಿಯು ಸುಮ್ಯನಾದನು.

ನಾಲ್ಕನೆಯ ಬ್ರಾಹ್ಮಣದ ಸಾರ

೧. ಭುಜ್ಯುವು ಸುಮ್ಮನಾಗಲು ಉಷಸ್ತಚಾಕ್ರಾಯಣನು "ಯಾಜ್ಞವಲ್ಕ್ಯನೆ, ಸಾಕ್ಷಾತ್ತಾಗಿ ಅಪರೋಕ್ಷವಾಗಿ ಸರ್ವಾಂತರನಾಗಿರುವ ಆತ್ಮನನ್ನು ವಿವರಿಸಿ ಹೇಳು' ಎಂದನು. ಯಾಜ್ಞವಲ್ಕ್ಯನು 'ಪ್ರಾಣ, ಅಪಾನ, ವ್ಯಾನ, ಉದಾನ - ಈ ವಾಯುಗಳ ವ್ಯಾಪಾರವನ್ನು ಮಾಡುವವನೇ, ಶರೀರೇಂದ್ರಿಯಗಳ ವ್ಯಾಪಾರವನ್ನೆಲ್ಲ ಮಾಡಿಸುವವನೇ, ನಿನ್ನ ಸರ್ವಾಂತರನಾದ ಆತ್ಮನು" ಎಂದನು.

೨. ಆಗ ಉಷಸ್ತಚಾಕ್ರಾಯಣನಿಂತೆಂದನು : "ಎತ್ತನ್ನಾಗಲಿ ಕುದುರೆಯನ್ನಾಗಲಿ ತೋರಿಸುವವಕ್ಕೆ ಹೊರಟವನು ಬರಿಯ ಚಲನಾದಿಲಿಂಗಗಳಿಂದ ಅದನ್ನು ತಿಳಿಸಿದಂತೆ ಆಯಿತು, ನಿನ್ನ ಉತ್ತರ. ಈ ಆತ್ಮನನ್ನು ನೇರಾಗಿ ತೋರಿಸಿ ಹೇಳು" ಎಂದನು. ಯಾಜ್ಞವಲ್ಕ್ಯನು "ನಾನು ಹೇಳಿದ್ದಕ್ಕಿಂತ ಆತ್ಮನನ್ನು ತಿಳಿಸುವದಕ್ಕೆ ಬೇರೆಯ ಮಾರ್ಗವಿಲ್ಲ. ಆತ್ಮನು ಪ್ರತ್ಯಕ್ಷವಿಷಯನಲ್ಲವಾದ್ದರಿಂದ ಅವನನ್ನು ನೇರಾಗಿ ತಿಳಿಸಿಕೊಡುವದು ಆಗಲಾರದು. ಅವನು ದೃಷ್ಟಿ, ಶ್ರುತಿ, ಮತಿ, ವಿಜ್ಞಾನ - ಮುಂತಾದ ಲೌಕಿಕವೃತ್ತಿಗಳನ್ನೆಲ್ಲ ಬೆಳಗುವವನು ; ಅವನನ್ನು ಕಾಣುವದಾಗಲಿ, ಕೇಳುವದಾಗಲಿ, ಆಲೋಚಿಸುವದಾಗಲಿ, ಅರಿಯುವದಾಗಲಿ, ಆಗಲಾರದು. ಅವನೇ ಸರ್ವಾಂತರಾತ್ಮನು ; ಅವನನ್ನು ಬಿಟ್ಟು ಉಳಿದದ್ದೆಲ್ಲ ವಿನಾಶಿ" ಎಂದನು. ಆ ಬಳಿಕ ಉಷಸ್ತಚಾಕ್ರಾಯಣನು ಸುಮ್ಮನಾದನು.

ಐದನೆಯ ಬ್ರಾಹ್ಮಣದ ಸಾರ

ಇಲ್ಲಿ ಆತ್ಮನಿಗೆ ಮೋಕ್ಷಸಾಧನವಾದ ಸಂನ್ಯಾಸಸಹಿತವಾದ ಆತ್ಮಜ್ಞಾನವನ್ನು ಹೇಳಿದೆ.

ಉಷಸ್ತನು ಸುಮ್ಮನಾಗಲು ಕಹೋಲಕೌಷೀತಕೇಯನು ಯಾಜ್ಞವಲ್ಕ್ಯನನ್ನು ಹೀಗೆಂದು ಕೇಳಿದನು: "ಸಾಕ್ಷಾತ್ತಾಗಿ ಅಪರೋಕ್ಷವಾಗಿರುವ ಬ್ರಹ್ಮವೂ, ಸರ್ವಾಂತರ ಆತ್ಮನೂ ಆಗಿರುವನಲ್ಲ, ಅವನನ್ನು ನನಗೆ ವಿವರಿಸಿ ಹೇಳು."

ಇದಕ್ಕೆ ಯಾಜ್ಞವಲ್ಕ್ಯನು "ಯಾವನು ಹಸಿವುಬಾಯಾರಿಕೆಗಳನ್ನೂ, ಶೋಕವನ್ನೂ, ಮೋಹವನ್ನೂ, ಮುಪ್ಪನೂ ಸಾವನ್ನೂ ಮೀರಿರುವವನೋ ಸಾಕ್ಷಾದಪರೋಕ್ಷಾದ್ಬ್ರಹ್ಮನೋ ಅವನೇ ನಿನ್ನ ಸರ್ವಾಂತರಾತ್ಮನು.

"ಈ ಆತ್ಮನನ್ನು ಅರಿತುಕೊಂಡ ಪೂರ್ವಕಾಲದ ಬ್ರಾಹ್ಮಣರು ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ - ಎಂಬ ಬಯಕೆಗಳನ್ನು ಬಿಟ್ಟು ಪರಮಹಂಸರಾಗಿ ಭಿಕ್ಷಾಚರ್ಯೆಯನ್ನು ಮಾಡುತ್ತಿದ್ದರು. ಸಾಧ್ಯಸಾಧನವೆಲ್ಲ ಏಷಣೆಯೇ ಆಗಿರುವದರಿಂದ ಬ್ರಾಹ್ಮಣನಾದವನು ಅವನ್ನು ಬಿಟ್ಟು ಆತ್ಮಜ್ಞಾನವೆಂಬ ಪಾಂಡಿತ್ಯವನ್ನೂ ಅನಾತ್ಮಪ್ರತ್ಯಯನಿರಾಸವೆಂಬ ಬಾಲ್ಯವನ್ನೂ ಪರಮಾರ್ಥಚಿಂತನವೆಂಬ ಮೌನವನ್ನೂ ಪೂರ್ಣವಾಗಿ ಅಳವಡಿಸಿಕೊಂಡರೆ ಕೃತಕೃತ್ಯನಾಗಿ ಮುಖ್ಯಾರ್ಥದಲ್ಲಿ ಬ್ರಾಹ್ಮಣನೆನಿಸುವನು. ಅವನು ಯಾವದಾದರೊಂದು ಕರ್ಮಾಚರಣೆಯ ನಿಮಿತ್ತದಿಂದ ಬ್ರಾಹ್ಮಣನೆನಿಸಿರುವದಿಲ್ಲ, ಈ ಬ್ರಹ್ಮನಿಷ್ಠೆಯಿಂದಲೇ ಬ್ರಾಹ್ಮಣನೆನಿಸಿರುತ್ತಾನೆ. ಈ ಬ್ರಹ್ಮನಿಷ್ಠೆಗಿಂತ ಮಿಕ್ಕದ್ದೆಲ್ಲವೂ ಅನಿತ್ಯವು, ಹುಸಿ ; ಇದೊಂದೇ ನಿತ್ಯವಾದ ಪರಮಾರ್ಥವು."

ಹೀಗೆನ್ನಲು ಕಹೋಲನು ಸುಮ್ಮನಾದನು.

ಆರನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ಕಾರ್ಯಕಾರಣಭಾವದಿಂದೊಡಗೂಡಿರುವ ಪಂಚಭೂತರೂಪವಾದ ಅನಾತ್ಮನಿರಾಕರಣಪೂರ್ವಕವಾಗಿ ಬ್ರಹ್ಮವನ್ನು ತಿಳಿಯಬೇಕೆಂದು ಹೇಳಿದೆ.

ಕಹೋಲನು ಸುಮ್ಮನಾಗಲು ಗಾರ್ಗಿವಾಚಕ್ನವಿಯು ಪ್ರಶ್ನೆಮಾಡಿದಳು. ಆಕೆಯು ಪೃಥ್ವಿಯು ಅಪ್ಪಿನಿಂದ ವ್ಯಾಪ್ತವಾಗಿದೆಯಷ್ಟೆ ; ಹಾಗೆ ಅಪ್ಪು ಯಾವ ಸೂಕ್ಷ್ಮವಾದ ಕಾರಣದಿಂದ ವ್ಯಾಪ್ತವಾಗಿದೆ ಎಂದು ಉತ್ತರವನ್ನು ಕೇಳಿದಳು. ಯಾಜ್ಞವಲ್ಕ್ಯನು ವಾಯುವಿನಿಂದ ಎಂದು ಉತ್ತರವನ್ನು ಕೊಟ್ಟನು. ಮುಂದೆ ಹೀಗೆಯೇ ಕಾರ್ಯಕಾರಣಭಾವದ ಪ್ರಶ್ನೋತ್ತರವು ನಡೆಯಿತು.

ವಾಯುವು ಯಾವ ಕಾರಣದಿಂದ ವ್ಯಾಪ್ತವಾಗಿದೆ ? ಅಂತರಿಕ್ಷದಿಂದ ; ಅಂತರಿಕ್ಷವೊ? ಗಂಧರ್ವಲೋಕದಿಂದ ; ಗಂಧರ್ವಲೋಕವೊ ? ಆದಿತ್ಯಲೋಕದಿಂದ ; ಆದಿತ್ಯಲೋಕವೊ ? ಚಂದ್ರಲೋಕದಿಂದ ; ಚಂದ್ರಲೋಕವೊ ? ನಕ್ಷತ್ರಲೋಕದಿಂದ ; ನಕ್ಷತ್ರಲೋಕವೊ ? ದೇವಲೋಕದಿಂದ ; ದೇವಲೋಕವೊ ? ಇಂದ್ರಲೋಕದಿಂದ ; ಇಂದ್ರ ಲೋಕವೊ ? ಪ್ರಜಾಪತಿ (ವಿರಾಟ್)ಲೋಕದಿಂದ; ಪ್ರಜಾಪತಿಲೋಕವೊ ? ಬ್ರಹ್ಮಲೋಕದಿಂದ ; ಹೀಗೆ ಬ್ರಹ್ಮಲೋಕದವರೆಗೂ

ಪಂಚಭೂತಗಳೇ ಸೂಕ್ಷ್ಮಸೂಕ್ಷ್ಮತರತಾರತಮ್ಯದಿಂದ ಬೇರೆಬೇರೆಯ ಆಕಾರದಿಂದ ಸಂಹತವಾಗಿ ಅಯಾ ಲೋಕಗಳಾಗಿರುತ್ತವೆ ಎಂಬುದು ಯಾಜ್ಞವಲ್ಕ್ಯನ ಅಭಿಪ್ರಾಯ.

ಆಗ ಗಾರ್ಗಿಯು ಬ್ರಹ್ಮಲೋಕವು ಯಾವ ಕಾರಣದಿಂದ ವ್ಯಾಪ್ತವಾಗಿದೆ ?- ಎಂದು ಕೇಳಿದಳು. ಯಾಜ್ಞವಲ್ಕ್ಯನು, 'ಗಾರ್ಗಿಯೆ, ಅದಕ್ಕೆ ವ್ಯಾಪಕವಾದ ಆ ದೇವತೆಯು ಇತರ ಕಾರ್ಯಕಾರಣಭಾವದ ಪದಾರ್ಥಗಳಂತಲ್ಲ ; ಆದ್ದರಿಂದ ಅದನ್ನು ಪೃಥಿವೀದೃಷ್ಟಾಂತದಿಂದ ಅನುಮಾನಿಸಿ ತಿಳಿಯುವದಕ್ಕೆ ಬರುವದಿಲ್ಲ. ಅದಕ್ಕೂ ಅನುಮಾನವನ್ನು ನೀನು ಹತ್ತಿಸುವದಕ್ಕೆ ಹೋದರೆ ನಿನಗೆ ಆಶ್ರೇಯಸ್ಸಾದೀತು ! ಆದ್ದರಿಂದ ಇಲ್ಲಿಗೆ ಅನುಮಾನದಿಂದ ಊಹಿಸುವದನ್ನು ನಿಲ್ಲಿಸು !' ಎಂದನು. ಆಗ ಗಾರ್ಗಿಯು ಸುಮ್ಮನಾದಳು.

ಏಳನೆಯ ಬ್ರಾಹ್ಮಣದ ಸಾರ

೧. ಗಾರ್ಗಿಯು ಸುಮ್ಮನಾಗಲು ಉದ್ದಾಲಕ ಆರುಣಿಯು ಸೂತ್ರವನ್ನೂ ಅಂತರ್ಯಾಮಿಯನ್ನೂ ಕುರಿತು ಆಗಮದ್ವಾರದಿಂದ ಯಾಜ್ಞವಲ್ಕ್ಯನನ್ನು ಪ್ರಶ್ನಿಸಿದನು. ''ಮದ್ರದೇಶದಲ್ಲಿ ಪತಂಜಲಕಾಪ್ಯನ ಮನೆಯಲ್ಲಿ ನಾವು ಯಜ್ಞಶಾಸ್ತ್ರಾಧ್ಯಯನವನ್ನು ಮಾಡುತ್ತಿರುವಲ್ಲಿ ಅವನ ಹೆಂಡತಿಯನ್ನು ಹಿಡಿದಿದ್ದ ಕಬಂಧ ಅಥರ್ವಣನೆಂಬ ಗಂಧರ್ವನು ನಮಗೆ ಸೂತ್ರಾಂತರ್ಯಾಮಿಗಳನ್ನು ತಿಳಿಸಿಕೊಟ್ಟಿರುತ್ತಾನೆ. ಅದನ್ನು ನೀನು ತಿಳಿದಿದ್ದರೆ ಹೇಳು'' ಎಂದು ಕೇಳಿದನು. ಇದನ್ನು ತಿಳಿದವನೇ ಬ್ರಹ್ಮಜ್ಞಾನಿಯು, ಲೋಕದೇವವೇದಭೂತಗಳನ್ನೂ ಆತ್ಮನನ್ನೂ ಎಲ್ಲವನ್ನೂ ತಿಳಿದವನು - ಎಂದು ಗಂಧರ್ವನು ಈ ವಿದ್ಯೆಯನ್ನು ಹೊಗಳಿದ್ದನು.

೨. ಯಾಜ್ಞವಲ್ಕ್ಯನು ''ವಾಯುವೇ ಸೂತ್ರವು, ವಾಯುವೇ ಈ ಲೋಕಪರಲೋಕಗಳನ್ನೂ ಸರ್ವಭೂತಗಳನ್ನೂ ಕೂಡಿಸಿಟ್ಟಿರುವ ಸೂತ್ರವು. ಮನುಷ್ಯನ ಅವಯವಗಳನ್ನು ಈ ಸೂತ್ರವೇ ಕೂಡಿಸಿಟ್ಟಿರುತ್ತದೆ ; ಸತ್ತಾಗ ವಾಯುವಿನ ಅನುಗ್ರಹವಿಲ್ಲದ್ದರಿಂದಲೇ ಅವು ಸಡಿಲವಾಗುತ್ತವೆ'' ಎಂದನು. ಉದ್ದಾಲಕ ಆರುಣಿಯು ಇದಕ್ಕೊಪ್ಪಿ ''ಸರಿ, ಸೂತ್ರವನ್ನು ಸರಿಯಾಗಿ ತಿಳಿಸಿರುತ್ತೀಯೆ. ಈಗ ಅಂತರ್ಯಾಮಿಯನ್ನು ಹೇಳು'' ಎಂದನು.

೩-೧೪. ಯಾಜ್ಞವಲ್ಕ್ಯನು ''ಆಧಿದೈವತವಾಗಿ ಪೃಥಿವಿ, ಅಪ್ಪು, ಅಗ್ನಿ, ಅಂತರಿಕ್ಷ, ವಾಯು, ದ್ಯುಲೋಕ, ಆದಿತ್ಯ, ದಿಕ್ಕು, ಚಂದ್ರತಾರಕ, ಆಕಾಶ, ತಮಸ್ಸು, ತೇಜಸ್ಸು'' -ಎಂಬ ದೇವತೆಗಳಲ್ಲಿ ಅವುಗಳೊಳಗಿದ್ದರೂ ಅವುಗಳ ಅರಿವಿಗೆ ವಿಷಯನಾಗದೆ ಆ ದೇವತೆಗಳನ್ನೆಲ್ಲ ತನ್ನ ವಶದಲ್ಲಿಟ್ಟುಕೊಂಡು ಅವರವರ ವ್ಯಾಪಾರದಲ್ಲಿ ತೊಡಗಿಸುತ್ತಿರುವನಲ್ಲ, ಅವನೇ ನಿನ್ನ, ನನ್ನ ಮತ್ತು ಎಲ್ಲರ ಆತ್ಮನಾದ ಸಂಸಾರಧರ್ಮವರ್ಜಿತನಾದ ಅಂತರ್ಯಾಮಿಯು'' ಎಂದನು.

೧೫-೨೩. ಹೀಗೆಯೇ ''ಅಧಿಭೂತವಾಗಿ ಎಲ್ಲಾ ಭೂತಗಳಲ್ಲಿಯೂ ಅಧ್ಯಾತ್ಮವಾಗಿ ಪ್ರಾಣ, ವಾಕ್ಕು, ಚಕ್ಷುಸ್ಸು, ಶ್ರೋತ್ರ, ಮನಸ್ಸು, ತ್ವಕ್ಕು, ವಿಜ್ಞಾನ, ರೇತಸ್ಸು- ಇವುಗಳಲ್ಲಿದ್ದುಕೊಂಡು ಅವುಗಳಿಗೂ ಅರಿಯದಂತೆ ಅವನ್ನು ಒಳಗಿನಿಂದ ಆಳುತ್ತಿರುವವನೇ ಸರ್ವಾತ್ಮನಾದ ಅಮೃತನಾದ ಅಂತರ್ಯಾಮಿಯು'' - ಎಂದು ವಿವರಿಸಿದನು.

೨೩. ''ಈ ಅಂತರ್ಯಾಮಿಯು ಯಾರಿಂದಲೂ ದೃಷ್ಟನಲ್ಲದ ದ್ರಷ್ಟೃ, ಶ್ರುತನಲ್ಲದ ಶ್ರೋತೃ, ಮತನಲ್ಲದ ಮಂತೃ, ವಿಜ್ಞಾತನಲ್ಲದ ವಿಜ್ಞಾತೃ, ಇವನಿಗಿಂತ ಬೇರೆಯಾದ ದ್ರಷ್ಟೃವಾಗಲಿ, ಶ್ರೋತೃವಾಗಲಿ, ಮಂತೃವಾಗಲಿ, ವಿಜ್ಞಾತೃವಾಗಲಿ ಇಲ್ಲ. ಇವನೇ ಎಲ್ಲರಿಗೂ ಆತ್ಮನಾಗಿರುವ ಅಂತರ್ಯಾಮಿಯು'' ಎಂದು ಅಂತರ್ಯಾಮಿಸ್ವರೂಪವನ್ನು ಸ್ಪಷ್ಟಪಡಿಸಿದನು.

ಆಗ ಉದ್ದಾಲಕ ಆರುಣಿಯು ತನ್ನ ಪ್ರಶ್ನೆಗೆ ಉತ್ತರವು ಬಂದದ್ದರಿಂದ ಸುಮ್ಮನಾದನು.

ಎಂಟನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ನಿರುಪಾಧಿಕಬ್ರಹ್ಮಸ್ವರೂಪವನ್ನು ಸೂಕ್ಷ್ಮತಾರತಮ್ಯಕ್ರಮದಿಂದಲೂ ನಿಯಂತವ್ಯನಿಯಂತೃಭಾವನಿರೂಪಣದಿಂದಲೂ ನಿಶ್ಚಯಿಸಿರುತ್ತದೆ.

೧-೨. ಉದ್ದಾಲಕಆರುಣಿಯು ಸುಮ್ಮನಾಗಲು ಗಾರ್ಗಿವಾಚಕ್ನವಿಯು ಮತ್ತೆ ಪ್ರಶ್ನೆಮಾಡುವದಕ್ಕೆ ಬ್ರಾಹ್ಮಣರ ಅನುಮತಿಯನ್ನು ಪಡೆದುಕೊಂಡು ''ಯಾಜ್ಞವಲ್ಕ್ಯನೆ, ಅತ್ಯಂತಸೂಕ್ಷ್ಮವಾಗಿ ಉತ್ತರವನ್ನು ಕೊಡುವದಕ್ಕೆ ಬಹಳ ಕಷ್ಟವಾಗಿರುವ ಆಗಮಗಮ್ಯವಾದ ಎರಡು ಪ್ರಶ್ನೆಗಳನ್ನು ಕೇಳುವೆನು, ಅವುಗಳಿಗೆ ಉತ್ತರವನ್ನು ಹೇಳು!'' ಎಂದಳು.

೩-೪. ''ದ್ಯುಲೋಕಕ್ಕೂ ಮೇಲೆಯೂ ಪೃಥಿವಿಗೂ ಕೆಳಗಡೆಯೂ ದ್ಯಾವಾಪೃಥಿವಿಗಳ ನಡುವೆಯೂ ಇದ್ದುಕೊಂಡು ಭೂತಭವಿಷ್ಯದ್ವರ್ತಮಾನಗಳೆಲ್ಲವೂ ಆಗಿರುವ ಸೂತ್ರವೆಂಬುದೆಯಲ್ಲ, ಅದು ಪತರಲ್ಲಿ ಓತವೂ ಪ್ರೋತವೂ ಆಗಿದೆ?'' ಎಂದು ಗಾರ್ಗಿ ಕೇಳಲು ಯಾಜ್ಞವಲ್ಕ್ಯನು ''ವ್ಯಾಕೃತಾತ್ಮಕವಾದ ಈ ಸೂತ್ರವು ಆಕಾಶವೆಂಬ ಹೆಸರಿನ ಅವ್ಯಾಕೃತದಲ್ಲಿ ಓತಪ್ರೋತವಾಗಿರುತ್ತದೆ'' ಎಂದು ಉತ್ತರವನ್ನು ಕೊಟ್ಟನು.

೫-೭. ಗಾರ್ಗಿ ಈ ಉತ್ತರಕ್ಕೆ ಬಚ್ಚಿ ಯಾಜ್ಞವಲ್ಕ್ಯನಿಗೆ ನಮಸ್ಕಾರ ಮಾಡಿ ಮತ್ತೆ ಪ್ರಶ್ನಿಸಿದಳು. ''ಸೂತ್ರವೂ ಓತಪ್ರೋತವಾಗಿರುವ ಈ ಅವ್ಯಾಕೃತಾಕಾಶವು ಪತರಲ್ಲಿ ಓತಪ್ರೋತವಾಗಿರುತ್ತದೆ ?-'' ಎಂದು ಕೇಳಿದಳು.

೮. ಯಾಜ್ಞವಲ್ಕ್ಯನು ಈ ಉತ್ತರವನ್ನು ಹೇಳಿದನು 'ಗಾರ್ಗಿಯೆ, ಆಕಾಶವೂ ಓತಪ್ರೋತವಾಗಿರುವದು ಪತರಲ್ಲೆಂಬುದನ್ನು ಬಲ್ಲವರು ಹೀಗೆಂದು ಹೇಳುತ್ತಾರೆ. ಇದೇ ಆ ಅಕ್ಷರವೆಂಬುದು. ಇದು ಸ್ಥೂಲತ್ವಾದಿದ್ರವ್ಯಧರ್ಮಗಳಿಲ್ಲದ್ದು, ಲೋಹಿತಾದಿಗುಣವಲ್ಲದ್ದು ; ದ್ರವ್ಯಗುಣಾದಿಗಳೆಂದು ನಿರ್ದೇಶಿಸುವದಕ್ಕಾಗದ್ದು. ಛಾಯೆಯಲ್ಲ, ತಮಸ್ಸಲ್ಲ. ಇದು ವಾಯವಲ್ಲ, ಆಕಾಶವಲ್ಲ, ರಸಗಂಧಾದಿಗಳೂ ಅಲ್ಲ. ಚಕ್ಷುರಾದಿಕರಣಗಳಿರುವದಲ್ಲ, ಪ್ರಾಣವಿರುವದಲ್ಲ, ಅಳತೆಯಿರುವದಲ್ಲ, ಒಳಗೂಹೊರಗುಗಳಿರುವದಲ್ಲ. ಅದು ಒಂದನ್ನು ತಿನ್ನುವದೂ ಅಲ್ಲ, ಮತ್ತೊಂದರಿಂದ ತಿನ್ನಲ್ಪಡತಕ್ಕದ್ದೂ ಅಲ. ಸರ್ವವಿಶೇಷರಹಿತವಾಗಿರುವ ಅದ್ವಿತೀಯತತ್ತ್ವವದು.

೯. ''ಈ ಅಕ್ಷರವು ಹೀಗೆ ನಿರ್ಧರ್ಮಕವಾಗಿರುವದಾದರೂ ಅದು ಇಲವೆನ್ನುವಂತಿಲ. ಏಕೆಂದರೆ ಸೂರ್ಯಚಂದ್ರರು ನಿಯಮದಿಂದ ವ್ಯಾಪಾರ ಮಾಡುವದಕ್ಕೂ ದ್ಯಾವಾಪೃಥಿವಿಗಳು ಇದ್ದಲ್ಲಿ ಇದ್ದಂತೆಯೇ ಇರುವದಕ್ಕೂ ನಿಮಿಷ ಮುಹೂರ್ತಾದಿಗಳು ನಿಯತವಾಗಿ ವಸ್ತುಗಳನ್ನು ಗಣನೆಮಾಡುತ್ತಿರುವದಕ್ಕೂ ನದಿಗಳು ನಿಯಮದಿಂದ ಆಯಾ ದಿಕ್ಕಿಗೇ ಹರಿಯುತ್ತಿರುವದಕ್ಕೂ ದಾನಮಾಡುವವರಿಗೆ ನಿಯಮದಿಂದ ಪರಲೋಕದಲ್ಲಿ ಫಲವಾಗುವದಕ್ಕೂ ದೇವತೆಗಳು ಯಜಮಾನನನ್ನೂ ಪಿತೃಗಳು ದರ್ವಿಹೋಮವನ್ನೂ ಉಪಜೀವಿಸಿಕೊಂಡಿರುವದಕ್ಕೂ ಈ ಅಕ್ಷರದ ಕಟ್ಟಪ್ಪಣೆಯೇ ಕಾರಣವಾಗಿರುತ್ತದೆ.

೧೦-೧೧. ''ಈ ಅಕ್ಷರವನ್ನು ತಿಳಿಯದವನು ಬಹುಕಾಲದವರೆಗೆ ಯಾಗಹೋಮಗಳನ್ನು ಮಾಡಿದರೂ ಅದು ಕ್ಷಯವಾಗುತ್ತದೆ : ಇದನ್ನರಿಯದೆ ಈ ಲೋಕವನ್ನು ಬಿಟ್ಟು ತೆರಳುವವನು ಕೃಪಣನು, ಇದನ್ನರಿತವನೇ ಬ್ರಾಹ್ಮಣನು. ಇದು ಮತ್ತೆ ಏತರಿಂದಲೂ ದೃಷ್ಟವಲ್ಲ, ಶ್ರುತವಲ್ಲ, ಮತವಲ್ಲ, ವಿಜ್ಞಾತವಲ್ಲ; ಇದು ಮಾತ್ರ ಎಲಕ್ಕೂ ದ್ರಷ್ಟ್ರ, ಶ್ರೋತೃ, ಮಂತೃ, ವಿಜ್ಞಾತೃ. ಇದಕ್ಕಿಂತ ಬೇರೆಯಾಗಿ ಯಾವದೊಂದು ದ್ರಷ್ಟ್ರಶ್ರೋತೃಮಂತೃವಿಜ್ಞಾತೃವೂ ಇರುವದಿಲ್ಲ. ಇಂಥ ಅಕ್ಷರದಲ್ಲಿ ಅವ್ಯಾಕೃತಾಕಾಶವು ಓತಪ್ರೋತವಾಗಿರುತ್ತದೆ.''

೧೨. ಈ ಉತ್ತರವನ್ನು ಕೇಳಿ ಗಾರ್ಗಿಯು ತೃಪ್ತಳಾದಳು. ''ಪೂಜ್ಯರಾದ ಬ್ರಾಹ್ಮಣರುಗಳಿರಾ, ಈತನು ಬ್ರಹ್ಮವಾದದಲ್ಲಿ ಅಪ್ರತಿಮನು ; ಇವನನ್ನು ನಿಮ್ಮೊಳಗೆ ಯಾರೊಬ್ಬನೂ ಸೋಲಿಸಲಾರನು. ಆದ್ದರಿಂದ ವಾದಜಿತರಾದೆವೆಂದು ಈತನಿಗೆ ನಮಸ್ಕಾರಮಾಡಿ ಕೃತಕೃತ್ಯರಾಗಿರಿ!'' ಎಂದು ಹೇಳಿ ಸುಮ್ಮನಾದಳು.

ಒಂಬತ್ತನೆಯ ಬ್ರಾಹ್ಮಣದ ಸಾರ

ದೇವತಾಸಂಕೋಚವಿಕಾಸಗಳ ಮೂಲಕವಾಗಿ ಆತ್ಮನ ಸಾಕ್ಷಾದಪರೋಕ್ಷತ್ವವನ್ನು ಈ ಬ್ರಾಹ್ಮಣದಲ್ಲಿ ನಿರ್ಧರಿಸಲಾಗಿದೆ.

೧-೬. ಗಾರ್ಗಿಯು ಸುಮ್ಮನಾಗಲು ವಿದಗ್ಧಶಾಕಲ್ಯನು ಯಾಜ್ಞವಲ್ಕ್ಯನನ್ನು ದೇವತೆಗಳ ಸಂಖ್ಯೆಯನ್ನು ಕುರಿತ ಪ್ರಶ್ನೆಯನ್ನು ಮಾಡಿದನು. ಯಾಜ್ಞವಲ್ಕ್ಯನು ''ಮೂವತ್ತು ಮೂರುಸಾವಿರದ ಆರು'' ಎಂದು ನಿವಿತ್ಸಂಖ್ಯೆಯನ್ನು ಹೇಳಿ ''ಇವು ದೇವತೆಗಳ ವಿಭೂತಿಗಳು ಮಾತ್ರ ; ನಿಜವಾಗಿ ಮೂವತ್ತುಮೂರೇ ದೇವತೆಗಳು. ಅಗ್ನಿ, ಪೃಥಿವಿ, ವಾಯು, ಅಂತರಿಕ್ಷ, ಆದಿತ್ಯ, ದ್ಯುಲೋಕ, ಚಂದ್ರ, ನಕ್ಷತ್ರ - ಎಂಬ ಅಷ್ಟವಸುಗಳು ; ಕರ್ಮ ಜ್ಞಾನೇಂದ್ರಿಯಗಳು ಹತ್ತು, ಮನಸ್ಸು ಒಂದು - ಎಂಬ ಏಕಾದಶರುದ್ರರು ; ಸಂವತ್ಸರದ ದ್ವಾದಶಮಾಸಗಳೆಂಬ ದ್ವಾದಶಾದಿತ್ಯರು ; ಸಿಡಿಲೇ ಇಂದ್ರನು, ಯಜ್ಞನೇ ಪ್ರಜಾಪತಿ - ಇವರಿಬ್ಬರೂ ಸೇರಿದರೆ ಒಟ್ಟು ಮೂವತ್ತುಮೂರು ದೇವತೆಗಳಾಗುವರು'' ಎಂದು ನಿರ್ಧರಿಸಿದನು.

೭-೯. ಇನ್ನೂ ಸಂಕೋಚಮಾಡಿದರೆ ಅಗ್ನಿ, ಪೃಥಿವಿ, ವಾಯು, ಅಂತರಿಕ್ಷ, ಆದಿತ್ಯ, ದ್ಯುಲೋಕ - ಎಂದು ದೇವತೆಗಳು ಆರೇ ; ಈ ಮೂರು ಲೋಕಗಳೆಂಬ ಮೂರು ದೇವತೆಗಳೇ ಎಂದೂ ಹೇಳಬಹುದು ; ವಾಯುವೇ ಅಧ್ಯರ್ಧದೇವತೆ.

ಪ್ರಾಣನು ಒಬ್ಬನೇ ನಿಜವಾಗಿ ದೇವತೆ, ಅದನೇ ಬ್ರಹ್ಮವು - ಎಂದು ಕೊನೆಗೆ ನಿರ್ಣಯಿಸಿದನು.

೧೦-೧೭. ಶಾಕಲ್ಯನು ಮತ್ತೆ 'ಪೃಥಿವಿ ಎಂಬ ಆಯತನದಲ್ಲಿರುವವನಾಗಿ ಅಗ್ನಿ ಎಂಬ ಲೋಕ(ದರ್ಶನಕರಣ)ವುಳ್ಳವನಾಗಿ, ಮನಸ್ಸೆಂಬ ಜ್ಯೋತಿಯುಳ್ಳವನಾಗಿರುವ ಸರ್ವಕಾರ್ಯಕರಣಸಂಘಾತಗಳಿಗೂ ಪರಾಯಣನಾಗಿರುವ ಪುರುಷನು ಯಾರು ? ಎಂದು ಕೇಳಲು, ಶರೀರದಲ್ಲಿ ಮಾತೃಜಕೋಶತ್ರಯರೂಪನಾಗಿರುವವನೇ ಆ ಪುರುಷನು- ಎಂದು ಯಾಜ್ಞವಲ್ಕ್ಯನು ಉತ್ತರವಿತ್ತನು. ಇದರಂತೆ ಕಾಮುವೇ ಮುಂತಾದ ಆಯತನಗಳು, ಹೃದಯವೇ ಮುಂತಾದ ಲೋಕಗಳು, ಮನೋಜ್ಯೋತಿ - ಇವುಗಳುಳ್ಳ ಬೇರೆ ಬೇರೆಯ ಪುರುಷರ ಸ್ವರೂಪವನ್ನು ಕೇಳಲು ಯಾಜ್ಞವಲ್ಕ್ಯನು ಆಯಾ ಪುರುಷರ ಸ್ವರೂಪವನ್ನೂ ನಿರ್ಧರಿಸಿ ಹೇಳಿದ್ದಲ್ಲದೆ, ಆಯಾ ಪುರುಷರಿಗೆ ದೇವತೆಗಳನ್ನೂ - ಎಂದರೆ ನಿಷ್ಪತ್ತಿಕಾರಣಗಳನ್ನೂ ತಿಳಿಸಿಕೊಟ್ಟನು. ಹೀಗೆ ಎಂಟು ಬಗೆಯಾಗಿ ದೇವ, ಲೋಕ, ಪುರುಷ - ಎಂಬ ಭೇದದಿಂದ ಮೂರುಮೂರುಬಗೆಯಾಗಿ ವಿಂಗಡಿಸಿಕೊಂಡಿರುವ ಪ್ರಾಣನೆಂಬ ಒಬ್ಬ ದೇವತೆಯನ್ನೇ ಉಪಾಸನೆಗಾಗಿ ಈ ಸಂವಾದದಿಂದ ಶ್ರುತಿಯು ತಿಳಿಸಿಕೊಟ್ಟಿರುತ್ತದೆ.

೧೮-೨೪. ಸುಮ್ಮನಿದ್ದ ಶಾಕಲ್ಯನನ್ನು ಯಾಜ್ಞವಲ್ಕ್ಯನು "ಎಲಾ, ನಿನ್ನನ್ನು ಈ ಬ್ರಾಹ್ಮಣರು ಬೆಂಕಿಯಂತಿರುವ ನನ್ನನ್ನು ಹಿಡಿಯುವದಕ್ಕೆ ಇಕ್ಕಳವನ್ನು ಮಾಡಿಕೊಂಡಿದ್ದಾರೆ. ಇದನ್ನು ನೀನರಿಯೆ !" ಎಂದನು. ಶಾಕಲ್ಯನು ಕೋಪದಿಂದ "ನಿನಗೆ ಯಾವ ಬ್ರಹ್ಮವಿದ್ಯೆಯಿದೆ ಎಂಬ ಹೆಮ್ಮೆಯಿಂದ ಈ ಬ್ರಾಹ್ಮಣರನ್ನೆಲ್ಲ ಹೀಗೆ ತಿರಸ್ಕರಿಸುತ್ತಿರುವೆ ?" ಎಂದು ಕೇಳಿದನು. ಅದಕ್ಕೆ ಉತ್ತರವಾಗಿ ಯಾಜ್ಞವಲ್ಕ್ಯನು "ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ, ಊರ್ಧ್ವ- ಎಂಬ ಐದು ದಿಕ್ಕುಗಳಲ್ಲಿಯೂ ಆದಿತ್ಯಾದಿರೂಪದಿಂದಿರುವ ದೇವತೆಗಳನ್ನೂ, ಅವರಿಗೆ ಪರಂಪರೆಯಿಂದ ಹೃದಯವೇ ಪ್ರತಿಷ್ಠೆ ಎಂಬುದನ್ನೂ ಆಯಾ ದೇವತೆಯ ಸಾಕ್ಷಾತ್ಕಾರದಿಂದ ನಾನೇ ಆ ದೇವತೆ ಎಂಬುದನ್ನೂ ಅರುತಿದೇನೆ" ಎಂದು ವಿವರಿಸಿದನು.

೨೫-೨೬. ಈ ಹೃದಯವು ಏತರಲ್ಲಿ ಪ್ರತಿಷ್ಠಿತವಾಗಿದೆ ? ಎಂದರೆ ಶರೀರದಲ್ಲಿ ; ಶರೀರವೂ ಹೃದಯವೂ ಏತರಲ್ಲಿ ಪ್ರತಿಷ್ಠಿತವಾಗಿದೆ ? ಎಂದರೆ ಪ್ರಾಣದಲ್ಲಿ ; ಪ್ರಾಣವು ಏತರಲ್ಲಿ ಪ್ರತಿಷ್ಠಿತವಾಗಿದೆ ? ಎಂದರೆ ಅಪಾನದಲ್ಲಿ ;

ಅಪಾನವು ಏತರಲ್ಲಿ ಪ್ರತಿಷ್ಠಿತವೆಂದರೆ ವ್ಯಾನದಲ್ಲಿ ; ವ್ಯಾನವು ಏತರಲ್ಲಿ ಪ್ರತಿಷ್ಠಿತವೆಂದರೆ ಉದಾನದಲ್ಲಿ ; ಉದಾನವು ಏತರಲ್ಲಿ ಪ್ರತಿಷ್ಠಿತವೆಂದರೆ ಸಮಾನದಲ್ಲಿ - ಎಂದಿಂತು ಮುಂದುಮುಂದಕ್ಕೆ ಪ್ರತಿಷ್ಠೆಯನ್ನು ಹೇಳುತ್ತಾ ಸರ್ವಕ್ಕೂ ಪ್ರತಿಷ್ಠೆಯಾದ ಪರಮಾತ್ಮನನ್ನು ಸೂಚಿಸಿದನು. ಆ ಪರಮಾತ್ಮನೇ ನೇತಿ ನೇತಿ ಎಂದುಹೇಳುವದಕ್ಕೆ ತಕ್ಕ ಅಗೃಹ್ಯನೂ ಅಶೀರ್ಯನೂ ಅಸಂಗನೂ ಅಸಿತನೂ ಆದ ಪರಮಾತ್ಮನು. ಯಾಜ್ಞವಲ್ಕ್ಯನು ಶಾಕಲ್ಯನನ್ನು ಕುರಿತು ''ಯಾವನು ಈ ಎಂಟು ಆಯತನಗಳು, ಎಂಟು ಲೋಕಗಳು, ಎಂಟು ದೇವತೆಗಳು, ಎಂಟು ಪುರುಷರು - ಇವರೆಲ್ಲರನ್ನೂ ಹೊರಗೆ ವಿಂಗಡಿಸಿಟ್ಟು ತನ್ನೊಳಗೆ ಉಪಸಂಹಾರಮಾಡಿಕೊಂಡು ಎಲ್ಲವನ್ನೂ ಮೀರಿರುವ ಸ್ವರೂಪನಾಗಿರುವನೋ ಆ ಔಪನಿಷದಪುರುಷನು ಯಾರು ? ಹೇಳು. ಅವನನ್ನು ನೀನು ತಿಳಿಸಲಾರೆಯಾದರೆ ನಿನ್ನ ತಲೆಯು ಬಿದ್ದುಹೋಗಲಿ !''- ಎಂದು ಕ್ರುದ್ಧನಾಗಿ ನುಡಿದನು. ಶಾಕಲ್ಯನು ಅದನ್ನು ಅರಿತಿರಲಿಲ್ಲವಾಗಿ ಅವನ ತಲೆಯು ಬಿದ್ದುಹೋಯಿತು ; ಯಾಜ್ಞವಲ್ಕ್ಯನಂಥ ಬ್ರಹ್ಮಜ್ಞಾನಿಯ ತಿರಸ್ಕಾರದಿಂದಾದ ಫಲವಾಗಿ ಅವನಿಗೆ ಉತ್ತರ ಸಂಸ್ಕಾರವುಕೂಡ ಆಗದಂತೆ ಅವನ ಅಸ್ಥಿಗಳನ್ನು ಕಳ್ಳರು ಅಪಹರಿಸಿಕೊಂಡುಹೋದರು.

೨೭-೨೮. ಆ ಬಳಿಕ ಯಾಜ್ಞವಲ್ಕ್ಯನು ಬ್ರಾಹ್ಮಣರನ್ನು ಕುರಿತು ''ನಿಮ್ಮಲ್ಲಿ ಯಾವನೊಬ್ಬನೇ ಆಗಲಿ, ಅಥವಾ ನೀವೆಲ್ಲರೂ ಸೇರಿಯೇ ಆಗಲಿ ನನ್ನನ್ನು ಪ್ರಶ್ನಿಸಿರಿ! ಅಥವಾ ನಿಮ್ಮಲ್ಲಿ ಯಾವನೊಬ್ಬನು ಮುಂದೆ ಬಂದರೂ ಅಥವ ನೀವೆಲ್ಲರೂ ಸೇರಿ ಮುಂದೆ ಬಂದರೂ ಪ್ರಶ್ನಿಸುವೆನು'' ಎಂದನು. ಬ್ರಾಹ್ಮಣರು ಎದೆಗೆಟ್ಟು ಸುಮ್ಮನಿದ್ದರು. ಆಗ ಯಾಜ್ಞವಲ್ಕ್ಯನು ''ಮನುಷ್ಯನು ಅನೇಕವಿಷಯಗಳಲ್ಲಿ ಒಂದು ವನಸ್ಪತಿಯಾದ ಮರದಂತೆ ಇರುತ್ತಾನೆ. ಅದಕ್ಕೆ ಎಲೆಗಳು, ಮೇಲುಹೊದಿಕೆ, ರಸ, ಚಕ್ಕೆ, ನಾರು, ಒಳಗಿನ ಕಟ್ಟಿಗೆ ಮಜ್ಜೆ- ಇವುಗಳಿರುವಂತೆಯೇ ಇವನಿಗೆ ಮೈಗೂದಲು, ಚರ್ಮ, ರಕ್ತ ಮಾಂಸ, ನರಗಳು, ಅಸ್ಥಿಗಳು, ಮಜ್ಜೆ - ಇವುಗಳಿವೆ. ಆದರೆ ಮರವು ಕಡಿದುಹಾಕಿದರೆ ಮತ್ತೆ ಚಿಗುರುವದುಂಟು; ಬೀಜದಿಂದಲೂ ಬೆಳೆಯುವದುಂಟು. ಹಾಗೆ ಬೇರುಬೀಜಗಳಂತೆ ಮನುಷ್ಯನು ಸತ್ತಬಳಿಕ ಹುಟ್ಟುವದಕ್ಕೆ ಕಾರಣವಾಗಿರುವ ಮೂಲವು ಯಾವದು? ಹೇಳಿರಿ. ಮನುಷ್ಯನು ಮತ್ತೆ ಹುಟ್ಟುವದೇ ಇಲ್ಲವೆಂದು ಹೇಳುವದಕ್ಕಿಲ್ಲವಷ್ಟೆ ? ಎಂದು ಕೇಳಿದನು. ಅದು ಬ್ರಾಹ್ಮಣರಿಗೆ ತಿಳಿಯದೆ ಹೋಯಿತು. ಆದ್ದರಿಂದ ಯಾಜ್ಞವಲ್ಕ್ಯನೇ ವಾದದಲ್ಲಿ

ಜಯಿಸಿ ಗೋವುಗಳನ್ನು ಓಡಿದನು. ಕರ್ಮಿಗಳಿಗೂ ಜ್ಞಾನಿಗಳಿಗೂ ಪರಾಯಣವಾಗಿರುವ ವಿಜ್ಞಾನಾನಂದಸ್ವರೂಪವಾದ ಬ್ರಹ್ಮವೇ ಅವನು ಹೇಳಿದ ಜಗನ್ಮೂಲವು.

ನಾಲ್ಕನೆಯ ಅಧ್ಯಾಯ

ಒಂದನೆಯ ಬ್ರಾಹ್ಮಣದ ಸಾರ

ಅಗ್ನ್ಯಾದಿದೇವತೆಗಳ ದ್ವಾರವಿಂದ ನಿರ್ವಿಶೇಷವಾದ ಬ್ರಹ್ಮವನ್ನು ತಿಳಿಸುವದಕ್ಕೆ ಒಂದನೆಯ ಎರಡನೆಯ ಬ್ರಾಹ್ಮಣಗಳು ಬಂದಿರುತ್ತವೆ.

೧-೨. ಒಮ್ಮೆ ಯಾಜ್ಞವಲ್ಕ್ಯನು ಜನಕನ ಸಭೆಗೆ ಬಂದನು. ಜನಕನು "ಯಾಜ್ಞವಲ್ಕ್ಯನೆ, ಏತಕ್ಕೆ ಬಂದೆ ? ಪಶುಕಾಮನಾಗಿಯೊ, ಸೂಕ್ಷ್ಮಪ್ರಶ್ನೆಗಳನ್ನು ನಾನು ಕೇಳಲಿ ಎಂದೊ ?"- ಎನ್ನಲು "ಸಮ್ರಾಜನೆ, ಎರಡಕ್ಕಾಗಿಯೂ ಬಂದೆನು. ಆದರೆ ನಿನಗೆ ಯಾವ ಆಚಾರ್ಯನಾದರೂ ಹೇಳಿಕೊಟ್ಟಿರುವದನ್ನು ಮೊದಲು ತಿಳಿಸು, ಕೇಳೋಣ !" ಎಂದನು.

೨. ಜಿತ್ವಾಶೈಲಿನಿ ಎಂಬಾಚಾರ್ಯನು ವಾಕ್ಕೇ (ಅಗ್ನಿಯೇ) ಬ್ರಹ್ಮವೆಂದು ತಿಳಿಸಿರುತ್ತಾನೆ ಎಂದು ಜನಕನು ಹೇಳಲು ಶೈಲಿನಿಯು ಪ್ರಮಾಣಶುದ್ಧವಾಗಿಯೇ ಹೇಳಿದ್ದಾನೆ ; ಏಕೆಂದರೆ ಮಾತಿಲ್ಲದವನಿಗೆ ಇಹಪರಗಳಿಲ್ಲ. ಆದರೆ ಆ ಬ್ರಹ್ಮಕ್ಕೂ ಆಯತನವು ಯಾವದು ? ಪ್ರತಿಷ್ಠೆ ಯಾವದು ?"- ಎಂದು ಯಾಜ್ಞವಲ್ಕ್ಯನು ಕೇಳಿದನು. ಶೈಲಿನಿಯು ಇದನ್ನು ತಿಳಿಸಿರಲಿಲ್ಲ. "ಈ ಬ್ರಹ್ಮಕ್ಕೆ ನಾಲ್ಕು ಪಾದಗಳಿವೆ ; ಒಂದೇ ಪಾದವನ್ನು ತಿಳಿದಿರುವದರಿಂದ ಈ ಉಪಾಸನೆಯ ಫಲವು ನಿನಗೆ ಸಿಕ್ಕಲಾರದು" ಎಂದು ಯಾಜ್ಞವಲ್ಕ್ಯನೆನ್ನಲು ಜನಕನು ಅದನ್ನು ಪೂರ್ಣವಾಗಿ ಹೇಳಿಕೊಡಬೇಕೆಂದು ಕೇಳಿಕೊಂಡನು. "ವಾಕ್ಕೇ ಅದಕ್ಕೆ ಆಯತನವು, ಅವ್ಯಾಕೃತಾಕಾಶವೇ ಪ್ರತಿಷ್ಠೆಯು ; ಪ್ರಜ್ಞೆ ಎಂಬುದು ಅದರ ಉಪನಿಷತ್ತು ರಹಸ್ಯನಾಮವು. ಆ ಪ್ರಜ್ಞೆಯು ವಾಕ್ಕಿನ ಸ್ವರೂಪವೇ ; ಏಕೆಂದರೆ ವಾಕ್ಕಿನಿಂದಲೇ ಬಂಧುಗಳನ್ನೂ ಋಗ್ವೇದಾದಿಗಳನ್ನೂ, ಇಷ್ಟ ಹುತ, ಆಶಿತ, ಪಾಯಿತ, ಇಹಲೋಕ- ಇವುಗಳನ್ನೂ ಅರಿತುಕೊಳ್ಳುತ್ತಾರೆ. ಯಾವನು ಈ ಚತುಷ್ಪಾದ್ಬ್ರಹ್ಮವನ್ನು ಹೀಗೆಂದು ಉಪಾಸನೆಮಾಡುವನೋ ಅವನಿಗೆ ವಾಕ್ಕು ಕೊನೆಯವರೆಗೂ ಬಿಟ್ಟುಹೋಗದಿರುವದೆಂಬ ದೃಷ್ಟಫಲವೂ ಸರ್ವದೇವಾತ್ಮಕನಾದ ಹಿರಣ್ಯಗರ್ಭನಲ್ಲಿ

ಸಾಯುಜ್ಯವನ್ನು ಪಡೆಯುವದೆಂಬ ಅದೃಷ್ಟಫಲವೂ ದೊರಕುವವು'' ಎಂದು ಸಾಂಗವಾಗಿ ಸಫಲವಾಗಿ ವಾಗ್ಬ್ರಹ್ಮವನ್ನು ತಿಳಿಸಿದನು. ಜನಕನು ವೃಷಭಸಹಿತವಾಗಿ ಸಾವಿರ ಗೋಗಳ ದಕ್ಷಿಣೆಯನ್ನು ಕೊಡುವದಕ್ಕೆ ಹೋಗಲು 'ಪೂರ್ಣವಾಗಿ ಅನುಶಾಸನಮಾಡದೆ ಗುರುದಕ್ಷಿಣೆಯನ್ನು ಸ್ವೀಕರಿಸಬಾರದೆಂದು ನಮ್ಮ ತಂದೆ ತಿಳಿಸಿರುತ್ತಾನೆ' ಎಂದು ಯಾಜ್ಞವಲ್ಕ್ಯನೆಂದನು.

೩. ಹೀಗೆಯೇ ಉದಂಕಶೌಲ್ಬಾಯನನು ಹೇಳಿಕೊಟ್ಟ ಪ್ರಾಣ(ವಾಯು) ಬ್ರಹ್ಮಕ್ಕೆ ಪ್ರಾಣವೇ ಆಯತನವು, ಅವ್ಯಾಕೃತಾಕಾಶವೇ ಪ್ರತಿಷ್ಠೆ ; ಪ್ರಿಯವೆಂಬುದು ರಹಸ್ಯನಾಮ, ಏಕೆಂದರೆ ಪ್ರಾಣವು ಪ್ರಿಯವಾಗಿರುತ್ತದೆ. ಈ ಬ್ರಹ್ಮವನ್ನು ಉಪಾಸನೆ ಮಾಡುವವನಿಗೆ ಪ್ರಾಣವು ಬಿಟ್ಟುಹೋಗುವದಿಲ್ಲವೆಂಬುದು ದೃಷ್ಟಫಲವು, ದೇವತಾ ಸಾಯುಜ್ಯವು ಅದೃಷ್ಟಫಲವು - ಎಂದು ಯಾಜ್ಞವಲ್ಕ್ಯನು ಹೇಳಿಕೊಟ್ಟನು. ಅನುಶಾಸನವು ಪೂರ್ಣವಾಗದ್ದರಿಂದ ಜನಕನು ಕೊಡುವದಕ್ಕೆ ಬಂದ ಧನವನ್ನು ಮಾತ್ರ ಸ್ವೀಕರಿಸಲಿಲ್ಲ.

೪. ಇದರಂತೆ ಬರ್ಕುವಾರ್ಷ್ಣನೆಂಬ ಆಚಾರ್ಯನು ತಿಳಿಸಿಕೊಟ್ಟ ಚಕ್ಷುಸ್ಸು (ಆದಿತ್ಯ) ಎಂಬ ಬ್ರಹ್ಮಕ್ಕೆ ಚಕ್ಷುಸ್ಸು ಆಯತನವು. ಅವ್ಯಾಕೃತಾಕಾಶವು ಪ್ರತಿಷ್ಠೆ ; ಸತ್ಯವೆಂಬುದು ರಹಸ್ಯನಾಮವು, ಏಕೆಂದರೆ ಕಣ್ಣಿನಿಂದ ಕಂಡದ್ದೇ ಸತ್ಯವಾಗಿರುತ್ತದೆ. ಈ ಬ್ರಹ್ಮವನ್ನು ಉಪಾಸನೆಮಾಡಿದವನಿಗೆ ಚಕ್ಷುರಿಂದ್ರಿಯವು ಬಿಟ್ಟುಹೋಗುವದಿಲ್ಲ ವೆಂಬ ದೃಷ್ಟಫಲವೂ ದೇವತಾಸಾಯುಜ್ಯವೆಂಬ ಅದೃಷ್ಟಫಲವೂ ಆಗುವದೆಂದು ಯಾಜ್ಞವಲ್ಕ್ಯನು ಹೇಳಿಕೊಟ್ಟನು. ಈಗಲೂ ಅನುಶಾಸನವು ಪೂರ್ಣವಾಗಲಿಲ್ಲ ವಾಗಿ ದಕ್ಷಿಣೆಯನ್ನು ಸ್ವೀಕರಿಸಲಿಲ್ಲ.

೫. ಹೀಗೆಯೇ ಗರ್ದಭೀವಿಪೀತ ಭಾರದ್ವಾಜನು ಹೇಳಿಕೊಟ್ಟದ್ದ ಶ್ರೋತ್ರ (ದಿಗ್ದೇವತಾ) ಎಂಬ ಬ್ರಹ್ಮಕ್ಕೆ ಶ್ರೋತ್ರವು ಆಯತನವು, ಅವ್ಯಾಕೃತಾಕಾಶವು ಪ್ರತಿಷ್ಠೆ ; ಅನಂತವೆಂಬುದು ರಹಸ್ಯನಾಮವು, ಏಕೆಂದರೆ ದಿಕ್ಕುಗಳು ಅಂತವಿಲ್ಲದವು ಗಳು. ಈ ಬ್ರಹ್ಮವನ್ನು ಉಪಾಸನೆಮಾಡಿದವನಿಗೆ ಶ್ರೋತ್ರವು ಬಿಟ್ಟುಹೋಗದಿರುವ ದೆಂಬುದು ದೃಷ್ಟಫಲವು, ದೇವತಾಸಾಯುಜ್ಯವು ಅದೃಷ್ಟಫಲವು - ಎಂದು ಯಾಜ್ಞವಲ್ಕ್ಯನು ಹೇಳಿಕೊಟ್ಟನು. ಈಗಲೂ ಉಪದೇಶವು ಪೂರ್ಣವಾಗಲಿಲ್ಲ ವಾದ್ದರಿಂದ ದಕ್ಷಿಣೆಯನ್ನು ಸ್ವೀಕರಿಸಲಿಲ್ಲ.

೬. ಹೀಗೆಯೇ ಸತ್ಯಕಾಮಜಾಬಾಲನು ಹೇಳಿಕೊಟ್ಟಿದ್ದ ಮನೋಬ್ರಹ್ಮ (ಚಂದ್ರಬ್ರಹ್ಮ)ಕ್ಕೆ ಮನಸ್ಸು ಆಯತನವು, ಆವ್ಯಾಕೃತಾಕಾಶವು ಪ್ರತಿಷ್ಠೆಯು ; ಆನಂದವೆಂಬುದು ರಹಸ್ಯನಾಮ, ಏಕೆಂದರೆ ಮನಃಪೂರ್ವಕವಾಗಿ ಬೆರೆತ ಸ್ತ್ರೀಯಿಂದ ಆನಂದಕರನಾದ ಪುತ್ರನು ಹುಟ್ಟುತ್ತಾನೆ. ಈ ಮನೋಬ್ರಹ್ಮದ ಉಪಾಸಕನಿಗೆ ಮನಸ್ಸು ಬಿಟ್ಟುಹೋಗದಿರುವದೆಂಬುದು ದೃಷ್ಟಫಲ, ದೇವತಾಸಾಯುಜ್ಯವೆಂಬುದು ಅದೃಷ್ಟಫಲ- ಎಂದು ಯಾಜ್ಞವಲ್ಕ್ಯನು ಹೇಳಿಕೊಟ್ಟನು. ಈಗಲೂ ವಿದ್ಯೋಪದೇಶವು ಪೂರ್ಣವಾಗಲಿಲ್ಲ ದಕ್ಷಿಣೆಯನ್ನು ಸ್ವೀಕರಿಸಲಿಲ್ಲ.

೭. ಇದರಂತೆಯೇ ವಿದಗ್ಧಶಾಕಲ್ಯನೆಂಬ ಆಚಾರ್ಯನು ಹೃದಯ(ಪ್ರಜಾಪತಿ) ಬ್ರಹ್ಮಕ್ಕೆ ಹೃದಯವೇ ಆಯತನವು, ಆವ್ಯಾಕೃತಾಕಾಶವು ಪ್ರತಿಷ್ಠೆ; ಸ್ಥಿತಿ ಎಂಬುದು ರಹಸ್ಯನಾಮವು, ಏಕೆಂದರೆ ನಾಮರೂಪಕರ್ಮಾತ್ಮಕವಾದ ಭೂತಗಳು ಹೃದಯಲ್ಲಯೇ ಪ್ರತಿಷ್ಠಿತವಾಗಿರುತ್ತವೆ - ಎಂದು ಯಾಜ್ಞವಲ್ಕ್ಯನು ಹೇಳಿಕೊಟ್ಟನು. ಈಗಲೂ ಅನುಶಾಸನವು ಪೂರ್ಣವಾದಂತಾಗಲಿಲ್ಲವಾಗಿ ಯಾಜ್ಞವಲ್ಕ್ಯನು ಗುರುದಕ್ಷಿಣೆಯನ್ನು ಸ್ವೀಕರಿಸಲಿಲ್ಲ.

ಎರಡನೆಯ ಬ್ರಾಹ್ಮಣದ ಸಾರ

ಇಲ್ಲಿ ಉಪಾಸಕನಿಗೆ ಆಗುವ ಪರಮಫಲವನ್ನು ಅವಸ್ಥಾತ್ರಯಪರೀಕ್ಷೆಯಿಂದ ತಿಳಿಸಿದೆ.

೧. ಸವಿಶೇಷಬ್ರಹ್ಮಗಳನ್ನೆಲ್ಲ ಅರಿತಿದ್ದು ಅವುಗಳಿಗಿಂತ ಹೆಚ್ಚಿನ ತತ್ತ್ವವೊಂದನ್ನು ಅನುಶಾಸನಮಾಡತಕ್ಕದ್ದಿದೆ - ಎಂದು ಹೇಳಿದ ಯಾಜ್ಞವಲ್ಕ್ಯನ ಮಾತನ್ನು ಕೇಳಿ ಜನಕನು ವಿನಯದಿಂದ ಶಿಷ್ಯನಾಗಿ ''ಹಾಗಾದರೆ ನೀನು ಅರಿತಿರುವ ಬ್ರಹ್ಮವನ್ನು ಹೇಳಿಕೊಡು !'' ಎಂದು ಕೇಳಿಕೊಂಡನು. ಯಾಜ್ಞವಲ್ಕ್ಯನು ''ಅಗ್ನಿ, ವಾಯು, ಆದಿತ್ಯ - ಮುಂತಾದ ಬ್ರಹ್ಮಗಳನ್ನೂ ಅವುಗಳ ಆಯತನ, ಪ್ರತಿಷ್ಠೆ ರಹಸ್ಯ ಗುಣನಾಮ- ಇವುಗಳನ್ನೂ ಅರಿತುಕೊಂಡು ದೀರ್ಘಪ್ರಯಾಣಕ್ಕೆ ಅನುವಾದವನಂತೆ ಉಪಾಸನಾಸಂಭಾರದಿಂದೊಡಗೂಡಿರುವೆಯಲ್ಲ ಈ ದೇಹದಿಂದ ಮುಕ್ತನಾಗಿ ಯಾವ ವಸ್ತುತತ್ತ್ವವನ್ನು ಮುಟ್ಟುವೆ- ಎಂಬುದು ನಿನಗೆ ತಿಳಿದಿದೆಯೇನು?'' ಎಂದು ಕೇಳಿದನು. ಜನಕನಿಗೆ ಉಪಾಸನೆಯಿಂದಾಗುವ ದೇವತಾಸಾಯುಜ್ಯವು ತಿಳಿದಿತ್ತೇ ಹೊರತು ಎಲ್ಲದರಿಂದಲೂ ಮುಕ್ತನಾಗಿ ಕೊನೆಗೆ ಮುಟ್ಟುವ

ವಸ್ತುತತ್ತ್ವವು ತಿಳಿದಿರಲಿಲ್ಲ. ''ದಯವಿಟ್ಟು ನೀನೇ ಅದನ್ನು ನನಗೆ ತಿಳಿಸಿಕೊಡು'' ಎಂದು ಕೇಳಿಕೊಂಡನು. ''ಹಾಗಾದರೆ ನೀನು ಪಡೆಯಬಹುದಾದ ತತ್ತ್ವವನ್ನು ತಿಳಿಸುವೆನು'' ಎಂದು ಯಾಜ್ಞವಲ್ಕ್ಯನು ಉಪದೇಶಿಸುವದಕ್ಕೆ ಪ್ರಾರಂಬಿಸಿದನು.

೨. ''ದೀಪ್ತಿಗುಣನಾದ ಆದಿತ್ಯಾಂತರ್ಗತನೂ ಬಲಗಣ್ಣಿನಲ್ಲಿರುವವನೂ ಆದ ಪುರುಷನಿಗೆ 'ಇಂಧ'ನೆಂದು ಹೆಸರು. ಇವನನ್ನು ಪರೋಕ್ಷವಾಗಿ ಇಂದ್ರನೆಂದು ಕರೆಯುತ್ತಾರೆ. ಇವನೇ ವೈಶ್ವಾನರನೆಂಬ ಜಾಗ್ರದವಸ್ಥೆಯ ಆತ್ಮನು ; ಇವನೇ ನೀನು.

೩. ''ಈ ಇಂದ್ರನು ಭೋಕ್ತೃ, ಎಡಗಣ್ಣಿನಲ್ಲಿರುವ ಇದೇ ಪುರುಷನ ರೂಪಕ್ಕೆ ಇಂದ್ರಾಣಿ ಎಂದು ಹೆಸರು ; ಅದು ಭೋಗ್ಯವು. ಈ ಇಂದ್ರೇಂದ್ರಾಣಿಯರು ಸ್ವಪ್ನದಲ್ಲಿ ಒಂದಾಗಿ ಹೃದಯದಲ್ಲಿದ್ದು ಪ್ರವಿವಿಕ್ತಾಹಾರತರನಾದಂತೆ ಇರುವ ತೈಜಸನೆನಿಸುವರು. ಈ ವೈಶ್ವಾನರನು ಸ್ಥೂಲಾಹಾರವುಳ್ಳವನು, ತೈಜಸನು ಸೂಕ್ಷ್ಮಾಹಾರನಾಗಿರುವದರಿಂದ ಪ್ರವಿವಿಕ್ತಾಹಾರನು. ಈ ಹೃದಯಾತ್ಮನಾದ ತೈಜಸನೂ ನೀನೇ.

೪. ''ಇದೇ ತೈಜಸನು ಇನ್ನೂ ಸೂಕ್ಷ್ಮನಾಗಿರುವ ಪ್ರಾಣಾತ್ಮನ ಆಧಾರದಿಂದ ವ್ಯಾಪಾರಮಾಡುತ್ತಿರುತ್ತಾನೆ. ಸರಿಯಾಗಿ ವಿಚಾರಮಾಡಿದರೆ ಹೃದಯಾತ್ಮನ ಪ್ರಾಣಗಳು ಆ ಪ್ರಾಣಾತ್ಮನಿಗಿಂತ ಬೇರೆಯಾಗಿರುವದಿಲ್ಲ. ಪ್ರಾಣಾತ್ಮನಿಗೆ ಪ್ರಾಜ್ಞನು, ಕಾರಣಾತ್ಮನು ಎಂದೂ ಹೆಸರು. ಈ ಕಾರಣಾತ್ಮನಿಗಿಂತ ಬೇರೆಯಾಗಿ ಮತ್ತೆ ಯಾವದೂ ಇರುವದೇ ಇಲ್ಲ; ಈ ಪ್ರಾಜ್ಞನೂ ನೀನೇ.

ಸರ್ವಾತ್ಮನಾದ ಪ್ರಾಜ್ಞನಲ್ಲಿ ಹೀಗೆ ಎಲ್ಲವನ್ನೂ ಲಯಗೊಳಿಸಿಕೊಂಡ ಬಳಿಕ ದೃಶ್ಯವೇ ಇಲ್ಲದ್ದರಿಂದ ಆತ್ಮನಿಗೆ ದ್ರಷ್ಟೃತ್ವವೂ ಉಳಿಯುವದಿಲ್ಲ. ಈ ಸ್ವರೂಪದಲ್ಲಿ ಯಾವ ವಿಶೇಷವೂ ಇಲ್ಲದ್ದರಿಂದ ಅದನ್ನು ನೇತಿನೇತಿ (ಹೀಗಲ್ಲ, ಹೀಗಲ್ಲ) ಎಂದೇ ಕರೆಯಬೇಕಾಗಿರುತ್ತದೆ. ಇವನು ಅಸಂಗನು, ಅಶೀರ್ಯನು, ಅಬದ್ಧನು, ಅದ್ವಿತೀಯವಾಗಿರುವದರಿಂದ ಇದೇ ಅಭಯವಾದ ಬ್ರಹ್ಮವು. ಮೇಲೆ ಹೇಳಿದಂತೆ ನಿಜವಾದ ಈ ಆತ್ಮಸ್ವರೂಪವನ್ನು ಅರಿತದ್ದರಿಂದ ನೀನು ಅಭಯಬ್ರಹ್ಮವೇ ಆಗಿರುವೆ'' ಎಂದು ಯಾಜ್ಞವಲ್ಕ್ಯನು ತನ್ನ ಅನುಶಾಸನವನ್ನು ಮುಗಿಸಿದನು.

ಆಗ ಜನಕನು ''ಯಾಜ್ಞವಲ್ಕ್ಯನೆ, ಅಭಯವಾದ ಬ್ರಹ್ಮವನ್ನು ಹೀಗೆ ತಿಳಿಸಿಕೊಟ್ಟಿರುವೆಯಲ್ಲ ಈ ವಿದ್ಯೋಪದೇಶಕ್ಕೆ ಯಾವ ದಕ್ಷಿಣೆಯು ತಾನೆ ತಕ್ಕದ್ದಾದೀತು ? ನೀನೂ ಅಭಯಸ್ವರೂಪನಾದ ಬ್ರಹ್ಮವೇ ಆಗಿರುವೆ. ಆದ್ದರಿಂದ ಈ ನನ್ನ ರಾಜ್ಯವೂ ನಾನೂ ನಿನಗಿಂತ ಬೇರೆಯಿರುವದೇ ಇಲ್ಲ, ಇದೆಲ್ಲವೂ ನನ್ನದು

ಹೇಗೋ ಹಾಗೆಯೇ ನಿನ್ನವೂ ಆಗಿರುತ್ತದೆ' ಎಂದು ಕೃತಜ್ಞತೆಯನ್ನು ತೋರ್ಪಡಿಸಿಕೊಂಡನು.

ಮೂರನೆಯ ಬ್ರಾಹ್ಮಣದ ಸಾರ

ಹಿಂದಿನ ಬ್ರಾಹ್ಮಣದಲ್ಲಿ ಆಗಮಪ್ರಧಾನವಾಗಿ ತಿಳಿಸಿದ ಆತ್ಮಸ್ವರೂಪವನ್ನೇ ಈ ಬ್ರಾಹ್ಮಣದಲ್ಲಿ ಅವಸ್ಥಾತ್ರಯಪರೀಕ್ಷೆಯ ಮೂಲಕವಾಗಿ ಉಪಪತ್ತಿಯಿಂದ ನಿರ್ಧರಿಸಿರುತ್ತದೆ.

೧. ಯಾಜ್ಞವಲ್ಕ್ಯನು ಜನಕನ ಬಳಿಗೆ ಬಂದಾಗ ಮಾತಾಡುವದಿಲ್ಲ ವೆಂದೇ ಬಗೆದಿದ್ದನು. ಆದರೆ ಅಗ್ನಿಹೋತ್ರದ ವಿಷಯದಲ್ಲಿ ಹಿಂದೆ ಜನಕಯಾಜ್ಞ ವಲ್ಕ್ಯರಿಗೆ ಆಗಿದ್ದ ಸಂವಾದದ ಸಂದರ್ಭದಲ್ಲಿ ಯಾಜ್ಞವಲ್ಕ್ಯನು ಕೊಟ್ಟಿದ್ದ ಕಾಮಪ್ರಶ್ನೆಯ ವರದನ್ನು ಉಪಯೋಗಿಸಿಕೊಂಡು ಜನಕನೇ ಈಗ ಮುನಿಯನ್ನು ಪ್ರಶ್ನಿಸಿದನು.

೨-೬. ಅದರಬ್ಬರಿಗೂ ನಡೆದ ಸಂಭಾಷಣೆಯ ಸಾರವಿದು : 'ಯಾಜ್ಞವಲ್ಕ್ಯನೆ, ಈ ಪುರುಷನಿಗೆ ಬೆಳಕು ಯಾವದು ?' ಆದಿತ್ಯನೇ ಬೆಳಕು, ಆದಿತ್ಯನ ಬೆಳಕಿನಿಂದಲೇ ಇವನು ವ್ಯವಹಾರವನ್ನು ಮಾಡುತ್ತಾನೆ. 'ಇದು ಸರಿ. ಆದರೆ ಆದಿತ್ಯನು ಅಸ್ತಮಿಸಿದಾಗ ?' ಚಂದ್ರನೇ. 'ಸೂರ್ಯಚಂದ್ರರಿಬ್ಬರೂ ಮುಳುಗಿದಾಗಲೊ ?' ಬೆಂಕಿಯೇ. 'ಬೆಂಕಿಯು ಆರಿರುವಾಗ ?' ವಾಕ್ಕೇ ಬೆಳಕು. ಆದ್ದರಿಂದಲೇ ಕತ್ತಲೆಯಲ್ಲಿ ವಾಕ್ಕಿನ ಉಚ್ಚಾರವನ್ನನುಸರಿಸಿ ವ್ಯವಹರಿಸುತ್ತಾನೆ. 'ಆದಿತ್ಯಾದಿಗಳೂ ವಾಕ್ಕೂ ಇಲ್ಲದಾಗಲೊ ?' ಆಗ ಆತ್ಮನೇ ಬೆಳಕು. ಆತ್ಮನೆಂಬ ಬೆಳಕಿನಿಂದಲೇ ಕೂರುವದು, ನಡೆಯುವದು, ಕೆಲಸವನ್ನು ಮಾಡುವದು - ಮುಂತಾದ ವ್ಯವಹಾರವೆಲ್ಲ ಸಾಗುತ್ತದೆ.

೭-೧೪. 'ಆತ್ಮನೆಂದರೆ ಯಾರು ?' ಪ್ರಾಣಗಳ ನಡುವೆ ಈ ವಿಜ್ಞಾನಮಯನಾಗಿ ಹೃದಯದಲ್ಲಿರುವ ಬೆಳಕಿನ ರೂಪದ ಪುರುಷನೇ ಆತ್ಮನು. ಅವನು ಅಂತಃಕರಣಸಾದೃಶ್ಯವನ್ನು ಹೊಂದಿ ಎರಡು ಲೋಕಗಳನ್ನೂ ಸಂಚರಿಸುತ್ತಿರುವನು, ಯೋಚಿಸುವವನಂತೆಯೂ ಚಲಿಸುವವನಂತೆಯೂ ಕಾಣಿಸುತ್ತಿರುವನು. ಅವನು ಹೀಗೆಯೇ ಸ್ವಪ್ನವನ್ನು ಹೊಂದಿ ಈ ಜಾಗ್ರಲ್ಲೋಕವನ್ನು ಮೀರಿ ಕಾರ್ಯಕರಣಗಳೆಂಬ ಮೃತ್ಯುರೂಪಗಳನ್ನು ದಾಟುತ್ತಾನೆ ; ಹೀಗೆಯೇ ಹುಟ್ಟುವಾಗ

ಶರೀರವನ್ನು ಪಡೆದು ಧರ್ಮಾಧರ್ಮಗಳ ಸಂಪರ್ಕವನ್ನು ಹೊಂದುತ್ತಾನೆ, ಸಾಯುವಾಗ ಅವುಗಳನ್ನು ಬಿಡುವನು.

ಇವನಿಗೆ ಈ ಲೋಕ, ಪರಲೋಕ – ಎಂದು ಎರಡೇ ಸ್ಥಾನಗಳು. ಇವನು ಸ್ವಪ್ನವೆಂಬ ಸಂಧ್ಯಸ್ಥಾನದಲ್ಲಿದ್ದುಕೊಂಡು ಇವೆರಡನ್ನೂ ಕಾಣುತ್ತಿರುತ್ತಾನೆ. ಸ್ವಪ್ನದಲ್ಲಿ ಇವನ ವಿದ್ಯಾಕರ್ಮಪೂರ್ವಪ್ರಜ್ಞೆಗಳಿಗೆ ಅನುಗುಣವಾಗಿ ಆಯಾ ದೃಶ್ಯಗಳು ಕಾಣಿಸುತ್ತವೆ. ಜಾಗ್ರತ್ತಿನ ವಾಸನೆಯನ್ನು ತೆಗೆದುಕೊಂಡು ಸ್ವಪ್ನದೃಶ್ಯಗಳನ್ನು ನಿರ್ಮಿಸಿಕೊಳ್ಳುತ್ತಾನಾದ್ದರಿಂದ ಅವನ್ನೆಲ್ಲ ಬೆಳಗುತ್ತಿರುವ ಇವನು ಅಲ್ಲಿ ಸ್ವಯಂಜ್ಯೋತಿ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಸ್ವಪ್ನದಲ್ಲಿ ತೋರುವ ರಥಾದಿಗಳು ಯಾವವೂ ನಿಜವಾಗಿ ಅಲ್ಲಿರುವದಿಲ್ಲ; ಅವೆಲ್ಲ ಇವನ ವಾಸನಾಮಯವಾದ ಕಲ್ಪನೆಗಳೇ. ಹೀಗೆ ಸುಪ್ತವಾಗಿರುವ ಈ ದೃಶ್ಯಗಳನ್ನು ತಾನು ಸುಪ್ತನಾಗದೆ ನೋಡುತ್ತಲೇ ಇರುತ್ತಾನೆ. ಪ್ರಾಣದಿಂದ ಜಾಗ್ರಚ್ಛರೀರವನ್ನು ರಕ್ಷಿಸಿಕೊಂಡು, ತಾನು ಮಾತ್ರ ಅದನ್ನು ಬಿಟ್ಟು ತಾನೊಬ್ಬನೇ ಸ್ವೇಚ್ಛೆಯಿಂದ ಸ್ವಪ್ನಪ್ರಪಂಚದಲ್ಲಿ ಸಂಚರಿಸುತ್ತಿರುತ್ತಾನೆ. ಅಲ್ಲಿ ಅವನು ಬಗೆಬಗೆಯ ರೂಪಗಳನ್ನು ಮಾಡಿಕೊಂಡು ಬಗೆಬಗೆಯಿಂದ ವಿಹರಿಸುತ್ತಿರುವನಾದರೂ ಇಂಥ ಸ್ವಯಂಜ್ಯೋತಿಯನ್ನು ಲೋಕದ ಜನರು ಯಾರೂ ಅರಿತುಕೊಳ್ಳಲಾರದೆ ಇರುವರು.

ಹೀಗೆನ್ನಲು ಜನಕನು ಇದನ್ನು ಕೇಳಿ ಸಂತುಷ್ಟನಾಗಿ 'ನಿನಗೆ ಸಾವಿರ ಗೋವುಗಳನ್ನು ಕೊಟ್ಟಿರುವೆನು; ಇನ್ನು ಮುಂದಕ್ಕೆ ವಿಮೋಕ್ಷಕ್ಕೆ ಬೇಕಾದ ಜ್ಞಾನವನ್ನೇ ಹೇಳು!' ಎಂದು ಕೇಳಿಕೊಂಡನು.

೧೫. ಈ ಆತ್ಮನಿಗೆ ಮೃತ್ಯುರೂಪವಾದ ಕಾರ್ಯಕರಣಗಳಿಲ್ಲ ವೆಂಬುದು ಮಾತ್ರವೇ ಅಲ್ಲ; ಇವನಿಗೆ ಮೃತ್ಯುವಿನ ಸಂಪರ್ಕವೂ ಇಲ್ಲವೆಂಬುದು ಸ್ವಪ್ನದ ಪರೀಕ್ಷೆಯಿಂದ ಗೊತ್ತಾಗುತ್ತದೆ. ಏಕೆಂದರೆ ಸುಷುಪ್ತಿಯಿಂದ ಸ್ವಪ್ನಕ್ಕೆ ಬಂದಾಗ ಅಲ್ಲಿ ಪುಣ್ಯಪಾಪಗಳನ್ನು ಇವನು ನೋಡುತ್ತಿರುವನೇ ಹೊರತು ಕರ್ಮವನ್ನೇನೂ ಮಾಡುತ್ತಿರುವದಿಲ್ಲ. ಇದು ಹೇಗೆ ಗೊತ್ತೆಂದರೆ ಅವನು ಸ್ವಪ್ನದಲ್ಲಿ ಮಾಡುವಂತೆ ಕಂಡದ್ದು ಯಾವದೂ ಎಚ್ಚರಕ್ಕೆ ಬಂದಾಗ ಅವನಿಗೆ ಅಂಟಿಕೊಂಡುಬರುವದಿಲ್ಲ. ಇವನು ಅಸಂಗನಾಗಿರುವದೇ ಇದಕ್ಕೆ ಕಾರಣ. ಆದ್ದರಿಂದ ಇವನು ಅಮೃತನು.

ಹೀಗೆನ್ನಲು ಜನಕನು ಸಂತುಷ್ಟನಾಗಿ 'ನಿನಗೆ ಸಾವಿರ ಗೋವುಗಳನ್ನು ಕೊಟ್ಟಿರುವೆನು. ಇನ್ನು ಮುಂದಕ್ಕೆ ವಿಮೋಕ್ಷಕ್ಕೆ ಬೇಕಾದ ಜ್ಞಾನವನ್ನೇ ಹೇಳು!' ಎಂದು ಕೇಳಿಕೊಂಡನು.

೧೬. ಸ್ವಪ್ನದಲ್ಲಿ ಇವನಿಗೆ ಕರ್ಮವಿಲ್ಲದಿದ್ದರೂ ಕಾಮವಾದರೂ ಇದೆಯಲ್ಲವೆ ? ಎಂದರೆ ಅದೂ ಇಲ್ಲ ; ಏಕೆಂದರೆ ಸ್ವಪ್ನದಿಂದ ಮತ್ತೂ ಎಚ್ಚತ್ತಾಗ ಆ ಕಾಮದ ದೋಷಗಳು ಅವನಿಗೆ ಅಂಟಿಕೊಂಡು ಬರಬೇಕಾಗಿತ್ತು. ಆದ್ದರಿಂದ ಇವನು ಅಸಂಗನೆಂದು ಹೇಳಿದ್ದು ಸರಿಯೇ.

ಹೀಗೆನ್ನಲು ಜನಕನು ಸಂತುಷ್ಟನಾಗಿ 'ನಿನಗೆ ಸಾವಿರ ಗೋವುಗಳನ್ನು ಕೊಟ್ಟಿರುವೆನು. ಇನ್ನು ಮುಂದಕ್ಕೆ ವಿಮೋಕ್ಷಕ್ಕೆ ಬೇಕಾದ ಜ್ಞಾನವನ್ನೇ ಹೇಳು !' ಎಂದು ಕೇಳಿಕೊಂಡನು.

೧೭-೧೮. ಹೇಗೆ ಸ್ವಪ್ನದ ಸಂಗವು ಇವನಿಗೆ ಇಲ್ಲವೋ ಹಾಗೆಯೇ ಜಾಗ್ರತ್ತಿನ ಸಂಗವೂ ಇವನಿಗೆ ಇಲ್ಲ. ಏಕೆಂದರೆ ಇವನು ಮತ್ತೆ ಸ್ವಪ್ನಕ್ಕೆ ಬಂದಾಗ ಜಾಗ್ರತ್ತಿನ ಸಂಗದಿಂದಾದ ಯಾವ ದೋಷವೂ ಇವನಿಗೆ ಅಂಟಿರುವದಿಲ್ಲ. ಅಂತೂ ಹೀಗೆ ಈ ಆತ್ಮನು ನದಿಯ ಪ್ರವಾಹದ ಸೆಳೆತಕ್ಕೆ ಕಟ್ಟುಬೀಳದೆ ಒಂದು ದಡದಿಂದ ಮತ್ತೊಂದು ದಡಕ್ಕೆ ಹೋಗಿ ಬರುತ್ತಿರುವ ದೊಡ್ಡ ಮೀನಿನಂತೆ ಜಾಗ್ರತ್ತು ಸ್ವಪ್ನ - ಇವುಗಳಲ್ಲಿ ಒಂದರಿಂದ ಒಂದಕ್ಕೆ ಹೋಗಿಬರುತ್ತಿರುತ್ತಾನೆ. ಆದ್ದರಿಂದ ಆತ್ಮನು ಸರ್ವಥಾ ಅಸಂಗನೇ ಎಂದಾಯಿತು.

೧೯-೨೦. ಇನ್ನು ಸುಷುಪ್ತಿಯ ವಿಚಾರ. ಗಿಡುಗನೋ ಸುಪರ್ಣವೋ ಆಕಾಶದಲ್ಲಿ ಹಾರಾಡುತ್ತಿದ್ದು ಬಳಲಿದಾಗ ರೆಕ್ಕೆಗಳನ್ನು ಮುದುರಿಕೊಂಡು ತನ್ನ ಗೂಡಿಗೇ ಬಂದು ಸೇರಿಕೊಳ್ಳುವಂತೆ ಜಾಗ್ರತ್ಸ್ವಪ್ನಗಳಲ್ಲಿ ತನಗಾದ ಶ್ರಮವನ್ನು ಪರಿಹರಿಸಿಕೊಳ್ಳುವದಕ್ಕಾಗಿ ಸುಷುಪ್ತಿಗೆ ಓಡಿಬರುತ್ತಾನೆ. ಆದ್ದರಿಂದ ಇವನು ಸರ್ವಕ್ರಿಯಾಕಾರಕಫಲಶೂನ್ಯಸ್ವಭಾವದವನು ಎಂದಾಯಿತು, ಜಾಗ್ರತ್ಸ್ವಪ್ನಗಳಲ್ಲಿ ಇವನಿಗೆ ತೋರುವ ಸಂಸಾರಧರ್ಮತ್ವವು ಅವಿದ್ಯಕವೆಂದೇ ಆಯಿತು.

ಸ್ವಪ್ನದಲ್ಲಿ ಇವನಿಗೆ ಅವಿದ್ಯೆಯು ಹೆಚ್ಚಾಗಿರುವಾಗ ಯಾರೋ ತನ್ನನ್ನು ಹೊಡೆಯುವದಕ್ಕೆ ಬಂದಂತೆ, ಮೇಲೆ ಬಿದ್ದಂತೆ, ತೋರುವದು : ಆನೆಯು ಅಟ್ಟಿಸಿಕೊಂಡು ಬಂದಂತೆಯೂ ತಾನು ಗುಂಡಿಗೆ ಬಿದ್ದಂತೆಯೂ ಕಾಣುವದು. ಹೀಗೆಯೇ ಎಚ್ಚರದಲ್ಲಾಗುವ ಭಯವೆಲ್ಲವೂ ಇಲ್ಲಿ ಕಾಣಿಸಿಕೊಳ್ಳುವದು. ಆದರೆ ಅವಿದ್ಯೆಯು ಕಡಿಮೆಯಾಗುತ್ತಾ ಬಂದಂತೆ ತಾನು ದೇವತೆಯಾಗಿರುವಂತೆಯೂ ರಾಜನಾಗಿರುವಂತೆಯೂ ಸರ್ವಾತ್ಮನಾಗಿರುವಂತೆಯೂ ತೋರುವದು. ಇವುಗಳಲ್ಲಿ ಸರ್ವಾತ್ಮಭಾವವೇ ಪರಮಭೋಗವು. ಹೀಗೆ ಅವಿದ್ಯೆಯು ಹೆಚ್ಚುಕಡಿಮೆ

ಯಾಗುತ್ತಿರುವದರಿಂದಲೂ ವಿದ್ಯೆಯಿಂದ ಸಂಪೂರ್ಣವಾಗಿ ತೊಲಗುವದರಿಂದಲೂ ಅವಿದ್ಯೆಯು ಆತ್ಮಧರ್ಮವಲ್ಲವೆಂದಾಯಿತು.

೨೧-೩೩. ಸುಷುಪ್ತಿಯಲ್ಲಿ ಯಾವ ಕಾಮವೂ ಇರುವದಿಲ್ಲ ಧರ್ಮಾಧರ್ಮಗಳಿರುವದಿಲ್ಲ, ಅವಿದ್ಯೆಯಿರುವದಿಲ್ಲ. ಒಬ್ಬನು ತನ್ನ ಪ್ರಿಯೆಯಿಂದ ಆಲಿಂಗಿತನಾಗಿರುವಾಗ ಒಳಗಾಗಲಿ ಹೊರಗಾಗಲಿ ಏನನ್ನೂ ಅರಿಯದಿರುವಂತೆ ಈ ಜೀವನು ಪ್ರಾಜ್ಞಾತ್ಮನಿಂದ ಆಲಿಂಗಿತನಾಗಿ ಒಂದಾಗಿರುವದರಿಂದ ಇಲ್ಲಿ ಏನನ್ನೂ ಅರಿಯದಿರುವನು. ಇದು ಯಾವ ಕಾಮವೂ ಶೋಕವೂ ಇಲ್ಲದ ಸ್ಥಿತಿಯು. ಇಲ್ಲಿ ತಂದೆ, ತಾಯಿ, ಲೋಕ, ದೇವ, ವೇದ - ಮುಂತಾದ ಸತ್ಕರ್ಮಸಂಬದ್ಧವಾದದ್ದು ಯಾವದೂ ಇರುವದಿಲ್ಲ; ಸ್ವರ್ಣಸ್ತೇಯ, ಭ್ರೂಣಹತ್ಯ, ಚಂಡಾಲತ್ವ, ಪುಲ್ಕಸತ್ವ - ಮುಂತಾದ ಅಶುಭಕರ್ಮಸಂಬಂದವಾದದ್ದೂ ಇರುವದಿಲ್ಲ. ಯಾವ ವರ್ಣಾಶ್ರಮಧರ್ಮವೂ ಅಂಟಿರುವದಿಲ್ಲ. ಪಾಪಪುಣ್ಯಗಳು ಹಿಂಬಾಲಿಸಿರುವದಿಲ್ಲ; ಹೃದಯಸಂಬದ್ಧವಾದ ಎಲ್ಲಾ ಶೋಕಗಳನ್ನೂ ಇವನು ದಾಟಿರುತ್ತಾನೆ.

ಇಲ್ಲಿ ಇವನು ಏನನ್ನೂ ನೋಡುವದಿಲ್ಲ, ಮೂಸುವದಿಲ್ಲ, ಸವಿಯುವದಿಲ್ಲ, ಮಾತಾಡುವದಿಲ್ಲ, ಕೇಳುವದಿಲ್ಲ, ಮನನಮಾಡುವದಿಲ್ಲ, ಮುಟ್ಟುವದಿಲ್ಲ, ಅರಿಯುವದಿಲ್ಲ. ಆಗ ಇವನಿಗೆ ಅರಿಯುವ ಶಕ್ತಿಯಿರುವದಿಲ್ಲವೆಂದೇನೂ ಅಭಿಪ್ರಾಯವಲ್ಲ; ಏಕೆಂದರೆ ಅರಿವೇ ಇವನ ಸ್ವಭಾವವಾಗಿರುತ್ತದೆ. ಆದರೆ ಅರಿಯುವದಕ್ಕೆ ಬೇಕಾದ ಕರಣವಾಗಲಿ ಅದರಿಂದರಿಯಬೇಕಾದ ವಿಷಯವಾಗಲಿ ಇವನ ಸ್ವರೂಪಕ್ಕಿಂತ ವಿಂಗಡವಾಗಿ ಬೇರೆಯಾಗಿರುವದಿಲ್ಲ. ಎಲ್ಲಿ ಮತ್ತೊಂದು ಇರುವಂತೆ ಅವಿದ್ಯೆಯಿಂದ ತೋರುವದೋ ಆ ಎಚ್ಚರಕನಸುಗಳಲ್ಲಿ ಬೇರೆಯಾಗಿದ್ದುಕೊಂಡು ತನಗಿಂತ ಬೇರೆಯಾಗಿ ತೋರುವ ಮತ್ತೊಂದನ್ನು ಅರಿಯಬಹುದಾಗಿರುತ್ತದೆ; ಆದರೆ ಇಲ್ಲಿ ಎಲ್ಲವೂ ಒಂದೇ ಆಗಿಬಿಟ್ಟಿರುವದರಿಂದ ಹಾಗಾಗುವಂತಿರುವದಿಲ್ಲ. ತಿಳಿನೀರಿನಂತೆ ಸ್ವಚ್ಛನಾಗಿ, ಅದ್ವೈತನಾದ ದ್ರಷ್ಟೃವಾಗಿರುತ್ತಾನೆ. ಇದೇ ಬ್ರಹ್ಮಲೋಕವು, ಇದೇ ಜೀವನ ಪರಮಗತಿಯು, ಇದೇ ಇವನಿಗೆ ಪರಮಸಂಪತ್ತು ಇದೇ ಇವನ ಪರಮ ಲೋಕವು, ಇದೇ ಇವನ ಪರಮಾನಂದವು. ಇದರ ಅಂಶವನ್ನೇ ಮಿಕ್ಕ ಪರಿಚ್ಛಿನ್ನ ಭೂತಗಳು ಉಪಜೀವಿಸಿಕೊಂಡಿರುವವು. ಮನುಷ್ಯರು, ಪಿತೃಗಳು, ಗಂಧರ್ವರು, ಕರ್ಮದೇವತೆಗಳು, ಆಜಾನದೇವತೆಗಳು, ಪ್ರಜಾಪತಿಲೋಕ, ಬ್ರಹ್ಮಲೋಕ - ಇವುಗಳಲ್ಲಿರುವ ಆನಂದಗಳು ಒಂದಕ್ಕಿಂತ ಒಂದು ನೂರ್ಮಡಿಯಾಗಿರುವವು.

ಇವುಗಳಲ್ಲಿ ಕೆಳಗಿನ ಮಟ್ಟದ ಆನಂದಗಳಲ್ಲಿ ವಿರಕ್ತನಾಗಿ ಶ್ರೋತ್ರಿಯನೂ ಪಾಪರಹಿತನೂ ಆಗಿರುವವನಿಗೆ ಮೇಲುಮೇಲಿನ ಆನಂದಗಳು ಅನುಭವಕ್ಕೆ ಬರುವವು. ಆದರೆ ಈಗ ನಾನು ಹೇಳಿರುವ ಸೌಷುಪ್ತಾನಂದವೆಂಬ ಪರಮಾನಂದವೇ ಎಲ್ಲಕ್ಕೂ ಮಿಗಿಲಾದದ್ದು; ಇದೇ ಬ್ರಹ್ಮಲೋಕವು.

ಹೀಗೆನ್ನಲು ಜನಕನು ಸಂತುಷ್ಟನಾಗಿ 'ನಿನಗೆ ಸಾವಿರಗೋವುಗಳನ್ನು ಕೊಟ್ಟಿರುವೆನು; ಇನ್ನು ಮುಂದಕ್ಕೆ ವಿಮೋಕ್ಷಕ್ಕೆ ಬೇಕಾದ ಜ್ಞಾನವನ್ನೇ ಹೇಳು' ಎಂದನು. "ರಾಜನು ಕಾಮುಪ್ಯಶ್ನೆಯ ನೆಪದಿಂದ ನನ್ನ ವಿದ್ಯೆಯನ್ನೆಲ್ಲ ಸೆಳೆದುಕೊಳ್ಳುತ್ತಿದ್ದಾನಲ್ಲ"- ಎಂದು ಯಾಜ್ಞವಲ್ಕ್ಯನಿಗೆ ಈಗ ಭಯವಾಯಿತು.

೩೪-೩೮. ಈಗ - 'ಈ ಜಾಗ್ರದಾದ್ಯವಸ್ಥೆಗಳಿಗೆ ದಾರ್ಷ್ಟಾಂತಿಕವಾಗಿ ಬಂಧ ಮೋಕ್ಷಗಳನ್ನು ತಿಳಿಸುವೆನು, ಕೇಳು' ಎಂದು ಯಾಜ್ಞವಲ್ಕ್ಯನು ಪ್ರಾರಂಭಿಸಿದನು. ಹಿಂದೆ ಹೇಳಿದಂತೆ ಸ್ವಪ್ನಾವಸ್ಥೆಯಲ್ಲಿ ಬಗೆಬಗೆಯಾಗಿ ವಿಹರಿಸಿದ ಜೀವನು ಎಚ್ಚರಕ್ಕೆ ಬರುತ್ತಾನಷ್ಟೆ ಅಲ್ಲಿ ಯಾವಾಗ ಅವನಿಗೆ ಮೇಲುಸಿರಿಡುವದೋ ಆಗ ಸಾಮಾನುಗಳನ್ನು ತುಂಬಿದ ಬಂಡಿಯು ಶಬ್ದಮಾಡುತ್ತಾ ಬಂಡಿಯವನು ಮೇಲಿರಲು ಮುನ್ನಡೆಯುವಂತೆ ಪ್ರಾಜ್ಞಾತ್ಮನು ಮೇಲಿರಲು ಈ ಆತ್ಮನೂ ಶಬ್ದಮಾಡುತ್ತಾ ಮುನ್ನಡೆಯುವನು. ಮೂಡಿನಹಣ್ಣು ಅತ್ತಿಯಹಣ್ಣು ಅರಳಿಹಣ್ಣು- ಮುಂತಾದವುಗಳು ಪಕ್ವವಾದಾಗ ಬಗೆಬಗೆಯ ನಿಮಿತ್ತಗಳಿಂದ ಕಳಚಿಬೀಳುವಂತೆ ಇವನು ಮುಪ್ಪಿನಿಂದಲೋ ಬೇನೆ ಮುಂತಾದದ್ದರಿಂದಲೋ ಬಡಕಲಾಗಿ ಕೈಕಾಲುಗಳನ್ನು ಬಿಟ್ಟು ಮತ್ತೊಂದು ಶರೀರಕ್ಕೆ ಹೋಗುವನು. ಇವನ ಕರ್ಮದಿಂದ ಪ್ರೇರಿತವಾದ ಭೂತಗಳೂ ದೇವತೆಗಳೂ ರಾಜನ ಆಗಮನವನ್ನು ನಿರೀಕ್ಷಿಸುತ್ತಿರುವ ಭೃತ್ಯರಂತೆ ಕೂಡಲೇ ಅಲ್ಲಿಗೆ ಬಂದು ದೇಹವನ್ನೇರ್ಪಡಿಸುವವು. ಇವನು ಮರಣವೇಳೆಯಲ್ಲಿ ಯಾವ ಕ್ರಿಯೆಯನ್ನೂ ಮಾಡದಿದ್ದರೂ ಕರ್ಮಪ್ರೇರಿತವಾದ ಕರಣಗಳೆಲ್ಲವೂ ಭೂತಮಾತ್ರೆಗಳೂ, ಇವನ ಹಿಂದೆಯೇ ರಾಜನು ಹೊರಟರೆ ಭೃತ್ಯರು ತಾವೇ ಅರಿತುಕೊಂಡು ಜೊತೆಯಲ್ಲಿರುವಂತೆ, ಜೊತೆಯಲ್ಲಿಯೇ ಬಂದಿರುವವು.

ಮಿಕ್ಕ ಸಂಸಾರದ ಪ್ರಕಾರವೂ ಮೋಕ್ಷಸ್ವರೂಪವೂ ಮುಂದಿನ ಬ್ರಾಹ್ಮಣದಲ್ಲಿ ವರ್ಣಿತವಾಗಿರುತ್ತವೆ.

ನಾಲ್ಕನೆಯ ಬ್ರಾಹ್ಮಣದ ಸಾರ

ಕಾಮದಿಂದ ಜನ್ಮಾಂತರಪ್ರಾಪ್ತಿಯೂ ಕಾಮನಾಶದಿಂದ ಬ್ರಹ್ಮಪ್ರಾಪ್ತಿಯೂ ಆಗುವವೆಂದು ಈ ಬ್ರಾಹ್ಮಣದಲ್ಲಿ ಹೇಳಿರುತ್ತದೆ.

೧-೨. ದೌರ್ಬಲ್ಯದಿಂದ ಮೋಹವನ್ನು ಹೊಂದಿದಂತಾಗುವ ಮರಣಕಾಲದಲ್ಲಿ ಈ ಜೀವನು ಪ್ರಾಣಗಳನ್ನು ಉಪಸಂಹಾರಮಾಡಿಕೊಂಡು ಹೃದಯವನ್ನು ಸೇರುತ್ತಾನೆ. ಆಗ ಕರಣಗಳ ಅಧಿದೇವತೆಗಳ ಅಂಶಗಳು ತಮ್ಮತಮ್ಮ ಮೂಲರೂಪವನ್ನು ಸೇರಿಕೊಳ್ಳುವವು ; ಕರಣಗಳು ಈ ಲಿಂಗಾತ್ಮನಲ್ಲಿ ಒಂದಾಗಿ ಬಿಡುವದರಿಂದ ಅವುಗಳ ವ್ಯಾಪಾರವು ನಡೆಯುವದು ನಿಂತುಹೋಗುದು. ಇವನ ಹೃದಯದ ಕೊನೆಯು ಹೊಳೆಯುವದು ; ಆ ಬೆಳಕಿನ ಸಹಾಯದಿಂದ ಇವನು, ಯಾವ ಲೋಕವನ್ನು ಮುಂದೆ ಮುಟ್ಟಬೇಕೋ ಅದಕ್ಕನುಗುಣವಾಗಿ, ಚಕ್ಷುಸ್ಸೇ ಮುಂತಾದ ಕರಣಗಳ ಮೂಲಕ ಹೊರಹೊರಡುತ್ತಾನೆ. ಅವನ ಜೊತೆಯಲ್ಲಿ ಪ್ರಾಣವೂ ಮಿಕ್ಕ ಕರಣಗಳೂ ಹೊರಡುವವು. ಆಗ ಇವನಿಗೆ ಒಂದು ಬಗೆಯ ಪರತಂತ್ರವಾದ ವಿಶೇಷಜ್ಞಾನವುಂಟಾಗುವದು ; ಜ್ಞಾನಕರ್ಮಸಾಮಾನ್ಯಗಳೂ ಪೂರ್ವಪ್ರಜ್ಞೆ ಎಂಬ ವಾಸನೆಯೂ ಇವನನ್ನು ಹಿಂಬಾಲಿಸುವವು.

೩-೪. ಜಿಗಣೆಯು ಒಂದು ಕಡ್ಡಿಯನ್ನು ಬಿಟ್ಟು ಮತ್ತೊಂದು ಕಡ್ಡಿಗೆ ದಾಟಿ ಹೋಗುವಂತೆ, ಇವನು ಮತ್ತೊಂದು ಶರೀರದ ವಾಸನೆಯುಳ್ಳವನಾಗಿ ಈ ಶರೀರವನ್ನು ಬಿಟ್ಟು ಇದನ್ನು ನಿಶ್ಚೇಷ್ಟವಾಗಿ ಮಾಡಿ ಮತ್ತೊಂದು ಶರೀರಕ್ಕೆ ಸಾಗುವನು. ಅಕ್ಕಸಾಲೆಯು ಅದೇ ಚಿನ್ನದ ಚೂರನ್ನೇ ಉಪಯೋಗಿಸಿಕೊಂಡು ಬೇರೆಬೇರೆಯ ಒಡವೆಗಳನ್ನು ಮಾಡಿಕೊಳ್ಳುವಂತೆ ಈ ಜೀವನು ಹೀಗೆಯೇ ತನ್ನ ಕರ್ಮಜ್ಞಾನಗಳಿಗೆ ತಕ್ಕಂತೆ ಅದೇ ಭೂತಮಾತ್ರೆಗಳನ್ನೇ ಉಪಯೋಗಿಸಿಕೊಂಡು ಹೊಸ ಶರೀರಗಳನ್ನು ಮಾಡಿಕೊಳ್ಳುತ್ತಿರುವನು.

೫-೬. ಈ ಆತ್ಮನು ಅಸಂಸಾರಿಯಾದ ಬ್ರಹ್ಮವೇ ಆಗಿದ್ದರೂ ಉಪಾಧಿ ವಶದಿಂದ ವಿಜ್ಞಾನಮಯನೂ ಮನೋಮಯನೂ ಪ್ರಾಣಮಯನೂ ಚಕ್ಷುರಾದೀಂದ್ರಿಯಮಯನೂ ಪೃಥಿವ್ಯಾದಿಶರೀರಮಯನೂ ಕಾಮ, ಅಕಾಮ ; ಕ್ರೋಧ, ಅಕ್ರೋಧ ; ಧರ್ಮ, ಅಧರ್ಮ - ಇವುಗಳಿಂದ ಆಯಾ ತತ್ತ್ವದ ಪ್ರಾಚುರ್ಯವುಳ್ಳವನೂ ಆಗಿ ಸರ್ವಮಯನಾಗಿರುತ್ತಾನೆ. ತನ್ನ ಕರ್ಮ, ಆಚಾರ - ಇವುಗಳಿಗೆ

ತಕ್ಕಂತೆ ಒಳ್ಳೆಯವನೋ ಕೆಟ್ಟವನೋ ಆಗುತ್ತಿರುವನು ; ಆದ್ದರಿಂದ ಪುಣ್ಯಪಾಪಗಳೇ ಇವನ ಸಂಸಾರಕ್ಕೆ ಕಾರಣವೆಂದು ಹೇಳಬಹುದಾಗಿ ತೋರುತ್ತಿರುವದು. ಆದರೆ ಮುಖ್ಯವಾಗಿ ಇವನು ಕಾಮಮಯನೇ ಆಗಿ ಸಂಸಾರದಲ್ಲಿ ತೊಳಲುತ್ತಿರುತ್ತಾನೆಂಬುದೇ ಸಿದ್ಧಾಂತವು ; ಏಕೆಂದರೆ ಕಾಮದಂತೆ ಕ್ರತು, ಕ್ರತುವಿನಂತೆ ಕರ್ಮ, ಕರ್ಮದಂತೆ ಆಯಾ ಫಲವ ಭೋಗ - ಇವುಗಳು ಉಂಟಾಗುತ್ತಿರುವವು. ಆದ್ದರಿಂದ ಸಂಗ್ರಹವಾಗಿ ಹೇಳಬೇಕಾದರೆ, ಇವನ ಮನಸ್ಸು ಏತರಲ್ಲಿ ಸಕ್ತವಾಗಿರುವದೋ ಅದನ್ನೇ ಇವನು ಕರ್ಮದೊಡನೆ ಹೋಗಿ ಪಡೆಯುತ್ತಾನೆ ; ಆ ಲೋಕದಲ್ಲಿ ಫಲವನ್ನನುಭೋಗಿಸಿದ ಬಳಿಕ ಕರ್ಮವನ್ನು ಮಾಡುವದಕ್ಕೆಂದು ಮತ್ತೆ ಈ ಲೋಕಕ್ಕೆ ಮರಳಿ ಬರುತ್ತಾನೆ. ಇಲ್ಲಿಯವರೆಗೆ ಹೇಳಿದ ಸಂಸಾರಕ್ರಮವು ಕಾಮಿಯಾದವನಿಗೆ ಆಗತಕ್ಕದ್ದು.

೬-೭. ಇನ್ನು ಕಾಮಿಸದೆ ಇರುವವನ ವಿಷಯವನ್ನು ಹೇಳಲಾಗುವದು. ಯಾವನು ಆತ್ಮಕಾಮನಾಗಿರುವದರಿಂದ ಆಪ್ತಕಾಮನಾಗಿರುವನೋ ಅದರಿಂದ ಇಚ್ಛೆಗಳೆಲ್ಲವೂ ಹೋಗಿಬಿಡುವದರಿಂದ ಅಕಾಮನೆನಿಸಿರುವನೋ ಅವನ ಪ್ರಾಣಗಳು ಮೇಲಕ್ಕೆ ಹೋಗುವದಿಲ್ಲ. ಅವನು ಈಗಲೂ ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿಯೇ ಸೇರಿಹೋಗುತ್ತಾನೆ. ಹೀಗೆ ಹೃದಯಾಶ್ರಿತವಾದ ಕಾಮಗಳೆಲ್ಲವೂ ಸಂಪೂರ್ಣವಾಗಿ ತೊಲಗಿಹೋದಾಗ ಮರ್ತ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುವನು. ಪರೆಯನ್ನು ಬಿಟ್ಟ ಹಾವು ಮತ್ತೆ ಹತ್ತಿರವಿದ್ದರೂ ಆ ಪರೆಯಲ್ಲಿ ಹೇಗೆ ಅಭಿಮಾನವನ್ನು ಮಾಡಿಕೊಳ್ಳದೆ ಇರುವದೋ ಹಾಗೆಯೇ ಜ್ಞಾನಿಯೂ ಮುಕ್ತನಾಗಿ ನಿರಭಿಮಾನದಿಂದ ಬಿಟ್ಟ ಶರೀರವು ಸತ್ತಂತೆ ಇದ್ದು ಕೊಂಡಿರುವದು ; ಆದರೆ ಅವನು ಮಾತ್ರ ಆ ಶರೀರದಲ್ಲಿಯೇ ಇದ್ದರೂ ಅಶರೀರನೇ. ಈಗ ಅವನು ಪ್ರಾಣಕ್ಕೂ ಪ್ರಾಣನಾಗಿರುವ ಪರಮಾತ್ಮನೇ, ಚೈತನ್ಯಜ್ಯೋತಿಯೇ.

೮-೨೧. ಹೀಗೆಂದು ಯಾಜ್ಞವಲ್ಕ್ಯನು ಹೇಳಲು ಜನಕನು ಈಗಲೂ 'ಸಾವಿರ ಗೋಗಳನ್ನು ಕೊಟ್ಟಿದ್ದೇನೆ' ಎಂದೇ ಹೇಳಿದನು. ಯಾಜ್ಞವಲ್ಕ್ಯನು ಆತ್ಮಕಾಮನಿಗೆ ಮೋಕ್ಷವೇ ಫಲವೆಂಬುದನ್ನು ಕೆಲವು ಮಂತ್ರಗಳಿಂದ ಸಂಗ್ರಹಿಸಿ ಹೇಳಿದನು. ಅವುಗಳ ಸಾರವಿದು : ಪರಮಸೂಕ್ಷ್ಮವಾದ ಚಿರಂತನವಾದ ಜ್ಞಾನ ಮಾರ್ಗವು ಮುಕ್ತನ ಸ್ವಾನುಭವಕ್ಕೆ ಗೊತ್ತಾಗತಕ್ಕದ್ದು ; ಜ್ಞಾನಿಗಳಾದ ಮುಕ್ತರೆಲ್ಲರೂ ಆ ಮಾರ್ಗದಿಂದ ಬ್ರಹ್ಮವನ್ನು ಪಡೆದುಕೊಳ್ಳುತ್ತಾರೆ. ಶುಕ್ಲನೀಲಾದಿವರ್ಣಗಳ

ನಾಡಿಗಳ ಮುಖದಿಂದ ಹೋಗುವ ಉಪಾಸಕರಿಗೆ ಈ ಮಾರ್ಗವು ದೊರಕದು ; ಬ್ರಹ್ಮಜ್ಞಾನಿಗೊಬ್ಬನಿಗೇ ದೊರೆಯುತ್ತದೆ. ಅದರಿಂದ ಹೋಗುವ ಬ್ರಹ್ಮಜ್ಞಾನಿಯೇ ನಿಜವಾಗಿ ಪುಣ್ಯವನ್ನು ಮಾಡಿದವನು, ಅವನೇ ನಿಜವಾದ ಉಪಾಸಕನು. ಸಾಧ್ಯ ಸಾಧನರೂಪವಾದ ಅವಿದ್ಯೆಯನ್ನು ಎಂದರೆ ಕರ್ಮೋಪಾಸನೆಗಳನ್ನು ಅನುಸರಿಸುವವರಿಗೆ ಅಂಧಂತಮಸ್ಸೇ ಗತಿ ; ಉಪನಿಷತ್ತನ್ನು ಕೈಬಿಟ್ಟು ಬರಿಯ ವಿಧಿನಿಷೇಧಪರವಾದ ವೇದವೇ ನಿಜವಾದ ವೇದವೆಂದು ನಂಬುವವರಿಗೆ ಇನ್ನೂ ಹೆಚ್ಚಿನ ಅಂಧಂತಮಸ್ಸೇ ಗತಿ, ಆತ್ಮಜ್ಞಾನವಿಲ್ಲದ ಅಜ್ಞರಿಗೆ ದುಃಖವೇ ಫಲ. ಈ ಆತ್ಮನೇ ನಾನು ಎಂಬ ಅನುಭವವನ್ನು ಹೊಂದಿರುವ ಪುರುಷನು ಏನನ್ನೂ ಬಯಸುವದಿಲ್ಲ; ಅವನು ಯಾವ ಕಾಮಕ್ಕಾಗಿಯೂ ಶರೀರಾಭಿಮಾನದಿಂದ ಸಂಸಾರದಲ್ಲಿ ತೊಳಲಬೇಕಾದದ್ದಿರುವದಿಲ್ಲ. ಯಾವನಿಗೆ ಈ ಸಂಸಾರಗಹನದಲ್ಲಿ ಪ್ರವಿಷ್ಟನಾಗಿರುವ ಆತ್ಮನೇ ಪರಮಾತ್ಮನೆಂಬ ಅರಿವು ಉಂಟಾಗಿರುವದೋ ಅವನೇ ಸರ್ವಕ್ಕೂ ಕರ್ತನು ; ಅವನು ಎಲ್ಲರಿಗೂ ಆತ್ಮನು, ಎಲ್ಲವೂ ಅವನಿಗೆ ಆತ್ಮವಾಗಿರುವದು. ಈ ಸಂಸಾರದಲ್ಲಿರುವಾಗಲೇ ಬ್ರಹ್ಮತತ್ತ್ವವನ್ನು ತಿಳಿದುಕೊಳ್ಳಬೇಕು ; ಇಲ್ಲದಿದ್ದರೆ ಬಹಳ ನಷ್ಟವಾಗುವದು ; ಅದನ್ನು ತಿಳಿದವರೇ ಅಮೃತರಾಗುವರು, ಮಿಕ್ಕವರು ದುಃಖಿಭಾಜನರಾಗುವರು. ಯಾವಾಗ ಈ ಆತ್ಮನನ್ನೇ ಭೂತಭವ್ಯಕ್ಕೆ ಒಡೆಯನಾದ ದೇವನೆಂದು ಕಂಡುಕೊಳ್ಳುವನೋ ಆಗ ತನ್ನನ್ನು ಕಾಪಾಡಿಕೊಳ್ಳುವದಕ್ಕೆ ತವಕಿಸುವದಿಲ್ಲ, ಏನನ್ನೂ ನಿಂದಿಸುವದಿಲ್ಲ. ಯಾವದಕ್ಕಿಂತ ಬೇರೆಯಾದ ವಿಷಯದಲ್ಲಿಯೇ ಕಾಲವು ವ್ಯಾಪಾರ ಮಾಡುತ್ತಿರುವದೋ ಆ ಜ್ಯೋತಿಗಳಿಗೆಲ್ಲ ಜ್ಯೋತಿಯಾದ ಪರಮಾತ್ಮನನ್ನು ಆಯುಸ್ಸು ಎಂದು ದೇವತೆಗಳು ಉಪಾಸನೆಮಾಡುತ್ತಿರುವರು ; ಆದ್ದರಿಂದ ಆಯುಷ್ಕಾಮರಾದವರು ಹಾಗೆಂದು ಉಪಾಸನೆಮಾಡಬೇಕು. ಐದುಜನ ಪಂಚಜನರೂ ಅವ್ಯಾಕೃತಾಕಾಶವೂ ಏತರಮೇಲೆ ನಿಂತಿರುವವೋ ಆ ಆತ್ಮನೇ ಬ್ರಹ್ಮವೆಂದು ತಿಳಿದವನು ಅಮೃತನಾಗಿರುವನು. ಬ್ರಹ್ಮವು ಪ್ರಾಣಕ್ಕೆ ಪ್ರಾಣವೂ ಚಕ್ಷುಸ್ಸಿಗೆ ಚಕ್ಷುಸ್ಸೂ ಶ್ರೋತ್ರಕ್ಕೆ ಶ್ರೋತ್ರವೂ ಮನಸ್ಸಿಗೆ ಮನಸ್ಸೂ ಆಗಿರುವದೆಂದು ಯಾರು ಅರಿತಿರುವರೋ ಅವರೇ ಪುರಾತನವಾದ ಸರ್ವಕಾರಣವಾದ ಬ್ರಹ್ಮವನ್ನು ಅರಿತವರು. ಸಂಸ್ಕೃತವಾದ ಮನಸ್ಸಿನಿಂದಲೇ ಆ ಬ್ರಹ್ಮವನ್ನು ಅರಿತುಕೊಳ್ಳಬೇಕು. ಅದರಲ್ಲಿ ಒಂದಿಷ್ಟೂ ನಾನಾತ್ವವು ಇರುವದಿಲ್ಲ. ಯಾವನು ಅದರಲ್ಲಿ ನಾನಾತ್ವವಿರುವಂತೆ ಕಾಣುವನೋ ಅವನು ಸಾವಿನಮೇಲೆ ಸಾವನ್ನು ಪಡೆಯುತ್ತಿರುವನು. ಆ ಅಪ್ರಮೇಯವಾದ ಬ್ರಹ್ಮವನ್ನು ಏಕರಸವಾಗಿಯೇ ಕಂಡುಕೊಳ್ಳಬೇಕು ; ಅದು

ಧರ್ಮಾಧರ್ಮಾದಿಕಲ್ಮಷವಿಲ್ಲದ್ದು. ಅವ್ಯಾಕೃತಾಕಾಶಕ್ಕಿಂತಲೂ ಸೂಕ್ಷ್ಮವಾದದ್ದು ಅವನೇ ಜನ್ಮರಹಿತನಾದ ಮಹಾಂತವಾದ ನಾಶರಹಿತವಾದ ಆತ್ಮನು. ಅವನನ್ನೇ ಜಾಣನಾದವನು ಅರಿತುಕೊಂಡು ಪ್ರಜ್ಞಾಸಾಧನಗಳನ್ನು ಅಳವಡಿಸಿಕೊಳ್ಳಬೇಕು. ಅನಾತ್ಮಪ್ರತಿಪಾದಕವಾದ ಬಹಳ ಶಬ್ದಗಳನ್ನು ಚಿಂತಿಸಬಾರದು ; ಏಕೆಂದರೆ ಅದು ವಾಗಿಂದ್ರಿಯಕ್ಕೆ ಆಯಾಸವನ್ನುಂಟುಮಾಡುತ್ತದೆ.

೨೨-೨೩. ಈ ಪ್ರಾಣಗಳ ನಡುವೆ ವಿಜ್ಞಾನಮಯನಾಗಿರುವ ಈ ಆತ್ಮನಿದಾನಲ್ಲ, ಅವನೇ ಮಹಾಂತನೂ ಅಜನೂ ಆದ ಆತ್ಮನು. ಇವನು ಸುಷುಪ್ತಿಯಲ್ಲಿ ತನ್ನ ಪರಮಾತ್ಮ ಸ್ವರೂಪದಲ್ಲಿಯೇ ಇರುತ್ತಿರುವನು. ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವವನು, ಎಲ್ಲವನ್ನೂ ಆಳುವವನು, ಎಲ್ಲಕ್ಕೂ ಅಧಿಪತಿಯು. ಇವನು ಒಳ್ಳೆಯ ಕರ್ಮದಿಂದ ಹೆಚ್ಚುವದಿಲ್ಲ, ಕೆಟ್ಟ ಕರ್ಮದಿಂದ ಕುಂದುವದಿಲ್ಲ. ಇವನೇ ಸರ್ವೇಶ್ವರನು, ಇವನೇ ಪ್ರಾಣಿಗಳ ಅಧಿಪತಿಯು, ಇವನೇ ಭೂತಗಳನ್ನು ರಕ್ಷಿಸುವಾತನು, ಇವನೇ ಈ ಲೋಕಗಳು ಒಂದರೊಡನೊಂದು ಸಂಕರವಾಗದಂತೆ ತಡೆದಿಟ್ಟಿರುವ ಸೇತು.

ಅಧ್ಯಯನ, ಯಜ್ಞ, ದಾನ, ತಪಸ್ಸು - ಇವುಗಳಿಂದ ಈತನನ್ನು ತಿಳಿಯುವ ಇಚ್ಛೆಯನ್ನು ಸಂಪಾದಿಸಿಕೊಳ್ಳಬೇಕು. ಇವನನ್ನು ಅರಿತರೇ ಮುನಿಯಾಗುವನು. ಈ ಆತ್ಮಲೋಕವನ್ನು ಪಡೆಯಲಿಚ್ಛಿಸುವವರು ಪಾರಿವ್ರಾಜ್ಯವನ್ನು ಹೊಂದಬೇಕು ; ಏಕೆಂದರೆ ಅರಿತವರು ಲೋಕತ್ರಯಸಾಧನವಾದ ಪುತ್ರಾದಿಗಳನ್ನು ಬಯಸುವದಿಲ್ಲ.

ಈ ಆತ್ಮನು ಕರ್ಮಕ್ಕೆ ಸಂಬದ್ಧನಲ್ಲ ; ಏಕೆಂದರೆ ಇವನು ನೇತಿ ನೇತಿ ಎಂಬ ಸ್ವರೂಪದ ಆತ್ಮನು ; ಅಗೃಹ್ಯನು, ಅಶೀರ್ಯನು, ಅಸಂಗನು, ಅಸಿತನು.

ಈ ಆತ್ಮನನ್ನರಿತುಕೊಂಡವನಿಗೆ 'ಪಾಪವನ್ನು ಮಾಡಿದೆನಲ್ಲ', 'ಪುಣ್ಯವನ್ನು ಮಾಡಿದೆನಲ್ಲ'- ಎಂಬ ಪಶ್ಚಾತ್ತಾಪವಾಗಲಿ ಹರ್ಷವಾಗಲಿ ಅಂಟುವದಿಲ್ಲ ; ಇವನು ಈ ಎರಡನ್ನೂ ಮೀರುವನು. ಇವನನ್ನು ಮಾಡಿದ ಅಥವಾ ಮಾಡದೆ ಇರುವ ಕರ್ಮಗಳು ತಾಪಗೊಳಿಸುವದಿಲ್ಲ. ಈ ಅಭಿಪ್ರಾಯವನ್ನು ಒಂದು ಮಂತ್ರವು ತಿಳಿಸುತ್ತದೆ : ಇದು ಬ್ರಹ್ಮಜ್ಞಾನಿಯ ನಿತ್ಯಮಹಿಮೆಯು ; ಅವನು ಕರ್ಮದಿಂದ ವೃದ್ಧಿಯಾಗುವದಿಲ್ಲ, ಕಡಿಮೆಯಾಗುವದೂ ಇಲ್ಲ. ಆ ಮಹಿಮಾರೂಪವನ್ನು ಅರಿತುಕೊಂಡವನು ಕರ್ಮಲಿಪ್ತನಾಗನು.

೨೪. ಆದ್ದರಿಂದ ಹೀಗೆಂದರಿತವನು ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ - ಇವುಗಳಿಂದ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕು, ಸರ್ವವನ್ನೂ ಆತ್ಮನಲ್ಲಿ ಕಂಡುಕೊಳ್ಳಬೇಕು.

ಹೀಗೆಂದರಿತವನಿಗೆ ಪುಣ್ಯಪಾಪಗಳು ತಟ್ಟುವದಿಲ್ಲ. ಇವನು ಅವನ್ನು ಮೀರಿರುತ್ತಾನೆ ; ಪಾಪವಿಲ್ಲದವನೂ ನಿಷ್ಕಾಮನೂ ನಿಸ್ಸಂಶಯನೂ ಮುಖ್ಯಾರ್ಥ ದಲ್ಲಿ ಬ್ರಾಹ್ಮಣನೂ ಆಗಿರುತ್ತಾನೆ.

ಸಮ್ರಾಜನೆ, ಇದೇ ನಿಜವಾದ ಬ್ರಹ್ಮವೆಂಬ ಲೋಕವು. ಇದನ್ನು ನೀನು ಈಗ ಪಡೆದಿರುವೆ' ಎಂದು ಯಾಜ್ಞವಲ್ಕ್ಯನು ನುಡಿದನು.

ಆಗ ಜನಕನು ''ನಿಜ, ಪಡೆದೆನು. ಈ ವಿದ್ಯೆಗಾಗಿ ತಮಗೆ ವಿದೇಹರಾಜ್ಯವನ್ನೇ ಕೊಟ್ಟಿರುವೆನು, ನಾನೂ ತಮ್ಮ ದಾಸನಾಗಿರುವೆನು'' ಎಂದನು.

೨೫. ಈ ಸಂಸಾರ್ಯಾತ್ಮನೇ ಮಹಾಂತನೂ ಅಜನೂ ಆದ ಪರಮಾತ್ಮನು. ಇವನು ಅನ್ನಾದನು, ವಸುದಾನನು ; ಹೀಗೆಂದು ಉಪಾಸನೆಮಾಡಿ ದವನು ಅನ್ನಾದನಾಗುವನು, ಇಷ್ಟವಾದ ಧನವನ್ನು ಪಡೆಯುವನು. ಈ ಸಂಸಾರ್ಯಾತ್ಮನೇ ನಿಜವಾಗಿ ಮಹಾಂತನೂ ಅಜನೂ ಆದ ಆತ್ಮನು. ಇವನು ಅಜರನು, ಅಮರನು, ಅಮೃತನು, ಅಭಯರೂಪನು, ಬ್ರಹ್ಮವು. ಬ್ರಹ್ಮವು ಅಭಯವಷ್ಟೆ ? ಆದ್ದರಿಂದ ಅದನ್ನು ಅರಿತುಕೊಂಡವನು ಅಭಯಬ್ರಹ್ಮವೇ ಆಗುವನು.

ಐದನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ಮಧುಮುನಿಕಾಂಡಗಳಲ್ಲಿ ಆಗಮೋಪಪತ್ತಿಗಳಿಂದ ಸಿದ್ಧವಾಗಿರುವ ಬ್ರಹ್ಮತತ್ತ್ವವನ್ನೂ ಸಸಂನ್ಯಾಸಬ್ರಹ್ಮಜ್ಞಾನವನ್ನೂ ಉಪಸಂಹಾರಮಾಡಿ ರುತ್ತದೆ. ಈ ಬ್ರಾಹ್ಮಣದ ಸಾರವನ್ನು ಒಂದನೆಯ ಸಂಪುಟದ ೬೭೩ನೆಯ ಪುಟ ದಲ್ಲಿ ವರ್ಣಿಸಿರುವಂತೆ ಊಹಿಸಿಕೊಳ್ಳಬೇಕು. ಇಲ್ಲಿರು ವಿಶೇಷವನ್ನು ಮಾತ್ರ ಸಂಕ್ಷಿಪ್ತವಾಗಿ ತಿಳಿಯಿಸುವೆವು.

೧-೪. ಯಾಜ್ಞವಲ್ಕ್ಯನು ಪಾರಿವ್ರಾಜ್ಯವನ್ನು ಪಡೆಯಲೆಳಸಿ ಜ್ಯೇಷ್ಠ ಭಾರ್ಯೆಯಾದ ಮೈತ್ರೇಯಿಗೂ ಅವಳ ಸವತಿ ಕಾತ್ಯಾಯನಿಗೂ ತನ್ನ ಧನವನ್ನು

ಪಾಲುಮಾಡಿಕೊಡುವದಕ್ಕೆ ಹೋದನು. ಮೈತ್ರೇಯಿಯು ಅದನ್ನೊಲ್ಲದೆ ಅಮೃತತ್ವ ಸಾಧನವನ್ನೇ ತಿಳಿಸಿಕೊಡಿ ಎಂದಳು.

೫-೭. ಯಾಜ್ಞವಲ್ಕ್ಯನು ತನ್ನ ಪ್ರಿಯಭಾರ್ಯೆಯ ಮಾತಿನಿಂದ ಹರ್ಷಿತನಾಗಿ ಆತ್ಮನೇ ಎಲ್ಲಕ್ಕಿಂತಲೂ ಪ್ರಿಯನಾಗಿರುವದರಿಂದ ಅವನನ್ನೇ ಶ್ರವಣಮನನನಿದಿಧ್ಯಾಸನಗಳಿಂದ ಕಂಡುಕೊಳ್ಳಬೇಕು ; ಆತ್ಮನನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಎಂದು ಹೇಳಿ ಯಾವದೇ ಆಗಲಿ ಆತ್ಮನಿಗಿಂತ ವ್ಯತಿರಿಕ್ತವಲ್ಲ ; ಎಲ್ಲವೂ ಆತ್ಮನೇ ಎಂಬುದನ್ನು ತಿಳಿಸಿಕೊಟ್ಟನು.

೮-೧೨. ನಗಾರಿ, ಶಂಖ, ವೀಣೆ - ಮುಂತಾದವುಗಳ ಶಬ್ದಗಳ ಸಾಮಾನ್ಯ ವಿಶೇಷಗಳನ್ನು ಶಬ್ದವೆಂಬ ಸಾಮಾನ್ಯದಲ್ಲಿಯೇ ಅಡಕಮಾಡಿ ಅರಿತುಕೊಳ್ಳಬೇಕಾಗಿರುವಂತೆ ಸ್ಥಿತಿಕಾಲದಲ್ಲಿ ಎಲ್ಲವೂ ತನ್ನಲ್ಲನುಗತವಾಗಿ ಚಿದ್ರೂಪಕ್ಕಿಂತ ಬೇರೆಯಲ್ಲವೆಂದು ಅರಿಯಬೇಕು. ಹಸಿಕಟ್ಟಿಗೆಯ ಬೆಂಕಿಯಿಂದ ಹೊಗೆ, ಕಿಡಿಗಳು - ಮುಂತಾದವುಗಳು ಹೊರಟುಬರುವಂತೆ ಉತ್ಪತ್ತಿಕಾಲದಲ್ಲಿ ನಾಮರೂಪಗಳೆಲ್ಲವೂ ಬ್ರಹ್ಮದಿಂದಲೇ ಹೊರಟುಬಂದಿರುವವು, ಅದಕ್ಕಿಂತ ಬೇರೆಯಲ್ಲ ಎಂದು ಅರಿಯಬೇಕು. ನೀರುಗಳಿಗೆಲ್ಲ ಸಮುದ್ರವೇ ಅಯನವಾಗಿರುವಂತೆ ಪ್ರಲಯಕಾಲದಲ್ಲಿಯೂ ಎಲ್ಲವೂ ಬ್ರಹ್ಮದಲ್ಲಿಯೇ ಅಡಗುತ್ತದೆ ; ಆದ್ದರಿಂದ ಬ್ರಹ್ಮಕ್ಕಿಂತ ಬೇರೆಯಾಗಿಲ್ಲ ಎಂದು ಅರಿಯಬೇಕು.

೧೩-೧೪. ಉಪ್ಪಿನಹರಳು ಎಲ್ಲೆಲ್ಲಿಯೂ ಉಪ್ಪಿನರಸವೇ ಉಳ್ಳದ್ದಾಗಿರುವಂತೆ ಆತ್ಮನು ಎಲ್ಲೆಲ್ಲಿಯೂ ಪ್ರಜ್ಞಾನಘನನೇ ಆಗಿರುತ್ತಾನೆ. ಉಪಾಧಿಗಳಿಂದ ಇವನಿಗೆ ವಿಶೇಷಜ್ಞಾನವು ತೋರಿಕೊಳ್ಳುತ್ತಿರುವದು ; ವಿದ್ಯೆಯಿಂದ ಅವನ್ನು ಪ್ರವಿಲಯಮಾಡಿಕೊಂಡರೆ ಯಾವ ವಿಶೇಷಜ್ಞಾನವೂ ಇರುವದಿಲ್ಲ. ಆತ್ಮನ ಚೈತನ್ಯಸ್ವರೂಪವು ಮಾತ್ರ ಎಂದೆಂದಿಗೂ ಅಚ್ಚಳಿಯದೆ ಇರುತ್ತದೆ. ಅವಿದ್ಯೆಯ ದ್ವೈತದಲ್ಲಿ ಮಾತ್ರವೇ ವಿಶೇಷಜ್ಞಾನವಿರುತ್ತದೆ. ಎಲ್ಲವೂ ಆತ್ಮನೇ ಆಗಿರುವ ಅದ್ವೈತದಲ್ಲಿ ಹೇಗೆತಾನೆ ವಿಶೇಷಜ್ಞಾನವಿದ್ದೀತು ?

೧೫. ಈ ಚಿನ್ಮಾತ್ರನಾಗಿರುವ ನಿರ್ವಿಶೇಷಾತ್ಮನೇ ನೇತಿ ನೇತಿ ಎಂದು ಹೇಳಿರುವ ಆತ್ಮನು. ಇವನು ಅಗೃಹ್ಯನು, ಅಶೀರ್ಯನು, ಅಸಂಗನು, ಅಸಿತನು. ಇವನು ಪತಕ್ಕೂ ವಿಷಯನಲ್ಲ, ವಿಜ್ಞಾತೃವಿನ ಸ್ವರೂಪವೇ ಆಗಿರುವದರಿಂದ ಇವನನ್ನು ಪತರಿಂದಲೂ ಅರಿಯುವದಕ್ಕೆ ಆಗಲಾರದು.

೧೬. "ಎಲೆ ಮೈತ್ರೇಯಿ, ನಿನಗೆ ಹೇಳತಕ್ಕದ್ದನ್ನು ಹೇಳಿದ್ದಾಯಿತು. ಈ ನಿರ್ವಿಶೇಷಾತ್ಮಜ್ಞಾನವೊಂದೇ ಅಮೃತತ್ವಕ್ಕೆ ಸಾಧನವು, ಇದಕ್ಕೆ ಮತ್ತೆ ಯಾವ ಸಹಕಾರಿಸಾಧನವೂ ಬೇಡ" - ಎಂದು ಹೇಳಿ ಯಾಜ್ಞವಲ್ಕ್ಯನು ಪರಿವ್ರಜನ ಮಾಡಿಬಿಟ್ಟನು.

ಐದನೆಯ ಅಧ್ಯಾಯ

ಒಂದನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ಓಂಕಾರದ ಉಪಾಸನೆಯನ್ನು ವಿಧಿಸಿದೆ.

೧. ನಿರುಪಾಧಿಕವಾದ ಪರಬ್ರಹ್ಮವು ಪೂರ್ಣವಾಗಿದೆ, ವ್ಯಾಪಿಯಾಗಿದೆ; ಸೋಪಾಧಿಕಬ್ರಹ್ಮವೂ ತನ್ನ ಪರಮಾರ್ಥಸ್ವರೂಪದಿಂದ ಪೂರ್ಣವೇ ಆಗಿದೆ. ಪೂರ್ಣದಿಂದ ಬಂದಿರುವ ವಿಶೇಷರೂಪದಾದರೂ ಈ ಬ್ರಹ್ಮವು ತನ್ನ ಪೂರ್ಣತ್ವವನ್ನು ಕಳೆದುಕೊಂಡಿಲ್ಲ ; ಇದರ ಪೂರ್ಣತ್ವವನ್ನು ವಿದ್ಯೆಯಿಂದ ಗ್ರಹಿಸಿದರೆ ಪ್ರಜ್ಞಾನಘನೈಕರಸವಾದ ಪೂರ್ಣವೇ ಆಗಿ ಉಳಿಯುತ್ತದೆ. ಬ್ರಹ್ಮವಿದ್ಯೆಯಿಂದ ಪರಮಾರ್ಥಸ್ವರೂಪವನು ಅರಿತುಕೊಂಡರೆ ಸರ್ವಾತ್ಮಭಾವವೇ ಬರುತ್ತದೆ ಎಂಬುದು ಉಪನಿಷತ್ತಿನ ಸಾರ.

'ಓಂ ಖಂ ಬ್ರಹ್ಮ' ಎಂಬುದೊಂದು ಮಂತ್ರವು. ಓಂಕಾರದಲ್ಲಿ ಆಕಾಶದಂತೆ ವ್ಯಾಪಕವಾಗಿರುವ ನಿರುಪಾಧಿಕದೃಷ್ಟಿಯನ್ನು ಮಾಡಬೇಕು. ಅವ್ಯಾಕೃತಾಕಾಶಶಬ್ದವಾಚ್ಯವಾದ ಸೋಪಾಧಿಕಬ್ರಹ್ಮದೃಷ್ಟಿಯನ್ನು ಮಾಡಬೇಕು ಎಂಬುದೇ ಈ ಮಂತ್ರದ ವಿನಿಯೋಗವೆಂದು ಮತಾಂತರ.

ಓಂಕಾರವು ಬ್ರಹ್ಮಕ್ಕೆ ಪ್ರತೀಕವಾಗಿ ಅಥವಾ ಸಮೀಪದ ಅಭಿಧಾನವಾಗಿರುವದರಿಂದ ಅದರಲ್ಲಿ ಬ್ರಹ್ಮದೃಷ್ಟಿಯನ್ನು ಮಾಡುವದು ಫಲದಾಯಕವು. ಓಂಕಾರವು ಬ್ರಹ್ಮದ ಹೆಸರಾದ್ದರಿಂದ ಅದರಿಂದ ಬ್ರಹ್ಮವನ್ನು ಅರಿತುಕೊಳ್ಳಬಹುದು; ವಿವೇಕಿಗಳಾದವರು ಬ್ರಹ್ಮದ ಅಭಿಧಾನವಾಗಿಯೇ ಅದನ್ನು ಸಾಧನವಾಗಿ ಮಾಡಿಕೊಳ್ಳಬಹುದು. ವೇದವೆಲ್ಲವೂ ಓಂಕಾರಾತ್ಮಕವಾಗಿರುವದರಿಂದಲೂ ವೇದದಿಂದ

ಸರ್ವಬ್ರಹ್ಮವನ್ನೂ ಅರಿಯುವಂತೆ ಓಂಕಾರದಿಂದಲೇ ಅರಿತುಕೊಳ್ಳಬಹುದಾದ್ದರಿಂದಲೂ ಈ ಓಂಕಾರವನ್ನು ಸರ್ವವೇದಗಳಲ್ಲಿಯೂ ಪ್ರಣವ, ಉದ್ಗೀಥ - ಮುಂತಾದ ರೂಪಗಳಿಂದ ಬ್ರಾಹ್ಮಣರು ಉಪಾಸನೆಮಾಡುತ್ತಿರುವದರಿಂದ ಇದರ ಪ್ರಯೋಗವು ಸರ್ವವೇದಗಳ ಪ್ರಯೋಗವೂ ಆಗುವದರಿಂದಲೂ ಓಂಕಾರವನ್ನು ತಿಪತಿಗೆ ಪ್ರತೀಕವಾಗಿ ಅಥವಾ ಅಭಿಧಾನವಾಗಿ ಸಾಧನವನ್ನಾಗಿ ಮಾಡಿಕೊಳ್ಳಬೇಕು.

ಎರಡನೆಯ ಬ್ರಾಹ್ಮಣದ ಸಾರ

ಇಲ್ಲಿ ದಮಾದಿಗಳನ್ನು ಉಪಾಸನಾಂಗವಾಗಿ ವಿಧಿಸಿದೆ

೧. ಪ್ರಜಾಪತಿಯ ಮಕ್ಕಳು ದೇವತೆಗಳು, ಮನುಷ್ಯರು, ಅಸುರರು- ಎಂದು ಮೂರು ಬಗೆ. ಇವರು ಆತನ ಬಳಿಯಲ್ಲಿ ಬ್ರಹ್ಮಚರ್ಯದಿಂದ ವಾಸವಾಗಿದ್ದರು.

ಅವರೊಳಗೆ ದೇವತೆಗಳು 'ನಮಗೆ ಹಿತಾನುಶಾಸನವನ್ನು ಮಾಡು' ಎಂದು ತಂದೆಯನ್ನು ಬೇಡಿಕೊಂಡರು. ಅವನು 'ದ' ಎಂಬಕ್ಷರವನ್ನುಚ್ಚರಿಸಿ 'ತಿಳಿಯಿತೆ ?' ಎಂದನು. ಅವರು 'ತಿಳಿಯಿತು, ದಾಂತರಾಗಿರಿ ಎಂದಿದೀಯೆ!' ಎಂದರು. ಅವನು 'ಸರಿ, ನಿಮಗೆ ತಿಳಿದಿದೆ' ಎಂದನು.

೨. ಆಗ ಮನುಷ್ಯರು 'ನಮಗೆ ಹಿತಾನುಶಾಸನವನ್ನು ಮಾಡು !' ಎಂದರು. ಅವರಿಗೂ ಅದೇ 'ದ' ಎಂಬಕ್ಷರವನ್ನುಪದೇಶಿಸಿ 'ತಿಳಿಯಿತೆ ?' ಎಂದು ಪ್ರಜಾಪತಿಯು ಕೇಳಿದನು. ಅವರು 'ತಿಳಿಯಿತು, ದಾನಮಾಡಿರಿ ಎಂದೆ' ಎಂದರು. ಅವನು 'ಸರಿ, ನಿಮಗೆ ತಿಳಿದಿದೆ' ಎಂದನು.

೩. ಆ ಬಳಿಕ ಅಸುರರೂ ಹಾಗೆಯೇ ಅನುಶಾಸನವನ್ನು ಕೇಳಿಕೊಂಡರು. ಅವರಿಗೂ 'ದ' ಎಂದು ಉಪದೇಶಿಸಿ 'ತಿಳಿಯಿತೆ ?' ಎಂದು ಕೇಳಲು ಅವರು, 'ತಿಳಿಯಿತು, ದಯೆಯನ್ನು ತೋರಿಸಿರಿ ಎಂದೆ' ಎಂದರು. ಅವನು 'ನಿಮಗೆ ತಿಳಿದಿದೆ' ಎಂದನು.

೪. ಈಗಲೂ ದೈವವಾಕ್ಕಾದ ಗುಡುಗು ಮನುಷ್ಯರಲ್ಲಿ ಈ ಮೂರು ಸ್ವಭಾವವೂ ಇರುವದರಿಂದಲೇ ಇದನ್ನು ಅನುಕರಿಸಿ 'ದ ದ ದ !' ಎಂದೇ ನುಡಿ

ಯುತ್ತದೆ. ಆದ್ದರಿಂದ ದಮ, ದಾನ, ದಯೆ - ಈ ಮೂರನ್ನೂ ಅಭ್ಯಾಸಮಾಡ ಬೇಕು.

ಮೂರನೆಯ ಬ್ರಾಹ್ಮಣದಿಂದ ಹತ್ತನೆಯ ಬ್ರಾಹ್ಮಣದವರೆಗಿನ ಗ್ರಂಥದ ಸಾರ

ವಿಶೇಷ : ಇಲ್ಲಿ ಮೊದಲು ಕೊಟ್ಟಿರುವದು ಬ್ರಾಹ್ಮಣಸಂಖ್ಯೆ, ಆಮೇಲೆ ಕೊಟ್ಟಿರುವದು ಕಂಡಿಕಾಸಂಖ್ಯೆ.

೩-೧. ಹೃದಯವನ್ನು ಎಂದರೆ ಹೃದಯದಲ್ಲಿರುವ ಬುದ್ಧಿಯನ್ನು ಪ್ರಜಾಪತಿ ಎಂದು ಉಪಾಸನೆಮಾಡಬೇಕು. ಹೃದಯಬ್ರಹ್ಮದ ನಾಮಾಕ್ಷರಗಳ ಉಪಾಸನೆಯುಕೂಡ ವಿಶಿಷ್ಟಫಲವುಳ್ಳದ್ದು. ಹೇಗೆಂದರೆ ಹೃ ಎಂಬೀ ಅಕ್ಷರದರ್ಥವನ್ನರಿತು ಉಪಾಸನೆಮಾಡಿದವನಿಗೆ - ಇಂದ್ರಿಯಗಳೂ ವಿಷಯಗಳೂ ತಮ್ಮತಮ್ಮ ಕಾರ್ಯವನ್ನು ಹೃದಯಕ್ಕೆ ತಂದೊಪ್ಪಿಸುವಂತೆಯೇ - ಅವನ ಸಂಬಂಧಿ ಗಳೂ ಅಸಂಬಂಧಿಗಳೂ ಕಾಣಿಕೆಯನ್ನು ತಂದೊಪ್ಪಿಸುವರು. ಇದರಂತೆ ದಕಾರಾ ರ್ಥವನ್ನು ಅರಿತು ಉಪಾಸನೆಮಾಡುವವನಿಗೆ ಸಂಬಂಧಿಗಳೂ ಮಿಕ್ಕವರೂ - ಕರಣವಿಷಯಗಳು ಹೃದಯಕ್ಕೆ ತಂದುಕೊಂಡುವಂತೆಯೇ - ತಮ್ಮ ತಮ್ಮ ವೀರ್ಯವನ್ನು ತಂದೊಪ್ಪಿಸುವರು. ಓಗೆಯೇ ಯ ಎಂಬೀ ಅಕ್ಷರದರ್ಥವನ್ನರಿತು ಉಪಾಸನೆಮಾಡುವವನಿಗೆ ಸ್ವರ್ಗಕ್ಕೆ ಪ್ರಯಾಣವು ಲಭಿಸುವದು.

೪-೧. ಈ ಹೃದಯಬ್ರಹ್ಮವೇ ಸತ್ಯವು, ಎಂದರೆ ಮೂರ್ತಾಮೂರ್ತ ರೂಪವಾದ ಪಂಚಭೂತಾತ್ಮಕವು ಎಂದು ಉಪಾಸನೆಮಾಡಬೇಕು. ಮಹತ್ತೂ ಯಕ್ಷವೂ, ಪ್ರಥಮಜವೂ ಆದ ಇದನ್ನು ಸತ್ಯಬ್ರಹ್ಮವೆಂದು ಯಾವನು ಉಪಾಸನೆ ಮಾಡುವನೋ ಅವನು ಈ ಲೋಕಗಳೆಲ್ಲವನ್ನೂ ಸತ್ಯಬ್ರಹ್ಮದಂತೆ ಗೆದ್ದುಕೊಳ್ಳುತ್ತಾನೆ; ಅವನ ಶತ್ರುವೂ ಜಿತವಾಗಿ ಅಸತ್ಸಮನಾಗುತ್ತಾನೆ.

೫-೧. ಅವ್ಯಾಕೃತವಾಗಿರುವ ಪಂಚಭೂತಗಳಿಂದ ಮೊದಲು ಸತ್ಯಬ್ರಹ್ಮವೆಂಬ ವ್ಯಾಕೃತಜಗತ್ತು ಉತ್ಪನ್ನವಾಯಿತು. ಇದು ಮಿಕ್ಕದ್ದೆಲ್ಲವನ್ನೂ ಸೃಷ್ಟಿಸಿದ್ದ ರಿಂದ ಮಹತ್ತೆನಿಸಿರುವದು ; ಏಕೆಂದರೆ ಅದು ಪ್ರಜಾಪತಿಯನ್ನು ಸೃಷ್ಟಿಸಿರುತ್ತದೆ, ಆ ಪ್ರಜಾಪತಿಯು ದೇವತೆಗಳನ್ನು ಸೃಷ್ಟಿಸಿರುತ್ತಾನೆ. ಆದ್ದರಿಂದ ಸತ್ಯಬ್ರಹ್ಮವು ಸತ್ಯವೂ

ಮಹತ್ತೂ ಆಗಿರುತ್ತದೆ. ದೇವತೆಗಳು ತಮ್ಮ ಸ್ರಷ್ಟಾರವಾದ ಪ್ರಜಾಪತಿಯನ್ನು ಕೂಡ ಬಿಟ್ಟು ಈ ಸತ್ಯಬ್ರಹ್ಮವನ್ನೇ ಉಪಾಸಿಸುತ್ತಾರಾದ್ದರಿಂದ ಇದು ಯಕ್ಷ ಪೂಜ್ಯವು.

ಈ ಸತ್ಯಬ್ರಹ್ಮದ ನಾಮದಲ್ಲಿರುವ ಮೂರು ಅಕ್ಷರಗಳೊಳಗೆ ಮೊದಲನೆಯ ಕೊನೆಯ ಸಕಾರಯಕಾರಗಳು ಸತ್ಯವು, ನಡುವಿನ ತಕಾರವು ಅನೃತರೂಪವಾದ ಮೃತ್ಯುವು. ಆದರೆ ಈ ಅನೃತವು ತನ್ನ ಎರಡೂ ಪಾರ್ಶ್ವಗಳಲ್ಲಿರುವ ಸತ್ಯಾಕ್ಷರ ಗಳೊಳಗೆ ಅಡಕವಾಗಿರುವದರಿಂದ ಅದರಿಂದ ಯಾವ ಬಾಧಕವೂ ಇಲ್ಲ. ಹೀಗೆ ಎಲ್ಲವೂ ಸತ್ಯಪ್ರಚುರವಾಗಿಯೇ ಇದೆ, ಅನೃತವೆಂಬ ಮೃತ್ಯುವು ಏನೂ ಮಾಡಲಾರದು ಎಂಬಿದನ್ನು ಉಪಾಸನೆಮಾಡಿದವನಿಗೆ ಪ್ರಮಾದದಿಂದ ನುಡಿದ ಅನೃತವು ಯಾವ ತೊಂದರೆಯನ್ನೂ ಉಂಟುಮಾಡುವದಿಲ್ಲ.

೫-೨ರಿಂದ. ಈ ಸತ್ಯಬ್ರಹ್ಮವು ಆದಿತ್ಯಮಂಡಲಾಭಿಮಾನಿಯಾದ ಪುರುಷನು, ಮತ್ತು ಬಲಗಣ್ಣಿನಲ್ಲಿರುವ ಪುರುಷನು - ಎಂದು ಉಪಾಸನೆ ಮಾಡಬೇಕು. ಇವರಿಬ್ಬರೂ ಈ ಸತ್ಯಬ್ರಹ್ಮದ ಆಕಾರವಿಶೇಷಗಳೇ ; ಆದ್ದರಿಂದ ಇವರಿಗೆ ಪರಸ್ಪರವಾಗಿ ಉಪಕಾರ್ಯೋಪಕಾರಕಭಾವವಿರುತ್ತದೆ ; ಆದಿತ್ಯನು ಚಾಕ್ಷುಷನಿಗೆ ರಶ್ಮಿಗಳಿಂದಲೂ ಚಾಕ್ಷುಷನು ಆದಿತ್ಯಪುರುಷನಿಗೆ ಪ್ರಾಣಗಳಿಂದಲೂ ಅನುಗ್ರಹಮಾಡುತ್ತಿರುತ್ತಾರೆ. ಆದ್ದರಿಂದಲೇ ಉತ್ಕ್ರಾಂತಿಕಾಲದಲ್ಲಿ ಆದಿತ್ಯನ ಅನುಗ್ರಹವು ನಿಂತಾಗ ಆ ಮಂಡಲವು ಚಂದ್ರನಂತೆ ಕಾಣಿಸುತ್ತದೆ.

ಮಂಡಲಪುರುಷನಿಗೆ ಭೂಃ ಎಂಬ ವ್ಯಾಹೃತಿಯು ತಲೆ, ಭುವಃ ಎಂಬುದು ತೋಳುಗಳು, ಸ್ವಃ ಎಂಬುದು ಪಾದಗಳು ; ಈ ಉಪಾಸನೆಗೆ ಹೋಲಿಕೆಯೇನೆಂದರೆ ಅಕ್ಷರಸಂಖ್ಯೆಯೂ ಆಯಾ ಅವಯವದ ಸಂಖ್ಯೆಯೂ ಸಮಾನವಾಗಿರುತ್ತದೆ. ಈ ಪುರುಷನಿಗೆ 'ಅಹಃ' ಎಂದು ರಹಸ್ಯನಾಮವು. ಇದರಂತೆ ಅಕ್ಷಿಪುರುಷನಿಗೂ ಭೂಃ, ಭುವಃ, ಸ್ವಃ- ಎಂಬಿವೇ ಅವಯವಗಳು. ಅವನಿಗೆ ಅಹಮ್ ಎಂಬ ಪ್ರತ್ಯಗಾತ್ಮವಾಚಕವೇ ರಹಸ್ಯನಾಮ. ಈ ರಹಸ್ಯನಾಮಗಳನ್ನು ಅರಿತು ಉಪಾಸನೆಮಾಡಿದವನಿಗೆ ಪಾಪನಾಶವೂ ಪಾಪತ್ಯಾಗವೂ ಫಲವು.

೬-೧. ಇದೇ ಸ್ಥೋಪಾಧಿಕಬ್ರಹ್ಮವನ್ನು ಮನೋಮಯನು, ಭಾಸ್ವರರೂಪನು, ಹೃದಯದಲ್ಲಿ ಬಹುಸೂಕ್ಷ್ಮರೂಪದಿಂದ ಯೋಗಿಗಳಿಗೆ ಕಾಣುವವನು, ಎಲ್ಲವನ್ನೂ ಆಳುವ, ಎಲ್ಲಕ್ಕೂ ಅಧಿಪತಿಯಾದ, ಎಲ್ಲವನ್ನೂ ಕಟ್ಟಿನಲ್ಲಿಟ್ಟಿರುವ ಪುರುಷನು - ಎಂದು ಉಪಾಸನೆಮಾಡಬೇಕು.

೭-೧. ಇದೇ ಸತ್ಯಬ್ರಹ್ಮವನ್ನು ವಿದ್ಯುದ್‌ಬ್ರಹ್ಮ ಎಂದು ಉಪಾಸನೆ ಮಾಡಬೇಕು. ಉಪಾಸಕನು ಪಾಪಗಳನ್ನು ಖಂಡಿಸುತ್ತಾನೆ, ಏಕೆಂದರೆ ಉಪಾಸ್ಯವಾದ ಬ್ರಹ್ಮವೂ ವಿದ್ಯುದ್ (ಎಂದರೆ ಮೋಡದ ಅಂಧಕಾರವನ್ನು ಸೀಳಿಕೊಂಡು ತೋರುವ ಮಿಂಚಿನ ಉಪಾಧಿಯ) ಗುಣವುಳ್ಳದ್ದಾಗಿರುತ್ತದೆ.

೮-೧. ಇದೇ ಬ್ರಹ್ಮವನ್ನು ವಾಗ್ದೇನುವೆಂದು ಉಪಾಸನೆಮಾಡಬೇಕು. ಈ ವೇದರೂಪವಾದ ಧೇನುವಿಗೆ ಸ್ವಾಹಾ, ವಷಟ್, ಹನ್ತ, ಸ್ವಧಾ - ಎಂಬಿವು ನಾಲ್ಕು ಸ್ತನಗಳು. ಇವುಗಳೊಳಗೆ ಸ್ವಾಹಾಕಾರ, ವಷಟ್ಕಾರ - ಇವೆರಡನ್ನು ದೇವತೆಗಳೂ ಹಂತಕಾರವನ್ನು ಮನುಷ್ಯರೂ ಸ್ವಧಾಕಾರವನ್ನು ಪಿತೃಗಳೂ ಉಪಜೀವಿಸಿಕೊಂಡಿರುತ್ತಾರೆ. ಈ ಧೇನುವಿಗೆ ಪ್ರಾಣವೇ ಎತ್ತು, ಮನಸ್ಸೇ ಕರು - ಎಂದು ಉಪಾಸನೆಮಾಡಬೇಕು.

೯-೧. ಇದೇ ಬ್ರಹ್ಮವನ್ನು ಶರೀರದೊಳಗೆ ಅನ್ನವನ್ನು ಪಚನಮಾಡುವ ಅಗ್ನಿ ಎಂಬ ಉಪಾಧಿಯುಳ್ಳದ್ದೆಂದು ಉಪಾಸನೆಮಾಡಬೇಕು. ಇದೇ ಅಗ್ನಿವೈಶ್ವಾನರನು. ಕಿವಿಯನ್ನು ಮುಚ್ಚಿಕೊಂಡಾಗ ಇದರ ಸದ್ದು ಕೇಳಬರುತ್ತದೆ. ಆದ್ದರಿಂದಲೇ ಸಾಯುವಾಗ ಈ ಸದ್ದು ಕೇಳಿಸುವದಿಲ್ಲ - ಎಂದು ವೈಶ್ವಾನರಾಗ್ನಿಯ ಉಪಾಧಿಯುಳ್ಳದ್ದಾಗಿ ಉಪಾಸನೆಮಾಡಬೇಕು.

೧೦-೧. ಇಲ್ಲಿಯವರೆಗೆ ಬೇರೆಬೇರೆಯ ಉಪಾಸನೆಗಳನ್ನು ಹೇಳಿದೆಯಷ್ಟೆ. ಅಲ್ಲಿ ಯಾವ ಉಪಾಸನೆಗೆ ವಿಶೇಷಫಲವನ್ನು ಹೇಳಿಲ್ಲವೋ ಅದಕ್ಕೆಲ್ಲ ಆಯಾ ರೂಪದ ಬ್ರಹ್ಮದ ಪ್ರಾಪ್ತಿಯೇ ಫಲವು. ಆ ಫಲವನ್ನು ಪಡೆಯುವದಕ್ಕೆ ಉಪಾಸಕನು ಉತ್ಕ್ರಾಂತನಾದ ಮೇಲೆ ವಾಯುವನ್ನು ಪಡೆಯುವನು, ಆ ವಾಯುವು ತನ್ನೊಳಗೆ ಗಾಡಿಯಚಕ್ರದ ಛಿದ್ರದಷ್ಟು ಸ್ಥಲವನ್ನು ಮಾಡಿಕೊಡುವನು. ಅದರಿಂದ ಮೇಲಕ್ಕೇರಿ ಉಪಾಸಕನು ಆದಿತ್ಯನನ್ನು ಪಡೆಯುತ್ತಾನೆ. ಆ ಆದಿತ್ಯನು ತನ್ನೊಳಗೆ ತಮಟೆಯ ಪೊಳ್ಳಿನಷ್ಟು ಸ್ಥಲವನ್ನು ಮಾಡಿಕೊಡುವನು ; ಉಪಾಸಕನು ಅದರ ಮೂಲಕವಾಗಿ ಮೇಲಕ್ಕೇರಿ ಚಂದ್ರನನ್ನು ಸೇರುತ್ತಾನೆ. ಆ ಚಂದ್ರನು ಅವನಿಗೆ ತನ್ನೊಳಗೆ ಭೇರಿಯ ಪೊಳ್ಳಿನಷ್ಟು ಸ್ಥಲವನ್ನು ಮಾಡಿಕೊಡುವನು ; ಅದರ ಮೂಲಕ ಉಪಾಸಕನು ಬ್ರಹ್ಮಲೋಕವನ್ನು ಸೇರಿ ಅನೇಕಕಲ್ಪಗಳವರೆಗೂ ಆಧ್ಯಾಧಿಗಳಿಲ್ಲದೆ ಸುಖವಾಗಿ ವಾಸಮಾಡಿಕೊಂಡಿರುವನು.

ಹನ್ನೊಂದನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ರೋಗಿಯಾದವನೂ ಮುಮೂರ್ಷುವಾಗಿರುವವನೂ ಮಾಡಬಹುದಾದ ಉಪಾಸನೆಗಳನ್ನು ಹೇಳಿದೆ.

೧. ರೋಗಿಯಾದವನು ತನಗೆ ಜ್ವರಾದಿತಾಪವುಂಟಾಗಿರುವಾಗ, ಇದೊಂದು ಪರಮತಪಸ್ಸು ಎಂದು ಉಪಾಸನೆಮಾಡಬೇಕು. ತಪಸ್ಸಿನಲ್ಲಾಗುವಂತೆ ಅದರಲ್ಲಿಯೂ ಶರೀರಕ್ಕೆ ತಾಪವುಂಟಾಗುವದೆಂಬುದನ್ನು ಮನದಂದು ಈ ಉಪಾಸನೆಯನ್ನು ಮಾಡಿದರೆ ಅದೇ ಕರ್ಮಕ್ಷಯಹೇತುವಾದ ತಪಸ್ಸಾಗುವದು ; ಅದರಿಂದ ಪಾಪವನ್ನು ಕಳೆದುಕೊಂಡು ಪರಮಲೋಕವನ್ನೇ ಪಡೆಯುತ್ತಾನೆ.

ಮುಮೂರ್ಷುವಾದವನು "ಇನ್ನು ನಾನು ಸತ್ತ ಬಳಿಕ ಅಂತ್ಯಕರ್ಮಕ್ಕಾಗಿ ಋತ್ವಿಜರು ನನ್ನ ಶರೀರವನ್ನು ಅರಣ್ಯಕ್ಕೊಯ್ಯುವರಷ್ಟೆ ಇದು ವಾನಪ್ರಸ್ಥಕ್ಕೆ ಸಮಾನವಾದ ತಪಸ್ಸು" ಎಂದೂ "ನನ್ನನ್ನು ಅಗ್ನಿಯಲ್ಲಿ ಹಾಕುವರಲ್ಲ ಇದೂ ವಾನಪ್ರಸ್ಥನು ಕೊನೆಯಲ್ಲಿ ಮಾಡುವ ಅಗ್ನಿಪ್ರವೇಶದಂತೆ ಒಂದು ತಪಸ್ಸೇ" ಎಂದು ಉಪಾಸನೆಮಾಡಬೇಕು. ಇವುಗಳಿಂದ ಪರಮಲೋಕಪ್ರಾಪ್ತಿಯೇ ಫಲವಾಗುವದು.

ಹನ್ನೆರಡನೆಯ ಬ್ರಾಹ್ಮಣದ ಸಾರ

ವಿಶೇಷ : ಇಲ್ಲಿ ಅನ್ನಪ್ರಾಣಗಳನ್ನು ಗುಣಸಹಿತವಾಗಿ ಬ್ರಹ್ಮವೆಂದು ಉಪಾಸನೆಮಾಡಬೇಕೆಂದು ವಿಧಿಸಿದೆ.

ಬರಿಯ ಅನ್ನವೇ ಬ್ರಹ್ಮವಾಗಲಾರದು ; ಏಕೆಂದರೆ ಅದು ಕೊಳೆಯುವದು ; ಬರಿಯ ಪ್ರಾಣವೂ ಬ್ರಹ್ಮವಾಗಲಾರದು ; ಏಕೆಂದರೆ ಅದು ಒಣಕಲಾಗುವದು. ಆದ್ದರಿಂದ ಅನ್ನಪ್ರಾಣಗಳೆರಡೂ ಸೇರಿ ಒಂದುಗೂಡಿದ್ದು ಬ್ರಹ್ಮವು ಎಂದು ಉಪಾಸನೆಮಾಡಬೇಕು. ಹಾಗೆಂದು ಉಪಾಸನೆಮಾಡಿದವನು ಕೃತಕೃತ್ಯನು ; ಏಕೆಂದರೆ ಅವನು ಮತ್ತೊಬ್ಬರು ಮಾಡಿದ ಒಳ್ಳೆಯದರಿಂದ ಹೆಚ್ಚುವದಿಲ್ಲ ಕೆಟ್ಟದ್ದರಿಂದ ಕುಗ್ಗುವದಿಲ್ಲ - ಎಂಬುದು ಒಂದು ಪಕ್ಷವು.

ಆದರೆ ಎರಡು ದೋಷಗಳಿಂದ ಕೂಡಿದ ವಸ್ತುಗಳನ್ನು ಸೇರಿಸಿದಮಾತ್ರದಿಂದ ಯಾವ ಹೆಚ್ಚಿನ ಗುಣವೂ ಬರಲಾರದು. ಅನ್ನದ ಗುಣವನ್ನೂ ಪ್ರಾಣದ ಗುಣವನ್ನೂ ಅರಿತು ಅನ್ನಪ್ರಾಣಗಳು ಒಂದುಗೂಡಿದ

ಬ್ರಹ್ಮವೇ ತಾನೆಂದು ಉಪಾಸನೆಮಾಡಿದರೆ ಅದರಿಂದ ಆ ಗುಣಗಳಿಂದ ಕೂಡಿದ ಬ್ರಹ್ಮಸಾಯುಜ್ಯವಾಗುವದು. ಹೇಗೆಂದರೆ ಅನ್ನವೆಂಬುದು ಎಲ್ಲರಿಗೂ ಆಶ್ರಯವನ್ನು ಕೊಡುವ ಶರೀರವಾಗುವದರಿಂದ 'ವಿ' (ವಿಶ್ ಧಾತುವಿನ ಆದ್ಯಕ್ಷರ) ಎನಿಸುತ್ತದೆ. ಹೀಗೆಯೇ ಎಲ್ಲರಿಗೂ ಪ್ರಾಣವನ್ನೂ ಬಲವನ್ನೂ ಕೊಟ್ಟು ರಮಿಸುವದಕ್ಕೆ ಕಾರಣವಾಗಿರುವದರಿಂದ ಪ್ರಾಣವು ರಮ್ (ರಮ್ ಧಾತುವಿನ ಮೊದಲಕ್ಷರ) ಎನಿಸುತ್ತದೆ. ಈ ಗುಣಗಳಿಂದೊಡಗೂಡಿದ ಬ್ರಹ್ಮವೆಂದು ಅನ್ನಪ್ರಾಣಗಳನ್ನು ಉಪಾಸನೆಮಾಡಿದರೆ ಆ ಗುಣಗಳಿಂದ ಕೂಡಿದವನೇ ಆಗುತ್ತಾನೆ ; ಅವನು ಎಲ್ಲಾ ಭೂತಗಳಿಗೂ ಆಶ್ರಯನೂ ಎಲ್ಲರಿಗೂ ರಮಣಹೇತುವೂ ಆಗುತ್ತಾನೆ.

ಹದಿಮೂರನೆಯ ಬ್ರಾಹ್ಮಣದ ಸಾರ

೧. ಪ್ರಾಣವನ್ನು ಉಕ್ಥವೆಂದು ಉಪಾಸನೆಮಾಡಬೇಕು. ಪ್ರಾಣವೇ ಉಕ್ಥವು. ಏಕೆಂದರೆ ಉಕ್ಥವೆಂಬ ಶಸ್ತ್ರವಿಶೇಷದಂತೆ ಪ್ರಾಣವು ಇಂದ್ರಿಯಗಳಲ್ಲೆಲ್ಲ ಶ್ರೇಷ್ಠವಾಗಿರುತ್ತದೆ. ಪ್ರಾಣದಿಂದಲೇ ಪ್ರತಿಯೊಬ್ಬನೂ ಎದ್ದುನಿಲ್ಲುತ್ತಾನೆ (ಉತ್ತಿಷ್ಠತಿ) ; ಆದ್ದರಿಂದ ಇದು ಉಕ್ಥವು. ಹೀಗೆಂದು ಉಪಾಸನೆಮಾಡಿದರೆ ಇಹದಲ್ಲಿ ಉಕ್ಥವನ್ನು ಬಲ್ಲ ವೀರಪುತ್ರನು ಜನಿಸುವನು ; ಪರದಲ್ಲಿ ಉಪಾಸನೆಯ ತಾರತಮ್ಯದಿಂದ ಉಕ್ಥದ ಸಾಯುಜ್ಯವೋ ಸಾಲೋಕ್ಯವೋ ದೊರೆಯವದು.

೨. ಹೀಗೆಯೇ ಪ್ರಾಣವನ್ನು ಯಜುಸ್ಸು ಎಂದು ಉಪಾಸನೆ ಮಾಡಬೇಕು. ಪ್ರಾಣವೇ ಯಜುಸ್ಸು. ಏಕೆಂದರೆ ಸರ್ವಭೂತಗಳೂ ಒಂದಕ್ಕೊಂದು ಯುಕ್ತವಾಗುವದಕ್ಕೆ ಪ್ರಾಣವು ಬೇಕು. ಹೀಗೆಂದು ಉಪಾಸನೆಮಾಡಿದರೆ ಇಹದಲ್ಲಿ ಸರ್ವಭೂತಗಳೂ ಇವನಿಗೆ ಶ್ರೇಷ್ಠತ್ವವನ್ನು ಕೊಡುವದಕ್ಕೆ ಯುಕ್ತವಾಗುವವು ; ಪರದಲ್ಲಿ ಯಜೂರೂಪನಾದ ಪ್ರಾಣನ ಸಾಯುಜ್ಯವೂ ಸಾಲೋಕ್ಯವೂ ದೊರೆಯುವದು.

೩. ಹೀಗೆಯೇ ಪ್ರಾಣವನ್ನು ಸಾಮವೆಂದು ಉಪಾಸನೆ ಮಾಡಬೇಕು. ಪ್ರಾಣವೇ ಸಾಮವು ; ಏಕೆಂದರೆ ಅದರಲ್ಲಿ ಎಲ್ಲಾ ಭೂತಗಳೂ ಸಂಗತವಾಗುತ್ತವೆ. ಯಾವನು ಹೀಗೆಂದು ಉಪಾಸನೆಮಾಡುವನೋ ಅವನಿಗೆ ಇಹದಲ್ಲಿ ಎಲ್ಲಾ ಭೂತಗಳೂ ಸಂಗತವಾಗಿ ಶ್ರೈಷ್ಠ್ಯವನ್ನು ಕೊಡುವವು ; ಪರದಲ್ಲಿ ಸಾಮರೂಪಪ್ರಾಣನ ಸಾಯುಜ್ಯವೋ ಸಾಲೋಕ್ಯವೋ ದೊರೆಯುವದು.

೪. ಪ್ರಾಣವು ಕ್ಷತ್ರವೆಂದು ಉಪಾಸನೆಮಾಡಬೇಕು. ಶರೀರವನ್ನು ಕ್ಷತದಿಂದ ತ್ರಾಣ (ಕಾಪಾಡುವದ)ದಿಂದ ಪ್ರಾಣವು ಕ್ಷತ್ರವು. ಹೀಗೆಂದು ಉಪಾಸನೆಮಾಡಿದರೆ ಇಲ್ಲಿ ಪ್ರಾಣವನ್ನೇ ಪಡೆದುಕೊಳ್ಳುವನು. ಪರದಲ್ಲಿ ಕ್ಷತ್ರರೂಪನಾದ ಪ್ರಾಣನ ಸಾಯುಜ್ಯವೋ ಸಾಲೋಕ್ಯವೋ ದೊರೆಯುವದು.

ಹದಿನಾಲ್ಕನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ಗಾಯತ್ರಿಯ ಉಪಾಸನೆಯನ್ನು ಹೇಳಿದೆ.

೧. ಭೂಮಿ, ಅಂತರಿಕ್ಷ ದ್ಯೌಃ ಎಂಬಿವೂ ಗಾಯತ್ರಿಯ ಒಂದನೆಯ ಪಾದವೂ ಎಂಟಕ್ಷರದವಾದ್ದರಿಂದ ಈ ಮೊದಲನೆಯ ಪಾದವನ್ನು ತ್ರಿಲೋಕಾತ್ಮಕವೆಂದು ಉಪಾಸನೆಮಾಡಬೇಕು ; ಋಚಃ, ಯಜೂಂಷಿ, ಸಾಮಾನಿ ಇವೂ ಎರಡನೆಯ ಪಾದವೂ ಎಂಟಕ್ಷರದವಾದ್ದರಿಂದ ಎರಡನೆಯ ಪಾದವನ್ನು ತ್ರಯಿವಿದ್ಯೆಯೆಂದು ಉಪಾಸನೆಮಾಡಬೇಕು. ಪ್ರಾಣ, ಅಪಾನ, ವ್ಯಾನ - ಇವೂ ಮೂರನೆಯ ಪಾದವೂ ಎಂಟಕ್ಷರದವೇ ಆದ್ದರಿಂದ ಮೂರನೆಯ ಪಾದವನ್ನು ಪ್ರಾಣಾದಿರೂಪವೆಂದು ಉಪಾಸನೆಮಾಡಬೇಕು. ಹೀಗೆ ಉಪಾಸನೆಮಾಡಿದರೆ ಕ್ರಮವಾಗಿ ತ್ರಿಲೋಕದಲ್ಲಿರುವದನ್ನೆಲ್ಲ ಗೆದ್ದುಕೊಳ್ಳುವನು, ತ್ರಯಿವಿದ್ಯೆಯಿಂದ ಬರುವಷ್ಟು ಫಲವನ್ನು ಗೆದ್ದುಕೊಳ್ಳುವನು, ಸರ್ವಪ್ರಾಣಿಜಾತಗಳನ್ನೂ ಗೆದ್ದುಕೊಳ್ಳುವನು.

ಇನ್ನು ನಾಲ್ಕನೆಯ ಪಾದವು 'ತುರೀಯದರ್ಶತಪದವು ಪರೋರಜಸ್ಸು' ಎಂದರೆ ನಾಲ್ಕನೆಯದಾದ, ಕಾಣುವದೋ ಎಂಬಂತಿರುವ, ಲೋಕಗಳಿಗೆಲ್ಲ ಮೇಲಿರುವ ಆದಿತ್ಯಪುರುಷನು. ಈ ಪಾದವನ್ನು ಹೀಗೆಂದು ಉಪಾಸನೆಮಾಡಿದವನು ಲೋಕೋತ್ತರವಾಗಿ ತಪಿಸುವನು, ಶ್ರೀಯಿಂದಲೂ ಕೀರ್ತಿಯಿಂದಲೂ ಬೆಳಗುವನು.

೪-೬. ಗಾಯತ್ರಿಯು ಈ ಆದಿತ್ಯಪುರುಷನೆಂಬ ನಾಲ್ಕನೆಯ ಪಾದದಲ್ಲಿಯೂ ಆ ಪುರುಷನು ಸತ್ಯವೆಂಬ ಚಕ್ಷುಸ್ಸಿನಲ್ಲಿಯೂ ಆ ಸತ್ಯವು ಬಲವೆಂಬ ಪ್ರಾಣದಲ್ಲಿಯೂ ಪ್ರತಿಷ್ಠಿತವಾಗಿವೆ. ಹೀಗೆ ಪ್ರಾಣರೂಪದಿಂದ ಜಗತ್ತಿಗೆ ಆತ್ಮವಾಗಿದ್ದು ವಾಗಾದಿಗಳನ್ನು ತ್ರಾಣನ ಮಾಡುವದರಿಂದ 'ಗಾಯತ್ರೀ' ಎಂಬ ಹೆಸರು ಬಂದಿದೆ. ಉಪನಯನಕಾಲದಲ್ಲಿ ಮಾಣವಕನಿಗೆ ಆಚಾರ್ಯನು

ಹೇಳಿಕೊಡುವ ಸಾವಿತ್ರಿಯೂ ಇದೇ ಗಾಯತ್ರಿಯು, ಅನುಷ್ಟುಪ್ ಗಾಯತ್ರಿಯಲ್ಲ. ಇದನ್ನು ಅರಿತು ಉಪಾಸನೆಮಾಡಿದವನು ಎಷ್ಟು ಪ್ರತಿಗ್ರಹಮಾಡಿದರೂ ಅದರ ಒಂದು ಪಾದದ ಜ್ಞಾನಕ್ಕೆ ಸಮನಾಗಲಾರದು. ಹೀಗೆಂದು ಗಾಯತ್ರಿಯನ್ನು ಉಪಾಸನೆಮಾಡಿದವನು ಈ ಲೋಕತ್ರಯದಲ್ಲಿರುವದನ್ನೆಲ್ಲ ಪ್ರತಿಗ್ರಹಮಾಡಿದರೂ ತ್ರಯೀವಿದ್ಯೆಯ ಫಲವನ್ನೆಲ್ಲ ಪ್ರತಿಗ್ರಹಮಾಡಿದರೂ ಪ್ರಾಣಿಗಳಿರುವಷ್ಟನ್ನೆಲ್ಲ ಪ್ರತಿಗ್ರಹಮಾಡಿದರೂ ಆ ಮೂರು ಪಾದಗಳ ಉಪಾಸನೆಯ ಫಲವು ಕ್ಷಯವಾದೀತು ; ಉಳಿದ ನಾಲ್ಕನೆಯಪಾದದ ಉಪಾಸನೆಯ ಫಲವಂತೂ ಉಳಿದೇ ಇರುವದು. ಆದರೆ ಅಷ್ಟು ಪ್ರತಿಗ್ರಹದ ಸಂಭವವೇ ಇಲ್ಲ.

೭. ಈ ಗಾಯತ್ರಿಯ ಉಪಸ್ಥಾನವನ್ನು 'ಗಾಯತ್ರ್ಯೇಕಪದೀ..... ಪರೋರಜಸೇ' ಎಂಬ ಮಂತ್ರದಿಂದ ಮಾಡಿ 'ಇವನು ಅದನ್ನು ಪಡೆಯದಿರಲಿ!', 'ಆ ಕಾಮವು ಅವನಿಗೆ ಕೈಗೂಡದಿರಲಿ!', 'ನಾನೇ ಅದನ್ನು ಪಡೆಯುವಂತಾಗಲಿ!' ಎಂಬರ್ಥವುಳ್ಳ ಮಂತ್ರಗಳೊಳಗೆ ಒಂದನ್ನು, ಯಾವದು ತನಗೆ ಇಷ್ಟವೋ ಅದನ್ನು-ತನಗೆ ಬೇಡವಾದ ಶತ್ರುವಿನ ವಿಷಯಕ್ಕೆ ಪ್ರಯೋಗಿಸಿ ಉಪಸ್ಥಾನಮಾಡಬೇಕು. ಅದರಂತೆಯೇ ಫಲವಾಗುವದು.

೮. ಈ ಗಾಯತ್ರಿಯ ಫಲವು ಪ್ರಾಪ್ತವಾಗುವದಕ್ಕೆ ಗಾಯತ್ರಿಯ ಮುಖವನ್ನು ಅರಿತು ಉಪಾಸನೆಮಾಡಬೇಕು. ಅಗ್ನಿಯೇ ಗಾಯತ್ರಿಯ ಮುಖವು. ಅದನ್ನು ಅರಿತು ಉಪಾಸನೆಮಾಡುವವನು ಎಷ್ಟು ಪಾಪಮಾಡಿದರೂ ಅದನ್ನೆಲ್ಲ ಅಗ್ನಿಯಂತೆ ಭಕ್ಷಿಸಿ ಶುದ್ಧನಾಗಿ ಪಾಪರಹಿತನಾಗಿ ಅಜರಾಮರನಾಗಿ ಗಾಯತ್ರೀ ಬ್ರಹ್ಮದ ಸಾಯುಜ್ಯವನ್ನು ಪಡೆದುಕೊಳ್ಳುವನು.

ಹದಿನೈದನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ಜ್ಞಾನಕರ್ಮಸಮುಚ್ಚಯವನ್ನು ಅನುಷ್ಠಾನಮಾಡಿದವನು ಮರಣಕಾಲದಲ್ಲಿ ಮಾಡುವ ಮಾರ್ಗಯಾಚನೆಯಿದೆ. ಈಶಾವಾಸ್ಯದ ಕೊನೆಯಲ್ಲಿ ಇದೇ ಮಂತ್ರಗಳಿವೆ. ದೇವಯಾನದಲ್ಲಿ ಹೋಗುವ ಸ್ಮರಣೆಯನ್ನು ಮಾಡುವಂತೆ ಮನಸ್ಸನ್ನು ಪ್ರಾರ್ಥಿಸಿದೆ.

೧. ಆದಿತ್ಯನೇ, ನಿನ್ನ ಸ್ವರೂಪವನ್ನು ಕಾಣದಂತೆ ಅಡ್ಡಿಯಾಗಿರುವ ಮರೆಯನ್ನು ತೆಗೆದುಹಾಕು, ನಿನ್ನ ಉಪಾಸಕನಾದ ನಾನು ನಿನ್ನನ್ನು ಕಾಣಬೇಕು.

೨. ಎಲೈ ದೇವನೇ ನಿನ್ನ ರಶ್ಮಿಗಳನ್ನು ಅತ್ತ ಸರಿಯಿಸು, ನಿನ್ನ ತೇಜಸ್ಸನ್ನು ಒಕ್ಕೂಡಿಸಿಕೊ. ನಿನ್ನ ಅಹೋರೂಪವಾದ ಸ್ವರೂಪವೂ ನನ್ನಲ್ಲಿರುವ ಅಹಂ ರೂಪವಾದ ಸ್ವರೂಪವೂ ಎರಡೂ ಒಂದೇ.

೩. ಈಗ ನನ್ನ ಪ್ರಾಣಾದಿಗಳು ತಮ್ಮ ತಮ್ಮ ಪ್ರಕೃತಿಯಲ್ಲಿ ಲಯವಾಗಲಿ ! ಶರೀರವು ಭಸ್ಮವಾಗಿ ಪೃಥ್ವಿಯಲ್ಲಿ ಒಂದಾಗಲಿ ! ಎಲೈ ಮನೋ ರೂಪನಾದ ಅಗ್ನಿಯೆ, ನಾನು ಮಾಡಿರುವ ಕರ್ಮೋಪಾಸನೆಗಳನ್ನು ನೆನಪಿಗೆ ತಂದುಕೊ, ತಂದುಕೊ ! ಎಲೈ ಅಗ್ನಿಯೆ, ನೀನು ನಮ್ಮೆಲ್ಲರ ಮನೋಭಿಪ್ರಾಯವನ್ನು ಬಲ್ಲವನು. ಆದ್ದರಿಂದ ನಮ್ಮ ಪಾಪವನ್ನು ತೊಲಗಿಸಿ ಒಳ್ಳೆಯದಾದ ದೇವಯಾನ ಮಾರ್ಗದಿಂದ ಕರೆದುಕೊಂಡುಯೋಗಿ ಉಪಾಸನಾಫಲವನ್ನನುಸರಿಸುವಂತೆ ಮಾಡು ! ನಿನಗೆ ನಮಸ್ಕಾರ !

ಆರನೆಯ ಅಧ್ಯಾಯ

ಒಂದನೆಯ ಬ್ರಾಹ್ಮಣದ ಸಾರ

ಇಲ್ಲಿ ಮುಖ್ಯಪ್ರಾಣೋಪಾಸನೆಯನ್ನು ಹೇಳಿದೆ.

೧-೬. ಪ್ರಾಣವೇ ಜ್ಯೇಷ್ಠವು, ಶ್ರೇಷ್ಠವು ಎಂದು ಉಪಾಸನೆಮಾಡಿದರೆ ತಮ್ಮವರಲ್ಲೂ ಉಳಿದವರಲ್ಲೂ ಜ್ಯೇಷ್ಠನೂ ಶ್ರೇಷ್ಠನೂ ಆಗುತ್ತಾನೆ. ವಾಕ್ಕೇ ವಸಿಷ್ಠವೆಂದು ಉಪಾಸನೆಮಾಡಿದರೆ ತಾನೂ ವಸಿಷ್ಠನು - ಧನವಂತನಾಗಿ ವಾಸ ಮಾಡುವದು, ವಾಗ್ಮಿಯಾಗಿ ಎಲ್ಲರನ್ನೂ ಮಾತಿನಲ್ಲಿ ಗೆಲ್ಲುವದು, ಈ ಗುಣಗಳುಳ್ಳ ವನು - ಆಗುತ್ತಾನೆ. ಚಕ್ಷುಸ್ಸೇ ಪ್ರತಿಷ್ಠೆ ಎಂದು ಉಪಾಸನೆಮಾಡಿದವನು ಸಮ ದುರ್ಗಗಳಾದ ದೇಶಕಾಲಗಳಲ್ಲಿ ಯಾವ ಕಷ್ಟವೂ ಇಲ್ಲದೆ ಪ್ರತಿಷ್ಠಿತನಾಗುತ್ತಾನೆ. ಶ್ರೋತ್ರವೇ ಸಂಪತ್ತು ಎಂದು ಉಪಾಸನೆಮಾಡಿದವನಿಗೆ ಇಷ್ಟಕಾಮಗಳ ಸಂಪತ್ತಿಯಾಗುವದು. ಮನಸ್ಸೇ ಆಯತನವು ಎಂದು ಉಪಾಸನೆಮಾಡಿದರೆ ತನ್ನವರಿಗೂ ಉಳಿದವರಿಗೂ ಆಶ್ರಯವಾಗಿರುತ್ತಾನೆ. ಪ್ರಜನನೇಂದ್ರಿಯವು ಪ್ರಜಾಪತಿಯು ಎಂದು ಉಪಾಸನೆಮಾಡಿದರೆ ಪ್ರಜಾಪಶುಗಳುಳ್ಳವನಾಗುತ್ತಾನೆ.

೭-೧೩. ಒಮ್ಮೆ ಈ ವಾಗಾದಿಕರಣಗಳು ನಾನು ಹೆಚ್ಚು, ತಾನು ಹೆಚ್ಚು - ಎಂದು ವಿವಾದಮಾಡುತ್ತಾ ಬ್ರಹ್ಮನ ಬಳಿಗೆ ಬಂದವು. ನಮ್ಮಲ್ಲಿ ಯಾರು ವಸಿಷ್ಠರು?- ಎಂದು ಕೇಳಿದವು. ಯಾವದು ಉತ್ಕ್ರಾಂತವಾದರೆ ಶರೀರವು ಅಮಂಗಲವಾಗಿ ಕಾಣುವದೋ ಅದೇ ವಸಿಷ್ಠವು ಎಂದು ಬ್ರಹ್ಮನು ನುಡಿದನು. ವಾಗಾದಿಗಳು ಒಂದೊಂದಾಗಿ ಶರೀರವನ್ನು ಬಿಟ್ಟು ಕೆಲಕಾಲ ಹೊರಗೆ ಇದ್ದು ಮತ್ತೆ ಶರೀರದ ಬಳಿಗೆ ಬಂದಾಗ ಶರೀರವು ಅಮಂಗಲವಾಗಿ ಕಾಣದೆ ಜೀವಿಸಿಕೊಂಡಿತ್ತು. ಆದರೆ ಮುಖ್ಯಪ್ರಾಣವು ಶರೀರವನ್ನು ಬಿಟ್ಟು ಹೋಗುವದಕ್ಕೆ ಪ್ರಯತ್ನಿಸಲು ಜಾತ್ಯಶ್ವವು ಕಾಲಿಗೆ ಕಟ್ಟಿದ್ದ ಗೂಟಗಳನ್ನು ಕಿತ್ತುಕೊಳ್ಳುವಂತೆ ಇತರ ಕರಣಗಳನ್ನೂ ಸ್ವಸ್ಥಾನದಿಂದ ಕಿತ್ತು ಅಲುಗಾಡಿಸಿತು. ಆಗ ಅವೆಲ್ಲವೂ ''ನೀನೇ ನಮ್ಮಲ್ಲಿ ಶ್ರೇಷ್ಠನು; ಶರೀರವನ್ನು ಬಿಟ್ಟುಹೋಗದಿರು, ನೀನಿಲ್ಲದೆ ನಾವು ಜೀವಿಸಿರಲಾರೆವು'' - ಎಂದು ಬೇಡಿಕೊಂಡವು. ''ಹಾಗಾದರೆ ನನಗೆ ಉಚಿತವಾದ ಕಾಣಿಕೆಯನ್ನು ತಂದೊಪ್ಪಿಸಿರಿ'' ಎಂದು ಪ್ರಾಣವು ಕೇಳಿತು.

೧೪. ವಾಗಾದಿಗಳು ತಮ್ಮ ವಸಿಷ್ಠತ್ವಾದಿಗಳು ಮುಖ್ಯಪ್ರಾಣದ್ದೇ ಎಂದು ಒಪ್ಪಿಕೊಂಡು ಆಯಾ ಗುಣವನ್ನು ಮುಖ್ಯಪ್ರಾಣಕ್ಕೆ ಕಾಣಿಕೆಯಾಗಿ ಒಪ್ಪಿಸಿದವು. ಪ್ರಾಣನಿಗೆ ಯಾವದೂ ಅಭಕ್ಷ್ಯವಿಲ್ಲ. ಹೀಗೆಂದು ಚಿಂತಿಸುವ ಪ್ರಾಣೋಪಾಸಕನು ಪ್ರಾಣನನ್ನೇ ಪಡೆದುಕೊಳ್ಳುವನು. ಊಟಮಾಡುವ ಮುಂಚೆಯೂ ಆಮೇಲೂ ಮಾಡುವ ಶುದ್ಧಾಚಮನವನ್ನು ಪ್ರಾಣಕ್ಕೆ ಹೊದಿಕೆ ಎಂದು ಉಪಾಸನೆಮಾಡ ಬೇಕು ಇದರಿಂದ ಪ್ರಾಣವನ್ನು ಬೆತ್ತಲೆ ಇರಿಸಿದಂತೆ ಆಗುವದಿಲ್ಲ, ಈ ಪ್ರಾಣೋಪಾಸನೆಗೆ ಪ್ರಾಣಸಾಯುಜ್ಯವೇ ಫಲ.

ಎರಡನೆಯ ಬ್ರಾಹ್ಮಣದ ಸಾರ

ಇಲ್ಲಿ ಪಂಚಾಗ್ನಿ ವಿದ್ಯೆಯನ್ನೂ ಸಂಸಾರಗತಿಪ್ರಕಾರಗಳನ್ನೂ ವರ್ಣಿಸಿದೆ.

೧-೨. ಆರುಣೇಯ ಶ್ವೇತಕೇತುವು ಪಂಚಾಲರಾಜನಾದ ಚೈವಲಿಯ ಬಳಿಗೆ ಬಂದನು. ರಾಜನು ಅವನನ್ನು ಕುರಿತು 'ನಿಮ್ಮ ತಂದೆಯು ಎಲ್ಲವನ್ನೂ ಕಲಿಸಿಕೊಟ್ಟಿದ್ದಾನೊ ?' ಎಂದು ಕೇಳಲು 'ಕಲಿಸಿಕೊಟ್ಟಿದ್ದಾನೆ' ಎಂದನು. ಆಗ ರಾಜನು ಅವನನ್ನು ಐದು ಪ್ರಶ್ನೆಗಳನ್ನು ಕೇಳಿದನು. (೧) ಇಲ್ಲಿಂದ ಪರಲೋಕಕ್ಕೆ ಹೊರಟವರು ಮಾರ್ಗದಲ್ಲಿ ಬೇರೆಬೇರೆಯಾಗುವದು ಹೇಗೆ ? (೨) ಮತ್ತೆ

ಅವರು ಈ ಲೋಕಕ್ಕೆ ಹಿಂತಿರುಗುವದು ಹೇಗೆ ? (೩) ಈ ಲೋಕದಿಂದ ಹೋದವರಿಂದ ಪರಲೋಕವು ಪೂರ್ಣ ನಾಗುವದಿಲ್ಲವೇಕೆ ? (೪) ಎಷ್ಟನೆಯ ಆಹುತಿಯಲ್ಲಿ ಹುತವಾದ ಅಪ್ಪು ಪುರುಷವಾಕ್ಯಾಗಿ ಎದ್ದು ಮಾತಾಡುತ್ತದೆ ? (೫) ದೇವಯಾನಪಿತೃಯಾಣಗಳನ್ನು ಪಡೆಯುವ ಬಗೆಯನ್ನು ಬಲ್ಲೆಯ ?

ನಾನು ಇವೊಂದಕ್ಕೂ ಉತ್ತರವನ್ನರಿಯೆನು ಎಂದು ಶ್ವೇತಕೇತು ಹೇಳಿದನು.

೩-೮. ರಮಣೀಯವಲ್ಲಿ ವಾಸಕ್ಕೆ ನಿಲ್ಲಬೇಕೆಂದರೂ ಕೇಳದೆ ಶ್ವೇತಕೇತು ತಂದೆಯ ಬಳಿಗೆ ಬಂದು ''ಓಗೇಯೊ, ನೀನು ನಮಗೆ ಅನುಶಾಸನ ಮಾಡಿದೇನೆಂದದ್ದು ?'' ಎಂದು ಅಸಮಾಧಾನದಿಂದ ಕೇಳಿದನು. ತಂದೆಯು ''ಅಪ್ಪ ನನಗೆ ತಿಳಿದದ್ದನ್ನೆಲ್ಲ ಹೇಳಿದೆನೆ. ನನಗೂ ಈ ಪ್ರಶ್ನೆಗಳಿಗೆ ಉತ್ತರವು ತಿಳಿಯದು ; ಬಾ, ಹೋಗಿ ರಾಜನಲ್ಲಿ ಶಿಷ್ಯರಾಗಿ ತಿಳಿದುಕೊಳ್ಳೋಣ'' ಎಂದನು. ಆದರೆ ಶ್ವೇತಕೇತುವು ಬರುವದಕ್ಕೆ ಒಪ್ಪಲಿಲ್ಲ. ಆರುಣಿಗೌತಮನೇ ರಾಜನ ಬಳಿಗೆ ಬಂದು ಅವನಿಂದ ಸತ್ಕಾರವನ್ನು ಹೊಂದಿ ಅವನು ಕೊಟ್ಟ ವರಕ್ಕೆ ಈ ಪ್ರಶ್ನೆಗಳ ಉತ್ತರವನ್ನೇ ಬೇಡಿದನು. ಆದರೆಗೆ ಕ್ಷತ್ರಿಯರಲ್ಲಿ ಮಾತ್ರವೇ ಇದ್ದ ವಿದ್ಯೆಯನ್ನು ಕೂಡಲೇ ಹೇಳುವಕ್ಕೆ ರಾಜನಿಷ್ಟವಿಲ್ಲದೆ ಬೇರೆ ಏಂದು ವರವನ್ನು ಕೇಳೆಂದರೂ ಗೌತಮನು ಒಪ್ಪಲಿಲ್ಲವಾದ್ದರಿಂದ ರಾಜನು ತನ್ನ ವಾಗ್ದಾನವನ್ನೂ ಗೌತಮನ ವಿನಯವನ್ನೂ ಮನದಂದುಕೊಂಡು ಈ ವಿದ್ಯೆಯನ್ನು ಅವನಿಗೆ ಹೇಳುವದಕ್ಕೆ ಉಪಕ್ರಮಿಸಿದನು.

೯-೧೫. ನಾಲ್ಕನೆಯ ಪ್ರಶ್ನೆಗೆ ಉತ್ತರವಿದು : ದ್ಯುಲೋಕವೆಂಬ ಅಗ್ನಿಗೆ ಆದಿತ್ಯನು ಸಮಿತ್ತು, ಕಿರಣಗಳು ಹೊಗೆ, ಹಗಲೇ ಉರಿ, ದಿಕ್ಕುಗಳು ಕೆಂಡ, ಅಪಾಂತರದಿಕ್ಕುಗಳು ಕಿಡಿಗಳು. ಈ ಅಗ್ನಿಯಲ್ಲಿ ಶ್ರದ್ಧಾಶಬ್ದವಾಚ್ಯವಾದ ಅಪ್ಪನ್ನು ದೇವತೆಗಳು ಹೋಮಮಾಡಲು ಅದರಲ್ಲಿ ಸೋಮರಾಜನು ಹುಟ್ಟುತ್ತಾನೆ. ಈ ಸೋಮರಾಜನನ್ನು ಪರ್ಜನ್ಯಾಗ್ನಿಯಲ್ಲಿ ದೇವತೆಗಳು ಹೋಮಮಾಡುತ್ತಾರೆ. ಆ ಅಗ್ನಿಗೆ ಸಂವತ್ಸರವು ಸಮಿತ್ತು, ಮೋಡಗಳು ಹೊಗೆ, ಮಿಂಚು ಉರಿ, ಸಿಡಿಲು ಕೆಂಡ, ಗುಡುಗುಗಳು ಕಿಡಿಗಳು. ಈ ಅಗ್ನಿಯಲ್ಲಿ ಹಾಕಿದ ಆಹುತಿಯಿಂದ ಮಳೆಯುಂಟಾಗುತ್ತದೆ. ಈ ಮಳೆಯನ್ನು ದೇವತೆಗಳು ಈ ಲೋಕವೆಂಬ ಅಗ್ನಿಯಲ್ಲಿ ಹೋಮಮಾಡುತ್ತಾರೆ. ಈ ಅಗ್ನಿಗೆ ಪೃಥಿವಿಯೇ ಸಮಿತ್ತು, ಬೆಂಕಿಯೇ ಧೂಮವು, ರಾತ್ರಿಯೇ ಉರಿ, ಚಂದ್ರನೇ ಕೆಂಡ, ನಕ್ಷತ್ರಗಳೇ ಕಿಡಿಗಳು. ಈ ಅಗ್ನಿಯಲ್ಲಿ ಹಾಕಿದ

ಆಹುತಿಯಿಂದ ಅನ್ನವುಂಟಾಗುತ್ತದೆ. ಈ ಅನ್ನವನ್ನು ಪುರುಷಾಗ್ನಿಯಲ್ಲಿ ದೇವತೆಗಳು ಹೋಮಮಾಡುತ್ತಾರೆ. ಈ ಅಗ್ನಿಗೆ ತೆರೆದ ಬಾಯಿಯೇ ಸಮಿತ್ತು, ಪ್ರಾಣನೇ ಹೊಗೆ, ವಾಕ್ಕೇ ಉರಿ, ಚಕ್ಷುಸ್ಸೇ ಕೆಂಡ, ಶ್ರೋತ್ರವೇ ಕಿಡಿಗಳು. ಇದರಲ್ಲಿ ಹುತವಾದ ಆಹುತಿಯಿಂದ ರೇತಸ್ಸು ಉಂಟಾಗುತ್ತದೆ. ಈ ರೇತಸ್ಸನ್ನು ದೇವತೆಗಳು ಯೋಷಾಗ್ನಿಯಲ್ಲಿ ಹೋಮಮಾಡುತ್ತಾರೆ. ಈ ಅಗ್ನಿಗೆ ಉಪಸ್ಥವೇ ಸಮಿತ್ತು, ಲೋಮಗಳೇ ಹೊಗೆ, ಯೋನಿಯೇ ಉರಿ, ಒಳಗೆ ಮಾಡುವ ಕಾರ್ಯವೇ ಕೆಂಡ, ಕ್ಷುದ್ರಸುಖಗಳೇ ಕಿಡಿಗಳು. ಈ ಅಗ್ನಿಯಲ್ಲಿ ಹಾಕಿದ ಆಹುತಿಯಿಂದ ಪುರುಷಶರೀರವು ಹುಟ್ಟುತ್ತದೆ. ಹೀಗೆ ಐದನೆಯ ಆಹುತಿಯು ಹುತವಾಗಲು ಅಪ್ಪು ಪುರುಷವಾಕ್ಕಾಗುತ್ತದೆ.

೧೩-೧೬. ಈ ಪುರುಷನು ಸಾಯಲು ಅಗ್ನಿಯಬಳಿಗೆ ಅಂತ್ಯಕರ್ಮಕ್ಕಾಗಿ ಋತ್ವಿಜರು ಒಯ್ಯುತ್ತಾರೆ. ಅಲ್ಲಿ ಅಗ್ನಿ, ಸಮಿತ್ತು, ಹೊಗೆ, ಕೆಂಪ, ಕಿಡಿ - ಇವುಗಳನ್ನು ಉಪಾಸನೆಗಾಗಿ ಕಲ್ಪಿಸಬೇಕಾದದ್ದೇನೂ ಇಲ್ಲ, ಸ್ವಾಭಾವಿಕವಾದ ಅಗ್ನ್ಯಾದಿಗಳೇ ಅಗ್ನ್ಯಾದಿಗಳಾಗಿರುತ್ತವೆ. ಅದರಲ್ಲಿ ಹಾಕಿದ ಪುರುಷಾಹುತಿಯಿಂದ ಭಾಸ್ವರಪುರುಷನುಂಟಾಗುತ್ತಾನೆ.

೧೪. ಈ ರೀತಿಯಲ್ಲಿ ಪಂಚಾಗ್ನಿಗಳನ್ನು ಸವಿಶೇಷಣವಾಗಿ ಅರಿತುಕೊಂಡು ಉಪಾಸನೆ ಮಾಡಿದವನೂ, ಅರಣ್ಯನಿರತರಾದ ವಾನಪ್ರಸ್ಥರೂ ಸಾಧಾರಣಸಂನ್ಯಾಸಿಗಳೂ, ಅರ್ಚಿಸ್ಸು, ಅಹಸ್ಸು, ಅಪೂರ್ಯಮಾಣಪಕ್ಷ, ಉತ್ತರಾಯಣ - ಎಂಬ ದೇವತೆಗಳಿಂದ ಕ್ರಮಕ್ರಮವಾಗಿ ಅತಿವಾಹಿತರಾಗಿ ದೇವಲೋಕ, ಆದಿತ್ಯ, ವಿದ್ಯುತ್ತು - ಇವುಗಳನ್ನು ದಾಟಿ ಬ್ರಹ್ಮನ ಮಾನಸಪುತ್ರನಾದ ಪುರುಷನಿಂದ ಬ್ರಹ್ಮಲೋಕಗಳನ್ನು ಮುಟ್ಟಿ ಅನೇಕಕಲ್ಪಗಳವರೆಗೆ ಅಲ್ಲಿ ವಾಸವಾಗಿರುತ್ತಾರೆ. ಬ್ರಹ್ಮನ ಈ ಕಲ್ಪವು ಮುಗಿಯುವವರೆಗೂ ಅವರಿಗೆ ಸಂಸಾರಕ್ಕೆ ಪುರಾವೃತ್ತಿಯಾಗುವದಿಲ್ಲ.

ಆದರೆ ಬರಿಯ ಯಜ್ಞದಾನತಪಸ್ಸುಗಳಿಂದ ಮಾತ್ರವೇ ಊರ್ಧ್ವಲೋಕಗಳನ್ನು ಗೆದ್ದುಕೊಳ್ಳುವವರು, ಧೂಮ, ರಾತ್ರಿ, ಅಪಕ್ಷೀಯಮಾಣಪಕ್ಷ, ದಕ್ಷಿಣಾಯನ, ಪಿತೃಲೋಕ - ಈ ಕ್ರಮದಿಂದ ಚಂದ್ರಲೋಕವನ್ನು ಮುಟ್ಟುತ್ತಾರೆ. ಅಲ್ಲಿ ಅವರಿಗೆ ಕರ್ಮದ ಫಲವಾಗುವದು, ಅವರು ದೇವತೆಗಳಿಗೆ ಉಪಭೋಗ್ಯರೂ ಆಗಿರುವರು. ಅಲ್ಲಿ ಅವರ ಕರ್ಮವು ಸವೆಯಲು ಆಕಾಶ, ವಾಯು, ವೃಷ್ಟಿ, ಪೃಥಿವಿ,

ಅನ್ನ - ಈ ಕ್ರಮದಿಂದ ಪುರುಷಾಗ್ನಿಯನ್ನು ಸೇರಿ ಮುಂದೆ ಯೋಷಾಗ್ನಿಯಲ್ಲಿ ಪುರುಷಾಕೃತಿಯಿಂದ ಹುಟ್ಟಿ ಮತ್ತೆ ಕರ್ಮವನ್ನು ಮಾಡುತ್ತಾ ಸಂಸಾರವನ್ನು ಪಡೆಯುತ್ತಿರುವರು.

ಇದು ಐದನೆಯ ಪ್ರಶ್ನೆಗೂ ಮೊದಲನೆಯ ಪ್ರಶ್ನೆಗೂ ಉತ್ತರವು ; ಎರಡನೆಯ ಪ್ರಶ್ನೆಯಲ್ಲಿ ಕೇಳಿದ ಪುನರಾವೃತ್ತಿವಿಷಯದಲ್ಲಿಯೂ ಇದೇ ಉತ್ತರವು.

೧೬. ಹೀಗೆ ಕೇವಲ ಕರ್ಮಿಗಳು ಮತ್ತೆ ಮತ್ತೆ ಹಿಂತೆರಳುತ್ತಿರುವದರಿಂದಲೂ ಶಾಸ್ತ್ರೀಯಕರ್ಮಜ್ಞಾನಗಳನ್ನು ಮಾಡದವರು ಕೀಟಪತಂಗಾದಿಜನ್ಮವನ್ನು ಪಡೆಯುತ್ತಿರುವದರಿಂದಲೂ ಪರಲೋಕವು ತುಂಬುವದಿಲ್ಲ - ಎಂಬುದು ಮೂರನೆಯ ಪ್ರಶ್ನೆಗೆ ಉತ್ತರವು.

ಮೂರನೆಯ ಬ್ರಾಹ್ಮಣದ ಸಾರ

ಇಲ್ಲಿ ಶ್ರೀಮಂಥವಿದ್ಯೆಯನ್ನು ಹೇಳಿರುತ್ತದೆ. ಪ್ರಾಣವಿದ್ಯೆಯನ್ನು ಬಲ್ಲವನಿಗೇ ಇದರಲ್ಲಿ ಅಧಿಕಾರ.

೧-೩. ಯಾವನು ದೊಡ್ಡವನಾಗಿ ಶ್ರೀಮಂತನಾಗಬೇಕೆಂದು ಬಯಸುವನೋ ಅವನು ಉತ್ತರಾಯಣಶುಕ್ಲಪಕ್ಷಶುಭದಿನದಲ್ಲಿ ಈ ಕರ್ಮವನ್ನು ಮಾಡಬೇಕು. ಗ್ರಾಮ್ಯವಾದ ಹತ್ತು ಸಸ್ಯಗಳನ್ನೂ ಅವುಗಳ ಧಾನ್ಯಗಳನ್ನೂ ಅತ್ತಿಯ ಕಂಸದಲ್ಲಿ ಅಥವಾ ಚಮಸದಲ್ಲಿ ಮಂಥವನ್ನು ಮಾಡಿಟ್ಟುಕೊಂಡು ಆಜ್ಯವನ್ನು ಸಂಸ್ಕಾರಮಾಡಿಕೊಂಡು ಪುನ್ನಾಮ ನಕ್ಷತ್ರದಲ್ಲಿ ಹೋಮಮಾಡಬೇಕು. ಆ ದಿನದಿಂದ ಹಿಂದಕ್ಕೆ ಆದೂ ಸೇರಿ ಹನ್ನೆರಡು ದಿನ ಪಯೋವ್ರತದಿಂದಿರಬೇಕು. 'ಯಾವನ್ತೋ ದೇವಾಃ' 'ಯಾತಿರಶ್ವೀ', 'ಜ್ಯೇಷ್ಠಾಯ ಸ್ವಾಹಾ...., ಅಗ್ನಯೇ ಸ್ವಾಹಾ' - ಮುಂತಾದ ಮಂತ್ರಗಳನ್ನುಚ್ಚರಿಸುತ್ತಾ ಸ್ವಾಹಾಕಾರಾಂತದಲ್ಲಿ ಮಂಥದಲ್ಲಿ ಸ್ರುವದಲ್ಲಿರುವ ಶೇಷವನ್ನು ಹಾಕುತ್ತಿರಬೇಕು.

೪. ಆಮೇಲೆ 'ಭ್ರಮದಸಿ' ಎಂಬ ಮಂತ್ರದಿಂದ ಮಂಥವನ್ನು ಮುಟ್ಟಬೇಕು.

೫. ಆಮೇಲೆ 'ಆಮಗ್ಂಸ್ಮಾಮಂ' ಎಂಬ ಮಂತ್ರದಿಂದ ಕೈಯಲ್ಲಿ ಎತ್ತಿಹಿಡಿದುಕೊಳ್ಳಬೇಕು.

೬-೧೨. ಆಮೇಲೆ ಉಕ್ತಕ್ರಮದಿಂದ ಗಾಯತ್ರೀಪಾದಗಳು, ಮಧುಮತಿಗಳು, ವ್ಯಾಹೃತಿಗಳು ಇವನ್ನು ಪ್ರಯೋಗಿಸಿ ನಾಲ್ಕು ಭಾಗಗಳಲ್ಲಿ ಮಂಥವೆಲ್ಲವನ್ನೂ ಕುಡಿದುಬಿಡಬೇಕು. ಆ ಬಳಿಕ ಕೈತೊಳೆದುಕೊಂಡು ಆಚಮನಮಾಡಿ ಅಗ್ನಿಯ ಹಿಂದುಗಡೆ ಪೂರ್ವಾಭಿಮುಖವಾಗಿ ಮಲಗಿಕೊಳ್ಳಬೇಕು. ಬೆಳಿಗ್ಗೆ ಎದ್ದು ಆದಿತ್ಯೋಪಸ್ಥಾನವನ್ನು ಮಾಡಬೇಕು. ಮತ್ತೆ ಅಗ್ನಿಯ ಹಿಂದಕ್ಕೆ ಬಂದು ಆಚಾರ್ಯವಂಶವನ್ನು ಜಪಿಸಬೇಕು.

ಈ ವಿದ್ಯೆಯು ಧ್ರುವಫಲವಾದದ್ದು. ಇದನ್ನು ಪುತ್ರನಿಗೆ, ಶಿಷ್ಯನಿಗೆ - ಇವರಿಬ್ಬರಿಗೆ ಮಾತ್ರ ಹೇಳಿಕೊಡಬಹುದು.

೧೩. ಈ ಕರ್ಮಕ್ಕೆ ಸ್ರುವ, ಚಮಸ, ಇಧ್ಮ, ಉಪಮಂಥನಿಗಳು - ಇವು ನಾಲ್ಕು ಅತ್ತಿಯವೇ ಆಗಿರಬೇಕು. ವ್ರೀಹಿ, ಯವ, ತಿಲ, ಮಾಷ, ಅಣು, ಪ್ರಿಯಂಗು, ಗೋಧೂಮ, ಮಸೂರ, ಏಳ್ವ, ಏಲಕುಲ - ಈ ಹತ್ತು ಗ್ರಾಮ್ಯಧಾನ್ಯಗಳನ್ನು ಅರೆದು ದಧಿ, ಮಧು, ಘೃತ - ಇವುಗಳಲ್ಲಿ ಅದ್ದಿ ಆಜ್ಯವನ್ನು ಹೋಮಮಾಡಬೇಕು.

ನಾಲ್ಕನೆಯ ಬ್ರಾಹ್ಮಣದ ಸಾರ

ಈ ಬ್ರಾಹ್ಮಣದಲ್ಲಿ ಮುಖ್ಯವಾಗಿ ಪುತ್ರಮಂಥಕರ್ಮವನ್ನು ವರ್ಣಿಸಿದೆ.

೧-೪. ಸ್ಥಾವರಜಂಗಮಭೂತಗಳಲ್ಲಿ ಪುರುಷನು ಸಾರವು ; ಅವನಲ್ಲಿ ರೇತಸ್ಸೇ ಸಾರವು ; ಅದಕ್ಕೆ ಸ್ತ್ರೀಯೇ ನಿಲ್ಲುವ ಸ್ಥಾನವೆಂದು ಪ್ರಜಾಪತಿಯು ಸೃಷ್ಟಿಸಿರುತ್ತಾನೆ. ಸ್ತ್ರೀಯ ಅವಯವಗಳಲ್ಲಿ ವಾಜಪೇಯದ ಭಾಗಗಳನ್ನು ಸಂಪಾದನೆಮಾಡಿ ತಿಳಿದವನು ಹೊರತು ಮಿಕ್ಕವರ ಪುಣ್ಯವು ನಾಶವಾಗುವದು ; ಇದನ್ನರಿಯದವರಿಗೆ ಇಹಪರಗತಿಗಳು ತಪ್ಪಿಹೋಗುವವು.

೫-೧೨. ಶ್ರೀಮಂಥವನ್ನು ಮಾಡಿದವನಿಗೆ ಈ ಪುತ್ರಮಂಥದಲ್ಲಿ ಅಧಿಕಾರವು. ರೇತಃಸ್ಖಲನವನ್ನು ಮಾಡಿಕೊಳ್ಳದೆ ಪತ್ನಿಯ ಋತುಕಾಲವನ್ನು ನಿರೀಕ್ಷಿಸುತ್ತಿದ್ದು ವಿಧ್ಯುಕ್ತರೀತಿಯಿಂದ ಸ್ತ್ರೀಸಂಗವನ್ನು ಮಾಡಬೇಕು. (ಈ ಕರ್ಮವನ್ನರಿತವನ ಹೆಂಡತಿಯನ್ನು ವಿನೋದದಿಂದ ಮಾತಾಡಿಸುವವನುಕೂಡ ಇವನ ಮಹಿಮೆಯಿಂದ ಕೆಟ್ಟುಹೋಗುತ್ತಾನೆ).

೧೩-೨೨. ಸ್ತ್ರೀಯು ಋತುಕಾಲದಲ್ಲಿ ನಿಯಮದಿಂದ ಇದ್ದು ಸ್ನಾನವಾದ ಬಳಿಕ ಹೋಮಕ್ಕೆ ಬೇಕಾದ ತಂಡುಲವನ್ನು ತಾನೇ ಸಿದ್ಧಗೊಳಿಸಬೇಕು. ಎಂಥ ಪುತ್ರನಾಗಬೇಕೆಂದು ಬಯಸುತ್ತಾನೋ ಅದಕ್ಕೆ ತಕ್ಕಂತೆ ವಿಧ್ಯುಕ್ತವಾದ ಚರುವನ್ನು ಇಬ್ಬರೂ ಭುಂಜಿಸಬೇಕು. ಬೆಳಗ್ಗೆ ಸ್ಥಾಲೀಪಾಕಕ್ರಮದಿಂದ, ಆಜ್ಯವನ್ನು ಸಂಸ್ಕಾರಮಾಡಿಕೊಂಡು ನಿತ್ಯಹೋಮವನ್ನು ಮಾಡಿ ಉಳಿದದ್ದನ್ನು ಗಂಡನು ತಿಂದು ಉಳಿಸಿದ ಸ್ವಲ್ಪಭಾಗವನ್ನು ಹೆಂಡತಿಗೂ ಕೊಟ್ಟು ಕೈತೊಳೆದುಕೊಂಡು ಆಚಮನ ಮಾಡಿ ಅವಳ ಮೇಲೆ ಮೂರು ಸಲ ಮಂತ್ರಪೂತವಾದ ಜಲವನ್ನು ಚಿಮುಕಿಸಬೇಕು. ಆಯಾ ಮಂತ್ರವನ್ನುಚ್ಚರಿಸಿ ಆಲಿಂಗನಾದಿಗಳನ್ನು ಮಾಡಬೇಕು.

೨೩-೨೬. ಸುಪ್ರಸವವಾಗುವದಕ್ಕೆ ಮಂತ್ರವನ್ನುಚ್ಚರಿಸಬೇಕು. ಹುಟ್ಟಿದ ಮಗುವಿಗೆ ವಿಧ್ಯುಕ್ತವಾಗಿ ಜಾತಕರ್ಮವನ್ನು ಮಾಡಿ ಕಿವಿಯಲ್ಲಿ ವೇದಪ್ರವೇಶವನ್ನು ಮಾಡಿಸುವ ಮಂತ್ರಜಪವನ್ನು ಮಾಡಿ 'ವೇದೋಽಸಿ' ಎಂದು ರಹಸ್ಯನಾಮ ವನ್ನಿಡಬೇಕು. ಆ ಬಳಿಕ ತಾಯಿಯಿಂದ ಮಗುವಿಗೆ ಮಂತ್ರಪೂರ್ವಕವಾಗಿ ಮೊಲೆಯೂಡಿಸಿ ತಾಯಿಯನ್ನು ಅಭಿಮಂತ್ರಣಮಾಡಬೇಕು.

೨೬. ಈ ಸಂಸ್ಕಾರದಿಂದ ಹುಟ್ಟಿದ ಮಗನು ತಂದೆಯನ್ನೂ ತಾತನನ್ನೂ ಎಲ್ಲಾ ಬಗೆಯಿಂದಲೂ ಮೀರಿ ಖ್ಯಾತನಾಗುವನು; ತಂದೆಯೂ ಹೆಸರುಪಡೆಯುವನು.